
# ಬಹುತ್ವದೆಡೆಗೆ
# ನಮ್ಮ ನಡಿಗೆ

**ಸಂಪಾದಕರು:**
ಬಾ. ಹ. ರಮಾಕುಮಾರಿ

**ಸಹ ಸಂಪಾದಕರು:**
ಎನ್. ಇಂದಿರಮ್ಮ
ಮಲ್ಲಿಕಾ ಬಸವರಾಜು
ರಾಣಿ ಚಂದ್ರಶೇಖರ್



ಪ್ರಕಟಣೆ:

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ**

# Bahuthvadedege Namma Nadige

## Memories of Tumakuru - 2023


Edited by : B H Ramakumari

Co-Editors : N Indiramma
Mallika Basavarju
Rani Chandrashekar

Published by :
Karnataka Rajya Mahila Dourjanya Virodhi Okkoota, Tumakuru
24th Cross, SIT Extension, Tumakuru - 572103, Mob: 94486 94323



© Okkoota



First Edition : 2024

Pages : vi+264+16 = 288

Paper Used : 70GSM Maplitho

Paper size : Demy 1/8

Price : ₹ 200 /-

Copies : 1000

Book Design : Rajesha S B, 97405 88216

Printed at : Regal Prints, Bangalore.
Mob: 99643 51655


# ಬಹುತ್ವದೆಡೆಗೆ ನಮ್ಮ ನಡಿಗೆ

## ನೆನಪಿನ ಹೊತ್ತಗೆ, ತುಮಕೂರು – 2023


ಸಂಪಾದಕರು : ಬಾ ಹ ರಮಾಕುಮಾರಿ

ಸಹ–ಸಂಪಾದಕರು : ಎನ್ ಇಂದಿರಮ್ಮ, ಮಲ್ಲಿಕಾ ಬಸವರಾಜು, ರಾಣಿ ಚಂದ್ರಶೇಖರ್

ಪ್ರಕಟಣೆ : ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ತುಮಕೂರು
24ನೇ ಕ್ರಾಸ್, SIT ಬಡಾವಣೆ, ತುಮಕೂರು– 572103 ದೂ. 9448694323



ಹಕ್ಕುಗಳು : ಒಕ್ಕೂಟದ್ದು



ಪ್ರಥಮ ಮುದ್ರಣ : 2024

ಪುಟ ಸಂಖ್ಯೆ : vi+264+16 = 288

ಬಳಸಿದ ಕಾಗದ, ಅಳತೆ : 70 ಜಿಎಸ್‌ಎಂ ಮ್ಯಾಪ್ಲಿಥೋ, 1/8 ಡೆಮಿ

ಬೆಲೆ : ₹ 200 /-

ಪ್ರತಿಗಳು : 1000

ಪುಸ್ತಕ ವಿನ್ಯಾಸ : ರಾಜೇಶ ಎಸ್ ಬಿ, 97405 88216

ಮುದ್ರಣ : ರೀಗಲ್ ಪ್ರಿಂಟ್ಸ್, ಬೆಂಗಳೂರು, ದೂ. 99643 51655

# ಪರಿವಿಡಿ


**ಬಂದೇವ... ನಾವು ಬಂದೇವ...** 1

**ಅರಿವಿನ ಬುತ್ತಿ ತಂದೇವ** 4

**ಅಂತರಾಳ** 8

## ಸಮಾಲೋಚನೆ

**ಲೋಹಿಯಾ ಚಿಂತನೆಗಳು** 11

ಪ್ರೊ. ರವಿವರ್ಮಕುಮಾರ್

**ಮಹಿಳಾ ತತ್ವಪದಕಾರರು–ಸಾಮಾಜಿಕ ಆಯಾಮಗಳು** 33

ಡಾ. ಮೀನಾಕ್ಷಿ ಬಾಳಿ

**ಸಮಾಜವಾದಿ ಪರಂಪರೆಯ ಕಿರುರ್ಝುರಿ ಸಮತಾ ಬಳಗ** 42

ಜಿ ಮಲ್ಲಿಕಾ ಬಸವರಾಜು

## ಸಮಾವೇಶ

**ಸಾಮಾನ್ಯ ಮಹಿಳೆಗೂ ಗೌರವ ಸಿಗಬೇಕು** 61

ಡಾ. ಕೆ. ವಿದ್ಯಾ ಕುಮಾರಿ

**ಬಿಸಿಲೇ ಬೆಳದಿಂಗಳು** 63

ಪ್ರೊ. ಸಬಿಹಾ ಭೂಮೀಗೌಡ

**ನಾವು ದುರ್ಬಲರಲ್ಲ** 68

ನಾಹಿದಾ ಜಮ್ ಜಮ್

**ಉದಾತ್ತ ನಿಸ್ಪೃಹತೆ: ಶೈಲಜಾ ಟೀಚರ್** 71

ಡಾ. ಎಚ್. ಎಸ್. ಅನುಪಮಾ

**ಸಂವಿಧಾನ ಅಪಾಯದಲ್ಲಿದೆ – ರಕ್ಷಿಸಿ** 79

ಕೆ ಕೆ ಶೈಲಜಾ

**ಗೆಲುವಿನ ಪಥ** 84
ಕೆ ದೊರೈರಾಜ್
**ನನ್ನ ದೇಹ ನನ್ನ ಹಕ್ಕು** 86
ಅಕೈ ಪದ್ಮಶಾಲಿ
**ತವಕ–ತಲ್ಲಣಗಳು ಕಂಗೆಡಿಸದಿರಲಿ** 88
ಡಾ. ಸುಧಾ ಕಾಮತ್
**ಸಮಷ್ಠಿಪ್ರಜ್ಞೆಯ ಅವಶ್ಯಕತೆ ಇದೆ** 93
ಬಾ ಹ ರಮಾಕುಮಾರಿ
**ಖಂಡನಾನಿರ್ಣಯ** 96
ಡಾ॥ ಅರುಂಧತಿ ಡಿ
**ಅರಿವಿನ ಪಯಣ – ದಮನತೆಯಿಂದ ದಿಟ್ಟತನದೆಡೆಗೆ** 98
ಎನ್ ಇಂದಿರಮ್ಮ
**ಮೌನ ಜಾಗೃತಿ – ಕಪ್ಪುಡುಗೆಯಲ್ಲಿ ಮಹಿಳೆಯರು** 105
ಡಾ. ಎಚ್.ಎಸ್. ಅನುಪಮಾ
**ದಹಿಸುತಿದೆ ದೌರ್ಜನ್ಯದ ಧಗೆ** 111
ಡಾ. ಆಶಾ ಬಗ್ಗನಡು
**ಮಾದರಿ ರಾಜಕಾರಣಿ ಕೇರಳದ ಶೈಲಜಾ ಟೀಚರ್** 116
ಸಂದರ್ಶನ : ಎನ್ ಗಾಯತ್ರಿ
**ಬೀಡಿ ಕಾರ್ಮಿಕರ ಬವಣೆಗಳು** 122
ಶಹತಾಜ್

## ಹೆಣ್ಣು–ಬದುಕು–ಸವಾಲುಗಳು

**ಕೈ ಕೈ ಜೋಡಿಸೋಣ** 129
ವಾಣಿ ಪೆರಿಯೋಡಿ
**ವಿಹಾನ್ ಅವರ ಪರಿಚಯ** 137
ಕೃತಿಕಾ
**ತೃತೀಯ ಲಿಂಗಿಗಳು ಮುಖ್ಯವಾಹಿನಿಯಲ್ಲಿರಬೇಕು** 139
ವಿಹಾನ್

**ನಮಗೆ ಶಕ್ತಿ ತಂದಿತ್ತ ದಿನ** 145
ಸುಮನಾ ನೆಟ್ಟಾರ್
**ಹೆಜ್ಜೆಗೆ ಹೆಜ್ಜೆ ಸೇರಿಸೋಣ** 149
ಡಾ. ಗೀತಾ ವಸಂತ
**ಸ್ವಶಕ್ತಿ ಜಾಗ್ರತಗೊಳಿಸಿಕೊಳ್ಳಬೇಕಾದ ಮಹಿಳೆ** 151
ಡಾ. ಜ್ಯೋತಿ
**ನಾ ಮತ್ತೆ ಪುಟಿದೇಳುವೆ** 153
ಡಾ. ಕೆ ಎಸ್ ಗಿರಿಜಾ
**ಬೆಳಕಿನೆಡೆಗೆ ಹೆಜ್ಜೆ ಹಾಕಿ** 155
ಎನ್ ಇಂದಿರಮ್ಮ

**ವಿಚಾರ ಮಂಥನ**
**ಮಹಿಳೆ ಮತ್ತು ರಾಜಕೀಯ ಮೀಸಲಾತಿ** 161
ಸಿ ಜಿ ಮಂಜುಳಾ
ಪ್ರತಿಕ್ರಿಯೆ: ಅಖಿಲಾ ವಿದ್ಯಾಸಂದ್ರ, ಜೊಹರಾ, ಮಂಗಳೂರು
**ಮಹಿಳೆ ಮತ್ತು ಸಾಂಸ್ಕೃತಿಕ ರಾಜಕಾರಣ** 178
ಡಾ. ಸಬಿತಾ ಬನ್ನಾಡಿ
ಪ್ರತಿಕ್ರಿಯೆ: ರೇಶ್ಮಾ ಗುಳೇದಗುಡ್ಡ, ಭಾಗೀರಥಿ ಸಾಗರ
**ಸರಕು ಸಂಸ್ಕೃತಿ ಮತ್ತು ಮಹಿಳೆ** 188
ಡಾ. ಸುಶಿ ಕಾಡನಕುಪ್ಪೆ
ಪ್ರತಿಕ್ರಿಯೆ: ಮಂಜುಳಾ ಸುನಿಲ್, ರಾಜೇಶ್ವರಿ
**ಮಹಿಳಾ ಹೋರಾಟ ಇಂದು** 199
ಪ್ರತಿಕ್ರಿಯೆ:
ಸಿರಿಗೌರಿ, ಗೀತಾಲಕ್ಷ್ಮಿ
**ಸ್ವಂತಿಕೆಯ ಉಳಿವಿಗಾಗಿ ಹೋರಾಟ** 208
ಶಾಂತಮ್ಮ ಕೋಲಾರ
**ಪಯಣದ ಅಂಚಿನಲಿ ಅರಿವು ಸಾಗುತ್ತಿರಲಿ** 210
ಡಾ. ಸುಲೋಚನಾ

**ಅನ್ಯಾಯ ದೌರ್ಜನ್ಯಗಳ ವಿರುದ್ಧ ದನಿ ಎತ್ತಿದ ಒಕ್ಕೂಟ** 213
ಬಾ ಹ ರಮಾಕುಮಾರಿ
**ಮನಸುಗಳ ಪೋಣಿಸುವ ಕೌದಿ** 217
ಶೈಲಜ ಜೆ ಕೆ, ಸಿರಾ

## ನಮ್ಮ ನಡೆ–ನಮ್ಮ ದನಿ

**ಅರಿವಿನ ಪಯಣ ಒಂದು ಮೆಲುಕು** 227
ಮೇ. ನಾ. ತರಂಗಿಣಿ
**ಪೌರಕಾರ್ಮಿಕರಿಗೆ ಗೌರವ ಸಿಗಬೇಕು** 232
ಶ್ವೇತಾ, ಪೌರ ಕಾರ್ಮಿಕರು
**ನಡೆ–ನುಡಿ ಒಂದಾಗಿ ಇರೋಣ** 233
ಡಾ॥ ಅರುಂಧತಿ ಡಿ
**ಅರಿವಿನ ಪಯಣ – ತಲ್ಲಣಗಳ ಚಿತ್ರಣ** 236
ರಾಮಕೃಷ್ಣಪ್ಪ
**ವಿಭಿನ್ನ ಕಾರ್ಯಕ್ರಮದ ವಿಶಿಷ್ಟ ಅನುಭವ** 237
ದೀಪಿಕಾ, ಮರಳೂರು
**ಹೋರಾಟವೇ ನನ್ನ ಬದುಕು** 240
ಜಯಲಕ್ಷ್ಮಿ
**ಸ್ಫೂರ್ತಿ ಉಕ್ಕಿಸಿತು** 242
ಹಂದಿಜೋಗಿ ರಾಮಕ್ಕ
**ಮೂಡುತಿದೆ ಹೊಸಬೆಳಕು** 243
ಕಮಲಾ ರಾಜೇಶ್
**ಹೊಸ ಆಲೋಚನೆಗಳಿಗೆ ತೆರೆದುಕೊಂಡೆ** 245
ಮುಮ್ತಾಜ್, ಸಿದ್ದಗಂಗಾ ಮಠ
**ಒಗ್ಗಟ್ಟಿನಿಂದ ಸಾಗೋಣ** 245
ಚಂದ್ರಕಲಾ, ತುರುವೇಕೆರೆ
**ಯಶಸ್ಸಿನ ಹಾದಿಯಲ್ಲಿ** 247
ಗಂಗಲಕ್ಷ್ಮಿ ಬಿ

**ಅಪರೂಪದ ಅವಕಾಶ** 248
ರೇಣುಕಮ್ಮ
**ಹೋರಾಟದ ಶಕ್ತಿ** 249
ಪಾರ್ವತಮ್ಮ ರಾಜಕುಮಾರ್
**ಅರಿವಿನ ವಿಸ್ತಾರ** 250
ಹೇಮಾ ಮಲ್ಲಿಕಾರ್ಜುನ್
**ಗಾರ್ಮೆಂಟ್ಸ್ ನೌಕರರಿಗೆ ಆಶಾಕಿರಣ** 250
ಯಶೋದಾ, 'ಮುನ್ನಡೆ'
**ಧೈರ್ಯ ತುಂಬುವ ಕೆಲಸ** 251
ಚಂದ್ರಕಲಾ ಸಿರಾ
**ಯಾರ್ಯಾರ ನೆನೆಯಲಿ** 252
ಚಂದ್ರಶೇಖರ್

## ಅನುಬಂಧಗಳು

- ಜಿಲ್ಲೆಯ ಅರಿವಿನ ಪ್ರಯಾಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು 256
- ಜಿಲ್ಲೆಯಲ್ಲಿ ನಡೆದ ಅರಿವಿನ ಪಯಣದ ಕಾರ್ಯಕ್ರಮಗಳು 257
- ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ನಡೆದ ಅರಿವಿನ ಪಯಣ ಕಾರ್ಯಕ್ರಮ 260
- ಅರಿವಿನ ಪಯಣ – ಮಹಿಳಾ ದಿನಾಚರಣೆ 2023 ರ ಅಂಗವಾಗಿ ನಡೆದ ಸಭೆಗಳು ಹಾಗೂ ತರಬೇತಿಗಳು 263
- ಚಿತ್ರ ಸಂಚಯ 265

# ಭಾರತದ ಸಂವಿಧಾನ

## ಪೀಠಿಕೆ

ಭಾರತದ ಪ್ರಜೆಗಳಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# ಬಂದೇವ... ನಾವು ಬಂದೇವ...

ತುಮಕೂರು ಜಿಲ್ಲೆ ತೆಂಗು ಕಂಗುಗಳ ಕಲ್ಪತರು ನಾಡು ಎಂಬ ಅಭಿದಾನ ಹೊಂದಿದೆ. ಹಾಗೆ ಸಂಸ್ಕೃತಿ ಕಲೆಗಳ ಬೀಡು. ವಿಶ್ವ ಮಟ್ಟದ ಸಾಧಕರು ಇಲ್ಲಿದ್ದರು– ಇದ್ದಾರೆ. ಹತ್ತು ತಾಲ್ಲೂಕು ಹೊಂದಿರುವ ದೊಡ್ಡ ಜಿಲ್ಲೆ. ಕಳೆದ ವರ್ಷ ಈ ಜಿಲ್ಲೆಯಲ್ಲಿ ಒಂದು ಬೃಹತ್ ವಿದ್ಯುತ್ ಸಂಚಾರವಾಯಿತು. ಹೆಣ್ಣು ಮಕ್ಕಳಿಗಂತೂ ಮೈ ನವಿರಾಗಿಸುವ ಅನುಭವ. ಅದು 2023ನೇ ಮಾರ್ಚ್ ಏಳು ಮತ್ತು ಎಂಟನೇ ದಿನಾಂಕ. ಎಲ್ಲರಿಗೂ ತಿಳಿದಂತೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ 2012ರಲ್ಲಿ ದೆಹಲಿಯ ನಿರ್ಭಯ ಪ್ರಕರಣದ ಪ್ರತಿಭಟನಾ ಹೋರಾಟದ ಹಿನ್ನೆಲೆಯಲ್ಲಿ ಪ್ರಾರಂಭಗೊಂಡಿತು. ಅಷ್ಟಕ್ಕೇ ಸುಮ್ಮನಾಗದೆ ಅದರ ಪ್ರಯಾಣ ಜಿಲ್ಲೆ ಜಿಲ್ಲೆಗಳನ್ನು ದಾಟುತ್ತಾ ಬಂದು ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ ತಂಗಿತು. ಮತ್ತೆ ಪ್ರಯಾಣ ಬೆಳೆಸಿ ಈ ವರ್ಷ ಉಡುಪಿ ಸೇರಲಿದೆ.

ಈ ಜಿಲ್ಲೆಯಿಂದ ಮಲ್ಲಿಕಾ, ಅರುಂಧತಿ ಮತ್ತು ಪ್ರವೇಣಿ ಇವರುಗಳು ಬೇರೆ ಬೇರೆ ಕಡೆ ನಡೆದ ಒಕ್ಕೂಟದ ಸಮಾವೇಶಗಳಿಗೆ ಹೋಗಿ ಬರುತ್ತಿದ್ದು, ಅನೇಕ ಬಾರಿ ತುಮಕೂರಿನಲ್ಲಿ ಮಾಡುವ ಪ್ರಸ್ತಾಪ ಮಾಡುತ್ತಿದ್ದರು. ಕೊನೆಗೂ 2022 ರಲ್ಲಿ ಗುಲ್ಬರ್ಗದಿಂದ ಡಾ. ಅರುಂಧತಿ ಅವರು ಗಿಡ ತಂದೇಬಿಟ್ಟರು. ಇದೊಂದು ಒಕ್ಕೂಟದ ಸಂವಿಧಾನ. ಮುಂದಿನ ಜಿಲ್ಲೆಗೆ ಸಮಾವೇಶ ನಡೆಸಲು ಸಾಂಕೇತಿಕ ವರ್ಗಾವಣೆ ಪತ್ರವಿದ್ದಂತೆ. ಈ ಕಾರ್ಯಕ್ರಮದ ಮುಖ್ಯ ಚಹರೆಗಳೆಂದರೆ ಗಿಡ ತರುವ ಮೂಲಕ ಕಾರ್ಯಕ್ರಮ ತರುವುದು. ಇಡೀ ವರ್ಷ ಅರಿವಿನ ಪಯಣದ ಮೂಲಕ ಸಮಾಜದ ಎಲ್ಲಾ ಜನ ವಿಭಾಗಗಳನ್ನು ಒಳಗೊಳ್ಳುವಂತೆ ಅರಿವು ಮೂಡಿಸುವುದು. ಹಾಗೆ ಕಾರ್ಯಕ್ರಮಕ್ಕೆ ಪ್ರತಿಯೊಂದು

ಕೈಗಳು ಪ್ರತಿ ರೂಪಾಯಿ ನೀಡುವ ಮೂಲಕ ಖರ್ಚುನಿಭಾಯಿಸುವುದು. ಪುಸ್ತಕ, ಖರ್ಚಿಫು, ಬ್ಯಾಗುಗಳನ್ನು ತಯಾರಿಸಿ ಮಾರಾಟ ಮಾಡಿ ಹಣ ಸಂಗ್ರಹಿಸುವುದು. ಕೌದಿ ಹೊಲೆದು ಮುಂದಿನ ಜಿಲ್ಲೆಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಮುಖ್ಯ ಅತಿಥಿಗಳಿಗೆ ಹೊದಿಸುವುದು. ಇದಕ್ಕೊಂದು ಸಾಂಸ್ಥಿಕ ರೂಪ ಇಲ್ಲದ, ಕೈಗೆ ಕೈಜೋಡಿಸುತ್ತಾ ಸಾಗುವ ಒಂದು ವಿಶಿಷ್ಟ ರೂಪದ ಕಾರ್ಯಕ್ರಮ. ಒಕ್ಕೂಟದ ಘೋಷವಾಕ್ಯ "ಸಮಾನತೆಯೆಡೆಗೆ ನಮ್ಮ ನಡಿಗೆ" ನಮ್ಮ ಜಿಲ್ಲೆಯ ಘೋಷವಾಕ್ಯ "ಸಂವಿಧಾನವೇ ಉಸಿರು ಬಹುತ್ವವೇ ಬದುಕು". ಇದರ ಆಶಯವನ್ನು ಜನ ಸಮುದಾಯಕ್ಕೆ ತಲುಪಿಸುವಲ್ಲಿ ಸ್ವಲ್ಪಮಟ್ಟಿಗಾದರೂ ಯಶಸ್ವಿಯಾಗಿದ್ದೇವೆ.

ತುಮಕೂರಿನಲ್ಲಿ ಈ ಕಾರ್ಯಕ್ರಮದ ಯಶಸ್ಸಿಗೆ ದುಡಿದವರು ಅನೇಕರು (ಪ್ರತಿಯೊಬ್ಬರನ್ನು ನೆನೆದು ಧನ್ಯವಾದ ಅರ್ಪಿಸುವ ಒಂದು ಬರಹವನ್ನು ಒಕ್ಕೂಟದ ಸಂಗಾತಿ ಚಂದ್ರಶೇಖರ್ ಅವರು ಬರೆದಿರುವುದನ್ನು ಈ ಪುಸ್ತಕದ ಕೊನೆಯಲ್ಲಿ ಪ್ರಕಟಿಸಲಾಗಿದೆ). ಮುಖ್ಯವಾಗಿ ಇಡೀ ವರ್ಷ ಒಕ್ಕೂಟದ ಎಲ್ಲಾ ಸಭೆ ಕಾರ್ಯಕ್ರಮ ಎಲ್ಲದಕ್ಕೂ ಆಧಾರವಾದ ಜನಚಳವಳಿ ಕೇಂದ್ರ ಮತ್ತು ಸಿಬ್ಬಂದಿ, ಸಿಐಟಿಯು, ಎಲ್ಲಾ ರೀತಿಯ ಬೆಂಬಲ ನೀಡಿದ ಸಂಗಾತಿಗಳು, ಮುಜೀಬ್, ಸುಬ್ಬಣ್ಣ, ಬಿ ಉಮೇಶ್ ಮತ್ತು ಚಂದ್ರಶೇಖರ್ ಅವರನ್ನಂತು ಮರೆಯುವಂತೆಯೇ ಇಲ್ಲ. ಪಟ್ಟಿ ಮಾಡಲಾಗದಷ್ಟು ಜನರ ಸಹಾಯ ಹಸ್ತ ನಮ್ಮೊಂದಿಗಿತ್ತು. ತಮ್ಮ ಶಾಲೆ, ಹಾಸ್ಟೆಲ್, ಸಂಸ್ಥೆಗಳಲ್ಲಿ ಅರಿವಿನ ಪಯಣ ಕಾರ್ಯಕ್ರಮ ನಡೆಸಲು ಅವಕಾಶ ನೀಡಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಸಲ್ಲಬೇಕು.

ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಂಗನವಾಡಿ, ಆಶಾ ಕಾರ್ಯಕರ್ತೆಯರು, ನರ್ಸಿಂಗ್ ಮತ್ತು ಇನ್ನಿತರೆ ಟ್ರೈನಿಗಳು, ಸಾರ್ವಜನಿಕರು, ಮಹಿಳೆಯರು ಅಪಾರ ಸಂಖ್ಯೆಯಲ್ಲಿ ತೊಡಗಿಕೊಂಡಿದ್ದು ಅರಿವಿನ ಪಯಣದ ಯಶಸ್ಸು ಎನ್ನಬಹುದು.

ಚಿಕ್ಕನಾಯಕನಹಳ್ಳಿಯದೆ ಒಂದು ತಂಡ ಇಡೀ ತಾಲೂಕಿನಲ್ಲಿ ಸುಮಾರು 45 ಕಾರ್ಯಕ್ರಮ ನೀಡಿ ಜಿಲ್ಲೆಯ ಗಮನ ಸೆಳೆಯಿತು. ಒಟ್ಟು ಸುಮಾರು 95 ಕಾರ್ಯಕ್ರಮಗಳು ಕೆಲ ತಾಲ್ಲೂಕುಗಳನ್ನು ಹೊರತುಪಡಿಸಿ ಜಿಲ್ಲಾದ್ಯಂತ ನಡೆದಿವೆ. ಸುಮಾರು 50ಕ್ಕೂ ಹೆಚ್ಚು ಮಂದಿ ಸಂಪನ್ಮೂಲ

ವ್ಯಕ್ತಿಗಳಾಗಿ ಇದರಲ್ಲಿ ಭಾಗಿಯಾಗಿದ್ದಾರೆ. ಸುಮಾರು 28 ಸಭೆ, ಕಾರ್ಯಗಾರ ನಡೆದಿವೆ. ಇವೆಲ್ಲವುಗಳ ಹಿಂದೆ ನಾನಾ ರೀತಿಯ ನಾನಾ ಜನರ ಅಭಯ ಹಸ್ತ, ಸಹಕಾರ ಹಸ್ತ ಇರುವುದನ್ನು ಸದಾ ನೆನೆಯುತ್ತಾ ಅವರೆಲ್ಲರಿಗೂ ಮನದಾಳದ ಕೃತಜ್ಞತೆಗಳನ್ನು ತುಮಕೂರು ಒಕ್ಕೂಟ ಸಲ್ಲಿಸುತ್ತದೆ.

ನಮ್ಮ ಜೊತೆ ಕೈಜೋಡಿಸಿದ್ದ ಕರ್ನಾಟಕ ಲೇಖಕಿಯರ ಸಂಘ ಜಿಲ್ಲಾ ಶಾಖೆ ತುಮಕೂರು, ಸಮರ್ಥ್ ಫೌಂಡೇಷನ್, ಸೃಜನಾ – ಚಿಕ್ಕನಾಯಕನಹಳ್ಳಿ, ಸಮತಾ ಬಳಗ, ಸಾಂತ್ವನ ಕೇಂದ್ರ (ವರದಕ್ಷಿಣೆ ವಿರೋಧಿ ವೇದಿಕೆ) ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಲಂ ಜನಾಂದೋಲನ, ಭಾರತೀಯ ವೈದ್ಯಕೀಯ ಸಂಘ ತುಮಕೂರು, ತಿಪಟೂರು, ಶಿರಾ, ಶಾಖೆಗಳು, ಪ್ರಗತಿಪರ ಸಂಘಟನೆಗಳ ಒಕ್ಕೂಟ ತುಮಕೂರು ಮೊದಲಾದ ತುಮಕೂರಿನ ಜೀವಪರ ಸಂಘಟನೆಗಳಿಗೆ ಧನ್ಯವಾದಗಳು.

ಈ ಪುಸ್ತಕದಲ್ಲಿ ಪ್ರಕಟವಾಗಲು ಲೇಖನಗಳನ್ನು ನೀಡಿದ, ಭಾಷಣಗಳನ್ನು ಬರಹ ರೂಪಕ್ಕೆ ಇಳಿಸಿಕೊಟ್ಟ, ಪುಸ್ತಕ ರೂಪದಲ್ಲಿ ಹೊರಬರಲು ಕಾರಣಕರ್ತರಾದ ರಾಜ್ಯ ಒಕ್ಕೂಟದ ಸಂಗಾತಿಗಳಿಗೆ, ಡಿಟಿಪಿ ಮಾಡಿ, ಪುಟ ವಿನ್ಯಾಸ ಮತ್ತು ಮುಖಪುಟ ವಿನ್ಯಾಸ ಮಾಡಿಕೊಟ್ಟ ಎಸ್ ಬಿ ರಾಜೇಶ್ ಅವರಿಗೆ, ಅಲ್ಪಾವಧಿಯಲ್ಲಿ ಮುದ್ರಿಸಿಕೊಟ್ಟ ರೀಗಲ್ ಮುದ್ರಣಾಲಯದವರೆಗೂ, ಇವೆಲ್ಲವುಗಳಿಗೆ ಸೇತುವೆಯಾಗಿ ನಿಂತು ಸಹಕಾರ ನೀಡಿದ ಎಂ ಎಚ್ ನಾಗರಾಜು ಅವರಿಗೂ ಧನ್ಯವಾದಗಳು.

**– ಬಾ. ಹ. ರಮಾಕುಮಾರಿ**
**ಎನ್. ಇಂದಿರಮ್ಮ**
**ಮಲ್ಲಿಕಾ ಬಸವರಾಜು**
**ರಾಣಿ ಚಂದ್ರಶೇಖರ್**

# ಅರಿವಿನ ಬುತ್ತಿ ತಂದೇವ

**ಕರ್ನಾಟಕ ರಾಜ್ಯ**

**ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ತುಮಕೂರು**

**ಸಮತೆಯೆಡೆಗೆ ನಮ್ಮ ನಡಿಗೆ**



**ಸಂವಿಧಾನವೇ ಉಸಿರು, ಬಹುತ್ವವೇ ಬದುಕು**

**ಮಾರ್ಚ್ 7, 8, 2023**

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ತುಮಕೂರು

**'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'**ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಹತ್ತು ವರ್ಷಗಳಿಂದ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುವುದರೊಂದಿಗೆ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳವಳಿ–ಸಾಹಿತ್ಯ–ಶಿಕ್ಷಣ ಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪದ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ, ಪೌರಕಾರ್ಮಿಕರು, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರು–ಮನೆಕೆಲಸದ ಕಾರ್ಮಿಕರು, ಗಾರ್ಮೆಂಟ್ ಮತ್ತು ಇನ್ನಿತರ ಕಾರ್ಮಿಕರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕಾಡೆಮಿಕ್ ವಲಯದ ಸಮಾನ ಮನಸ್ಕರು ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದಲ್ಲಿ ಭಾಗಿಯಾಗಿವೆ. ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದಲ್ಲಿ ಭಾಗಿಯಾಗಬಹುದು.

2012ರಲ್ಲಿ ಮಂಗಳೂರಿನಲ್ಲಿ ಹೋಂಸ್ಟೇ ದಾಳಿ ಪ್ರಕರಣ ಮತ್ತು ದೆಹಲಿಯಲ್ಲಿ ನಡೆದ ನಿರ್ಭಯಾ ಅತ್ಯಾಚಾರ ಪ್ರಕರಣಗಳು ದೇಶಾದ್ಯಂತ ಪ್ರತಿಭಟನೆ ಭುಗಿಲೇಳಲು ಕಾರಣವಾದವು. ಆ ವೇಳೆಯಲ್ಲಿ **'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ'** ಮಂಗಳೂರಿನಲ್ಲಿ ರಚನೆಯಾಯಿತು. ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ, ಲಿಂಗತಾರತಮ್ಯ, ಅಸಮಾನತೆಗಳನ್ನು **'ಇನ್ನು ಸಾಕು'** ಎಂಬ ಘೋಷವಾಕ್ಯವನ್ನಿಟ್ಟುಕೊಂಡು ಮಂಗಳೂರಿನಲ್ಲಿ 2013ರಲ್ಲಿ ಮೊದಲ ಸಮಾವೇಶ ನಡೆಸಿತು. ಸಮಾವೇಶದ ಬಳಿಕ ರಾಜ್ಯದಾದ್ಯಂತ ಇರುವ ಮಹಿಳಾಪರ ಸಂಘಟನೆಗಳು ಒಗ್ಗೂಡಿ **"ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ"** ನಿರ್ಮಾಣವಾಯಿತು. ಅಲ್ಲಿಂದ ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು **'ಮಹಿಳಾ ಚೈತನ್ಯ ದಿನ'**ವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶವನ್ನು ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಮಂಡ್ಯ, ಕೋಲಾರ, ಕಲಬುರಗಿ ಹೀಗೆ ಹತ್ತು ಜಿಲ್ಲೆಗಳಲ್ಲಿ ಸಮಾವೇಶಗಳನ್ನು ನಡೆಸಲಾಗಿದೆ. 2023ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳನ್ನು ತುಮಕೂರು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

**ಸಮತೆಯೆಡೆಗೆ ನಮ್ಮ ನಡಿಗೆ :**

ಲಾಭ ದೋಚುವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕಾರಣ–ಧರ್ಮ–ಜಾತಿವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ, ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ, ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆಯರು ಧರ್ಮ/ಕೋಮು/ಜಾತಿ ವೈಷಮ್ಯಗಳಿಗೆ ದಾಳವಾಗಿ ಬಳಕೆಯಾಗುತ್ತಿದ್ದಾರೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣುಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳನ್ನು ಇಮ್ಮಡಿಗೊಳಿಸಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಲಿಂಗ ಸಮಾನತೆಯನ್ನು ಚುನಾವಣಾ ಪ್ರಣಾಳಿಕೆಗಳಿಗಷ್ಟೆ ಸೀಮಿತಗೊಳಿಸಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.

1

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಾಧಾನ್ಯತೆ, ಮತಾಂಧತೆ ಮತ್ತು ಇವುಗಳಿಗೆ ಪೂರಕವಾಗಿರುವ ಅಧಿಕಾರ ರಾಜಕಾರಣವು ವಿಕೃತ ಹಿಂಸೆಯನ್ನು ಹುಟ್ಟು ಹಾಕುತ್ತಿವೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಇಲ್ಲವಾಗಿಸಲು, ಸಮಸಮಾಜ ಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ ತುರ್ತು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ. ಅಂತೆಯೇ **'ಸಮತೆಯೆಡೆಗೆ ನಮ್ಮ ನಡಿಗೆ'** ನಮ್ಮ ಧ್ಯೇಯವಾಕ್ಯವಾಗಿದೆ.

ಭಾರತದ ಮಹಿಳೆಯರು ತಮ್ಮ ಕುಟುಂಬಗಳ ಜೊತೆಜೊತೆಗೆ ದೇಶಕಟ್ಟುವ ಕೆಲಸದಲ್ಲೂ ಸಕ್ರಿಯವಾಗಿ ತೊಡಗಿದವರು. ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ಸಾವಿತ್ರಿಬಾಯಿ ಫುಲೆಯವರಂತಹ ಹತ್ತಾರು ಧೀಮಂತೆಯರು ರಚನಾತ್ಮಕ ಸಮಾಜ ನಿರ್ಮಾಣಕ್ಕಾಗಿ ತಮ್ಮನ್ನು ತಾವು ತೆತ್ತುಕೊಂಡಿದ್ದಾರೆ. ಸ್ವಾತಂತ್ರ್ಯ ಚಳವಳಿಯಲ್ಲೂ ಜಾತಿ, ಮತ, ಧರ್ಮ, ಭಾಷೆಗಳ ಹಂಗು ತೊರೆದ ಭಾರತೀಯ ಮಹಿಳೆಯರು ಆಂದೋಲನಕ್ಕೆ ಶಕ್ತಿ ತುಂಬಿದ್ದಾರೆ. ಸ್ವಾತಂತ್ರ್ಯ ಆಂದೋಲನ ಮತ್ತು ಸಂವಿಧಾನದ ಆಶಯಗಳಿಗೆ ತಕ್ಕಂತೆ ಈ ದೇಶವನ್ನು ಕಟ್ಟಿ, ಬೆಳೆಸುವುದಕ್ಕೆ ನಾವು ಈಗಲೂ ಬದ್ಧರಾಗಿದ್ದೇವೆ. ವಿಶ್ವ ಸಹೋದರಿತ್ವದ ಪರಿಕಲ್ಪನೆಯನ್ನು ನಂಬುವ ಮಹಿಳಾ ಚಳವಳಿಯು ಮತ-ಧರ್ಮಗಳ ಆಧಾರದಲ್ಲಿ ಸಮಾಜ ಒಡೆಯುವುದನ್ನು ಖಂಡಿಸುತ್ತದೆ. ಸರ್ವರ ಸಮಾನತೆ, ಏಳಿಗೆಯನ್ನು ಸಾಧಿಸಬಯಸುವ ಸಂವಿಧಾನದಲ್ಲಿ ನಂಬಿಕೆ ಇರಿಸಿರುವವರೆಲ್ಲರೂ ಸರ್ವಜನಾಂಗದ ಶಾಂತಿಯ ತೋಟವಾದ ಭಾರತದ ಪ್ರಜೆಗಳು ಎಂಬುದು ನಮ್ಮ ಅಚಲ ನಂಬಿಕೆಯಾಗಿದೆ.

ಇಂಥ ಆಶಯಗಳನ್ನು ಹೊತ್ತು ಒಕ್ಕೂಟವು ಈ ಬಾರಿ ತುಮಕೂರು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಪೂರ್ವಭಾವಿಯಾಗಿ ಶಾಲಾ ಕಾಲೇಜು ಮಕ್ಕಳಲ್ಲಿ ಲಿಂಗ ಸೂಕ್ಷ್ಮತೆಮತ್ತು ಮಹಿಳೆಯರ ಘನತೆಯ ಬದುಕಿನ ಅರಿವು ಮೂಡಿಸಲು **'ಅರಿವಿನ ಪಯಣ'** ಎಂಬ ಕಾರ್ಯಕ್ರಮಗಳನ್ನು ಕಳೆದ ಆಗಸ್ಟ್ ತಿಂಗಳಿನಿಂದ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನಿರಂತರವಾಗಿ ನಡೆಸಲಾಗಿದೆ. ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿಭಟಿಸುವ **'ವಿಮೆನ್ ಇನ್ ಬ್ಲಾಕ್'** ಎಂಬ ಮೌನಜಾಗೃತಿ ಕಾರ್ಯಕ್ರಮವನ್ನು **'ಸರ್ವ ಜನಾಂಗದ ಶಾಂತಿಯ ದೇಶ'** ಎಂಬ ಘೋಷವಾಕ್ಯದಡಿ ತಾಲೂಕು ಕೇಂದ್ರಗಳಲ್ಲೂ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಇದರಲ್ಲಿ ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಹಾಗೂ ಸಮಾನ ಮನಸ್ಕ ಸೋದರಿ-ಸೋದರರು ಜೊತೆಗೂಡಲಿದ್ದಾರೆ.

ಸಮಸಮಾಜದ ನಿರ್ಮಾಣಕ್ಕಾಗಿ ಅರಿವಿನ ಆಂದೋಲನಗಳು ನಡೆದ ತುಮಕೂರು ನಾಡಿನಲ್ಲಿ ಬಹುತೇಕ ಜೀವಪರ ಚಳವಳಿಗಳು ನಡೆದಿವೆ. ಪ್ರಬಲ ದಲಿತ ಚಳವಳಿ ರೂಪುಗೊಂಡಿದೆ. ಕಾರ್ಮಿಕ ಚಳವಳಿಯ ನೆಲೆಯಾಗಿ ಹಲವಾರು ಕಾರ್ಮಿಕ ಮುಂದಾಳುಗಳ ನೆಲೆಯಾಗಿದೆ. ಬಂಡಾಯ, ರೈತ, ಸಮಾಜವಾದಿ, ಕೋಮುಸೌಹಾರ್ದ, ಮಹಿಳಾ ಚಳವಳಿಗಳೂ ಜಿಲ್ಲೆಯಲ್ಲಿ ಆಳವಾದ ನೆಲೆ ಕಂಡುಕೊಂಡು ವಿಸ್ತಾರಗೊಂಡಿವೆ. ಅದರ ಮುಂದುವರಿಕೆಯೆಂಬಂತೆ ಇವತ್ತು ಸಶಕ್ತ ಹೋರಾಟಗಾರರು, ಮಹಿಳಾ ಮತ್ತು ಯುವ ಮುಂದಾಳುಗಳು ಕಂಡುಬರುತ್ತಾರೆ. ಅಂಥಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2023ರಲ್ಲಿ ಸಮಾನ ಮನಸ್ಕ ಸಂಘಟನೆ, ಸಂಸ್ಥೆ, ವ್ಯಕ್ತಿಗಳೊಡಗೂಡಿ ಮಹಿಳಾ ಸಮಾನತೆಗಾಗಿ ಈ ಸಮಾವೇಶ ನಡೆಸುತ್ತಿರುವುದು ಚಾರಿತ್ರಿಕ ಮೈಲುಗಲ್ಲಾಗಿದೆ. ತುಮಕೂರು ಸಮಾವೇಶದಲ್ಲಿ **'ಸಂವಿಧಾನವೇ ಉಸಿರು, ಬಹುತ್ವವೇ ಬದುಕು'** ಎಂಬ ಘೋಷವಾಕ್ಯದಡಿ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

## ನಮ್ಮ ಹಕ್ಕೊತ್ತಾಯಗಳು :

1. ಸಾಂವಿಧಾನಿಕ ಮೌಲ್ಯಗಳು ಸ್ಥಾಪಿತಗೊಂಡು ಸೆಕ್ಯುಲರ್ ಭಾರತ ಬಲಗೊಳ್ಳಬೇಕು.
2. ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.
3. ನೆನೆಗುದಿಗೆ ಬಿದ್ದಿರುವ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಮಸೂದೆಯು ಕಾಯ್ದೆ ಆಗಬೇಕು ಮತ್ತು ಕಡ್ಡಾಯವಾಗಿ ಜಾರಿಗೆ ಬರಬೇಕು.
4. ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.
5. ಬಾಲ್ಯವಿವಾಹ, ಮರ್ಯಾದೆಗೇಡು ಹತ್ಯೆ, ವರದಕ್ಷಿಣೆ ಹಿಂಸೆ, ಕೌಟುಂಬಿಕ ದೌರ್ಜನ್ಯಗಳು ಕೊನೆಯಾಗಬೇಕು.
6. ಅಶ್ಲೀಲ ಸಾಹಿತ್ಯ, ಸಿನಿಮಾ, ಜಾಲತಾಣಗಳನ್ನು ನಿಷೇಧಿಸಬೇಕು.
7. 12 ರಿಂದ 18 ವರ್ಷದವರೆಗಿನ ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿ ಆಗಬೇಕು. ಲಿಂಗಸಮಾನತೆ ದೃಷ್ಟಿಕೋನದ ಪಠ್ಯಗಳು ಎಲ್ಲೆಡೆ ರಚನೆಯಾಗಬೇಕು.
8. ಪ್ರತಿ ಜಿಲ್ಲೆಯಲ್ಲಿ ಅತ್ಯಾಚಾರ ತಡೆ ಕಾವಲು ಸಮಿತಿ ರಚನೆಯಾಗಬೇಕು.
9. ತ್ವರಿತ ನ್ಯಾಯಾಲಯಗಳ ಸ್ಥಾಪನೆಯಾಗಿ ಶೀಘ್ರ ನ್ಯಾಯ ದೊರೆಯುವಂತಾಗಬೇಕು.
10. ಫೋಕ್ಸೋ ಕಾಯಿದೆ ಬಲಪಡಿಸಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಟ ತಡೆಗೆ ಕ್ರಮ ಕೈಗೊಳ್ಳಬೇಕು.
11. ಮುಟ್ಟೇ ಮೊದಲಾದ ರೂಢಿ, ಆಚರಣೆಗಳ ಹೆಸರಿನಲ್ಲಿ ಮಹಿಳೆಯರನ್ನು ಅಗೌರವಿಸುವ, ಹೊರಗಿಡುವ ಶೋಷಿಸುವಂತಹ ಮೌಢ್ಯಾಚರಣೆಗಳ ತಡೆಗಾಗಿ ಜಾಮೀನುರಹಿತ ಕಾಯಿದೆ ರಚನೆಯಾಗಬೇಕು.
12. ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳಿಸಿ, ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
13. ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಮತ್ತು ನೀತಿ ನಿರೂಪಣಾ ಸ್ಥಾನಗಳಲ್ಲಿ ಅವರ ಪ್ರಾತಿನಿಧ್ಯ ಕಡ್ಡಾಯಗೊಳಿಸಬೇಕು.

2

14. ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರ ಉದ್ಯೋಗ ಖಾಯಂಗೊಳಿಸಬೇಕು. ಗಾರ್ಮೆಂಟ್ಸ್ ನೌಕರರು, ಮನೆಗೆಲಸದವರು, ಬೀಡಿ ಕಾರ್ಮಿಕರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡಬೇಕು.
15. ಜನರ ವಲಸೆ ತಡೆಗಟ್ಟಿ ಸ್ಥಳೀಯವಾಗಿಯೇ ಉದ್ಯೋಗದ ಭದ್ರತೆ ಒದಗಿಸಬೇಕು.
16. ಮಲ ಎತ್ತುವ ಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಉಲ್ಲಂಘಿಸಿದವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು.
17. ಅಸ್ಪೃಶ್ಯತಾ ತಡೆ ಕಾಯಿದೆ ಬಲಗೊಳಿಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು.
18. ಮದ್ಯವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ.
19. ಭೂಸುಧಾರಣೆ ತಿದ್ದುಪಡಿ ಕಾಯಿದೆ ರದ್ದಾಗಬೇಕು.
20. ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು.
21. ರೈತರು ಬೆಳೆದ ಬೆಳೆಗೆ ಕನಿಷ್ಠ ವೈಜ್ಞಾನಿಕ ಬೆಂಬಲ ಬೆಲೆ ನಿಗದಿಪಡಿಸಿ ಕಾಯಿದೆಯಾಗಿಸಬೇಕು.

## ಸಹಭಾಗಿ ಸಂಘಟನೆಗಳು :

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು, ಕ.ರಾ.ಮ.ದೌ.ವಿ.ಒಕ್ಕೂಟ–ಮೈಸೂರು, ಕ.ರಾ.ಮ.ದೌ.ವಿ.ಒಕ್ಕೂಟ––ಬೆಂಗಳೂರು; ಕ.ರಾ.ಮ.ದೌ.ವಿ.ಒಕ್ಕೂಟ–ವಿಜಯಪುರ: ಕ.ರಾ.ಮ.ದೌ.ವಿ.ಒಕ್ಕೂಟ–ಕೊಪ್ಪಳ, ಕ.ರಾ.ಮ.ದೌ.ವಿ.ಒಕ್ಕೂಟ–ಶಿವಮೊಗ್ಗ; ಕ.ರಾ.ಮ.ದೌ.ವಿ.ಒಕ್ಕೂಟ–ಧಾರವಾಡ; ಕ.ರಾ.ಮ.ದೌ.ವಿ.ಒಕ್ಕೂಟ –ಮಂಡ್ಯ; ಕ.ರಾ.ಮ.ದೌ.ವಿ.ಒಕ್ಕೂಟ–ಕೋಲಾರ; ಕ.ರಾ.ಮ.ದೌ.ವಿ.ಒಕ್ಕೂಟ–ಕಲಬುರಗಿ; ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಆಲ್ ಇಂಡಿಯಾ ಪ್ರೊಗ್ರೆಸ್ಸಿವ್ ವಿಮೆನ್ಸ್ ಅಸೋಸಿಯೇಷನ್, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಮುನ್ನಡೆ ಸಾಮಾಜಿಕ ಸಂಸ್ಥೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಕರ್ನಾಟಕ ದಲಿತ ಮಹಿಳಾ ವೇದಿಕೆ, ಕರ್ನಾಟಕ ಜನಶಕ್ತಿ, ನ್ಯಾಶನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಎಸ್.ಎಫ್.ಐ., ಡಿವೈಎಫ್ಐ, ಎಐಟಿಯುಸಿ, ಸಿಐಟಿಯು, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ವಿಮೋಚನಾ ಬೆಂಗಳೂರು, ಗಮನ ಮಹಿಳಾ ಸಮೂಹ, ಸಿಐಈಡಿಎಸ್, ವಿಮೆನ್ಸ್ ವಾಯ್ಸ್, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು ಬೆಂಗಳೂರು, ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಫೆಡಿನಾ, ಅನೇಕ ಬೆಂಗಳೂರು, ಒಂದೆಡೆ ಬೆಂಗಳೂರು, ಪಯಣ, ಸ್ವರಾಜ್ ನೆಟ್‌ವರ್ಕ್, ವಿಸ್ತಾರ್, ಸಂಚಲನ ಕರ್ನಾಟಕ, ಸಂವಾದ, ಸ್ಲಂ ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ. ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಟಿಯು, ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ–ದಕ್ಷಿಣ ಕನ್ನಡ, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಸ್ಪಂದನ ಮಂಡ್ಯ, ಸಖಿ, ಹೊಸಪೇಟೆ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ದಲಿತ ಕಲಾ ಮಂಡಳಿ ಗದಗ, ಜಾಗೃತ ಮಹಿಳಾ ಒಕ್ಕೂಟ, ಖಾನಾಪುರ, ಸಬಲ ವಿಜಯಪುರ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ–ಕರ್ನಾಟಕ, ಗ್ರಾಮೀಣ ಕೂಲಿಕಾರ್ಮಿಕರ ಸಂಘಟನೆ, ರಂಗಬೆಳಕು ತಂಡ ಶಿವಮೊಗ್ಗ, ಅಹರ್ನಿಶಿ ಪ್ರಕಾಶನ ಶಿವಮೊಗ್ಗ, ದಿ ಶಿವಮೊಗ್ಗ ಮಲ್ಟಿ ಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ, ನಿರಂತರ–ಶಿವಮೊಗ್ಗ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ–ಶಿವಮೊಗ್ಗ, ಸ್ಪಂದನ (ರಿ) ಸಾಗರ, ಕನ್ನಡ ಮೀಡಿಯಂ ನ್ಯೂಸ್ 24 **X** 7 ಚಾನೆಲ್ ಶಿವಮೊಗ್ಗ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ತುಮಕೂರು, ಕರ್ನಾಟಕ ಲೇಖಕಿಯರ ಸಂಘ ಜಿಲ್ಲಾ ಶಾಖೆ ತುಮಕೂರು, ವಿಜ್ಞಾನ ಕೇಂದ್ರ ತುಮಕೂರು, ಸೃಜನ ಚಿಕ್ಕನಾಯಕನಹಳ್ಳಿ, ಚರಕ ಚಾರಿಟಬಲ್ ಟ್ರಸ್ಟ್ ತುಮಕೂರು, ಎಐಯುಟಿಯುಸಿ, ಎಐಡಿಎಸ್‌ಓ, ವರದಕ್ಷಿಣೆ ವಿರೋದಿ ವೇದಿಕೆ ತುಮಕೂರು, ಸ್ಲಂ ಜನಾಂದೋಲನ ಸಮಿತಿ ತುಮಕೂರು, ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಶಿರಾ, ಹಕ್ಕಿ ಪಕ್ಕ ಬಳಗ ಗುಬ್ಬಿ, ತುಮಕೂರು, ನೆಲಸಿರಿ ಟ್ರಸ್ಟ್, ಸಮತಾ ಬಳಗ ತುಮಕೂರು, ಮಾನವ ಮಂಟಪ ತುಮಕೂರು, ಝುನ್ ಟೀಮ್ ತುಮಕೂರು, ನಾಟಕ ಮನೆ ತುಮಕೂರು, ಜಿಲ್ಲಾ ಮಹಿಳಾ ಸಂಘಟನೆ ತುಮಕೂರು ಜಿಲ್ಲಾ ಮಹಿಳಾ ಸಂರಕ್ಷಣಾ ವೇದಿಕೆ ತುಮಕೂರು ಎಸ್.ಸಿ/ಎಸ್.ಟಿ ನೌಕರರ ಸಮನ್ವಯ ಸಮಿತಿ, ಮಾತಂಗಿ ಮಹಿಳಾ ಸಂಘಟನೆ, ಭೂಮಿ ಥಿಯೇಟರ್ ತಿಪಟೂರು, ಶಿರಾ ಸೀಮೆ ಸಾಂಸ್ಕೃತಿಕ ವೇದಿಕೆ ಶಿರಾ, ಹಳ್ಳಿ ಸಿರಿ ತೋವಿನಕೆರೆ, ಲಕ್ಷ್ಮೀಮಹಿಳಾ ಚಾರಿಟಬಲ್ ಟ್ರಸ್ಟ್ ಮಧುಗಿರಿ, ಧರ್ಮಸ್ತ್ರೀ ಕಲ್ಚರಲ್ ಟ್ರಸ್ಟ್ ತುಮಕೂರು, ಸಾವಿತ್ರಿಬಾಯಿಫುಲೆ ಶಿಕ್ಷಕಿಯರ ಸಂಘ ತುಮಕೂರು ಜಿಲ್ಲೆ, ಜಿಲ್ಲಾ ಅಲೆಮಾರಿ ಸಂಘಟನೆ ತುಮಕೂರು, ಸಹಬಾಳ್ವೆ–ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆ ತುಮಕೂರು ಜಿಲ್ಲೆ, ರಾಜ್ಯ ಯುವ ಬರಹಗಾರರ ಒಕ್ಕೂಟ ತುಮಕೂರು, ಅರುಣೋದಯ ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ ಟ್ರಸ್ಟ್ ತುಮಕೂರು, ರಂಗ ಸೊಗಡು ಕಲಾ ಟ್ರಸ್ಟ್ ಸ್ವಾಂದೇನಹಳ್ಳಿ, ಆದರ್ಶ ಫೌಂಡೇಷನ್ ದೊಡ್ಡೇರಿ, ಭಾರತಿ ಸ್ತ್ರೀ ಸಮಾಜ ತುಮಕೂರು, ಪದ್ಮಾಂಬ ಜೈನ ಮಹಿಳಾ ಸಂಘ ತುಮಕೂರು, ಮೈತ್ರಿ ಮಹಿಳಾ ಸಂಘ ತುಮಕೂರು, ಭೈರವಿ ಮಹಿಳಾ ಸಂಘ ತುಮಕೂರು, ಕನಕ ಮಹಿಳಾ ಸಂಘ ತುಮಕೂರು, ಅಭ್ಯುದಯ ಟ್ರಸ್ಟ್ ತುಮಕೂರು, ಸ್ನೇಹ ಮಹಿಳಾ ಬಳಗ ತುಮಕೂರು, ನಿರ್ಭಯ ಮಹಿಳಾ ಸಂಘ ತುಮಕೂರು, ಎಸ್.ಐ.ಟಿ ವನಿತೆಯರ ಸಂಘ ತುಮಕೂರು, ಜನನಿ ಸೇವಾ ಟ್ರಸ್ಟ್ ತುಮಕೂರು, ಜಾತ್ಯಾತೀತ ಯುವ ವೇದಿಕೆ ತುಮಕೂರು, ಡಮರುಗ ರಂಗ ಸಂಪನ್ಮೂಲ ಕೇಂದ್ರ ಮೆಳೆಹಳ್ಳಿ, ಎ.ಐ.ಕೆ.ಕೆ.ಎಂ.ಎಸ್ ತುಮಕೂರು ಜಿಲ್ಲೆ, ದಲಿತ ಸಂಘರ್ಷ ಸಮಿತಿ (ಎನ್.ಮೂರ್ತಿ ಬಣ) ತುಮಕೂರು ಜಿಲ್ಲೆ, ಹಮಾಲರ ಸಂಘ ತುಮಕೂರು ಜಿಲ್ಲೆ, ಕರ್ನಾಟಕ ರಾಜ್ಯ ರೈತ ಸಂಘ ತುಮಕೂರು ಜಿಲ್ಲೆ, ತುಮಕೂರು ದಲಿತ ಸಂಘರ್ಷ ಸಮಿತಿ (ಬಿ. ಕೃಷ್ಣಪ್ಪ ಬಣ) ತುಮಕೂರು, ಬೀಡಿ ಕಾರ್ಮಿಕರ ಸಂಘ ತುಮಕೂರು, ರಾಷ್ಟ್ರೀಯ ಕಿಸಾನ್ ಸಂಘ ತುಮಕೂರು, ಸಮರ್ಥ್ ಫೌಂಡೇಷನ್ ತುಮಕೂರು,ನಿವೃತ್ತ ಸರ್ಕಾರಿ ನೌಕರರ ಸಂಘ ತುಮಕೂರು, ಆರ್ಯವೈಶ್ಯ ಮಹಿಳಾ ಸಂಘ ತುಮಕೂರು, ಚಿರಂಜೀವಿ ಮಹಿಳಾ ಸಂಘ ಮೆಳೆಹಳ್ಳಿ, ಬಂಡಾಯ ಸಾಹಿತ್ಯ ಸಂಘಟನೆ, ವಾಣಿ ಮಹಿಳಾ ಸಂಘ ತುಮಕೂರು, ಐಎಂಎ ಮಹಿಳಾ ವಿಭಾಗ ತುಮಕೂರು, ಕೆ.ಜಿ.ಎಂ.ಓ.ಎ ಮಹಿಳಾ ಘಟಕ, ತುಮಕೂರು, ನೆವಿಲ್ ಫೌಂಡೇಷನ್ ತುಮಕೂರು, ಅಂಬೇಡ್ಕರ್ ಜನಪರ ವೇದಿಕೆ ತುಮಕೂರು, ಜನಸ್ತು ಹಳೇಕೋಟೆ ದುರ್ಗದಹಳ್ಳಿ,

3

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಗಳ ವಿವರ

**ಮಾರ್ಚ್ 7, 2023ರ ಮಂಗಳವಾರ** ಬೆಳಗ್ಗೆ 10 ಗಂಟೆಗೆ ಟೌನ್‌ಹಾಲ್ ಸರ್ಕಲ್‌ನಿಂದ ಅಮಾನಿಕೆರೆಯ ಗಾಜಿನಮನೆಯವರೆಗೆ ಹಕ್ಕೊತ್ತಾಯ ಜಾಥಾ, **ಮೆರವಣಿಗೆ** ನಡೆಯಲಿದೆ. ಕೋವಿಡ್ ವಿಶ್ವಪಿಡುಗನ್ನು ಅತ್ಯಂತ ದಕ್ಷವಾಗಿ, ಮಾನವೀಯವಾಗಿ ನಿರ್ವಹಿಸಿದ ಕೇರಳದ ಮಾಜಿ ಆರೋಗ್ಯ ಮಂತ್ರಿಗಳಾದ ಶ್ರೀಮತಿ **ಕೆ.ಕೆ.ಶೈಲಜಾ** ಅವರು ಭಾಗವಹಿಸಲಿದ್ದಾರೆ. ಅಂದು ಸಂಜೆ 6 ಗಂಟೆಯಿಂದ 7ರ ತನಕ ಟೌನ್‌ಹಾಲ್ ಸರ್ಕಲಿನಲ್ಲಿ ಬೆಳಕಿನೊಂದಿಗೆ ಮೌನ ಸಂದೇಶ **'ಕಪ್ಪು ಉಡುಗೆಯಲ್ಲಿ ಮಹಿಳೆಯರು'** ಮೌನ ಜಾಗೃತಿ ಕಾರ್ಯಕ್ರಮವು **'ಸರ್ವ ಜನಾಂಗದ ಶಾಂತಿಯ ದೇಶ'** ಎಂಬ ಘೋಷವಾಕ್ಯದೊಡನೆ ನಡೆಯಲಿದೆ.

---

**ಮಾರ್ಚ್ 8, 2023ರ ಬುಧವಾರ 'ಹೆಣ್ಣು ಬದುಕು: ಸವಾಲು–ಸಾಧ್ಯತೆಗಳು'** ಎಂಬ ವಿಚಾರ ಸಂಕಿರಣ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಬೆಳಿಗ್ಗೆ 10 ಗಂಟೆಯಿಂದ ನಡೆಯಲಿದೆ. ಮುಖ್ಯ ಅತಿಥಿಯಾಗಿ ಲಿಂಗಪರಿವರ್ತಿತ ಸಮುದಾಯದ ಹೋರಾಟಗಾರರಾದ **ವಿಹಾನ್, ಬೆಂಗಳೂರು** ಪಾಲ್ಗೊಳ್ಳುವರು. ಬಳಿಕ ರಾಜ್ಯದಾದ್ಯಂತದ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಮಂಡನೆ, ಸಂವಾದ ನಡೆಯಲಿದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ.

**ದಿನ ದಿನವೂ ಅನುದಿನವೂ ಈ ನೆಲದ ಹೆಣ್ಣುಗಳು ಮೆರವಣಿಗೆ ಹೊರಡುತ್ತೇವೆ...**
**ಮಳೆ ಹಾಡ ಹಾಡುತ್ತಾ ಸಾಲುಮರಗಳಾ ನೆಡುತ್ತಾ ಮೆರವಣಿಗೆ ಹೊರಡುತ್ತೇವೆ... ಮೆರವಣಿಗೆ ಹೊರಡುತ್ತೇವೆ...**

**ಈ ಎಲ್ಲ ಕಾರ್ಯಕ್ರಮಗಳಿಗೆ ತಮಗೆಲ್ಲರಿಗೂ ಆತ್ಮೀಯ ಸ್ವಾಗತ**
**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ. ಸಮತೆ ಸಾಮರಸ್ಯದ ನಾಡ ಕಟ್ಟೋಣ.**

### "ಕೈಗೆ ಕೈ ಜೋಡಿಸೋಣ ಹೊಸ ಜಗತ್ತು ಕಟ್ಟೋಣ"

**(ವಿ.ಸೂ.: ಜಾಥಾದಲ್ಲಿ ಭಾಗವಹಿಸುವ ಎಲ್ಲ ಸಹಭಾಗಿಗಳು ತಂತಮ್ಮ ಸಂಘಟನೆಯ ಬ್ಯಾನರ್ ನೊಂದಿಗೆ ಬರುವುದು.)**

**: ಸಂಪರ್ಕಕ್ಕಾಗಿ :**

| | | | |
|---|---|---|---|
| ಬಾ.ಹ.ರಮಾಕುಮಾರಿ | – 9448694323 | ಮಲ್ಲಿಕಾ ಬಸವರಾಜು | – 9845999625 |
| ರಾಣಿ ಚಂದ್ರಶೇಖರ್ | – 9986824210 | ಡಾ॥ ಡಿ.ಅರುಂಧತಿ | – 9448971779 |
| ಸೈಯದ್‌ಮುಜೀಬ್ | – 9448093814 | ಚಂದ್ರಶೇಖರ್ | – 8105254888 |
| ಎನ್. ಇಂದಿರಮ್ಮ | – 9900538918 | ಕಲ್ಯಾಣಿ | – 7892630743 |
| ಅಖಿಲಾ ವಿದ್ಯಾಸಂದ್ರ | – 9845250955 | ವಾಣಿ ಪೆರಿಯೋಡಿ | – 9448481340 |
| ಡಾ.ಸಬಿಹಾ ಭೂಮಿಗೌಡ | – 9448696898 | ಟಿ.ಎಲ್.ರೇಖಾಂಬ ಶಿವಮೊಗ್ಗ | – 9901445030 |
| ಗೌರಿ | – 8971232329 | ಡಾ॥ ಎಚ್.ಎಸ್.ಅನುಪಮಾ | – 9480211320 |

**ಪ್ರಕಟಣೆ : ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ,**

**ಕರಪತ್ರದ ಪ್ರಾಯೋಜಕರು : ಚರಕ ಚಾರಿಟಬಲ್ ಟ್ರಸ್ಟ್, ತುಮಕೂರು**

4

**ಉಪಸ್ಥಿತಿ:** ಪ್ರೊ. ರವಿವರ್ಮ ಕುಮಾರ್ (ಹಿರಿಯ ವಕೀಲರು, ಸಂವಿಧಾನ ತಜ್ಞರು), ಡಾ. ಗೀತಾ ವಸಂತ, ಡಾ. ಜ್ಯೋತಿ. ಎ., ಡಾ. ಕೆ. ಎಸ್. ಗಿರಿಜಾ, ತನುಜಾ (ಗ್ರಾ.ಪಂ.ಸದಸ್ಯೆ).
**ಅಧ್ಯಕ್ಷತೆ:** ಎನ್. ಇಂದಿರಮ್ಮ, ಸಾಮಾಜಿಕ-ಪರಿಸರ ಹೋರಾಟಗಾರ್ತಿ, ಚಿಕ್ಕನಾಯಕನಹಳ್ಳಿ

**ಸಂಯೋಜನೆ:** ಡಾ. ಆಶಾರಾಣಿ ಬಗ್ಗನಡು, ರತ್ನಮ್ಮ.

ಏರು ಹಗಲು 12.30–1.30

**ಮಹಿಳೆ ಮತ್ತು ರಾಜಕೀಯ ಮೀಸಲಾತಿ:** ಸಿ. ಜಿ. ಮಂಜುಳಾ
**ಸ್ಪಂದನೆ:** ಅಖಿಲಾ ವಿದ್ಯಾಸಂದ್ರ, ಜೊಹರಾ ಮಂಗಳೂರು.

ಮಧ್ಯಾಹ್ನ 2.00–4.30

**ಮಹಿಳೆ–ಸಾಂಸ್ಕೃತಿಕ ರಾಜಕಾರಣ:** ಡಾ. ಸಬಿತಾ ಬನ್ನಾಡಿ
**ಸ್ಪಂದನೆ:** ರೇಶ್ಮಾ ಗುಳೇದಗುಡ್ಡಾಕರ್ ಕೊಟ್ಟೂರು, ಭಾಗೀರಥಿ ಸಾಗರ.

**ಸರಕು ಸಂಸ್ಕೃತಿ ಮತ್ತು ಮಹಿಳೆ:** ಡಾ. ಸುಶಿ ಕಾಡನಕುಪ್ಪೆ
**ಸ್ಪಂದನೆ:** ಮಂಜುಳಾ ಸುನಿಲ್ ಮಂಗಳೂರು, ರಾಜೇಶ್ವರಿ ಧಾರವಾಡ.

**ಮಹಿಳಾ ಹೋರಾಟ – ಇಂದು:** ಪಲ್ಲವಿ ಇಡೂರು
**ಸ್ಪಂದನೆ:** ಗೌರಿ ಬೆಂಗಳೂರು, ಗೀತಾಲಕ್ಷ್ಮಿ ತಿಪಟೂರು.

**ಅಧ್ಯಕ್ಷತೆ:** ಶಾಂತಮ್ಮ, ಗಮನ ಮಹಿಳಾ ಸಮೂಹ, ಕೋಲಾರ.
**ಸಂಯೋಜನೆ:** ಮರಿಯಂಬಿ, ಉಮಾದೇವಿ ಗ್ಯಾರಳ್ಳ

ಸಂಜೆ 4.30ರಿಂದ
ಸಾಂಸ್ಕೃತಿಕ ಕಾರ್ಯಕ್ರಮಗಳು

**ನಿರ್ವಹಣೆ:**
ಅಕ್ಕಮ್ಮ, ಪಾರ್ವತಮ್ಮ, ಭಾಗ್ಯ, ಹೇಮಾ, ಮುಮ್ತಾಜ್, ವರಮಹಾಲಕ್ಷ್ಮಿ, ಪೂರ್ಣಮ್ಮ, ಲಲಿತಾ ಮಲ್ಲಪ್ಪ, ಉಮಾದೇವಿ ಚಿ.ನಾ.ಹಳ್ಳಿ, ದೀಪಿಕಾ ಮರಳೂರು ಮತ್ತು 'ಅರಿವಿನ ಪಯಣ'ದ ಎಲ್ಲ ಸಂಗಾತಿಗಳು

ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ..
ಸಮತೆ ಸಾಮರಸ್ಯದ ನಾಡ ಕಟ್ಟೋಣ..
ಕೈಗೆ ಕೈ ಜೋಡಿಸಿ ಹೊಸ ಜಗತ್ತು ಕಟ್ಟೋಣ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ತುಮಕೂರು

*ಸಮತೆಯೆಡೆಗೆ ನಮ್ಮ ನಡಿಗೆ*




ಸಂವಿಧಾನವೇ ಉಸಿರು, ಬಹುತ್ವವೇ ಬದುಕು
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – ಮಾರ್ಚ್ 7, 8, 2023.

## ಸಾಲುಮರದ ತಿಮ್ಮಕ್ಕ ವೇದಿಕೆ
## ಮೆರವಣಿಗೆ ಉದ್ಘಾಟನೆ

ತಾ. 7–3–2023, ಬೆಳಿಗ್ಗೆ 10 ಗಂಟೆಗೆ    **ಸ್ಥಳ:** ಟೌನ್‌ಹಾಲ್ ಸರ್ಕಲ್, ತುಮಕೂರು

**ಉದ್ಘಾಟನೆ:**
ಶ್ರೀಮತಿ ಕೆ. ಕೆ. ಶೈಲಜಾ, ಹಾಲಿ ಶಾಸಕರು ಮತ್ತು ಮಾಜಿ ಆರೋಗ್ಯ ಸಚಿವರು, ಕೇರಳ ಸರ್ಕಾರ
ಶ್ರೀಮತಿ ವಿದ್ಯಾ ಕುಮಾರಿ, ಕಾರ್ಯನಿರ್ವಹಣಾಧಿಕಾರಿಗಳು, ಜಿ.ಪಂ., ತುಮಕೂರು

**ವಿಶೇಷ ಆಹ್ವಾನಿತರು:**
**ಹಂದಿಜೋಗಿ ರಾಮಕ್ಕ** (ಕ.ರಾ. ಮಹಿಳಾ ಅಲೆಮಾರಿ ಬುಡಕಟ್ಟು ಅಭಿವೃದ್ಧಿ ಮಹಾಸಭಾ)
**ಶ್ವೇತಾ** (ಪೌರಕಾರ್ಮಿಕರ ಸಂಘಟನೆ)
**ಶಹತಾಜ್** (ಬೀಡಿ ಕಾರ್ಮಿಕರ ಸಂಘ)
**ಜಯಲಕ್ಷ್ಮಿ ಚಿಕ್ಕನಾಯಕನಹಳ್ಳಿ** (ಆಸಿಡ್ ವಾರಿಯರ್)
**ದೀಪಿಕಾ** (ಲಿಂಗಾಂತರಿ ಸಮುದಾಯ)

**ನಿರ್ವಹಣೆ:** ಕಲ್ಯಾಣಿ, ಉಮೇಶ್, ಬಿ. ಪ್ರವೇಣಿ, ಮೆಳೆಹಳ್ಳಿ ದೇವರಾಜು.

## ಸೂಲಗಿತ್ತಿ ನರಸಮ್ಮ ವೇದಿಕೆ
## ಬೃಹತ್ ಸಾರ್ವಜನಿಕ ಸಮಾವೇಶ

ಏರು ಹಗಲು 11.30 ಗಂಟೆಗೆ    **ಸ್ಥಳ:** ಅಮಾನಿಕೆರೆ ಗಾಜಿನ ಮನೆ, ತುಮಕೂರು

**ಆಶಯ ಗೀತೆ:** ಒಕ್ಕೂಟದ ಸಂಗಾತಿಗಳಿಂದ
**ಸ್ವಾಗತ:** **ಸೈಯದ್ ಮುಜೀಬ್**, ಸಿಐಟಿಯು
**ಸಂವಿಧಾನ ಪೀಠಿಕೆ ಓದು:** **ಮಲ್ಲಿಕಾ ಬಸವರಾಜು**, ಅಧ್ಯಕ್ಷರು, ಕಲೇಸಂ ತುಮಕೂರು ಜಿಲ್ಲಾ ಶಾಖೆ.
**ಪ್ರಾಸ್ತಾವಿಕ ಮಾತು:** **ಪ್ರೊ. ಸಬಿಹಾ ಭೂಮಿಗೌಡ**, ವಿಶ್ರಾಂತ ಕುಲಪತಿಗಳು, ಮಹಿಳಾ ವಿ.ವಿ. ವಿಜಯಪುರ
**ಉದ್ಘಾಟನೆ:** ತಮಟೆ ನರಸಮ್ಮ ಮತ್ತು ಸ್ಲಂ ಕಲಾ ತಂಡದವರು ತಮಟೆ ಬಾರಿಸುವ ಮೂಲಕ
**ಉದ್ಘಾಟನಾ ಮಾತು:** **ನಾಹೀದಾ ಝಮ್ ಝಮ್**, ಕುಲಸಚಿವರು, ತುಮಕೂರು ವಿ.ವಿ.
**ದಿಕ್ಸೂಚಿ ಮಾತು:** **ಶ್ರೀಮತಿ ಕೆ. ಕೆ. ಶೈಲಜಾ**, ಹಾಲಿ ಶಾಸಕರು ಮತ್ತು ಮಾಜಿ ಆರೋಗ್ಯ ಸಚಿವರು, ಕೇರಳ ಸರ್ಕಾರ
**'ಮಹಿಳಾ ಚೈತನ್ಯ ದಿನ' ಕುರಿತು:** **ಡಾ. ಸುಧಾ ಕಾಮತ್**, ಪ್ಲಾಸ್ಟಿಕ್ ಸರ್ಜನ್, ಅಖಿಲ ಭಾರತ ಉಪಾಧ್ಯಕ್ಷರು, ಎಐಎಂಎಸ್‌ಎಸ್

**ಸಹಮತದ ನುಡಿ:**
**ಕೆ. ದೊರೈರಾಜು** (ಪಿಯುಸಿಎಲ್), **ಸಿಸ್ಟರ್ ಡಯಾನಾ** (ಸೇಂಟ್ ಮೇರೀಸ್ ಶಾಲೆ, ತುಮಕೂರು), **ಡಾ. ಹನುಮಕ್ಕ** (ಸ್ತ್ರೀರೋಗ ತಜ್ಞೆ), **ಜಿ. ಕಮಲ** (ಅಂಗನವಾಡಿ ಯೂನಿಯನ್), **ಭುವನೇಶ್ವರಿ** (ಪತ್ರಕರ್ತೆ), **ಗಂಗಮ್ಮ ಕೆಂಪಯ್ಯ** (ದಲಿತ ಮಹಿಳಾ ಹೋರಾಟಗಾರ್ತಿ), **ಮಂಜುಳಾ ಗೋನಾವರ** (ಆಶಾ ಯೂನಿಯನ್), **ಪರ್ವೀನ್ ತಾಜ್** (ವಕೀಲರು), **ಅಕ್ಕೈ ಪದ್ಮಶಾಲಿ** (ಲಿಂಗಾಂತರಿ ಸಮುದಾಯದ ಸಂಘಟನೆ), **ಗಂಗರಾಜಮ್ಮ** (ಧರ್ಯೆಸ್ತ್ರೀ), **ಅರುಣಾ** (ಸಾವಯವ ಕೃಷಿಕರು), **ರೇಣುಕಾ ಕೆಸರಮಡು** (ಚಿತ್ರ ಕಲಾವಿದೆ), **ಹೇಮಲತಾ ತಿಪಟೂರು** (ರಂಗಭೂಮಿ).

**ಅಧ್ಯಕ್ಷತೆ:** ಬಾ. ಹ. ರಮಾ ಕುಮಾರಿ

**ಸಂಯೋಜನೆ:** **ರಾಣಿ ಚಂದ್ರಶೇಖರ್**, ತರಂಗಿಣಿ.

## ಕಪ್ಪು ಉಡುಗೆಯಲ್ಲಿ ಮಹಿಳೆಯರು
*'ಸರ್ವ ಜನಾಂಗದ ಶಾಂತಿಯ ದೇಶ'*

## ಮೌನ ಜಾಗೃತಿ ಕಾರ್ಯಕ್ರಮ

ತಾ. 7–3–2023, **ಸಂಜೆ:** 5.30ರಿಂದ. **ಸ್ಥಳ:** ಸ್ವತಂತ್ರ ಚೌಕ, ತುಮಕೂರು.

**ಪ್ರಾಸ್ತಾವಿಕ ಮಾತು:** ಡಾ. ಎಚ್. ಎಸ್. ಅನುಪಮಾ

**ಉಪಸ್ಥಿತಿ:** ಡಾ. ರಜನಿ, ಡಾ. ಗಿರಿಜಾ ಸಂಜಯ್, ಡಾ. ರಚನಾ ಲಕ್ಷ್ಮೀಕಾಂತ, ಚಂದ್ರಕಲಾ, ಡಾ. ಶೈಲಾ ನಾಗರಾಜ್, ಶೈಲಜಾ ಜಿ. ಕೆ., ಯಶೋದಾ ಮುನ್ನಡೆ, ಡಾ. ಜ್ಯೋತಿ ಸಿದ್ಧಲಿಂಗೇಶ್ವರ, ರಾಮಕೃಷ್ಣಪ್ಪ ಚಿ.ನಾ.ಹಳ್ಳಿ.

**ನಿರ್ವಹಣೆ:** ಚೇತನಾ ಕೆ., ಗೀತಾ, ಅಶ್ವಿನಿ, ಲೀಲಾ, ಚಂದ್ರಶೇಖರಯ್ಯ ತುಮಕೂರು.

## ಸಾರಾ ಅಬೂಬಕರ್ ವೇದಿಕೆ
## ವಿಚಾರ ಸಂಕಿರಣ
**'ಹೆಣ್ಣು ಬದುಕು: ಸವಾಲು–ಸಾಧ್ಯತೆಗಳು'**


ಮಾರ್ಚ್ 8, 2023, ಬೆಳಿಗ್ಗೆ 9 ಗಂಟೆಯಿಂದ **ಸ್ಥಳ:** ಗುಬ್ಬಿ ವೀರಣ್ಣ ರಂಗಮಂದಿರ, ತುಮಕೂರು
**ಬೆ. 9.00–10.00**

**ತತ್ತ್ವಪದ ಗಾಯನ:** ಕೆಂಜೆಡಿ ಗೌಡರು ಮತ್ತು ತಂಡ, ಶಿರಾ

10.00  12.30 ಉದ್ಘಾಟನೆ

**ಆಶಯ ಗೀತೆ:** ಒಕ್ಕೂಟದ ಸಂಗಾತಿಗಳಿಂದ
**ಸ್ವಾಗತ:** ಡಾ. ಅರುಂಧತಿ ಡಿ., ಅಧ್ಯಕ್ಷರು, ಮಾನವ ಮಂಟಪ ಸಹಕಾರ ಸಂಘ
**ಸಂವಿಧಾನ ಪೀಠಿಕೆ ಓದು:** ವಾಣಿ ಸತೀಶ್, ತಿಪಟೂರು
**ಪ್ರಾಸ್ತಾವಿಕ ಮಾತು:** ವಾಣಿ ಪೆರಿಯೋಡಿ
**ಉದ್ಘಾಟನೆ:** ಟುಮಕಿ ಬಾರಿಸುವ ಮೂಲಕ
**ದಿಕ್ಸೂಚಿ ಮಾತು:** ವಿಹಾನ್, ಬೆಂಗಳೂರು
**'ಮಹಿಳಾ ದಿನ'ದ ಮಾತು:** ಸುಮನಾ ನೆಟ್ಟಾರ್, ಮೈಸೂರು

# ಸಮಾಲೋಚನೆ



# ಲೋಹಿಯಾ ಚಿಂತನೆಗಳು

ಪ್ರೊ. ರವಿವರ್ಮಕುಮಾರ್

ಹಿರಿಯ ವಕೀಲರು, ಚಿಂತಕರು

ನನಗೆ ಇಲ್ಲಿ ಕೆಲವರ ಪರಿಚಯ ಇಲ್ಲ; ರೋಚಕ ಸಂಗತಿ ಏನೆಂದರೆ, ಕೆಲವಾರು ಸಾಧಕರ ಜೊತೆಗೆ ಇಲ್ಲಿ ಸೇರಿದ್ದೇನೆಂಬುದು ಕೂಡ ನನಗೆ ಅರಿವಾಗುತ್ತಾ ಇದೆ. ನೀವು ಇಷ್ಟು ಚೆನ್ನಾದ ಶಿಬಿರ ಏರ್ಪಡಿಸಿರುವುದಕ್ಕೆ ನಿಮಗೆ ಅಭಿನಂದನೆಗಳು. ಇದು ನಿಮ್ಮ ಗಾಂಭೀರ್ಯವನ್ನು ತೋರಿಸುತ್ತದೆ. 1978ರಲ್ಲಿ ಹೈದರಾಬಾದ್‌ನಲ್ಲಿ ಇಂಥದೇ ಶಿಬಿರದಲ್ಲಿ ನಾನು ಭಾಗವಹಿಸಿದ್ದು ನೆನಪಾಗುತ್ತಿದೆ. ಆ ವೇಳೆಗಾಗಲೇ ಡಾ. ರಾಮ ಮನೋಹರ ಲೋಹಿಯಾ ತೀರಿಕೊಂಡಿದ್ದರು. ಸಮಾಜವಾದಿ ಸಂಘಟನೆಯು ಲೋಹಿಯಾವಾದದ ತತ್ವಗಳನ್ನು ಆಧರಿಸಿತ್ತು. ನಾನಾಗ ಡಾ. ಎಂ ಡಿ ನಂಜುಂಡಸ್ವಾಮಿಯವರ ನೇತೃತ್ವದ 'ಸಮಾಜವಾದಿ ಯುವಜನ' ಸಂಸ್ಥೆಯ ಸದಸ್ಯನಾಗಿದ್ದೆ. ಆ ಸಭೆಯೂ ಇದೇ ರೀತಿಯದ್ದಾದರೂ, ಈ ಸಭೆಯಲ್ಲಿರುವಷ್ಟು ಸೌಲಭ್ಯಗಳಾಗಲೀ, ಆಗ ಇರಲಿಲ್ಲ. ಎಲ್ಲೆಂದರಲ್ಲಿ, ಯಾವಾಗೆಂದರೆ ಆಗ ಲೋಹಿಯಾ ವಿಚಾರವಾದದ ತತ್ವಗಳನ್ನು ಮಂಡಿಸಿ ಸಭೆಗಳನ್ನು ಮಾಡುತ್ತಿದ್ದೆವು. ಆದರೆ ಸಭೆಗಳು ತುಂಬಾ ಗಂಭೀರವಾಗಿಯೂ, ಸಾಂದ್ರವಾಗಿಯೂ ಇರುತ್ತಿದ್ದವು. ಎಲ್ಲಾ ವಿಚಾರಗಳ ಬಗ್ಗೆಯೂ ಒಳ್ಳೆಯ ಗಂಭೀರವಾದ ಚರ್ಚೆ ನಡೆಯುತ್ತಿತ್ತು.

ಆ ಸಭೆಯ ಘನತೆಯ ಬಗ್ಗೆ ನಿಮಗೆ ಒಂದು ಪರಿಚಯ ಮಾಡಿಕೊಡಬೇಕೆಂದರೆ, ಅಲ್ಲಿಗೆ ಬರುತ್ತಿದ್ದ ವ್ಯಕ್ತಿಗಳ ಹೆಸರು ಹೇಳಿದರೂ ಸಾಕಾಗುತ್ತದೆ. ನಾವು ಪ್ರತಿವರ್ಷವೂ ರಾಷ್ಟ್ರೀಯ ಮಟ್ಟದ ಲೋಹಿಯಾ ವಿಚಾರ ಮಂಚದ ಸಮ್ಮೇಳನ ಮಾಡುತ್ತಿದ್ದೆವು. ಆ ಸಮ್ಮೇಳನಗಳಿಗೆ ಬರುತ್ತಿದ್ದಂಥವರು ಮುಲಾಯಂ ಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್, ಮಾರ್ಕೋನಾ (ಅಸ್ಸಾಮಿನವರು. ಇವರು ಒಂದು ಹೋಲ್ಡಾಲಿನಲ್ಲಿ ತಮ್ಮ ಬಟ್ಟೆಗಳನ್ನು ಹಾಕಿಕೊಂಡು ಒಂದು ಪ್ಯಾಕೆಟ್ ಮಾಡಿಕೊಂಡು ಬರುತ್ತಿದ್ದರು. ಅವರು ಮುಂದೆ ಅಸ್ಸಾಮಿನ ಮುಖ್ಯಮಂತ್ರಿಯೂ ಆದರು.), ನಿತೀಶ್ ಕುಮಾರ್ (ಜಯಪ್ರಕಾಶ

ನಾರಾಯಣರ ಚಳವಳಿಗೆ ಕಾರಣಕರ್ತರಾದವರು.). ಇವರೆಲ್ಲ ಆ ಚಳವಳಿಯ ಯುವಪಡೆಯಾಗಿದ್ದರು. ಇದನ್ನೆಲ್ಲಾ ಯಾಕೆ ಹೇಳುತ್ತಿದ್ದೀನಿ ಅಂದರೆ, ಲೋಹಿಯಾ ವಿಚಾರವಾದದ ಪ್ರಭಾವ ಅಷ್ಟು ಗಾಢವಾಗಿ ಯುವಜನರನ್ನು, ಯುವಶಕ್ತಿಯನ್ನು ಸಂಚಯಿಸುವಂತಹ ಕೆಲಸವನ್ನು, ಜನಶಕ್ತಿಯು ಸಾಕ್ಷಾತ್ಕಾರವಾಗುವಂತಹ ಕೆಲಸವನ್ನು, ಮಾಡಿತು. ಬಹುಶಃ ಭಾರತದಲ್ಲಿ ಬೇರೆ ಯಾವುದೇ ಸಂಘಟನೆಯೂ ಅಂತಹ ಅದ್ಭುತವಾದ ಕೆಲಸ ಮಾಡಿರುವುದು ನನ್ನ ಗಮನಕ್ಕೆ ಬಂದಿಲ್ಲ. ಅವರೆಲ್ಲ ಎಷ್ಟು ಪ್ರಖರವಾದ ಸಮಾಜವಾದಿಗಳು ಅಂದರೆ, ಕರ್ನಾಟಕದಲ್ಲಿ ಯಾವುದೇ ಜಾತಿ ಸಂಘಟನೆಗಳು ಸಭೆ ನಡೆಸಿದರೂ, ನಾವು, ನಮ್ಮದೇ ಯುವಜನಸಭಾದ ಮೂಲಕ ಪ್ರತಿಭಟನೆ ಮಾಡುತ್ತಿದ್ದೆವು. ಕರ್ನಾಟಕದಲ್ಲಿ ಯಾವುದೇ ಹೊಟೇಲು ಯಾವುದೇ ಜಾತಿಯ ಹೆಸರಿನಲ್ಲಿ, ಬ್ರಾಹ್ಮಣರ ಕಾಫಿ ಕ್ಲಬ್, ವೀರಶೈವ ಖಾನಾವಳಿ, ಗೌಡರ ಮೆಸ್ ಏನೇ ಇದ್ದರೂ, ಅವುಗಳಿಗೆಲ್ಲಾ ಟಾರ್ ಬಳಿಯುತ್ತಿದ್ದೆವು.

ಹಾಗಾಗಿ ಕರ್ನಾಟಕದಲ್ಲಿ ಯಾವುದೇ ಜಾತಿ ಸೂಚಕ ಹೊಟೇಲುಗಳನ್ನು ಪ್ರಾರಂಭಿಸುತ್ತಿರಲಿಲ್ಲ. ಆನಂತರ, 'ಮ್ಯಾನ್‌ಕೈಂಡ್' ಎಂಬ ಪತ್ರಿಕೆ, ಜೊತೆಗೆ ಅದರ ಕನ್ನಡದ ಅವತರಣಿಕೆ, 'ಮಾನವ' ಎಂಬ ಪತ್ರಿಕೆಗಳನ್ನು ಡಾ. ಎಂ ಡಿ ನಂಜುಂಡಸ್ವಾಮಿಯವರ ಮುಖ್ಯ ಸಂಪಾದಕತ್ವದಲ್ಲಿಯೂ, ನನ್ನ ವ್ಯವಸ್ಥಾಪಕ ಸಂಪಾದಕತ್ವದಲ್ಲಿಯೂ ಹೊರ ತರುತ್ತಿದ್ದೆವು. ಪತ್ರಿಕೆಗಳ ಮೂಲಕ ನಾವು ಸಾಹಿತ್ಯ ಪ್ರಸಾರ ಮಾಡುತ್ತಿದ್ದೆವು. ಆ ಹಿನ್ನೆಲೆಯಲ್ಲಿ ನಾವು ಮಾಡುತ್ತಾ ಹೋದ ಹೋರಾಟಗಳ ಬಗ್ಗೆ ಹೇಳುತ್ತಾ ಹೋದರೆ, ಅವೇ ಒಂದು ಸಾವಿರ ಹೋರಾಟಗಳಾಗಬಹುದು. ಅವೆಲ್ಲವೂ ಈಗ ಮರೆತುಹೋಗಿರುವಂತಹ ವಿಚಾರಗಳು. ಆಗ ನಮಗಿದ್ದದ್ದು ಒಂದೇ ಗುರಿ– ಸಮಾಜವಾದ ಆಧರಿತ ಸಮಾಜ (ಹೆಗಲಟೇರಿಯನ್ ಸೊಸೈಟಿ) ವನ್ನು ಕಟ್ಟುವುದು. ಸಮಾನತೆಯುಳ್ಳ ಸಮಾಜವಾದಿ ಸಮಾಜವನ್ನು ಕಟ್ಟಬೇಕೆಂದು ನಾವು ಅಷ್ಟೆಲ್ಲಾ ಹೋರಾಟಗಳನ್ನು ಮಾಡಿದೆವು. ಅದಕ್ಕಾಗಿ ನಿರಂತರವಾಗಿ ಹೋರಾಡುತ್ತಾ ವರ್ಷಕ್ಕೆ ನಾಲ್ಕೈದು ಬಾರಿ ಜೈಲಿಗೂ ಹೋಗಿ ಬರುತ್ತಿದ್ದೆವು; ಎಲ್ಲರೂ; ರಾಷ್ಟ್ರೀಯ ಮಟ್ಟದಲ್ಲಿ. ಇಂಥ ಫೈರ್ ಬ್ರಾಂಡ್ ಯೂತ್ ಬ್ರಿಗೇಡಿಗೆ ಲೋಹಿಯಾರ ನಿಧನಾನಂತರ ಒಂದು ಚಾಲನ ಶಕ್ತಿಯಾಗಿ ಉದಯಿಸಿದ್ದು ಜಯಪ್ರಕಾಶ ನಾರಾಯಣರು. ಅವರಿಗೂ, ಜೆಪಿಯವರಿಗೂ ಅವಿನಾಭಾವ ಸಂಬಂಧಕ್ಕಿಂತಲೂ ಹೆಚ್ಚಾಗಿ, ಒಟ್ಟಿಗೆ ಕೆಲಸ ಮಾಡಿದ್ದಕ್ಕಿಂತಲೂ ಹೆಚ್ಚಾಗಿ, ಅವರ ನಡುವಣ ಭಿನ್ನಾಭಿಪ್ರಾಯಗಳೇ ಹೆಚ್ಚಿದ್ದವು. ಜೆಪಿ ಕಮ್ಯುನಿಸ್ಟ್ ಚಿಂತನೆಯವರಾದರೆ, ಲೋಹಿಯಾ ಬಹಳ ಚಿಕ್ಕ ವಯಸ್ಸಿನಿಂದಲೇ ಪ್ರಖರವಾದ ಸಮಾಜವಾದದ ಚಿಂತಕರು. ಲೋಹಿಯಾ

ಮಾರ್ಕ್ಸ್‌ವಾದವನ್ನು ಒಪ್ಪುತ್ತಿರಲಿಲ್ಲ; ಯೂರೋಪಿಯನ್ ಸೋಷಿಯಲಿಸಂ ಅನ್ನೂ ಒಪ್ಪುತ್ತಿರಲಿಲ್ಲ. ಗಾಂಧಿವಾದಿಗಳನ್ನೂ ಬೆರಗುಗೊಳಿಸುವಂತಹ ಉಗ್ರ ಗಾಂಧಿವಾದಿಯಾಗಿದ್ದರು. ಅವರ ಉಗ್ರತೆ ಹಿಂಸೆಯಲ್ಲಿರಲಿಲ್ಲ, ಬದಲಾಗಿ ಅಹಿಂಸಾ ಮಾರ್ಗದಲ್ಲಿತ್ತು. ಬಹುಶಃ, ಗಾಂಧಿಯ ನಂತರ ಬದುಕಿದ ಅತ್ಯಂತ ಸಮರ್ಥ ಗಾಂಧಿ ಅನುಯಾಯಿ ಅಂದರೆ ಅದು ಡಾ.ರಾಮ ಮನೋಹರ ಲೋಹಿಯಾ. ಬಸವಣ್ಣ ಹೇಳಿದ ಹಾಗೆ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. ಲೋಹಿಯಾಗೆ ಒಂದು ಮನೆಯೂ ಇರಲಿಲ್ಲ, ಒಂದು ಮಠವೂ ಇರಲಿಲ್ಲ. ಒಂದು ಗುಡಿಸಲೂ ಕೂಡ ಇರದಿದ್ದ ಜೋಗಿ. ಅವರು ಸತ್ತಾಗ, ಆಗ ನಾನಿನ್ನೂ ಚಿಕ್ಕ ವಯಸ್ಸಿನವನು, ಆಕಾಶವಾಣಿಯಲ್ಲಿ ಕಂಬನಿ ಮಿಡಿಯದಿದ್ದ ಯಾವ ರಾಜಕಾರಣಿಯೂ ಇರಲಿಲ್ಲ. ಪತ್ರಿಕೆ ತೆರೆದರೆ, ಅವರು ಕಮ್ಯುನಿಸ್ಟ್ ಇರಬಹುದು, ಬಂಡವಾಳಶಾಹಿ ಇರಬಹುದು, ಸ್ವತಂತ್ರ ಪಕ್ಷದವರಿರಬಹುದು, ಸೋಷಿಯಲಿಸ್ಟ್ ಪಕ್ಷದವರಿರಬಹುದು, ಕೊನೆಗೆ ಇವರು ಅತೀವ ಯಾತನೆ ಅನುಭವಿಸುತ್ತಿದ್ದ ಕಾಂಗ್ರೆಸ್ ನೇತಾರರೇ ಇರಬಹುದು, – ಎಲ್ಲರೂ ಕಂಬನಿ ಮಿಡಿದರು. ಎಲ್ಲರೂ ಗಳಗಳನೆ ಅತ್ತರು. ಅವರು ಎಷ್ಟು ಉಗ್ರವಾಗಿ ಕಾಂಗ್ರೆಸ್ಸನ್ನು ವಿರೋಧಿಸಿದ್ದರು ಅಂದರೆ, ಅವರ ಸಾವನ್ನು ಕಾಂಗ್ರೆಸ್ಸಿನವರು ಸಂತೋಷಿಸಬೇಕಾಗಿತ್ತು; ಆದರೆ ಅವರೂ ಕೂಡ ತಾವೊಬ್ಬ ಗೆಳೆಯನನ್ನು ಕಳೆದುಕೊಂಡೆವೆಂದು, ಅವರು ತಮಗೆ ಮಾರ್ಗದರ್ಶಿಗಳಾಗಿದ್ದರೆಂದು ಅತ್ತರು. ಅವರು ಪಾರ್ಲಿಮೆಂಟಿಗೆ ಪ್ರವೇಶಿಸಿದ್ದು ಎರಡು ಚುನಾವಣೆಗಳಲ್ಲಿ ಸೋತ ನಂತರ. 1962ರಲ್ಲಿ ನೆಹರೂ ವಿರುದ್ಧ ಸೋತಿದ್ದರು, 1963ರಲ್ಲಿ ಗೆದ್ದರು, ನಂತರ 1967ರ ಉಪಚುನಾವಣೆಯಲ್ಲಿ ಗೆದ್ದರು. 1967ರಲ್ಲೇ ತುಂಬ ಚಿಕ್ಕ ವಯಸ್ಸಿನಲ್ಲೇ ನಿಧನರಾದರು. ಅವರು ಇಂತಹ ಒಂದು ಸಮಾಜವಾದವನ್ನು ನಮಗೆ ಕೊಟ್ಟಿದ್ದಾರೆಂದರೆ, ನಾವು ಅದನ್ನು ನೆನಪಿಸಿಕೊಳ್ಳಬೇಕು. ಅದರ ಪ್ರಸ್ತುತತೆ ಏನು? ಇವತ್ತು ನಾವದನ್ನು ಅಪ್ಪಿಕೊಳ್ಳಬೇಕು; ನಮಗೆ ಅದು ಸಮಯೋಚಿತವಾದದ್ದು. ಇವತ್ತಿನ ಸಮಸ್ಯೆಗಳಿಗೆ ಅವರ ಚಿಂತನೆಗಳು ನಮಗೆ ಸಹಕಾರಿಯಾಗಬಹುದು. 'ಲೋಹಿಯಾರ ತತ್ವ, ಆದರ್ಶಗಳು ಈ ದೇಶವನ್ನು ಮುನ್ನಡೆಸಬಲ್ಲವೇ?' ಎಂಬ ಒಂದು ಗಂಭೀರ ಪ್ರಶ್ನೆಯನ್ನು ನನ್ನ ಮುಂದಿಟ್ಟಿದ್ದೀರಿ, ಬಹಳ ಸಂತೋಷ. ಇತ್ತೀಚೆಗೆ ಇಂತಹ ಪ್ರಶ್ನೆಯನ್ನು ಯಾರೂ ನನ್ನ ಮುಂದಿಟ್ಟಿಲ್ಲ. ನೀವು ಇದನ್ನು ಕೇಳಿದ್ದೀರಿ, ಅದನ್ನು ತಿಳಿದುಕೊಳ್ಳಲು ಆಸಕ್ತಿ ತೋರಿಸಿದ್ದೀರಿ; ಬಹಳ ಸಂತೋಷ.

ಹಾಗಾದರೆ 'ಲೋಹಿಯಾ' ಏನು? ಅವರು ಬಂಡವಾಳಶಾಹಿಯೇ? ಸಮಾಜವಾದಿಯೇ? ಮಹಿಳಾವಾದಿಯೇ? ನಕ್ಸಲರೇ? ಮಾರ್ಕ್ಸಿಸ್ಟರೇ?

– ಏಕೆಂದರೆ, ಆಗ ಇಡೀ ಪ್ರಪಂಚವನ್ನೇ ಬೆರಗುಗೊಳಿಸಿದಂತಹ ಒಂದು ಕ್ರಾಂತಿಕಾರಿ ತತ್ವ ಅಂದರೆ ಮಾರ್ಕ್ಸಿಸಂ – ಚೈನಾದಲ್ಲಿ, ರಷ್ಯಾದಲ್ಲಿ, ಸೋವಿಯಟ್ ಯೂನಿಯನ್ನಿನಲ್ಲಿ, ಪೂರ್ವ ದೇಶಗಳಲ್ಲಿ ಮಾರ್ಕ್ಸಿಸಂ ದಾಪುಗಾಲು ಹಾಕಿ, ಅತ್ಯಂತ ಆಕರ್ಷಕವಾದ ತತ್ವ ಸಿದ್ಧಾಂತವಾಗಿ ಕಂಗೊಳಿಸುತ್ತಿದ್ದಂತಹ ಸನ್ನಿವೇಶದಲ್ಲಿ ಲೋಹಿಯಾ ಅದಕ್ಕೆ 'ನೋ' ಎಂದರು. ಇತ್ತಕಡೆ ಬಂಡವಾಳಶಾಹಿಯೂ ದಾಪುಗಾಲು ಹಾಕುತ್ತಾ, ಅಮೆರಿಕ, ಯೂರೋಪು, ಇತರೆಡೆ ಅದೂ ಹರಡುತ್ತಾ ಇದ್ದರೆ, ಲೋಹಿಯಾ ಅದನ್ನು ತಿರಸ್ಕರಿಸಿದರು. ಮತ್ತೆ ಇದಕ್ಕೆ ನಿಮ್ಮ ಪರಿಹಾರವೇನು ಎಂದರೆ, ಲೋಹಿಯಾ ಅವರ ಒಂದು ವೈಯಕ್ತಿಕ ವಿಚಾರ ಹೇಳಲೇ ಬೇಕಾದ್ದು ಏನೆಂದರೆ, ನೆಹರೂ, ಸುಭಾಷ್ ಚಂದ್ರ ಬೋಸ್, ಗಾಂಧಿ ಎಲ್ಲರೂ ಲಂಡನ್‌ಗೆ ಹೋಗಿ ಓದಿದರು. ನೋಡಿ 22ನೇ ವಯಸ್ಸಿಗೆ ಅವರು, ನಮ್ಮನ್ನು ಆಳುತ್ತಿರುವ ದೇಶಕ್ಕೆ ನಾನು ಹೋಗುವುದಿಲ್ಲ, ಏಕೆಂದರೆ ನಾನು ಒಬ್ಬ ಗುಲಾಮನಾಗಿ, ಎರಡನೇ ದರ್ಜೆ ಪ್ರಜೆಯಾಗಿ ಹೋಗಬೇಕಾಗುತ್ತದೆ, ಅಂತ ಹೇಳಿ, ಅವರು ಓದಲು ಜರ್ಮನಿಗೆ ಹೋದರು. ಜರ್ಮನಿಯಲ್ಲಿ ಅವರು ಮಾರ್ಕ್ಸಿಸಂ ಮೇಲೋ ಅಥವ ಕ್ಯಾಪಿಟಲಿಸಂ ಮೇಲೋ ಪಿ.ಎಚ್.ಡಿ. ಮಾಡಬಹುದಿತ್ತು. ಆದರೆ ಅವರ ಪಿ.ಎಚ್.ಡಿ. ಇವ್ಯಾವುದರ ಮೇಲೂ ಅಲ್ಲ; ಉಪ್ಪಿನ ಸತ್ಯಾಗ್ರಹದ ಆರ್ಥಿಕತೆಯ ಬಗ್ಗೆ ಮಾಡಿದರು. ವಿದ್ಯಾರ್ಥಿಯಾಗಿದ್ದಾಗ, ಅಲ್ಲಿಯೂ ಕೂಡ ನಿರಂತರವಾಗಿ ಭಾರತೀಯರನ್ನು ಸಂಘಟಿಸುತ್ತಿದ್ದರು. ಎಲ್ಲಾ ರಾಜಕೀಯ ಬೆಳವಣಿಗೆಗಳನ್ನು ಹೊರದೇಶಗಳಲ್ಲಿದ್ದ ಭಾರತೀಯರಿಗೆ ಪರಿಚಯ ಮಾಡಿಕೊಟ್ಟು ಭಾರತದಲ್ಲಾಗುತ್ತಿದ್ದಂತಹ ಸ್ವಾತಂತ್ರ್ಯ ಚಳವಳಿಯ ಪರಿಚಯ ಮಾಡಿ, ಅವರೊಂದಿಗೆ ಬರೀ ಮಾತುಕತೆ ಅಷ್ಟೇ ಅಲ್ಲದೆ, ಅದಕ್ಕೆ ಅವರೆಲ್ಲಾ ಧುಮುಕುವಂತೆ ಪ್ರೇರೇಪಿಸುತ್ತಿದ್ದರು.

ಒಂದು ಸಲ ಲೀಗ್ ಆಫ್ ನೇಷನ್ಸ್‌ನಲ್ಲಿ ನಡೆದ ಒಂದು ಸಭೆಯಲ್ಲಿ ಬಿಕಾನೇರಿನ ಮಹಾರಾಜ ಬಹಳ ದೊಡ್ಡ ಭಾಷಣ ಮಾಡಿ, ಬ್ರಿಟಿಷರು ಇಂತಹ ದೊಡ್ಡ ಸಾಧನೆ ಮಾಡಿದ್ದಾರೆ, ಭಾರತಕ್ಕೆ ಇಂತಿಂತಹ ದೊಡ್ಡ ಕೊಡುಗೆಗಳನ್ನು ಕೊಟ್ಟಿದ್ದಾರೆ ಅಂತ ಅಧಿಕೃತವಾದ ಭಾಷಣ ಮಾಡುತ್ತಿದ್ದರೆ, ಲೋಹಿಯಾ ಒಬ್ಬ ಪ್ರೇಕ್ಷಕನಾಗಿ ಕುಳಿತು ಶಿಳ್ಳೆ ಹೊಡೆದು, ಕರಪತ್ರಗಳನ್ನು ಎಸೆಯುವ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಮಹಾರಾಜ ಹೇಳುತ್ತಿರುವುದು ಸುಳ್ಳು. ಈತನು ಬ್ರಿಟಿಷರ ಏಜೆಂಟು. ಒಬ್ಬ ಭಾರತೀಯ ಗುಲಾಮನನ್ನು ಕರೆತಂದು ಬ್ರಿಟಿಷರು ಒಂದು ಗಿಣಿಯ ಕೈಲಿ ಪಾಠ ಒಪ್ಪಿಸುವಂತೆ ಮಾಡುತ್ತಿದ್ದಾರೆ ಅಂತ ಕೂಗಿ ಹೇಳುತ್ತಾರೆ. ಲೀಗ್ ಆಫ್ ನೇಷನ್ಸ್ ತಕ್ಷಣವೇ ಆ ಕಾರ್ಯಕ್ರಮವನ್ನು

ಬರಖಾಸ್ತು ಮಾಡಿದರು. ಅದಾದ ನಂತರ ನನಗೆ ನೆನಪಾದದ್ದು ಡಾ.ಎಂ.ಡಿ. ನಂಜುಂಡಸ್ವಾಮಿಯವರು ಒಂದು ದೊಡ್ಡ ರೈತಪಡೆಯನ್ನು ಕರೆದುಕೊಂಡುಹೋಗಿ, ಜಿನೀವಾದಲ್ಲಿ ಡಬ್ಲ್ಯು.ಟಿ.ಒ. ವಿರುದ್ಧ ಪ್ರತಿಭಟಿಸಿ, ಮುಚ್ಚಿಸಿದ್ದು. ಇವರು ಹೋದಾಗ, ಡಬ್ಲ್ಯು.ಟಿ.ಒ. ಹೆದರಿ, ರಜೆ ಘೋಷಿಸಿಬಿಟ್ಟಿತು. ಇವರು ದೇಶದಿಂದ ವಾಪಸ್ಸು ಹೋಗುವವರೆಗೂ ತನ್ನ ಕಚೇರಿ ತೆರೆಯಲೇ ಇಲ್ಲ. ಹೀಗೆ ಲೋಹಿಯಾ ಅಲ್ಲಿದ್ದಾಗಲೂ ಸಹ ತನ್ನ ಭಾರತ ಸ್ವಾತಂತ್ರ್ಯ ಅಭಿಯಾನವನ್ನು ಅತ್ಯಂತ ಜೀವಂತವಾಗಿಟ್ಟಿದ್ದರು. ಅತ್ಯಂತ ಕ್ರಿಯಾಶೀಲವಾಗಿ, ಇಡೀ ಪ್ರಪಂಚದ ಗಮನ ಸೆಳೆಯುವಂತಹ ಕೆಲಸಗಳನ್ನು ಮಾಡುತ್ತಿದ್ದರು. 1932–33ರಲ್ಲಿ ತಮ್ಮ 23ನೇ ವಯಸ್ಸಿಗೇ ತಮ್ಮ ಪಿ.ಎಚ್.ಡಿ. ಮುಗಿಸಿಕೊಂಡು ಜರ್ಮನಿಯಿಂದ ವಾಪಸ್ಸು ಬಂದರು. ಅವರು ಬಂದ ಕೂಡಲೆ ಅವರ ಪಾಂಡಿತ್ಯವನ್ನು, ದಾರ್ಶನಿಕ ಆದರ್ಶಗಳನ್ನು ಗಮನಿಸಿ, ಕಾಂಗ್ರೆಸ್ ಪಕ್ಷ ನೇರವಾಗಿ ಅವರನ್ನು ಆ ಚಿಕ್ಕ ವಯಸ್ಸಿನಲ್ಲೇ ತನ್ನ ಎ.ಐ.ಸಿ.ಸಿ.ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ, ಇಡೀ ಪಕ್ಷದ ವಿದೇಶಾಂಗ ವ್ಯವಹಾರಗಳ ಮತ್ತು ಧೋರಣೆಗಳನ್ನು ರೂಪಿಸುವ ಹೊಣೆಗಾರಿಕೆ ನೀಡಿತು. 1934ರಲ್ಲಿ ಲೋಹಿಯಾರವರು ಕಾಂಗ್ರೆಸ್ ಪಕ್ಷದೊಳಗಿದ್ದುಕೊಂಡೇ ಒಂದು 'ಜಿಂಜರ್ ಗ್ರೂಪ್' ಮಾಡಿಕೊಂಡು, ಕಾಂಗ್ರೆಸ್ ಪಕ್ಷಕ್ಕೆ ಸಮಾಜವಾದದ  ಮೆರುಗನ್ನು ಕೊಟ್ಟು, ಅದರ ತಿರುಳನ್ನು ಉಣಿಸಿ, ಅದರ ಕಾರ್ಯಕ್ರಮಗಳು ಕಾಂಗ್ರೆಸ್ ಮೂಲಕ ಆಗಬೇಕೆನ್ನುವ ಕೆಲಸವನ್ನು ಪ್ರಾರಂಭಿಸಿದರು. ಅದಕ್ಕಾಗಿ 'ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿ' (ಸಿ.ಎಸ್.ಪಿ.) ಯನ್ನು ತಮ್ಮ 24ನೇ ವಯಸ್ಸಿನಲ್ಲೇ (1934) ಹುಟ್ಟುಹಾಕಿದರು. ಅವರು ತಮ್ಮ 9ನೇ ವಯಸ್ಸಿನಲ್ಲೇ ಗಾಂಧಿಯನ್ನು ಭೇಟಿಮಾಡಿ, ಅವರಿಂದ ಪ್ರಭಾವಿತರಾಗಿದ್ದರು ಅನ್ನುವುದನ್ನು ಇಲ್ಲಿ ನಾವು ನೆನಪಿಸಿಕೊಳ್ಳಬಹುದು. ಅವರ ತತ್ವಗಳನ್ನೂ ಅಷ್ಟೇ ಆಳವಾಗಿ, ಬಹಳ ಗಂಭೀರವಾದ ವಿದ್ಯಾರ್ಥಿಯಾಗಿ ಅಧ್ಯಯನ ಮಾಡಿದ್ದರು. ಲೋಹಿಯಾರವರ ಒಂದು ವಿಶೇಷತೆ ಎಂದರೆ ಅವರು ತಮ್ಮದೇ ಆದ ಸಮಾಜವಾದಿ ಚಿಂತನೆಗಳನ್ನು, ಸಿದ್ಧಾಂತವನ್ನು ಗಂಭೀರವಾಗಿ ರೂಪಿಸಿದ್ದು. ಅದನ್ನು ಅವರು ಯೂರೋಪಿಯನ್ ಸಮಾಜವಾದದಿಂದಾಗಲೀ, ಬಂಡವಾಳಶಾಹಿಗಳಿಂದಾಗಲೀ, ಇತರರಿಂದಾಗಲೀ ಎರವಲು ಅಥವ ನಕಲು ಮಾಡಲಿಲ್ಲ. ಆದರೆ ಭಾರತಕ್ಕೆ ಅತ್ಯಗತ್ಯವಾಗಿ ಆಗಲೇಬೇಕಾದಂತಹ ಒಂದು ತತ್ವವನ್ನು ಒದಗಿಸಿದರು.

ಸ್ಥೂಲವಾಗಿ ಅವರೊಬ್ಬ ಗಾಂಧಿವಾದಿ. ಆದರೆ ಗಾಂಧಿವಾದದಲ್ಲಿ ಇವರ ತತ್ವಗಳು ಸಿಕ್ಕಲ್ಲ. ಗಾಂಧಿಯವರು ಎಷ್ಟೇ ಕಾರ್ಯಕ್ರಮಗಳನ್ನು ರೂಪಿಸಿದರೂ,

ಅವರು ಜೀವನದಲ್ಲಿ ಬರೆದದ್ದು ಎರಡೇ ಪುಸ್ತಕಗಳು. ಒಂದು ಅವರದೇ ಆತ್ಮ ಚರಿತ್ರೆ, 'ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್' ಇನ್ನೊಂದು 'ಹಿಂದ್ ಸ್ವರಾಜ್'. ಆದರೆ ಲೋಹಿಯಾರವರು 30 ಅತ್ಯಂತ ಗಂಭೀರವಾದ ಮೂಲ ಸೈದ್ಧಾಂತಿಕತೆಯ ಚರ್ಚೆಗೆ ಕಾರಣವಾಗುವಂತಹ ಪುಸ್ತಕಗಳನ್ನು ಬರೆದಿದ್ದಾರೆ. 'ಮಾರ್ಕ್ಸ್, ಗಾಂಧಿ & ಸೋಷಿಯಲಿಸಂ', 'ಕ್ಯಾಸ್ಟ್ ಸಿಸ್ಟಂ', 'ಇಂಡಿಯಾ, ಚೈನಾ ಅಂಡ್ ನಾರ್ದರ್ನ್ ಫ್ರಾಂಟೀಯರ್ಸ್', 'ಫ್ರಾಗ್ಮೆಂಟ್ಸ್ ಆಫ್ ಎ ವರ್ಲ್ಡ್ ಮೈಂಡ್', ಫಾರಿನ್ ಪಾಲಿಸಿ (ವಿದೇಶಿ ರಾಜತಾಂತ್ರಿಕ ಧೋರಣೆಗಳ ಕುರಿತಂತೆ), 'ಆಸ್ಪೆಕ್ಟ್ಸ್ ಆಫ್ ಸೋಷಿಯಲಿಸ್ಟ್ ಪಾಲಿಸಿ', 'ಇಂಟರ್ವೆಲ್ ಡ್ಯೂರಿಂಗ್ ಪಾಲಿಟಿಕ್ಸ್', 'ದಿ ಇಂಡಿಯನ್ ಅಗ್ರಿಕಲ್ಚರ್', 'ಹಿಂದೂಯಿಸಂ', 'ಇಂಡಿಯಾ ಅಂಡ್ ಪಾಕಿಸ್ತಾನ್', 'ವೀಲ್ ಆಫ್ ಹಿಸ್ಟರಿ' ಇತ್ಯಾದಿ 30 ಮೌಲಿಕ ಪುಸ್ತಕಗಳನ್ನು ಬರೆದಿದ್ದಾರೆ. ಆ ವೇಳೆಗೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಗಾಂಧೀಜಿಯ ಕೊಲೆಯಾಯಿತು. ಕಾಂಗ್ರೆಸ್ಸಿಗರು ಅಧಿಕಾರಕ್ಕೆ ಬಂದರು. ತಮ್ಮದೇ ಪಕ್ಷ ಅಧಿಕಾರಕ್ಕೆ ಬಂದಾಗ ಲೋಹಿಯಾ, ಒಂದು ಉಗ್ರ ಪ್ರತಿಭಟನೆಯನ್ನು ಕಾಂಗ್ರೆಸ್ ವಿರುದ್ಧ ಮಾಡಿದರು. ಮೊದಲು ಮಾಡಿದ ಪ್ರತಿಭಟನೆ ಅಖಂಡ ಭಾರತವನ್ನು ವಿಭಜಿಸಿ, ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ದೇಶಗಳನ್ನು ಮಾಡಿದ್ದರ ವಿರುದ್ಧ. ಅವರು ಆ ವಿಭಜನೆಯನ್ನು ಒಪ್ಪಿಕೊಳ್ಳಲಿಲ್ಲ. 'ಗಿಲ್ಟಿ ಮೆನ್ ಆಫ್ ಪಾರ್ಟಿಷನ್ ಆಫ್ ಇಂಡಿಯಾ' ಎಂಬ ಪುಸ್ತಕವನ್ನು ಆಗ ಬರೆದರು.

ಆನಂತರ ಕಾಂಗ್ರೆಸ್ಸಿನವರು ಲೋಹಿಯಾರನ್ನು 'ಚುನಾವಣೆಯಲ್ಲಿ ಸ್ಪರ್ಧಿಸಿ' ಎಂದರು. ಲೋಹಿಯಾ ನಿರಾಕರಿಸಿದರು. ಏಕೆಂದರೆ, ಕಾಂಗ್ರೆಸ್ ಪಕ್ಷದ ಬಹಳ ದೊಡ್ಡ ಆದರ್ಶ ಇದ್ದದ್ದು, 1925ರಿಂದಲೂ ಕಾಂಗ್ರೆಸ್ ಹೇಳಿಕೊಂಡು ಬಂದದ್ದು "ಸಾಂವಿಧಾನಿಕ ಸಂಸತ್ತು ಜನರಿಂದ, ವಯಸ್ಕ ಮತದಾರರಿಂದ, ಆಯ್ಕೆಯಾಗಬೇಕು" ಎಂದು. ಆದರೆ ಕಾಂಗ್ರೆಸ್ ಅದಕ್ಕಾಗಿ ಒತ್ತಾಯಿಸಲು ತಯಾರಿರಲಿಲ್ಲ. ಹೀಗಾಗಿ ಸಾಂವಿಧಾನಿಕ ಸಂಸತ್ತು ಅರ್ಹ ಮತದಾರರಿಂದ ಆಯ್ಕೆಯಾಯಿತು; ಎಲ್ಲಾ ವಯಸ್ಕರೂ ಮತದಾನ ಮಾಡಲು ಅವಕಾಶವಾಗಲಿಲ್ಲ. ಏಕೆಂದರೆ, ಆಗಿನ ಚುನಾವಣೆಯಲ್ಲಿ 1935ನೇ ಸಂವಿಧಾನದ ಅಡಿಯಲ್ಲಿ ಮತದಾನಕ್ಕೆ ಅರ್ಹತೆ ಇದ್ದದ್ದು ಕೆಲವು ಜಮೀನುದಾರರಿಗೆ, ಪದವೀಧರರಿಗೆ, ಕೆಲವು ಬಲಾಢ್ಯ ಹುದ್ದೆಗಳನ್ನು ಅಲಂಕರಿಸಿದವರಿಗೆ ಮಾತ್ರ. ಎಲ್ಲಕ್ಕಿಂತಲೂ ಹೆಚ್ಚಾಗಿ, ಇವತ್ತು ನಾವು ನೋಡುತ್ತಿರುವ, ಬಡವ–ಬಲ್ಲಿದ, ಗಂಡು–ಹೆಣ್ಣು, ಹಿಂದೂ–ಮುಸ್ಲಿಂ, ಬ್ರಾಹ್ಮಣ–ಬಂಗಿ, ಮಾಧ್ವ–ಮಾದಿಗ ಇಂತಹ ಯಾವುದೇ ಭೇದ, ಭಾವವಿಲ್ಲದ, ಒಂದು ಚುನಾವಣಾ ಮತದಾರರ ಪಟ್ಟಿ ಇರಲಿಲ್ಲ.

ಪ್ರತ್ಯೇಕ ಮತದಾನ ಜಾರಿಯಲ್ಲಿತ್ತು. ಮುಸಲ್ಮಾನರಿಗೆ ಪ್ರತ್ಯೇಕ ಮತದಾನದ ವ್ಯವಸ್ಥೆ ಇತ್ತು; ದಲಿತರಿಗೆ ಪ್ರತ್ಯೇಕ ಮತದಾನದ ವ್ಯವಸ್ಥೆ ಕೊಟ್ಟಿದ್ದರೂ, ಅದನ್ನು ಹಿಂಪಡೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಜೆಪಿ ಮತ್ತು ಡಾ.ರಾಮ ಮನೋಹರ ಲೋಹಿಯಾರವರು 1946ರಲ್ಲಿ ನಡೆದ ಆಗಿನ ಸಾಂವಿಧಾನಿಕ ಸಂಸತ್ತಿನ ಚುನಾವಣೆಯನ್ನು ಬಹಿಷ್ಕರಿಸಿದರು. ಆನಂತರ ಲೋಹಿಯಾ ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ತ್ಯಜಿಸಿ, ಉಗ್ರ ಕಾಂಗ್ರೆಸ್ ವಿರೋಧಿಯಾದರು. ಆಗ ಇಡೀ ದೇಶಕ್ಕೆ ನೆಹರೂ ಸ್ವಾತಂತ್ರ್ಯ ಯೋಧ, ಸರ್ದಾರ್ ಪಟೇಲ್ ಸ್ವಾತಂತ್ರ್ಯ ಸಮರ ವೀರ, ಅಬ್ದುಲ್ ಕಲಾಂ ಆಜಾದ್ ಇತ್ಯಾದಿ ಎಲ್ಲರನ್ನೂ ಹೊಗಳಿ, ಹೊಗಳಿ ಅವರ ವಿರುದ್ಧ ಯಾರೂ, ಯಾವುದೇ ರೀತಿಯ ಪ್ರತಿರೋಧವನ್ನಾಗಲೀ, ತಾತ್ವಿಕವಾಗಿಯಾಗಲೀ, ರಾಜಕೀಯವಾಗಿಯಾಗಲೀ, ಆರ್ಥಿಕವಾಗಿಯಾಗಲೀ ಅವರನ್ನು ಹಿಡಿದು, ನಿಲ್ಲಿಸಿ ಕೇಳುವಂತಹ ಒಂದು ಉತ್ತರದಾಯಿತ್ವವನ್ನು ನಿರೀಕ್ಷಿಸುವಂತೆಯೇ ಇರಲಿಲ್ಲ.

ಆ ಸ್ವಾತಂತ್ರ್ಯ ಹೋರಾಟಗಾರರಿಂದಾಗಿ, ಇಡೀ ದೇಶವೇ ಒಂದು ಸನ್ನಿಗೊಳಪಟ್ಟಂತಿತ್ತು. ಲೋಹಿಯಾ ವಾಸ್ ನಾಟ್ ಎನಾಮೆಲ್ಡ್. ನನಗೆ ಅದಕ್ಕೆ ಸಮಾನಾಂತರವಾಗಿ ಕಾಣಿಸುವುದೇನೆಂದರೆ, ನೆಲ್ಸನ್ ಮಂಡೇಲ 28 ವರ್ಷ ಜೈಲಿನಲ್ಲಿದ್ದು, 1991 ಫೆಬ್ರುವರಿಯಲ್ಲಿ ಬಿಡುಗಡೆಯಾದಾಗ, ಭಾರತದ ಸ್ವಾತಂತ್ರ್ಯ ಸೇನಾನಿಗಳ ತರಹ ಸನ್ಮಾನಗಳನ್ನು ಮಾಡಿಕೊಂಡು ಓಡಾಡುವುದನ್ನಾಗಲೀ, ತಾಮ್ರಪತ್ರಗಳನ್ನು ಹಂಚುವುದನ್ನಾಗಲೀ ಎಲ್ಲೂ, ಏನೂ ಮಾಡದೆ ನೇರವಾಗಿ ನಾವು ಈ ದೇಶವನ್ನು ಆಳಲಿಕ್ಕೆ ಬಂದಿದ್ದೇವೆ, ಈ ದೇಶದ ಆಗುಹೋಗುಗಳನ್ನು ನಾವು ನಿರ್ಧಾರ ಮಾಡಬೇಕು, ಅಂತ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ಗೆ ಒಂದು ಕಾರ್ಯಾಲಯವನ್ನು ಕಟ್ಟಿ, ಅದರಲ್ಲಿ ಎಲ್ಲ ಖಾತೆಗಳನ್ನು ನಿಭಾಯಿಸುವಂತಹ ತಜ್ಞರನ್ನು ನೇಮಿಸಿಕೊಂಡು, ಅವರು 1991ರಲ್ಲೇ ಒಂದು ಸಮಾನಾಂತರ ಸರ್ಕಾರವನ್ನು ನಡೆಸುತ್ತಿದ್ದರು. ಆ ಕೆಲಸವನ್ನು ಡಾ. ಲೋಹಿಯಾರವರು ಭಾರತದಲ್ಲಿ, ಕಾಂಗ್ರೆಸ್ ವಿರುದ್ಧ ಒಂದು ಛಾಯಾ ಸಂಪುಟ ರಚಿಸಿಕೊಂಡು, ಮಾಡುತ್ತಿದ್ದರು. ಅವರು ಎಲ್ಲಾ ವಿರೋಧ ಪಕ್ಷಗಳೊಡನೆಯೂ ಮಾತುಕತೆ ನಡೆಸುತ್ತಿದ್ದರು. ಎಲ್ಲ ವಿರೋಧ ಪಕ್ಷದವರನ್ನೂ ಒಟ್ಟಿಗೆ ಕರೆದೊಯ್ಯಲು ಅವರು ಸತತವಾಗಿ ಪ್ರಯತ್ನಪಡುತ್ತಿದ್ದರು. ಏಕೆಂದರೆ, ಕಾಂಗ್ರೆಸ್ಸನ್ನು ಅವರು ಸೋಲಿಸಲಾಗುತ್ತಿರಲಿಲ್ಲ. ಕಾಂಗ್ರೆಸ್ಸು ಪ್ರಚಂಡ ಬಹುಮತ ಗಳಿಸಿ ಮೆರೆಯುತ್ತಿತ್ತು. ಲೋಹಿಯಾ ಸಮಾಜವಾದದಂತಹ ಬಹಳ ದೊಡ್ಡ ರಾಜಕೀಯ ತತ್ವವನ್ನು ಸಮಾಜವಾದಿ ಚಳವಳಿಯ ಮೂಲಕ ಈ ದೇಶಕ್ಕೆ ಕೊಟ್ಟಂತಹ ಮಹಾಪುರುಷ.

ಈ ಹಿನ್ನೆಲೆಯಲ್ಲಿ, ಈ ಹೋರಾಟದ ಗರ್ಭದಿಂದ ಬಂದಂತಹ ಲೋಹಿಯಾ ಸಮಾಜವಾದವು, ಆಡು ಮುಟ್ಟದ ಸೊಪ್ಪಿಲ್ಲ ಅನ್ನುವಂತೆ, ಇವರು ಮುಟ್ಟದೇ ಇರುವಂತಹ ವಿಚಾರವೇ ಇಲ್ಲ. ಗಂಡು–ಹೆಣ್ಣಿನ ಸಮಾನತೆ, ಆರ್ಥಿಕ ಸಮಾನತೆ, ಎಲ್ಲಕ್ಕಿಂತಲೂ ದೊಡ್ಡದಾದ ಜಾತೀಯ ಅಸಮಾನತೆ ಮತ್ತು ಈ ಅಸಮಾನತೆಗಳನ್ನು ಹೋಗಲಾಡಿಸಲು ಭಾರತವು ಹಾಕಿಕೊಳ್ಳಬೇಕಾದ ಕಾರ್ಯಕ್ರಮಗಳೇನು? ಪಾಲಿಸಬೇಕಾದ ಆದರ್ಶಗಳಾವುವು? ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಎಲ್ಲಕ್ಕಿಂತಲೂ ಹೆಚ್ಚಾಗಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿಯೇ ಆಗಬೇಕೆನ್ನುವ ಗಾಂಧಿಯ ಹೇಳಿಕೆಯನ್ನು ವಿಸ್ತಾರಗೊಳಿಸಿ, ಅದಕ್ಕೊಂದು ಅದ್ಭುತವಾದ ತಾತ್ವಿಕ ಸ್ವರೂಪವನ್ನು ಕೊಟ್ಟು ಭದ್ರ ಬುನಾದಿಯನ್ನು ಹಾಕಿದವರು ಲೋಹಿಯಾ. ನೀವು ಕೂಡ ಆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾ, ಇವೆಲ್ಲದರಲ್ಲೂ ಬಹಳ ಪಳಗಿದ್ದೀರಿ. ಶಿಕ್ಷಕರಾಗಿರುವ ನಿಮ್ಮೆಲ್ಲರಿಗೂ ಒಂದು ಬಹಳ ಅಪ್ಯಾಯಮಾನವಾದ ಒಂದು ಬಹಳ ಸರಳ ಮಾತನ್ನು ಲೋಹಿಯಾ ಹೇಳುತ್ತಾರೆ : ನೀವು ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯನ್ನು ಸಾಧಿಸದೇ ಹೋದರೆ, ಸಮಾಜದಲ್ಲಿ ಯಾವ ಸಮಾನತೆಯೂ ಸಾಧ್ಯವಿಲ್ಲ. ಇದು ಎಲ್ಲರಿಗೂ ಅರ್ಥವಾಗುವಂತಹ ವಿಷಯ. ಮುಂದಿನ ಪ್ರಶ್ನೆ : ನೀವು ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯನ್ನು ಹೇಗೆ ಸಾಧಿಸುತ್ತೀರಿ? ಒಂದು ಮಗುವಿಗೆ ಇಂಗ್ಲಿಷ್ ಮಾಧ್ಯಮ, ಇನ್ನೊಂದಕ್ಕೆ ಹಿಂದಿ ಮಾಧ್ಯಮ, ಮತ್ತೊಂದಕ್ಕೆ ಕನ್ನಡ ಮಾಧ್ಯಮ – ಇದು ಸಮಾನ ಶಿಕ್ಷಣವಾಗುತ್ತದೆಯೇ? “ಭಾರತದಲ್ಲಿ ಒಂದು ಭಾಷೆಯಲ್ಲ, ಸುಮಾರು 300 ಭಾಷೆಗಳಿವೆ. ಎಲ್ಲ ಮಕ್ಕಳಿಗೂ ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿ, ಅದೇ ಸಮಾನ ಶಿಕ್ಷಣ’ ಅಂತ ಲೋಹಿಯಾ ಹೇಳಿದರು. ಒಂದೇ ಮಾದರಿಯ ಶಿಕ್ಷಣ, ಒಂದೇ ಮಾಧ್ಯಮದಲ್ಲಿ ಶಿಕ್ಷಣ – ಮಕ್ಕಳ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುವುದು. ಅದಕ್ಕಾಗಿ ಲೋಹಿಯಾರವರು ಅತ್ಯಂತ ಉಗ್ರವಾದ ಆದರೆ ಶಾಂತಿಯುತವಾದ ಚಳವಳಿಯನ್ನು ಮಾಡಿದರು. ಅದೇ ಲೋಹಿಯಾರ ದೊಡ್ಡ ಕೊಡುಗೆ.

ಅವರ ಮಾತುಗಳು ಅತ್ಯಂತ ಪ್ರಖರವಾದುವು. ಆದರೆ ಎಲ್ಲೂ ಕೂಡ, ಯಾವ ಸನ್ನಿವೇಶದಲ್ಲೂ ಕೂಡ ಬಲವಂತವಿರುತ್ತಿರಲಿಲ್ಲ; ಅವರು ಅದನ್ನು ಪ್ರೋತ್ಸಾಹಿಸುತ್ತಲೂ ಇರಲಿಲ್ಲ. ಅವರು ಅನುಸರಿಸುತ್ತಿದ್ದ ಮಾರ್ಗ ಅಹಿಂಸಾತ್ಮಕ ಮಾರ್ಗ. ಇದು ಎಲ್ಲರೂ ಗಮನಿಸಬೇಕಾದ ಅಂಶ. ನಮ್ಮನ್ನು ಎಷ್ಟೇ ಉದ್ರೇಕಗೊಳಿಸಲಿ. (ಇವತ್ತಿನ ದಿನಗಳಲ್ಲಿ ಎಂದಿಗಿಂತಲೂ ಹೆಚ್ಚು ಉದ್ರೇಕಗೊಳಿಸುವಂತಹ ವಾತಾವರಣವಿದೆ.) ನಾವು ಯಾವತ್ತೂ ಹಿಂಸೆಗೆ

ಇಳಿಯಬಾರದು ಎನ್ನುವುದನ್ನು ಅವರು ಸಾಕ್ಷಾತ್ತಾಗಿ ಮಾಡಿ ತೋರಿಸಿಕೊಟ್ಟಿದ್ದರು.

ಆರ್ಥಿಕ ಮಾರ್ಗದಲ್ಲಿ, ಎಲ್ಲಾ ಮಾರ್ಕ್ಸಿಸ್ಟರೂ ಹೇಳುವ ಹಾಗೆ, ಕಮ್ಯುನಿಸ್ಟ್ ಪಕ್ಷ ಒಪ್ಪಿದಂತಹ ಸಿದ್ಧಾಂತದಂತೆ, ಲೋಹಿಯಾ ಖಾಸಗಿ ಮಾಲಿಕತ್ವವನ್ನು ನಿಷೇಧಿಸಿದರು. ಮತ್ತೆ ಹೇಗೆ ಸಮಾನತೆ ತರುತ್ತೀರಿ? ಅವರು ಹೇಳಿದರು : ಯಾರು ಬೇಕಾದರೂ ಅಮಿತ ಆಸ್ತಿಯನ್ನು ಹೊಂದಬಹುದು, ಅವರು ಎಷ್ಟು ಸಂಪಾದಿಸಬಹುದೋ ಅಷ್ಟನ್ನೂ; ಒಂದೇ ಮಿತಿ –ನೀವು ನಿಮ್ಮ ಕುಟುಂಬದ ಹೊರತಾಗಿ ಹೊರಗಿನ ಯಾರನ್ನೂ ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ. ನೀವು ಎಷ್ಟು ದೊಡ್ಡ ಕಾರ್ಖಾನೆ ಬೇಕಾದರೂ ಮಾಡಿಕೊಳ್ಳಿ; ನೂರಾರು ಎಕರೆ ಜಮೀನು ಇಟ್ಟುಕೊಳ್ಳಿ; ಯಾವುದೇ ತಕರಾರಿಲ್ಲ. ಆದರೆ ಆ ಜಮೀನಿನಲ್ಲಿ ಕೆಲಸ ಮಾಡಲು ನಿಮ್ಮ ಕುಟುಂಬದ ಸದಸ್ಯರಲ್ಲದೆ ಇನ್ನೊಬ್ಬರನ್ನು ತೆಗೆದುಕೊಳ್ಳಬಾರದು! ಇನ್ನೊಬ್ಬರನ್ನು ತೆಗೆದುಕೊಳ್ಳುವುದೇ ಆದಲ್ಲಿ, ಅವರು ನಿಮ್ಮ ಉತ್ಪಾದನೆಯಲ್ಲಿ ನಿಮ್ಮ ಪಾಲುದಾರರಾಗಿರಬೇಕು. ಅವರು ಬಂಡವಾಳ ಹೂಡದಿರಬಹುದು, ಆದರೆ ದುಡಿಮೆಯನ್ನು ಹೂಡಿರುತ್ತಾರಲ್ಲವೆ? ಮಾನವ ಹಕ್ಕುಗಳಿಗೆ ಅತಿ ದೊಡ್ಡ ರಕ್ಷಣೆ ಎಂದರೆ ವೈಯಕ್ತಿಕತೆಗೆ ಅವರು ಮಿತಿ ಇಲ್ಲದಂತಹ ಮೌಲ್ಯವನ್ನು ಕೊಟ್ಟಿದ್ದು. ಅವರು ಖಾಸಗಿ ಮಾಲೀಕತ್ವವನ್ನು ನಿಷೇಧಿಸಲಿಲ್ಲ. ಏಕೆಂದರೆ ಅದನ್ನು ನಿಷೇಧಿಸುವುದು ಅತ್ಯಂತ ಅನಾಹುತಕಾರಿಯಾದದ್ದು; ಅದರಿಂದ ಮಾನವನ ಸ್ವಾತಂತ್ರ್ಯವೇ ನಾಶವಾಗುತ್ತದೆ. ಅದು ಮಾನವನ ಉದ್ಯಮಶೀಲತೆಯನ್ನೇ ಕೊಲ್ಲುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಮಾನವನ ದುಡಿಯುವ, ಸಂಪಾದಿಸುವ ಉತ್ಸಾಹವನ್ನೇ ಕೊಂದುಹಾಕಿಬಿಡುತ್ತದೆ. ಹಾಗಾಗಿ ವ್ಯಕ್ತಿಗಳು ಅವರವರ ಸಾಮರ್ಥ್ಯಕ್ಕನುಸಾರವಾಗಿ ಎಷ್ಟು ಬೇಕಾದರೂ ಸಂಪಾದಿಸಬಹುದು. ಟಾಲ್ಸ್‌ಟಾಯ್ ಹೇಳುವ ಕತೆಯಲ್ಲಿ, "ನೀನು ಎಷ್ಟು ದೂರ ಬೇಕಾದರೂ ಓಡಿ, ನಿನಗೆಷ್ಟು ಜಮೀನು ಬೇಕೋ ಅಷ್ಟು ಪಡೆದುಕೋ" ಅಂತ ಹೇಳಿದ ರಾಜನ ಮಾತು ಕೇಳಿ, ದುರಾಸೆಯ ವ್ಯಕ್ತಿಯೊಬ್ಬ ಓಡಿ, ಓಡಿ, ದಣಿದು, ಸುಸ್ತಾಗಿ ಪ್ರಾಣವನ್ನೇ ಬಿಟ್ಟನಂತೆ. ಹೀಗೆ ಲೋಹಿಯಾವಾದವೂ ಕೂಡ ಪ್ರತಿಯೊಬ್ಬರೂ ತಮ್ಮ ಕುಟುಂಬದ ಸದಸ್ಯರ ಸಾಮರ್ಥ್ಯಕ್ಕನುಸಾರವಾಗಿ ಎಷ್ಟು ಬೇಕಾದರೂ ಸಂಪಾದಿಸಬಹುದು.

ಲೋಹಿಯಾರ ಅತ್ಯಂತ ದೊಡ್ಡ ಕೊಡುಗೆ ಎಂದರೆ ಅವರು ಮಹಿಳೆಯರಿಗೆ ನೀಡಿದ ಪ್ರಾಮುಖ್ಯತೆ. ಲೋಹಿಯಾ ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದರು. ಅವರಿಗೆ ಅಕ್ಕ, ತಂಗಿಯರಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಆ ಮನುಷ್ಯ ಹೆಣ್ಣು ಮಕ್ಕಳ ಬಗ್ಗೆ, ಅವರಿಗಾಗುತ್ತಿರುವ ಅನ್ಯಾಯದ

ಬಗ್ಗೆ, ಅವರ ಮೇಲೆ ನಡೆದಿರುವಂತಹ ಶೋಷಣೆ ಬಗ್ಗೆ, ಅವರನ್ನು ಕೀಳಾಗಿ ಕಾಣುವ ಪ್ರವೃತ್ತಿ ಇವುಗಳ ಬಗ್ಗೆ ತುಂಬಾ ಗಾಢವಾದ ಚಿಂತನೆ ಮಾಡಿದರು. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎನ್ನುವ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮಹಿಳೆಯರ ಪರವಾಗಿ ಬಾವುಟ ಹಾರಿಸಿದವರು ಡಾ. ಲೋಹಿಯಾ. ಗಾಂಧಿಗೆ ಕನಿಷ್ಠ ಪಕ್ಷ ಅವರ ಪತ್ನಿ ಕಸ್ತೂರಬಾ ಇದ್ದರು. ಅವರ ಮೂಲಕ ಗಾಂಧಿ ಇಡೀ ಮಹಿಳಾ ಕುಲದ ಭಾವನೆಗಳನ್ನು ಪರಿಚಯ ಮಾಡಿಕೊಳ್ಳುವಂತಹ ಅವಕಾಶ ಇತ್ತು. ಲೋಹಿಯಾರಿಗೆ ಅಂತಹ ಸಾಂಸಾರಿಕ ಜೀವನವೇ ಇರಲಿಲ್ಲ. ಆದರೆ ಆ ಮನುಷ್ಯ ಹೆಣ್ಣಿಗೆ ಸಮಾನತೆ ಕೊಡಿಸಬೇಕೆನ್ನುವುದರಲ್ಲಿ, ಹೆಣ್ಣಿನ ಕಷ್ಟಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಹೆಣ್ಣಿನ ವಿರುದ್ಧ ನಡೆಯುವ ದೌರ್ಜನ್ಯಗಳು ಆಗಬಾರದೆಂದು ಹೇಳುವುದರಲ್ಲಿ, ಹೆಣ್ಣಿನ ವಿರುದ್ಧ ತಾರತಮ್ಯ ಆಗದಂತೆ ಮಾಡುವುದರಲ್ಲಿ ಎಲ್ಲರಿಗಿಂತಲೂ ಮುಂದಿದ್ದರು. ಬಹುಶಃ ಕಾಲಕ್ಕೆ ಮೀರಿದಂತಹ ದಾರ್ಶನಿಕತೆಯನ್ನು ಲೋಹಿಯಾ ಕೊಟ್ಟರು. ಅವರು ಹೇಳಿದರು, ವಿವಾಹಿತರೋ ಅಥವ ಅವಿವಾಹಿತರೋ, ವಿಚ್ಛೇದಿತರೋ ಅಥವ ವಿಧವೆಯರೋ, ಮಹಿಳೆ ಮಹಿಳೆಯೇ; ಮಹಿಳೆಗೆ ತನ್ನದೇ ಆದ ಅಸ್ತಿತ್ವವಿದೆ, ತನ್ನದೇ ಆದಂತಹ ಜೀವನವನ್ನು ನಡೆಸುವಂತಹ ಅಧಿಕಾರವಿದೆ. ವಿವಾಹೇತರ ಸಂಬಂಧವನ್ನು ಸುಪ್ರೀಂ ಕೋರ್ಟು ಅಸಾಂವಿಧಾನಿಕ ಎಂದು ನಿಷೇಧಿಸಿತು. ಆಗ, 1951ರಲ್ಲೇ ಹೇಳಿದರು ಲೋಹಿಯಾ, ಮಹಿಳೆಯರನ್ನು ಪಾತಿವ್ರತ್ಯದ ಮತ್ತು ಕನ್ಯತ್ವದ ಶೃಂಖಲೆಗಳಿಂದ ಬಿಡುಗಡೆ ಮಾಡಿ ಎಂದು.

ಅವರ ಆ ನಿಲುವನ್ನು ಎಷ್ಟು ಜನ ಖಂಡಿಸಿದರೂ, ಅವರದು ಒಂದೇ ಮಾತು, ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಒಳ್ಳೆಯ ಆರೋಗ್ಯ ಕೊಡಿಸುವುದು ಮಾತ್ರ ತಂದೆ, ತಾಯಿಗಳ ಕರ್ತವ್ಯ. ಅಲ್ಲಿಗೆ ಅವರ ಜವಾಬ್ದಾರಿ ಮುಗಿಯಿತು. ಅವರಿಗೆ ಮದುವೆ ಮಾಡುವುದು ನಿಮ್ಮ ಜವಾಬ್ದಾರಿಯಲ್ಲ; ಅವರ ಸಂಗಾತಿಗಳನ್ನು ಆರಿಸಿಕೊಳ್ಳುವುದನ್ನು ಮಕ್ಕಳಿಗೇ ಬಿಟ್ಟುಬಿಡಿ. "ಅವಳು ಎಡವಿಬಿಟ್ಟರೆ" ಎಂದರೆ, "ಎಡವುವುದು ಜೀವನದ ಅವಿಭಾಜ್ಯ ಅಂಗ. ಸಮಾನತೆಗೆ ಅವೆಲ್ಲವೂ ಆಗಬೇಕು. ಗಂಡಸರು ಎಡವುವುದಿಲ್ಲವೇ? ಗಂಡಸರು ಎಷ್ಟು ಮುಗ್ಗರಿಸಿದರೂ ಅವರಿಗೆ ಇನ್ನೊಂದು ಅವಕಾಶ ಕೊಡುತ್ತೀರಿ? ಮದುವೆಯಾಗಿ ಆರು ಬೇಜವಾಬ್ದಾರಿ ಮಕ್ಕಳನ್ನು ಹಡೆಯುವುದಕ್ಕಿಂತಲೂ, ಮದುವೆಯಾಗದೆ ಒಬ್ಬ ನಾಗರಿಕ ಪುತ್ರನನ್ನು ಹಡೆಯುವುದು ಹೆಣ್ಣಿಗೆ ಶ್ರೇಷ್ಠ" ಎಂದರು. ಇವತ್ತು ಈ ಮಾತನ್ನು ಹೇಳಿದ್ದಿದ್ದರೆ ಲೋಹಿಯಾರಿಗೆ ಏನಾಗುತ್ತಿತ್ತೆಂದು ನಿಮಗೆ ತಿಳಿದಿದೆ. ಆದರೆ ಲೋಹಿಯಾ ಇದನ್ನು ಆವತ್ತೇ ಹೇಳಿದ್ದರು. ಲೋಹಿಯಾ ಬಹಳ ಧೈರ್ಯವಂತರು.

ಅವರು ಹೇಳುತ್ತಿದ್ದರು, ನಾನೊಬ್ಬ ನತದೃಷ್ಟ. ನಾನು ಇದುವರೆಗೂ ದೇವರನ್ನು ಭೇಟಿಮಾಡಲು ಸಾಧ್ಯವೇ ಆಗಿಲ್ಲ. ಇದುವರೆಗೂ ನನಗೊಂದು ಹೆಣ್ಣು ಸಿಗುತ್ತಲೇ ಇಲ್ಲ ಅಂತ. ಅಂದರೆ ಅವರಿಗಿನ್ನೂ ಮದುವೆಯಾಗಿಲ್ಲ ಅಂತ ಅದರರ್ಥ. ಆದರೆ ಇವೆರಡರ ಸಮ್ಮಿಳನವಾಗಿರುವ ಈ ಮಾತೃ ಸಹೃದಯತೆಯ ಲೋಹಿಯಾರಲ್ಲಿ ಬಿಟ್ಟರೆ ಗಾಂಧಿಯವರಲ್ಲಿ ಮಾತ್ರ ಕಾಣಲು ಸಾಧ್ಯ. ಲೋಹಿಯಾ ಲಿಂಗ ಸಮಾನತೆ, ಲಿಂಗ ನ್ಯಾಯದಲ್ಲಿ, ಲಿಂಗ ತಾರತಮ್ಯವನ್ನು ವಿರೋಧಿಸುವುದರಲ್ಲಿ ಒಬ್ಬ ಮಹಾವೀರ. ಈ ಲಿಂಗ ನ್ಯಾಯವನ್ನು ಎತಿ ಹಿಡಿಯುವುದರಲ್ಲಿ ಇವರನ್ನು ಸರಿಗಟ್ಟುವಂತಹ ಇನ್ನೊಬ್ಬರನ್ನು ನಾನು ಕಂಡಿಲ್ಲ. ಲೋಹಿಯಾ ಹುಟ್ಟಿದ್ದು ಒಬ್ಬ ಬನಿಯಾ ಆಗಿ. ಅವರು ಮೇಲ್ಜಾತಿಯ ಬ್ರಾಹ್ಮಣರಾಗಿದ್ದ ನೆಹರೂರ ಸ್ನೇಹ ಸಂಪರ್ಕದಲ್ಲಿದ್ದರು. ಬ್ರಾಹ್ಮಣ–ಬನಿಯಾ ಜೋಡಿಯು ದೇಶವನ್ನು ಆಳುತ್ತಿತ್ತು. ಅವರು ಬಹಳ ಸುಲಭವಾಗಿ ಈ ಬ್ರಾಹ್ಮಣ–ಬನಿಯಾ ಜಾತಿ ರಾಜಕೀಯವನ್ನು ಮುನ್ನಡೆಸಿಕೊಂಡು ಹೋಗಬಹುದಾಗಿತ್ತು. ಆದರೆ, ಈ ಬ್ರಾಹ್ಮಣ–ಬನಿಯಾ ಆಡಳಿತವೆಂಬ ಪದವನ್ನು ಹುಟ್ಟು ಹಾಕಿದವರೂ, ಅದನ್ನು ವಿರೋಧಿಸಿದವರೂ ಲೋಹಿಯಾ. ಅವರು ನೆಹರೂಗೆ ಹೇಳುತ್ತಿದ್ದರು, ನೀವು, ಮೇಲ್ಜಾತಿಯವರು ಇಂಗ್ಲಿಷ್ ಪ್ರೇಮಿಗಳು 1% ಇದ್ದೀರಿ. ಆದರೆ ನೀವು ಕಮ್ಯುನಿಸ್ಟ್ ಪಕ್ಷದಲ್ಲಿದ್ದೀರಿ, ಸ್ವತಂತ್ರ ಪಕ್ಷದಲ್ಲಿದ್ದೀರಿ, ನನ್ನ ಪಕ್ಷದಲ್ಲಿಯೂ ಇದ್ದೀರಿ. ನೀವೇ ಈ ದೇಶ ಆಳುತ್ತಿರೋದು. ನೀವು 1% ಜನರು ಇಂಗ್ಲಿಷ್ ಆಡಳಿತವನ್ನು 99% ಜನರ ಮೇಲೆ ಹೇರಿ, ಅವರನ್ನು ನಿಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ದುರಾಡಳಿತ ನಡೆಸುತ್ತಿದ್ದೀರಿ. ನಾನು ನನ್ನ ಪಕ್ಷವನ್ನು ತುಳಿಯಲ್ಪಟ್ಟವರ, ಹಿಂದುಳಿದವರ, ಮಹಿಳೆಯರ ಪಕ್ಷವನ್ನಾಗಿ ಸಂಘಟಿಸುತ್ತೇನೆ ಅಂತ ಹೇಳಿದರು.

ಅದಕ್ಕೆ ಅವರು ಕೊಟ್ಟಂತಹ ತಾರಕಮಂತ್ರ ಜಾತಿ ವಿನಾಶ. ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದಂತೆ, ಜಾತಿಯನ್ನು ತೊಡೆದುಹಾಕಿ ಎಂದು. ಎಷ್ಟು ಸರಳ ಸೂತ್ರಗಳನ್ನು ಜಾತಿವಿನಾಶಕ್ಕೆ ಕೊಡುತ್ತಾರೆ ಅಂದರೆ, ಎಲ್ಲಾ ಜಾತಿ ಸಮ್ಮೇಳನಗಳನ್ನು ವಿರೋಧಿಸಿ. ನಾವು ಅದನ್ನು ಮಾಡಿ ನಿರಂತರವಾಗಿ ಜೈಲಿಗೆ ಹೋಗಿ, ಒದೆ ತಿನ್ನುತ್ತಿದ್ದೆವು. ಬ್ರಾಹ್ಮಣರ ಸಮ್ಮೇಳನವಾಗಲೀ, ಅಖಿಲ ಭಾರತ ವೀರಶೈವ ಸಮ್ಮೇಳನವಾಗಲೀ, ಒಕ್ಕಲಿಗರ ಸಮ್ಮೇಳನವಾಗಲೀ ವಿರೋಧಿಸಲು ಹೋದರೆ ಹಿಗ್ಗಾ ಮುಗ್ಗಾ ತದುಕುತ್ತಿದ್ದರು. ಆಗ, ನೀವು ಎಸ್.ಸಿ., ಎಸ್.ಟಿ. ಜಾತಿ ಸಮ್ಮೇಳನ ಮಾಡುತ್ತೀರಲ್ಲ ಎಂದು ನಮ್ಮ ಮೇಲೆಯೇ ಜಾತಿ ಸಂಘಟನೆಯ ಆರೋಪ ಮಾಡುತ್ತಿದ್ದರು. ಯಾರು ಜಾತಿ ಸಂಘಟನೆಯಿಂದ ಶೋಷಿತರಾಗಿದ್ದಾರೋ, ಅವರ ಸಂಘಟನೆಯನ್ನು ಜಾತಿಯಿಂದಲೇ ಮಾಡಬೇಕು.

ಯಾರು ಜಾತಿಯ ಹೆಸರಿನಲ್ಲಿ ಶೋಷಣೆ ಮಾಡುತ್ತಾರೋ, ಅವರ ವಿರುದ್ಧ ಜಾತಿ ಸಮ್ಮೇಳನದ ಪ್ರತಿಭಟನೆ ನಡೆಯಬೇಕು. ಮದುವೆಗಳಿಗೆ ಪುರೋಹಿತರನ್ನು ಕರೆಯುವುದಕ್ಕೆ ತುಂಬಾ ಉಗ್ರವಾದ ಪ್ರತಿಭಟನೆಗಳನ್ನು ಮಾಡುತ್ತಿದ್ದೆವು. ತುಂಬಾ ಇರುಸು–ಮುರುಸಿನ ಪರಿಸ್ಥಿತಿ ಎದುರಾಗುತ್ತಿದ್ದವು. ಒಮ್ಮೆ ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ಅವರ ಮನೆಯಲ್ಲಿನ ಮದುವೆಗೆ ಪೂರ್ಣಚಂದ್ರ ತೇಜಸ್ವಿ, ನಂಜುಂಡಸ್ವಾಮಿ, ಕಡಿದಾಳ್ ಶಾಮಣ್ಣ ಇವರಿಗೆಲ್ಲ ಆಹ್ವಾನ ಪತ್ರಿಕೆ ಕೊಟ್ಟಿದ್ದಾರೆ. ಅವರೆಲ್ಲ ಅಲ್ಲಿ ಹೋದಾಗ ತಿಳಿಯಿತು, ಅವರು ಕುವೆಂಪು ಮಂತ್ರ–ಮಾಂಗಲ್ಯದ ಬದಲಿಗೆ ಪುರೋಹಿತರನ್ನು ಕರೆಸಿ ಮದುವೆ ಮಾಡುತ್ತಿದ್ದಾರೆ ಅಂತ. ತಕ್ಷಣ ಏನ್ಮಾಡೋದು? ಯಾರೋ ಯಜಮಾನರು ಮಲೆನಾಡಿನಿಂದ ಕೊಡೆ ಹಿಡಿದುಕೊಂಡು ಬಂದರು. ಅವರ ಕೊಡೆಯನ್ನೆ ಕಸಿದು, ಚಿಂದಿ ಮಾಡಿ, ಕಪ್ಪು ಬಾವುಟ ಹಾರಿಸಿದ ಪೂರ್ಣಚಂದ್ರ ತೇಜಸ್ವಿ, ನಂಜುಂಡಸ್ವಾಮಿ, ಕಡಿದಾಳ್ ಶಾಮಣ್ಣ, ಸುಂದರೇಶ್ ಅವರನ್ನೆಲ್ಲ ಹೊರಗೆ ಹಾಕಿದರು.

ಈ ಜಾತಿ ವಿನಾಶ ಎಂಬುದು ಲೋಹಿಯಾರ ಉನ್ನತ ಕೊಡುಗೆ. ಇದಕ್ಕೆ ಪರಿಹಾರ ಏನು? ಇದು ತುಂಬಾ ಅದ್ಭುತವಾದದ್ದು. ಇದನ್ನು ಭಾರತದ ಸಂವಿಧಾನದಲ್ಲೂ ಅಡಕ ಮಾಡಲಾಗಿದೆ. ಮೊದಲು ಜಾತಿ, ಜಾತಿಗಳ ನಡುವೆ ಇರುವಂತಹ ಅಸಮಾನತೆಯನ್ನು ಮುಂದುವರಿಯಲಿಕ್ಕೆ ಬಿಡಬಾರದು. ಅಸಮಾನತೆಯ ಬೆಳವಣಿಗೆಯನ್ನು ನಿಲ್ಲಿಸಬೇಕು. ಹೇಗೆ ನಿಲ್ಲಿಸುತ್ತೀರಿ? ಲಿಂಗಾಧಾರಿತ ತಾರತಮ್ಯವನ್ನು ರದ್ದುಗೊಳಿಸಿ. ಜಾತ್ಯಾಧಾರಿತ ತಾರತಮ್ಯವನ್ನು ನಿಷೇಧಿಸಿ. ಧರ್ಮಾಧಾರಿತ ತಾರತಮ್ಯವನ್ನು ನಿಷೇಧಿಸಿ. ಒಮ್ಮೆ ಇದನ್ನು ಮಾಡಿದರೆ, ಲಿಂಗ, ಜಾತಿ, ಧರ್ಮಗಳ ನಡುವಣ ಅಸಮಾನತೆಯ ಬೆಳವಣಿಗೆಯು ತಂತಾನೇ ನಿಲ್ಲುತ್ತದೆ. ಆಮೇಲೇನು? ಅದು ಅಲ್ಲಿಗೇ ನಿಂತರೆ, ಅವರು ತಲೆ ತಲಾಂತರದಿಂದಲೂ ಅನುಭವಿಸಿಕೊಂಡೇ ಬರುತ್ತಿರುವ ಅಸಮಾನತೆಯು ಮುಂದುವರಿದುಕೊಂಡೇ ಹೋಗುತ್ತದೆ. ಅದಕ್ಕೆ ಲೋಹಿಯಾ, ಜಾತಿ ಜಾತಿಗಳ ನಡುವೆ, ಲಿಂಗ ಲಿಂಗಗಳ ನಡುವೆ, ಧರ್ಮ ಧರ್ಮಗಳ ಸೇತುವೆ ನಿರ್ಮಿಸುವಂತಹ ಒಂದು ಪರಿಹಾರ ಸೂಚಿಸುತ್ತಾರೆ. ಅದನ್ನು ಹೇಗೆ ಮಾಡುವುದು? ಅವರು ಎಲ್ಲ ಕ್ಷೇತ್ರಗಳಲ್ಲಿಯೂ ಕೂಡ, ಹಿಂದುಳಿದ ಜಾತಿಗಳಿಗೆ, ಮಹಿಳೆಯರಿಗೆ 60% ಮೀಸಲಾತಿ ನೀಡುವ ಸರಳ ಉಪಾಯ ಕೊಟ್ಟರು. ಬರೀ ಹೇಳಿದ್ದಷ್ಟೇ ಅಲ್ಲ, ಅವರ ಪಕ್ಷದಲ್ಲಿ ಅನುಷ್ಠಾನಗೊಳಿಸಿಯೂ ಬಿಟ್ಟರು. ಅದರಿಂದ ಮಡಿವಂತ ಬ್ರಾಹ್ಮಣರಿಗೆ ಬಹಳ ಸಿಟ್ಟು ಬಂತು. ಅವರೆಲ್ಲ ಪಕ್ಷವನ್ನೇ

ಬಿಟ್ಟುಹೋದರು. "ಹೋಗಿ; ನಿಮ್ಮದಲ್ಲ ಈ ಪಕ್ಷ. ಅವರದು ಈ ಪಕ್ಷ" ಎಂದರು. ಒಂದು ಸರಳ ಉದಾಹರಣೆ: ಎಲ್ಲಾ ಹೇಳುವುದು ಸುಲಭ, ಆದರೆ ಮಾಡಿ ತೋರಿಸುವುದು ಕಷ್ಟ. ಕರ್ಪೂರಿ ಠಾಕೂರ್ ಒಬ್ಬ ಅಪರಿಚಿತ, ಅವಿದ್ಯಾವಂತ ಕ್ಷೌರಿಕ. ಒಂದೆರಡು ಸಲ ಇವರ ಭಾಷಣ ಕೇಳಿ, ಅವರೊಂದಿಗೆ ಓಡಾಡಿದರು. ಲೋಹಿಯಾರಿಗೆ ಕರ್ಪೂರಿ ಬಗ್ಗೆ, ಅವರ ಪ್ರಾಮಾಣಿಕತೆ ಬಗ್ಗೆ ತುಂಬಾ ಅಭಿಮಾನ. ಆ ವೇಳೆಗೆ, ಯುಗೊಸ್ಲಾವಿಯಾದಲ್ಲಿ ಕ್ರಾಂತಿಯಾಗಿ, ಮಾರ್ಷಲ್ ಟಿಟೋ ಅಧ್ಯಕ್ಷರಾದರು. ಅಧ್ಯಕ್ಷ ಪದಗ್ರಹಣ ಸಮಾರಂಭಕ್ಕೆ ಆಹ್ವಾನ ಬಂತು. ಇವರು ಹೋಗಬೇಕು. ಆದರೆ ಲೋಹಿಯಾ, ಕರ್ಪೂರಿ ಠಾಕೂರರಿಗೆ ಆಹ್ವಾನ ಪತ್ರಿಕೆ ಕೊಟ್ಟು ಅವರನ್ನು ಹೋಗಲು ಹೇಳಿದರು. ಅವರಂತೂ "ನನಗೆ ಇಂಗ್ಲಿಷ್ ಬರೋಲ್ಲ" ಅಂತ ಅಳುತ್ತಾ ಕುಳಿತರು. ಆಗ ಲೋಹಿಯಾ, "ಗಾಬರಿಯಾಗಬೇಡ, ಅವರಿಗೂ ಇಂಗ್ಲಿಷ್ ಬರೋಲ್ಲ. ಅವರ ಮಾತೃಭಾಷೆ ಬಿಟ್ಟು ಬೇರೆ ಭಾಷೆ ಬರೊಲ್ಲ, ಹೋಗು ನೀನು" ಅಂತ ಕಳಿಸಿದರು.

ಹಾಗೆ ಮುಂದೆ ಬಂದ ಕರ್ಪೂರಿ ಠಾಕೂರ್‌ರಿಗೆ ಲೋಹಿಯಾ ಹೇಗೆ ತರಬೇತಿ ಕೊಟ್ಟರೆಂದರೆ, ಅಹಿಂಸೆಯನ್ನು ಮೈಗೂಡಿಸಿಕೊಂಡ ಕರ್ಪೂರಿ, ತನ್ನನ್ನು ಒದ್ದವರಿಗೂ ತಾನು ಹಿಂಸೆಯನ್ನು ನೀಡವುದನ್ನು ಪ್ರತಿಪಾದಿಸದೇ ಇರುವಷ್ಟು! ಅಲ್ಲಿಯವರೆಗೂ ಕ್ಷೌರಿಕರಾಗಿದ್ದ ಕರ್ಪೂರಿ ಠಾಕೂರ್ ಮುಂದೆ ಭಾರತದ ಅತ್ಯಂತ ಹಿಂದುಳಿದ ರಾಜ್ಯ ಬಿಹಾರದ ಮುಖ್ಯಮಂತ್ರಿಯಾದರು. ಅವರಪ್ಪ ಇನ್ನೂ ಕ್ಷೌರಿಕ ಕಾಯಕ ಮಾಡಿಕೊಂಡೇ ಇದ್ದರು. ಒಬ್ಬ ಕ್ಷೌರಿಕ ಮುಖ್ಯಮಂತ್ರಿಯಾಗಿದ್ದರಿಂದ ಸಿಟ್ಟಿಗೆದ್ದ ಇವರ ಹಳ್ಳಿಯ ಮುಖಂಡ ಠಾಕೂರ್‌ಗೆ ಸಿಟ್ಟು ಬಂದು, ಅವರಪ್ಪನಿಗೆ ಕ್ಷೌರ ಮಾಡಲು ಹೇಳಿಕಳಿಸುತ್ತಾರೆ. ಅವರಪ್ಪ ಅವತ್ತು ಮಗ ಮುಖ್ಯಮಂತ್ರಿಯಾದ ಸಂತೋಷಾಚರಣೆಯಲ್ಲಿದ್ದರಿಂದ ಹೋಗಲು ಮನಸ್ಸಿಲ್ಲದೆ, ಅನಾರೋಗ್ಯದ ನೆಪ ಹೇಳಿ ಹೋಗಲಿಲ್ಲ. ಅದಕ್ಕೆ ಆ ಹಳ್ಳಿಯ ಮುಖಂಡ ಠಾಕೂರ್ ಬಂದು ಅವರಪ್ಪನನ್ನು ಹಿಗ್ಗಾ ಮುಗ್ಗಾ ಥಳಿಸುತ್ತಾನೆ. ಆ ವಿಚಾರ ತಿಳಿದರೂ, ಆಡಳಿತದ ಒತ್ತಡದಿಂದಾಗಿ ಕರ್ಪೂರಿ ತಮ್ಮ ಹಳ್ಳಿಗೆ ಹೋಗಲಾಗಲಿಲ್ಲ. 2–3 ತಿಂಗಳಾದ ನಂತರ ತಮ್ಮ ಹಳ್ಳಿಗೆ ಹೋದ ಕರ್ಪೂರಿ, ತಮ್ಮ ಮನೆಯಲ್ಲಿದ್ದ ಕ್ಷೌರದ ಪೆಟ್ಟಿಗೆ ಹಿಡಿದುಕೊಂಡು, ಮುಸುಕು ಹಾಕಿಕೊಂಡು ನೇರವಾಗಿ ಆ ಹಳ್ಳಿಯ ಮುಖಂಡ ಠಾಕೂರ್ ಮನೆಗೆ ಹೋಗಿ ಬಾಗಿಲು ಬಡಿಯುತ್ತಾನೆ. ಮುಸುಕು ತೆಗೆದು, "ಠಾಕೂರರೇ, ಕರ್ಪೂರಿ ಬಂದಿದ್ದೀನಿ ಕ್ಷೌರ ಮಾಡಲು. ನಮ್ಮಪ್ಪನಿಗೆ ಆರೋಗ್ಯ ಸರಿಯಿಲ್ಲದ್ದರಿಂದ ನಾನೇ ಬಂದಿದ್ದೇನೆ" ಎಂದರು. ಆ ಹಳ್ಳಿಯ ಮುಖಂಡ ಠಾಕೂರ್ ಅಡ್ಡಬಿದ್ದು ಕರ್ಪೂರಿ ಕಾಲು ಹಿಡಿದುಕೊಂಡ. ಎಷ್ಟರ ಮಟ್ಟಿನ

ಅಹಿಂಸೆಯ ಎಂಥಾ ಪ್ರದರ್ಶನ! ಅವರು ಪ್ರತಿಭಟಿಸಿದರು. ಆ ಹಳ್ಳಿಯ ಮುಖಂಡ ಠಾಕೂರನಿಗೆ ತನ್ನ ತಪ್ಪಿನ ಅರಿವಾಗುವಂತೆಯೂ ಮಾಡಿದರು, ಅದೇ ವೇಳೆಯಲ್ಲಿ ಅಹಿಂಸೆಯ ಪ್ರತಿಪಾದನೆಯೂ ಆಯಿತು. ಇದು ಲೋಹಿಯಾ ಅವರು ನೀಡಿದ ತರಬೇತಿಯ ಪ್ರಭಾವ. ಇದು ಹಿಂದುಳಿದ ವರ್ಗಗಳಿಗೆ, ಅದೇರೀತಿ ಮಹಿಳೆಯರಿಗೆ ಲೋಹಿಯಾ ಎಷ್ಟು ಪ್ರೋತ್ಸಾಹ, ಬೆಂಬಲ ನೀಡುತ್ತಿದ್ದರು ಎಂಬುದನ್ನು ತೋರಿಸುತ್ತದೆ.

ಲೋಹಿಯಾ ಜೀವನದ ಅತಿ ದುಃಖಮಯ ಸಂಗತಿ ಏನೆಂದರೆ, ಅವರ ಅತ್ಯುತ್ತಮ ಮಿತ್ರೆಯ ಬಗ್ಗೆ ಅವರು ಎಲ್ಲಿಯೂ ಹೇಳಿಕೊಳ್ಳದೇ ಇರುವುದು. ಲೋಹಿಯಾಗೆ ಇದ್ದಂತಹ ಒಬ್ಬ ಒಳ್ಳೆಯ ಸ್ನೇಹಿತೆಯ ಬಗ್ಗೆ ಯಾರಾದರೂ ಕೇಳಿದ್ದೀರಾ? ಆಕೆ ಕೆಲವು ವರ್ಷಗಳ ಹಿಂದೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಅವರು ನನ್ನನ್ನೂ, ಶಾರದಳನ್ನೂ ಅವರ ಮನೆಗೆ ಕರೆದು, ನಮಗೆ ಒಂದು ಒಳ್ಳೆಯ ಔತಣ ಏರ್ಪಡಿಸಿದ್ದರು. ಪ್ರೊ. ರೋಮಾ ಮಿತ್ರ ಅಂತ ಅವರ ಹೆಸರು. ಮಿರಾಂಡ ಕಾಲೇಜಿನಲ್ಲಿ ಅವರು ಇತಿಹಾಸದ ಪ್ರೊಫೆಸರ್. ಲೋಹಿಯಾ ಹತ್ತಿರ ಇದ್ದದ್ದು ಎರಡೇ ಜೊತೆ ಬಟ್ಟೆ. ಅವರ ಹತ್ತಿರ ದುಡ್ಡೇ ಇರುತ್ತಿರಲಿಲ್ಲ. ಕರೆದ ಕಡೆ ಹೋಗಿಬಿಡೋರು, ಭಾಷಣ ಚಚ್ಚಿಬಿಡೋರು. ಅಲ್ಲಿಂದ ವಾಪಸ್ಸು ಬರಲು ಅವರಲ್ಲಿ ರೈಲು ಚಾರ್ಜ್ ಇರುತ್ತಿರಲಿಲ್ಲ. ಒಂದು ಟೆಲಿಗ್ರಾಂ ಕಳಿಸೋರು, "ರೋಮಾ, 100 ರೂಪಾಯಿ ಕಳಿಸಿ" ಅಂತ, ಅಷ್ಟೆ. ತಕ್ಷಣ ಇವರಿಗೆ ಹಣ ಬಂದುಬಿಡೋದು. ಆಕೆ ಭಾವನಾತ್ಮಕವಾಗಿ, ಬೌದ್ಧಿಕವಾಗಿ, ಭೌತಿಕವಾಗಿ ಲೋಹಿಯಾರಿಗೆ ಬಹಳ ದೊಡ್ಡ ಸಂಗಾತಿ. ಲೋಹಿಯಾರ ಬಟ್ಟೆ ಒಗೆದುಕೊಂಡು, ಅವರು ಹೇಳಿದಷ್ಟು ಹಣ ತೆಗೆದುಕೊಂಡು, ಅವರಿದ್ದ ಕಡೆಗೆ ತಕ್ಷಣ ಹೊರಟುಬಿಡೋರು. ಅವರ ಈ ಕತೆಗಳನ್ನೆಲ್ಲಾ ಆಕೆ, 'ಪತ್ರಗಳ ಮೂಲಕ ಲೋಹಿಯಾ' ಎಂಬ ಕೃತಿಗಳಲ್ಲಿ ತುಂಬಾ ಸುಂದರವಾಗಿ, ಸ್ವಾರಸ್ಯಕರವಾಗಿ ಪ್ರಕಟಿಸಿದ್ದಾರೆ. ಇವೆರಡೂ ನೀವು ಓದಲೇಬೇಕಾದಂತಹ ಪುಸ್ತಕಗಳು. ಅವರ ವ್ಯಕ್ತಿತ್ವಗಳನ್ನು ತುಂಬ ನಿಕಟವಾಗಿ ಅರಿತುಕೊಳ್ಳಲು ಆ ಪತ್ರಗಳು ನೆರವಾಗುತ್ತವೆ. ಅವರಿಬ್ಬರ ನಡುವಣ ಪತ್ರವ್ಯವಹಾರಗಳಲ್ಲಿ, ಲೋಹಿಯಾ ಕುರಿತು ಚರಿತ್ರಕಾರರು ಮಾಡುವ ವಿಮರ್ಶೆ, ಈ ಬೌದ್ಧಿಕವಾಗಿ ದಿವಾಳಿಯಾದಂತಹ ಇಂಗ್ಲಿಷ್ ಪತ್ರಿಕೆಯವರು ಅವರನ್ನು ಹೀಯಾಳಿಸುತ್ತಿದ್ದದ್ದು, "ಅಂತಹವುಕ್ಕೆಲ್ಲಾ ನೀನು ಯಾಕೆ ಚಂದಾದಾರನಾಗಿದ್ದೀಯ?" ಅಂತ ಲೋಹಿಯಾ ರೋಮಾರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದದ್ದು ಇವೆಲ್ಲಾ ತುಂಬಾ ಸ್ವಾರಸ್ಯಕರವಾಗಿವೆ. ಅದೇ ರೀತಿಯ ಇನ್ನೊಂದು ಪುಸ್ತಕ ಇದು ನೀವೆಲ್ಲರೂ ಓದಲೇಬೇಕಾದಂತಹದ್ದು – 'ಪತ್ರಗಳ

ಮೂಲಕ ಅಂಬೇಡ್ಕರ್'. ಅಂಬೇಡ್ಕರ್‌ರವರ ವೈಯಕ್ತಿಕ ಪತ್ರವ್ಯವಹಾರಗಳನ್ನು ನಮ್ಮ ಕನ್ನಡಿಗರೇ ಆದ ಎನ್. ಶಿವಲಿಂಗಯ್ಯನವರು ಪ್ರಕಟಿಸಿದ್ದಾರೆ. ನೀವೆಲ್ಲಾ ತುಂಬಾ ಅದೃಷ್ಟವಂತರು. ಏಕೆಂದರೆ ನಿಮಗೆ ಲೋಹಿಯಾರ ಪೂರ್ಣ ಸಾಹಿತ್ಯ ಬೇಕೆಂದರೆ ಆರ್ಡರ್ ಮಾಡಬಹುದು. ಅದು ಕನ್ನಡದಲ್ಲಿ ಬೇಕೆಂದರೂ ಸಿಗುತ್ತೆ. ನಮ್ಮ ಕಾಲದಲ್ಲಿ, ಲೋಹಿಯಾ ಸಾಹಿತ್ಯವೂ ಇಲ್ಲ, ಅಂಬೇಡ್ಕರ್ ಸಾಹಿತ್ಯವಂತೂ ಇರಲೇ ಇಲ್ಲ! ಈಗ ಡಾ. ರತಿಯವರು ಕೊಟ್ಟ ಭಗವಾನ್ ಪುಸ್ತಕಗಳನ್ನು ನೋಡಿ ನೆನಪಾಯಿತು. ಭಗವಾನ್ ಎಂಬ ಅಂಬೇಡ್ಕರರಿಗೆ ಬದ್ಧನಾಗಿರುವ ಸುಪ್ರೀಂ ಕೋರ್ಟ್ ಲಾಯರ್, ದಸ್ ಸ್ಪೋಕ್ ಅಂಬೇಡ್ಕರ್ ಅಂತ ಎಲ್ಲಾ ವಿಷಯಗಳ (ಜಾತಿ, ಧರ್ಮ, ರಾಜಕೀಯ, ಆರ್ಥಿಕತೆ ಇತ್ಯಾದಿಗಳ ಬಗ್ಗೆ) ಬಗ್ಗೆಯೂ 10–12 ಪುಟಗಳ 8–10 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆ ಕಾಲದಲ್ಲಿ ಮೊಳೆ ಜೋಡಿಸಿ, ಕಷ್ಟಪಟ್ಟು ಮುದ್ರಿಸಿದ್ದು. ಇಷ್ಟೇ ನಮಗೆ ಆಗ ಸಿಗುತ್ತಿದ್ದದ್ದು. ಜಾತಿ ಬಗ್ಗೆ ತಿಳಿದುಕೊಳ್ಳಬೇಕೆಂದರೆ ಎಷ್ಟು ಶ್ರಮಪಡಬೇಕಿತ್ತು ಆಗ? ಇಂದಿನ ಜನತೆ ತುಂಬಾ ಅದೃಷ್ಟವಂತರು. ಆ ಎಲ್ಲಾ ಸಾಹಿತ್ಯಗಳೂ ಸುಲಭವಾಗಿ ಲಭ್ಯವಿವೆ. ಲೋಹಿಯಾರ ಚಿಂತನೆಯ ಸಂಪೂರ್ಣ ಸಾರವನ್ನು ಅವರು ಭಟ್ಟಿ ಇಳಿಸಿರುವುದು ಅವರ ಎರಡು ಪ್ರಬಂಧಗಳಲ್ಲಿ: ಒಂದು 'ಸಪ್ತ ಕ್ರಾಂತಿ'; 1) ಗಂಡು ಹೆಣ್ಣಿನ ಸಮಾನತೆ, 2) ಜನಾಂಗ ಅಸಮಾನತೆಯ ವಿನಾಶ, 3) ಜಾತಿ ಅಸಮಾನತೆಯ ವಿನಾಶ, 4) ರಾಜಮನೆತನ ರದ್ದತಿ ಮತ್ತು ವಿಶ್ವ ಸರ್ಕಾರ, 5) ಖಾಸಗಿ ಆಸ್ತಿ ಮೇಲಣ ಆರ್ಥಿಕ ಅಸಮಾನತೆಯ ವಿನಾಶ, 6) ನಿಶ್ಶಸ್ತ್ರೀಕರಣ ಮತ್ತು ಸಾಮಾಜಿಕ ಅಸಹಕಾರ ವಿನಾಶ ಮತ್ತು 7) ವೈಯಕ್ತಿಕ ಸ್ವಾತಂತ್ರ್ಯದ ಮೇಲಣ ದಾಳಿಗೆ ವಿರೋಧ, (ಅಂದರೆ ಗಡಿರಹಿತ ಪ್ರಪಂಚ, ಪಾಸ್‌ಪೋರ್ಟ್ ರಹಿತ ಮಾನವ ಇತ್ಯಾದಿ ವಿಷಯಗಳನ್ನೊಳಗೊಂಡಿದ್ದು. ಅಂದರೆ ಯಾವ ನಿರ್ಬಂಧವೂ ಇಲ್ಲದೆ, ಮಾನವ ವಿಶ್ವಾದ್ಯಂತ ಎಲ್ಲಿ ಬೇಕಾದರೂ ಸಂಚರಿಸುವಂತಹ ಪ್ರಪಂಚ). ಅವರು ಹೇಳುತ್ತಿದ್ದದ್ದು ವಿಶ್ವ ಪಾರ್ಲಿಮೆಂಟ್ ವ್ಯವಸ್ಥೆಯ ಕುರಿತು. ದೇಶ–ದೇಶಗಳ ನಡುವಣ ಸಮಾನತೆ.

ಅವರು ಹೇಳುವುದು, "ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ ಬ್ರಾಹ್ಮಣತ್ವ ಇದೆ; ಅದು ನಿರ್ಮೂಲನೆಗೊಳ್ಳಬೇಕು. ನೀವು ನ್ಯಾಟೋ ಕೂಟಕ್ಕೂ ಸೇರಬೇಡಿ; ಸೋವಿಯಟ್ ಕೂಟಕ್ಕೂ ಸೇರಬೇಡಿ. ನಿರಂತರವಾಗಿ ನೀವು ಮಧ್ಯಮ ಮಾರ್ಗವನ್ನು ಅನುಸರಿಸಿ" ಎಂದು. ಆದರೆ, ಅಲಿಪ್ತ ನೀತಿ ಅಂದರೆ ಋಣಾತ್ಮಕವಾದದ್ದು. ಲೋಹಿಯಾ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, "ಈ ಗುಂಪುಗಳು ವಸಾಹತೀಕರಣ ಮಾಡಲು ಬಿಡಬೇಡಿ. ಏಷಿಯಾ

ಮತ್ತು ಆಫ್ರಿಕಾ ಖಂಡದ ಎಲ್ಲಾ ದೇಶಗಳನ್ನೂ ಈ ಎರಡೂ ಗುಂಪುಗಳಿಂದ ವಿಮುಕ್ತಿಗೊಳಿಸಿ. ಅದಕ್ಕಾಗಿ ದುಡಿಯಿರಿ. ಅವರೆಲ್ಲರನ್ನೂ ಒಗ್ಗೂಡಿಸಿ. ಅವರು ತಮ್ಮ ತಮ್ಮೊಳಗೇ ಯುದ್ಧ ಮಾಡಲು ಬಿಡಬೇಡಿ. ಮಾನವನು ಮುಕ್ತವಾಗಿ ಪ್ರವಾಸ ಮಾಡಲು, ವಾಸ ಮಾಡಲು, ದುಡಿದು ಬದುಕಲು ಅನುವಾಗುವಂತೆ ಪಾಸ್‌ಪೋರ್ಟ್, ವೀಸಾ ವ್ಯವಸ್ಥೆಗಳನ್ನು ಕಿತ್ತುಹಾಕಿ" ಅಂತ. ವಿಕೇಂದ್ರೀಕೃತ ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಗಳು ಈ ಸಪ್ತಕ್ರಾಂತಿಯ ಇನ್ನೊಂದು ಮುಖ್ಯವಾದ ವಿಚಾರ. ದೇಶ, ರಾಜ್ಯ, ಜಿಲ್ಲೆ, ಹಳ್ಳಿ ಎಂಬ ನಾಲ್ಕು ಸ್ತಂಭಗಳ, 'ಚೌಕಂಬ' ಆಡಳಿತದ ಬಗ್ಗೆ ಹೇಳುತ್ತಾರೆ. ಇವತ್ತು ನಾವು ಇದರ ಸಾಕ್ಷಾತ್ಕಾರವನ್ನು ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ರೂಪದಲ್ಲಿ ನೋಡುತ್ತಿದ್ದೇವೆ. ಈಗಿರುವುದು ಕೇವಲ ತೋರಿಕೆಗಾಗಿರುವ ಒಂದು ಅಲಂಕಾರಿಕ ಚೌಕಂಬ ವ್ಯವಸ್ಥೆ. ಲೋಹಿಯಾ ಹೇಳಿದ್ದು, "ಆಡಳಿತದ ಶೇಷಾತ್ಮಕ ಶಕ್ತಿ, ತೆರಿಗೆಯ ಜವಾಬ್ದಾರಿ ಇರಬೇಕಾದ್ದು ಹಳ್ಳಿಗಳಲ್ಲಿ. ಹಳ್ಳಿ ಬಿಟ್ಟುಕೊಟ್ಟ ಜವಾಬ್ದಾರಿಗಳು ಜಿಲ್ಲೆಗೂ, ಜಿಲ್ಲೆ ಬಿಟ್ಟುಕೊಟ್ಟಿದ್ದು ರಾಜ್ಯಕ್ಕೂ, ರಾಜ್ಯ ಬಿಟ್ಟುಕೊಟ್ಟಿದ್ದು ಕೇಂದ್ರಕ್ಕೂ ಹೋಗಬೇಕು" ಅಂತ. ಅವರು ಕೇಂದ್ರಕ್ಕೆ ಬಿಟ್ಟುಕೊಟ್ಟದ್ದು 5 ಕ್ಷೇತ್ರಗಳನ್ನು ಮಾತ್ರ. 1) ವಿದೇಶಾಂಗ ವ್ಯವಹಾರ, 2) ಹಣಕಾಸು, 3) ರಕ್ಷಣೆ, 4) ಸಂಪರ್ಕ (ರೈಲ್ವೆ, ವಿಮಾನ, ಸಾರಿಗೆ ಇತ್ಯಾದಿ), 5) ಗಾಂಧಿ ತತ್ವಗಳಲ್ಲಿ ಅಚಲವಾದ ನಂಬಿಕೆ ಇಟ್ಟಿದ್ದ ಅವರು, ಅತ್ಯಂತ ಕಡಿಮೆ ಆಡಳಿತ ನಡೆಸುವ ಸರ್ಕಾರದ ಪರವಾಗಿದ್ದರು. ಕೇಂದ್ರವು ಈ 5 ಕ್ಷೇತ್ರಗಳನ್ನು ಬಿಟ್ಟು ಉಳಿದಿದ್ದರ ಬಗ್ಗೆ ತುಟಿ ಬಿಚ್ಚಬಾರದೆಂದು ಹೇಳುತ್ತಿದ್ದರು. ಇವತ್ತು ಕೋವಿಡ್ ಬಂದರೆ, ಲಾಕ್‌ಡೌನ್ ಮಾಡಬೇಕಾ ಬೇಡವಾ ಅಂತ ನರೇಂದ್ರ ಮೋದಿ ಹೇಳಬೇಕು. ಕಾರ್ಪೊರೇಷನ್ ತೀರ್ಮಾನಿಸಬೇಕಾದ ಈ ವಿಚಾರದ ಬಗ್ಗೆ ಮೋದಿ ತಲೆಕೆಡಿಸಿಕೊಳ್ಳಬೇಕಿಲ್ಲ. ಆದರೆ ಅವರು ಇಡೀ ದೇಶವನ್ನೇ ಲಾಕ್‌ಡೌನ್ ಮಾಡಿದರು; 2000 ರೂಪಾಯಿ ನೋಟಿನ ಅಮೌಲ್ಯೀಕರಣ ಮಾಡಿದರು; ಮುನಿಸಿಪಾಲಿಟಿ ತೀರ್ಮಾನಿಸಬೇಕಾದ ಜಿ.ಎಸ್.ಟಿ. ಮೋದಿ ಅನುಷ್ಠಾನ ಮಾಡಿದರು.

ಹೀಗೆ "ಆಡು ಮುಟ್ಟದ ಸೊಪ್ಪಿಲ್ಲ" ಅನ್ನುವಂತೆ, ಲೋಹಿಯಾ ಹೇಳದಿರುವ ವಿಚಾರಗಳೇ ಇಲ್ಲ. ಆದರೆ ಅವರು ಹೇಳಿದ್ದೆಲ್ಲಾ ಅವರ ಸ್ವಂತ ವಿಚಾರಗಳೇ ಹೊರತು, ಕಡ ತಂದ ವಿಷಯಗಳಾವುವೂ ಇಲ್ಲ. ಅಕಸ್ಮಾತ್ ಅಂಥದ್ದೇನಾದರೂ ಇದ್ದರೆ, ಅದು ಗಾಂಧೀ ತತ್ವಗಳಷ್ಟೇ. ಆದರೆ ಗಾಂಧಿ ಕೂಡ ಇಷ್ಟು ಸವಿಸ್ತಾರವಾಗಿ ವಿಚಾರ ಮಾಡಲೂ ಇಲ್ಲ, ಹೇಳಲೂ ಇಲ್ಲ, ಬಯಸಲೂ

ಇಲ್ಲ. ಆದರೆ ಲೋಹಿಯಾ ಇವೆಲ್ಲವನ್ನೂ ಬಯಸಿದರು, ಹೇಳಿದರು, ಸ್ವತಃ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು ಕೂಡ. ಒಮ್ಮೆ ಬಿಹಾರದಲ್ಲಿ ಭಾಷಣದ ಸ್ಥಳಕ್ಕೆ ಹೋಗಲು ಮನುಷ್ಯರು ಎಳೆಯುವ ರಿಕ್ಷಾ ವ್ಯವಸ್ಥೆ ಮಾಡಿದ್ದರು. ಆದರೆ ಲೋಹಿಯಾ ಅದರಲ್ಲಿ ಕುಳಿತುಕೊಳ್ಳಲು ನಿರಾಕರಿಸಿ, ನಡೆದೇ ಹೋದರು. ಅಂಥ ಸರಳ ಜೀವಿ ಅವರು. ಅವರ ಜೀವಮಾನದಲ್ಲಿ ನಡೆದ ಸಾವಿರಾರು ಘಟನೆಗಳಲ್ಲಿ ಅವರು ತುಳಿದ ಹೆಜ್ಜೆಗಳು ಎಲ್ಲಿಯೂ, ಯಾವುದೂ ಕೂಡ, ಜಾತಿ–ಜಾತಿಗಳ ನಡುವೆಯಾಗಲೀ, ಗಂಡು–ಹೆಣ್ಣಿನ ನಡುವೆಯಾಗಲೀ, ಬಡವ–ಬಲ್ಲಿದರ ನಡುವೆಯಾಗಲೀ ಅಸಮಾನತೆಯ ವಿಚಾರವನ್ನು ಸಾರುವುದಿಲ್ಲ. ಸಮಾಜವಾದ ಈಗೆಲ್ಲಿದೆ ಅನ್ನುತ್ತಾರೆ?

ಲೋಹಿಯಾ ಈ ದೇಶವನ್ನು ಆಳದಿರಬಹುದು; ಆದರೆ ಹೇಗೆ ಆಳ್ವಿಕೆ ನಡೆಸಬೇಕೆಂದು ಅವರು ಈ ದೇಶವನ್ನು ಆಳಿದವರಿಗೆ ನಿರ್ದೇಶಿಸಿದರು. ನೆಹರೂ, ಇಂದಿರಾಗಳು 'ಲೋಹಿಯಾ' ಎಂದರೆ ನಡುಗುತ್ತಿದ್ದರು. ಅಪೂರ್ವ ಬಹುಮತ ಸಾಧಿಸಿದ್ದ ಕಾಂಗ್ರೆಸ್ಸನ್ನು ಸೋಲಿಸಲು ವಿರೋಧ ಪಕ್ಷಗಳನ್ನು ನಾಲ್ಕು ರೀತಿಯಿಂದ ಸಂಘಟಿಸಿದರು. 1) ಒಂದರೊಳಗೊಂದು ವಿಲೀನಗೊಳಿಸುವುದು, 2) ಒಂದರೊಡನೊಂದು ಸೇರಿ ಒಕ್ಕೂಟ ರಚಿಸಿಕೊಳ್ಳುವುದು, 3) ಒಂದರೊಡನೊಂದು ಸಹಕಾರ ಕೊಡುವ ಮೂಲಕ ಮತ್ತು 4) ಚುನಾವಣೆಗಳಲ್ಲಿ ಒಂದರ ವಿರುದ್ಧ ಇನ್ನೊಂದು ಸ್ಪರ್ಧಿಸದಿರುವ ಮೈತ್ರಿ ಒಪ್ಪಂದ ಮಾಡಿಕೊಳ್ಳುವುದು. ಇದನ್ನೇ ಜೆಪಿಯವರು 1977ರಲ್ಲಿ ಬಳಸಿಕೊಂಡು ಕಾಂಗ್ರೆಸ್ಸನ್ನು ನಿರ್ನಾಮ ಮಾಡಿದರು.

ಲೋಹಿಯಾ 1967ರಲ್ಲಿ ಈ ಉಪಾಯದಿಂದ ಉತ್ತರದ 9 ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಮಣ್ಣು ತಿನ್ನಿಸಿದರು. ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ಸಿನ ಬಹುಮತವನ್ನು 50%ಗೆ ಇಳಿಸಿದರು. ಆಗಲೇ ಇಂದಿರಾ ಗಾಂಧಿಯವರು ಲೋಹಿಯಾರಿಂದ ರಚಿಸಲ್ಪಟ್ಟ ಸರ್ಕಾರಗಳನ್ನು ಪಕ್ಷಾಂತರಿಗಳನ್ನು ಕೊಂಡುಕೊಳ್ಳುವ (ಆಯಾರಾಂ, ಗಯಾರಾಂ ತತ್ವ) ಮೂಲಕ ಕಾಂಗ್ರೆಸ್ ಸರ್ಕಾರಗಳನ್ನಾಗಿ ಬದಲಾಯಿಸತೊಡಗಿದರು. ಇವತ್ತು ಯಡಿಯೂರಪ್ಪ ಮಾಡುತ್ತಿರುವುದೂ ಅದೇ.

ನಮ್ಮೆಲ್ಲರ ಬಹುದೊಡ್ಡ ಸೌಭಾಗ್ಯವೆಂದರೆ, ಲೋಹಿಯಾ, ಅಂಬೇಡ್ಕರ್‌ರಂಥವರು ಈ ರಾಷ್ಟ್ರದ ಎಲ್ಲಾ ಸಮಸ್ಯೆಗಳಿಗೂ ತಮ್ಮದೇ ಅದಂಥ ಅಸಲಿ ತಾತ್ವಿಕ, ಆದರ್ಶಮಯ, ಪರಿಹಾರಗಳನ್ನು ಕೊಟ್ಟದ್ದು. ಲೋಹಿಯಾ, ಅಂಬೇಡ್ಕರ್ ಮತ್ತು ಪೆರಿಯಾರ್ ನಾಯ್ಕರ್ ಒಟ್ಟಿಗೆ ಸೇರುವ ಯೋಜನೆಯೂ ಇತ್ತು. ಆದರೆ ಅಷ್ಟರಲ್ಲೇ, 1967ರಲ್ಲಿ ಲೋಹಿಯಾ ನಿಧನರಾದರು.

ಲೋಹಿಯಾರ ಉತ್ತಮ ಕೊಡುಗೆ ಎಂದರೆ ಅದು ಕರ್ನಾಟಕಕ್ಕೇ. ಬಂಡಾಯ ಸಾಹಿತ್ಯ, ದಲಿತ ಸಂಘರ್ಷಸಮಿತಿ, ರೈತ ಚಳವಳಿ, ಎಲ್ಲಕ್ಕಿಂತ ಹೆಚ್ಚಾಗಿ ಮಹಾನ್ ಸಮಾಜವಾದಿಗಳಾದ ಶಾಂತವೇರಿ ಗೋಪಾಲಗೌಡರನ್ನು, ಜೆ.ಎಚ್.ಪಟೇಲ್, ಮಧು ಲಿಮಯೆ, ಗುಲ್ಜಾರಿಲಾಲ್ ನಂದ, ಕಿಶೋರ್ ಪಟ್ನಾಯಕ್‌ರನ್ನು ಕೊಟ್ಟಿದ್ದೇ ಲೋಹಿಯಾವಾದಿಗಳು. ಸಮಾಜವಾದ ಸತ್ತಿಲ್ಲ. ನೀವೂ ಕೂಡ ಸಮಾಜವಾದಿಗಳಾಗಿ ಬದುಕಬಹುದು. ಹೇಗೆ? ಸುಳ್ಳು ಹೇಳುವುದು, ವಚನ ಪಾಲನೆ ಮಾಡದಿರುವುದು, ನೋವುಂಟು ಮಾಡುವುದು ಇಂಥವನ್ನು ಮಾಡದೇ ಇರುವ ಮೂಲಕ.

**ಪ್ರಶ್ನೋತ್ತರ ಸಂವಾದ:**

1) ಲೋಹಿಯಾರಿಂದ ಎಷ್ಟು ಮಹಿಳೆಯರು ಬೆಳಕಿಗೆ ಬಂದರು?

ಕಮಲಾಬಾಯಿ ಚಟ್ಟೋಪಾಧ್ಯಾಯ, ಇಂದುಮತಿ ಕೇಳ್ಕರ್, ಅರುಣಾ ಅಸಫ್ ಆಲಿ, ಸುಚೇತಾ ಕೃಪಲಾನಿ ಮುಂತಾದ ರಾಜಕಾರಣಿಗಳಲ್ಲದೆ, ಅನೇಕಾನೇಕ ನಾಟಕಕಾರರು, ಕಲಾಕಾರರು ಮುಂತಾದವರು ಬೆಳಕಿಗೆ ಬಂದದ್ದೇ ಲೋಹಿಯಾರಿಂದ.

2) ಪ್ರಜಾಪಭುತ್ವದಲ್ಲಿ ಸಮಾಜವಾದದ ಅನುಷ್ಠಾನ ಸಾಧ್ಯವೇ?

ಮೀಸಲಾತಿ, ಉಳುವವನಿಗೇ ಭೂಮಿ–ಗೇಣಿ ಕಾಯಿದೆ, ಮಹಿಳಾ ಮೀಸಲಾತಿ ಇತ್ಯಾದಿಗಳೆಲ್ಲಾ ಸಮಾಜವಾದದ ಅನುಷ್ಠಾನದ ಫಲವೇ ತಾನೆ?.

3) ಜಾತಿ ವಿನಾಶ ಭಾರತದಲ್ಲಿ ಸಾಧ್ಯವೇ?

ಇಂದು ಅಂತರ್ಜಾತಿ ವಿವಾಹ ನಡೆಯುತ್ತಿರುವುದೇ ಲೋಹಿಯಾವಾದದಿಂದ. ಯುವಕ–ಯುವತಿಯರು ಏನು ಕ್ರಾಂತಿ ಮಾಡಿದರೂ, ನೀವೆಲ್ಲ ಅವರಿಗೆ ಸಹಕಾರ ನೀಡಬೇಕು.

4) ಮೀಸಲಾತಿಗಾಗಿ ಜಾತಿಯನ್ನು ಒತ್ತಿ ಒತ್ತಿ ಹೇಳುವಾಗ ಜಾತಿ ವಿನಾಶ ಹೇಗೆ ಸಾಧ್ಯ? ಅಂತರ್ಜಾತಿ ವಿವಾಹಗಳು ಜಾತಿವಿನಾಶಕ್ಕೆ ಕಾರಣವಾಗುತ್ತಿವೆಯೇ?

ಅಂತರ್ಜಾತಿ ವಿವಾಹದ ನಂತರ ಜಾತಿ, ಧರ್ಮಗಳು ಒಂದರೊಳಗೊಂದು ವಿಲೀನವಾಗದಿದ್ದರೆ ಮಾತ್ರ ಅಂತರ್ಜಾತಿ ವಿವಾಹಗಳು ಜಾತಿವಿನಾಶಕ್ಕೆ ಕಾರಣವಾಗುತ್ತವೆ. ನಂಜುಂಡಸ್ವಾಮಿಯವರು ಮರಾಠ ಹೆಣ್ಣನ್ನು ಮದುವೆಯಾಗಿ, ಹೆಂಡತಿಯನ್ನು ವೀರಶೈವಳನ್ನಾಗಿ ಮಾಡಲಿಲ್ಲ; ತೇಜಸ್ವಿಯವರು

ರಾಜೇಶ್ವರಿಯುವರನ್ನು ಮದುವೆಯಾಗಿ, ಹೆಂಡತಿಯುನ್ನು, ಮಕ್ಕಳನ್ನು ಒಕ್ಕಲಿಗರನ್ನಾಗಿ ಮಾಡಲಿಲ್ಲ. ಆದ್ದರಿಂದ ಜಾತಿ ವಿನಾಶವಾಗುತ್ತಿದೆ.

5) ಅಂಬೇಡ್ಕರ್ – ಲೋಹಿಯಾ ಸಂಬಂಧ ಹೇಗಿತ್ತು?

ಹಿಂದೂ ಧರ್ಮದಲ್ಲಿ ಬದಲಾವಣೆಗಳು ಸಾಧ್ಯವೇ ಇಲ್ಲವಾದ್ದರಿಂದ, ಅಂಬೇಡ್ಕರ್ ಧರ್ಮವನ್ನೇ ಬದಲಾಯಿಸುವ ಮಾತನ್ನಾಡಿದಾಗ, ಲೋಹಿಯಾ ಅವರನ್ನು ಭೇಟಿ ಮಾಡಲು ಹೋಗುತ್ತಾರೆ. ಆದರೆ ಅಂಬೇಡ್ಕರ್‌ಗೆ ಜ್ವರ ಬಂದಿದ್ದರಿಂದಾಗಿ ಭೇಟಿ ಸಾಧ್ಯವಾಗಲಿಲ್ಲ. ಮುಂದಿನ ಭೇಟಿ ದಿನಾಂಕ ನಿಗದಿಯಾದರೂ, ಅದಕ್ಕೂ ಮೊದಲೇ ಅಂಬೇಡ್ಕರ್ ನಿಧನರಾದ್ದರಿಂದ, ಅಂಬೇಡ್ಕರ್ – ಲೋಹಿಯಾ ಭೇಟಿ, ಚರ್ಚೆ, ಸಂವಾದ ನಡೆಯಲಿಲ್ಲ.

ಆದರೆ ಅವರಿಬ್ಬರ ಚಿಂತನಾ ಕ್ರಮದಲ್ಲಿ ಕೆಲವು ವೈರುಧ್ಯಗಳಿದ್ದರೂ, ಅನೇಕ ಸಾಮ್ಯತೆಗಳಿದ್ದವು; ಅವರಿಬ್ಬರ ಗುರಿ ಸಮಾನತೆಯೇ ಆಗಿತ್ತು. ಅಂಬೇಡ್ಕರ್ ಕಟ್ಟಾ ಸಂವಿಧಾನವಾದಿ; ಅವರು ಸತ್ಯಾಗ್ರಹವನ್ನು ಕೂಡ ಒಪ್ಪುತ್ತಿರಲಿಲ್ಲ. ಅಂಬೇಡ್ಕರ್ ಕೇಂದ್ರೀಯ ಆಡಳಿತದ ಪರವಾಗಿದ್ದರೆ, ಲೋಹಿಯಾ ವಿಕೇಂದ್ರೀಕರಣದ ಪರವಾಗಿದ್ದರು. ಗ್ರಾಮ ಪಂಚಾಯಿತಿಯಿಂದ ದಲಿತರ ಜೀವನ ದಾರುಣ, ದುರ್ಭರವಾಗುತ್ತದೆಂದು ಅಂಬೇಡ್ಕರ್ ನಂಬಿದ್ದರಿಂದಾಗಿ, ಅವರು ಅದನ್ನು ವಿರೋಧಿಸುತ್ತಿದ್ದರು.

6) ಇಂದು ಲೋಹಿಯಾ ಇದ್ದಿದ್ದರೆ ಏನಾಗುತ್ತಿತ್ತು?

ಇಂದು ಅವರಿದ್ದಿದ್ದರೆ, ಎಲ್ಲಾ ಸಮಾಜವಾದಿಗಳನ್ನೂ ಒಗ್ಗೂಡಿಸುವಲ್ಲಿ ಅವರು ಯಶಸ್ವಿಯಾಗಿ ಕೋಮುವಾದಿಗಳ ಕೈಗೆ ಅಧಿಕಾರ ಹೋಗುತ್ತಿರಲಿಲ್ಲ. ಭಾರತೀಯ ಸಮಾಜವಾದಿಗಳೆಂದರೆ ಅತ್ಯುತ್ಕೃಷ್ಟ ಸಚ್ಚಾರಿತ್ರ ಗುಣವಂತರು.

7) ಭಾರತ–ಪಾಕಿಸ್ತಾನ ವಿಭಜನೆ ಬಗ್ಗೆ ಲೋಹಿಯಾ ಅಭಿಪ್ರಾಯವೇನು?

ಭಾರತೀಯ ಮುಸ್ಲಿಮರೂ ಸಹ ಭಾರತೀಯರೇ; ಹಾಗಾಗಿ ಅವರನ್ನು ಭಾರತದಿಂದ ಹೊರಕ್ಕೆ ಕಳಿಸಬಾರದು; ಅದರಿಂದ ಹಿಂದೂ–ಮುಸ್ಲಿಂ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದು ಲೋಹಿಯಾರ ಅಭಿಪ್ರಾಯ. ಪಾಕಿಸ್ತಾನೀಯರಿಗೆ ತಾವು ಬೇರೆ ಹೋಗಿದ್ದೇ ತಪ್ಪಾಯಿತು ಎನಿಸುವಷ್ಟು ಸಾಮರಸ್ಯದಿಂದ ಭಾರತದಲ್ಲಿ ಹಿಂದೂ–ಮುಸ್ಲಿಮರು ಬದುಕಬೇಕು. ಅದರಿಂದಾಗಿ ಪಾಕಿಸ್ತಾನದ ಕಲ್ಪನೆಯೇ ನಶಿಸಿಹೋಗಿ, ಅವರು ಭಾರತಕ್ಕೆ ಹಿಂದಿರುಗಿ ಬರಬೇಕೆಂದು ಮಾರ್ಮಿಕವಾಗಿ ಲೋಹಿಯಾ ಹೇಳಿದರು.

8) ಸಮಾಜವಾದಿಗಳಾದ ಜೆ.ಎಚ್.ಪಟೇಲ್, ಜಾರ್ಜ್ ಫರ್ನಾಂಡಿಸ್ ಅವರ ದೌರ್ಬಲ್ಯಗಳ ಬಗ್ಗೆ ಏನು ಹೇಳುತ್ತೀರಿ?

ಜೆ.ಎಚ್.ಪಟೇಲ್ ಪಾನಪ್ರಿಯರಿರಬಹುದು; ಜಾರ್ಜ್ ಫರ್ನಾಂಡಿಸ್ ಡೈನಮೈಟ್ ಹಗರಣದಲ್ಲಿ ಸಿಲುಕಿರಬಹುದು. ಡೈನಮೈಟಿಗೆ ಕೈಹಾಕಿದ ಕೂಡಲೆ ಅವರು ಲೋಹಿಯಾವಾದದಿಂದ ದೂರಾದರು. ಅದಕ್ಕೆ ಲೋಹಿಯಾವಾದ ಕಾರಣವಲ್ಲ. ಸಮಾಜವಾದಿಗಳ ಒಳ್ಳೆಯ ಗುಣಗಳೇನಿವೆಯೋ ಅವುಗಳನ್ನು ಎತ್ತಿ ತೋರಿಸೋಣ. ಅವರ ಹುಳುಕುಗಳನ್ನೂ ಹೇಳುತ್ತಾ ಹೋದರೆ ನಮ್ಮ ಮುಂದಿನ ಪೀಳಿಗೆಗೆ ಆ ದುರ್ಗುಣಗಳೇ ಆದರ್ಶಗಳಾಗಿ ಬಿಡಬಾರದು. ರಘುರಾಮ ಶೆಟ್ಟರು ದೇವರಾಜ ಅರಸರ ಸಾಧನೆಗಳನ್ನು ಬಿಟ್ಟು ಅವರ ದೌರ್ಬಲ್ಯಗಳನ್ನೇ ಎತ್ತಿ ಹೇಳಿದ್ದಕ್ಕೆ ನಾನೇ ಅವರ ನೀರಿಳಿಸಿದ್ದೆ. ಬಾಪು ಹೆದ್ದೂರಶೆಟ್ಟಿಯವರೂ ಕೂಡ ಲೋಹಿಯಾರ ಬಗ್ಗೆ ಹಾಗೇ ಮಾಡಿದ್ದಾರೆ. ಆದರೆ ತಮ್ಮದೇ ಸರ್ಕಾರ ತಪ್ಪು ಮಾಡಿದಾಗ, ಅದರ ವಿರುದ್ಧ ಹೋರಾಡಿದ ಏಕೈಕ ವ್ಯಕ್ತಿ ಎಂದರೆ ಲೋಹಿಯಾ. ಅವರು ಉತ್ತರಪ್ರದೇಶದಲ್ಲಿ ತಮ್ಮದೇ ಸಮಾಜವಾದಿ ಸರ್ಕಾರದ ವಿರುದ್ಧ ಕರನಿರಾಕರಣೆ ಚಳವಳಿ ಮಾಡಿಸಿದರು. ಕೇರಳದಲ್ಲಿ ಪಟ್ಟಂತಾನಂ ಪಿಳ್ಳೈ ನೇತೃತ್ವದ ತಮ್ಮದೇ ಸರ್ಕಾರವನ್ನು ಕೆಳಗಿಳಿಸಿದರು. ಚಳವಳಿ ಮಾಡುವ ಮೊದಲು ಅದರ ಸಾಧಕ–ಬಾಧಕಗಳ ಬಗ್ಗೆ, ಪರಿಣಾಮಗಳ ಬಗ್ಗೆ ಯೋಚಿಸಿದವರೇ ಅಲ್ಲ ಲೋಹಿಯಾ.

9) ಜನಸಂಘವನ್ನು ಚಾಲನೆಗೆ ತಂದರೇ ಲೋಹಿಯಾ?

ಆರ್.ಎಸ್.ಎಸ್.ಅನ್ನು ಸೇರಿಸಿಕೊಳ್ಳುವುದರ ಮೂಲಕ, ಜೆಪಿ ಅವರಿಗೆ ಚಲಾವಣೆ ಕೊಟ್ಟರು. ಅವರು ಬಂದ ಕೂಡಲೆ ಇಡೀ ಜನತಾ ಪಕ್ಷವನ್ನೇ ನುಂಗಿಬಿಟ್ಟರು. ಸಮಾಜವಾದಿ ಪಕ್ಷ, ಸ್ವತಂತ್ರ ಪಕ್ಷ, ಸಂಸ್ಥಾ ಕಾಂಗ್ರೆಸ್ ಎಲ್ಲವನ್ನೂ ನಿರ್ನಾಮ ಮಾಡಿದರು. ಭಾಜಪ ಒಂದೇ ಉಳಿದಿದ್ದು. 1971ರಲ್ಲಿ ಸಮಾಜವಾದಿ ಪಕ್ಷ ಸೋತು ಸುಣ್ಣವಾಗಿತ್ತು. ಆಗ ನಾನೂ ಕೆಲವು ದಿನ ಆರ್.ಎಸ್.ಎಸ್.ನಲ್ಲಿದ್ದೆ. ಯಾದವರಾವ್ ಜೋಶಿ ಎಂಬ ಆರ್.ಎಸ್.ಎಸ್. ನಾಯಕರು ಇದ್ದರು. ನಾನು ಕೇಳಿದೆ, "ನೀವು ಇಷ್ಟೊಂದು ಭರವಸೆ ಕೊಟ್ಟಿದ್ದಿರಿ; ಸರ್ಕಾರನೇ ರಚಿಸ್ತೀವಿ ಅಂತ ಹೇಳಿದ್ದಿರಿ. ಹೀಗೆ ಸೋತುಹೋದೆವಲ್ಲ?" ಎಂದಿದ್ದಕ್ಕೆ ಅವರು, "ಕಾಂಗ್ರೆಸ್ಸನ್ನು ನಾವು ಸೋಲಿಸಬಹುದು. ಅದಕ್ಕೆ ಮೊದಲು ನಾವು ಈ ಸಮಾಜವಾದಿ ಪಕ್ಷದಂತಹ ಚಿಕ್ಕ ಪುಟ್ಟ ಶತ್ರುಗಳನ್ನೆಲ್ಲಾ ನಾವು ಅವರ ವಿರುದ್ಧ ಸ್ಪರ್ಧಿಸಿ ಸೋಲಿಸಲಾಗುತ್ತಿರಲಿಲ್ಲ; ಆದ್ದರಿಂದ ನಾವು ಅವರೊಂದಿಗೆ ಮೈತ್ರಿ ಮಾಡಿಕೊಂಡು

ಅವರನ್ನು ಮುಗಿಸಿದೆವು" ಎಂದರು. ಯಾವ ಸಂವಿಧಾನದ ಹೆಸರಿನಲ್ಲಿ ಅಧಿಕಾರಕ್ಕೆ ಬರುತ್ತಾರೋ ಆ ಸಂವಿಧಾನವನ್ನೇ ಬದಲಾಯಿಸುತ್ತೇವೆ ಎನ್ನುತ್ತಾರೆ. 1962ರಲ್ಲಿ ಲೋಹಿಯಾ ಜನಸಂಘವನ್ನು, 1977ರಲ್ಲಿ ಜೆಪಿಯವರು ಆರ್.ಎಸ್.ಎಸ್. ಅನ್ನು ಚಲಾವಣೆಗೆ ತಂದಿದ್ದು ತಪ್ಪಾಯಿತು.

10) ಯಾವ ರಾಜಕಾರಣಿ ಸಮಾಜವಾದಿ?

ಎಲ್ಲ ಮತದಾರರೂ ರಾಜಕಾರಣಿಗಳೇ. ನೀವು ಏಕಿಷ್ಟು ನಿರಾಶಾವಾದಿಯಾಗಿದ್ದೀರಿ? ನೀವೇ ಏಕೆ ಒಂದು ಸಮಾಜವಾದಿ ಪಕ್ಷ ಹುಟ್ಟುಹಾಕಬಾರದು? ಇಷ್ಟು ದೊಡ್ಡ ಸಂಘಟನೆ ಹೊಂದಿದ್ದೀರಿ, ಏಕೆ ನೀವು ಒಬ್ಬ ಮಹಿಳೆಗೆ ಲೋಕಸಭಾ ಚುನಾವಣೆಗೆ ಟಿಕೇಟು ಕೊಡಿ ಅಂತ ಕಾಂಗ್ರೆಸ್ಸನ್ನು ಕೇಳಲಿಲ್ಲ? ಈಗ ರಮಾಕುಮಾರಿಯವರು ತುಮಕೂರಿನಲ್ಲಿ ಚುನಾವಣೆಗೆ ಸ್ಪರ್ಧಿಸಲು ತಯಾರಿದ್ದಾರೆಯೇ? ಟಿಕೇಟು ಕೊಡಿಸಲು ಇಂದೇ ಮಾತುಕತೆ ಆರಂಭಿಸಲು ನಾನು ತಯಾರು! ಈಗ ಹಾಲಿ ಸಂಸದ ಅಭ್ಯರ್ಥಿಗಳಾರೂ ಇಲ್ಲದಿರುವುದರಿಂದ, ನಾವು ಖಾಲಿಜಾಗವನ್ನು ಭರ್ತಿ ಮಾಡಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ ನಾವು ಹೋರಾಡಬೇಕು; ಸೋಲು-ಗೆಲುವು ಬೇರೆ. ಆದ್ದರಿಂದ, ಯಾವ ರಾಜಕಾರಣಿ ಸಮಾಜವಾದಿ ಅನ್ನುವುದಕ್ಕಿಂತ, ನೀವೇ ಸಮಾಜವಾದಿಯಾಗಿರಿ. ನಾವೆಲ್ಲರೂ ನಮ್ಮ ವೈಯಕ್ತಿಕ ನಿಜಜೀವನದಲ್ಲಿ ಅಸಮಾನತೆಯನ್ನು ಸೃಷ್ಟಿಸದೇ, ಸಮಾಜವಾದಿಗಳಾಗಿ, ಭ್ರಷ್ಟರಾಗದೇ, ಬದುಕೋಣ. ರಸ್ತೆಯುದ್ದಕ್ಕೂ ಬಿದ್ದಿರುವ ಕಸವನ್ನು ತೊಳೆಯಲು ನಾವು ನೀರು ತೆಗೆದುಕೊಂಡು ಹೋಗಬೇಕಿಲ್ಲ; ಬದಲಾಗಿ ಕಸ ನಮಗೆ ಮೆತ್ತಿಕೊಳ್ಳದಂತಿರಲು ನಾವು ಮೆಟ್ಟು ಹಾಕಿಕೊಳ್ಳಬೇಕು ಹಾಗೂ ನಾವೂ ರಸ್ತೆಗೆ ಕಸ ಹಾಕಬಾರದು. ಲಂಚ ಕೊಡಲೂ ಬೇಡಿ, ತೆಗೆದುಕೊಳ್ಳಲೂ ಬೇಡಿ; ಜಾತೀಯತೆಯನ್ನು ಆಚರಿಸಬೇಡಿ. ನಾನು ಅಡ್ವೊಕೇಟ್ ಜನರಲ್ ಆದಾಗ, ಮಹಿಳೆಯರಿಗೆ 40% ಮೀಸಲಾತಿ ಕೊಟ್ಟೆ; ಆ ಮೂಲಕ ಅಷ್ಟು ಮಹಿಳೆಯರು ನ್ಯಾಯಾಧಿಕಾರಿಗಳಾದರು. ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯವನ್ನೂ ಕಟ್ಟಿಸಿಕೊಟ್ಟೆ.

11) ಜನಗಣತಿ ಬಗ್ಗೆ?

ಜನಗಣತಿ ಈ ದೇಶಕ್ಕೆ ಒಂದು ವರದಾನ. 1872ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲ ಜನಗಣತಿಯಾಗಿ, ಬ್ರಾಹ್ಮಣರು ಕೇವಲ 3% ಇದ್ದರೂ 95% ಉದ್ಯೋಗ ಕಬಳಿಸುವ ವಿಷಯ ಎಲ್ಲರಿಗೂ ತಿಳಿಯಿತು. ಬಸವರಾಜಯ್ಯನವರ ನೇತೃತ್ವದಲ್ಲಿ ಮೈಸೂರು ಮಹಾರಾಜರನ್ನು ಭೇಟಿ

ಮಾಡಿ, "ನಿಮ್ಮ ಬೊಕ್ಕಸಕ್ಕೆ ಹಣ ಕೊಡುವವರು ನಾವು, ಅದನ್ನೆಲ್ಲ ನೀವು 100% ಬ್ರಾಹ್ಮಣರಿಗೆ ಕೊಡುತ್ತಿದ್ದೀರಲ್ಲ. ಇದು ಸರಿಯಲ್ಲ; ನಮಗೆ ಮೀಸಲಾತಿ ಬೇಕು" ಎಂದಾಗ 1874ರಲ್ಲಿ ಮೊದಲ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಅನುಷ್ಠಾನಕ್ಕೆ ಬಂತು. ನಂತರ 1921ರಲ್ಲಿ ಮೈಸೂರಿನ ಇಂಗ್ಲಿಷ್ ನ್ಯಾಯಾಧೀಶ ಮಿಲ್ಲರ್ ಸಮಿತಿ ನೇಮಕವಾಗಿ, ದಿವಾನ್ ವಿಶ್ವೇಶ್ವರಯ್ಯನವರು ರಾಜೀನಾಮೆ ನೀಡಿ, ಹೊಸ ದಿವಾನರ ಆಡಳಿತದಲ್ಲಿ ಮಿಲ್ಲರ್ ವರದಿಯ ಅನುಷ್ಠಾನವಾಯಿತು. ಅದು 1962ರಲ್ಲಿ ನಿಂತು ಹೋಗಿತ್ತು; ದೇವರಾಜ ಅರಸರ ಕಾಲದಲ್ಲಿ ಮತ್ತೆ ಮೀಸಲಾತಿ ಆರಂಭವಾಯಿತು. ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳನ್ನು ಹಾಕುವುದರಲ್ಲಿ ಮಹಿಳೆಯರು ಹಿಂದೆ. ನೀವು ಮುಂದೆ ಬಂದು, ಈ ಪಿ.ಐ.ಎಲ್.ಗಳನ್ನು ನಿಮ್ಮ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲೇ ಹಾಕಲು ಆರಂಭಿಸಿರಿ ಎಂಬುದು ನನ್ನ ಕಳಕಳಿಯ ಮನವಿ. ಇಂದು ಕರ್ನಾಟಕದಲ್ಲಿ ಒಂದು ಲಕ್ಷ ಲಾಯರುಗಳಿದ್ದಾರೆ. ಚಳವಳಿಗಳಲ್ಲಿರುವ ಲಾಯರುಗಳನ್ನು ಸಂಪರ್ಕಿಸಿ ಅವರಿಗೆ ಬದ್ಧತೆ ಇರುತ್ತದೆ. ತೊಂದರೆಗಳ ನಿರ್ಮೂಲನೆಗೆ ಮ್ಯಾಜಿಸ್ಟ್ರೇಟರ ಬಳಿಗೆ ಹೋಗಿ; ಯಾವುದೇ ಕಾನೂನುಬದ್ದ ಡಿಕ್ಲರೇಷನ್ನಿಗಾಗಿ ಸಿವಿಲ್ ನ್ಯಾಯಾಧೀಶರ ಬಳಿಗೆ ಹೋಗ ಬೇಕು. ಅರ್ಥಪೂರ್ಣ ಚರ್ಚೆಯೊಂದಿಗೆ ಸಂವಾದ ಸಂಪನ್ನವಾಯಿತು.

ಆಡಿಯೋ ರೂಪ: ಅಖಿಲಾ

ಬರಹಕ್ಕೆ: ಬಾ ಹ ಉಪೇಂದ್ರ

# ಮಹಿಳಾ ತತ್ವಪದಕಾರರು-ಸಾಮಾಜಿಕ ಆಯಾಮಗಳು

ಡಾ. ಮೀನಾಕ್ಷಿ ಬಾಳಿ

**ಮಗನೊಂದು ಹಡದೆನಲ್ಲ**
**ಮದುವೆ ಗಂಡ ಮನೆಯೊಳಗಿಲ್ಲ**
**ಎಂಥದು ಜಗವೇ ತಾಯಿ**
**ಜಾಣೆ ನಾ ಸುಳ್ಳೋಳದಿಲ್ಲ ॥**

ಇದು ಬಿದನೂರು ಗಂಗಮ್ಮ ಎಂಬ ತತ್ವಪದಕಾರ್ತಿಯೊಬ್ಬಳ ಪದದ ಪಲ್ಲವಿ. ಅವಳು ತಾನು ಗಂಡನಿಲ್ಲದೆ ಮಗನನ್ನು ಹುಟ್ಟಿಸಿದ ಸಂದರ್ಭವನ್ನು ಅರುಹಲು ಬರೆದ ಹಾಡಿದು. ಆಧುನಿಕ ಪೂರ್ವ ಕಾಲಘಟ್ಟದಲ್ಲಿ ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಸಣ್ಣ ಹಳ್ಳಿ ಬಿದನೂರು. ಅಲ್ಲಿ ಬಾಳು ಕಟ್ಟಿಕೊಂಡಿದ್ದ ಬಾಲವಿಧವೆ ಗಂಗಮ್ಮ ತನ್ನ ವಿವಾಹೇತರ ಸಂಬಂಧವನ್ನು ಒಪ್ಪಿಕೊಂಡು ಜಗಜ್ಜಾಹೀರುಗೊಳಿಸಲೆಂದು ಆಡಿದ ನುಡಿಗಡಣವೇ ಪದವಾದ ಕುತೂಹಲಕಾರಿ ಪ್ರಸಂಗವಿದು. ಅದೇನು ಮಹಾ ಬಿಡಿ. ಲಿವಿಂಗ್ ಟುಗೆದರ್ ಕಾಲಘಟ್ಟದಲ್ಲಿ ನಾವು ಬದುಕುತ್ತಿದ್ದೇವಲ್ಲ ಎಂಬ ಸಮಝಾಯಿಸಿ ಹೇಳಿಕೊಳ್ಳುವ ಸಂಗತಿ ಇದಲ್ಲ. ಗಂಗಮ್ಮ ಬದುಕಿದ್ದ ಕಾಲಘಟ್ಟವು ತೀರ ಕರ್ಮಠ ಜಮೀನ್ದಾರಿ ವ್ಯವಸ್ಥೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕ್ರಿ.ಶ 1750-60 ರ ಆಸುಪಾಸಿನದು. ಅದೂ ಅವಳು ಬದುಕಿದ್ದು ಬ್ರಿಟೀಷ್ ಭಾರತವಲ್ಲದ ಪಕ್ಕಾ ಫ್ಯೂಡಲ್ ಕಪಿಮುಷ್ಟಿಯಲ್ಲಿದ್ದ ನಿಜಾಂ ರೇಜಿಮೆಂಟಿನಲ್ಲಿ ಎಂಬುದು ಗಮನಿಸಬೇಕು.

ಗಂಗಮ್ಮನೆಂಬ ಈ ತತ್ವಪದಕಾರ್ತಿಯು ಕನ್ನಡ ನಾಡಿನ ಆಧುನಿಕಪೂರ್ವ ಬಂಡಾಯ ಸಂತನೆಂದೆ ಖ್ಯಾತಿವೆತ್ತಿರುವ ಕಡಕೋಳ ಮಡಿವಾಳಪ್ಪನ ತಾಯಿ. ಈ ಅಂಶವು ಅವಳ ಕವಿತ್ವವನ್ನು ಉತ್ಕೃಷ್ಟಗೊಳಿಸಲು ಸಾಕು. ತೀರ ಅಪರೂಪದ ಆದರೆ ತೀವ್ರ ಬಂಡಾಯದ ಪದಗಳನ್ನು ಮತ್ತು ಬದುಕನ್ನು ಕಟ್ಟಿಕೊಂಡಿದ್ದ ಮಡಿವಾಳಪ್ಪ ತನ್ನ ಕಾಲಘಟ್ಟದ ಎಲ್ಲ ಬಗೆಯ ಪುರೋಹಿತಶಾಹಿ,

ಜಮೀನ್ದಾರಿಶಾಹಿ, ಅಧಿಕಾರಶಾಹಿಗಳನ್ನು ಎಗ್ಗಿಲ್ಲದೆ ಎದುರು ಹಾಕಿಕೊಂಡು ಆಧ್ಯಾತ್ಮಿಕ ದಂಗೆಗಿಳಿದವನು. ಅವನ ಪದಗಳೆಂದರೆ ನಿಗಿನಿಗಿ ಕೆಂಡದುಂಡೆಗಳು. ಜಾತಿ, ವರ್ಗ, ವರ್ಣದ್ವೇಷಗಳನ್ನು ಕಿಂಚಿತ್ತಾದರೂ ಇಂಬಿಟ್ಟುಕೊಂಡಿದ್ದರೆ ಅಂಥವರನ್ನು ಸಮೂಲವಾಗಿ ದಹಿಸಿ ಶುದ್ಧಗೊಳಿಸುವ ಅಗ್ನಿದಿವ್ಯಗಳಿವು. ಇಂಥ ಬಂಡಾಯಗಾರನಿಗೆ ಜನ್ಮ ನೀಡಿದ ಗಂಗಮ್ಮನ ಬದುಕು ಎಲ್ಲ ಮಹಿಳೆಯರಂತೆ ಮಾಮೂಲಿಯಾಗಿದ್ದರೆ ವಿಶೇಷವಾಗಿ ಬಗೆಯಬೇಕಾದುದು ಏನೂ ಇರುತ್ತಿರಲಿಲ್ಲವೇನೋ? ಮಾಮೂಲಿಯಾಗಿ ಆಕೆಯ ಕಾವ್ಯ ಶಕ್ತಿ, ಅವಳ ಪ್ರತಿಭೆ, ಸಾಮಾಜಿಕ ಕಳಕಳಿ ಇತ್ಯಾದಿಗಳನ್ನು ಚರ್ವಿತ ಚರ್ವಣ ನೆಲೆಯಲ್ಲಿ ಅಖೈರುಗೊಳಿಸುತ್ತ ನಡೆಯಬಹುದಿತ್ತು. ಆದರೆ ತಾಯಿ–ಮಗನ ಬದುಕು ಸಮಾಜ ಒಪ್ಪಿತವಲ್ಲದ ಆದರೆ ಸಾಮಾಜಿಕ ತಿರಸ್ಕಾರವು ಮೌಲ್ಯವಾಗಿಸಿದ ಮಡಿವಂತ ಮನಸ್ಸುಗಳ ಸಂಕುಚಿತತೆಯಲ್ಲಿ ಹುದುಗಿರುವುದರಿಂದ ಅವರ ಬದುಕನ್ನು ಬೇರೆಯದೆ ನೆಲೆಯಲ್ಲಿ ಹುಡುಕಬೇಕಾದ ಅವಶ್ಯಕತೆ ಇದೆ. ಇದಿಷ್ಟು ವಿವರಣೆಗೆ ಇಂಬು ಕೊಡುತ್ತಿರುವ ಅವರ ಬದುಕಿನ ಕೆಲ ಕಹಿ (ಮಡಿವಂತ ಸಮಾಜದ ದೃಷ್ಟಿಯಲ್ಲಿ) ಘಟನೆಗಳನ್ನು ವಿವರಿಸಿದಾಗಲೆ ಮೇಲಿನ ಪದದ ಪಲ್ಲವಿಯ ಪ್ರಖರತೆ ನಾಟುತ್ತದೆ.

ಗಂಗಮ್ಮ ಮೂಲತಃ ವಿಜಯಪುರ ಜಿಲ್ಲೆಯ ಸಣ್ಣಹಳ್ಳಿ ನಾಗಠಾಣದವಳು. ಬಾಲವಿಧವೆ. ವೃತ್ತಿಯಿಂದ ಗಾಣಿಗರು. ಅಂದರೆ ಎಣ್ಣೆ ತೆಗೆಯುವವರು ಅಥವಾ ತಲೆ ಮೇಲೆ ಹೊತ್ತು ಎಣ್ಣೆ ಮಾರುವವರು. ಆರ್ಥಿಕವಾಗಿ ಅಷ್ಟೇನು ಪ್ರಬಲರಲ್ಲದ ಜನಸಮುದಾಯವದು. ಮೇಲಾಗಿ ವಿಜಯಪುರಕ್ಕೆ ಬರಗಾಲ ಕಟ್ಟಿಟ್ಟ ಬುತ್ತಿ. ಹೀಗೆ ಬರಗಾಲ ಬಿದ್ದ ಹೊತ್ತಲ್ಲಿ ಗಂಗಮ್ಮ ಕೂಲಿಯನ್ನರಸುತ್ತ ಇದ್ದೊಬ್ಬ ಮುಪ್ಪಿನ ತಂದೆಯನ್ನು ಕರೆದುಕೊಂಡು ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಬಿದನೂರಿಗೆ ಬರುತ್ತಾಳೆ. ಅಲ್ಲಿಯೇ ಸುಗ್ಗಿ ಮಾಡುತ್ತ ಆಸರೆಗಾಗಿ ಊರ ಹೊರಗಿನ ಸನ್ಯಾಸಿ ಮಠದಲ್ಲಿ ವಾಸ್ತವ್ಯ ಹೂಡುತ್ತಾಳೆ. ಅಲ್ಲಿ ಆಗ ವಿರುಪಾಕ್ಷಯ್ಯ ಎಂಬುವವರು ಮಠಾಧ್ಯಕ್ಷರಾಗಿದ್ದರು. ಉಳಿದ ಹೊತ್ತಿನಲ್ಲಿ ಗಂಗಮ್ಮಳಾದರೂ ಮಠದ ಮತ್ತು ಸ್ವಾಮಿಗಳ ಸೇವೆ ಮಾಡಿಕೊಂಡು ಇರುತ್ತಿದ್ದಳು. ಅನಾಥೆ ಗಂಗಮ್ಮ, ಸನ್ಯಾಸಿಸ್ವಾಮಿ ವಿರುಪಾಕ್ಷಯ್ಯ. ವಾಸವಾಗಿದ್ದು ಪ್ರಶಾಂತ ಮಠದ ಪರಿಸರದಲ್ಲಿ .

ಅವರಿಬ್ಬರಲ್ಲಿ ಮನುಷ್ಯಸಹಜ ಬಯಕೆಗಳು ಕಾಡಿರಲು ಸಾಕು. ಸಾಮಿಪ್ಯ ಬೆಳೆದು ಬಸುರಿಯಾದದ್ದು, ಕಾಲ ಮಾಗಿದೊಡನೆ ಗಂಡುಮಗುವೊಂದಕ್ಕೆ ಜನ್ಮ ನೀಡಿದ್ದು ಸಹಜವಾದರೂ ಅಂದಿನ ಸಮಾಜ ಅದನ್ನು ಸ್ವೀಕರಿಸಿದ ಬಗೆ. ಅವರು ಅದನ್ನು ಎದುರಿಸಿದ ರೀತಿ. ತಮ್ಮಿಬ್ಬರ ಸಾಮಿಪ್ಯವನ್ನು ಜಗಜ್ಜಾಹೀರವಾಗಿ

ಒಪ್ಪಿಕೊಂಡು ನಿಂತ ಸಾಧನೆ ಇವೆಲ್ಲವೂ ಹಲವು ತಥ್ಯಗಳನ್ನು ಹೊಳೆಸುತ್ತವೆ. ಅಂದಿನ ಮಡಿವಂತ ಸಮಾಜ ಗಂಗಮ್ಮನನ್ನು ಹಾದರಗಿತ್ತಿ ಎಂದು, ಮಗು ಮಡಿವಾಳಪ್ಪನನ್ನು ಹಾದರದ ಸಂತಾನವೆಂದು ಹಳಿದು, ಹಂಗಿಸಿದ ನಡೆಗಳು ಹತ್ತಾರು ಪದಗಳಲ್ಲಿ ದಾಖಲಾಗಿವೆ. ಹೆಜ್ಜೆ ಹೆಜ್ಜೆಗೂ ತಾಯಿ–ಮಗನನ್ನು ಅಪಮಾನಿಸಿದಷ್ಟು ಅವರಿಬ್ಬರೂ ಪುಟಿದು ನಿಂತು ತಮ್ಮನ್ನು ಎಷ್ಟಾಬ್ಲಿಷ್ ಮಾಡಿಕೊಂಡ ಬಗೆ ಮಾತ್ರ ಗೌರವಾಶ್ಚರ್ಯ ಮೂಡಿಸದೆ ಇರದು. ಜನರು ತನ್ನನ್ನು ನೀತಿಗೆಟ್ಟವಳೆಂದು ಹಳಿಯಬಹುದು, ಆದರೆ ತಾನು ಯಾವತ್ತೂ ನೀತಿಗೆಟ್ಟವಳಲ್ಲ. ನೀತಿ ಎಂದರೆ ಏನು? ಅನೈತಿಕ ಸಂಬಂಧ ಎಂಬುದು ಯಾವುದು? ಇತ್ಯಾದಿಗಳ ಕುರಿತು ಇರುವ ಪುರುಷ ಪ್ರಧಾನ ವ್ಯವಸ್ಥೆ ಹುಟ್ಟು ಹಾಕಿದ ಸಿದ್ಧ ಮಾದರಿಯ ಪೊಳ್ಳು ನಂಬಿಕೆಗಳನ್ನು ಗಂಗಮ್ಮ ಒಡೆದು ಹಾಕುತ್ತಾಳೆ. ತನ್ನ ಮತ್ತು ವಿರುಪಾಕ್ಷಸ್ವಾಮಿಗಳ ಸಂಬಂಧವನ್ನು ಅವಳು ಕೇವಲ ನೈಸರ್ಗಿಕ ನೆಲೆಯಲ್ಲಿ ಮಾತ್ರವಲ್ಲದೆ ತಾತ್ವಿಕ ನೆಲೆಯಲ್ಲಿ, ಅದಕ್ಕೂ ಮೀರಿ ಆಧ್ಯಾತ್ಮಿಕ ಹುಡುಕಾಟದ ನೆಲೆಯಲ್ಲಿ ಹರವಿ ಬಿಡುತ್ತಾಳೆ. ಮುಂದುವರೆದು ಅವಳು ಹೇಳುವುದೇನೆಂದರೆ

**ತುಪ್ಪ ಎಣ್ಣೆ ಎರೆಯಲಿಲ್ಲ**
**ಚಪ್ಪಳಿಗೆ ಬಾರಿಸಲಿಲ್ಲ**
**ಮುಪ್ಪಿನವರು ಕೇಳಿರೆಲ್ಲ**
**ಅಪ್ಪನೆಂದು ಕರೆಯಲಿಲ್ಲ ॥ 1 ॥**

**ಊರ ಕೇರಿ ತಿರುಗಲಿಲ್ಲ**
**ಜಾರತನವು ಮಾಡಲಿಲ್ಲ**
**ಪಾರ ಒಂದು ಹುಟ್ಟಿತಲ್ಲ**
**ನಾರೇರು ಕೇಳಿರಿ ಸೊಲ್ಲ ॥ 2 ॥**

**ಉಂಡು ಉಟ್ಟು ತಿರುಗಲಿಲ್ಲ**
**ಮಿಂಡಿ ನಾ ಬಸಿರಾಗಲಿಲ್ಲ**
**ಪುಂಡ ಮಹಾಂತೇಶ ನಿನ್ನ**
**ಕಂಡು ಹೆಸರು ಇಟ್ಟೇನಲ್ಲ ॥ 3 ॥**

ಕೇಳುವವರ ರೋಮಗಳು ನಿಗುರಿ ನಿಲ್ಲುವ ಪದವಿದು. ತಾನು ವಿರೂಪಾಕ್ಷ ಸ್ವಾಮಿಯೊಂದಿಗೆ ಬೆಳೆಸಿದ ಸಂಬಂಧವು ಕೇವಲ ತಾತ್ಪೂರ್ತಿಕ ದೈಹಿಕ ಸಂಬಂಧವಲ್ಲ. ಪರಸ್ಪರ ಅನ್ಯೋನ್ಯವಾಗಿ ಮನಸಾರೆ ಪ್ರೀತಿಸಿ ತುಂಬಾ ಎಚ್ಚರದಲ್ಲಿಯೆ ಇಟ್ಟ ಹೆಜ್ಜೆ ಅದು. ಅದನ್ನು ಸಮಾಜ ತುಚ್ಛೀಕರಿಸುವುದಾದರೆ,

ಅಂಥ ಸಮಾಜದಿಂದ ತನಗೆ ಆಗಬೇಕಾದದ್ದು ಏನೂ ಇಲ್ಲ ಎನ್ನುತ್ತಾಳೆ. ಪ್ರೇಮದ ಪರಾಕಾಷ್ಠೆಯು ಎಂಥ ಅವಘಡಗಳನ್ನಾದರೂ ತೃಣೀಕರಿಸುತ್ತದೆ ಎಂಬುದಕ್ಕೆ ಗಂಗಮ್ಮನ ಈ ಪದಗಳೆ ಸಾಕ್ಷಿ. ಆದ್ದರಿಂದಲೆ ಅವಳು ಪದದುದ್ದಕ್ಕೂ ಸಾಮಾಜಿಕರನ್ನು ಸಂಬೋಧಿಸುತ್ತ ಮುಪ್ಪಿನವರು ಕೇಳಿರಿ, ನಾರಿಯರೇ ಕೇಳಿರಿ ಎಂದೆಲ್ಲಾ ಭಂಡಿಗೆ ನಿಲ್ಲುತ್ತಾಳೆ. ಅದು ಅಪ್ಪಟ ಪ್ರಾಮಾಣಿಕತೆಯಲ್ಲಿ ಮೂಡಿದ ಸಕಾರಾತ್ಮಕ ಭಂಡುತನವಾಗಿದೆ. ಗಂಡನುಳ್ಳ ಬಾಲೆಯರ ಬಸಿರನ್ನು ಸಂಭ್ರಮಿಸುವ; ಅದನ್ನೆ ಆಕೆಯ ಗೌರವವೆಂದು ಪರಿಗಣಿಸುವ ಈ ಸಮಾಜ ಸಾಂಪ್ರದಾಯಿಕ ಗಂಡನಿಲ್ಲ ಎಂಬ ಕಾರಣಕ್ಕೆ ಅದೇ ಬಸಿರನ್ನು ತುಚ್ಛೀಕರಿಸಿದ್ದನ್ನು ಕಂಡು ಗಂಗಮ್ಮ ರೋಸಿ ಹೋಗುತ್ತಾಳೆ. ಆದ್ದರಿಂದಲೆ ಅವಳು ಈ ಸಂದರ್ಭದಲ್ಲಿ ತನಗಾರೂ ತುಪ್ಪ, ಎಣ್ಣೆ ಹಚ್ಚಿ ಎರೆಯಲಿಲ್ಲವೆಂತಲೂ ಕನಿಷ್ಟ ಒಳ್ಳೆಯ ಊಟವು ಹಾಕಲಿಲ್ಲ ಎಂದು ಮಾರ್ಮಿಕವಾಗಿ ಹೇಳುತ್ತಾಳೆ. ಮತ್ತೂ ಮುಂದುವರೆದು ತನ್ನನ್ನೆ ತಾನು 'ಮಿಂಡಿ ನಾ ಬಸಿರಾಗಲಿಲ್ಲ' ಎಂದು ಹೇಳಿದ್ದಂತೂ ತೀರ ಮರ್ಮ ಭೇದಕ ಎನಿಸುತ್ತದೆ. ತನ್ನ ಬಸಿರೊಂದು ಇಲ್ಲಿ ಬಸಿರೆ ಅಲ್ಲ. ಏಕೆಂದರೆ ಜಡ ಸಾಂಪ್ರದಾಯಿಕ ಸಮಾಜದಲ್ಲಿ ವಿಧವೆಗೆ ಶರೀರ ಸುಖ ಅನುಭವಿಸುವ ಹಕ್ಕಿಲ್ಲವಾದರೆ ಇನ್ನು ಬಸಿರಾಗುವ ಅವಕಾಶ ಎಲ್ಲಿಯದು? ಸಮಾಜದ ಈ ವಿಪರ್ಯಾಸವು ಅದೆಷ್ಟು ಮುಗ್ಧ ವಿಧವಾ ಬಸುರಿಯರನ್ನು ಬಲಿ ತೆಗೆದುಕೊಂಡಿದೆಯೋ ಲೆಕ್ಕವಿಟ್ಟವರಾರು? ಈ ಎಲ್ಲ ವಿರೋಧಗಳ ನಡುವೆಯೂ ಗಂಗಮ್ಮ ಸಂಕುಚಿತ ಕ್ರೂರ ಸಮಾಜವನ್ನು ಎದುರಿಸಿ ಬದುಕಿ ತೋರಿಸಿದ್ದು ಇದೆಯಲ್ಲ ಅದು ಇಂದಿನ ಸ್ತ್ರೀವಾದಿ ನಿಲುವನ್ನು ಹೊಳೆಯಿಸುತ್ತದೆ. ಗಂಗಮ್ಮನಿಗೆ ಇಂದಿನ ಸ್ತ್ರೀವಾದದ ಪರಿಕಲ್ಪನೆಯೂ ಇರಲಿಕ್ಕಿಲ್ಲವಾದರೂ ಅವಳಂಥ ಎಷ್ಟೋ ಮಹಿಳೆಯರು ತಮ್ಮ ನೆಲೆಯಲ್ಲಿಯೆ ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಧಿಕ್ಕರಿಸಿ ಬದುಕಿದ್ದು ಇತಿಹಾಸದಲ್ಲಿ ಮೌನವಾಗಿಯೆ ಅಡಗಿಕೊಂಡಿದೆ. ಅಂಥವುಗಳನ್ನು ಹೆಕ್ಕಿ ದಾಖಲಿಸುವ ಮೂಲಕವೇ ಭಾರತದ ಸ್ತ್ರೀವಾದವು ತನ್ನ ಪರಂಪರೆಯ ಕೊಂಡಿಯನ್ನು ಹೆಣೆದುಕೊಳ್ಳಬಹುದೆಂದು ತೋರುತ್ತದೆ. ವಚನಕಾರ್ತಿಯರು ರಚಿಸಿರುವ ಸ್ವರವಚನಗಳನ್ನು ಬದಿಗಿಟ್ಟು ಹಾಡುಗಬ್ಬ ಪರಂಪರೆಯನ್ನು ಗುರುತಿಸುವುದಾದರೆ ಸಧ್ಯದ ಮಟ್ಟಿಗೆ ಗಂಗಮ್ಮಳೇ ಮೊದಲ ಸಾಲಿನ ತತ್ವಪದಕಾರ್ತಿಯಾಗಿ ಗಮನ ಸೆಳೆಯುತ್ತಾಳೆ.

ಹಾಗೆ ನೋಡಿದರೆ ಮಹಿಳೆಯರು ಹಾಡುಗಬ್ಬ ಪ್ರಕಾರವನ್ನು ಬಳಸಿ ಬರೆದುದ್ದಕ್ಕೆ ತುಂಬಾ ದೀರ್ಘವಾದ ಪರಂಪರೆ ಇದೆ. ಇಂದು ನಾವು ಜಾನಪದ ಸಾಹಿತ್ಯವೆಂದು ಗುರುತಿಸುತ್ತಿರುವ ಮೊತ್ತದಲ್ಲಿ ಮಹಿಳೆಯರ ಪಾಲೂ ಇಲ್ಲದಿಲ್ಲ.

ಪದಗಳ ಅರ್ಥ, ಭಾವ, ಶೈಲಿಗಳೆಲ್ಲವೂ ಸ್ತ್ರೀತ್ವವನ್ನು ಪ್ರತಿನಿಧಿಸುತ್ತಿರುವಲ್ಲಿ ಮಹಿಳೆಯರ ರಚನೆಗಳು ಗಮನ ಸೆಳೆಯದೆ ಇರವು. ತತ್ವಪದವೆಂದು ಇಂದು ಗುರುತಿಸುತ್ತಿರುವ ಸಾಹಿತ್ಯ ಪ್ರಕಾರದಲ್ಲಿ ಮಹಿಳೆಯರ ರಚನೆಗಳನ್ನು ಗಮನಿಸುವುದಾದರೆ ಬಿದನೂರಿನ ಗಂಗಮ್ಮನಿಂದಲೆ ಈ ಪರಂಪರೆಯು ಢಾಳವಾಗಿ ತೆರೆದುಕೊಳ್ಳುತ್ತದೆ. ಈಕೆಯ 6 ಪದಗಳು ದೊರೆತಿವೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತತ್ವಪದಗಳದು ತುಂಬಾ ವಿಸ್ತಾರವಾದ ಭಾಗ. ವಚನೋತ್ತರ ಕಾಲಘಟ್ಟದಲ್ಲಿನ ತೀರ ವ್ಯಾಪಕವಾದ ಪ್ರಕಾರವಿದು. ಮೊದಲ ಬಾರಿಗೆ ಸಮಗ್ರ ತತ್ವಪದಕಾರರ 32 ಸಂಪುಟಗಳು ಪ್ರಕಟವಾಗಿದ್ದು ಇನ್ನೂ 20 ಸಂಪುಟಗಳು ಪ್ರಕಟನಾ ಹಂತದಲ್ಲಿವೆ. ಎಲ್ಲ ಮತ, ಪಂಥ, ಪರಂಪರೆಗಳಿಂದ ಬಂದವರು ಇಲ್ಲಿದ್ದಾರೆ. 500 ಕ್ಕೂ ಹೆಚ್ಚು ತತ್ವಪದಕಾರರು ಕಾಣಿಸಿಕೊಂಡಿದ್ದಾರೆ. ಇದರಲ್ಲಿ ಮಹಿಳೆಯರ ಪಾಲುದಾರಿಕೆ ಸಂಖ್ಯಾದೃಷ್ಟಿಯಿಂದ ಅಷ್ಟೇನು ಗಮನಾರ್ಹ ಅಲ್ಲ. ಕನ್ನಡ ಹಾಡುಗಬ್ಬ ಪರಂಪರೆಯನ್ನು 12 ನೇ ಶತಮಾನದ ಅಕ್ಕಮಹಾದೇವಿಯೊಂದಿಗೆ ಗುರುತಿಸುವುದಾದರೆ 20 ತತ್ವಪದಕಾರ್ತಿಯರಲ್ಲದೆ ಕೆಲವು ಅಜ್ಞಾತ ಪದಕಾರ್ತಿಯರು ದೊರೆಯುತ್ತಾರೆ. ಗಮನಿಸಬೇಕಾದ ಸಂಗತಿ ಎಂದರೆ ದೊರೆತವರಲ್ಲಿಯೇ ಗಂಗಮ್ಮನಂಥ ಉತ್ಕೃಷ್ಟ ಸಾಧಕಿಯರು ಸೃಜನಶೀಲತೆಯನ್ನು ಹಾಳತವಾಗಿ ಬಳಸಿಕೊಂಡವರು ಇದ್ದಾರೆ.

ತೀರ ಪ್ರಾರಂಭದಲ್ಲಿ ಉಡುತಡಿಯ ಅಕ್ಕಮಹಾದೇವಿ, ಕಲ್ಯಾಣದ ನೀಲಾಂಬಿಕೆ, ಕೊಡೇಕಲ್ ಮಹಾದೇವಮ್ಮ (ನೀಲಮ್ಮ), ಹಾಗಲ್ವಾಡಿಯ ಮುದಿಯಪ್ಪ ನಾಯಕರ ಮಗಳು ಮುಂತಾದವರು ಪದಗಳನ್ನು ರಚಿಸಿದರೆ, 18 ನೇ ಶತಮಾನದಿಂದೀಚೆಗೆ ಬಿದನೂರ ಗಂಗಮ್ಮ, ಖೈನೂರಿನ ರಾಚವ್ವ, ಜತ್ತ ಶಿವಲಿಂಗವ್ವ, ತುರುವಕೆರೆ ವೀರದಾಸಮ್ಮ, ರಾಯಚೂರಿನ ಹನುಮಂತವ್ವ, ವಂಗಿ ಚಂದ್ರಮ್ಮ, ಸೊಲ್ಲಾಪೂರದ ಜಯದೇವಿತಾಯಿ ಲಿಗಾಡೆ, ಬಸವಕಲ್ಯಾಣದ ಫೈಮುದಾ ಫಾತಿಮಾ, ಹುಲಸೂರಿನ ಗೌರಮ್ಮ, ಧನ್ನೂರಿನ ತಾಯಮ್ಮ, ಯನಗುಂಟಿ ವೀರಮ್ಮ, ಮೈಸೂರಿನ ಹಸನ್ ಮಾತಾ, ದೇವಣಗಾಂವದ ಸಿದ್ಧಲಿಂಗಮ್ಮ, ಗುಡೂರು ತುಳಜಾಬಾಯಿ, ತಿಕೋಟಿಯ ಮಥುರಾಬಾಯಿ, ಮಂಗಳೂರಿನ ಗಂಗಾಬಾಯಿ ( ವಿಜಯಪುರ ಜಿಲ್ಲೆಯ ಮಂಗಳೂರು) ಹೀಗೆ ಕೆಲವು ಮಹಿಳೆಯರ ತತ್ವಪದಗಳು ದೊರೆಯುತ್ತವೆ. ಇವರಲ್ಲಿ ಶಿವಾದ್ವೈತಿಗಳು, ಶರಣಾನುಸಂಧಾನಿಗಳು, ಅಚಲರು, ಆರೂಢರು, ನಾಥ ಪರಂಪರೆಯವರು, ಸೂಫಿಗಳು ಹೀಗೆ ಕರ್ನಾಟಕದಲ್ಲಿ ಪ್ರಚಲಿತವಿದ್ದ ಎಲ್ಲ ಅವೈದಿಕ ತಾತ್ವಿಕ ಧಾರೆಗಳ ಅನಸಂಧಾನಿಗಳು ಇದ್ದಾರೆ. ಇವರೆಲ್ಲರ ಆಧ್ಯಾತ್ಮಿಕ ಸಾಧನೆ, ತಾತ್ವಿಕ ಎತ್ತರ–

ಬಿತ್ತರಗಳು ಪುರುಷ ಲೋಕಕ್ಕಿಂತ ಕಡಿಮೆ ಏನಿಲ್ಲ. ಅಸಲಿಗೆ ಶ್ರಮಣ ಪರಂಪರೆಯ ಗುರುಪಂಥಗಳಲ್ಲಿ ಲಿಂಗ ತಾರತಮ್ಯಕ್ಕೆ ಅಷ್ಟಾಗಿ ಅವಕಾಶವಿಲ್ಲವಾದರೂ ನಾವು ಉಸಿರಾಡುತ್ತಿರುವ ಸಮಾಜ ವ್ಯವಸ್ಥೆಯಲ್ಲಿ ಲಿಂಗಭೇದ, ಲಿಂಗ ನಿರಾಕರಣೆಗಳಂತೂ ಇದ್ದೇ ಇವೆ ತಾನೇ? ಇದನ್ನು ಕೆಲವು ತತ್ವಪದಕಾರ್ತಿಯರು ಪ್ರಶ್ನಿಸದೆ ಬಿಟ್ಟಿಲ್ಲ. ಬಸವಕಲ್ಯಾಣದ ಫೈಮುದಾ ಫಾತಿಮಾ ಎಂಬಾಕೆ 'ತಾಯಿ' ಎಂಬುದನ್ನೆ ಸ್ತ್ರೀತ್ವದ ಚಹರೆಯಾಗಿಸಿಕೊಂಡು

**'ಮಾ' ಅಂದರ ಅಕಿ ಯಾರು**
**ಧರತೀ ಮ್ಯಾಲಿನ ಖರೇ ದೇವರು ॥**

**ಬಾಯಿಗಿ ಬಂದಂಗ ಆಕಿಗಿ ಬೈತಿರಿ**
**ಮಸೀದಿಗಿ ಹೋಗಿ ನಮಾಜ ಮಾಡತಿರಿ**
**ತಾಯಿನೇ ಮಸೀದಿ ಅಂತ ತಿಳಿರಿ**
**ಸೇವಾ ಮಾಡುದೆ ನಮಾಜ ತಿಳಕೋರಿ ॥**

**ರೊಕ್ಕಿನ ಧೀಮಾಕ ನೀವು ಬಿಡರಿ**
**ಆಕಿಯಿಲ್ಲದೆ ನೀವು ಎಲ್ಲಿಂದ ಬಂದೀರಿ**
**ಹಡದಕ್ಕಿ ಮೂಲ ಮಗಳು ನಾ ಫಾತಿಮಾ**
**ನಡಕೊಂಡೆ ನಾ ಖುದಾನೇ ಆಕಿಯೆಂದು ॥**

ಮೇಲ್ನೋಟಕ್ಕೆ ಇದು ತೀರ ವಾಚ್ಯ. ಅದರಲ್ಲಿಯೂ ಈಕೆ ಹೈದ್ರಾಬಾದ ಕರ್ನಾಟಕದ ಉರ್ದುಮಿಶ್ರಿತ ಕನ್ನಡ ಪ್ರದೇಶದಿಂದ ಬಂದವಳು. ಪದದುದ್ದಕ್ಕೂ ಉರ್ದು ಮತ್ತು ದೇಸಿ ಪದಗಳು ಇಡುಕ್ಕಿರಿದಿವೆ. ಇಲ್ಲಿ ಆಕೆ ತಾಯಿ ಎಂಬ ಹೆಣ್ ಜೀವವನ್ನು ಗೌರವಿಸಬೇಕೆಂದು ಹೇಳುತ್ತಾಳೆ. ಉಪದೇಶಪರ ಧಾಟಿಯಲ್ಲಿರುವ ಈ ಪದದಲ್ಲಿ ತಾಯಿ ಎಂಬ ಸ್ಥಿತಿಯನ್ನು ವೈಭವೀಕರಿಸಿಲ್ಲವಾದರೂ ಸಂತಾನ ಸೃಷ್ಟಿಯಲ್ಲಿ ಪ್ರಧಾನ ಪಾತ್ರ ವಹಿಸುವ ಮಹಿಳೆಯರನ್ನು ಈ ಸಮಾಜ ತುಚ್ಛೀಕರಿಸುತ್ತಿರುವ ಬಗೆಗೆ ಸಾತ್ವಿಕ ಕೋಪವನ್ನು ತಾಯ್ತನದ ಬಗೆಗೆ ತಾಳಬೇಕಾದ ಗೌರವವನ್ನು ಕುರಿತು ಎಚ್ಚರ ಮೂಡಿಸುತ್ತಾಳೆ.

ಕಡಕೋಳ ಮಡಿವಾಳಪ್ಪನವರ ಶಿಷ್ಯರಲ್ಲೊಬ್ಬ ಖೈನೂರು ಕೃಷ್ಣಪ್ಪ. ಆತನ ಶಿಷ್ಯಳು ಕಂಬಾರ ರಾಚವ್ವ. ಈಕೆಯದು ತೀರ ದುರಂತ ಬದುಕು. ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಪುಟ್ಟ ಹಳ್ಳಿ ಖೈನೂರು. ಅಲ್ಲಿಯ ಕಂಬಾರ ಜಾತಿಯಲ್ಲಿ ಹುಟ್ಟಿದ ಈಕೆ ಬಾಲ್ಯದಲ್ಲಿಯೆ ಪಾಲಕರನ್ನು ಕಳೆದುಕೊಂಡಿದ್ದ ಅನಾಥೆ. ತಳಸಮುದಾಯದ ಅನಾಥ ಮಹಿಳೆಯೆಂದರೆ ಸಾಕಲ್ಲವೆ? ಅವಳನ್ನು

ಊರಿನ ಸಾಹುಕಾರನೊಬ್ಬ ಅನಧಿಕೃತ ಗೆಳತಿಯಾಗಿಟ್ಟುಕೊಂಡಿದ್ದನು. ಅವನೊಂದಿಗೆ ಸಾಂಗತ್ಯ ಬೆಳೆಸಿಕೊಳ್ಳದೆ ಗತಿಯಿಲ್ಲ. ಕೆಲವು ದಿವಸಗಳಾದ ಬಳಿಕ ಬಂಡಾಯ ಸಂತನಾಗಿದ್ದ ಅದೇ ಊರಿನ ಕೃಷ್ಣಪ್ಪನ ಪದರಿಗೆ ಬರುವ ರಾಚವ್ವ. ಗುರುವಿನಲ್ಲಿ ತನ್ನ ಸಂಕಟ ತೋಡಿಕೊಂಡು ಹೇಗಾದರೂ ಮಾಡಿ ಆ ಕಾಮಿ ಸಾಹುಕಾರನಿಂದ ತನಗೆ ವಿಮೋಚನೆ ಕೊಡಿಸಬೇಕೆಂದು ಕೇಳಿಕೊಂಡಳಂತೆ. ಕೃಷ್ಣಪ್ಪ ಉಪಾಯವೊಂದನ್ನು ಹೂಡಿ ಹೀಗಾದರೆ ಸಾಹುಕಾರ ನಿನ್ನನ್ನು ಬಿಡಲಾರ, ಸಾರ್ವಜನಿಕವಾಗಿ ಆತನ ಮಾನ ಹರಾಜಿಗೆ ಇಡಬೇಕೆಂದು ಹೇಳಿ ಧೈರ್ಯ ತುಂಬುತ್ತಾರೆ. ಭಜನೆ ಗೋಷ್ಠಿಗಳಲ್ಲಿ ಸದಾ ತೊಡಗಿಕೊಂಡಿರುತ್ತಿದ್ದ ಆಕೆ. ಗುರುಪರಂಪರೆಯ ಪದಗಳನ್ನು ಹಾಡುತ್ತಲೆ ಸ್ವಂತ ರಚಿಸುವಷ್ಟು ಪರಿಣತಿ ಸಾಧಿಸಿರಲು ಸಾಕು. ಅಂತೆಯೇ ಅವಳು ಮರುದಿನದ ಗೋಷ್ಠಿಯಲ್ಲಿ ತನ್ನೊಂದಿಗಿನ ಆತನ ಸಂಬಂಧವನ್ನು ಕುರಿತು

**ನಾಚಿಕಿಲ್ಲೊ ಭಾಡ್ಯಾ ನಮಗ್ಯಾಕ ತಡವತಿ**
**ಛೀ ಛೀ ಅನಸಿಕೊಂಡಲ್ಲಿ ಬಂದು ಯಾಕ ಡೊಗ್ಗತಿ ॥ ಪ ॥**
**ಸಾಚಾನಂಗ ಮೋತಿ ಮ್ಯಾಲ ಎತ್ತಿ ತಿರಗತಿ**
**ಕಂಬಾರ ರಾಚಿ ನರಕ ತಿಂದು ಏಸು ದಿನ ಬದಕತಿ॥ ಉ ಪ॥**

**ಗುರುವಿಗೊಪ್ಪಸಿದಂಥ ಚಿಟಕಿ ಹಿಂದಕ ಬೇಡತಿ**
**ಇಕ್ಕೂಳ ಜ್ವಾಳಾ ತಿಂದು ನೀನು ಕೈ ಬಾಚಿ ಹಾಕತಿ**
**ಬಟಗೇರಿಲಿಂದ ಸುಳ್ಳೇ ಪತ್ರ ತಂದು ತೋರಸತಿ**
**ಕರಮಣಿ ಕಟ್ಟಿಗೊಂಡೀನಿ ಅಂತ ನನ್ನ ಹಾಟ ಕುಡಿತಿ ॥ 1 ॥**

**ತುಡಗಾ ಮಾಡಿದಂಥ ಭಾಡ್ಯಾಗ ನಾಚಿಕಿಲ್ಲೇಳೋ**
**ನನ್ನ ಎಳಕೊಂಡ ಹೋಗಾ ಕುರಸಾಲ್ಯಾನ ತಾಯೇನ ಹಡದಾಳೋ**
**ಪಡಕೊಂಡಂಥ ಕೃಷ್ಣನ ಪಾದ ಬಿಟ್ಟವಳಲ್ಲೇಳೋ**
**ಮುಡದಾರ ಮಲ್ಲ್ಯಾನ ಎದಿ ಮ್ಯಾಲ ಒದ್ದು ತಿರಗುವ ಖೈನೂರ**
**ಊರವಳೋ ॥ 2 ॥**

ಇದೊಂದು ತೀರ ಬಂಡಾಯದ ಪದ. ಭಾಷೆ ಅಪ್ಪಟ ಉತ್ತರ ಕರ್ನಾಟಕದ ದೇಸಿ. ಬೇಡವೆಂದರೂ ತನ್ನನ್ನು ಒತ್ತಾಯದಿಂದ ಭೋಗಿಸುತ್ತಿದ್ದ ಆ ಊರಿನ ಪುಂಡನೊಬ್ಬನ ಆಟಾಟೋಪವನ್ನು ಧಿಕ್ಕರಿಸಿ ಬರೆದ ಈ ಪದವನ್ನು ಸಾರ್ವಜನಿಕ ಸಭೆಯಲ್ಲಿ ಹಾಡಿ ' ಮುಡದಾರ ಮಲ್ಲಪ್ಪ' ಎಂಬುವವನ ಪುಂಡಾಟಿಕೆಯನ್ನು ಅವಳು ಹತ್ತಿಕ್ಕಿದ್ದಳಂತೆ. ಗುರುಪಂಥಿಯ ಅನುಸಂಧಾನ ಅವಳನ್ನು ಅದೆಷ್ಟು ನಿರ್ಭಿಢೆ ಹಂತಕ್ಕೆ ತಂದು ನಿಲ್ಲಿಸಿತ್ತೆಂದರೆ, ಅವಳು ಆತನೊಂದಿಗಿನ ತನ್ನ

ದೈಹಿಕ ಸಂಬಂಧವನ್ನು ಜಗಜ್ಜಾಹೀರುಗೊಳಿಸುವುದಲ್ಲದೆ ಇನ್ನು ಮುಂದೆ ತನ್ನ ತಂಟೆಗೆ ಬರಲಾಗದು ಎಂದು ಎಚ್ಚರಿಕೆ ನೀಡುತ್ತಾಳೆ. ಈಗಾಗಲೇ ತಾನು ಗುರುವಿನ ಮಗಳಾಗಿದ್ದು ತನ್ನ ಶರೀರವು ಗುರುವಿಗೊಪ್ಪಿಸಿದ ಚಿಟಿಕೆ ( ಚಿಕ್ಕ ಮಣ್ಣಿನ ಪಾತ್ರೆ). ಆದ್ದರಿಂದ ಅದನ್ನು ಮರಳಿ ನಿನ್ನಂಥ ಕಾಮಿಗೆ ಒಪ್ಪಿಸಲಾಗದು ಎನ್ನುತ್ತಾಳೆ. ಅಷ್ಟೇ ಅಲ್ಲ ಆತನನ್ನು ತುಡುಗ (ಕಳ್ಳ) ಕುರಸಾಲ್ಯಾ ( ದೇಸಿ ಬಯ್ಗಳ) ಭಾಡ್ಯಾ (ಬಯ್ಗಳ) ಎಂದೆಲ್ಲಾ ಖಾರವಾಗಿ ಬಯ್ದು ತರಾಟೆ ತೆಗೆದುಕೊಳ್ಳುತ್ತಾಳೆ. ಇದು ಅವಳ ಸಾಮಾಜಿಕ ಎಚ್ಚರದ ಹಂತ. ಅದನ್ನು ಸಾಧ್ಯವಾಗಿಸಿದ್ದು ಬಂಡೆದ್ದ ಆಧ್ಯಾತ್ಮದ ಸಂತತನ. ಹಲವು ತತ್ವಪದಕಾರ್ತಿಯರು ಈ ಬಗೆಯ ಬಂಡಾಯುವನ್ನು ಹೂಡಿದ್ದು ಎದ್ದು ಕಾಣಿಸುತ್ತದೆ. ಅವರು ಮಡಿವಂತ ಸಮಾಜದ ನಂಬಿಕೆಗಳನ್ನು ಒಡೆಯುತ್ತಾರೆ. ಇವರಲ್ಲಿ ಹೆಚ್ಚಿನವರು ಆರೂಢ, ಅವಧೂತ ಪರಂಪರೆಗೆ ಸೇರಿದವರಾದ್ದರಿಂದ ಲೋಕಮೂಲ ರಚನೆಗಳನ್ನು ಒಡೆಯುವಲ್ಲಿಯೇ ಸಮಾಜದಲ್ಲಿ ಮನೆ ಮಾಡಿಕೊಂಡಿರುವ ಎಲ್ಲ ಬಗೆಯ ಅವಘಡಗಳನ್ನು ದಿಕ್ಕರಿಸುತ್ತಾರೆ.

ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ, ಲಿಂಗ ತಾರತಮ್ಯ, ವರ್ಗ ಸಂಘರ್ಷಗಳನ್ನು ಕುರಿತು ಈ ತತ್ವಪದಕಾರ್ತಿಯರು ನೇರವಾಗಿ ಮಾತಾಡುವುದಿಲ್ಲವಾದರೂ ಲಿಂಗಮೂಲದ ಎಲ್ಲ ಮಿತಿಗಳನ್ನು ಯಾವ ಎಗ್ಗಿಲ್ಲದೆ ಮೀರಿ ನಿಲ್ಲುತ್ತಾರೆ. ಈ ಮೀರುವಿಕೆಯು ಅವರಿಗೆ ಅಂತರಂಗದ ಹುಡುಕಾಟವಾಗಿಯೂ ಇನ್ನೊಂದೆಡೆ ಮನುಷ್ಯರು ನಿರ್ಮಿಸಿಕೊಂಡಿರುವ ಎಲ್ಲ ಬಗೆಯ ಬಂಧನಗಳನ್ನು ಕಡಿದುಕೊಳ್ಳುವ ಮಾರ್ಗವಾಗಿ ತೆರೆದುಕೊಳ್ಳುತ್ತದೆ. ಕೆಲವೊಮ್ಮೆ ಸಾಮಾಜಿಕ ವೈಷಮ್ಯಗಳನ್ನು ನೇರವಾಗಿಯೇ ಖಂಡಿಸಿದ್ದು ಇದೆ. ಹೊಲೆಯರ ಚಂದವ್ವ ಎಂದು ಗುರುತಿಸಿಕೊಂಡಿರುವ ತತ್ವಪದಕಾರ್ತಿಯೊಬ್ಬಳು ಬರೆದ ಒಂದು ರಚನೆ ಹೀಗಿದೆ.

**ಹೊಲೆಯ ಹೊಲೆಯ ಅಂತಾರಿವರು**
**ಹೊಲೆಯಗ ಊರ ಹೊರಗ ಇಟ್ಟಾರಿವರು**
**ಹೊಲಸು ಮಾಡಿದವರು ಹೊಲೆಯರೆಂದು**
**ತಿಳಿಯದೆ ಹೋದ ತಿಳಿಗೇಡಿ ಇವರು ॥ ಪ ॥**

ತುಂಬಾ ಖಾರವಾಗಿಯೇ ಜಾತಿವಾದಿಗಳ ಬಣ್ಣ ಬಯಲಿಗೆಳೆಯುತ್ತಾಳೆ. ಇನ್ನೂ ಮೂರು ನುಡಿಗಳವರೆಗೆ ಹಬ್ಬಿಕೊಂಡಿರುವ ಈ ಪದದಲ್ಲಿ ಅವಳು ಜಾತಿವಾದಿಗಳ ಕ್ರೂರ ಮುಖಗಳನ್ನು ಒಂದೊಂದಾಗಿ ಸ್ಪಷ್ಟಪಡಿಸುತ್ತ ಸನಾತನ ವ್ಯವಸ್ಥೆಯಲ್ಲಿನ ಪೊಳ್ಳುತನವನ್ನು ದಿಗ್ದರ್ಶಿಸುತ್ತಾಳೆ. ಇಂಥ ಪದಗಳ

ಸಂಖ್ಯೆ ಕಡಿಮೆ. ಇವರು ಮೂಲತಃ ಗುರುಪಂಥಿಯ ಸಾಧಕಿಯಾದ್ದರಿಂದ ಲೋಕಮೂಲದ ಎಲ್ಲ ಮಿತಿಗಳನ್ನು ಅತಿಕ್ರಮಿಸುತ್ತಾರೆ. ಹೀಗೆಂದು ಇವರು ವಾಸ್ತವ ಬದುಕಿಗೆ ಬೆನ್ನು ತೋರಿಸಿದವರಲ್ಲ. ಈ ಹಂತದಲ್ಲಿಯೇ ಪುರುಷ ತತ್ವಪದಕಾರರಿಂದ ಮಹಿಳೆಯರು ಭಿನ್ನವಾಗಿ ನಿಲ್ಲುತ್ತಾರೆ. ಆರೂಢರಾಗಿರುವ ತತ್ವಪದಕಾರರಿಗೆ ಸಂಸಾರವು ಮಾಯೆಯಾಗಿ ಕಾಡಿದರೆ ತತ್ವಪದಕಾರ್ತಿಯರಿಗೆ ಅದೊಂದು ನೀಗಿಸಿಕೊಳ್ಳಬೇಕಾದ ಅನುಭವವಾಗಿ ಕಾಣಿಸುತ್ತದೆ. ಒಟ್ಟಾರೆ ಕನ್ನಡ ತತ್ವಪದಕಾರ್ತಿಯರು ಲೋಕ-ಅಲೋಕಗಳನ್ನು ಅಭಿನ್ನವಾಗಿಯೇ ಇದಿರುಗೊಂಡು ತಮ್ಮ ಧೀಶಕ್ತಿಯ ಮೂಲಕವೇ ಎಲ್ಲವನ್ನು ಭರಿಸಿಕೊಂಡು ಬದುಕಿದ್ದು ಅವರ ಪದಗಳಲ್ಲಿ ದಾಖಲಾಗಿದೆ.

# ಸಮಾಜವಾದಿ ಪರಂಪರೆಯ ಕಿರುಝರಿ ಸಮತಾ ಬಳಗ

ಜಿ ಮಲ್ಲಿಕಾ ಬಸವರಾಜು

ಸಮಾಜವಾದದ ಅರ್ಥವನ್ನು ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ತಾರತಮ್ಯವಿಲ್ಲದ, ಭಿನ್ನಭೇದವಿಲ್ಲದ, ಸಮಪಾಲು–ಸಮಬಾಳು, ಸಹಿಷ್ಣುತೆ, ಸೌಹಾರ್ದತೆ, ಇರುವೆಯನ್ನೂ ನೋಯಿಸದ ಜೀವಕಾರುಣ್ಯ ಹೀಗೆ ಬಿಡಿಬಿಡಿಯಾಗಿ ಹೇಳಬಹುದೇ? ಹೌದು ಎಂದಾದರೆ ತುಮಕೂರಿನ ಸಮಾಜವಾದಿ ಪರಂಪರೆಗೆ ದೀರ್ಘವಾದ, ತುಂಬಾ ಹಳೆಯದಾದ ಇತಿಹಾಸವಿದೆ.

ಜಿಲ್ಲೆಯಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿಯೂ ಪ್ರಮುಖ ಪಾತ್ರವಹಿಸಿರುವ, ಪ್ರಭಾವ ಬೀರಿರುವ ಬೆಟ್ಟಗಳು, ಮಠಗಳು ಮತ್ತು ಗೋರಿಗಳು, ದರ್ಗಾಗಳು ಬಹಳಷ್ಟಿವೆ. ಜಿಲ್ಲೆಯಲ್ಲಿ ಅವಧೂತ ಪರಂಪರೆ ಇದೆ. ಸಿದ್ಧರ ಪರಂಪರೆ ಇದೆ. ತತ್ವಪದಕಾರರ ಗುರುಭಕ್ತಿ ಪರಂಪರೆ ಇಂದಿಗೂ ಜಿಲ್ಲೆಯಲ್ಲಿ ಜೀವಂತವಾಗಿದೆ.

ನಾಡಿಗೆ ಹೆಸರಾದ ಶ್ರೀ ಶ್ರೀ ಸಿದ್ಧಗಂಗಾ ಮಠ ಜಾತಿ–ಮತಗಳ ಭೇದವಿರದೆ, ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನ, ಅಕ್ಷರ, ಆಶ್ರಯ ನೀಡುತ್ತಿದೆ. ಕೊರಟಗೆರೆ ತಾಲೂಕಿನ ಸಿದ್ಧರಬೆಟ್ಟದಲ್ಲಿ ನೆಲೆಸಿದ್ದ ಯೋಗಿನಿ ಅಮ್ಮಾಜಮ್ಮನವರು ಅವರು ಬದುಕಿರುವವರೆಗೂ ಎಷ್ಟೊತ್ತಿನಲ್ಲಿ ಯಾರೇ ಮಠಕ್ಕೆ ಬರಲಿ ಭಿನ್ನಭೇದವಿಲ್ಲದೆ ಎಲ್ಲರನ್ನೂ, ಪರಿಚಯವಿಲ್ಲದವರನ್ನೂ ಸಹ ಮಮತೆಯಿಂದ ಕಂಡು ಆದರಿಸುತ್ತಿದ್ದುದು ಜನಜನಿತವಾಗಿದೆ.

ಚಿಕ್ಕನಾಯಕನಹಳ್ಳಿಯ ತಾತಯ್ಯನ ಗೋರಿ, ಚಿಕ್ಕೆನಹಳ್ಳಿ ಮಠ ಮೊದಲಾದೆಡೆ ಹಿಂದೂ ಮುಸ್ಲಿಂ ಬಾಂಧವರು ಒಟ್ಟಿಗೆ ಕೂತು ಭಜನೆ ಮಾಡುವುದನ್ನು, ತತ್ವಪದ ಹಾಡುವುದನ್ನು ಇಂದಿಗೂ ನೋಡಬಹುದಾಗಿದೆ. ತಿಪಟೂರು ತಾಲ್ಲೂಕಿನ ಗ್ರಾಮವೊಂದರಲ್ಲಿ ಇರುವ ಮಠದ ಹೆಸರೇ ಪೀರಾಲಯ.

ಪ್ರಜಾಪ್ರಭುತ್ವ ವ್ಯವಸ್ಥೆಯ ಸಾಕಾರ ರೂಪ ಈ ಗುರುಭಕ್ತಿ ಪರಂಪರೆ. ಬಾಲ್ಯದಲ್ಲಿ ನಾನು ನಮ್ಮ ಹಳ್ಳಿಗಳ ಕಡೆ ಗುರುಭಕ್ತಿ ತೆಗೆದುಕೊಂಡವರನ್ನು ನೋಡಿದ್ದೆ. ಗುರುಭಕ್ತಿ ಪರಂಪರೆಯಲ್ಲಿ ನಂಬಿಕೆ ಇರುವ ಯಾವುದೇ ಹಳ್ಳಿಯ, ಯಾವುದೇ ಜಾತಿಯ ಹೆಣ್ಣು-ಗಂಡು ಭೇದಭಾವ ಇಲ್ಲದೆ ತಾವು ಇಷ್ಟಪಟ್ಟ ಗುರು ಒಬ್ಬರಿಂದ ದೀಕ್ಷೆ ಪಡೆದು, ಗುರುಭಕ್ತಿ ತೆಗೆದುಕೊಂಡವರ ಗುಂಪಿಗೆ ಸೇರುತ್ತಾ ಇದ್ದರು.

ಹೀಗೆ ಗುರುಭಕ್ತಿ ತೆಗೆದುಕೊಂಡವರು ಪ್ರತಿ ಅಮವಾಸ್ಯೆ, ಹುಣ್ಣಿಮೆಗಳಲ್ಲಿ ತಮ್ಮ ಊರಾದರೂ ಸರಿ, ಅಕ್ಕಪಕ್ಕದ ಊರಾದರೂ ಸರಿ, ದೂರದ ಊರಾದರೂ ಸರಿ, ಅಕ್ಕಪಕ್ಕದ ಜಿಲ್ಲೆ ರಾಜ್ಯವಾದರೂ ಸರಿ ಅವರಿಗೆ ಗಡಿ ಮೇರೆಗಳ ಹಂಗಿಲ್ಲ. ಎಲ್ಲಾ ಎಲ್ಲೆಗಳ ಮೀರಿ ನಿಂತು ಯಾವುದಾದರೂ ಒಂದು ಗುರುಮಠ ಅಥವಾ ಗುರು ಭಕ್ತರ ಮನೆಯಲ್ಲಿ ಸೇರಿ ಊಟ ಉಪಚಾರ ಮಾಡಿ ಒಬ್ಬರ ಪಕ್ಕ ಒಬ್ಬರು ವರ್ತುಲಕರವಾಗಿ ಕುಳಿತು ತತ್ವಪದ ಹಾಡುತ್ತಾ ಇದ್ದದ್ದನ್ನು ನಾವು ಮಕ್ಕಳು ಕುತೂಹಲದಿಂದ ನೋಡುತ್ತಿದ್ದೆವು. ರಾತ್ರಿ ಇಡೀ ಹಾಡುವರೆಂದು ಕೇಳಿದ್ದೆವು.

ಇಂತಹ ಸಭೆ ಗೋಷ್ಠಿಗಳು ಸಾಮಾನ್ಯವಾಗಿ ರಾತ್ರಿ ಏಳು ಅಥವಾ ಎಂಟು ಗಂಟೆ ಮೇಲೆ ಶುರುವಾಗುತ್ತಿದ್ದವು. ಅಲ್ಲಿಗೆ ಮಕ್ಕಳು ಹೋದರೆ ಕೆಟ್ಟು ಹೋಗ್ತಾರೆ ಎಂದು ನಮ್ಮ ನಮ್ಮ ಮನೆಗಳಲ್ಲಿನ ಹಿರಿಯರು ನಮ್ಮನ್ನು ಅಲ್ಲಿಗೆ ಹೋಗಲು ಬಿಡುತ್ತಿರಲಿಲ್ಲ. ಆದರೆ ನಾವು ಬಿಡಬೇಕಲ್ಲ ನಮ್ಮ ಮನೆಗಳ ಹತ್ತಿರದಲ್ಲಿನ ಗುರುಭಕ್ತರ ಮನೆಯಲ್ಲಿ ಯಾವಾಗಲಾದರೂ ಗೋಷ್ಠಿ ಇದ್ದರೆ, ಶುರುವಾಗುವ ಮೊದಲೇ ಸಂಜೆಗೆ ಅಲ್ಲಿಗೆ ಹೋಗಿ ಆ ಏಕತಾರಿಯ ಮೀಟಿ ಗದರಿಸಿಕೊಂಡು ಮನೆಗೆ ಓಡಿ ಬರುತ್ತಿದ್ದೆವು. ಊಟ ಮಾಡಿ ಬೆಚ್ಚಗೆ ಅಮ್ಮನನ್ನೋ, ಅಜ್ಜಿಯನ್ನೋ ಅವುಚಿ ಮಲಗಿದರೂ ರಾತ್ರಿಯ ತಂಪು ಹೊತ್ತಿನಲ್ಲಿ ದೂರದಿಂದ ಕೇಳಿ ಬರುತ್ತಿದ್ದ ತತ್ವಪದಗಳನ್ನು ಕೇಳುತ್ತಾ ಕೇಳುತ್ತಾ ರಾತ್ರಿಯಿಡೀ ಅರೆ ನಿದ್ದೆ, ಅರೆ ಎಚ್ಚರ. ಜಿಲ್ಲೆಯಲ್ಲಿ ಬಹುಪಾಲು ಹಳ್ಳಿಗಳಲ್ಲಿ ಈ ಗುರುಭಕ್ತಿ ಪರಂಪರೆ ಈಗಲೂ ಇದೆ. ಇವರಿಗೆ ಮುಟ್ಟು-ಮೈಲಿಗೆ ಇಲ್ಲ. ಮೇಲು-ಕೀಳು ಇಲ್ಲ. ಇವರು ಸತ್ತರೆ ರಕ್ತ ಸಂಬಂಧಿಕರಾರು ಅಂತಿಮ ಕ್ರಿಯಾಕರ್ಮಗಳನ್ನು ಮಾಡುವಂತಿಲ್ಲ. ಅವರ ಗುರುಭಕ್ತರೇ ಬಂದು ಅಂತಿಮ ಕ್ರಿಯಾಕರ್ಮಗಳನ್ನು ಮಾಡಬೇಕು. ಕೆಲವು ಗುರುಮಠಗಳು ಅಮಾವಾಸ್ಯೆ ಕಟ್ಲೆಯವು. ಅಲ್ಲಿ ಅಮಾವಾಸ್ಯೆಯಲ್ಲಿ ಎಲ್ಲಾ ಸೇರಿ ತತ್ವಪದ ಹಾಡುವರು. ಕೆಲವು ಹುಣ್ಣಿಮೆ ಕಟ್ಲೆಯವು. ಅಲ್ಲಿ ಹುಣ್ಣಿಮೆಯಲ್ಲಿ ಎಲ್ಲಾ ಸೇರಿ ತತ್ವಪದ ಹಾಡುವರು. ಇವರು ಜಾತಿ-ಮತ ಮೊದಲಾದ ತಾರತಮ್ಯಗಳನ್ನು ನಿರಾಕರಿಸಿದವರು. ಜಾತಿ, ಧರ್ಮ, ಭಾಷೆ, ಪ್ರಾಂತ್ಯ ಮೊದಲಾದ ಗಡಿ, ಎಲ್ಲೆಗಳನ್ನು

ಮೀರಿ ನಿಂತ, ನಿಜ ಅರ್ಥದಲ್ಲಿ ವಿಶ್ವಮಾನವರಾಗಿರುವವರು. ಇಂದಿಗೂ ನನ್ನ ಪಾಲಿಗೆ ಇದೊಂದು ಸೋಜಿಗ. ಇತ್ತೀಚೆಗೆ ಐದಾರು ವರ್ಷದ ಹಿಂದೆ, ಉಜ್ಜಜ್ಜಿ ರಾಜಣ್ಣ ಮತ್ತು ಬೂದಾಳು ನಟರಾಜು–ಲತಾ ದಂಪತಿಗಳೊಂದಿಗೆ ನಾನು ಮತ್ತು ಗೆಳತಿ ಡಾ. ಅರುಂಧತಿ ಚಿಕ್ಕನಾಯಕನಹಳ್ಳಿಯ ತಾತಯ್ಯನ ಗೋರಿ, ಚಿಕ್ಕೇನಹಳ್ಳಿ ಮಠ ಮತ್ತು ತಿಪಟೂರು ತಾಲ್ಲೂಕಿನ ಪೀರಾಲಯಕ್ಕೆ ಹೋಗಿದ್ದೆವು. ಯಾವ ಭೇದಭಾವ ಇಲ್ಲದೆ ಎಲ್ಲರೂ ಒಟ್ಟಿಗೆ ಕುಳಿತು ತತ್ವಪದ ಹಾಡುವುದನ್ನು ನೋಡುವುದೇ ಒಂದು ಸೊಗಸು. ಪ್ರಜಾಪ್ರಭುತ್ವದ ಸಾಕಾರ ರೂಪ ಈ ಗುರುಭಕ್ತಿ ಪರಂಪರೆ.

ಇನ್ನು ರಾಜಕೀಯ ಕ್ಷೇತ್ರಕ್ಕೆ ಬಂದರೆ 1957 ರಿಂದ 1967 ರವರೆಗೆ ಪ್ರಜಾ ಸೋಶಿಯಲಿಸ್ಟ್ ಪಾರ್ಟಿ ಮಹತ್ತರ ಪಾತ್ರವನ್ನು ಜಿಲ್ಲೆಯಲ್ಲಿ ವಹಿಸಿದೆ. ಮೈಸೂರು ರಾಜ್ಯದ ಶಾಸಕಾಂಗ ಸಭೆಗೆ ನಡೆದ ಚುನಾವಣೆಗಳಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಅಭ್ಯರ್ಥಿಗಳು ಈ ಕೆಳಕಂಡಂತೆ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು.

| ಕ್ರ. ಸಂ. | ವಿಧಾನಸಭಾ ಕ್ಷೇತ್ರದ ಹೆಸರು | ಚುನಾವಣೆ ನಡೆದ ವರ್ಷ | ಆಯ್ಕೆಯಾದವರ ಹೆಸರು | ಪಕ್ಷ |
|---|---|---|---|---|
| 1. | ತಿಪಟೂರು | 1957 | ಕೆಪಿ ರೇವಣಸಿದ್ದಪ್ಪ | ಪ್ರ.ಸೋ.ಪಾ. |
| 2. | ತುಮಕೂರು | 1957 | ಜಿ ಎನ್ ಪುಟ್ಟಣ್ಣ | ಪ್ರ.ಸೋ.ಪಾ. |
| 3. | ಚಿಕ್ಕನಾಯಕನಹಳ್ಳಿ | 1957 | ಸಿಕೆ ರಾಜಯ್ಯಶೆಟ್ಟಿ | ಪ್ರ.ಸೋ.ಪಾ. |
| 4. | ತುರುವೇಕೆರೆ | 1962 | ಬಿ ಹುಚ್ಚೇಗೌಡರು | ಪ್ರ.ಸೋ.ಪಾ. |
| 5. | ತಿಪಟೂರು | 1962 | ಕೆ ಪಿ ರೇವಣಸಿದ್ದಪ್ಪ | ಪ್ರ.ಸೋ.ಪಾ. |
| 6. | ಮಧುಗಿರಿ | 1962 | ಟಿ ಎಸ್ ಶಿವಣ್ಣ | ಪ್ರ.ಸೋ.ಪಾ. |
| 7. | ಹೆಬ್ಬೂರು | 1962 | ಕೆ ಲಕ್ಕಪ್ಪ | ಪ್ರ.ಸೋ.ಪಾ. |
| 8. | ಚಿಕ್ಕನಾಯಕನಹಳ್ಳಿ | 1967 | ಸಿಕೆ ರಾಜಯ್ಯಶೆಟ್ಟಿ | ಪ್ರ.ಸೋ.ಪಾ. |
| 9. | ಗೂಳೂರು | 1967 | ಜಿ ಬೋವಿ | ಪ್ರ.ಸೋ.ಪಾ. |
| 10. | ತುಮಕೂರು | 1967 | ಬಿ ಪಿ ಗಂಗಾಧರ್ | ಪ್ರ.ಸೋ.ಪಾ. |

ಇದಷ್ಟೇ ಅಲ್ಲದೆ 1967ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಲೋಕಸಭಾ ಕ್ಷೇತ್ರದ ಸದಸ್ಯರಾಗಿ ಪ್ರಜಾ ಸೋಶಿಯಲಿಸ್ಟ್ ಪಾರ್ಟಿಯ ಅಭ್ಯರ್ಥಿ ಶ್ರೀ ಕೆ ಲಕ್ಕಪ್ಪನವರು ಆಯ್ಕೆಯಾಗಿದ್ದರು.

ರಾಜ್ಯದಲ್ಲಿ ವಿಧಾನಸಭಾ ಕ್ಷೇತ್ರಗಳಿಗೆ 1957 ರಿಂದ 1967 ರವರೆಗೆ ನಡೆದ

ಚುನಾವಣೆಗಳ ಫಲಿತಾಂಶ ಮತ್ತು ಪಕ್ಷಗಳ ಬಲಾಬಲಗಳ ಅಂಕಿ ಅಂಶಗಳನ್ನು ಅವಲೋಕಿಸಿದರೆ ತುಮಕೂರು ಜಿಲ್ಲೆಯಲ್ಲಿ ಪ್ರಜಾ ಸೋಶಿಯಲಿಸ್ಟ್ ಪಾರ್ಟಿ ಪ್ರಬಲವಾಗಿ ಇದ್ದದ್ದು, ಸಮಾಜವಾದಿ ಚಿಂತನೆಗಳ ಪ್ರಭಾವ ಇದ್ದದ್ದು ತಿಳಿಯುತ್ತದೆ.

ಇನ್ನು ಸಾಮಾಜಿಕವಾಗಿ ನೋಡುವುದಾದರೆ ತುಮಕೂರು ಜಿಲ್ಲೆಯಲ್ಲಿ ಸಮಾಜವಾದಿ ಪರಂಪರೆಯ ನೆಲೆಗಳು ಮತ್ತು ಸೆಲೆಗಳು ಹಲವಾರು ಇವೆ. ಎಷ್ಟೆಂದರೆ ಆಸಕ್ತರು ಪಿ.ಎಚ್.ಡಿ. ಮಾಡುವಷ್ಟು ಇವೆ. ಆದ್ದರಿಂದ ನಾನು ಎಲ್ಲವನ್ನೂ ಇಲ್ಲಿ ಹೇಳದೆ ಸಮಾಜವಾದಿ ಪರಂಪರೆಯ ಕಿರುಝರಿಯಂತಿರುವ ನನ್ನ ಒಡನಾಟದ ಆಪ್ತ ಸಮತಾ ಬಳಗವೊಂದರ ಬಗ್ಗೆ ಮಾತ್ರ ಇಲ್ಲಿ ತಿಳಿಸುವೆ. (ಸಮಾಜವಾದಿ ಅಧ್ಯಯನ ಕೇಂದ್ರದಿಂದ ಮಾನವ ಮಂಟಪ ಸಹಕಾರ ಸಂಘದವರೆಗಿನ ಒಡನಾಡಿಗಳ ಬಳಗವೇ ಸಮತಾ ಬಳಗ)

ಅದು 1970ರ ದಶಕ. ರಾಜ್ಯದ ಗ್ರಾಮೀಣ ಭಾಗದ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿವಿಧ ಕಾಲೇಜುಗಳಿಗೆ, ವಿಶ್ವವಿದ್ಯಾಲಯಗಳಿಗೆ ಸೇರಿದ್ದರು. ಒಂದಷ್ಟು ಜನ ಅಷ್ಟೊತ್ತಿಗೆ ವಿಶ್ವವಿದ್ಯಾಲಯಗಳಿಂದ ವಿದ್ಯಾಭ್ಯಾಸ ಪಡೆದು ಹೊರಬಂದಿದ್ದರು. ಜಾತಿ ವಿನಾಶ ಆಂದೋಲನ ಸಮಾಜವಾದಿ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳಲ್ಲಿ ಗುರುತಿಸಿಕೊಂಡಿದ್ದರು. ಸಮಾಜವಾದಿ ಯುವಜನ ಸಭಾ, ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಶುರುವಾಗಿದ್ದವು. ಜೆಪಿ ಚಳುವಳಿಯ ಸಂಪೂರ್ಣ ಕ್ರಾಂತಿಗೆ ಬೆಂಬಲವಾಗಿ ರಾಜ್ಯದಲ್ಲಿ ನವ ನಿರ್ಮಾಣ ಚಳುವಳಿ ಆರಂಭವಾಗಿತ್ತು. ಬಿಹಾರದಿಂದ ಹೊರಟು ದೇಶದಾದ್ಯಂತ ಸಂಚರಿಸಿದ ವಿದ್ಯಾರ್ಥಿಗಳ ಜಾಥಾವೊಂದು, ಬಹುಶಃ ಅದರ ಹೆಸರು ಚಾತ್ರಾ ಯುವ ಸಂಘರ್ಷ ಯಾತ್ರಾ ಎಂದಿರಬಹುದು. ಅದು ತುಮಕೂರಿಗೂ ಬಂದು ಹೋಗಿತ್ತು.

ಇವೆಲ್ಲವೂ ಪರೋಕ್ಷವಾಗಿ ತುಮಕೂರಿನಲ್ಲಿದ್ದ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಿತ್ತು. ತುಮಕೂರಿನ ಸರ್ಕಾರಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದಲ್ಲಿ ದೇಸಿ ಚಿಂತನೆ ಮತ್ತು ಕ್ರಾಂತಿಕಾರಿ ಆಲೋಚನೆಗಳ ವಿದ್ಯಾರ್ಥಿಗಳಿದ್ದರು. ಸಂಘದ ಕಾರ್ಯಕ್ರಮಗಳಿಗೆ ಭಾಷಣ ಮಾಡಲು ಅಡಿಗರು, ಜಿ ಪಿ ರಾಜರತ್ನಂ ಅವರು ಬಂದು ಹೋಗಿದ್ದರು. ಮಾರ್ಕ್ಸಿಸ್ಟ್ ಗಳಾಗಿದ್ದ ಸಣ್ಣಗುಡ್ಡಯ್ಯ, ಲೋಹಿತಾಶ್ವ, ಎಚ್ ಎಸ್ ಶಿವಪ್ರಕಾಶ್ ಮತ್ತು ಸಮಾಜವಾದಿ ಹನುಮಂತುರವರು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಇದರ ಜೊತೆಗೆ ಆಗ ಪದವಿ ತರಗತಿಗಳಿಗೆ non-detail ಪಠ್ಯವಾಗಿ ವಿಚಾರ ಸಾಹಿತ್ಯ ಪುಸ್ತಕ ಇತ್ತು. ಅದರಲ್ಲಿ ಲೋಹಿಯಾ, ಪೆರಿಯಾರ್, ನಂಜುಂಡಸ್ವಾಮಿ ಅವರ ಲೇಖನಗಳಿದ್ದವು. ಈ

ಎಲ್ಲಾ ಸಂಗತಿಗಳು ತುಮಕೂರಿನಲ್ಲಿ "ಕಿಡಿ ಸೋಕಿದರೆ ಸಾಕು ಸಿಡಿಯುವೆವು" ಎಂಬಂತಹ ಉತ್ಸಾಹವನ್ನು ಆಗಿನ ಅನೇಕ ವಿದ್ಯಾರ್ಥಿಗಳಲ್ಲಿ ಉಂಟು ಮಾಡಿದ್ದವು.

1974ರ ಹೊತ್ತಿಗೆ ರಾಜ್ಯದಲ್ಲಿ ಆರಂಭವಾಗಿದ್ದ ದಲಿತ ಸಂಘರ್ಷ ಸಮಿತಿಯ ಪ್ರಭಾವವೂ ಇಲ್ಲಿತ್ತು. ಒಟ್ಟಾರೆ ಹೇಳುವುದಾದರೆ ಸಮಾಜವಾದಿ ಚಳುವಳಿ, ಕಾರ್ಮಿಕ ಚಳುವಳಿ ಮತ್ತು ದಲಿತ ಸಂಘರ್ಷ ಸಮಿತಿ ಆಕ್ಟಿವ್ ಆಗಿದ್ದ ಕಾಲದಲ್ಲಿ ತುಮಕೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಗಾಂಧಿ, ಲೋಹಿಯಾ ಚಿಂತನೆಗಳಿಂದ ಪ್ರಭಾವಿತರಾಗಿದ್ದ, ಸಮತೆಯ ಆಶಯ ಹೊಂದಿದ್ದ ನನ್ನ ಹಿರಿಯಣ್ಣ ಜಿ ಶ್ರೀನಿವಾಸ್ ಕುಮಾರ್ ಮತ್ತು ಅವರ ಗೆಳೆಯರಾದ ಎನ್ ಜಿ ರಾಮಚಂದ್ರ, ನಟರಾಜಪ್ಪ ಯರಗುಂಟೆ ಅವರು ಜೊತೆಗೂಡಿ ಆಸಕ್ತರನ್ನು ಸೇರಿಸಿ ನಡೆಸುತ್ತಿದ್ದ ಚರ್ಚೆಗಳನ್ನು, ಚಟುವಟಿಕೆಗಳನ್ನು, ಅಧ್ಯಯನವನ್ನು, ದಲಿತ ಸಂಘರ್ಷ ಸಮಿತಿ ಸಭೆಗಳಲ್ಲಿ, ಸಮುದಾಯದ ರಂಗ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಇವರ ಉತ್ಸಾಹವನ್ನು ಗಮನಿಸಿ ಇವರ ಮೇಷ್ಟ್ರು ಹನುಮಂತುರವರು ಈ ಹುಡುಗರಿಗೆ ಇವರದೇ ಆದ ಒಂದು ವೇದಿಕೆ ಮಾಡಿಕೊಳ್ಳಲು ಸೂಚಿಸಿದರು. ಹೀಗೆ ಈ ಮೂವರು ತಾವು ಮಾಡುತ್ತಿದ್ದ ಚಟುವಟಿಕೆಗಳಿಗೆ, ಅಧ್ಯಯನಕ್ಕೆ ವೇದಿಕೆಯಾಗಿ 1979ರ ಸುಮಾರಿಗೆ, ತಾವು ವಾಸವಿದ್ದ ರೂಮ್ ನಂಬರ್ 8, ಚಂದ್ರಣ್ಣ ಬಿಲ್ಡಿಂಗ್, ಶ್ರೀರಾಮನಗರ ತುಮಕೂರು, ಇಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಿದರು. ಆ ಹೊತ್ತಿಗೆ ಮೈಸೂರಿನಲ್ಲಿ ಎಂ.ಎ. ವ್ಯಾಸಂಗ ಮುಗಿಸಿಕೊಂಡು ಕೆ ಬಿ ಸಿದ್ದಯ್ಯನವರು ತುಮಕೂರಿಗೆ ಬಂದರು. ದಲಿತ ಸಂಘರ್ಷ ಸಮಿತಿಯ ಬಂದಕುಂಟೆ ನಾಗರಾಜು ಎಂ ಸಿ ಮೂರ್ತಿ, ಬೆಲ್ಲದಮಡು ರಂಗಶಾಮಣ್ಣ, ನರಸೀಯಪ್ಪ, ನರಸಿಂಹಯ್ಯ, ದೊರೆರಾಜು, ತಿಮ್ಮಣ್ಣರವರ ಒಡನಾಟ ಕಾರ್ಮಿಕ ಚಳುವಳಿಯ ಕೆ ಆರ್ ನಾಯಕ್ ವೀಚಿರವರ ಒಡನಾಟ ಲಭ್ಯವಾಗುತ್ತದೆ.

ಪ್ರತಿವಾರ ಸರ್ಕಾರಿ ಜೂನಿಯರ್ ಕಾಲೇಜು ಮೈದಾನ ಟೌನ್ ಹಾಲ್ ವೃತ್ತದ ಬಳಿ ಆಗ ಇದ್ದ ಪಾರ್ಕ್ ಅಥವಾ ಐಬಿ ಮುಂದಿನ ಹುಲ್ಲು ಹಾಸು ಹೀಗೆ ಎಲ್ಲಾದರೂ ಒಂದು ಕಡೆ, ಎಲ್ಲೂ ಇಲ್ಲವೆಂದರೆ ಎಂಜಿ ರಸ್ತೆಯಲ್ಲಿದ್ದ ಕೆ ಆರ್ ನಾಯಕ್ ಅವರ ಅಂಗಡಿಯಲ್ಲಿಯಾಗಲಿ ಸಭೆ ಸೇರಿ ತಾವು ಓದಿದ ಪುಸ್ತಕ, ಪ್ರಚಲಿತ ಘಟನೆಗಳು, ಸಮಕಾಲೀನ ವಿಷಯಗಳನ್ನು ಒಳಗೊಂಡಂತೆ ಚರ್ಚೆಗಳನ್ನು ಮಾಡುತ್ತಿದ್ದರು. ವೀಚಿ. ಕೆ. ಆರ್. ನಾಯಕ್ ಮತ್ತು ಸಣ್ಣಗುಡ್ಡಯ್ಯರವರು ನಮ್ಮ ಮಾರ್ಗದರ್ಶಕರಂತಿದ್ದರು ಎಂದು ಎನ್. ಜಿ. ರಾಮಚಂದ್ರ ಈಗಲೂ ನೆನಪಿಸಿಕೊಳ್ಳುವರು.

ಸಮುದಾಯದವರು ಮಾಡುವ ನಾಟಕವಿರಲಿ, ನರಗುಂದ, ನವಿಲುಗುಂದ ರೈತರ ಹತ್ಯೆವಿರೋಧಿಸಿ ಬಂದ ಜಾಥಾ ಇರಲಿ, ಶೇಷಪ್ಪನ ಕಗ್ಗೊಲೆ ಖಂಡಿಸಿ ನಡೆದ ಜಾಥಾ ಇರಲಿ ಇವರು ಹಾಜರಾಗುತ್ತಿದ್ದರು. ಕಾರ್ಮಿಕರನ್ನು, ದಲಿತರನ್ನು, ವಿದ್ಯಾರ್ಥಿಗಳನ್ನು ಸೇರಿಸಿಕೊಂಡಂತೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ತುಮಕೂರಿನ ಎಂಜಿ ರಸ್ತೆಯ ಫುಟ್ ಪಾತಿನಲ್ಲಿ ಕೆರ ಹೆಸರಿನಲ್ಲಿ ಸೆಕೆಂಡ್ ಹ್ಯಾಂಡ್ ಪುಸ್ತಕ ಮಾರಾಟ ಮಾಡಿದರು.

ಗುಬ್ಬಿ ತಾಲ್ಲೂಕು ಕಡಬದಲ್ಲಿ ಮಲ್ಲೇಶಪ್ಪ ಎಂಬ ವ್ಯಕ್ತಿ ತಾನು ಮುಟ್ಟುವ ಮೂಲಕವೇ ಎಲ್ಲಾ ಕಾಯಿಲೆಗಳನ್ನು ವಾಸಿ ಮಾಡುವ ಪವಾಡ ಮಾಡುವನೆಂದು ಜನರನ್ನು ನಂಬಿಸಿದಾಗ ರಾಜ್ಯದ ಬೇರೆ ಬೇರೆ ಭಾಗಗಳಿಂದ ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರದಿಂದಲೂ ಜನರು ಬರುವುದನ್ನು, ಮುಟ್ಟುವ ನೆಪದಲ್ಲಿ ಮಲ್ಲೇಶಪ್ಪ ಮಹಿಳೆಯರ ಜೊತೆ ಅಸಭ್ಯವಾಗಿ ನಡೆದುಕೊಳ್ಳುವುದನ್ನು ಗಮನಿಸಿದ ಇವರು ವೈಜ್ಞಾನಿಕವಾಗಿ ಯೋಚಿಸುವ ತುಮಕೂರಿನ ಸಹ ಸಂಘಟನೆಗಳವರನ್ನು ಒಗ್ಗೂಡಿಸಿಕೊಂಡು ಕಡಬ ಮಲ್ಲೇಶಪ್ಪನ ಪವಾಡ ಖಂಡಿಸಿ 15000ಕ್ಕೂ ಮಿಕ್ಕಿ ಕರಪತ್ರಗಳನ್ನು ಪ್ರಿಂಟ್ ಹಾಕಿಸಿ ಎಲ್ಲಾ ದಿಕ್ಕುಗಳ ಎಲ್ಲಾ ಊರುಗಳಿಗೂ ಸಂಚರಿಸುವ ಬಸ್ಸುಗಳಲ್ಲಿ ಹಂಚಿದರು. ಹಾಗೆ ಹಂಚಿದ ಕರಪತ್ರವನ್ನು ವಕೀಲರೊಬ್ಬರ ಮೂಲಕ ಗುಬ್ಬಿ ಕೋರ್ಟಿನ ಮ್ಯಾಜಿಸ್ಟ್ರೇಟರ್ ಒಬ್ಬರಿಗೆ ಸಿಕ್ಕಿ, ಅವರು ಆದೇಶ ಹೊರಡಿಸಿ ಮಲ್ಲೇಶಪ್ಪನನ್ನು ಕಡಬದಿಂದ ಖಾಲಿ ಮಾಡಿಸಿದರು.

ಅಷ್ಟೊತ್ತಿಗೆ ಶಿವಮೊಗ್ಗ ಹಾಸನ ಮೊದಲಾದ ಕಡೆ ಕರ್ನಾಟಕ ರಾಜ್ಯ ರೈತ ಸಂಘ ಪ್ರಾರಂಭವಾಗಿರುತ್ತದೆ. ದಲಿತ ಸಂಘರ್ಷ ಸಮಿತಿ ಸಭೆಗಳಿಗೆ ಹೋಗುತ್ತಿದ್ದ ಈ ಹುಡುಗರಿಗೆ ಅಲ್ಲಿನ ಚರ್ಚೆಗಳಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಭೂ ಮಾಲೀಕರ ಚಳುವಳಿ. ದಲಿತರ, ಕೃಷಿ ಕಾರ್ಮಿಕರ ಪರ ಇಲ್ಲ ಎಂಬ ರೀತಿಯ ಮಾತುಗಳು ಕೇಳಿಬರುತ್ತಿದ್ದವು. ಅದೇ ಸಮಯಕ್ಕೆ ಹಾಸನದ ರೈತ ಸಂಘದ ಕಾರ್ಯಕ್ರಮವೊಂದಕ್ಕೆ ಕಿಷನ್ ಪಟ್ನಾಯಕ್ ಅವರು ಬರುತ್ತಿರುವ ಸುದ್ದಿ ತಿಳಿದು ಹಾಸನಕ್ಕೆ ಹೋಗಿ ಕಿಷನ್ ಜೀ ಅವರನ್ನು ಭೇಟಿ ಮಾಡಿ ರೈತ ಸಂಘ ಭೂಮಾಲೀಕರ ಸಂಘ ಮಾತ್ರವೇ? ದಲಿತರ ಕೃಷಿ ಕಾರ್ಮಿಕರ issue ಗಳನ್ನು ಏಕೆ ಕೈಗೆತ್ತಿಕೊಳ್ಳಬಾರದು ಎಂದು ಕೇಳಬೇಕೆಂದು ಈ ಮೂವರು ಹಾಸನಕ್ಕೆ ಹೋದರು.

ಅಲ್ಲಿ ಯುವ ರೈತ ನಾಯಕ ಮಂಜುನಾಥ ದತ್ತ ಅವರು ತುಮಕೂರಿನಿಂದ ಬಂದ ಇವರನ್ನು ಖುಷಿಯಿಂದ ಬಿಗಿದಪ್ಪಿಕೊಂಡರು. ಕಿಷನ್ ಜೀ, ಶಿವಪ್ರಸಾದ್, ವೆಂಕಟೇಶ್ ಮೂರ್ತಿ, ರವಿವರ್ಮ ಕುಮಾರ್ ಅವರ ಭೇಟಿ ಆಯಿತು. ಇವರ

ಪ್ರಶ್ನೆಗಳಿಗೆ ಕಿಷನ್ ಜೀ ಸಮಾಧಾನದಿಂದ ಉತ್ತರಿಸಿದರು. ಯಾವುದೇ ಒಂದು ಸಂಘಟನೆ ಚಳುವಳಿ ಪ್ರಾರಂಭದಲ್ಲಿ ಒಂದು issue ಇಟ್ಟುಕೊಂಡು ಹುಟ್ಟಿದರೂ, ಆನಂತರ ಅದು ಎಲ್ಲಾ ತಾರತಮ್ಯಗಳ ವಿರುದ್ಧ ಕೆಲಸ ಮಾಡುತ್ತದೆ, ಮಾಡಬೇಕು ಕೂಡಾ. ನೀವು ತುಮಕೂರು ಜಿಲ್ಲೆಯಲ್ಲಿ ರೈತರನ್ನು ಸಂಘಟಿಸಿ, ರೈತ ಸಂಘ ಪ್ರಾರಂಭಿಸಿ. ಅಲ್ಲಿ ಈ ಎಲ್ಲಾ issue ಗಳನ್ನು ಇಟ್ಟುಕೊಂಡಂತೆ ಹೋರಾಟ ಮಾಡಿ ಎಂದು ಹೇಳಿ ಪ್ರಶ್ನೆ ಮಾಡಲು ಹೋಗಿದ್ದ ಇವರ ಹೆಗಲಿಗೆ ಹಸಿರು ಶಾಲು ಹಾಕಿ ಕಳಿಸಿದರು.

ರೈತರನ್ನು ಸಂಘಟಿಸುವ ಜವಾಬ್ದಾರಿ ಹೊತ್ತು, ಹಸಿರು ಶಾಲು ಹೆಗಲಿಗೇರಿಸಿಕೊಂಡು ಬಂದ ಈ ಮೂವರು ಹಗಲು ಇರುಳೆನ್ನದೆ ಜಿಲ್ಲೆಯ ಹಲವಾರು ಹಳ್ಳಿಗಳನ್ನು ಸುತ್ತಿದರು. 1980 ರಲ್ಲಿ ಇರಬೇಕು, ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಶಿರಾ ತಾಲ್ಲೂಕು ಕಳ್ಳಂಬೆಳ್ಳ ಗ್ರಾಮದಲ್ಲಿ ಗ್ರಾಮದ ಮುಖಂಡರಾದ ರಂಗನಾಥ ಗೌಡರು ಮತ್ತು ಅವರ ತಂದೆಯವರ ಸಹಕಾರದೊಂದಿಗೆ ಮೂರು ದಿನಗಳ ಅಧ್ಯಯನ ಶಿಬಿರ ಏರ್ಪಾಡಾಯಿತು. ಪ್ರೊ. ನಂಜುಂಡಸ್ವಾಮಿ ಮತ್ತು ಪ್ರೊ. ರವಿವರ್ಮ ಕುಮಾರ್ ಅವರು ಬಂದು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಆ ಅಧ್ಯಯನ ಶಿಬಿರಕ್ಕೆ ಈಗಿನ ಮಾಜಿ ಶಾಸಕರಾದ ಎಚ್ ನಿಂಗಪ್ಪನವರು ಶಿಬಿರಾರ್ಥಿಯಾಗಿ ಬಂದಿದ್ದರು ಎಂದು ನಟರಾಜಪ್ಪನವರು ಈಗಲೂ ನೆನಪಿಸಿಕೊಳ್ಳುತ್ತಾರೆ. ಆನಂತರ ಈ ಮೂವರು ಜಿಲ್ಲೆಯ ಹಲವಾರು ಹಳ್ಳಿಗಳನ್ನು ಹಗಲು ರಾತ್ರಿ ಸುತ್ತಿ, ರೈತರನ್ನು ಸಂಘಟಿಸಿದರು.

1980ರ ವರ್ಷದ ಕಡೆಯ ದಿನಗಳು ಒಂದು ದಿನ ಹಾಸನದಿಂದ ಮಂಜುನಾಥ ದತ್ತ, ವೆಂಕಟೇಶ್ ಮೂರ್ತಿ ಮತ್ತು ಭಾನು ಮುಷ್ತಾಕ್ ಅವರು ಬಂದು ಇವರ ಜೊತೆಗೂಡಿ ಮಣಿವಿನ ಕುರಿಕೆ, ಕೆಜಿ ಟೆಂಪಲ್ ಮತ್ತು ಕಡಬದಲ್ಲಿ ರೈತರ ಸಭೆ ನಡೆಸುವ ಮೂಲಕ ಅಧಿಕೃತವಾಗಿ ಕರ್ನಾಟಕ ರಾಜ್ಯ ರೈತ ಸಂಘವು ಜಿಲ್ಲೆಯಲ್ಲಿ ಪ್ರಾರಂಭವಾಗುತ್ತದೆ. ರೈತ ಸಂಘವನ್ನು ಪ್ರಸ್ತಾಪಿಸುವಾಗ ಮಣಿವಿನ ಕುರಿಕೆ ಶಿವಶಂಕರ್, ಪುಟ್ಟಸ್ವಾಮಿ ಸಹೋದರರು, ಕಡಬದ ಪುಟ್ಟಸ್ವಾಮಿ, ನೀರಕಲ್ಲು ರಾಮಕೃಷ್ಣ, ಜನಾರ್ಧನ್, ನಟರಾಜ ಹೊನ್ನವಳ್ಳಿ, ನರಸೇಗೌಡರು, ಸಿದ್ದೇಗೌಡರು, ನಿಜಾನಂದಮೂರ್ತಿ, ಪುಟ್ಟಮ್ಮ ಅವರನ್ನು ಮರೆಯದೆ ನೆನಪಿಸಿಕೊಳ್ಳಬೇಕು.

ಸಮಾಜವಾದಿ ಚಳುವಳಿಯ ಎರಡು ಕವಲುಗಳಂತೆ ಹುಟ್ಟಿದ ರೈತ ಚಳುವಳಿ ಮತ್ತು ದಲಿತ ಚಳುವಳಿ ತುಮಕೂರು ಜಿಲ್ಲೆಯಲ್ಲಿ ಒಟ್ಟೊಟ್ಟಿಗೆ ಕೆಲಸ ಮಾಡುತ್ತಿದ್ದವು ಎಂದೇ ಹೇಳಬಹುದು. ರೈತ ಸಂಘದವರು ದಲಿತ ಸಂಘರ್ಷ ಸಮಿತಿಯ ಕಾರ್ಯಕ್ರಮ / ಸಭೆಗಳಲ್ಲಿ ಇರುತ್ತಿದ್ದರು; ದಲಿತ ಸಂಘದವರು

ರೈತ ಸಂಘದ ಸಭೆ / ಕಾರ್ಯಕ್ರಮಗಳಲ್ಲಿ ಇರುತ್ತಿದ್ದರು. ಎರಡು ಸಂಘದ ಕಾರ್ಯಕರ್ತರು ಪರಸ್ಪರ ಪ್ರೀತಿ, ಗೌರವ, ವಿಶ್ವಾಸದಿಂದ ಇರುತ್ತಿದ್ದರು. ರಾಜ್ಯದ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ತುಮಕೂರು ಜಿಲ್ಲೆಯಲ್ಲಿ ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ಸಾಕಷ್ಟು ಸೌಹಾರ್ದತೆಯಿಂದ ಇದ್ದವು. ಬದ್ಧತೆಯಿಂದ ಕೆಲಸ ಮಾಡಿದವು. ಇವುಗಳ ಸಿದ್ಧಾಂತ ಪ್ರಬಲವಾಗಿತ್ತು ಎಂದು ಗುರುತಿಸಬಹುದು.

ರೈತರ ಸಾಲ ವಸೂಲಿಗೆ ಸಂಬಂಧಿಸಿದಂತೆ ಸರ್ಕಾರವು, ಸಹಕಾರಿ ಸಂಘಗಳ ಕಾಯ್ದೆ 101 (ಸಿ) ಕಾಲಂ ತಿದ್ದುಪಡಿ ತಂದು ಸಾಲ ಬಾಕಿ ವಸೂಲಿಗಾಗಿ ರೈತರ ಜಮೀನುಗಳನ್ನು ಹರಾಜಿಗಿಟ್ಟಾಗ ಯಾರೂ ಭಾಗವಹಿಸದೆ ಇದ್ದರೆ ಸರ್ಕಾರವೇ ಭೂಮಿಯನ್ನು ವಹಿಸಿಕೊಳ್ಳಲು ಮುಂದಾದಾಗ, ಇದನ್ನು ವಿರೋಧಿಸಿ ರೈತ ಸಂಘವು ರಾಜ್ಯ ವ್ಯಾಪಿ ಹೋರಾಟವನ್ನು ತೀವ್ರಗೊಳಿಸಿತು. 1985ರ ವರ್ಷಾಂತ್ಯದಲ್ಲಿ ಬೆಂಗಳೂರಿಗೆ ಪಾದಯಾತ್ರೆಯನ್ನು ಸಂಘಟಿಸಿತು. ಈ ಪಾದಯಾತ್ರೆಯು ತುಮಕೂರಿನ ಮೂಲಕ ಹಾದು ಹೋಗುವಾಗ ತುಮಕೂರಿನ ರೈತವಿದ್ಯಾರ್ಥಿ ಒಕ್ಕೂಟ ಮತ್ತು ದಲಿತವಿದ್ಯಾರ್ಥಿ ಒಕ್ಕೂಟ ಒಟ್ಟಿಗೆ ಸೇರಿ ತುಮಕೂರಿನ ಬೆಂಗಳೂರು ಗೇಟ್ ಬಳಿ (ಈಗಿನ ಎಸ್. ಪಿ. ಆಫೀಸ್ ಸಮೀಪ) ಪಾದಯಾತ್ರೆಗಳಿಗೆ ರಾಗಿ ಅಂಬಲಿ, ನೀರು, ಬಿಸ್ಕತ್ ವಿತರಿಸಿದ್ದು ವಿಶೇಷ. ಆ ದಿನಕ್ಕೆ ರಾಗಿ ಅಂಬಲಿಯನ್ನು ಮಾಡಿಕೊಟ್ಟ ಸರ್ಕಾರಿ ಕಲಾ ಕಾಲೇಜಿನ ಎಸ್ಸಿ / ಎಸ್ಟಿ ಹಾಸ್ಟೆಲ್ ಅಡುಗೆ ರಾಮಣ್ಣರವರನ್ನು ರೈತ ವಿದ್ಯಾರ್ಥಿ ಒಕ್ಕೂಟದಲ್ಲಿದ್ದ ಕುಚ್ಚಂಗಿ ಪ್ರಸನ್ನ ಈ ಮಾಹಿತಿ ನೀಡುವಾಗ ಪ್ರೀತಿಯಿಂದ ನೆನಪಿಸಿಕೊಂಡರು.

ಇಂದಿಗೂ ತುಮಕೂರಿನಲ್ಲಿ ರೈತ ಸಂಘ, ದಲಿತ ಸಂಘ, ಕಾರ್ಮಿಕರ ಸಂಘಟನೆಗಳು ಮೊದಲಾದ ಜನಪರ, ಜೀವಪರ ಸಂಘಟನೆಗಳು ಪರಸ್ಪರ ಸ್ನೇಹ ಸೌಹಾರ್ದತೆಯಿಂದ ಇವೆ. ತಾವು ಹಮ್ಮಿಕೊಳ್ಳುವ ಪ್ರತಿಭಟನೆ, ಸಭೆ, ಮೆರವಣಿಗೆ ಮೊದಲಾದ ಕಾರ್ಯಕ್ರಮಗಳಲ್ಲಿ ತಮ್ಮ-ತಮ್ಮ ವೈಯಕ್ತಿಕ, ಸೈದ್ಧಾಂತಿಕ ಭಿನ್ನತೆಗಳನ್ನು ಮರೆತು common cause ಗಾಗಿ ಒಟ್ಟಿಗೆ ಕೈಜೋಡಿಸಿ ಕೆಲಸ ಮಾಡುವುದನ್ನು ನಾವು ಕಾಣಬಹುದಾಗಿದೆ. ಪ್ರಗತಿಪರ ಸಂಘಟನೆಗಳ ಒಕ್ಕೂಟವು ಇಲ್ಲಿದೆ.

ಈಗ ಮತ್ತೆ ನಾನು ಸಮಾಜವಾದಿ ಅಧ್ಯಯನ ಕೇಂದ್ರದ ವಿಷಯಕ್ಕೆ ಬರುವೆ. 1983 ರಲ್ಲಿ ನಾನು ಪಿಯುಸಿ ಓದಲು ತುಮಕೂರಿಗೆ ಬಂದಾಗ ಸಮಾಜವಾದಿ ಅಧ್ಯಯನ ಕೇಂದ್ರದ ನೇರ ಸಂಪರ್ಕಕ್ಕೆ ಬಂದೆ. ಅಲ್ಲಿಯವರೆಗೂ ನಮ್ಮ ಅಣ್ಣ ಶ್ರೀನಿವಾಸ್ ಕುಮಾರ್ ಬಾಯಲ್ಲಿ ಕೇಳ್ತಾ ಇದ್ದೆ. ಅಲ್ಲಿ ಪುಟ್ಟದೊಂದು

ಲೈಬ್ರರಿ ಇತ್ತು. ನಮಗೆ ಬೇಕಾದ ಪುಸ್ತಕಗಳನ್ನು ಪಡೆದು ಓದುವ ಸ್ವಾತಂತ್ರ್ಯ ಅಲ್ಲಿ ನಮಗಿತ್ತು. ಸಾಕ್ಷಿ, ರುಜುವಾತು, ಪಂಚಮ, ಶೂದ್ರ, ಸಂಕ್ರಮಣ, ಲಂಕೇಶ್ ಪತ್ರಿಕೆ ಹೀಗೆ ಹಲವಾರು ಹೊಸ–ಹಳೆಯ ನಿಯತಕಾಲಿಕೆಗಳು ಅಲ್ಲಿದ್ದವು. ಯಾವುದೇ ದೊಡ್ಡ ವಿದ್ಯಾಸಂಸ್ಥೆಯಲ್ಲಿ ಇರಬಹುದಾದಂತಹ ಮೌಲ್ಯಯುತವಾದ ಪುಸ್ತಕಗಳ ಸಂಗ್ರಹ ಅಲ್ಲಿತ್ತು.

ಜಿ ಶ್ರೀನಿವಾಸ್ ಕುಮಾರ್, ರಾಮಚಂದ್ರ ಮತ್ತು ನಟರಾಜಪ್ಪ ಚಳುವಳಿಯಲ್ಲಿ ತೊಡಗಿಸಿಕೊಂಡು ಹಳ್ಳಿಹಳ್ಳಿಗಳನ್ನು ಸುತ್ತುತ್ತಿದ್ದರು. ಆಗ ಪದವಿ ವಿದ್ಯಾರ್ಥಿಗಳಾಗಿದ್ದ ಎಚ್ ಎಸ್ ಶ್ರೀನಿವಾಸನ್ ಆ ಲೈಬ್ರರಿಯ ಉಸ್ತುವಾರಿ ಹೊತ್ತಿದ್ದರು. ನಾನು, ಅರುಂಧತಿ (ಈಗ ಡಾಕ್ಟರ್ ಅರುಂಧತಿ) ರೂಮ್ ಮೇಟ್ಸ್. ಅರುಂಧತಿ ಕ್ಲಾಸ್ ಮೇಟ್ಸ್ ರಂಗಸ್ವಾಮಿ, ಬಸವರಾಜು, ವೈ ಕೆ ಬಾಲಕೃಷ್ಣಪ್ಪ, ಮಾರುತಿ ಪ್ರಸಾದ್ ಎರಡನೇ ಪಿಯುಸಿಯಲ್ಲಿ ಇದ್ದು, ಇವರು ಆ ಮೊದಲೇ ಸಮಾಜವಾದಿ ಅಧ್ಯಯನ ಕೇಂದ್ರದ ಸಂಪರ್ಕದಲ್ಲಿದ್ದರು. ಎಲ್ಲರಿಗೂ ಲಂಕೇಶ್ ಪತ್ರಿಕೆ ಓದುವ ಹುಚ್ಚು. ಒಂದೊಂದು ವಾರ ಒಬ್ಬೊಬ್ಬರು ಲಂಕೇಶ್ ಪತ್ರಿಕೆ ಕೊಂಡುತರುವುದು, ಎಲ್ಲರೂ ಓದುವುದು– ಹೀಗೆ ಪುಟ್ಟದೊಂದು ಗುಂಪು ಇತ್ತು. ರೈತವಿದ್ಯಾರ್ಥಿ ಒಕ್ಕೂಟ ಶುರುವಾಗಿತ್ತು. ಕುಚ್ಚಂಗಿ ಪ್ರಸನ್ನ, ಕಲ್ಪನಾ ಶ್ರೀದೇವಿ, ನಿರ್ಮಲ, ಲತಾ, ಲಕ್ಷ್ಮಿ, ಎಚ್ ವಿ ವೆಂಕಟಾಚಲ ಬಂದರು.

1990ರಲ್ಲಿ ಎಚ್ ವಿ ಮಂಜುನಾಥ್ ನೇತೃತ್ವದಲ್ಲಿ ಸಮತಾ ವಿದ್ಯಾರ್ಥಿ ಒಕ್ಕೂಟ ಪ್ರಾರಂಭವಾಯಿತು. ಒಕ್ಕೂಟದ ವತಿಯಿಂದ ತುಮಕೂರಿನ ಕಾಳಿದಾಸ ಕಾಲೇಜಿನಲ್ಲಿ ಎರಡು ದಿನಗಳ ಅಧ್ಯಯನ ಶಿಬಿರವನ್ನು ಮೀಸಲಾತಿ ಮಂಡಲ್ ವರದಿ ಬಗ್ಗೆ ಹಮ್ಮಿಕೊಳ್ಳಲಾಗಿತ್ತು. ಕಿಷನ್ ಜೀ, ಪ್ರೊ. ರವಿವರ್ಮ ಕುಮಾರ್, ಅನುಸೂಯಮ್ಮ, ಡಿ ಎಸ್ ನಾಗಭೂಷಣ್ ಬಂದಿದ್ದರು. ಸವಿತಾರವರು ಸಹ ಬಂದ ನೆನಪು

1991ರಲ್ಲಿ ಸಮತಾ ವಿದ್ಯಾರ್ಥಿ ಒಕ್ಕೂಟದಿಂದ ಮತ್ತೆ ಅದೇ ಕಾಳಿದಾಸ ಕಾಲೇಜಿನಲ್ಲಿ ಮತ್ತೊಂದು ಅಧ್ಯಯನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಮೀಸಲಾತಿ, ಕೋಮುವಾದದ ಬಗ್ಗೆ ಚರ್ಚೆಗಳಾದವು. ಎ ಕೆ ಸುಬ್ಬಯ್ಯ, ರಾಮದಾಸ್, ಮಂಗಳೂರು ವಿಜಯ್ ಬಂದಿದ್ದರು. ಆ ಶಿಬಿರವನ್ನು ಈಗಿನ ಮುಖ್ಯಮಂತ್ರಿಗಳಾದ (ಆಗ ಚುನಾವಣೆಯಲ್ಲಿ ಸೋತಿದ್ದರು) ಶ್ರೀ ಸಿದ್ದರಾಮಯ್ಯನವರು ಬಂದು ಉದ್ಘಾಟಿಸಿದ್ದರು. ಆ ದಿನಗಳಲ್ಲಿ ನಮ್ಮ ಸಮತಾ ಒಕ್ಕೂಟದ ಚಟುವಟಿಕೆಗಳಿಗೆ ಕಾಳಿದಾಸ ಕಾಲೇಜಿನಲ್ಲಿ ಅವಕಾಶ ಒದಗಿಸುತ್ತಿದ್ದ ಯತಿರಾಜ್ ಅವರನ್ನು ನೆನೆಯಲೇ ಬೇಕು. ಒಂದೆರಡು ವರ್ಷಗಳ ನಂತರ

ಗಂಗಸಂದ್ರದಲ್ಲಿ ಅಧ್ಯಯನ ಶಿಬಿರ ನಡೆಯಿತು. ಎಚ್ ವಿ ಮಂಜುನಾಥ್ ಸಂಪಾದಕತ್ವದಲ್ಲಿ 'ಸ್ಫೂರ್ತಿ' ಎಂಬ ಕೈ ಬರಹದ ಪತ್ರಿಕೆ ಬರುತ್ತಿತ್ತು. ಎಚ್ ವಿ ಮಂಜುನಾಥ್, ವಿಜಯ, ಚಿದಾನಂದ, ರವಿ, ಮನಮೋಹನ್, ಜಗದೀಶ್, ರಂಗಪ್ಪ, ಜಯಣ್ಣ, ಲೋಕೇಶ್, ಮಲ್ಲಿಕಾರ್ಜುನ್ ಹೊಸಪಾಳ್ಯ, ತಿಪ್ಪೇಸ್ವಾಮಿ, ಕೆಂಚಪ್ಪ, ಹೇಮಲತಾ, ವಿರೂಪಾಕ್ಷ, ರಂಗಪ್ಪ, ರಮೇಶ್ ಇವರೆಲ್ಲಾ ಸೇರಿ ಗುಂಪು ಇನ್ನೂ ವಿಸ್ತಾರವಾಯಿತು.

1988ರಿಂದ ಕೆ ಎಂ ಶಂಕರಪ್ಪನವರು ನಮ್ಮ ಗುಂಪಿಗೆ ಹತ್ತಿರವಾದರು. ಬುದ್ಧನ ಬಗ್ಗೆ ತಿಳಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ 1993 ರಲ್ಲಿ "ಬೋಧಿ ಮಂಡಲ" ರಚಿಸಿಕೊಂಡೆವು. ಇದನ್ನು ಸಿದ್ದಾರ್ಥ ವಿದ್ಯಾಸಂಸ್ಥೆಯ ಎಚ್ ಎಂ ಗಂಗಾಧರಯ್ಯನವರು ಉದ್ಘಾಟಿಸಿದರು. ದೊರೆರಾಜು ಅವರು ಅಧ್ಯಕ್ಷತೆ ವಹಿಸಿದ್ದರು. ಎಸ್ ಜಿ ಸಿದ್ದರಾಮಯ್ಯ, ನಾಗಪ್ಪ, ಜಿ ವಿ ಆನಂದಮೂರ್ತಿ, ಬೂದಾಳು ನಟರಾಜು, ಎಂ ಸಿ ಮೂರ್ತಿ, ಮಹಾಲಿಂಗಪ್ಪ, ಹನುಮಂತೇಗೌಡ, ಖಾನ್ ಸಹೋದರರು, ಕೆ ಪಿ ನಟರಾಜು, ಉಮಾಪತಿ ಮೊದಲಾದವರು ಇದ್ದರು.

ಯುವಶಕ್ತಿಗಾಗಿ 1994 ರಲ್ಲಿ ಸಮತಾ ಸಂಘಟನೆ ಶುರುವಾಯಿತು. ಇದರ ಉದ್ಘಾಟನೆಯನ್ನು ಆಗಿನ ಹಣಕಾಸು ಮಂತ್ರಿ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಿದ್ದರು. ಇದರಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು, ಅಧ್ಯಯನ ಶಿಬಿರವನ್ನು, ಸಭೆಗಳನ್ನು ಹಮ್ಮಿಕೊಂಡಿದ್ದೆವು. ಕಿಷನ್ ಜೀ ಅವರನ್ನು ಕರೆಯಿಸಿ, ಜಾಗತೀಕರಣದ ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣ ನಡೆಸಿದ್ದು ಉಲ್ಲೇಖಾರ್ಹವಾದದ್ದು.

ಅನಂತರ ಅಂತರ್ಜಾತಿ ವಿವಾಹಿತರ ಒಲವಿನ ವೇದಿಕೆ, ಮಾನವ ಮಂಟಪದ ಜಿಲ್ಲಾ ಶಾಖೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡೆವು. ಕೆ ಪಿ ನಟರಾಜು, ವೆಂಕಟೇಶ್, ಉಮಾಪತಿ, ನಾಗಾರ್ಜುನ ಸಾಗ್ಗೆರೆ ಶಾಂತಕುಮಾರ್, ಶೈಲಜಾ ಹನುಮಂತಯ್ಯ ಹತ್ತಿರವಾದರು. ಮಾನವ ಮಂಟಪ, ಸಮತಾ ಬಳಗದ ಅಡಿಯಲ್ಲಿ ಹಲವಾರು ಒಲವಿನ ವಿವಾಹಗಳನ್ನು ಮಂತ್ರಮಾಂಗಲ್ಯದ ಮೂಲಕ ಮಾಡಿಸಿದ್ದೇವೆ. ಹಿಂದುಳಿದ ವರ್ಗಗಳ ಆಯೋಗದ ಮುಂದೆ ಅಂತರ್ಜಾತಿ ವಿವಾಹಿತರ ಮಕ್ಕಳಿಗೆ ಮೀಸಲಾತಿ ಕೋರಿ ನಮ್ಮ ಅಹವಾಲು ಮಂಡಿಸಿದ್ದೆವು. ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿದ ಅಂತರ್ಜಾತಿ ವಿವಾಹಿತರ ಅಹವಾಲುಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಕೋರಿದ್ದೆವು. ತುಮಕೂರು ಮತ್ತು ಚಾಮರಾಜನಗರದವರು ಸಲ್ಲಿಸಿದ್ದ ಅಫೀಡವಿಟ್ ಗಳನ್ನು ನಟರಾಜ್ ಹುಳಿಯಾರ್ ಅವರು ಮೆಚ್ಚಿ ಒಲವು ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದರು.

ಆ ಹೊತ್ತಿಗೆ ಉದ್ಯೋಗದ ನಿಮಿತ್ತ ಚಾಮರಾಜನಗರಕ್ಕೆ ಹೋದ ಜಿ ಶ್ರೀನಿವಾಸ್ ಕುಮಾರ್ ಅಲ್ಲಿಯೂ ಯುವಕರ ಪಡೆಯೊಂದನ್ನು ಒಗ್ಗೂಡಿಸಿ ಅಲ್ಲೊಂದು ಸಮಾಜವಾದಿ ಅಧ್ಯಯನ ಕೇಂದ್ರ ರೂಪುಗೊಳ್ಳಲು ಕಾರಣರಾದರು. ಅಪೂರ್ವ ಡಿ'ಸಿಲ್ವ, ರಾಜೇಶ್, ಮಹೇಶ್ ಹರವೆ, ರವಿಶಂಕರ್ ಮತ್ತು ಉಮೇಶ್ ಗುಂಪಿನವರೇ ಆದರು.

ಮುಂದಿನ ಹೆಜ್ಜೆ ನೆಲಸಿರಿ ಟ್ರಸ್ಟ್ (ರಿ) ಶುರುವಾಯಿತು. ಹಿರಿಯ ವಕೀಲರು ಕರ್ನಾಟಕ ಸರ್ಕಾರದ ಮಾಜಿ ಅಡ್ವೊಕೇಟ್ ಜನರಲ್ ಆದ ಶ್ರೀ ಪ್ರೊ. ರವಿವರ್ಮ ಕುಮಾರ್ ಅವರು ಸ್ಥಾಪಕ ಅಧ್ಯಕ್ಷರಾಗಿದ್ದರು. ಈಗ ಗಂಗಾಧರ್ ಬೀಚನಹಳ್ಳಿ ಅಧ್ಯಕ್ಷರಾಗಿದ್ದಾರೆ. ತುಮಕೂರು, ಬೆಂಗಳೂರು, ಚಾಮರಾಜನಗರದಿಂದ ಆಯ್ದ 21 ಜನರ ಟ್ರಸ್ಟ್ ಇದು. ಇದರ ಅಡಿಯಲ್ಲಿ ಎರಡು ಬಾರಿ 'ಮಕ್ಕಳ ಕುವೆಂಪು' ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಂಡು ಕುವೆಂಪುರವರ ಆಯ್ದ ಬರಹಗಳನ್ನು ಐದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಕಿರಿಯರ ಮತ್ತು ಹಿರಿಯರ ವಿಭಾಗ ಎಂದು ಪ್ರತ್ಯೇಕಿಸಿ ಶಾಲಾ ಮಕ್ಕಳಿಗೆ ತಲುಪಿಸಿ ಪ್ರತಿಕ್ರಿಯೆಗಳನ್ನು ಆಹ್ವಾನಿಸಿ ಅತ್ಯುತ್ತಮ ಸ್ಪಂದನ ಮತ್ತು ಉತ್ತಮ ಸ್ಪಂದನಗಳನ್ನು ಗುರುತಿಸಿ 50,000 ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ವಿತರಿಸಲಾಗಿತ್ತು.

ಕಾಲೇಜು ವಿದ್ಯಾರ್ಥಿಗಳಿಂದ ತೇಜಸ್ವಿ, ಲಂಕೇಶ್ ಅವರ ಆಯ್ದ ಬರಹಗಳ ಬಗ್ಗೆ ಲೇಖನಗಳನ್ನು ಆಹ್ವಾನಿಸಿ, ಪ್ರಶಸ್ತಿ ನೀಡಲಾಗಿತ್ತು. 2019 ರಲ್ಲಿ ನೆಲೆಸಿರಿ ವತಿಯಿಂದ ಡಾ. ರಾಮಮನೋಹರ್ ಲೋಹಿಯಾ ಸಮತಾ ವಿದ್ಯಾಲಯ, ತುಮಕೂರು ಜಿಲ್ಲಾ ಸಾಹಿತ್ಯ ಪರಿಷತ್, ಪ್ರಜಾವಾಣಿ ಮತ್ತು ಸಿಜ್ಞಾ ಯುವ ಸಂವಾದ ಕೇಂದ್ರದ ಸಹಯೋಗದೊಂದಿಗೆ ಕುವೆಂಪು ಓದು ಅಭಿಯಾನ ಹಮ್ಮಿಕೊಂಡು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಕುವೆಂಪು ಓದು ಲೇಖನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯ ಬಹುಮಾನ ವಿತರಣೆಯನ್ನು ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಆ ಕಾರ್ಯಕ್ರಮಕ್ಕೆ ಕುವೆಂಪುರವರ ಮಗಳು ತಾರಿಣಿ ಮತ್ತು ಅಳಿಯ ಚಿದಾನಂದ ಗೌಡರವರು ಬಂದಿದ್ದರು.

ನೆಲಸರಿ ಟ್ರಸ್ಟ್ ನ ಪ್ರಕಾಶನ ವಿಭಾಗವೇ ನೆಲಸಿರಿ ಪ್ರಕಾಶನ. ನೆಲಸಿರಿ ಪ್ರಕಾಶನದಿಂದ ಅಮೂಲ್ಯವಾದ ಕೆಲವು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಅವುಗಳು ಈ ಕೆಳಕಂಡಂತಿವೆ

1. ಬಳಕೆದಾರ ಸಂಸ್ಕೃತಿ, ಚಿನ್ನದ ಕತ್ತಿಯ ಮೋಹ

ಮೂಲ ಸಚ್ಚಿದಾನಂದ ಸಿನ್ಹಾ: ಕನ್ನಡಕ್ಕೆ ಜಿ ಶ್ರೀನಿವಾಸ್ ಕುಮಾರ್

2. ಅನಾತ್ಮ – ಕೆ ಬಿ ಸಿದ್ದಯ್ಯ
3. ಲೋಹಿಯಾ ಸಮಾಜವಾದ ದರ್ಶನ – ಡಿ ಎಸ್ ನಾಗಭೂಷಣ
4. ಮೂಲಭೂತವಾದ ಮತ್ತು ರಾಷ್ಟ್ರ ಹಿತ (ಗುಜರಾತ್ ಹತ್ಯಾಕಾಂಡದ ಹಿನ್ನೆಲೆ) ಮೂಲ ಕಿಷನ್ ಪಟ್ನಾಯಕ್ – ಕನ್ನಡಕ್ಕೆ ಮಂಗಳೂರು ವಿಜಯ ಮತ್ತು ಬಿ ಎಂ ಹನೀಫ್ (ಇದರಲ್ಲಿ ರಹಮತ್ ತರೀಕೆರೆಯವರ ಒಂದು ಲೇಖನವೂ ಸೇರಿದೆ)
5. ಬುದ್ಧ ಗುರುವಿನ ಮಧ್ಯಮ ಮಾರ್ಗ – ಎಸ್ ನಟರಾಜು ಬೂದಾಳು
6. ಬುದ್ಧನೆಂಬ ಜ್ಞಾನಪೂರ್ಣ ಜಗಂಜ್ಯೋತಿ – ಎಸ್ ನಟರಾಜು ಮತ್ತು ಅಪೂರ್ವ ಡಿ'ಸಿಲ್ವ
7. ಇಂದಿಗೂ ಬೇಕಾದ ಲೋಹಿಯಾ – ಸಂ: ಎಚ್ ವಿ ಮಂಜುನಾಥ್ ಮತ್ತು ನಬೀಲ್

ಶಿರಾ ತಾಲ್ಲೂಕು ಗುಮ್ಮನಹಳ್ಳಿಯಲ್ಲಿ ದಿನಾಂಕ 9–5–2009 ರಂದು ಡಾ. ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಉದ್ಘಾಟನೆಯಾಯಿತು. ಪ್ರೊ. ರವಿವರ್ಮ ಕುಮಾರ್ ಅವರು ಸ್ಥಾಪಕ ಟ್ರಸ್ಟಿ. 2009 ರಿಂದ ಪ್ರತಿ ಬೇಸಿಗೆಯಲ್ಲಿ ಹತ್ತು ದಿನಗಳ ಕಲರವ ಚಿಣ್ಣರ ಮೇಳ ಹೆಸರಿನಡಿ ಸನಿವಾಸ ಬೇಸಿಗೆ ಶಿಬಿರವನ್ನು ಆರು ವರ್ಷ ನಡೆಸಿದವು. ಈ ಶಿಬಿರಕ್ಕೆ ಮೈಸೂರು ರಂಗಾಯಣದಿಂದ ಜನಾರ್ಧನ್ ಮತ್ತು ಸಂಗಡಿಗರು ಬಂದು ಹಾಡು, ನಾಟಕಗಳನ್ನು ಕಲಿಸುತ್ತಿದ್ದರು. ದೇವನೂರು ಮಹಾದೇವ, ವೈ ಮಹೇಶ್, ಅರ್ಕೇಶ್, ಅನುಸೂಯಮ್ಮ ಕೂಡ ಬರುತ್ತಿದ್ದರು. ಹಿರಿಯ ಸಮಾಜವಾದಿ ಬಿ ಗಣಪತಿಯಪ್ಪ ಬಂದಿದ್ದರು. ರವಿವರ್ಮ ಕುಮಾರ್, ಕಡಿದಾಳು ಶಾಮಣ್ಣ ದಂಪತಿಗಳು ಪ್ರತಿ ಶಿಬಿರಕ್ಕೂ ಬಂದು ಎರಡು ಮೂರು ದಿನ ಮಕ್ಕಳ ಜೊತೆ ಇರುತಿದ್ದರು. ಡಿ ಎಸ್ ನಾಗಭೂಷಣ ಸವಿತಾ ದಂಪತಿಗಳು, ನಟರಾಜ ಬೂದಾಳು ದಂಪತಿಗಳು ಬರುತ್ತಿದ್ದರು. ಸಿನಿಮಾ ನಟರಾದ ಸಂಚಾರಿ ವಿಜಯ್, ಉಮಾಶ್ರೀ, ಹನುಮಂತೇಗೌಡರವರು, ಸಿನಿಮಾ ನಿರ್ದೇಶಕರಾದ ಯೋಗರಾಜ್ ಭಟ್, ನಂಜುಂಡೇಗೌಡರವರು ಸಹ ಬಂದಿದ್ದರು. ರಾಜ್ಯದ ಮೂಲೆ ಮೂಲೆಗಳಿಂದ ಸಾಹಿತಿಗಳು, ಕಲಾವಿದರು, ಹೋರಾಟಗಾರರು ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿದ್ದರು. ತಮಿಳುನಾಡಿನಿಂದ ಅರುಣ್ ಮೌಳಿ ಬಂದಿದ್ದರು. ಕೆ ದೊರೆರಾಜು ಅವರ ಮಾರ್ಗದರ್ಶನದಲ್ಲಿ ರೈತ ಸಂಘ, ದಲಿತ ಸಂಘದ ಕಾರ್ಯಕರ್ತರ ಸಮತಾ ಬಳಗದ ಹೆಚ್ ವಿ ಮಂಜುನಾಥ್, ನಟರಾಜಪ್ಪ, ಮಾರುತಿ ಪ್ರಸಾದ್, ಡಾ॥ ಬಸವರಾಜು, ವೈ ಕೆ ಬಾಲಕೃಷ್ಣಪ್ಪ, ಡಾ॥ ರಂಗಸ್ವಾಮಿ, ಮಹಾಲಿಂಗಪ್ಪ ಮೊದಲಾದವರ ಸಹಯೋಗದಲ್ಲಿ ಮಲ್ಲಿಕಾ

ಬಸವರಾಜು, ಮಂಜುಳಾ, ಸಹನಾ, ಲಾಜವಂತಿ (ಕಡಿದಾಳು ಶಾಮಣ್ಣನವರ ಮಗಳು), ಬೆಳ್ಳಿ (ಪ್ರೊ. ರವಿವರ್ಮ ಕುಮಾರ್ ಅವರ ಮಗಳು) ಚೇತನಾ, ಅಖಿಲಾ, ಡಾ. ಅರುಂಧತಿ ಮೊದಲಾದ ಗೆಳತಿಯರು ನಾವು ನಾವೇ ಸೇರಿ ಹತ್ತು ದಿನಗಳ ಸನಿವಾಸ ಶಿಬಿರದ ಉಸ್ತುವಾರಿ ಹೊತ್ತು ನಿಭಾಯಿಸುತ್ತಿದ್ದೆವು. ಶಿರಾದಲ್ಲಿ ಆಗ ಪಶು ವೈದ್ಯರಾಗಿದ್ದ ಡಾ॥ ನಾಗರಾಜು ಮತ್ತು ತಂಡ ವೈದ್ಯರಾದ ಡಾ॥ ಮಂಜುನಾಥ್, ಡಾ॥ ರಾಮಕೃಷ್ಣ, ರೈತ ಸಂಘದ ಆರಾಧ್ಯ ಸಹೋದರರ, ವಕೀಲರಾದ ಕೇಶವ ಅವರ ಸಹಕಾರ ಮರೆಯಲಾಗದು. ಸರ್ಕಾರವೇ ಕನ್ನಡ ಶಾಲೆಗಳಲ್ಲಿ ಬೇಸಿಗೆಯಲ್ಲಿ ಬಿಸಿ ಊಟದ ವ್ಯವಸ್ಥೆ ಮಾಡಿದ ಮೇಲೆ ಬೇಸಿಗೆ ಶಿಬಿರ ನಿಲ್ಲಿಸಿದವು.

2011ರಲ್ಲಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಸಮತಾ ವಿದ್ಯಾಲಯಕ್ಕೆ ಬಂದು ವಿದ್ಯಾರ್ಥಿಗಳೊಂದಿಗೆ ಗೃಹ ಕೈಗಾರಿಕೆಯಲ್ಲಿ ತೊಡಗಿದ್ದ ಮಹಿಳೆಯರೊಂದಿಗೆ ಸಂವಾದ ನಡೆಸಿ ವಿದ್ಯಾಲಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ವಿದ್ಯಾಲಯದಲ್ಲಿ ಬೇಸಿಗೆ ಶಿಬಿರದ ಜೊತೆಗೆ ಗ್ರಾಮೀಣ ಮಕ್ಕಳಿಗೆ Spoken English ಮತ್ತು ಕಂಪ್ಯೂಟರ್ ಕಲಿಕೆಯನ್ನು ಶನಿವಾರ ಮತ್ತು ಭಾನುವಾರಗಳಲ್ಲಿ ಒಂದಷ್ಟು ವರ್ಷಗಳ ಕಾಲ ನಡೆಸಲಾಯಿತು. ಮಹಿಳೆಯರಿಗಾಗಿ ಉಣ್ಣೆ ಮತ್ತು ಖಾದಿ ಬಟ್ಟೆಯಲ್ಲಿ ಬ್ಯಾಗು ಮಾಡುವ ಗೃಹ ಕೈಗಾರಿಕೆಯನ್ನು ನಡೆಸಲಾಗಿತ್ತು. ಎರಡು ಎಕರೆ ಜಾಗ ಇದ್ದ ದೊಡ್ಡದೊಂದು ತೊಟ್ಟಿ ಮನೆಯಂತ ಕಟ್ಟಡದಲ್ಲಿ ವಿದ್ಯಾಲಯದ ಧ್ಯೇಯ ಉದ್ದೇಶಗಳಿಗೆ ಪೂರಕವಾಗಿರುವ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಈಗಲೂ ಇಲ್ಲಿ ವಿಚಾರ ಸಂಕಿರಣಗಳು, ಅಧ್ಯಯನ ಶಿಬಿರಗಳು ಮತ್ತು ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಬುದ್ಧ ಪೂರ್ಣಿಮೆಗಳನ್ನು ಆಚರಿಸಿದ್ದೇವೆ. ಮಂತ್ರ ಮಾಂಗಲ್ಯಗಳು ಇಲ್ಲಿ ನಡೆದಿವೆ. ಅಲೆಮಾರಿಗಳ ಬಗ್ಗೆ ಅಧ್ಯಯನ ಶಿಬಿರ, ಜಲ ಮನುಷ್ಯ ರಾಜೇಂದ್ರ ಸಿಂಗ್ ಅವರ ಜೊತೆ ಸಂವಾದ ಮತ್ತು ರಾಜ್ಯಮಟ್ಟದ ಜಲ ಕಾರ್ಯಕರ್ತರ ಕಾರ್ಯಾಗಾರಗಳನ್ನು ಸಹ ಸಂಘಟನೆಗಳೊಂದಿಗೆ ಏರ್ಪಡಿಸಿದ್ದೇವೆ ಮತ್ತು ಅಧ್ಯಯನ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂತರ್ಜಾತಿ ವಿವಾಹಿತರ ಮಕ್ಕಳ ಸಮಾವೇಶವನ್ನು 'ಸಂಗಮ' ಹೆಸರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಂತರ್ಜಾತಿ ವಿವಾಹಿತರ ಮಕ್ಕಳಾದ ಬೆಳ್ಳಿ, ಡಾ॥ ಸಂಘಮಿತಾ, ಡಾ॥ ಅತೀಶ್ ನೇತೃತ್ವ ವಹಿಸುವ ಮೂಲಕ ಸಮತೆಯ ಆಶಯದಲ್ಲಿ ಸ್ವಸ್ಥ ಸಮಾಜ ರೂಪಿಸುವ ಜವಾಬ್ದಾರಿ ಹೊರಲು ತಯಾರಾದರು.

ಸಮತಾ ವಿದ್ಯಾಲಯವು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ,

ಸಮ ಸಮಾಜ ಕಟ್ಟುವ, ಮೌಢ್ಯವನ್ನು ತೊಡೆದು ವೈಚಾರಿಕ, ವೈಜ್ಞಾನಿಕ ದೃಷ್ಟಿಕೋನ ಬೆಳೆಸುವ, ಸ್ವಚ್ಛ ಪರಿಸರ ಉಳಿಸುವ, ದೇಸಿ ಚಿಂತನೆ ಮತ್ತು ನೆಲ ಮೂಲ ಸಂಸ್ಕೃತಿಯನ್ನು ಕಾಪಿಡುವ ನಿಟ್ಟಿನಲ್ಲಿ ಚಳುವಳಿಯಂತೆ ಕೆಲಸ ಮಾಡಿದೆ, ಮಾಡುತ್ತಿದೆ. ನಮ್ಮ ಸಮಾಜವಾದಿ ಚಿಂತನೆಗಳ ಫಲವಾಗಿ, ಸಮಾಜಮುಖಿ ಚಟುವಟಿಕೆಯ ಮುಂದುವರಿಕೆಯಾಗಿ ಅಂತರ್ಜಾತಿ ವಿವಾಹಿತರ ಆರ್ಥಿಕ ಭದ್ರತೆಗಾಗಿ ಹೊಸದಾಗಿ ಮಾನವ ಮಂಟಪ ಸಹಕಾರ ಸಂಘ ಆರಂಭಿಸಿದ್ದೇವೆ. ಡಾ. ಅರುಂಧತಿ ಇದರ ಅಧ್ಯಕ್ಷರು.

ಸಮಾಜವಾದಿ ಅಧ್ಯಯನ ಕೇಂದ್ರದಿಂದ ಮಾನವ ಮಂಟಪ ಸಹಕಾರ ಸಂಘದವರೆಗಿನ ನಮ್ಮ ಪ್ರಯಾಣದಲ್ಲಿ ನಾವು ನಮ್ಮ ಅರಿವನ್ನು ವಿಸ್ತರಿಸಿಕೊಂಡಿದ್ದೇವೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಮೊಬೈಲ್ ಇರಲಿಲ್ಲ. ಕಂಪ್ಯೂಟರ್ ಇರಲಿಲ್ಲ. ಟಿವಿ ಇರಲಿಲ್ಲ. ಇಂಟರ್ನೆಟ್ ಇರಲಿಲ್ಲ. ಜಗತ್ತಿನ ಜ್ಞಾನ ಪಡೆಯಲು ಇದ್ದದ್ದು ಪುಸ್ತಕಗಳು ಮಾತ್ರ. ಸಮಾಜವಾದಿ ಅಧ್ಯಯನ ಕೇಂದ್ರದ ಲೈಬ್ರರಿಯಲ್ಲಿ ನಮ್ಮ ನಮ್ಮ ಪುಟ್ಟ ಬೆರಳುಗಳಿಂದ ಸಾಧ್ಯವಾದಷ್ಟು ಗಾಂಧಿ, ಅಂಬೇಡ್ಕರ್, ಲೋಹಿಯಾ, ಕುವೆಂಪುರವರ ಚಿಂತನೆಗಳನ್ನು ಎಟಕಿಸಿಕೊಂಡೆವು. ಅನಂತರ ಬುದ್ಧನ ಕರುಣೆಯನ್ನು, ಬಸವ, ಫುಲೆರವರ ವಿಚಾರಗಳನ್ನು ಅರಿಯುತ್ತಾ ಸಾಗಿದೆವು. ನಮ್ಮ ಸಮಾಜವಾದಿ ಚಿಂತನೆಗಳು, ಚಟುವಟಿಕೆಗಳು, ನಮ್ಮಲ್ಲಿ ಜವಾಬ್ದಾರಿ, ಅರಿವು ಮೂಡಿಸಿದವು. ಜಾತ್ಯತೀತ ಮನೋಭಾವ ಮೂಡಿಸಿದವು. ನಮ್ಮ ಅಭಿಪ್ರಾಯಗಳನ್ನು ಧೈರ್ಯವಾಗಿ ಹೇಳುತ್ತಾ ಜಾತಿಯ ಕಟ್ಟುಗಳನ್ನು ಮೀರಿದೆವು. ಹಾಗಾಗಿ ನಾವುಗಳು ಮದುವೆಯಾಗುವ ತೀರ್ಮಾನ ತೆಗೆದುಕೊಳ್ಳುವಾಗ ಜಾತಿ ನಮಗೆ ಅಡ್ಡಗೋಡೆ ಎನಿಸಲಿಲ್ಲ. 1987ರಿಂದ ಈವರೆಗೂ ನಮ್ಮ ಗುಂಪಿನಲ್ಲಿ ಹಲವಾರು ಒಲವಿನ ವಿವಾಹಗಳಾಗಿವೆ.

ಜಾತಿ ಒಳಗಿರಲಿ, ಜಾತಿ ಹೊರಗಿರಲಿ ಒಲವಿನ ವಿವಾಹಗಳೆಂದರೆ ಮನೆಯವರ ಬೆಂಬಲ ಅಷ್ಟಕಷ್ಟೇ. ಒಲವಿನ ವಿವಾಹವಾದ ನಮ್ಮಗಳ ಬೆಂಬಲಕ್ಕೆ ನಮ್ಮ ದೊಡ್ಡ ಬಳಗವೇ ಇದೆ. ಇದರ ಜೊತೆಗೆ ಜಿಲ್ಲೆಯಲ್ಲಿರುವ ರೈತ ಚಳುವಳಿ, ದಲಿತ ಚಳುವಳಿ, ಕಾರ್ಮಿಕ ಚಳುವಳಿ ಮತ್ತು ಪ್ರಗತಿಪರ ಸಂಘಟನೆಗಳು ಸದಾ ಬೆಂಬಲಕ್ಕೆ ನಿಂತಿವೆ.

ಎಲ್ಲಾ ಸಭೆ ಸಮಾರಂಭಗಳಿಗೆ, ಅಧ್ಯಯನ ಶಿಬಿರಗಳಿಗೆ ನಾವು ನಮ್ಮ ಪುಟ್ಟ ಪುಟ್ಟ ಮಕ್ಕಳನ್ನು ಎತ್ತಿಕೊಂಡು ಹೋಗುತ್ತಿದ್ದೆವು. ನಮ್ಮ ಗುಂಪಿನ ಎಲ್ಲರೂ ನಮ್ಮ ಪುಟಾಣಿಗಳಿಗೆ ಅಪಾರವಾದ ಪ್ರೀತಿ ತೋರಿಸುತಿದ್ದರು. ಹಾಗಾಗಿ ನಮ್ಮ ಮಕ್ಕಳಿಗಾಗಲಿ. ನಮಗಾಗಲಿ ಒಂಟಿತನ, ಅನಾಥ ಪ್ರಜ್ಞೆ ಕಾಡಲಿಲ್ಲ. ನಾವು ನಡೆಸುತ್ತಿದ್ದ

ಚರ್ಚೆಗಳಲ್ಲಿ ನಮ್ಮ ಮಕ್ಕಳು ಪಾಲ್ಗೊಳ್ಳುತ್ತಿದ್ದುದರಿಂದ ನಮ್ಮ ತರಹದ ಚಿಂತನೆಗಳು ಇರುವವರೆಲ್ಲರೂ ನಮ್ಮವರೇ ಎಂಬ broad vision ನಮ್ಮ ಮಕ್ಕಳಿಗೆ ಬಂತು.

ಕೆಲವೊಮ್ಮೆ ಹುಣ್ಣಿಮೆಗಳಲ್ಲಿ ಮಕ್ಕಳು–ಮರಿ ಸಮೇತ ಸಿದ್ಧರಬೆಟ್ಟಕ್ಕೆ ಹೋಗಿ ಟಿ.ಬಿ. ಯಲ್ಲಿ ಉಳಿಯುತ್ತಿದೆವು. ಊಟವಾದ ಮೇಲೆ ಒಂದು ದೊಡ್ಡ ರೂಂನಲ್ಲಿ ಹೆಂಗಸರು, ಮಕ್ಕಳು (ಮಕ್ಕಳೆಲ್ಲಾ ಆಗ ಸಣ್ಣವು) ಹೊರಗಡೆ ವರಾಂಡದಲ್ಲಿ ಗಂಡಸರು ಸೇರಿದರೆ ಮುಗಿಯಿತು. ಮಾತು.. ಮಾತು.. ರಾತ್ರಿ ಇಡೀ ಮಾತು, ಚರ್ಚೆ, ಜಗಳ, ವಾದ–ವಿವಾದ. ಬೆಳಗ್ಗೆ ಬೇಗನೆ ಸಿದ್ಧರಬೆಟ್ಟ ಹತ್ತಿ, ಇಳಿದು ಮಧ್ಯಾಹ್ನದ ಹೊತ್ತಿಗೆ ತುಮಕೂರಿಗೆ ವಾಪಸ್ ಆಗುತ್ತಿದ್ದೆವು. ಪ್ರವಾಸ ಹೋಗುತ್ತಿದ್ದೆವು. ಒಂದಷ್ಟು ವರ್ಷ ಪ್ರತಿ ಹುಣ್ಣಿಮೆಗಳಲ್ಲಿ ತುಮಕೂರಿನ ಎಂ. ಜಿ. ಸ್ಟೇಡಿಯಂನಲ್ಲಿ ಸಂಜೆ 6:30 / 7:00 ಕ್ಕೆ ಹೋಗಿ ನಮ್ಮ ನಮ್ಮ ಮನೆಗಳಿಂದ ತೆಗೆದುಕೊಂಡು ಹೋದ ಬುತ್ತಿ ಹಂಚಿ ತಿಂದು ಗಂಭೀರ ಚರ್ಚೆಗಳನ್ನು ನಡೆಸುತ್ತಿದ್ದವು. ಕೆಲವೊಮ್ಮೆ ಹರಟೆ ಬರುತ್ತಿದೆವು. ಈಗ ಎಲ್ಲರೂ ಬ್ಯುಸಿ. ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಅವರ ರಜೆ, ಪರೀಕ್ಷೆಗಳು, ವೇಳಾಪಟ್ಟಿ, ಉದ್ಯೋಗ ಬೇರೆ ಬೇರೆ ಇದೆ. ಆದರೂ ಎಲ್ಲರಿಗೂ ಅನುಕೂಲವಾಗುವಂತಹ ದಿನಗಳಲ್ಲಿ ಈಗಲೂ ವರ್ಷಕ್ಕೆ ಒಂದು ದಿನದ ಮಟ್ಟಿಗಾದರೂ, ಕೊನೆ ಪಕ್ಷ ಬುದ್ಧ ಪೂರ್ಣಿಮೆಯಂದು ಒಂದು ಕಡೆ ಸೇರಿ ಮಾತಾಡ್ತೀವಿ, ಹರಟ್ತೀವಿ. ನಮ್ಮ ಗುಂಪಿನ ಒಡನಾಟದಿಂದ ನಮಗೆ ಸಿಗುವ ಅರಿವು, ಆತ್ಮವಿಶ್ವಾಸ ಮತ್ತು ನೈತಿಕ ಸ್ಥೈರ್ಯ ಅಪಾರ.

1989ರಲ್ಲಿ ಕುವೆಂಪುರವರನ್ನು ನೋಡಲು ನಾವೆಲ್ಲ ಮೈಸೂರಿಗೆ ಹೋಗಿ ಬಂದೆವು. ಮೊದಲು ಕೇವಲ 10 ನಿಮಿಷದ ಭೇಟಿಗೆ ಮಾತ್ರ ನಮಗೆ ಅವಕಾಶ ಕೊಟ್ಟಿದ್ದರು. ನಮ್ಮ ಬಳಗದ ಪರಿಚಯವಾದ ಮೇಲೆ ಕುವೆಂಪುರವರಿಗೆ ತುಂಬಾ ಸಂತೋಷವಾಯಿತು. ಅಂತರ್ಜಾತಿ ವಿವಾಹವಾದವರು, ಮಂತ್ರ ಮಾಂಗಲ್ಯದ ಮೂಲಕ ವಿವಾಹವಾದವರು ನಮ್ಮ ಬಳಗದಲ್ಲಿರುವುದನ್ನು ಕೇಳಿ ಖುಷಿಯಾದ ಕುವೆಂಪುರವರು ಒಂದು ಗಂಟೆಗೂ ಜಾಸ್ತಿ ನಮ್ಮ ಜೊತೆ ಮಾತಾಡಿದರು. ಅನಿಕೇತನ ಗೀತೆ ಹೇಳಿಕೊಟ್ಟರು. ಅನಿಕೇತನ ಗೀತೆ ಮತ್ತು ವಿಶ್ವಮಾನವ ಸಂದೇಶ ಇದ್ದ ಕರಪತ್ರ ಕೊಟ್ಟು ಅದನ್ನು ಹೆಚ್ಚು ಹೆಚ್ಚು ಜನರಿಗೆ ತಲುಪಿಸಲು ಹೇಳಿದರು. ಕುವೆಂಪುರವರನ್ನು ನೋಡಿದ್ದು, ಮಾತನಾಡಿಸಿದ್ದು ನಮ್ಮ ಜೀವನದ ಧನ್ಯತೆಯ ಕ್ಷಣಗಳಲ್ಲೊಂದು.

ಸಮತಾ ಬಳಗ ಎಂದೇ ಗುರುತಿಸಿಕೊಳ್ಳುವ ನಮ್ಮ ಬಳಗದಲ್ಲಿ ವೈದ್ಯರಿದ್ದಾರೆ. ವಕೀಲರಿದ್ದಾರೆ, ಅಧಿಕಾರಿಗಳಿದ್ದಾರೆ, ಶಿಕ್ಷಕರಿದ್ದಾರೆ, ಗುಮಾಸ್ತರು,

ಗೃಹಿಣಿಯರು ಇದ್ದಾರೆ. ಸರ್ಕಾರಿ ನೌಕರಿಯಲ್ಲಿ ಇರುವವರು ಇದ್ದಾರೆ. ಸ್ವಂತ ಉದ್ಯಮ ಉದ್ಯೋಗದಲ್ಲಿ ಇರುವವರು ಇದ್ದಾರೆ. ಎಲ್ಲರೂ ಅವರವರ ಕ್ಷೇತ್ರಗಳಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿರುವವರೇ ಆಗಿದ್ದಾರೆ. ನಮ್ಮ ವಿದ್ಯೆ, ಉದ್ಯೋಗ, ಅಂತಸ್ತು ಯಾವುದೂ ನಮ್ಮ ನಡುವೆ ಗೋಡೆ ಎಬ್ಬಿಸಿಲ್ಲ. ಅಕಸ್ಮಾತ್ ಹಾಗೇನಾದರೂ ಮನಸ್ತಾಪಗಳು ಬಂದರೆ ನಾವು ನಾವೇ ಬಗೆಹರಿಸಿಕೊಳ್ಳುವೆವು. ನಮಗೆ ನಾವೇ critical insider ಗಳು.

ನಾವು ನಂಬಿಕೊಂಡ ವಿಚಾರ, ಸಿದ್ಧಾಂತ, ಮುಖ್ಯವಾಗಿ ಸ್ನೇಹ ಮತ್ತು ಜೀವಕಾರುಣ್ಯ ನಮ್ಮೆಲ್ಲರನ್ನು ಒಟ್ಟುಗೂಡಿಸಿದೆ. ರಕ್ತ ಸಂಬಂಧದ ಆಚೆಗೂ ಸ್ನೇಹ ಸಂಬಂಧದ ಮೂಲಕ ಮನುಷ್ಯ ಸಂಬಂಧಗಳನ್ನು ಅಷ್ಟೇ ಏಕೆ ಭೂಮಿ ಮೇಲಿನ ಇರುವೆಂಬತ್ತು ಕೋಟಿ ಜೀವರಾಶಿಯನ್ನು ಬೆಸೆದುಕೊಳ್ಳುವ ನಮ್ಮ ಬಳಗದ ಬಗ್ಗೆ ಹೆಮ್ಮೆ ಇದೆ. ನಮ್ಮ ಬಳಗದ ಶಕ್ತಿಯಂತಿದ್ದ, ಅಕಾಲ ಮೃತ್ಯುವಿಗೆ ಈಡಾದ ಜಿ ಶ್ರೀನಿವಾಸ್ ಕುಮಾರ್, ರಮೇಶ್ ಮತ್ತು ರಂಗಪ್ಪ ಅವರನ್ನು, ಭೌತಿಕವಾಗಿ ಇಲ್ಲವಾಗಿರುವ ಗುರುಗಳಾದ ಕೆ ಎಂ ಶಂಕರಪ್ಪ ಮತ್ತು ಕೆಬಿ ಸಿದ್ದಯ್ಯ ಅವರುಗಳನ್ನು ಪ್ರೀತಿಯಿಂದ ಇಲ್ಲಿ ನೆನಪಿಸಿಕೊಳ್ಳುತ್ತೇನೆ.

ಡಿ ಎಸ್ ನಾಗಭೂಷಣರವರು ಹಿಂದೊಮ್ಮೆ ಹೊಸ ಮನುಷ್ಯ ಪತ್ರಿಕೆಯಲ್ಲಿ ನಮ್ಮ ಬಳಗದ ಬಗ್ಗೆ ಹೇಳಿದ "ಸಮಾಜವಾದಿ ಯುವಜನ ಸಭಾದ ಹಲವು ಕಾರ್ಯಕರ್ತರ ಸ್ಫೂರ್ತಿಯಿಂದ ನಿರ್ಮಾಣಗೊಂಡ ತುಮಕೂರಿನ ಈ ಯುವ ಸಮಾಜವಾದಿಗಳ ಕೂಟ ತುಮಕೂರು ಸೀಮೆಯಲ್ಲಿ ರೈತ ಚಳುವಳಿ, ದಲಿತ ಚಳುವಳಿಗಳಲ್ಲದೆ ಜಾತಿ ವಿನಾಶ, ಬೌದ್ಧ ವಿಚಾರ ಪ್ರಸಾರ ಇತ್ಯಾದಿ ಸಮಾಜವಾದಿ ಆಶಯಗಳ ಕಾರ್ಯಕ್ರಮಗಳ ಹಿಂದಿನ ಚೇತನವಾಗಿ ಕೆಲಸ ಮಾಡಿದೆ. ಜಾತಿ ಕಟ್ಟುಗಳಿಂದ ಮುಕ್ತವಾದ ಈ ಸಮೂಹ ಈಗ ಸಮಾಜವಾದಿ ಭಾವ, ಭಾಂದವ್ಯದ ಮೇಲೆ ಒಂದು ಸಮುದಾಯ ಪ್ರಜ್ಞೆಯನ್ನು ರೂಪಿಸುವ ಕೆಲಸದಲ್ಲೂ ತೊಡಗಿದೆ" ಎಂಬ ಮಾತುಗಳನ್ನು ಪ್ರೀತಿಯಿಂದ, ಗೌರವದಿಂದ ನೆನೆಯುತ್ತೇನೆ.

(ಹೊಸ ಮನುಷ್ಯ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ನನ್ನ ಲೇಖನವೊಂದರ ವಿಸ್ತೃತ ರೂಪ ಈ ಲೇಖನ. ಅಗತ್ಯ ಮಾಹಿತಿ ನೀಡಿದ ಎನ್ ಜಿ ರಾಮಚಂದ್ರ, ನಟರಾಜಪ್ಪ ಯರಗುಂಟೆ ಮತ್ತು ಕುಚ್ಚಂಗಿ ಪ್ರಸನ್ನ ಅವರಿಗೆ ಧನ್ಯವಾದಗಳು)

# ಮರೆಯಲಾರದ ನೆನಪು

ಮಲ್ಲಿಕಾ ಬಸವರಾಜು


ಶಾಲೆ, ಕಾಲೇಜು, ಶಾಲಾ–ಕಾಲೇಜಿನ ಹಾಸ್ಟೆಲ್‌ಗಳು, ಗೊಲ್ಲರಹಟ್ಟಿ ದೇವಸ್ಥಾನ ಹೀಗೆ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಸಾಮಾಜಿಕ ಹಿನ್ನೆಲೆಯ ವಿದ್ಯಾರ್ಥಿಗಳೊಂದಿಗೆ, ವ್ಯಕ್ತಿಗಳೊಂದಿಗೆ ಒಡನಾಟದಲ್ಲಿ ನಾವು ಬಹಳಷ್ಟು ಕಲಿತೆವು. ಹೊಸ ಗೆಳತಿಯರು ಸಿಕ್ಕರು.

ಒಕ್ಕೂಟದ ಗೆಳತಿಯರ ಬದ್ಧತೆ ಎಷ್ಟಿತ್ತೆಂದರೆ, ಗುಬ್ಬಿಯಲ್ಲಿ ಅರಿವಿನ ಪಯಣದಲ್ಲಿದ್ದಾಗ ಲಲಿತ ಮಲ್ಲಪ್ಪ ಅವರ ತಾಯಿ ನಿಧನರಾದ ಸುದ್ದಿ ಬಂದಾಗ ಅವರು ವಿಚಲಿತರಾಗದೆ ಅವರೊಬ್ಬರೇ ಕಾರ್ಯಕ್ರಮ ಮೂಟುಕುಗೊಳಿಸಿ, ಊರಿಗೆ ಹೋದದ್ದು; ಮಮ್ತಾಜ್ ಅವರ ಗಂಡನಿಗೆ ಆಕ್ಸಿಡೆಂಟ್ ಆದ ದಿನವೇ ಅವರನ್ನು ಆಸ್ಪತ್ರೆಗೆ ಸೇರಿಸಿ, ಕೂಡಲೇ ಗಾರ್ಮೆಂಟ್ಸ್ ನೌಕರರಿಗಾಗಿ ಏರ್ಪಾಡಾಗಿದ್ದ ಅರಿವಿನ ಪಯಣದಲ್ಲಿ ಭಾಗವಹಿಸಿದರು. ಅನೇಕರು ತಮ್ಮ ತಮ್ಮ ಪುಟ್ಟ ಮಕ್ಕಳನ್ನೂ ಜೊತೆಗೆ ಕರೆತಂದು ಭಾಗವಹಿಸುತ್ತಿದ್ದು ಮರೆಯಲಾರದ ನೆನಪು.

ಅರಿವಿನ ಪಯಣವು ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸಿತು. ಹಳ್ಳಿ ಬಿಟ್ಟು ಓದಲು ನಗರಕ್ಕೆ ಬಂದವರಿಗೆ ಇಂತಹ ಸಂಘಟನೆಗಳು ನಮ್ಮ ಬೆಂಬಲಕ್ಕೆ ಇರುತ್ತವೆ ಎಂಬ ಧೈರ್ಯ ತಂದುಕೊಟ್ಟಿತು.

ವಿದ್ಯಾ ಕಾಲೇಜಿನ ಕಾರ್ಯದರ್ಶಿಗಳು ಇದನ್ನು ಕೇವಲ ಮಕ್ಕಳಿಗೆ ಹೇಳಿದರೆ ಸಾಲದು, ಪೋಷಕರ ಸಭೆ ಸೇರಿಸಿ ಅವರಿಗೆ ಇವೆಲ್ಲವನ್ನೂ ತಿಳಿಸಬೇಕು ಎಂದರು.

# ಸಮಾವೇಶ



# ಸಾಮಾನ್ಯ ಮಹಿಳೆಗೂ ಗೌರವ ಸಿಗಬೇಕು

ಡಾ. ಕೆ. ವಿದ್ಯಾ ಕುಮಾರಿ

ಇಲ್ಲಿ ಸೇರಿರುವ ಎಲ್ಲರಿಗೂ ಅಡ್ವಾನ್ಸ್ ಆಗಿ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರುತ್ತೇನೆ. ಮುಖ್ಯವಾಗಿ ಈ ಹೊತ್ತು ಈ ಒಂದು ಮಹಿಳಾ ಹೋರಾಟ ಇದೆಯಲ್ಲ ಇದನ್ನು ಕಳೆದ ವರ್ಷ ಅರಿವಿನ ಪಯಣದ ಮೂಲಕ ಪ್ರಾರಂಭ ಮಾಡಿದ್ರು. ಒಂದು ವರ್ಷದ ನಂತರ ಈಗ ಅಂತಿಮ ಘಟ್ಟಕ್ಕೆ ಬಂದಿದೆ. ರಾಜ್ಯದ ಅನೇಕ ಕಡೆಗಳಿಂದ ಮಹಿಳೆಯರು, ಹೋರಾಟಗಾರ್ತಿಯರು ಬಂದು ಸೇರಿದ್ದಾರೆ. ಅವರಿಗೆ ಈ ಜಿಲ್ಲೆಗೆ ಸ್ವಾಗತ ಕೋರುತ್ತಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕುವೆಂಪು ಒಂದು ಮಾತನ್ನು ಹೇಳುತ್ತಾರೆ. ನಮ್ಮ ಅಡುಗೆ ಮನೆಯಲ್ಲಿ ಬೇಯುವ ಹೆಣ್ಣು ಮಕ್ಕಳು, ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುವಂತಹ ಹೆಣ್ಣು ಮಕ್ಕಳಿಗೆ ನಾವು ಯಾವಾಗ ಗೌರವ ಸಲ್ಲಿಸುತ್ತೇವೋ ಆ ದಿನ ಅಂತರಾಷ್ಟ್ರೀಯ ಮಹಿಳಾ ದಿನಕ್ಕೆ ಅರ್ಥ ಬರುತ್ತೆ ಎಂದು. ಈವತ್ತು ಕೂಡ ಸಾಕಷ್ಟು ಹೆಣ್ಣುಮಕ್ಕಳಿಗೆ ನಾಳೆ ಅಂತಾರರಾಷ್ಟ್ರೀಯ ಮಹಿಳಾ ದಿನಾಚರಣೆ ಇದೆ ಎಂಬ ಅರಿವೂ ಕೂಡ ಇಲ್ಲ. ಅವರದೇ ಬದುಕಿನ ಅಥವಾ ಜೀವನದ ಹೋರಾಟದಲ್ಲಿ ಅವರು ಮುಳುಗಿ ಹೋಗಿದ್ದಾರೆ. ಅಂದರೆ ಹೊಟ್ಟೆ ತುಂಬಿಸುವುದು, ಕುಟುಂಬ ನಿಭಾಯಿಸುವ ಕಾಯಕದಲ್ಲಿ ಮುಳುಗಿದ್ದಾರೆ. ಯಾವಾಗ ಅವರಿಗೆ ಇದರ ಅರಿವು ಬರುತ್ತದೆಯೋ ಆಗ ಈ ದಿನಾಚರಣೆಗೆ ಒಂದು ಅರ್ಥ ಬರುತ್ತೆ ಅಂತ ಅನ್ನಿಸುತ್ತದೆ.

ನಾನು ಯಾವಾಗಲೂ ಒಂದು ಮಾತು ಹೇಳುತ್ತಿರುತ್ತೇನೆ. ನಾವೀಗ ಜೀವನದ ಒಂದು ಹೋರಾಟದಲ್ಲಿ ನಿಂತಿದ್ದೇವೆ. ಆದರೆ ಒಂದು ಅಧಿಕಾರದಲ್ಲಿದ್ದಾಗ, ಅಧಿಕಾರಿಯಾಗಿ, ಸಿಇಓ ಆಗಿದ್ದೇನೆ ಅಂತ ಕೊಡುವ ಗೌರವ ಬೇಡ. ಒಬ್ಬ ಮನುಷ್ಯನಾಗಿ, ಸಾಮಾನ್ಯ ವ್ಯಕ್ತಿಯಾಗಿ ಇಂತಹ ಗೌರವ ಸಿಕ್ಕಿದಾಗ

ಅದಕ್ಕೊಂದು ಅರ್ಥ ಬರುತ್ತದೆ.

ಆಕೆ ಅಧಿಕಾರದಲ್ಲಿರಲಿ ಬಿಡಲಿ, ಉನ್ನತ ಸಾಧನೆ ಮಾಡಿದ್ದಾಳೆ ಎಂದು ಗೌರವ ಸಿಗಬಾರದು. ಸಾಮಾನ್ಯ ಮಹಿಳೆಗೂ ಗೌರವ ಸಿಕ್ಕಿದೆ ಎನ್ನುವಾಗ ಇಂಥಾ ದಿನಕ್ಕೆ ಅರ್ಥ ಬರುತ್ತದೆ. ಏಕೆಂದರೆ ತನ್ನ ಪಾಡಿಗೆ ತಾನು ಕೆಲಸ ಮಾಡುತ್ತಾ ತನ್ನ ಪಾಡಿಗೆ ಕುಟುಂಬ ನಿರ್ವಹಿಸುತ್ತಾ ನಿಭಾಯಿಸುವುದು ಸುಲಭದ ಮಾತಲ್ಲ. ಸಾಕಷ್ಟು ಕಷ್ಟ ನಷ್ಟವನ್ನು ಅನುಭವಿಸುತ್ತಾಳೆ. ಬದುಕನ್ನು ಸವೆಸುತ್ತಾಳೆ. ಅಂತಹ ಮಹಿಳೆಗೆ ನಾವು ಗೌರವ ನೀಡಬೇಕು. ಅಂತಹವರನ್ನು ಸಮಾಜ ಗುರುತಿಸಬೇಕು. ಆಗ ಮಾತ್ರ ಇಂತಹ ಹೋರಾಟಕ್ಕೆ, ಈ ಒಂದು ದಿನಾಚರಣೆಗೆ ಅರ್ಥ ಬರುತ್ತದೆ ಎಂದು ಹೇಳುತ್ತಾ ಈ ಒಂದು ಅವಕಾಶಕ್ಕೆ ವಂದಿಸುತ್ತ ಮಾತನ್ನು ಮುಗಿಸುತ್ತೇನೆ.

> ಅನೇಕ ಹೆಣ್ಣು ಗಂಡು ಮಕ್ಕಳು ಹಳ್ಳಿಗಳಲ್ಲಿ ತಾವು ಅನುಭವಿಸುವ ಅಸ್ಪೃಶ್ಯತೆ, ತಾರತಮ್ಯಗಳ ಬಗ್ಗೆ ಹೇಳಿಕೊಳ್ಳುತ್ತಾ ಕಂಬನಿದುಂಬಿದರು. ಯಾವುದೇ ತೊಂದರೆಯಾದರೂ ಸಂಪರ್ಕಿಸಿ ಎಂದು ಒಂದಿಬ್ಬರ ಫೋನ್ ನಂಬರ್ ಕೊಟ್ಟೆವು. ಅವರ ಮೂಲಕ ಸಾಂತ್ವನ ಕೇಂದ್ರಕ್ಕೆ ದೂರು ದಾಖಲಾಗದೊಡಗಿದವು.

# ಬಿಸಿಲೇ ಬೆಳದಿಂಗಳು

ಪ್ರೊ. ಸಬಿಹಾ ಭೂಮೀಗೌಡ

ಎಲ್ಲರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನದ ಹಾರ್ದಿಕ ಶುಭಾಶಯಗಳು. ಬಿಸಿಲನ್ನು ಬೆಳದಿಂಗಳು ಎಂದು ಭಾವಿಸಿ ರಸ್ತೆಯುದ್ದಕ್ಕೂ ಉತ್ಸಾಹ, ಸಂತೋಷ ಮತ್ತು ಹುರುಪಿನಿಂದ ಜಾಥಾದಲ್ಲಿ ಬಂದ ನಿಮ್ಮೆಲ್ಲರಿಗೆ ಒಕ್ಕೂಟದ ಪರವಾಗಿ ಪ್ರೀತಿಯ ನಮನಗಳು. ತುಮಕೂರಿನ ಒಕ್ಕೂಟದ ಎಲ್ಲ ಗೆಳತಿಯರು, ಸಮಾನಮನಸ್ಕ ಸಹಭಾಗಿ ಸಂಘಟನೆಗಳು ಈ ದಿನಕ್ಕಾಗಿ ಹಲವು ತಿಂಗಳುಗಳಿಂದ ಕಾಯುತ್ತಿದ್ದರು; ಕೆಲಸ ಮಾಡುತ್ತಿದ್ದರು. ಹಲವು ಪ್ರಗತಿಪರ ಮತ್ತು ಜಾತಿ ವಿನಾಶದ ಚಳುವಳಿಗಳಿಗೆ ತುಮಕೂರು ಜಿಲ್ಲೆಯು ಪ್ರಸಿದ್ಧವಾಗಿದೆ. ಉತ್ಸಾಹೀ ಸಮಾನಮನಸ್ಕ ಗುಂಪುಗಳು ಒಗ್ಗೂಡಿ ಇಂದಿನ ಈ ಸಮಾವೇಶ ಮತ್ತು ನಾಳಿನ ವಿಚಾರ ಸಂಕಿರಣವನ್ನು ಆಗುಮಾಡಿದ್ದಾರೆ. ಹೀಗಾಗಿ ಅವರೆಲ್ಲರಿಗೆ ಮೊತ್ತಮೊದಲು ಅಭಿನಂದನೆಗಳನ್ನು ನಾವು ಸಲ್ಲಿಸೋಣ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟದ ಹನ್ನೊಂದನೇ ಸಮಾವೇಶ ಇದು. ಒಕ್ಕೂಟದ ಆರಂಭವು ಸಮಕಾಲೀನ ಸಮಾಜದ ಮಹಿಳಾ ವಿರೋಧೀ ಚಟುವಟಿಕೆಗಳಿಗೆ ಪ್ರತಿಕ್ರಿಯೆ ರೂಪವಾಗಿ ಹುಟ್ಟಿಕೊಂಡಿತು. 2012ರಲ್ಲಿ ಕರಾವಳಿ ಕರ್ನಾಟಕವು 'ಅನೈತಿಕ ಪೋಲಿಸ್ಗಿರಿ' ಎಂಬ ಹಿಂದುತ್ವವಾದಿ ಪುಂಡರ ಗುಂಪಿನ ಆಕ್ರಮಣದಿಂದ ನಲುಗಿತ್ತು. ಶಾಲೆ–ಕಾಲೇಜು, ಹೊಟೇಲು. ಸಮುದ್ರತೀರ, ಸಿನಿಮಾ ಥಿಯೇಟರ್, ಪಾರ್ಕು, ಪ್ರವಾಸ ಹೀಗೆ ವಿವಿಧ ಸಾರ್ವಜನಿಕ ಜಾಗಗಳಲ್ಲಿ ಭಿನ್ನ ಸಮುದಾಯಗಳ ಯುವಕ–ಯುವತಿಯರು ಒಟ್ಟು ಸೇರುವುದನ್ನು ನಿಷೇಧಿಸುತ್ತ, ಹಾಗೆ ಸೇರಿದವರನ್ನು ಹಿಡಿದು ತದುಕಿ, ಬಲವಂತದಿಂದ ಅವರನ್ನು ಪೊಲೀಸ್ ಠಾಣೆಗೆ ಎಳೆದೊಯ್ದು, ಅವರ ಹೆತ್ತವರನ್ನು ಠಾಣೆಗೆ ಕರೆಯಿಸಿ, ನೀತಿಪಾಠಗಳನ್ನು ಹೇಳುತ್ತಿದ್ದ ಕಾಲವದು. ಇದರ ಭಾಗವಾಗಿಯೇ ಪಬ್ ಒಂದರಲ್ಲಿ ಕುಡಿಯುತ್ತ ಕುಳಿತಿದ್ದರೆಂದು ಧಾಳಿ

ನಡೆಸಿ, ದಾಂಧಲೆ ಎಬ್ಬಿಸಿ ಯುವಕರನ್ನು ಮನಬಂದಂತೆ ಥಳಿಸಿದ್ದರು. ಅದಾದ ಬಳಿಕ ಮಂಗಳೂರಿನ ಹೋಂಸ್ಟೇ ಒಂದರಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದ ಯುವಕ–ಯುವತಿಯರ ಗುಂಪಿನ ಮೇಲೆ ಅದೇ ಹಿಂದುತ್ವವಾದಿ ಪುಂಡರ ಗುಂಪಿನವರು  ಧಾಳಿ ಮಾಡಿ, ಯುವತಿಯರ ಮೇಲೆ ದೈಹಿಕ ಹಲ್ಲೆ ನಡೆಸಿದರು. ಒಟ್ಟಿನಲ್ಲಿ ಹೆತ್ತವರು ಶಾಲಾ ಕಾಲೇಜಿಗೆ ಹೋದ ತಮ್ಮ ಮಕ್ಕಳು ಸುರಕ್ಷಿತವಾಗಿ ಮನೆಗೆ ಮರಳಿ ಬಂದಾರೇ ಎಂದು ಜೀವ ಕೈಯಲ್ಲಿ ಹಿಡಿದು ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. 2012ರ ಡಿಸೆಂಬರ್ ಕೊನೆಯಲ್ಲಿ ದೆಹಲಿಯಲ್ಲಿ ನಡೆದ ನಿರ್ಭಯಾ ಪ್ರಕರಣವು ನಮ್ಮೆಲರ್ಲ ಸಹನೆಯ ಕಟ್ಟೆಯನ್ನು ಒಡೆದು, ಬಡಿದೆಬ್ಬಿಸಿತು.

ಆಗ ಪ್ರತಿರೋಧದ ನೆಲೆಯಲ್ಲಿ ಹುಟ್ಟಿಕೊಂಡದ್ದೇ 'ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆ'. ಹೋಂಸ್ಟೇ ಘಟನೆಯ ಸತ್ಯಶೋಧನೆ ನಡೆಸುವುದು, ಸಾಮಾಜಿಕರ ಪ್ರಜ್ಞೆಯನ್ನು ಜಾಗೃತಗೊಳಿಸುವುದು ವೇದಿಕೆಯ ಮುಖ್ಯ ಉದ್ದೇಶವಾಗಿತ್ತು. ಸ್ಥಳೀಯ ಮಹಿಳಾ ಮತ್ತು ಮಹಿಳಾಪರ ಸಂಘಟನೆಗಳ ಈ ಕೆಲಸಕ್ಕೆ ಕರ್ನಾಟಕದ ವಿವಿಧ ಜಿಲ್ಲೆಗಳ ಸಮಾನಮನಸ್ಕ ಗೆಳತಿಯರು ಸ್ಪಂದಿಸಿ ಕೈಜೋಡಿಸಿ, ಅವರ ಕನಸಿಗೆ ನೀರೆರೆದುದು ಮಾತ್ರವಲ್ಲ, ಅದನ್ನು ವಿಸ್ತಾರಗೊಳಿಸಿದರು. ಅದರ ಫಲವಾಗಿ 2013ರ ಮಾರ್ಚ್ 7–8 ಬೃಹತ್ ನೆಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಆಗ 'ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆ'ಯನ್ನು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟ'ವೆಂದು ವಿಸ್ತರಿಸಲಾಯಿತು.

ಸಮಾನಮನಸ್ಕ ಕರ್ನಾಟಕದ ಎಲ್ಲ ಸಂಘಟನೆಗಳವರೂ ಈ ಕಾರಣಕ್ಕೆ ಒಗ್ಗೂಡಿ, ಗಟ್ಟಿ ದನಿಯಾಗಿ ರೂಪುಗೊಳ್ಳುವುದು ನಮ್ಮ ಮುಖ್ಯ ಉದ್ದೇಶವಾಗಿತ್ತು. ಆರಂಭದಿಂದಲೇ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಮೂರು ನೆಲೆಗಳಲ್ಲಿ ಯೋಜಿಸಿಕೊಂಡೆವು. ಯುವಜನತೆಯನ್ನು ತಲುಪಲು ಒಂದು ದಿನದ ವಿಚಾರಸಂಕಿರಣದ ಆಯೋಜನೆ, ಮಹಿಳೆಯರು ಯುದ್ಧ ವಿರೋಧಿಗಳು ಮತ್ತು ಶಾಂತಿಪ್ರಿಯರೆಂದು ಸಾರುವ ಕಪ್ಪು ಉಡುಗೆಯಲ್ಲಿ ಮಹಿಳೆಯರು ಸಾರ್ವಜನಿಕ ಜಾಗದಲ್ಲಿ ಮೌನವಾಗಿ ನಿಂತು ಪ್ರತಿಭಟನೆ ನಡೆಸುವ ಕಾರ್ಯಕ್ರಮ ಹಾಗೂ ಎಲ್ಲ ಸಮಾನಮನಸ್ಕ ಸಂಘಟನೆಗಳು, ಯುವ ಸಮೂಹ, ವಿದ್ಯಾರ್ಥಿಗಳು, ನಾಗರಿಕರನ್ನು ಒಳಗೊಂಡ ಬೃಹತ್ ಸಾರ್ವಜನಿಕ ಸಮಾವೇಶವನ್ನು ಆಯೋಜಿಸುವುದು 2013ರಿಂದ ತಪ್ಪದೆ ನಡೆದುಕೊಂಡು ಬಂದಿದೆ. 2017ರಿಂದ ಲಿಂಗತ್ವ ಸೂಕ್ಷ್ಮತೆಯ ತರಬೇತಿಯನ್ನು ಒಕ್ಕೂಟದ ಚಟುವಟಿಕೆಯಾಗಿ ಸೇರಿಸಿಕೊಂಡಿದ್ದೇವೆ. ಇದರಿಂದ

ಲಕ್ಷಾಂತರ ಜನರನ್ನು ಇದುವರೆಗೆ ತಲುಪಲು ಸಾಧ್ಯವಾಗಿದೆ. ಸಮಸಮಾಜ ಮತ್ತು ಲಿಂಗತ್ವ ಸಮಾನತೆಯ ಸಮಾಜ ಕಟ್ಟಲು ಇಂಥ ಚಟುವಟಿಕೆಗಳು ಪೂರಕವಾಗಿವೆ. ತುಮಕೂರಿನ ಗೆಳತಿಯರು ಅದರಲ್ಲೂ ಚಿಕ್ಕನಾಯಕನಹಳ್ಳಿಯ ಗೆಳತಿಯರು ಅರಿವಿನ ಪಯಣವನ್ನು ತುಂಬ ಪರಿಣಾಮಕಾರಿಯಾಗಿ ಮಾಡಿದ್ದಾರೆ ಎಂಬುದು ಇಲ್ಲಿ ಉಲ್ಲೇಖನೀಯ. ಅರಿವಿನ ಪಯಣವಲ್ಲದೆ, ಅಧ್ಯಯನ ಶಿಬಿರ, ಅಧ್ಯಯನ ಪ್ರವಾಸವನ್ನು ಪ್ರತಿ ವರ್ಷ ನಡೆಸುತ್ತೇವೆ. ಗೆಳತಿಯರು ಒಂದೆಡೆ ಸೇರಿ ಕೌದಿ ಹೊಲಿಯುತ್ತ ಅನೇಕ ವಿಚಾರಗಳನ್ನು ಕಲಿಯುವ, ತಿಳಿಸುವ ಕಾರ್ಯಕ್ರಮ ನಡೆಸುವುದು ಮತ್ತು ಹೀಗೆ ಹೊಲಿದ ಕೌದಿಯನ್ನು ಸಮಾವೇಶದ ಅತಿಥಿಗಳಿಗೆ ನೀಡುವುದು ಕೂಡ ನಿರಂತರ ನಡೆದುಕೊಂಡು ಬಂದಿದೆ. ಸಮಾವೇಶದ ಬಳಿಕ ತಪ್ಪದೆ ಸ್ಮೃತಿ ಸಂಚಯ ಹೊತ್ತಗೆಯನ್ನು ಪ್ರತಿ ವರ್ಷ ತರಲಾಗುವುದು. ಕರೋನಾ ಕಾಲದಲ್ಲಿ ಆನ್ ಲೈನ್ ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಕಾರ್ಯ ನಿರ್ವಹಿಸಿದ್ದೂ ಇದೆ. ಬಹುಮುಖ್ಯವಾಗಿ ಎಲ್ಲಬಗೆಯ ಸಾಮಾಜಿಕ ಹೋರಾಟಗಳಿಗೆ ಒಕ್ಕೂಟವು ದನಿಗೂಡಿಸಿದೆ.

ಇವತ್ತು ನಡೆಯುತ್ತಿರುವುದು ಹನ್ನೊಂದನೆಯ ಸಮಾವೇಶ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಮಂಡ್ಯ, ಕೋಲಾರ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಇಂಥ ಸಮಾವೇಶಗಳನ್ನು ಒಕ್ಕೂಟವು ನಡೆಸಿದೆ. ಇಂಥ ಸಂದರ್ಭಗಳಲ್ಲಿ ಭಾರತದ ವಿವಿಧ ರಾಜ್ಯಗಳ ಮಹಿಳಾ ಚಳುವಳಿಯ ನಾಯಕಿಯರನ್ನು ಸಮಾವೇಶಕ್ಕೆ ಕರೆಸುತ್ತ ಬಂದಿದ್ದೇವೆ. ದೇಶದ ವಿವಿಧ ಭಾಗಗಳ ಮಹಿಳಾ ಹೋರಾಟಗಾರ್ತಿಯರ ನಡುವೆ ಬಾಂಧವ್ಯ ಇದರಿಂದ ಬೆಳೆಯಲು ಸಾಧ್ಯವಾಗಿದೆ; ಅವರೂ ಕರ್ನಾಟಕದ ಮಹಿಳಾ ಹೋರಾಟಗಳನ್ನು ಅವರ ಊರಿಗೆ ಪಸರಿಸಲು ಇದರಿಂದ ಸಾಧ್ಯ. ನಿದರ್ಶನಕ್ಕೆ ಮಂಗಳೂರಿನ ಮೊದಲ ಸಮಾವೇಶವನ್ನು ರಾಜಸ್ತಾನದ ಸಾಥಿನ್ ಭಾಂವ್ರಿದೇವಿ ಅವರು ಉದ್ಘಾಟಿಸಿದರು. ತನ್ನ ಕರ್ತವ್ಯದ ಭಾಗವಾಗಿ ಬಾಲ್ಯವಿವಾಹವನ್ನು ತಡೆದ ತಪ್ಪಿಗೆ ಆಕೆಗೆ ಊರಿನ ಉಳ್ಳವರು ಸಾಮೂಹಿಕ ಅತ್ಯಾಚಾರದಂಥ ಘೋರ ಶಿಕ್ಷೆಯನ್ನು ನೀಡಿದರು. ಆದರೆ ಭಾಂವ್ರಿದೇವಿ ಎದೆಗುಂದದೆ ಇಂದಿಗೂ ನ್ಯಾಯಕ್ಕಾಗಿ ಹೋರಾಡುತ್ತಿರುವ ದಿಟ್ಟ ಮಹಿಳೆ. ಮೈಸೂರಿನ ಸಮಾವೇಶವನ್ನು ಮಣಿಪುರದಲ್ಲಿ ಸೈನಿಕರಿಗೆ ನೀಡಿದ ವಿಶೇಷಾಧಿಕಾರವನ್ನು ಹಿಂಪಡೆಯಲು ಒತ್ತಾಯಿಸಿ ಪ್ರತಿಭಟಿಸಿದ ಇಮಾ ನಾನ್ಬಿ, ಚಿತ್ರ ಅಹೆಂತಮ್, ರೇಣು ತಕಲೆಂಬಂ ಅವರುಗಳು ಉದ್ಘಾಟಿಸಿದರು. ಭೂಪಾಲ್ ಅನಿಲ ದುರಂತದ ವಿರುದ್ಧ ಮತ್ತು ಅದರ ಸಂತ್ರಸ್ಥರ ಪರವಾಗಿ ಇಂದಿಗೂ ಹೋರಾಡುತ್ತಿರುವ ರಶೀದಾಬಿ ಮತ್ತು

ಚಂಪಾದೇವಿ ಶುಕ್ಲಾ ಅವರು ಬೆಂಗಳೂರಿನ ಸಮಾವೇಶದ ಅತಿಥಿಗಳಾಗಿದ್ದರು. ಇದೇ ರೀತಿಯಲ್ಲಿ ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ ಮೇಧಾ ಪಾಟ್ಕರ್, ಕವಿತಾ ಕೃಷ್ಣನ್, ತೆಲಂಗಾಣದ ಗೋಗು ಶ್ಯಾಮಲಾ, ಸ್ವತಹ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿ, ಅಲ್ಲಿಂದ ಸಿಡಿದೆದ್ದು, ಲಾ ಪದವಿ ಓದಿ ವಕೀಲೆಯಾಗಿ, ಇಂದು ಮುಂಬೈನಲ್ಲಿ ದೌರ್ಜನ್ಯಕ್ಕೆ ಒಳಗಾದ ಸಾವಿರಾರು ಮಹಿಳೆಯರಿಗೆ ಅಭಯನೀಡುವ ಕೆಲಸದಲ್ಲಿ ತೊಡಗಿರುವ ಫ್ಲೇವಿಯಾ ಆ್ಯಗ್ನೇಸ್, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಕಾರ್ಯದರ್ಶಿಯಾದ ಅಮರ್ಜಿತ್ ಕೌರ್, ಮಹಿಳಾಪರ ಹೋರಾಟಗಾರ್ತಿ ದೆಹಲಿಯ ಶಬ್ನಂಹಶ್ಮಿ, ತೆಲುಗು ಕವಿ, ದಲಿತ ಮತ್ತು ಜನಪರ ಹೋರಾಟಗಾರ್ತಿ ಜೂಪಕ ಸುಭದ್ರ ಮತ್ತು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಸಂಚಾಲಕರಾದ ಮರಿಯಂ ಧವಳೆ ಅವರುಗಳು ಹಿಂದಿನ ವಿವಿಧ ಜಿಲ್ಲಾ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದಾರೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟ ಎನ್ನುವುದು ಒಂದು ಸಂಘವಲ್ಲ; ಸಂಘಟನೆಯಲ್ಲ; ಇದಕ್ಕೆ ಪದಾಧಿಕಾರಿಗಳೂ ಇಲ್ಲ. ಇದು ಸಮಾನಮನಸ್ಕ ಜನರ ಮತ್ತು ಸಂಘಟನೆಗಳ ಒಂದು ಜಾಲ. ಪ್ರಜಾಸತ್ತಾತ್ಮಕವಾಗಿ ನಿರ್ಣಯಗಳನ್ನು ಕೈಗೊಂಡು, ಒಕ್ಕೂಟವು ಕಾರ್ಯ ನಿರ್ವಹಿಸುತ್ತಿದೆ. ಒಕ್ಕೂಟ ತನ್ನದೇ ಆದ ಸಂವಿಧಾನವನ್ನೂ ರಚಿಸಿಕೊಂಡಿದೆ. ಪ್ರತಿಬಾರಿ ಜನರಿಂದ ದೇಣಿಗೆ ಸಂಗ್ರಹಿಸಿ, ಕಾರ್ಯಕ್ರಮವಾದ ಕೆಲವೇ ದಿನಗಳಲ್ಲಿ ಲೆಕ್ಕಪತ್ರವನ್ನು ಸಾರ್ವಜನಿಕವಾಗಿ ಮಂಡಿಸಲಾಗುತ್ತದೆ. ಜೀವವಿರೋಧೀ ವ್ಯಕ್ತಿ, ಸಂಘಟನೆ, ಶಕ್ತಿಗಳಿಂದ ಹಣ ಸ್ವೀಕರಿಸದಿರುವುದು, ಕೊಡುವವರಿದ್ದಾರೆಂದು ನಿಗದಿತ ಮೊತ್ತಕ್ಕಿಂತ ಹೆಚ್ಚು ದೇಣಿಗೆ ಒಬ್ಬರಿಂದ ಪಡೆಯದಿರುವುದು ಒಕ್ಕೂಟದ ಮುಖ್ಯ ನಿಯಮವಾಗಿದೆ. ಸಂದರ್ಭ–ಸನ್ನಿವೇಶಗಳಿಗೆ ಅನುಗುಣವಾಗಿ ಒಕ್ಕೂಟದ ಆದ್ಯತೆಗಳು, ಕಾರ್ಯಸ್ವರೂಪಗಳು ವಿನ್ಯಾಸಗೊಳ್ಳುತ್ತವೆ. ಸುಮಾರು 150ಕ್ಕೂ ಹೆಚ್ಚು ಕರ್ನಾಟಕದ ಪ್ರಗತಿಪರ, ಜೀವಪರ, ಮಹಿಳಾಪರ ಮತ್ತು ಮಹಿಳೆಯರ ಸಂಘಗಳು ಒಕ್ಕೂಟದ ಜೊತೆ ಕೈಜೋಡಿಸಿವೆ. ದಲಿತ–ದಮನಿತರ ಸಂಘಟನೆಗಳು, ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳು, ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಯಕರ್ತೆಯರ, ಪೌರಕಾರ್ಮಿಕರ ಸಂಘಟನೆಗಳು, ಗಾರ್ಮೆಂಟ್ಸ್, ಮನೆಕೆಲಸದ ಕಾರ್ಮಿಕ ಸಂಘಟನೆಗಳು, ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆಗಳು ಒಕ್ಕೂಟದ ಸಹಭಾಗಿಗಳಾಗಿದ್ದಾರೆ. ರಂಗಕರ್ಮಿಗಳು, ಕಲಾವಿದರು, ಸಾಹಿತಿಗಳು, ಅಕಾಡೆಮಿಕ್ ವಲಯದವರೂ ಒಕ್ಕೂಟದೊಂದಿಗಿದ್ದಾರೆ. ನಮ್ಮ ದೇಶದ

ಸಂವಿಧಾನದಲ್ಲಿ ನಂಬಿಕೆ ಇರುವ, ದ್ವೇಷ ರಾಜಕಾರಣದ ಬದಲು ಪ್ರೀತಿಯ ರಾಜಕಾರಣದಲ್ಲಿ ನಂಬಿಕೆ ಇರುವ ಎಲ್ಲರೂ ಒಕ್ಕೂಟದ ಸದಸ್ಯರಾಗಬಹುದು. ಇದಕ್ಕೆ ಸದಸ್ಯತ್ವ ಶುಲ್ಕವೂ ಇಲ್ಲ.

ತುಮಕೂರಿನ ಈ ಬಾರಿಯ ನಮ್ಮ ಘೋಷವಾಕ್ಯ

**ಸಂವಿಧಾನವೇ ಉಸಿರು**
**ಬಹುತ್ವವವೇ ಬದುಕು.**

ಸಂವಿಧಾನಕ್ಕೂ ಬಹುತ್ವಕ್ಕೂ ದೊಡ್ಡ ಅಪಾಯ ಎದುರಾಗಿರುವ ಈ ಹೊತ್ತಲ್ಲಿ ಈ ಎರಡೂ ಮೌಲ್ಯಗಳನ್ನು ತಿಳಿಯುವ, ತಿಳಿಸುವ ಪಸರಿಸುವ ಮತ್ತು ಬದುಕಲ್ಲಿ ಅಳವಡಿಸಿಕೊಳ್ಳುವ ಕೆಲಸವನ್ನು ನಾವೆಲ್ಲರೂ ಮಾಡೋಣ.

# ನಾವು ದುರ್ಬಲರಲ್ಲ

## ನಾಹಿದಾ ಜಮ್ ಜಮ್

ಮೊದಲನೆಯದಾಗಿ ತಮ್ಮೆಲ್ಲರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು. ಈ ದಿನ ನಾವು ಮಹಿಳಾ ದಿನಾಚರಣೆ ಮಾಡುತಿದ್ದೇವೆ. ಮಹಿಳೆಯರಿಗಾಗಿಯೇ ಒಂದು ವೇದಿಕೆ ಇದೆ. ಒಂದು ದಿನಾಚರಣೆ ಇದೆ ಎಂಬುದೇ ಒಂದು ಕಡೆ ಸಂತೋಷದ ಸಂಗತಿ. ಆದರೆ ಮಹಿಳೆಯರಿಗೇ ಯಾಕಿದೆ? ದೌರ್ಜನ್ಯ ಮುಕ್ತ ಅಸಮಾನತೆ ಮುಕ್ತ ವಾತಾವರಣ ಕಷ್ಟ ಸಾಧ್ಯವಾಗುತ್ತಿರುವುದನ್ನು ಆಡಳಿತದಲ್ಲಿ ನೋಡುತ್ತಿದ್ದೇವೆ.

ಸಮಾಜದಲ್ಲಿ ಜನ ತುಂಬಾ ಕೇಳುತ್ತಿರುತ್ತಾರೆ ಸಮಾನತೆ ಬೇಕು ಎಂದು. ಒಬ್ಬ ತಾಯಿ ಒಮ್ಮೆ ಹೇಳಿದಳು ನಮ್ಮ ದೇಶದಲ್ಲಿ ಅಸಮಾನತೆ ಅನ್ನೋದು ಹೋಗಬೇಕಾದರೆ ನಮ್ಮ ರಾಜ್ಯಸಭೆ ಲೋಕಸಭೆಗಳಲ್ಲಿ 50% ಮಹಿಳೆಯರು ಇರಬೇಕು ಅಂತ. ಅದಕ್ಕೆ ನೀವೆಲ್ಲ ಯೋಚನೆ ಮಾಡಿ ನಾವೆಲ್ಲರೂ ಮಹಿಳೆಯರು ಸೇರಿ ಮತದಾನವನ್ನು ನಿರ್ಧರಿಸುವುದೇ ಆದರೆ ಒಂದು ದೇಶದ ರಾಜಕೀಯ ಚಿತ್ರಣವನ್ನೇ ಬದಲಿಸಬಹುದು.

ನಮ್ಮ ಸಂವಿಧಾನದಲ್ಲಿ ಮಹಿಳೆಯರಿಗಾಗಿ 33% ಮೀಸಲಾತಿ ಇದೆ. ನೋಡಿ ಪಂಚಾಯ್ತಿ ಅಧ್ಯಕ್ಷರು ಮಹಿಳೆ ಇರುತ್ತಾರೆ ಆದರೆ ಗಂಡ ಎಲ್ಲಾ ಕೆಲಸ ಮಾಡುತ್ತಿರುತ್ತಾರೆ. ಮಹಿಳೆ ಕುರ್ಚಿ ಅಲಂಕರಿಸುತ್ತಿದ್ದಾಳೆ ಹೊರತು ಕೆಲಸ ಮಾಡಲು ಮುಂದೆ ಬರುವವರ ಸಂಖ್ಯೆ ಕಡಿಮೆ ಇದೆ. ಆದರೆ ನಾವು ಹೆಣ್ಣುಮಕ್ಕಳು ಸಮರ್ಪಕವಾಗಿ ಕಾರ್ಯದಕ್ಷತೆಯಿಂದ ಕೆಲಸ ಮಾಡುವ ಮೂಲಕ ಪುರುಷ ಪ್ರಧಾನವಾಗಿರುವ ಸಮಾಜದಲ್ಲಿ ಬೇರೂರಿರುವ "ಮಹಿಳೆ ಅಬಲೆ" ಎಂಬ ಮನಸ್ಥಿತಿಯನ್ನು ಅಳಿಸಿಹಾಕುವ ಸಂದೇಶ ತಲುಪಿಸಬೇಕು.

ನಾನು ಈ ಸಂದರ್ಭದಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಅವರಿಗೆ

ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ. ಈ ದಿನ ನಾವೆಲ್ಲಾ ಹೀಗೆ ಒಂದು ಕಡೆ ಸೇರಿದ್ದೇವೆ ಎಂದಾದರೆ, ನಮಗೆ ಮೀಸಲಾತಿ ಇದೆ ಎಂದಾದರೆ ಅದಕ್ಕೆ ಅಂಬೇಡ್ಕರ್ ಅವರೇ ಕಾರಣರಾಗಿದ್ದಾರೆ.

ಒಂದು ಹೇಳಿಕೆ ಇದೆ "behind every succesful man there is a woman" ಎಂದು. ಆದರೆ ನಾನು ಹೇಳುತ್ತೇನೆ ಎಲ್ಲಾ ಯಶಸ್ವಿ ಮಹಿಳೆ ಹಿಂದೆ ಯಾರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಅಂಬೇಡ್ಕರ್ ಅವರಂತೂ ಇದ್ದಾರೆ.

ತಮ್ಮೆಲ್ಲರಿಗೂ ಗೊತ್ತಿದೆ ಕೋವಿಡ್ ಸಮಯದಲ್ಲಿ ನಾನು ಪ್ರೆಗ್ನೆಂಟ್ ಇದ್ದರೂ ಕೂಡ ಫೀಲ್ಡಿಗೆ ಇಳಿದು ಕೆಲಸ ಮಾಡಿದೆ. ನಾನು ಪ್ರೆಗ್ನೆಂಟ್ ಅನ್ನೋ ವಿಷಯವನ್ನು ಯಾರಿಗೂ ತಿಳಿಸಿರಲಿಲ್ಲ. ಮೆಟರ್ನಿಟಿ ಆಸ್ಪತ್ರೆಯಿಂದ ಹೊರಗೆ ಬರುವಾಗ ಯಾರೋ ನೋಡಿ ವಿಷಯ ಎಲ್ಲರಿಗೂ ತಿಳಿಯಿತು. ಎಲ್ಲರೂ ಪ್ರಶ್ನಿಸುತ್ತಿದ್ದರು ನೀವು ಪ್ರೆಗ್ನೆಂಟ್ ಲೇಡಿ, ಕೋವಿಡ್ ಸಮಯದಲ್ಲಿ ಯಾಕೆ ಕೆಲಸ ಮಾಡಿ ರಿಸ್ಕ್ ತಗೋತೀರಾ ಅಂತ.

ಸಾಮಾನ್ಯವಾಗಿ ಎಲೆಕ್ಷನ್ ಟೈಮುಗಳಲ್ಲಿ ಮಹಿಳಾ ನೌಕರರನ್ನು ಪಟ್ಟಿಮಾಡಿ ಪಕ್ಕಕ್ಕೆ ಇಡುತ್ತಾರೆ. ಯಾಕೆಂದರೆ ಇವರು ಸಾಕಷ್ಟು ಸಬೂಬು ಕಾರಣಗಳನ್ನು ಕೊಡುತ್ತಾರೆ– ಹುಷಾರಿಲ್ಲ, ಮುಟ್ಟಾಗಿದ್ದೇವೆ ಇತ್ಯಾದಿಯಾಗಿ. ನಾನು ಹೆಣ್ಣು. ಇವೆಲ್ಲ ಸಹಜ ನೈಸರ್ಗಿಕ ಅವಸ್ಥೆಗಳು. ಇವೇ ನಮ್ಮ ದೌರ್ಬಲ್ಯಗಳಾಗಿ ನಾವು ಮಾಡುವ ಕೆಲಸದ ಮೇಲೆ ಪರಿಣಾಮ ಬೀರಬಾರದು ಅನ್ನುವುದು ನನ್ನ ಭಾವನೆ. ಆದುದರಿಂದಲೇ ಪ್ರೆಗ್ನೆಂಟ್ ಆಗಿದ್ದರೂ ನನ್ನ ಕರ್ತವ್ಯವನ್ನು ನಿಭಾಯಿಸಿದೆ.

ಒಂದು ವಿಷಯ, ಕೋವಿಡ್ ಸಮಯದಲ್ಲಿ ನಿಮಗೆಲ್ಲಾ ತಿಳಿದಿರುವಂತೆ ಸಾಕಷ್ಟು ಸಾವು ಸಂಭವಿಸಿದವು. ಇದರಲ್ಲಿ ಕೋವಿಡ್ ನಿಂದ ಸತ್ತವರು ಅರ್ಧದಷ್ಟು ಇದ್ದರೆ. ಇನ್ನರ್ಧ ಜನ ಭಯದಿಂದಲೇ ಸತ್ತರು. ಇಂತಹ ಸಂದರ್ಭದಲ್ಲಿ ಒಬ್ಬ ಪ್ರೆಗ್ನೆಂಟ್ ಲೇಡಿ, ಬೀದಿಗಿಳಿದು ಹೋಗಿದ್ದ ಸಮಯದಲ್ಲಿ ಸುರಕ್ಷಿತವಾಗಿ ಕೆಲಸ ಮಾಡುತ್ತಿದ್ದಾಳೆ ಎಂಬ ವಿಚಾರ ಒಂದಷ್ಟು ಜನಕ್ಕೆ ಧೈರ್ಯ ತುಂಬಿದ್ದಾದರೆ ಅದೇ ಸಮಾಧಾನ.

ಈ ಕೆಲಸವನ್ನು ನಾನೊಬ್ಬಳೇ ಮಾಡಿದ್ದೇನೆ ಎಂದರ್ಥವಲ್ಲ. ಅಲ್ಲಿ ನೋಡಿ ವೇದಿಕೆಯ ಮುಂಭಾಗದಲ್ಲಿ ಸಾಲಾಗಿ ಕುಳಿತಿದ್ದಾರಲ್ಲ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಅವರುಗಳ ಶ್ರಮ ಸಾಕಷ್ಟಿದೆ. ಇವತ್ತು ನಾವು ಕೋವಿಡ್ ಅನ್ನು ಗೆದ್ದಿದ್ದೇವೆ ಎಂದರೆ ಇಂತಹ ಅಸಂಖ್ಯಾತ

ಕಾರ್ಯಕರ್ತರುಗಳೆಲ್ಲ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಬಾಡಿಗೆ ಮನೆಯ ಮಾಲೀಕರು ಅವರನ್ನು ಮನೆಗೆ ಬಿಟ್ಟುಕೊಳ್ಳಲು ಆಕ್ಷೇಪಿಸುತ್ತಿದ್ದರು. ಏಕೆಂದರೆ ನೀವು ಅಲ್ಲಿ ಇಲ್ಲಿ ಹೊರಗಡೆ ಓಡಾಡಿ ಬರುತ್ತೀರ. ಕೋವಿಡ್ ಬಂದರೆ ನಮ್ಮ ಗತಿ ಏನು ಎಂಬ ಭಯದಿಂದ. ಇಂತಹ ಸಂದರ್ಭಗಳನ್ನೆಲ್ಲ ಆ ಹೆಣ್ಣು ಮಕ್ಕಳು ಎದುರಿಸಿದ್ದಾರೆ.

ನನಗೆ ಸಾಕಷ್ಟು ಸಂದರ್ಭಗಳಲ್ಲಿ ಒತ್ತಾಸೆಯಾಗಿ ನಿಂತಿದ್ದು ನನ್ನ ತಾಯಿ. ತಾಯಿ ಶಕ್ತಿಯ ಸ್ವರೂಪ. ಇವತ್ತು ಮಹಿಳೆ ಎಲ್ಲಾ ಕ್ಷೇತ್ರದಲ್ಲೂ ಕೆಲಸ ಮಾಡಿ ಸಾಧಿಸಿ ತೋರಿಸುತ್ತಿದ್ದಾಳೆ. ಆದರೂ ನಮ್ಮ ಸಮಾಜದ ದೃಷ್ಟಿಕೋನ ಬದಲಾಗಿಲ್ಲ. ಲೇಡಿ ಪೊಲೀಸ್, ಲೇಡಿ ಡಾಕ್ಟರ್, ಲೇಡಿ ತಹಶೀಲ್ದಾರ್, ಲೇಡಿ ಆಫೀಸರ್ ಇಂತಹ ಪ್ರತ್ಯೇಕ ದೃಷ್ಟಿಕೋನ ಬಿಟ್ಟು ಸಹಜವಾಗಿ ಸಮಾನವಾಗಿ ಕಾಣುವಂತಾಗಬೇಕು. ನಮ್ಮ ಸಮಾಜದಲ್ಲಿ ಹೆಣ್ಣು ಮಗುವಿಗೆ ಹುಟ್ಟುವಾಗಲೇ ಅಯ್ಯೋ ಹೆಣ್ಣು ಮಗು ಎಂಬ ಅಸಮಾಧಾನದ ಸ್ವಾಗತ ಎದುರಾಗುತ್ತದೆ. ಇನ್ನು ಬದುಕಿನುದ್ದಕ್ಕೂ ಗಂಡಿನ ನೆರಳಡಿಯಲ್ಲೇ ಹೆಣ್ಣನ್ನು ಕಾಣಬಯಸುತ್ತಾರೆ. ಆದರೆ ಸತ್ಯ ಏನೆಂದರೆ ಹೆಣ್ಣಿನ ಅಸ್ತಿತ್ವದಲ್ಲಿ ಇಡೀ ಸಮಾಜದ ಅಸ್ತಿತ್ವ ಇರುವುದು. ಹೆಣ್ಣಿನ ಉಳಿವಿನಲ್ಲೇ ಲೋಕದ ಉಳಿವು ಅಡಗಿದೆ. ಕೊನೆಯದಾಗಿ ನಾನು ಹೇಳಲು ಬಯಸುವುದೆಂದರೆ

**ಯಾ ದೇವಿ ಸರ್ವಭೂತೇಷು**
**ಶಕ್ತಿ ರೂಪೇಣ ಸಂಸ್ಥಿತಾ**
**ಯಾದೇವಿ ಸರ್ವಭೂತೇಷು**
**ಶಾಂತಿ ರೂಪೇಣ ಸಂಸ್ಥಿತಾ**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ**
**ನಮೋ ನಮಃ...**

ಬರಹ ರೂಪ: ಮೇ. ನಾ. ತರಂಗಿಣಿ

# ಉದಾತ್ತ ನಿಸ್ಪೃಹತೆ: ಶೈಲಜಾ ಟೀಚರ್

ಡಾ. ಎಚ್. ಎಸ್. ಅನುಪಮಾ

ಕೇರಳದ ಶಿವಪುರಂನ ಪ್ರೌಢಶಾಲೆ. ವಿದ್ಯಾರ್ಥಿಯೊಬ್ಬ ತಿಕ್ಕಲನಂತೆ ವರ್ತಿಸತೊಡಗಿದ್ದ. ಹೆಚ್ಚುಕಡಿಮೆ ಎಲ್ಲರೂ ಅವನ ಮೈಮೇಲೆ ದೆವ್ವ ಬಂದಿದೆಯೆಂದು ಯೋಚಿಸುತ್ತಿದ್ದರು. ದೆವ್ವ ಬಿಡಿಸುವ ವಿಧಾನಗಳನ್ನು ಪಾಲಕರಿಗೆ ಸೂಚಿಸಿದ್ದರು. ಆದರೆ ಪ್ರಯೋಜನವಾಗಿರಲಿಲ್ಲ. ಅವನನ್ನು ತಡೆದುಕೊಳ್ಳುವುದು ಮನೆಯವರಿಗೂ, ಶಾಲೆಯವರಿಗೂ ಬಲು ಕಷ್ಟವಾಗಿತ್ತು. ಹಿಂಸೆ, ಪ್ರತಿಹಿಂಸೆ ನಡೆಯುತ್ತಿತ್ತು. ಆಗ ಶಾಲೆಯ ವಿಜ್ಞಾನದ ಟೀಚರ್ ಅವನನ್ನು ಹಿಡಿದದ್ದು ದೆವ್ವವೂ ಅಲ್ಲ, ಭೂತವೂ ಅಲ್ಲ, ಅವನದು ಮಾನಸಿಕ ಅಸ್ವಸ್ಥತೆಯೆಂದು ಸ್ಪಷ್ಟವಾಗಿ ಗುರುತಿಸಿದರು. ಅವನ ಮನೆಗೆ ಹೋಗಿ, ತಾಯ್ತಂದೆಯರೊಡನೆ ಮಾತನಾಡಿ, ಮನೋರೋಗ ತಜ್ಞರ ಬಳಿಗೆ ತಾವೇ ಒಯ್ದರು. ಅವನು ಕ್ರಮೇಣ ಮೊದಲಿನಂತಾದದ್ದು ಎಲ್ಲರಲ್ಲೂ ಸಮಾಧಾನ ತಂದಿತ್ತು. ರೋಗದ ವಿಷಯದಲ್ಲಿ ತರ್ಕಬದ್ಧವಾಗಿ ಯಾವಾಗ ಏನು ಮಾಡಬೇಕೋ ಆಗ ಅದನ್ನು ಮಾಡಿದರೆ ಮಾತ್ರ ನಿಯಂತ್ರಣ ಸಾಧ್ಯವೆಂದು ಆ ಟೀಚರ್ ಅರಿತಿದ್ದರು. ಅಂದಷ್ಟೇ ಅಲ್ಲ, ಮುಂದೆಯೂ ಅವರ ವೈಚಾರಿಕ ಮುಂದಾಳ್ತನ ಅವರದೇ ನೆಲವನ್ನು ರೋಗದ ಭಯಾನಕ ಹಿಡಿತದಿಂದ ಪಾರುಮಾಡಿತು. ಅವರು ಶೈಲಜಾ ಟೀಚರ್.

ಅಂತಹ ಕೆಲವು ಹೆಣ್ಣು ಜೀವಗಳಿರುತ್ತವೆ: ಮಾಡುವ ಕೆಲಸದಿಂದ, ಆಯ್ದುಕೊಳ್ಳುವ ದಾರಿಯಿಂದ, ಶ್ರದ್ಧೆ-ಬದ್ಧತೆಯಿಂದ ಅವರ ಇರವನ್ನು ಲೋಕ ಗುರುತಿಸಬಲ್ಲದು. ಹೆಸರು, ಹಣದ ಹಪಾಹಪಿಯಿರದ ಅವರ ಗಮನವೆಲ್ಲ ಮಾಡುವ ಕೆಲಸವನ್ನು ಚೆಂದಗಾಣಿಸುವ ಕಡೆಗೇ ಇರುತ್ತದೆ. ಅವರ ಶ್ರಮದ ಚೆಲುವು ಎಂತಹುದೆಂದರೆ ಗಮನಿಸದಿರಲು ಲೋಕಕ್ಕೆ ಸಾಧ್ಯವೇ ಇಲ್ಲ.

ಅಂಥವರಲ್ಲಿ ನಮ್ಮ ನೆರೆಯ ರಾಜ್ಯ ಕೇರಳದ ಮಾಜಿ ಆರೋಗ್ಯ

ಸಚಿವರೂ, ಹಾಲಿ ಶಾಸಕರು ಮತ್ತು ವಿಧಾನಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕರೂ ಆಗಿರುವ ಕೆ. ಕೆ. ಶೈಲಜಾ ಒಬ್ಬರು. ವಿಶ್ವವೇ ಹೊಸಹೊಸ ಸಾಂಕ್ರಾಮಿಕ ರೋಗಗಳಿಂದ ತತ್ತರಿಸುತ್ತಿರುವಾಗ ಧೃಢವಾಗಿ ನಿಂತು ನಿಫಾ ಮತ್ತು ಕೋವಿಡ್-19 ಎಂಬ ಭಯಾನಕ ವೈರಸ್‌ಗಳು ಕಡಲತಡಿಯ ಕೇರಳವನ್ನು ಹೊಸೆದು ಹಾಕದಂತೆ ದಕ್ಷ ತಂಡವೊಂದನ್ನು ಕಟ್ಟಿಕೊಂಡವರು. ನಡುರಾತ್ರಿಯೋ ಹಗಲೋ, ತನ್ನ ಆರೋಗ್ಯ ಸರಿಯಿದೆಯೋ ಇಲ್ಲವೋ, ಉಂಡೆನೋ ಇಲ್ಲವೋ ಎಂದು ಲೆಕ್ಕಿಸದೇ ಪ್ರತಿಯೊಂದು ಹಂತದಲ್ಲೂ ವ್ಯವಸ್ಥೆಯನ್ನು ಖುದ್ದಾಗಿ ಪರಿಶೀಲಿಸಿದರು. ಪ್ರತಿದಿನ ರಾತ್ರಿ 8ಕ್ಕೆ ಅವರು ನಡೆಸುತ್ತಿದ್ದ ಪತ್ರಿಕಾಗೋಷ್ಠಿಯ ಮಾಹಿತಿಗಳು ಜನರಲ್ಲಿ ಧೈರ್ಯ ತುಂಬುತ್ತಿದ್ದವು. ವಸ್ತುಸ್ಥಿತಿಯನ್ನು ಅರ್ಥ ಮಾಡಿಸುವಂತಿದ್ದವು. ವಿಶ್ವದ ಮಾಧ್ಯಮಗಳೂ ಆ ಪತ್ರಿಕಾಗೋಷ್ಠಿಯನ್ನು ಎದುರು ನೋಡುತ್ತಿದ್ದರು. ಕಾಯಿಲೆಯ ಬಗೆಗೆ, ಅದರ ಹರಡುವಿಕೆ-ನಿಯಂತ್ರಣ-ಚಿಕಿತ್ಸೆಯ ಬಗೆಗೆ ಖಚಿತ ಮಾಹಿತಿಗಳನ್ನು ನೀಡುತ್ತ, ಏನು ಮಾಡಬೇಕೆನ್ನುವುದನ್ನು ತಿಳಿಸುತ್ತ ಹೋದ ಶೈಲಜಾ ಸಮಗ್ರ ದೃಷ್ಟಿಕೋನದಿಂದ ವಿಸ್ತೃತ ಕಾರ್ಯಯೋಜನೆ ರೂಪಿಸಿ ಅಚ್ಚುಕಟ್ಟಾಗಿ ಜಾರಿಯಾಗುವಂತೆ ನೋಡಿಕೊಂಡರು.

ಪ್ರೌಢಶಾಲೆಯ ಭೌತಶಾಸ್ತ್ರ ಶಿಕ್ಷಕಿಯಾಗಿ ಎರಡು ದಶಕ ಕೆಲಸ ಮಾಡಿದ್ದ ಶೈಲಜಾ ಟೀಚರ್, ಆರೋಗ್ಯಮಂತ್ರಿಯಾಗಿ ವಿಶ್ವವೇ ತಮ್ಮತ್ತ ಗಮನಿಸುವಂತೆ ಕೆಲಸ ನಿರ್ವಹಿಸಿದರು. ವಿಶ್ವಸಂಸ್ಥೆಯೂ ಅವರ ಕಾರ್ಯದಕ್ಷತೆ, ಬದ್ಧತೆ, ಪರಿಶ್ರಮಗಳನ್ನು ಗುರುತಿಸಿ ಗೌರವಿಸಿತು.

***

ಕಣ್ಣೂರು ಜಿಲ್ಲೆಯ ಮಟ್ಟನೂರಿನ ಕೆ. ಕುಂದನ್ ಮತ್ತು ಕೆ. ಕೆ. ಶಾಂತಾ ಅವರ ಮಗಳಾಗಿ ನವೆಂಬರ್ 20, 1956ರಲ್ಲಿ ಹುಟ್ಟಿದ ಶೈಲಜಾ ಅವರದು ಕಮ್ಯುನಿಸ್ಟ್ ಹೋರಾಟಗಾರರ ಮನೆತನ. ತಾಯಿಯ ತಾಯಿ ಎಂ. ಕೆ. ಕಲ್ಯಾಣಿಯಮ್ಮ, ಇರಿಟ್ಟಿ ಊರಿನ ಪ್ರಗತಿಪರ ಚಿಂತನೆಗಳ ಮೂಲಸೆಲೆಯಂತೆ ಇದ್ದವರು. ಬ್ರಿಟಿಷರ ಕಾಲದಲ್ಲಿ ಆರಂಭದ ಕಮ್ಯುನಿಸ್ಟರಿಗೆ ಅಡಗುದಾಣವಾಗಿ ತಮ್ಮ ಮನೆಯನ್ನು ಬಳಸಿದವರು. ಇಡಿಯ ರಾಜ್ಯವೇ ಮೈಲಿಬೇನೆಗೆ ತುತ್ತಾದ ಸಮಯದಲ್ಲಿ ಜನರ ನಡುವೆ ಮಿಂಚಿನಂತೆ ಸಂಚರಿಸಿ ಬಾಧಿತ ರೋಗಿಗಳನ್ನು ಬೇರೆಡೆಗೆ ಸ್ಥಳಾಂತರಿಸಿ ಧೈರ್ಯ ತುಂಬಿದವರು. ಕಲ್ಯಾಣಿಯಮ್ಮ ಎಂದರೆ ಊರಲ್ಲಿ ಎಲ್ಲರಿಗೂ ಗೌರವ. ಹೆಂಡಗುಡುಕರು, ಉಡಾಳರು ಅವರ ಎದುರು ಬರಲು ಅಂಜುತ್ತಿದ್ದರು. ಕುಡುಕರು ದಾರಿಯಲ್ಲಿ ಕಂಡರೆ ಅವರ ತಲೆಮೇಲೆ ನೀರು

ಸುರಿದು ಬುದ್ಧಿ ಹೇಳಿ ಎಷ್ಟೋ ಜನರಿಗೆ ಕುಡಿತ ಬಿಡಿಸಿದ್ದರು. ಅಂತಹ ಅಜ್ಜಿಯನ್ನು ಅರಳುಗಂಗಳಿಂದ ನೋಡಿ ಬೆಳೆದ ಹುಡುಗಿ ಶೈಲಜಾ. ಕಲ್ಯಾಣಿಯಮ್ಮನ ತಮ್ಮ ಎಂ. ಕೆ. ರಾವುಣ್ಣಿ ಜಮೀನ್ದಾರೀ ಪದ್ಧತಿಯ ವಿರುದ್ಧ ಹೋರಾಡಿದ 'ಕೆಂಪು ದಳ'ದ ಸದಸ್ಯರಾಗಿ ವಿಪರೀತ ಪೊಲೀಸ್ ಹಿಂಸೆಗೆ ಒಳಗಾಗಿದ್ದರು. ಒಮ್ಮೆ ಸೆರೆಮನೆಯಲ್ಲಿ ತೀವ್ರ ಹಿಂಸೆ ಅನುಭವಿಸಿ ಬಿಡುಗಡೆಯಾದ ಕೂಡಲೇ ತೀರಿಕೊಂಡರು. ಅಜ್ಜಿಯ ಮತ್ತೊಬ್ಬ ತಮ್ಮ ಎಂ. ಕೆ. ಕೃಷ್ಣನ್ ರೈತ ಹೋರಾಟದಲ್ಲಿ ಸೇಲಂ ಜೈಲು ಸೇರಿದರು. 22 ಜನರನ್ನು ಗುಂಡು ಹೊಡೆದು ಪೊಲೀಸರು ಕೊಲ್ಲಲೆತ್ನಿಸಿದಾಗ ತಲೆ ಸವರಿ ಹೋದ ಗುಂಡಿನಿಂದ ಆಶ್ಚರ್ಯಕರವಾಗಿ ಅವರು ಪಾರಾಗಿದ್ದರು. ಇಂತಹ ಕತೆಗಳ ಕೇಳುತ್ತ ಹುಡುಗಿ ಬೆಳೆದಳು.

ಮಡತ್ತಿಲ್ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದ ದಿಟ್ಟ ಯುವತಿ ಶೈಲಜಾ ಕಾಲೇಜು ದಿನಗಳಲ್ಲೇ ಎಸ್‌ಎಫ್‌ಐ (ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ) ಸೇರಿದರು. ಬಳಿಕ ಕೇರಳ ಸ್ಟೇಟ್ ಯುತ್ ಫೆಡರೇಷನ್ (ಅದೀಗ ಡಿವೈಎಫ್ಐ)ನ ಭಾಗವಾದರು. ತಮ್ಮ ಶ್ರದ್ಧೆ, ಬದ್ಧತೆ, ಹಿಡಿದ ಕೆಲಸವನ್ನು ಸದ್ದುಗದ್ದಲವಿಲ್ಲದೆ ಮುಗಿಸುವ ದಕ್ಷತೆಯಿಂದ ಸಂಘಟನೆಯ ಉನ್ನತ ಜವಾಬ್ದಾರಿಗಳನ್ನು ನಿರ್ವಹಿಸಿದರು. ಬಿಎಸ್ಸಿ, ಬಿಎಡ್ ಮುಗಿಸಿದ ಬಳಿಕ ಶಿವಪುರಂ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿದರು. ಅವರ ವೈಜ್ಞಾನಿಕ ಮನೋಭಾವ, ಸಾಮಾಜಿಕ ಕಾಳಜಿ ಆಗಲೇ ವ್ಯಕ್ತವಾಗುತ್ತಿತ್ತು. ಯಾವ ವಿದ್ಯಾರ್ಥಿ/ನಿಯೂ ಶಾಲೆ ಬಿಡಲು ಸಾಧ್ಯವಿರಲಿಲ್ಲ. ಅದರಲ್ಲೂ ಹುಡುಗಿಯರು ಶಾಲೆ ಬಿಟ್ಟರೆ ಟೀಚರ್ ಅವರ ಮನೆಗೇ ಹೋಗುತ್ತಿದ್ದರು. ಅವರ ತಾಯ್ತಂದೆಯರನ್ನು ಒಪ್ಪಿಸಿ ವಿದ್ಯಾರ್ಥಿಗಳು ಶಾಲೆಗೆ ಬರುವಂತೆ ಮಾಡುತ್ತಿದ್ದರು.

ಸಂಘಟನೆಯ ಕೆಲಸಗಳಲ್ಲಿ ಜೊತೆಜೊತೆಯಿದ್ದ ಶೈಲಜಾ ಮತ್ತು ಭಾಸ್ಕರನ್ 1981ರಲ್ಲಿ ಬಾಳಸಂಗಾತಿಗಳಾದರು. ಪಳಶಿ ಶಾಲೆಯಲ್ಲಿ ಭಾಸ್ಕರನ್ ಮುಖ್ಯೋಪಾಧ್ಯಾಯರಾದರು. ಇಬ್ಬರೂ ಶಿಕ್ಷಕ ವೃತ್ತಿ ನಡೆಸುತ್ತಲೇ ಸಂಘಟನೆಯಲ್ಲೂ ಸಕ್ರಿಯರಾದರು. ಸ್ತ್ರೀ ಶಬ್ದಮ್ ಎಂಬ ಐದ್ವಾ ಮಹಿಳಾ ಸಂಘಟನೆಯ ಮುಖವಾಣಿ ಪತ್ರಿಕೆಗೆ ಶೈಲಜಾ ಸಂಪಾದಕಿಯಾದರು. 'ಇಂಡಿಯನ್ ವರ್ತಮಾನವುಂ, ಸ್ತ್ರೀ ಸಮೂಹವುಂ' ಮತ್ತು 'ಚೀನಾ: ರಾಷ್ಟ್ರಂ, ರಾಷ್ಟ್ರೀಯಂ, ಕಷ್ಟಕಾಲ' ಎಂಬ ಎರಡು ಪುಸ್ತಕಗಳನ್ನು ಬರೆದರು. ಅಂದಿನ ಮುಖ್ಯಮಂತ್ರಿ ಕರುಣಾಕರನ್ ಕಣ್ಣೂರಿಗೆ ಬಂದಾಗ ಶಾಲೆಗೆ ರಜೆ ಹಾಕಿ ಆ ಸಭೆಗೆ ಹೋದರು. ಯುವ ಸಮುದಾಯದೆಡೆಗಿನ ಸರ್ಕಾರದ ನಿರ್ಲಕ್ಷ್ಯ ವಿರೋಧಿಸಿ ಕಪ್ಪುಬಾವುಟ ತೋರಿಸಿ ಬಂಧನಕ್ಕೊಳಗಾದರು.

ಇದರ ನಡುವೆ ಕೂತ್ತುಪರಂಬದಲ್ಲಿ ಸಚಿವರೊಬ್ಬರು ಬಂದಾಗ ಪ್ರತಿಭಟನಾ ಪ್ರದರ್ಶನ ಏರ್ಪಡಿಸಿದ ಡಿವೈಎಫ್ಐನ ಐವರು ಕಾರ್ಯಕರ್ತರು ಗುಂಡೇಟಿಗೆ ಬಲಿಯಾದರು. ಈ ಘಟನೆ ಶೈಲಜಾರನ್ನು ರಾಜಕೀಯಕ್ಕೆಳೆದು ತಂದಿತು. 1996ರಲ್ಲಿ ಕೆಲಸಕ್ಕೆ ರಜೆ ಹಾಕಿ ಚುನಾವಣೆಗೆ ನಿಂತು ಶಾಸಕಿಯಾದರು. ಆದರೆ ತನ್ನ ಸಾಮಾಜಿಕ ಚಟುವಟಿಕೆಯ ನಡುವೆ ಬೋಧನಾ ವೃತ್ತಿಗೆ ನ್ಯಾಯ ಒದಗಿಸಲು ಆಗುವುದಿಲ್ಲ ಎನಿಸಿದ್ದೇ 23 ವರ್ಷ ಕೆಲಸ ಮಾಡಿದ ಬಳಿಕ 2004ರಲ್ಲಿ ರಾಜೀನಾಮೆ ಸಲ್ಲಿಸಿದರು. ಶಿಕ್ಷಕಿಯೊಬ್ಬರು ಜನಪ್ರಿಯ ಜನನಾಯಕಿಯಾಗಿ ಬೆಳೆಯಲು ಈ ನಿರ್ಧಾರ ಕಾರಣವಾಯಿತು. ಅವರ ಪಕ್ಷವು ಪೂರ್ಣಪ್ರಮಾಣದ ರಾಜಕಾರಣದಲ್ಲಿ ಅವರನ್ನು ಸಕ್ರಿಯಗೊಳಿಸಿತು.

2006ರಲ್ಲಿ ಪೆರವೂರ್ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದ ಶೈಲಜಾ ಇದುವರೆಗೆ ಸೋಲಿನ ರುಚಿ ಕಂಡದ್ದು ಒಮ್ಮೆ ಮಾತ್ರ. ಅದು 2011ರಲ್ಲಿ ಕಾಂಗ್ರೆಸ್ಸಿನ ಸನ್ನಿ ಜೋಸೆಫ್ ಎದುರು. ಮತ್ತೆ 2016ರಲ್ಲಿ ಕೂತ್ತುಪರಂಬದಲ್ಲಿ ಗೆದ್ದ ಬಳಿಕ ಪಿಣರಾಯಿ ವಿಜಯನ್ ಅವರ ಮೊದಲ ಮಂತ್ರಿಮಂಡಲದಲ್ಲಿ ಸಚಿವೆಯಾದರು. ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ ಎಂಬ ಬಹುಮುಖ್ಯವಾದ ಮೂರು ಖಾತೆಗಳ ಜವಾಬ್ದಾರಿ ಅವರ ಹೆಗಲಿಗೆ ಬಂತು. ಸಚಿವರಾಗಿ ಕಾರ್ಯನಿರ್ವಹಿಸುತ್ತಿರುವಾಗ 2018ರಲ್ಲಿ ನಿಫಾ ವೈರಸ್ ಸೋಂಕು ಕೇರಳಕ್ಕೆ ಬಂತು. ಸದಾ ಪ್ರವಾಸಿಗರಿಂದ ತುಂಬಿಕೊಂಡ, ಪ್ರವಾಸೋದ್ಯಮವೇ ಆರ್ಥಿಕತೆಯ ಬೆನ್ನೆಲುಬಾದ ದೇವರ ನಾಡು ಆಗಷ್ಟೇ ಭೀಕರ ಪ್ರವಾಹದಿಂದ ಕಂಗೆಟ್ಟಿತ್ತು. ಅದರ ಮೇಲೆ ನಿಫಾ ಬಂತು. ಆ ಸಮಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡು ಸೋಂಕನ್ನು ನಿಯಂತ್ರಣಕ್ಕೆ ತರುವಲ್ಲಿ ಶೈಲಜಾರ ಪಾತ್ರ ಹಿರಿದು. ಇನ್ನೇನು ನಿಫಾ ಶಂಕೆ ಮುಗಿಯಿತು ಎನ್ನುವಾಗ ಕೋವಿಡ್–19 ಅಪ್ಪಳಿಸಿತು. ಭಾರತ ಸರ್ಕಾರ ಮತ್ತು ದೇಶದ ಉಳಿದ ರಾಜ್ಯಗಳು ಕೋವಿಡ್‌ಗೆ ಎಚ್ಚೆತ್ತುಕೊಳ್ಳುವ ಮೊದಲೇ ಕೇರಳ ಜಾಗೃತಗೊಂಡಿತು. ಡಿಸೆಂಬರ್ 2019ರಲ್ಲಿ ಚೀನಾದ ವುಹಾನ್ ಪ್ರಾಂತ್ಯದಲ್ಲಿ ವೈರಸ್ ಹಾವಳಿಯನ್ನು ಗಮನಿಸಿ ಜನಭರಿತ ಭಾರತಕ್ಕೆ ಬಂದರೇನು ಮಾಡುವುದೋ ಎಂದು ಪ್ರವಾಸಿಗರಿಂದ ತುಂಬಿದ್ದ ಕೇರಳ ರಾಜ್ಯವು ತಕ್ಷಣ ಕಾರ್ಯಪ್ರವೃತ್ತವಾಯಿತು. 2018ರ ಪ್ರವಾಹ, ನಿಫಾ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಿದ್ದ ರಾಜ್ಯವು 2020 ಜನವರಿ 30ರಂದು ಮೊದಲ ಕೋವಿಡ್ ಸೋಂಕು ಪತ್ತೆಯಾದದ್ದೇ ತುರ್ತಾಗಿ ಕಾರ್ಯಪ್ರವೃತ್ತವಾಯಿತು. ಎರಡೇ ದಿನದಲ್ಲಿ ಮತ್ತೆರೆಡು ಪ್ರಕರಣಗಳು ದಾಖಲಾದಾಗ ತುರ್ತುಸಭೆ ಕರೆದು ಅವಘಡ ನಿರ್ವಹಣಾ ಸಮಿತಿ ರಚನೆಯಾಯಿತು. ಮುಖ್ಯಮಂತ್ರಿ, ಆರೋಗ್ಯ ಸಚಿವರು,

ಮುಖ್ಯ ಕಾರ್ಯದರ್ಶಿಗಳು, ಇಲಾಖಾ ಕಾರ್ಯದರ್ಶಿಗಳ ತಂಡ ಹತ್ತು ಹಲವು ಕಾರ್ಯತಂತ್ರಗಳನ್ನು ಯೋಜಿಸಿತು. ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ತುರ್ತು ಕಾರ್ಯ ಪಡೆಗಳ ಅಧಿಕಾರಿಗಳ ಸಮನ್ವಯ ಸಮಿತಿ ರಚಿಸಿ ದಿನದಿನವೂ ಹೊಸಹೊಸ ಮಾರ್ಗದರ್ಶಿ ಸೂತ್ರ ಬಿಡುಗಡೆ ಮಾಡತೊಡಗಿತು.

ಕೋವಿಡ್–19 ಕಾಯಿಲೆಯ ಬಗೆಗೆ, ವೈರಸ್ ಬಗೆಗೆ ನಮಗೀಗ ಅಷ್ಟಿಷ್ಟು ತಿಳಿದಿದೆ. ಅಂತಹ ಯಾವೊಂದೂ ಪೂರ್ವಜ್ಞಾನವಿಲ್ಲದ, ಲಸಿಕೆ ತಯಾರಾಗಿರದ, ಚಿಕಿತ್ಸೆ ಲಭ್ಯವಿರದಿದ್ದ ಆರಂಭದ ಸಮಯದಲ್ಲಿ ಶೈಲಜಾ ತೋರಿದ ವಿವೇಕ ಮತ್ತು ಪೊರೆವ ಹೆಣ್ಣು ಗುಣಗಳು ರಾಜ್ಯದ ಜನರನ್ನು ಕಂಗೆಡದೆ ಸೋಂಕನ್ನು ಎದುರಿಸಲು ಸಜ್ಜುಗೊಳಿಸಿದವು. ಈ ಹಂತದಲ್ಲಿ ಶೈಲಜಾ ತಮ್ಮನ್ನು ಸಂಪೂರ್ಣ ಜನಸಂಪರ್ಕಕ್ಕೆ ಒಡ್ಡಿಕೊಂಡರು. ಚುರುಕಾಗಿ ಓಡಾಡುತ್ತ ಜನರಲ್ಲಿ ವಿಶ್ವಾಸ ತುಂಬಿದರು. ಹೆಚ್ಚೆಚ್ಚು ಪರೀಕ್ಷೆ ನಡೆಸಿ, ಕೂಡಲೇ ಸೋಂಕು ಪತ್ತೆ ಮಾಡಿ, ಸೋಂಕಿತರನ್ನು ಪ್ರತ್ಯೇಕ ಇರಿಸಿ, ಸೂಕ್ತ ಚಿಕಿತ್ಸೆ ನೀಡಿ ಯಶಸ್ವಿ ನಿಯಂತ್ರಣ ಮಾರ್ಗ ಹುಡುಕಿದರು. ಸರ್ಕಾರವು ಕುಡುಂಬಶ್ರೀ ಕಾರ್ಯಕರ್ತರನ್ನು ಬಳಸಿಕೊಂಡು ರೇಶನ್ ಪೂರೈಸಿತು. ಸಾಮೂಹಿಕ ಭೋಜನ ವ್ಯವಸ್ಥೆ ಮಾಡಿತು. ಇದೇ ಸಂದರ್ಭ ಬಳಸಿಕೊಂಡು ರಾಜ್ಯದ ವೈದ್ಯಕೀಯ ಶಿಕ್ಷಣ, ಆರೋಗ್ಯ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿ ಬಲಪಡಿಸಿತು. ಉಳಿದ ದೇಶ, ರಾಜ್ಯಗಳು ಅತಿ ಹೆಚ್ಚು ಸೋಂಕಿನಿಂದ ತತ್ತರಿಸುತ್ತ, ಕೆಲವು ಸರ್ಕಾರಗಳು ಪರೀಕ್ಷೆಯನ್ನೇ ಮಾಡದೇ ಹುಸಿ ನಿಯಂತ್ರಣದ ಗ್ರಾಫುಗಳನ್ನು ಕಾಗದದ ಮೇಲೆ ತೋರಿಸುತ್ತ, ಸುಡಲು ಸ್ಮಶಾನವೂ ಸಿಗದೆ ಶವಗಳು ಕ್ಯೂನಲ್ಲಿ ಕಾಯುತ್ತಾ ಇರುವಾಗ ಕೇರಳ ಪ್ರತಿದಿನ ಲಕ್ಷಗಟ್ಟಲೆ ಪರೀಕ್ಷೆ ನಡೆಸಿ ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಂಡಿತು.

ಹಗಲು ರಾತ್ರಿ ಎನ್ನದೆ ಕೆಲಸ ಮಾಡಿದ ಫಲ. ಐದು ತಿಂಗಳಲ್ಲಿ ಸೋಂಕು ನಿಯಂತ್ರಣಕ್ಕೆ ಬಂತು. ಇದು ಇಡಿಯ ಸರ್ಕಾರ, ಅಧಿಕಾರಿಗಳು, ಕಾರ್ಯಕರ್ತರು ಎಲ್ಲರ ಮಿಶ್ರ ಶ್ರಮದ ಫಲವೇ ಹೌದು. ಆದರೆ ಯೋಜನೆಯಲ್ಲಿ ಆರೋಗ್ಯ ಸಚಿವೆ ಶೈಲಜಾ ಪಾಲು ದೊಡ್ಡದು.

ಒಂದಾದ ಮೇಲೊಂದು ಕೋವಿಡ್ ಅಲೆಗಳು ಬಂದಪ್ಪಳಿಸಿದರೂ ಕೇರಳ ರಾಜ್ಯವು ಸುಳ್ಳು ಅಂಕಿಅಂಶ ತೋರಿಸಿ ತನ್ನಲ್ಲಿ ಸೋಂಕು ಕಡಿಮೆಯಾಯಿತು ಎನ್ನಲಿಲ್ಲ. ಮಿಕ್ಕ ರಾಜ್ಯಗಳು ಸಾವಿರಗಟ್ಟಲೆ ಟೆಸ್ಟ್‌ಗಳನ್ನು ಮಾಡುವಾಗ ತಾನು ಲಕ್ಷಗಟ್ಟಲೆ ಟೆಸ್ಟುಗಳನ್ನು ಮಾಡಿ ಸೋಂಕಿತರನ್ನು ಬೇರ್ಪಡಿಸಿ, ಶುಶ್ರೂಷೆಗೊಳಪಡಿಸಿತು. ಧೈರ್ಯ ಕಳೆದುಕೊಳ್ಳದೆ ಇರಲಿ ಎಂದು ಸ್ವತಃ

ಆರೋಗ್ಯ ಸಚಿವರೇ ಮಿಂಚಿನಂತೆ ರಾಜ್ಯದಾದ್ಯಂತ ಸಂಚರಿಸಿದರು. ಎಷ್ಟೋ ಸಲ ಮನೆಗೆ ಹೋಗದೇ ದಿನಗಳುರುಳುತ್ತಿದ್ದವು. ಸೋಂಕನ್ನು ಮನೆಗೆ ತಲುಪಿಸದಂತೆ ಎಚ್ಚರ ವಹಿಸಬೇಕಾಗುತ್ತಿತ್ತು. ಆದರೂ ಮನೆಯವರೊಂದಿಗೆ ನಿತ್ಯ ಸಂಪರ್ಕ ಇರಿಸಿಕೊಂಡಿದ್ದರು. ಧೈರ್ಯಗೆಡದಂತೆ ಜನರಲ್ಲಿ ಹೇಗೆ ಭರವಸೆ ತುಂಬುತ್ತಿದ್ದರೋ ಅದನ್ನು ಕುಟುಂದವರಲ್ಲಿಯೂ ತುಂಬಿದರು. ಅವರಿಗೆ ಶೋಭಿತ್ ಮತ್ತು ಲಸಿತ್ ಎಂಬ ಇಬ್ಬರು ಗಂಡುಮಕ್ಕಳು. ಶೋಭಿತ್ ಅಬುಧಾಬಿಯಲ್ಲಿದ್ದರು. ಅಲ್ಲಿಯ ಕೋವಿಡ್ ಕಾಳಜಿ ಕೇಂದ್ರದ ಮೇಲ್ವಿಚಾರಣೆ ವಹಿಸಿಕೊಂಡಿದ್ದರು. ಮತ್ತೊಬ್ಬ ಮಗ ಲಸಿತ್ ಕಣ್ಣೂರು ವಿಮಾನ ನಿಲ್ದಾಣದಲ್ಲಿ ಎಲೆಕ್ಟ್ರಿಕ್ ಇಂಜಿನಿಯರ್ ಆಗಿರುವರು. ಮಕ್ಕಳನ್ನು, ಮನೆಯವರನ್ನು ಫೋನ್ ಮೂಲಕ ಸಂಪರ್ಕಿಸುತ್ತ ಧೈರ್ಯ ತುಂಬಿ, ಧೈರ್ಯ ಪಡೆದವರು ಶೈಲಜಾ.

ನಿರುದ್ವಿಗ್ನವಾಗಿ ಆದರೆ ನಿರಂತರವಾಗಿ, ಖಚಿತವಾಗಿ ಯೋಜನೆ ರೂಪಿಸಿ ಕಾರ್ಯಪ್ರವೃತ್ತರಾದ ರೀತಿಗೆ ವಿಶ್ವವೇ ಅಚ್ಚರಿಗೊಂಡಿತು. ಅವರ ಕಾರ್ಯವೈಖರಿಯ ಬಗೆಗೆ ಚರ್ಚೆಗಳಾದವು. ಗಾರ್ಡಿಯನ್ ಪತ್ರಿಕೆ ಅವರನ್ನು 'ಕೊರೊನಾ ಸಂಹಾರಕಿ', 'ರಾಕ್‌ಸ್ಟಾರ್ ಹೆಲ್ತ್ ಮಿನಿಸ್ಟರ್' ಎಂದು ಹೆಸರಿಸಿತು. ಏಷಿಯಾದ ಶಕ್ತ ಕೊರೋನಾ ವಾರಿಯರ್‌ಗಳಲ್ಲಿ ಪ್ರಮುಖರೆಂದು ಬಿಬಿಸಿ ಹೇಳಿತು. ವೋಗ್ ಪತ್ರಿಕೆಯು ವೋಗ್ ವಾರಿಯರ್ ಎಂದಿತು. ಬ್ರಿಟಿಷ್ ಪತ್ರಿಕೆ ಪ್ರಾಸ್ಪೆಕ್ಟ್ ಅವರನ್ನು 2020ನೇ ಇಸವಿಯ ಅತ್ಯುನ್ನತ ಚಿಂತಕಿ ಎಂದಿತು. ಫೈನಾನ್ಶಿಯಲ್ ಟೈಮ್ಸ್ ಅಂತೂ 2020ನೇ ಇಸವಿಯ ವಿಶ್ವದ ಅತ್ಯಂತ ಪ್ರಭಾವಿ ಮಹಿಳೆ ಎಂದು ಗುರುತಿಸಿ ನ್ಯೂಜಿಲೆಂಡ್ ಪ್ರಧಾನಿ ಜೆಸಿಂಡಾಗೆ ನಂತರದ ಸ್ಥಾನ ನೀಡಿತು. 'ಸಾಮಾಜಿಕ ಸೇವಾ ದಿನ'ದಂದು ಮಾತನಾಡಲು ವಿಶ್ವದ ಕೆಲವೇ ನಾಯಕರ ಜೊತೆಗೆ ವಿಶ್ವಸಂಸ್ಥೆಯಿಂದ ಆಹ್ವಾನ ಬಂತು. ಅವರ ಕಾರ್ಯ-ಸಾಧನೆ ಆಧರಿಸಿ 'ವೈರಸ್' ಎಂಬ ಸಿನಿಮಾವೂ ತಯಾರಾಯಿತು.

ಅವರನ್ನು ಪೂರಾ ಸಮಾಜಕ್ಕೆ ಬಿಟ್ಟುಕೊಟ್ಟ ಅವರ ಕುಟುಂಬ ಕೋವಿಡ್ ಕಷ್ಟದ ಕಾಲವನ್ನು ಹೇಗೆ ನಿಭಾಯಿಸಿತು ಎಂಬ ಪ್ರಶ್ನೆಗೆ, 'ಪಕ್ಷ ಎಂದರೆ ನಮ್ಮ ದೇಹದ ಒಂದು ಭಾಗ ಇದ್ದ ಹಾಗೆ. ಅದರಿಂದ, ಅದಕ್ಕಾಗಿಯೇ ನಾವು ಬದುಕುವುದು. ಎಂದೇ ಜನರಿಗಾಗಿ ಪಕ್ಷದ ನಿರ್ದೇಶನದಂತೆ ಶೈಲಜಾ ಅವರು ಕೆಲಸ ಮಾಡುತ್ತಿರುವುದು ಎಂದು ಅರಿತುಕೊಳ್ಳುವುದು ನಮಗೆ ಸಾಧ್ಯವಾಯಿತು. ಹಾಗಾಗಿ ನಮ್ಮ ಕುಟುಂಬಕ್ಕೆ ಅವರು ಜೊತೆಯಲ್ಲಿ ಇಲ್ಲದಿರುವುದನ್ನು ತಾಳಿಕೊಳ್ಳುವುದು ಅಷ್ಟೇನೂ ಕಷ್ಟವಾಗಲಿಲ್ಲ. ಕಮ್ಯುನಿಸ್ಟ್ ಕುಟುಂಬಗಳಿರುವುದೇ ಹೀಗೆ. ಮನೆಯವರಿಗೆಲ್ಲ ಶೈಲಜಾ ಟೀಚರ್ ಮಂತ್ರಿಯಾಗಿ, ಮತ್ತೊಂದಾಗಿ ಕೆಲಸ

ಮಾಡುವಾಗ ಹೆಮ್ಮೆಯೇ ಆಯಿತು' ಎಂದು ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ, ನಿವೃತ್ತ ಶಿಕ್ಷಕರಾದ ಶೈಲಜಾರ ಬಾಳಸಂಗಾತಿ ಭಾಸ್ಕರನ್ ಮಾಸ್ಟರ್ ಹೇಳುತ್ತಾರೆ.

ಕೋವಿಡ್ ಅಲೆಯ ಬಳಿಕ ಕೇರಳ ವಿಧಾನಸಭೆಗೆ ಚುನಾವಣೆಗಳು ನಡೆದವು. ಈ ಬಾರಿ ತನ್ನ ಕ್ಷೇತ್ರ ಬದಲಿಸಿ ಮಟ್ಟನ್ನೂರಿನಿಂದ ಶೈಲಜಾ ಸ್ಪರ್ಧಿಸಿದರು. ನಿರೀಕ್ಷೆಯಂತೆ 60,963 ಮತಗಳ ಭಾರೀ ಅಂತರದಿಂದ ಗೆಲುವು ಸಾಧಿಸಿದರು. ಕೇರಳದ ಇತಿಹಾಸದಲ್ಲಿ ಅದೊಂದು ದಾಖಲೆ. ಇಷ್ಟು ಭಾರೀ ಅಂತರದಿಂದ ಅದುವರೆಗೆ ಯಾರೂ ಗೆಲುವು ಪಡೆದಿರಲಿಲ್ಲ. ಅವರನ್ನೇ ಕೇರಳದ ಮುಖ್ಯಮಂತ್ರಿಯನ್ನಾಗಿ ಮಾಡಬಹುದು ಎಂದು ಮಾಧ್ಯಮಗಳೂ, ಜನರೂ ಊಹಿಸಿದರು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅವರನ್ನು ಸಂಪುಟದಿಂದ ಕೈ ಬಿಡಲಾಯಿತು. ಮುಖ್ಯಮಂತ್ರಿಯವರನ್ನು ಬಿಟ್ಟು ಎಲ್ಲ ಹೊಸಮುಖಗಳನ್ನೇ ಸಚಿವರನ್ನಾಗಿ ಮಾಡಲಾಯಿತು. ಮುಖ್ಯಮಂತ್ರಿಯಾಗುವುದಿರಲಿ, ಶೈಲಜಾ ಸಚಿವೆಯಾಗುವ ಪ್ರಶ್ನೆಯೇ ಏಳಲಿಲ್ಲ. ಅವರನ್ನು ಸಿಪಿಐ(ಎಂ) ಪಕ್ಷದ ಕೇಂದ್ರಸಮಿತಿಯ ಸದಸ್ಯೆಯಾಗಿ ನೇಮಿಸಿದರು. ಪಕ್ಷದ ಮಹಿಳಾ ಸಂಘಟನೆ ಐದ್ವಾದ ಕೇರಳ ರಾಜ್ಯ ಕಾರ್ಯದರ್ಶಿಯಾಗಿಸಿದರು. ವಿಧಾನಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕರಾದರು. ಭಾರೀ ಅಂತರದಿಂದ ಗೆದ್ದಾಗಲೂ, ಯಶಸ್ವಿಯಾಗಿ ಕೆಲಸ ನಿರ್ವಹಿಸಿ ವಿಶ್ವದ ಗಮನ ಸೆಳೆದಾಗಲೂ ಮಂತ್ರಿಮಂಡಲದಿಂದ ಅವರನ್ನು ಕೈಬಿಟ್ಟ ಕುರಿತು ಹಲವೆಡೆಗಳಿಂದ ಆಕ್ರೋಶ, ಟೀಕೆಗಳು ಕೇಳಿಬಂದವು. ಆ ಕುರಿತು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ, 'ಒಮ್ಮೆ ಒಬ್ಬರಷ್ಟೇ ಮುಖ್ಯಮಂತ್ರಿಯಾಗಲು ಸಾಧ್ಯ. ಈಗ ಪಿಣರಾಯಿ ದಕ್ಷರಾಗಿದ್ದು ಮುಖ್ಯಮಂತ್ರಿಯಾಗಿದ್ದಾರೆ. ಹೊಸ ಮಂತ್ರಿಮಂಡಲ ಮತ್ತು ಸರ್ಕಾರ ಉತ್ತಮವಾಗಿ ಕಾರ್ಯ ನಿರ್ವಹಿಸಲಿವೆ. ನಾನು ಪಕ್ಷದ ನಿರ್ಧಾರಕ್ಕೆ ಬದ್ಧಳಾಗಿದ್ದೇನೆ' ಎಂದು ಶೈಲಜಾ ತಣ್ಣಗೆ ಹೇಳಿದರು.

ನಿಫಾ ಮತ್ತು ಕೋವಿಡ್ ಸಾಂಕ್ರಾಮಿಕಗಳ ದಕ್ಷ ನಿಯಂತ್ರಣಕ್ಕಾಗಿ ರೇಮನ್ ಮ್ಯಾಗ್ಸೇಸೆ ಪ್ರಶಸ್ತಿ ಬಂದಾಗ ಶೈಲಜಾ ಅದನ್ನು ನಿರಾಕರಿಸಿದರು. 'ನನ್ನ ಪಕ್ಷದವರೊಡನೆ ಚರ್ಚಿಸಿರುವೆ. ಪ್ರಶಸ್ತಿಯ ಕುರಿತು ಎಲ್ಲ ಗೌರವವನ್ನಿಟ್ಟುಕೊಂಡೇ ಹೇಳುತ್ತಿರುವೆ, ನಾನು ಒಬ್ಬಳೇ ಕೆಲಸ ಮಾಡಲಿಲ್ಲ. ಎಂದೇ ಕೆಲಸದ ಯಶಸ್ಸು ಸಾಮೂಹಿಕ ಪ್ರಯತ್ನಕ್ಕೆ ಸಲ್ಲಬೇಕೇ ಹೊರತು ಒಬ್ಬ ವ್ಯಕ್ತಿಗಲ್ಲ. ಆ ಪ್ರಶಸ್ತಿಯನ್ನು ಯಾವತ್ತೂ ವ್ಯಕ್ತಿಗಳಿಗೆ ಕೊಟ್ಟಿರುವರೇ ವಿನಹ ರಾಜಕಾರಣಿಗಳಿಗೆ ಕೊಟ್ಟಿಲ್ಲ. ಹಾಗಾಗಿ ಪ್ರಶಸ್ತಿ ಪಡೆಯದಿರಲು ನಿರ್ಧರಿಸಿರುವೆ' ಎಂದು ತಿಳಿಸಿದರು.

ಇಂತಹ ನಮ್ಮಕ್ಕ ಶೈಲಜಾ ಮಂಜು ಸಾರಾ ರಾಜನ್ ಅವರ ಸಹಾಯದಿಂದ

ತಮ್ಮ ಆತ್ಮಚರಿತ್ರೆ 'ಮೈ ಲೈಫ್ ಅಸ್ ಎ ಕಾಮ್ರೇಡ್' ಬರೆದು ಪ್ರಕಟಿಸಿದ್ದಾರೆ. ವಿಶ್ವವೇ ಗುರುತಿಸಿದ ಶೈಲಜಾ ಟೀಚರ್ ರೂಪುಗೊಂಡ ಪರಿಯನ್ನು ಅದರಲ್ಲಿ ತಿಳಿಯಬಹುದಾಗಿದೆ.

ಅಧಿಕಾರಕ್ಕಾಗಿ ಹಪಹಪಿಸದ, ಅಧಿಕಾರ ಅನುಭವಿಸಲಿಕ್ಕೆಂದೇ ರಾಜಕಾರಣ ನಡೆಸದ, ತನ್ನ ಪಾಲಿಗೆ ಬಂದದ್ದನ್ನು ದಕ್ಷವಾಗಿ ನಿಭಾಯಿಸಿ ಆಸೆಆಮಿಷಗಳಿಂದ ದೂರವೇ ಉಳಿಯುವ ನಿಸ್ಪೃಹತೆ ಒಂದು ಅಸಾಮಾನ್ಯ ಗುಣ. ಕಮ್ಯುನಿಸಂ ಇರಲಿ, ಸ್ತ್ರೀವಾದವೇ ಇರಲಿ, ಯಾವುದೇ ಮಾನವೀಯ ಸಿದ್ಧಾಂತವು ರಾಜಕೀಯ ಅಧಿಕಾರವನ್ನು ಹಂಚಿಕೊಳ್ಳುವ ಸಂಪನ್ಮೂಲವನ್ನಾಗಿ ನೋಡುತ್ತದೆ. ಅಧಿಕಾರವನ್ನು ಲೋಕಹಿತದ ಕಾರಣಕ್ಕಾಗಿ ಬಳಸಬೇಕು, ಸಾಮೂಹಿಕವಾಗಿ ಅನುಭವಿಸಬೇಕೆಂದು ತಿಳಿಸುತ್ತದೆ. ಇದು ತಾತ್ತ್ವಿಕವಾಗಿ ನ್ಯಾಯವೇ ಆದರೂ ಇದನ್ನೊಪ್ಪಿಕೊಂಡ ಸಜೀವ ಮಾದರಿಗಳು ಇಲ್ಲವೆಂಬಷ್ಟು ವಿರಳವಾಗಿವೆ. ವರ್ತಮಾನದ ಸಂದರ್ಭದಲ್ಲಿ ಅಧಿಕಾರ ರಾಜಕಾರಣದ ಕಾರಿಡಾರುಗಳ ಕಂಬ, ಮೂಲೆಗಳೂ ಹೇಳುವ ಸ್ವಾರ್ಥ, ಸ್ವಜನಪಕ್ಷಪಾತ, ದ್ರೋಹ, ಕುಟಿಲ ವ್ಯೂಹಗಳ ದುಷ್ಟ ಉದಾಹರಣೆಗಳ ನಡುವೆ ಶೈಲಜಾ ತರಹದ ಹೆಣ್ಣು ಜೀವವೊಂದು ನಮ್ಮ ನಡುವೆಯೇ ಇದೆ ಮತ್ತು ಹೆಣ್ಣುಮಾದರಿಯ ಮುಂದಾಳ್ತನಕ್ಕೆ ಸೂಕ್ತ ಉದಾಹರಣೆಯಾಗಿದೆ ಎನ್ನುವುದು ಭರವಸೆಯ ಸಂಗತಿಯಾಗಿದೆ.

# ಸಂವಿಧಾನ ಅಪಾಯದಲ್ಲಿದೆ – ರಕ್ಷಿಸಿ


## ಕೆ ಕೆ ಶೈಲಜಾ

ಮಾಜಿ ಆರೋಗ್ಯ ಸಚಿವರು, ಕೇರಳ


ಇಂತಹ ವಿಶೇಷವಾದ ವೇದಿಕೆಯ ಭಾಗವಾಗಿದ್ದಕ್ಕೆ ನನಗೆ ಬಹಳ ಹೆಮ್ಮೆ ಎನ್ನಿಸುತ್ತಿದೆ. ಇಲ್ಲಿ ಅತ್ಯುತ್ತಮರಾದಂತಹ ಮಹಿಳಾ ಸಂಘಟಕಿಯರಿದ್ದೀರಿ, ಅದೇ ರೀತಿ ಈ ಪ್ರಯತ್ನಕ್ಕೆ ಕೈಜೋಡಿಸಿದಂತಹ ಸಹೋದರರಿದ್ದೀರಿ. ಇಂಥಹವರೆಲ್ಲರ ನಡುವೆ ವೇದಿಕೆಯಲ್ಲಿರುವುದು ನನಗೆ ಸಂತೋಷದ ವಿಚಾರ.

ನಾಳೆ ಮಾರ್ಚ್ 8ನೇ ತಾರೀಕು ಮಹಿಳಾದಿನಾಚರಣೆ. ನಾವು ಅದನ್ನು ಒಂದು ದಿನ ಮುಂಚಿತವಾಗಿಯೇ ಆಚರಿಸುತ್ತಿದ್ದೇವೆ. ಮಾರ್ಚ್ 8ರ ಇತಿಹಾಸ ನಮ್ಮೆಲ್ಲರಿಗೂ ತಿಳಿದಿರುವಂತಹದ್ದೆ ಆಗಿದೆ. 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಆರಂಭದಲ್ಲಿ ಮಹಿಳಾ ಕಾರ್ಮಿಕರು ತಮ್ಮ ಹಕ್ಕುಗಳಿಗೋಸ್ಕರ ಹೋರಾಟಕ್ಕಿಳಿದರು. ಆ ಹೋರಾಟದ ಪರಂಪರೆಯನ್ನು ಆರಂಭ ಮಾಡಲು ಆ ದಿನಗಳಲ್ಲಿ ಇದ್ದಂತಹ ಊಳಿಗಮಾನ್ಯ ಮತ್ತು ಬಂಡವಾಳ ಶಾಹಿ ಆಳ್ವಿಕೆಯೇ ಕಾರಣವಾಗಿತ್ತು. ಇದರ ವಿರುದ್ಧವಾಗಿ, ತಮ್ಮ ಎಲ್ಲಾ ಬಗೆಯ ಹಕ್ಕುಗಳಿಗಾಗಿ, ತಮಗೆ ಬೇಕಾಗಿರುವಂತಹ ಶಿಕ್ಷಣದ ಹಕ್ಕಿಗಾಗಿ, ಮತದಾನದ ಹಕ್ಕಿಗಾಗಿ, ಸಮಾನವಾದಂತಹ ವೇತನಕ್ಕಾಗಿ, ಉದ್ಯೋಗದಲ್ಲಿ ಒಳ್ಳೆಯ ಕೆಲಸದ ವಾತಾವರಣಕ್ಕಾಗಿ, ಈ ಎಲ್ಲಾ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ನಡೆದಂತಹ ಬಹಳ ದೊಡ್ಡ ಹೋರಾಟ ಅದು. ಇದರ ಪ್ರತಿಫಲವಾಗಿ ನಾವು ಈ ದಿನ ಎಲ್ಲರೂ ಸೇರಿಕೊಂಡಿದ್ದೇವೆ.

1907ರಲ್ಲಿ ಜರ್ಮನಿಯಲ್ಲಿ ಒಂದು ಬಹಳ ದೊಡ್ಡ ಮಟ್ಟದ ಮಹಿಳಾ ಸಮಾವೇಶ ನಡೆಯಿತು. ಆ ಸಮಾವೇಶದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕಿನ ಕುರಿತು ಒಂದು ಚರ್ಚೆ ನಡೆದಿತ್ತು. ಚರ್ಚೆಯಲ್ಲಿ ಕೆಲವರು ಯಾರಿಗೆ ಆಸ್ತಿಯ ಮೇಲೆ ಅಧಿಕಾರ ಇದೆಯೋ, ಯಾರ ಹೆಸರಿನಲ್ಲಿ ಆಸ್ತಿ ಇದೆಯೋ

ಅಂತಹ ಮಹಿಳೆಯರಿಗೆ ಮಾತ್ರವೇ ಮತದಾನದ ಹಕ್ಕನ್ನು ಕೊಡಬೇಕು ಎಂದು ವಾದಿಸಿದರು. ಆದರೆ ಸಮಾಜವಾದಿ ಸಿದ್ಧಾಂತವನ್ನು ತಮ್ಮದಾಗಿಸಿಕೊಂಡಿದ್ದಂತಹ, ಸಮಾಜವಾದಿ ಮಹಿಳೆಯರಾದ ಕ್ಲಾರ ಜಟ್ಕಿನ್, ರೋಜಾ ಲೆಕ್ಸೇಮ್ಬರ್ಗ್ ಮತ್ತು ಅವರ ಒಡನಾಡಿಗಳೆಲ್ಲಾ ಸೇರಿ ಮಹಿಳೆಯರಿಗೂ ಸಮಾನ ಹಕ್ಕುಗಳಿರಬೇಕು. ಅವರು ಆಸ್ತಿ ಉಳ್ಳವರಾಗಿರಲಿ ಅಥವಾ ಇಲ್ಲದೇ ಇರುವವರಾಗಿರಲಿ, ಅವರು ದುಡಿಯುವ ವರ್ಗದವರಾಗಿರಲಿ ಅಥವಾ ಕುಲೀನ ಮನೆತನಕ್ಕೆ ಸೇರಿದವರಾಗಿರಲಿ ಯಾರೇ ಆದರೂ ಎಲ್ಲಾ ಮಹಿಳೆಯರು ಸಮಾನರಾಗಿರಬೇಕು. ಎಲ್ಲರಿಗೂ ಶಿಕ್ಷಣ, ಉದ್ಯೋಗ, ಮತ್ತು ಮತದಾನಕ್ಕೆ ಸಮಾನವಾದ ಹಕ್ಕುಗಳಿರಬೇಕೆಂದು ಪ್ರಬಲವಾಗಿ ವಾದಿಸುವ ಮುಖಾಂತರ ಈ ಹಕ್ಕುಗಳನ್ನು ನಮಗೆ ಗಳಿಸಿಕೊಟ್ಟರು.

ಇಂದು ಭಾರತದೊಳಗೆ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದನ್ನು ನಾವು ನೋಡಬೇಕಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಂಗಾಳದ ಕವಿ ದೇವೇಂದ್ರನಾಥ ಟ್ಯಾಗೂರರು ಯಾವ ರೀತಿಯ ಭಾರತ ನಮಗೆ ಬೇಕು ಎನ್ನುವುದನ್ನು ಹೀಗೆ ಬರೆಯುತ್ತಾರೆ.

"ಎಲ್ಲಿ ಮಾತುಗಳು ನಿರ್ಬಂಧಿತವಾಗಿಲ್ಲವೋ, ಎಲ್ಲಿ ಮನಸ್ಸುಗಳು ಸೆರೆಮನೆಯಲ್ಲಿ ಕೂಡಿಡಲ್ಪಟ್ಟಿಲ್ಲವೋ, ಎಲ್ಲಿ ಆತ್ಮಗಳು ಅಸಮಾನತೆ ಆಳದಲ್ಲಿ ತೊಳಲುತ್ತಿಲ್ಲವೋ, ಅಂತಹ ಸಮಾಜ ನಮಗೆ ಬೇಕು. ಅಂತಹ ಸಮಾನತೆಯ ದೇಶ ನಮಗೆ ಬೇಕು" ಎಂದು. ಇದು ಎಲ್ಲಾ ಸ್ವಾತಂತ್ರ ಹೋರಾಟಗಾರರ ಕನಸಾಗಿತ್ತು. ಅಂತಹ ಸಮಾನತೆಯ ಸಮಾಜಕ್ಕಾಗಿ ಕನಸಿದ ಸ್ವಾತಂತ್ರ್ಯ ಹೋರಾಟಗಾರರು ಅಪಾರ ತ್ಯಾಗ, ಬಲಿದಾನಗಳೊಂದಿಗೆ ನಮಗೆ ಗಳಿಸಿಕೊಟ್ಟಿರುವ ಸ್ವಾತಂತ್ರ್ಯ ಇದು. 75 ವರ್ಷಗಳ ನಂತರ ಇಂದು ನಾವೇನು ನೋಡುತ್ತಿದ್ದೇವೆ..?

ಇವತ್ತಿನ ದಿನ ಭಾರತದಲ್ಲಿ ಮಕ್ಕಳ ಸಾವುಗಳು, ಹೆರಿಗೆ ಸಂದರ್ಭದಲ್ಲಿ ನಡೆಯುವ ಶಿಶುಮರಣಗಳು ಬಹಳ ದೊಡ್ಡ ಮಟ್ಟದಲ್ಲಿಯೇ ಜರುಗುತ್ತಿದೆ. "ಮಿಲೆನಿಯಂ ಗೋಲ್ಸ್" ಶತಮಾನದ ಗುರಿಗಳನ್ನು ವಿಶ್ವಸಂಸ್ಥೆ ಹಾಕಿಕೊಟ್ಟ ನಂತರ ಕೂಡ, ಬಹಳ ದೊಡ್ಡ ಮಟ್ಟದಲ್ಲಿ ಶಿಶುಮರಣಗಳು ಸಂಭವಿಸುತ್ತಲೇ ಇವೆ..

ಕೇರಳದಲ್ಲಿ ನಾವು ಅದರ ವಿರುದ್ಧ ಹೋರಾಟ ಮಾಡಿದ್ದೇವೆ. ತಾಯಂದಿರಿಗೆ ಮಕ್ಕಳಿಗೆ ವಿಶೇಷ ಪೋಷಣೆ ಮಾಡಿರುವುದರ ಮುಖಾಂತರ, ಒಂದು ಸಾವಿರ ಹೆರಿಗೆಗಳಿಗೆ ಕನಿಷ್ಠ ಒಂದು ಅಂಕೆಗೆ ಶಿಶು ಮರಣ ಬರಬೇಕೆಂಬ ವಿಶ್ವಸಂಸ್ಥೆ ಹಾಕಿಕೊಟ್ಟ ಗುರಿಯನಿಟ್ಟುಕೊಂಡು ನಾವು ಕೇರಳದಲ್ಲಿ ಹೋರಾಟ

ಆರಂಭ ಮಾಡಿ 2020 ನೇ ಇಸವಿಯಲ್ಲಿ ಒಂದು ಸಾವಿರ ಹೆರಿಗೆಗಳಿಗೆ ಐದು ಶಿಶುಮರಣಗಳು ಮಾತ್ರ ಸಂಭವಿಸುವ ಮಟ್ಟಕ್ಕೆ ಅದನ್ನು ಕೆಳಗಿಳಿಸುವುದಕ್ಕೆ ಪ್ರಯತ್ನಿಸಿದ್ದೇವೆ. ಅದೇ ರೀತಿಯಲ್ಲಿ ಹೆರಿಗೆ ಸಮಯದಲ್ಲಿ ನಡೆಯುವ ತಾಯಿಯ ಮರಣಗಳು ಒಂದು ಲಕ್ಷಕ್ಕೆ 70ಕ್ಕಿಂತಲೂ ಹೆಚ್ಚಿಗೆ ಸಂಭವಿಸಬಾರದು ಎಂದು ವಿಶ್ವ ಸಂಸ್ಥೆಗಳು ಹೇಳುತ್ತದೆ.

ಕೇರಳದಲ್ಲಿ 2016 ರಲ್ಲಿ 67 ಸಾವುಗಳು ಸಂಭವಿಸುತ್ತಿದ್ದವು. ಅದನ್ನು ಒಂದು ಸವಾಲಾಗಿ ಇಟ್ಟುಕೊಂಡು ನಿರಂತರವಾದ ಪ್ರಯತ್ನಗಳನ್ನು ನಡೆಸುತ್ತಾ ಇವತ್ತು ಒಂದು ಲಕ್ಷ ಹೆರಿಗೆಗಳಿಗೆ ಕೇವಲ 19 ಮಹಿಳೆಯ ಸಾವು ಸಂಭವಿಸುವಷ್ಟರ ಮಟ್ಟಿಗೆ ಇಳಿಮುಖಗೊಳಿಸಲು ಸಾಧ್ಯವಾಗಿದೆ. ನಾವೆಲ್ಲರೂ ಒಂದು ತಂಡವಾಗಿ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಏನನ್ನೂ ಬೇಕಾದರೂ ಸಾಧಿಸಬಹುದು ಎನ್ನುವುದು ಇದರ ಅರ್ಥ. ನಾನು ನನ್ನ ಅವಧಿಯಲ್ಲಿ ಇದನ್ನ ಒಂದು ಪಾಠವಾಗಿ ಕಲಿತಿದ್ದೇನೆ.

ಅದೇ ರೀತಿಯಲ್ಲಿ ಶಿಕ್ಷಣ, ಮಹಿಳೆಯರ ಮೇಲಿನ ದೌರ್ಜನ್ಯಗಳು, ಭಾರತದಲ್ಲಿ ಜಾತ್ಯತೀತತೆಯ ಪರಿಸ್ಥಿತಿ ಹೇಗಿದೆ ಮುಂತಾದ ಹಲವಾರು ವಿಚಾರಗಳನ್ನು ನಾವು ಹಂಚಿಕೊಳ್ಳಬೇಕಿದೆ. ಇವತ್ತಿಗೂ ಕೂಡ ಭಾರತದ ಸಂವಿಧಾನ ಅತ್ಯದ್ಭುತವಾದಂತಹ ಸಂವಿಧಾನವಾಗಿದೆ. ಇಡೀ ಪ್ರಪಂಚದಲ್ಲಿರುವಂತಹ ಅತ್ಯುತ್ತಮವಾದ ಪ್ರಜಾ ತಾಂತ್ರಿಕ ವಿಚಾರಗಳನ್ನು ಇಟ್ಟುಕೊಂಡು ನಮ್ಮ ಸಂವಿಧಾನ ರಚನೆಯಾಗಿದೆ. ಇದರಲ್ಲಿ ಪ್ರಜಾತಾಂತ್ರಿಕ ಅಂದರೆ ಡೆಮಾಕ್ರಸಿ, ಜಾತ್ಯತೀತ ಮತ್ತು ಸರ್ವಸ್ವಾತಂತ್ರ್ಯ ಗಣರಾಜ್ಯ ನಮ್ಮದು ಎಂದು ನಾವು ಹೇಳಿಕೊಳ್ಳುತ್ತೇವೆ. ಆದರೆ ಇಂದು ಇದರಲ್ಲಿ ಪ್ರಜಾತಂತ್ರ, ಜಾತ್ಯತೀತತೆ ಎಲ್ಲಾ ಎಲ್ಲಿದೆ? ಎನ್ನುವಂತಹ ಹಲವು ಪ್ರಶ್ನೆಗಳನ್ನು ನಾವು ಕೇಳುವಂತಾಗಿದೆ.

ಇಲ್ಲಿ ಜಾತ್ಯತೀತತೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ಮಲಬಾರ್ ಪ್ರದೇಶದಲ್ಲಿ ಒಂದು ಕಾಲದಲ್ಲಿ ರೈತ ಹೆಣ್ಣು ಮಗಳು ಮದುವೆ ಆದರೆ ಮೊಟ್ಟ ಮೊದಲ ರಾತ್ರಿಯನ್ನು ಆ ಊರಿನ ಭೂ ಮಾಲೀಕನ ಜೊತೆಯಲ್ಲಿ ಆಕೆ ಕಳೆಯಬೇಕಾಗಿತ್ತು. ಆಕೆಯ ಕನ್ಯತ್ವದ ಮೇಲೆ ಭೂ ಮಾಲೀಕರ ಅಧಿಕಾರ ಇರುತ್ತಿತ್ತು. ಇದರ ವಿರುದ್ಧ ನಡೆದಂತ ನಿರಂತರವಾದ ಹೋರಾಟದಿಂದ ಬಹಳಷ್ಟು ದೊಡ್ಡ ಕಾನೂನುಗಳ ಬದಲಾವಣೆಗಳು ನಡೆದಿದೆ. ಈ ರೀತಿಯ ಹೋರಾಟಗಳು ಇವತ್ತು ಭಾರತವನ್ನು ರೂಪಿಸುತ್ತಾ ಬಂದಿದೆ. ಆದ್ದರಿಂದ ನಮ್ಮ ಭಾರತವನ್ನು ಯಾವುದೊ ಒಂದು ಸಮುದಾಯದಕ್ಕೆ ಸೇರಿದ ಭಾರತ

ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಇದನ್ನ ಹಿಂದುಗಳ ಭಾರತವೆಂದಾಗಲಿ, ಕ್ರಿಶ್ಚಿಯನರ ಭಾರತವೆಂದಾಗಲಿ, ಮುಸ್ಲಿಮರ ಭಾರತವೆಂದಾಗಲಿ ಹೇಳಲು ಸಾಧ್ಯವಿಲ್ಲ. ಭಾರತ ಎನ್ನುವಂತದ್ದು ಒಂದು ಜಾತ್ಯಾತೀತವಾದ ವಿಭಜತೆಯಲ್ಲಿ ಏಕತೆಯನ್ನು ಹೊಂದಿರುವಂತಹ ಸಮಾಜ. ಎನ್ನುವುದನ್ನು ಸ್ವಾತಂತ್ರ್ಯ ನಂತರದಲ್ಲಿ ರಚನೆಯಾದಂತಹ ಸಂವಿಧಾನ ನಮಗೆ ತಿಳಿಸಿಕೊಟ್ಟಿದೆ. ಇದಕ್ಕೆ ವಿರುದ್ಧವಾದಂತಹ ಆಳ್ವಿಕೆ ಇವತ್ತು ನಡೆಯುತ್ತಿದೆ. ಆದ್ದರಿಂದ ಈ ಧಾರ್ಮಿಕ ಮೂಲಭೂತವಾದ ನಮ್ಮ ದೇಶದ ಬಹಳ ದೊಡ್ಡ ಶತ್ರು.

ಬಿಲ್ಕಿಸ್ ಬಾನು ಪ್ರಕರಣವನ್ನೇ ನೋಡುವುದಾದರೆ ಆಕೆಯ ಮೇಲೆ ಮೂಲಭೂತ ವಾದಿಗಳು ದಾಳಿ ಮಾಡಿದರು. ಅವಳ ಮೇಲೆ ಅತ್ಯಾಚಾರ ಮಾಡಿದರು. ಕೊಲೆ ಮಾಡುವುದಕ್ಕೆ ಪ್ರಯತ್ನ ಪಟ್ಟರು ಆದರೆ ಇಂತಹ ಕೊಲೆಗಡುಕರನ್ನು ಅತ್ಯಾಚಾರಿಗಳನ್ನು ಗುಜರಾತ್ ಸರ್ಕಾರ ಸನ್ನಡತೆ ಆಧಾರದ ಮೇಲೆ ಅವರನ್ನು ಉತ್ತಮ ವ್ಯಕ್ತಿಗಳು ಎಂದು ಬಿಡುಗಡೆ ಮಾಡಿತ್ತು. ಇಂತಹ ಒಂದು ಧಾರ್ಮಿಕ ಮೂಲಭೂತವಾದದ ಸರ್ಕಾರ ಇರುವಂತಹದ್ದನ್ನು ನಾವು ಪ್ರಶ್ನೆ ಮಾಡಬೇಕು. ಈ ಸರ್ಕಾರ ಇವತ್ತು ಬಹುರಾಷ್ಟ್ರೀಯ ಕಾರ್ಪೊರೇಟ್ ಕಂಪನಿಗಳ ಪರವಾಗಿದೆ. ಅಡಿಗೆ ಅನಿಲದ ಬೆಲೆ ಏನಾಗಿದೆ. ಮೂಲಭೂತ ಜೀವನದ ಅವಶ್ಯಕತೆಯಾದ ದಿನಸಿ ವಸ್ತುಗಳ ಬೆಲೆ ಏನಾಗಿದೆ. ಈ ಎಲ್ಲವನ್ನು ನಾವು ಭರಿಸುವುದಕ್ಕೆ ಸಾಧ್ಯ ಇದೆಯಾ? ಆದರೆ ಸರ್ಕಾರ ಇದ್ಯಾವುದನ್ನು ತಡೆಯುತ್ತಿಲ್ಲ. ಯಾರು ಬಂಡವಾಳಗಾರರಿದ್ದಾರೋ ಅವರ ಪರವಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯುತ್ತಿಲ್ಲ. ಎಲ್ಲರಿಗೂ ಸಮಾನವಾದಂತಹ ದುಡಿಯುವ ಮತ್ತು ಅದಕ್ಕೆ ಸಮಾನವಾದ ಆದಾಯವನ್ನು ಗಳಿಸುವ ಹಕ್ಕಿರಬೇಕು. ಅದನ್ನು ಕೊಡುತ್ತಿಲ್ಲ.

ಮನುಸ್ಮೃತಿಯ ಪರವಾಗಿ ಇವತ್ತು ಆಳ್ವಿಕೆಯಲ್ಲಿರುವಂತಹವರು ಮಾತಾಡುತ್ತಾರೆ. ಮನುಸ್ಮೃತಿ ಒಳಗಡೆ ಏನಿದೆ ಅನ್ನುವ ವಿಚಾರ ಬಂದಾಗ ಒಬ್ಬ ಪ್ರೊಫೆಸರ್ ನನ್ನ ಹತ್ತಿರ ವಾದ ಮಾಡಿದರು. ಮನುಸ್ಮೃತಿ ಭಾರತದ ಮಹಿಳೆಯರನ್ನು ರಕ್ಷಿಸಬೇಕು ಎಂದು ಹೇಳುತ್ತೆ. " ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತೆ" ಅಂದರೆ ಅದು ಸ್ವಾತಂತ್ರ್ಯದ ವಿಚಾರ ಅಲ್ಲ. ಅದು ನಾವೇ ನಿಮಗೆ ರಕ್ಷಣೆ ಕೊಟ್ಟಾಗ ನಿಮಗೆ ಯಾತಕ್ಕೆ ಮತ್ತೆ ಮಹಿಳಾ ಸಬಲೀಕರಣ ಬೇಕು ?ಮಹಿಳಾ ಸ್ವಾತಂತ್ರ್ಯ ಯಾಕೆ ಬೇಕಾಗುತ್ತದೆ ನಿಮಗೆ? ಅಂತ ಪ್ರೊಫೆಸರ್ ನನ್ನ ಜೊತೆ ವಾದ ಮಾಡಿದರು. ನಾನು ಹೇಳಿದೆ ಮನುಸ್ಮತಿನ ಹೋಗಿ ನೋಡಿ ಒಂದು ಸಲ. ಮನುಸ್ಮೃತಿ ಹೇಳುತ್ತೆ ಪಶುಗಳನ್ನ, ಶೂದ್ರರನ್ನ ಮತ್ತು ಮಹಿಳೆಯರನ್ನು ಹೇಗೆ

ಬೇಕಾದರೂ ದಂಡಿಸಬಹುದು, ಹೊಡೆಯಬಹುದು ಎನ್ನುತ್ತದೆ. ಯಾರಾದರೂ ಅತಿಥಿ ಮನೆಗೆ ಬಂದರೆ ಅವರಿಗೆ ಕೊಡಬಹುದಾದ ಅತ್ಯುತ್ತಮವಾದ ಕಾಣಿಕೆ ಏನು ಎಂದರೆ, ಮನೆಯಲ್ಲಿರುವಂತಹ ಅವಿವಾಹಿತ ಕನ್ಯೆ ಎಂದು ಹೇಳುತ್ತದೆ. ಈ ರೀತಿಯಲ್ಲಿ ಮಹಿಳೆಯರನ್ನು ಪರಿಗಣಿಸುವಂತಹ ಮನುಸ್ಮೃತಿ ನಮಗೆ ಹೇಗೆ ಆದರ್ಶವಾಗಲು ಸಾಧ್ಯ ಎನ್ನುವುದನ್ನು ನಾವು ಯೋಚಿಸಬೇಕು.

ಇಂತಹ ವಿಚಾರಗಳನ್ನು ಮುಂದಿಟ್ಟುಕೊಂಡು ಬರುತ್ತಿರುವಂತಹವರನ್ನು ನಾವು ಎಚ್ಚರಿಕೆಯಿಂದ ಪರಿಗಣಿಸಬೇಕು. ಯಾಕೆಂದರೆ ಎಲ್ಲ ಧಾರ್ಮಿಕ ಮೂಲಭೂತವಾದಗಳು ಮಹಿಳೆಯರ ಶತ್ರುಗಳು. ಅವು ಮಹಿಳೆಯರನ್ನೇ ತುಳಿಯುತ್ತವೆ. ಹಾಗಾಗಿ ನಾವೆಲ್ಲರೂ ಈ ಬಾರಿ ಇದರ ವಿರುದ್ಧ ಒಗ್ಗಟ್ಟಾಗಿ ದನಿ ಎತ್ತಬೇಕು. ಸಹೋದರರೇ ಸಹೋದರಿಯರೇ ಈ ಬಾರಿ ನಮಗೆ ಒಂದು ಅವಕಾಶ ಇದೆ ಇದು ಕೊನೆಯ ಅವಕಾಶ. ಇದನ್ನು ನಾವು ಕಳೆದುಕೊಳ್ಳಬಾರದು. ಬಹಳ ಒಗ್ಗಟ್ಟಾಗಿ ಗಟ್ಟಿಯಾದ ಪ್ರಯತ್ನವನ್ನು ಮಾಡುತ್ತಾ ನಮ್ಮ ದೇಶದ ಸಂವಿಧಾನದ ಆಶಯಗಳನ್ನು ನಾವು ಉಳಿಸಿಕೊಳ್ಳಬೇಕು. ಎನ್ನುವಂತಹ ಕರೆಯನ್ನು ವಿಚಾರಗಳನ್ನು ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅನುವಾದ: ಮಲ್ಲಿಗೆ ಸಿರಿಮನೆ

ಬರಹ ರೂಪ: ಪ್ರವೇಣಿ, ಗುಬ್ಬಿ

# ಗೆಲುವಿನ ಪಥ

## ಕೆ ದೊರೈರಾಜ್

ಈ ಮಹಿಳಾ ದಿನಾಚರಣೆ ಆಚರಣೆ ಮಾಡುವಾಗ ನೋಡುವಂಥ ಕಾರ್ಯಕ್ರಮಕ್ಕೂ ಈ ಕಾರ್ಯಕ್ರಮಕ್ಕೂ ತುಂಬಾ ವ್ಯತ್ಯಾಸಗಳಿವೆ. ಅದೇನೆಂದರೆ ಮೊದಲನೆಯದು ಇದೇ ಪ್ರಥಮ ಬಾರಿಗೆ ತುಮಕೂರಿನಲ್ಲಿ ಬಾ ಹ ರಮಕುಮಾರಿಯವರು, ಮಲ್ಲಿಕಾ ಬಸವರಾಜುರವರು, ಇಂದಿರಮ್ಮನವರು ಮತ್ತು ಅನೇಕರು ಪಟ್ಟಿ ದೊಡ್ಡದಾಗಿದೆ. ಜೊತೆಗೆ ಕಲ್ಯಾಣಿರವರ ಯುವತಂಡ ಇವರೆಲ್ಲ ಅರಿವಿನ ಕಾರ್ಯಕ್ರಮ ಅಂತ ಹೇಳಿ ಜಿಲ್ಲೆಯಾದ್ಯಂತ ಮಾಡಿ ಎಲ್ಲಾ ಜನರನ್ನು ತಲುಪಿದ್ದಾರೆ. ಎಲ್ಲಾ ವಯಸ್ಸಿನ ಜನರನ್ನು reach ಮಾಡಿದ್ದಾರೆ. ಎಲ್ಲಾ ವಯಸ್ಸಿನ ಜನರನ್ನು involve ಮಾಡಿಕೊಂಡಿದ್ದಾರೆ. ಎಲ್ಲಾ ಜಾತಿ, ಧರ್ಮ, ಕುಲ, ಇಡೀ ಮನುಕುಲವೇ ಇಲ್ಲಿ ಬಂದು ಕುಳಿತಿದೆ ಎನ್ನುವಂತಿದೆ. ಆ ಕಾರಣಕ್ಕಾಗಿ ಇದು ಮಹತ್ತರವಾದ ಸಮಾವೇಶವಾಗಿದೆ ಎಂದು ಭಾವಿಸುತ್ತೇನೆ.

ಎರಡನೆಯದಾಗಿ ಕೇರಳದ ಶೈಲಜಾ ಟೀಚರ್ ಒಬ್ಬ ಜನಪ್ರತಿನಿಧಿಯಾಗಿ, ಮಂತ್ರಿಯಾಗಿ ಇಡೀ ವಿಶ್ವದ ಗಮನವನ್ನೇ ಸೆಳೆಯುವಂತಹ ವ್ಯಕ್ತಿತ್ವ ರೂಪಿಸಿಕೊಂಡಿದ್ದಾರೆ, ಅದಕ್ಕೆ ಕಾರಣ ಚಿಕ್ಕಂದಿನಿಂದ ರೂಢಿಸಿಕೊಂಡ ಜನಪರವಾದ, ಪ್ರಗತಿಪರವಾದ ವಿಚಾರಗಳು ಮತ್ತು ಅವರ ಬದ್ಧತೆ, ಇದರಿಂದ ಅವರು ಇಡೀ ವಿಶ್ವದ ಗಮನ ಸೆಳೆಯಲು ಸಾಧ್ಯವಾಯಿತು. ಈ ಮಾದರಿಯನ್ನು ತುಮಕೂರಿನ ಎಲ್ಲಾ ಚಳುವಳಿಗೆ ಪರಿಚಯ ಮಾಡುವಂತೆ ಕೆಲಸ ಮಾಡಿದ್ದಾರೆ. ಆದ್ದರಿಂದ ಇದೊಂದು ಅಪರೂಪ, ಅದ್ಭುತ, ಅನನ್ಯವಾದ ಕಾರ್ಯಕ್ರಮ. ಅದಕ್ಕಾಗಿ ಧನ್ಯವಾದಗಳನ್ನು ಹೇಳಲು ಇಷ್ಟಪಡುತ್ತೇನೆ.

ಕೊನೆಯದಾಗಿ ಇದೊಂದು ಗೆಲುವು. ಎಲ್ಲರನ್ನೂ involve ಮಾಡಿಕೊಳ್ಳುವ ಕಾರ್ಯಕ್ರಮಗಳು. ನಿಜಕ್ಕೂ ಗೆಲವು ಸಮಾನತೆಯೊಳಗೆ

ಸಾಗಬೇಕಾದರೆ inclusive ಸೊಸೈಟಿ ಆಗಬೇಕು ಹಾಗೆ ಎಲ್ಲರನ್ನೂ ಒಳಗೊಂಡ inclusive democracy ಆಗಬೇಕು. ಇವೆಲ್ಲ ಆದಾಗ ಮಾತ್ರ ವಿಭಿನ್ನ ಭೇದ ಸೃಷ್ಟಿಸುವ ಸಾಮಾಜಿಕ ಅನಿಷ್ಟಗಳು, ಮೂಢನಂಬಿಕೆಗಳು ಮತ್ತು ಈ ಆರ್ಥಿಕ ಅಸಮಾನತೆಗಳು ಎಲ್ಲವನ್ನು ಧಿಕ್ಕರಿಸಿ ಸಮಾನತೆ ಕಡೆಗೆ ಹೋಗಲು ಸಾಧ್ಯವಾಗುತ್ತದೆ. ಆ ಪಥವನ್ನು ಮುಂದುವರಿಸುವ ಮೂಲಕ ಗೆಲುವು ಸಾಧಿಸೋಣ.

ಬರಹ ರೂಪ: ಪ್ರವೀಣಾ

ಲೈಂಗಿಕ ಕಿರುಕುಳದ ವಿಚಾರ ತಿಳಿಸುವಾಗ ಅನೇಕ ಹೆಣ್ಣು ಮಕ್ಕಳ ಅರಿವು ಕಣ್ತೆರೆದು, ನಮ್ಮ ಕಣ್ಣನ್ನು ತೆರೆಸಿತು. ಅದು ಲೈಂಗಿಕ ನೋಟ, ಸ್ಪರ್ಶ, ಕಿರುಕುಳ ಎಂದು ಅರ್ಥವಾಗದಿರುವ ವಯೋಮಾನದಲ್ಲಿದ್ದ ಹೆಣ್ಣುಮಕ್ಕಳನ್ನು ಶಾಲಾ ಬಸ್ಸಿನ ವಾಹನ ಚಾಲಕ, ಶಿಕ್ಷಕ ಇನ್ನೂ ಯಾರ್ಯಾರೋ ಕಾಡಿದ್ದನ್ನು ಪಿಸು ಮಾತಿನಲ್ಲಿ ಹಂಚಿಕೊಂಡದ್ದು ಉಂಟು. ಇದನ್ನು ಕಂಡಾಗ ಒಕ್ಕೂಟ ಮಾಡಬೇಕಾಗಿದ್ದು ಬಹಳ ಇದೆ ಅನ್ನಿಸಿತು.

# ನನ್ನ ದೇಹ ನನ್ನ ಹಕ್ಕು

ಅಕ್ಕೈ ಪದ್ಮಶಾಲಿ

ಮಹಿಳಾ ಚಳುವಳಿಯ ಭಾಗವಾಗಿರುವ ಅನೇಕರು ನಮ್ಮ ಎದುರು ಉಪಸ್ಥಿತರಿದ್ದಾರೆ. ಇಲ್ಲಿ ಎಷ್ಟು ಜನ ಗಂಡಸರು ಇದ್ದೀರಿ ಎಲ್ಲಾ ಕೈ ಎತ್ತಿ. ಗಂಡಸರು ಅಂತ ಅಂದುಕೊಂಡ ನಿಮಗೂ ಕೂಡ ಅಂತರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು. ಪ್ರತಿಯೊಂದು ಜೀವಿಗೂ ಇದು ಅನ್ವಯವಾಗಬೇಕು.

ಈಗ ನಾನು ಕೆಲವು ಘೋಷಣೆಗಳನ್ನು ಕೂಗುತ್ತೇನೆ ನೀವೆಲ್ಲ ಧಿಕ್ಕಾರ ಎನ್ನಬೇಕು.

- ರೈತ ವಿರೋಧಿ ಸರ್ಕಾರಕ್ಕೆ ಹಾಕಿ ಧಿಕ್ಕಾರ
- ಹಿಜಾಬ್ ವಿರುದ್ಧದ ಸರ್ಕಾರಕ್ಕೆ ಹಾಕಿ ಧಿಕ್ಕಾರ
- ತ್ರಿವಳಿ ತಲಾಖನ್ನು ಸಮ್ಮತಿಸಿದ ಸರ್ಕಾರಕ್ಕೆ ಹಾಕಿ ಧಿಕ್ಕಾರ
- ಆ್ಯಂಟಿ ಕನ್ವರ್ಷನ್ ಬಿಲ್ ಕರ್ನಾಟಕ ಮಸೂದೆ ಮಾಡಿದ ಸರ್ಕಾರಕ್ಕೆ ಹಾಕಿ ಧಿಕ್ಕಾರ
- ಯುವಕ–ಯುವತಿಯರ ಬಾಳನ್ನು ನಾಶ ಮಾಡುತ್ತಿರುವ ಸರ್ಕಾರಕ್ಕೆ ಹಾಕಿ ಧಿಕ್ಕಾರ
- ದೇಶದ ಸಂಪತ್ತನ್ನು ಖಾಸಗಿ ಸಂಸ್ಥೆಗೆ ಅಡಮಾನವಿಡುವ ಸರ್ಕಾರಕ್ಕೆ ಹಾಕಿ ಧಿಕ್ಕಾರ
- ಪೆಟ್ರೋಲ್, ಡೀಸೆಲ್, ಗ್ಯಾಸ್, ಆಹಾರಧಾನ್ಯಗಳ ಎಲ್ಲದರ ಬೆಲೆಯನ್ನು ಏರಿಕೆ ಮಾಡಿದ ಸರ್ಕಾರಕ್ಕೆ ಹಾಕಿ ಧಿಕ್ಕಾರ

ಸಾರ್ವತ್ರಿಕ ಚುನಾವಣೆ– 2023 ನೇ ಇಸವಿಯಲ್ಲಿ ಸಂವಿಧಾನವನ್ನು ರಕ್ಷಣೆ ಮಾಡುವಂತಹ ಸರ್ಕಾರಗಳನ್ನು ಆಯ್ಕೆ ಮಾಡಿ ನಾವೆಲ್ಲರೂ ಸಾಕ್ಷಿಯಾಗುವಂತಹ ಸಂವಿಧಾನಕ್ಕೆ ಕೊಡುವಂತಹ ಬಹುದೊಡ್ಡ ಗೌರವ ಎಂದು ನಾನು ಭಾವಿಸಿದ್ದೇನೆ.

ನಮ್ಮ ಪ್ರಧಾನ ಮಂತ್ರಿಗಳು "ಭೇಟಿ ಪಡಾವೋ ಭೇಟಿ ಬಚಾವೋ" ಅಂತ ಹೇಳಿದರು. ಕರ್ನಾಟಕದಲ್ಲಿ ಹಿಜಾಬ್ ವಿಷಯ ಇದಕ್ಕೆ ವಿರುದ್ಧವಾಯಿತು. ಸಂವಿಧಾನ ವಿರೋಧಿ ಸಂದರ್ಭಗಳನ್ನು ಚಟುವಟಿಕೆಗಳನ್ನು ನಾಶ ಮಾಡಿ ಸಂವಿಧಾನವನ್ನು ಗೌರವಿಸುವ, ಸಂರಕ್ಷಿಸುವ ಕೆಲಸವನ್ನು ನಾವು ಮಾಡಬೇಕಿದೆ

ಮಹಿಳಾ ಮೀಸಲಾತಿ ಕುರಿತಂತೆ ನಾವು 33% ಏನು ಕೇಳುತ್ತಿದ್ದೇವೆ 50% ಕೇಳಬೇಕು. ದೇಶದ 140 ಕೋಟಿ ಜನಸಂಖ್ಯೆಯಲ್ಲಿ ಶೇಕಡ 70ರಷ್ಟಿರುವ ಮಹಿಳೆಯರು ಶೇಕಡ 50ರಷ್ಟು ಮೀಸಲಾತಿಯನ್ನು ನಿರೀಕ್ಷಿಸುವುದು ತಪ್ಪಲ್ಲ. ಗ್ರಾಮ ಪಂಚಾಯಿತಿಯ ಮಟ್ಟದಲ್ಲಿಯೇ ನಾವು ನಮ್ಮ ಸ್ಥಾನವನ್ನು ಗುರುತಿಸಿಕೊಳ್ಳಬೇಕು. ದೇಶದ ಆರ್ಥಿಕ, ಸಾಮಾಜಿಕ, ಪಾರಂಪರಿಕ ಮತ್ತು ರಾಜಕೀಯ ವಿಚಾರದಲ್ಲಿ ಮಹಿಳೆಯರನ್ನು ಸಂಪೂರ್ಣ ನಿರ್ಲಕ್ಷಿಸುವ ಅಂಶವನ್ನು ನಾವು ತೀವ್ರವಾಗಿ ಪರಿಗಣಿಸಬೇಕು.

ನಿಯಮಗಳೆಲ್ಲವೂ ಹೆಣ್ಣು ಮಕ್ಕಳ ವಿರುದ್ಧವಾಗಿಯೇ ಇರುವುದು ನಾಚಿಕೆಗೇಡಿನ ಸಂಗತಿ. ಹೆಣ್ಣಿನ ಬಗೆಗಿರುವ ಕನಿಷ್ಠ ಅಭಿಪ್ರಾಯಗಳನ್ನು ಬದಲಾಯಿಸುವ ಪ್ರಯತ್ನವಾಗಬೇಕು.

ಕೊನೆಯದಾಗಿ ಲೈಂಗಿಕ ಅಲ್ಪಸಂಖ್ಯಾತರ ಬಗೆಗಿರುವ ಧೋರಣೆಗಳು ಬದಲಾಗಬೇಕು. "ನನ್ನ ದೇಹ ನನ್ನ ಲೈಂಗಿಕತೆ ನನ್ನದೇ ಹಕ್ಕಾಗಿರುತ್ತದೆ. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇರುವುದಿಲ್ಲ."

ಬರಹ ರೂಪ: ರಂಗಮ್ಮ ಹೊದೆಕಲ್

# ತವಕ-ತಲ್ಲಣಗಳು ಕಂಗೆಡಿಸದಿರಲಿ

ಡಾ. ಸುಧಾ ಕಾಮತ್

ಎಲ್ಲರಿಗೂ ನಮಸ್ಕಾರ. ಇಲ್ಲಿ ಸೇರಿರುವ ಎಲ್ಲರಿಗೂ ನಮ್ಮ ಸಂಘಟನೆ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್ಎಸ್) ಪರವಾಗಿ ಅಂತರರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳನ್ನು ನೀಡ ಬಯಸುತ್ತೇನೆ.

ಸ್ನೇಹಿತರೇ, ಈ ದಿನ, ಹೊಸ ವರ್ಷದಂತೆ ಅಥವಾ ಯಾವುದೋ ಒಂದು ಹಬ್ಬ ಹರಿದಿನದಂತೆ ಸಂಭ್ರಮಿಸುವ ದಿನವಲ್ಲ. ಈ ದಿನ, ನಾವು ಸಾಗಬೇಕಾದ ದಾರಿ ಯಾವುದು? ನಮ್ಮ ಗುರಿ ಏನಿರಬೇಕು ಅನ್ನುವುದನ್ನು ರೂಪಿಸಿ ಆ ನಿಟ್ಟಿನಲ್ಲಿ ಸಂಕಲ್ಪ ತೊಡುವಂತಹ ದಿನ. ಇದಕ್ಕೆ ಪೂರಕವಾಗಿ ನಮ್ಮ ಇತಿಹಾಸವನ್ನು ಕೊಂಚ ಹಿಂತಿರುಗಿ ನೋಡಿದರೆ, ಯಾವ ಅಮೆರಿಕಾ ದೇಶ, ಪ್ರಜಾತಂತ್ರದ ಶಿಖರ ಪ್ರಾಯದಲ್ಲಿದೆ, ಎಲ್ಲಾ ಪ್ರಜಾತಾಂತ್ರಿಕ ಹಕ್ಕುಗಳನ್ನು ಗಳಿಸಿಕೊಂಡಿದೆ ಎಂದು ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಾರೋ, ವಾಸ್ತವ ಪರಿಸ್ಥಿತಿ ಹಾಗಿಲ್ಲ. ಇಂದಿಗೂ ಅಲ್ಲಿ ಎಲ್ಲರಿಗೂ, ವಿಶೇಷವಾಗಿ ಮಹಿಳೆಯರಿಗೆ ಸಮಾನತೆ-ಸ್ವಾತಂತ್ರ್ಯ ಲಭ್ಯವಿಲ್ಲ.

ಈ ದೇಶದಲ್ಲಿ, 1857 ನೇ ಇಸವಿಯಿಂದಲೇ ಹೆಣ್ಣು ಮಕ್ಕಳ ಹೋರಾಟ ಶುರುವಾಯಿತು. ಕೈಗಾರಿಕಾ ಕ್ರಾಂತಿಯ ಬಳಿಕ ಪಾಶ್ಚಾತ್ಯ ದೇಶಗಳಲ್ಲಿ ಬಂಡವಾಳಶಾಹಿಗಳು ಕಾರ್ಖಾನೆಗಳನ್ನು ಶುರು ಮಾಡಿದರು. ಅಮೆರಿಕಾದ ನ್ಯೂಯಾರ್ಕ್, ಷಿಕಾಗೊ ಮುಂತಾದೆಡೆಗಳ ಜವಳಿ ಕಾರ್ಖಾನೆಗಳಲ್ಲಿ ಬಹುತೇಕವಾಗಿ ಹೆಣ್ಣುಮಕ್ಕಳೇ ದುಡಿಯುತ್ತಿದ್ದುದು. ಅವರಲ್ಲಿ ಹೆಚ್ಚಿನವರು, ಕೆಲಸ ಅರಸುತ್ತಾ ಬೇರೆಬೇರೆ ದೇಶಗಳಿಂದ ವಲಸೆ ಕಾರ್ಮಿಕರಾಗಿ ಅಲ್ಲಿಗೆ ಬಂದವರು. ಈ ಹೆಣ್ಣುಮಕ್ಕಳಿಗೆ ಯಾವುದೇ ಹಕ್ಕುಗಳಿರಲಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನ, ಮಾತೃತ್ವ ರಜಾ, ಶಿಶುಪಾಲನಾ ಕೇಂದ್ರಗಳು, ಕಾಯಿಲೆಯಾದವರಿಗೆ ಚಿಕಿತ್ಸೆ, ಯಾವುದೂ ಲಭ್ಯವಿರಲಿಲ್ಲ. ಕಿರಿದಾದ, ಗಾಳಿ-ಬೆಳಕಿಲ್ಲದ, ಗಲೀಜು

ವಾತಾವರಣದಿಂದ ಅವರು ಆಗಾಗ ಕಾಯಿಲೆ ಬೀಳುತ್ತಿದ್ದರು, ಅಂದು ಮಾರಣಾಂತಿಕ ರೋಗವಾದ ಕ್ಷಯಕ್ಕೂ ಬಲಿಯಾಗುತ್ತಿದ್ದರು. ಜೊತೆಗೆ ಅವರು ಮಾಲೀಕರ–ಮೇಲ್ವಿಚಾರಕರ ದೌರ್ಜನ್ಯಕ್ಕೆ, ಕೆಲವೊಮ್ಮೆ ಲೈಂಗಿಕ ದೌರ್ಜನ್ಯಕ್ಕೂ ಒಳಗಾಗುತ್ತಿದ್ದರು. ನ್ಯಾಯ ಅವರಿಗೆ ಮರೀಚಿಕೆಯೇ ಆಗಿತ್ತು. ಇದರಿಂದ ರೋಸಿ ಹೋಗಿದ್ದ ಈ ಮಹಿಳಾ ಕಾರ್ಮಿಕರು ಹೋರಾಟದ ಕಣಕ್ಕಿಳಿದರು. 19ನೇ ಶತಮಾನದ ಅಂತ್ಯಭಾಗದಲ್ಲಿ ಶುರುವಾದ ಅವರ ಹೋರಾಟ ಆಗಾಗ ಸ್ಫೋಟಗೊಳ್ಳುತ್ತಲೇ ಇತ್ತು.

ಆದರೆ, 1908ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಪ್ರಾರಂಭವಾದ ಅವರ ಪ್ರತಿಭಟನೆ, ಬೃಹತ್ ರೂಪವನ್ನು ತಾಳಿತು. ಮಾರ್ಚ್ 8ರಂದು ಬೀದಿಗಿಳಿದ ಸುಮಾರು 15000 ಹೆಣ್ಣುಮಕ್ಕಳ ಮೇಲೆ, ಬಂಡವಾಳಶಾಹಿಪರವಾದ ಸರ್ವಾಧಿಕಾರಿ ಸರ್ಕಾರ ದಾಳಿ ನಡೆಸಿತು. ಎಷ್ಟೋ ಜನ ಹೆಣ್ಣುಮಕ್ಕಳು ಪ್ರಾಣ ಕಳೆದುಕೊಂಡರು. ನ್ಯೂಯಾರ್ಕ್ ನಗರದ ಬೀದಿಗಳು ಅವರ ರಕ್ತದಿಂದ ಕೆಂಪಾದವು. ಹೋರಾಟದ ಕಾವಿಗೆ ಮಣಿದ ಸರ್ಕಾರಕ್ಕೆ ಅವರ ಕೆಲವೊಂದು ಬೇಡಿಕೆಗಳನ್ನು ಈಡೇರಿಸಲೇ ಬೇಕಾಯಿತು.

1910ರಲ್ಲಿ ಡೆನ್ಮಾರ್ಕಿನ ಕೊಪೆನ್‌ಹೆಗನ್‌ನಲ್ಲಿ ನಡೆದ ಸಮಾಜವಾದಿ ಮಹಿಳೆಯರ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ, ಸಮಾಜವಾದಿ ನಾಯಕಿ ಕ್ಲಾರಾ ಜಟ್ಕಿನ್‌ರವರು ಈ ದಿನವನ್ನು 'ಅಂತರರಾಷ್ಟ್ರೀಯ ದುಡಿಯುವ ಮಹಿಳೆಯರ ದಿನ'ವೆಂದು ಘೋಷಿಸಿದರು. ಹಾಗಾಗಿ, 1911 ರಿಂದ ಇಲ್ಲಿಯವರೆಗೂ ವಿಶ್ವದಾದ್ಯಂತ ಮಾರ್ಚ್ 8 ಅನ್ನು, ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತಿದೆ.

ಸ್ನೇಹಿತರೇ, ಇಲ್ಲಿ ನಾನು ಹೇಳಬಯಸುವುದೇನೆಂದರೆ, ನಾವು ಪಡೆದಿರುವ ಎಲ್ಲಾ ಹಕ್ಕುಗಳೂ ಹೋರಾಟದ ಮೂಲಕವೇ ಪಡೆದಿರುವಂಥವು. ಆದರೆ, ಇದೀಗ ಅವುಗಳಿಗೂ ಕುತ್ತು ಬಂದಿದೆ. ನಮ್ಮ ದೇಶದ ಆಳುವ ಕೇಂದ್ರ ಸರ್ಕಾರ ಈ ಹಕ್ಕುಗಳನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಇತ್ತೀಚೆಗೆ ಕೇಂದ್ರ ಸರ್ಕಾರ, ದುಡಿಮೆಯ ಅವಧಿಯನ್ನು ಮೊದಲಿದ್ದ 8 ಗಂಟೆಗಳಿಂದ 12ಗಂಟೆಗಳಿಗೆ ಹೆಚ್ಚಿಸಿದೆ. ಮಾನವನಿಗೆ 8 ಗಂಟೆಯ ದುಡಿತದ ನಂತರ, 8 ಗಂಟೆಗಳು ವಿಶ್ರಾಂತಿಗೆ ಮತ್ತು 8 ಗಂಟೆಗಳು ಮನರಂಜನೆ, ಅವನ ಬೌದ್ಧಿಕ ಬೆಳವಣಿಗೆ, ಇತ್ಯಾದಿಗಳಿಗೆ ಮೀಸಲು ಎಂದು ವೈಜ್ಞಾನಿಕ ದೃಷ್ಟಿಕೋನದಿಂದ 8 ಗಂಟೆಯ ದುಡಿತದ ಅವಧಿಯನ್ನು ನಿಗದಿ ಪಡಿಸಲಾಗಿತ್ತು. ಆದರೆ, ಇದನ್ನೀಗ

ಕೈ ಬಿಡಲಾಗಿದೆ. ಅಲ್ಲದೆ, ಮಹಿಳೆಯರಿಗೆ ಭದ್ರತೆ ಮತ್ತು ಅವರ ದೈಹಿಕ ವಿಭಿನ್ನತೆಗಳ ಕಾರಣದಿಂದಾಗಿ ನಿಷೇಧಿಸಿದ್ದ ರಾತ್ರಿಪಾಳಿಯನ್ನು ಮತ್ತೀಗ ಜಾರಿಗೆ ತರಲಾಗಿದೆ. ಅಷ್ಟಲ್ಲದೆ, ಜಾಗತೀಕರಣ ನೀತಿಗಳು ಹಾಗೂ ಕಾರ್ಮಿಕವಿರೋಧಿ ನೀತಿಗಳ ಜಾರಿಯಿಂದ ಖಾಯಂ ಕೆಲಸಗಳು ಮಾಯವಾಗಿದ್ದು, ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಂಡು ಅವರನ್ನು ಎಲ್ಲಾ ಹಕ್ಕುಗಳಿಂದ ವಂಚಿತರನ್ನಾಗಿಸಿ, ಕಡಿಮೆ ಸಂಬಳಕ್ಕೆ, ಇತರ ಯಾವುದೇ ಸೌಲಭ್ಯಗಳನ್ನು ನೀಡದೆ ದುಡಿಸಿಕೊಳ್ಳಲಾಗುತ್ತಿದೆ. ಇದಕ್ಕೆ ಕಣ್ಣುಕುಕ್ಕುವ ನಿದರ್ಶನವೆಂದರೆ, ಸ್ಕೀಮ್ ವರ್ಕರ್ಸ್‌ಗಳು. ಆಶಾ, ಅಂಗನವಾಡಿ, ಬಿಸಿ ಊಟದ ಕಾರ್ಮಿಕರಾದ ಮಹಿಳೆಯರನ್ನು, ಗೌರವಧನದ ಹೆಸರಿನಲ್ಲಿ ಅತಿ ಕಡಿಮೆ ಸಂಬಳಕ್ಕೆ ನೇಮಿಸಿಕೊಂಡು, ಅವರಿಂದ ಅತಿ ಹೆಚ್ಚಿನ ಕೆಲಸ ಮಾಡಿಸಿಕೊಂಡು ಸರ್ಕಾರವೇ ಶೋಷಿಸುತ್ತಿದೆ.

ಇನ್ನೊಂದೆಡೆ ಮಹಿಳಯರ ಮೇಲಿನ ದೌರ್ಜನ್ಯದ ಬಗ್ಗೆ ಹೇಳಬೇಕೆಂದರೆ, ದಿನ ಬೆಳಗಾದರೆ, ಪತ್ರಿಕೆಗಳನ್ನು ಗಮನಿಸಿದರೆ, ಹಸುಗೂಸುಗಳಿಂದ ಹಿಡಿದು 90 ವರ್ಷದ ವಯೋವೃದ್ಧೆಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳು, ಅತ್ಯಾಚಾರಗಳು ದಿಗ್ಭ್ರಮೆಗೊಳಿಸುವಂತಿವೆ! ಅದರಲ್ಲೂ ಗುಂಪು ಅತ್ಯಾಚಾರಗಳು ಸರ್ವೇಸಾಮಾನ್ಯವಾಗಿವೆ. ಇಂತಹ ಹೀನ ಕೃತ್ಯ ಎಸಗಿದ ಪಾತಕಿಗಳಿಗೆ ನಿದರ್ಶನೀಯ ಶಿಕ್ಷೆ ಸಿಗುವಂತೆ ಮಾಡಿ, ಉಳಿದವರಿಗೆ ಎಚ್ಚರಿಕೆ ನೀಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಆದರೆ ಇತ್ತೀಚಿನ ಬಿಲ್ಕಿಸ್ ಬಾನು ಪ್ರಕರಣ ನಾಗರಿಕ ಸಮಾಜವನ್ನು ತಲ್ಲಣಗೊಳಿಸಿದೆ. ಗುಜರಾತಿನಲ್ಲಿ 2002ರಲ್ಲಿ ನಡೆದ ಜನಾಂಗೀಯ ಹತ್ಯಾಕಾಂಡದಲ್ಲಿ ತನ್ನ ಮೂರು ವರ್ಷದ ಮಗಳನ್ನೂ ಸೇರಿದಂತೆ 14 ಜನ ಕುಟುಂಬದವರನ್ನು ಕಳೆದುಕೊಂಡು, ತನ್ನ ತಾಯಿ ಮತ್ತು ತಂಗಿಯೊಂದಿಗೆ ಸ್ವತ: ಅತ್ಯಾಚಾರಕ್ಕೆ ಒಳಗಾಗಿದ್ದ ಗರ್ಭಿಣಿ ಮಹಿಳೆ ಬಿಲ್ಕಿಸ್ ಬಾನು. ನ್ಯಾಯಕ್ಕಾಗಿ ಕೋರ್ಟಿಗೆ ಅಲೆದಾಡಿದ್ದ ಈ ಮಹಿಳೆಯ ಸತತ ಶ್ರಮದ ಫಲವಾಗಿ ಗುಜರಾತಿನಿಂದ ಮಹಾರಾಷ್ಟ್ರದ ಮುಂಬೈ ಹೈಕೋರ್ಟಿಗೆ ಈ ಕೇಸು ವರ್ಗಾವಣೆಯಾಗಿ 11 ಜನ ಪಾತಕಿಗಳಿಗೆ ಜೀವಾವಧಿ ಶಿಕ್ಷೆಯಾಗಿತ್ತು. ಆದರೆ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹೆಸರಿನಲ್ಲಿ ಗುಜರಾತ್ ಸರ್ಕಾರ ಅವರೆಲ್ಲರನ್ನೂ ಸನ್ನಡತೆಯ ಆಧಾರದಲ್ಲಿ ಬಿಡುಗಡೆ ಮಾಡಿ ಬಿಲ್ಕಿಸ್ ಬಾನುವನ್ನು ಹತಾಶೆಯ ಮಡಿಲಿಗೆ ದೂಡಿದೆ. ಈ ಪಾತಕಿಗಳನ್ನು ಯಾವುದೋ ಯುದ್ಧವನ್ನು ಗೆದ್ದ ವೀರರಂತೆ ಹಾರ–ತುರಾಯಿ ಹಾಕಿ ಸನ್ಮಾನ ಮಾಡಿರುವುದಂತೂ ಗಾಯಕ್ಕೆ ಉಪ್ಪು ಸವರಿದಂತಿದೆ. ಹಾಗೆಯೇ, ಉತ್ತರಪ್ರದೇಶದ ಹತ್ರಾಸ್‌ನ 19ವರ್ಷದ ದಲಿತ ಯುವತಿಯ ಮೇಲೆ 4 ಜನ ಪಾತಕಿಗಳು ಗುಂಪು ಅತ್ಯಾಚಾರವೆಸಗಿ,

ಅವಳನ್ನು ಮಾರಣಾಂತಿಕವಾಗಿ ಗಾಯಗೊಳಿಸಿ, ಅವಳ ಸಾವಿಗೆ ಕಾರಣರಾಗಿದ್ದು; ಈ ಅಪರಾಧಿಗಳನ್ನು ಬಂಧಿಸುವ ಬದಲಿಗೆ, ಅಧಿಕಾರಸ್ತರು ಎಲ್ಲಾ ಪುರಾವೆಗಳನ್ನು ನಾಶ ಪಡಿಸಿ, ಅವಳ ಕುಟುಂಬದವರಿಗೂ ಅವಳ ಅಂತಿಮ ದರ್ಶನಕ್ಕೂ ಬಿಡದೆ, ತಾವೇ ಶವವನ್ನು ಸುಟ್ಟು ಹಾಕಿರುವುದು; ಕೊನೆಗೆ, 3 ಜನ ಆರೋಪಿಗಳು ಬಿಡುಗಡೆಯಾಗಿ, ಒಬ್ಬ ಮಾತ್ರ, ಆತ ಮಾಡಿದ್ದು ಉದ್ದೇಶಪೂರ್ವಕ ಹತ್ಯೆ ಅಲ್ಲ ಎಂದು ಕಡಿಮೆ ಶಿಕ್ಷೆಗೆ ಗುರಿಯಾಗಿದ್ದು, ಇದೆಲ್ಲವೂ ಸರ್ಕಾರಗಳಿಗೆ ಮಹಿಳೆಯರೆಡೆಗೆ ಇರುವ ದಿವ್ಯ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ!

ಒಂದು ಕಾಲದಲ್ಲಿ ಸ್ವಾತಂತ್ರ್ಯ, ಸಮಾನತೆ, ಸೋದರತೆ, ಮಹಿಳಾ ವಿಮೋಚನೆಗಳಿಗಾಗಿ ಧ್ವನಿಯೆತ್ತಿದ ಇದೇ ಬಂಡವಾಳಶಾಹಿ ವ್ಯವಸ್ಥೆ ಇಂದು ತನ್ನೆಲ್ಲ ಪ್ರಗತಿಪರವಾದ ಧೋರಣೆಗಳನ್ನು ಕಳೆದುಕೊಂಡು ಮರಣಾಸನ್ನ ಅವಸ್ಥೆಯನ್ನು ತಲುಪಿದೆ. ಯಾವ ರೀತಿ ಒಬ್ಬ ಮನುಷ್ಯ ತನ್ನ ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಯನ್ನು ದಾಟಿ ವೃದ್ಧಾಪ್ಯವನ್ನು ತಲುಪುತ್ತಾನೋ, ಹಾಗೆಯೇ, ಪ್ರತಿಯೊಂದು ಶೋಷಕ ರಾಜಕೀಯ ವ್ಯವಸ್ಥೆಯೂ ತನ್ನ ಉತ್ತುಂಗವನ್ನು ತಲುಪಿ ಕೊನೆಗೆ ಮರಣಾಸನ್ನವಾಗುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಸ್ಥಿತಿಯೂ ಇದೀಗ ಹಾಗೆಯೇ ಇದೆ. ಸಾವಿನ ಅಂಚಿನಲ್ಲಿರುವ ಮನುಷ್ಯನನ್ನು ಕೆಲ ಕಾಲ ಕೃತಕ ಉಸಿರಾಟದ ಮೂಲಕ ಉಳಿಸುವಂತೆ, ಈ ಬಂಡವಾಳಶಾಹಿ ವ್ಯವಸ್ಥೆಯೂ ಈಗ ಕೇವಲ ವೆಂಟಿಲೇಟರ್ ಮೇಲೆ ಜೀವ ಹಿಡಿದುಕೊಂಡಿದೆ. ಹಾಗಾಗಿಯೇ ಇಂದು ಮೇಲೆ ಹೇಳಿದ ಘೋರ ಘಟನೆಗಳನ್ನು ನಾವು ಕಾಣುತ್ತಿರುವುದು. ಈ ವ್ಯವಸ್ಥೆಗೆ ಇನ್ನೆಷ್ಟು ಮಾತ್ರಕ್ಕೂ ಮನುಕುಲಕ್ಕೆ ಒಳಿತು ಮಾಡುವುದು ಸಾಧ್ಯವಾಗದು. ಅದನ್ನು ಗೋರಿಗೆ ತಳ್ಳಿ, ಬದಲಿಗೆ ಸಮಾಜವನ್ನು ಪ್ರಗತಿಯತ್ತ ಒಯ್ಯುವ ಸಮಾಜವಾದಿ ವ್ಯವಸ್ಥೆ ಸ್ಥಾಪಿಸುವುದೇ ನಮ್ಮ ಮುಂದಿನ ಗುರಿಯಾಗಬೇಕು. ಈ ವ್ಯವಸ್ಥೆ ಮಾತ್ರವೇ ಮಹಿಳೆಯರಿಗೆ ಸ್ವಾತಂತ್ರ್ಯದ, ಸಮಾನತೆಯ, ಘನತೆಯ ಬದುಕನ್ನು, ಒಟ್ಟಾರೆಯಾಗಿ ಮಹಿಳಾ ವಿಮುಕ್ತಿಯನ್ನು ಖಾತ್ರಿ ಪಡಿಸುತ್ತದೆ.

ಕ್ಲಾರಾ ಜೆಟ್ಕಿನ್‌ರವರು ಸ್ಪಷ್ಟವಾಗಿ ಕರೆ ನೀಡಿದ್ದಾರೆ: "ನಮಗೆ ಬಂಡವಾಳಶಾಹಿ ವ್ಯವಸ್ಥೆಯಿಂದ ವಿಮುಕ್ತಿ ಸಾಧ್ಯವಿಲ್ಲ, ಅದಕ್ಕಾಗಿ ನಾವು ಸಮಾಜವಾದಿ ವ್ಯವಸ್ಥೆ ತರಲು ಹೋರಾಡಬೇಕಾಗಿದೆ." 1917 ರ ಸಮಾಜವಾದಿ ಕ್ರಾಂತಿಯ ನಂತರ ಇಂತಹ ಒಂದು ಶೋಷಣಾಮುಕ್ತ ಸಮಾಜವನ್ನು ಹಿಂದಿನ ಸೋವಿಯತ್ ಒಕ್ಕೂಟದಲ್ಲಿ ನೋಡಲು ಸಾಧ್ಯವಾಯಿತು. ದುಡಿಯುವ ಮಹಿಳೆಯರು ಸಾಕಷ್ಟು ಹಕ್ಕುಗಳನ್ನು ಪಡೆದುಕೊಂಡರು. ಸಮಾನ ಕೆಲಸಕ್ಕೆ ಸಮಾನ ವೇತನ, ಮಹಿಳೆಯರಿಗೆ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ, ಉದ್ಯೋಗಸ್ಥ

ಗರ್ಭಿಣಿಯರಿಗೆ ಸೂಕ್ತ ಆಹಾರ, ವಿಶ್ರಾಂತಿ, ಮಾತೃರಜೆ, ಉದ್ಯೋಗದ ಸ್ಥಳಗಳಲ್ಲಿ ಸುರಕ್ಷಿತ ಶಿಶುಪಾಲನಾ ಕೇಂದ್ರಗಳು ದೊರೆತು ಹೆಚ್ಚೆಚ್ಚು ಹೆಣ್ಣುಮಕ್ಕಳು ಕೆಲಸಕ್ಕೆ ಸೇರಿ ಸಾಮಾಜಿಕ ಉತ್ಪಾದನೆಯಲ್ಲಿ ಪಾಲ್ಗೊಳ್ಳುವಂತಾಯಿತು.

ಅಲ್ಲದೆ, ಮಹಿಳೆಯರನ್ನು ಅನುತ್ಪಾದಕ ಗೃಹಕೃತ್ಯಗಳಿಂದ ಬಿಡುಗಡೆಗೊಳಿಸಲು ಸಾಮೂಹಿಕ ಅಡುಗೆ ಮನೆಗಳು, ಸಾಮೂಹಿಕ ದೋಭಿಖಾನೆಗಳು ಸ್ಥಾಪಿತಗೊಂಡವು. ಪುಟ್ಟ ಮಕ್ಕಳಿಗೆ ಹಾಲುಮನೆಗಳು ಪೌಷ್ಟಿಕ ಆಹಾರ ನೀಡಿದವು. ಎಲ್ಲಕ್ಕಿಂತ ಮಿಗಿಲಾಗಿ, ಯಾವುದೇ ಮುಂದುವರೆದ ಬಂಡವಾಳಶಾಹಿ ದೇಶ ನೀಡಲು ಸಾಧ್ಯವಾಗದಿದ್ದ ಒಂದು ಅಭೂತಪೂರ್ವ, ಅಪೂರ್ವ ಸಂಗತಿ ಅಲ್ಲಿ ನಡೆಯಿತು. ಅದೇಂದರೆ, ಸಾಮಾಜಿಕ ಪಿಡುಗಾಗಿದ್ದ ವೇಶ್ಯಾವೃತ್ತಿಯ ನಿರ್ಮೂಲನೆ. ಅದಕ್ಕೆ ಕಾರಣವಾಗಿದ್ದ ತಲೆಹಿಡುಕರಿಗೆ, ಈ ದುರ್ಭಾಗ್ಯ ಹೆಣ್ಣುಮಕ್ಕಳನ್ನು ಶೋಷಿಸುತ್ತಿದ್ದ ವೇಶ್ಯಾವಾಟಿಕೆಯ ಮಾಲೀಕರಿಗೆ ಸೋವಿಯತ್ ಒಕ್ಕೂಟ ಸರ್ಕಾರ ಉಗ್ರಶಿಕ್ಷೆ ಖಾತ್ರಿ ಪಡಿಸಿತು; ಈ ಹೀನಸ್ಥಿತಿಗೆ ಬಲಿಯಾದ ಹೆಣ್ಣುಮಕ್ಕಳನ್ನು ಗೌರವದಿಂದ ಕಂಡು ಅವರ ಪುನರ್‌ವಸತಿಗೆ ಬೇಕಾದ ಕ್ರಮಗಳನ್ನು ಕೈಗೊಂಡಿತು. ಇದರೊಂದಿಗೆ ವ್ಯಾಪಕವಾಗಿ ಹರಡುತ್ತಿದ್ದ ಲೈಂಗಿಕ ರೋಗಗಳಿಗೂ ಕೊನೆ ಹಾಕಿತು.

ಹಾಗಾಗಿ, ಸ್ನೇಹಿತರೇ, ಇಂದು ನಮ್ಮ ಮುಂದಿರುವ ಏಕೈಕ ಮಾರ್ಗವೆಂದರೆ, ಸಮಾಜವಾದದ ಸ್ಥಾಪನೆ. ಅದು ಸಾಧ್ಯವಾಗುವ ಮುನ್ನ, ನಾವು ಯಾವ ಪ್ರಜಾತಾಂತ್ರಿಕ ಹಕ್ಕುಗಳಿಂದ ಇದುವರೆವಿಗೂ ವಂಚಿತರಾಗಿದ್ದೇವೋ, ಅವನ್ನು ಪಡೆಯಲು, ನಮ್ಮ ಸಮಾಜದಲ್ಲಿ ನೈಜ ಪ್ರಜಾತಾಂತ್ರಿಕ ಮೌಲ್ಯಗಳು ಸ್ಥಾಪನೆಯಾಗಲು ನಾವೆಲ್ಲರೂ ಒಗ್ಗೂಡಿ ಹೋರಾಟ ನಡೆಸಬೇಕಾಗುತ್ತದೆ. ಇದಕ್ಕಾಗಿ ನಾವು ಈ ಕುರಿತ ತಿಳುವಳಿಕೆಯಿಂದ ಸಜ್ಜಾಗಿ, ನಮ್ಮ ಮಹಿಳೆಯರಲ್ಲಿ ಜಾಗೃತಿ ಮೂಡಿಸುತ್ತಾ, ಅವರನ್ನು ಈ ನಿಟ್ಟಿನಲ್ಲಿ ಕರೆದೊಯ್ಯೋಣ; ಎಲ್ಲಾ ರೀತಿಯ ತಾರತಮ್ಯ, ಅಸಮಾನತೆ, ದಮನ, ದೌರ್ಜನ್ಯ, ಶೋಷಣೆಗಳ ವಿರುದ್ಧ ಐಕ್ಯ ಹೋರಾಟ ಕಟ್ಟೋಣ. ನಮ್ಮ ಹೋರಾಟವನ್ನು ಇದೇ ದಾರಿಯಲ್ಲಿ ಸಾಗುತ್ತಿರುವ ನಮ್ಮ ಕಾರ್ಮಿಕ ಬಂಧುಗಳ ಹೋರಾಟದೊಂದಿಗೆ ಬೆಸೆಯೋಣ. ಇದು ಈ ವರ್ಷದ ಅಂತರರಾಷ್ಟ್ರೀಯ ಮಹಿಳಾ ದಿನದ ಸಂಕಲ್ಪವಾಗಲಿ.

ಮಹಿಳಾ ಹೋರಾಟ ಚಿರಾಯುವಾಗಲಿ!

ಅಂತರರಾಷ್ಟ್ರೀಯ ಮಹಿಳಾ ದಿನ ಚಿರಾಯುವಾಗಲಿ!!

# ಸಮಷ್ಟಿಪ್ರಜ್ಞೆಯ ಅವಶ್ಯಕತೆ ಇದೆ

ಬಾ ಹ ರಮಾಕುಮಾರಿ

ಎಲ್ಲರಿಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು. ಇಂದು ನಡೆದ ಬೃಹತ್ ಮೆರವಣಿಗೆ ಹಾಗೂ ಉದ್ಘಾಟನಾ ಕಾರ್ಯಕ್ರಮ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಇಲ್ಲಿ ಮಾತನಾಡಿದ ಎಲ್ಲರೂ ಅಂತರಾಳದ ಮಾತುಗಳನ್ನೇ ಹಾಡಿದ್ದಾರೆ. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಆಶಯ, ಅದರ ಸಾಂವಿಧಾನಿಕ ಚೌಕಟ್ಟು ಎಲ್ಲವೂ ಒಂದು ಬಿಗಿ ಪಟ್ಟಾಗಿದ್ದು ಅದರಡಿಯಲ್ಲಿ ನಡೆದು ಬರುತ್ತಿರುವ 11ನೇ ವರ್ಷದ ಸಮಾವೇಶವಾಗಿದೆ. ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ವರ್ಷವಿಡೀ ಅರಿವಿನ ಪಯಣದ ಮೂಲಕ ಅನೇಕ ರೀತಿಯಲ್ಲಿ ಜಾಗೃತಿ ಮೂಡಿಸುವ ವಿಶಿಷ್ಟ ಕಾರ್ಯಕ್ರಮ ಇದಾಗಿದೆ.

ಇಷ್ಟೆಲ್ಲಾ ಆಗುವಾಗ ನನಗೆ ಎರಡು ಪ್ರಶ್ನೆಗಳಿವೆ. ಒಂದು ಮಹಿಳೆ ಇರುವುದು ಕೇವಲ ಓಟು ಹಾಕಲು ಮಾತ್ರವೇನಾ? ಇನ್ನೊಂದು ಶೋಷಣೆ ಮಾಡುವುದು ಒಂದು ಕಡೆಯಾದರೆ, ಶೋಷಣೆಗೆ ನಮ್ಮನ್ನು ನಾವೇ ತೆತ್ತುಕೊಳ್ಳುತ್ತಿರುವುದು ಏಕೆ? ಕೇವಲ ಭಾಷಣ ಉಪನ್ಯಾಸ ಮಾಡುವುದಲ್ಲ. ಅದರ ನಡೆ ನಮ್ಮ ನಡೆಯಲ್ಲಿ ಮೂಡಬೇಕು ಎನ್ನುವವಳು ನಾನು. ಸಂಘಟನೆ ಇರಬಹುದು, ಚಿಂತನೆಗಳಿರಬಹುದು ನಮ್ಮ ಒಗ್ಗಟ್ಟನ್ನು ಹೊಡೆದು ಆಳುವ ನೀತಿಗೆ ಬಲಿಯಾಗುತ್ತಿರುವ ಮಹಿಳೆಯರು ತಮ್ಮನ್ನು ತಾವು ಅರ್ಥೈಸಿಕೊಳ್ಳಬೇಕಾಗಿದೆ. ಕಣ್ಣೋಟದ ಸಮಾಜವನ್ನು ಹೆಣ್ಣೋಟದ ಸಮಾಜದ ಕಡೆ ತಿರುಗಿಸಬೇಕಾಗಿದೆ.

ವ್ಯಕ್ತಿನಿಷ್ಠ ಧೋರಣೆ–ಚಿಂತನೆಗಳಿಗೆ ಸಮಷ್ಟಿ ಪ್ರಜ್ಞೆಯ ಚಿಂತನೆಗಳು ಬಹಳ ಮುಖ್ಯ ಎಂದು ನನಗನಿಸುತ್ತದೆ. 80ರ ದಶಕದಲ್ಲಿ ಕೇರಳದ ಮಾದರಿ–ಸಾಕ್ಷರತಾ ಆಂದೋಲನದಲ್ಲಿ ಒಬ್ಬ ವ್ಯಕ್ತಿ ಮಾತ್ರ ಓದುಬರಹ ಕಲಿಯದೇ ಉಳಿದುಬಿಡುತ್ತಾನೆ.

ಇಡೀ ರಾಜ್ಯವನ್ನೇ ಹುಡುಕಿ ಜಾಲಾಡಿ ಆ ವ್ಯಕ್ತಿಯನ್ನು ಪತ್ತೆ ಮಾಡಿ ಕರೆತಂದು ಸ್ವತಃ ಜಿಲ್ಲಾ ಕಲೆಕ್ಟರ್ ಆತನಿಗೆ ಓದು ಬರಹ ಕಲಿಸಿ ನೂರಕ್ಕೆ ನೂರು ಸಾಕ್ಷರತಾ ಪ್ರಮಾಣವನ್ನು ಕೇರಳದಲ್ಲಿ ಘೋಷಿಸುತ್ತಾರೆ. ಇಂತಹ ಅರಿವು, ಇಂತಹ ಕ್ರಮ, ಜನಜಾಗೃತಿ ನಮ್ಮಲ್ಲಿಯೂ ಆಗುವಂತೆ ಮಾಡಬೇಕಾಗಿದೆ.

ತಮಿಳುನಾಡಿನ ಪುದುಕೋಟ್ಟೈ ಜಿಲ್ಲೆಯ ಒಂದು ಊರಿನಲ್ಲಿ (ಇದು ಸಮುದ್ರದ ಬಳಿ ಇರುವಂತಹ ಊರು) ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದ ಹೆಣ್ಣುಮಕ್ಕಳು ಗಂಟೆಗಟ್ಟಲೆ ನಡೆದು ಹೋಗಿ ನೀರು ಸಂಗ್ರಹಿಸಿ ತರಬೇಕಿತ್ತು. ಅದರಲ್ಲಿಯೇ ಅವರ ದಿನಚರಿ ಮುಗಿದು ಹೋಗುತ್ತಿದ್ದ ಸಂದರ್ಭದಲ್ಲಿ ಸಾಕ್ಷರತೆ ಮೂಲಕ ಅರಿವು ಬಂದು ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ವಾರಕ್ಕೆ ಎರಡು ಬಾರಿ ಟ್ಯಾಂಕರಿನಲ್ಲಿ ನೀರು ಒದಗಿಸುವಂತಹ ವ್ಯವಸ್ಥೆ ಮಾಡಿಕೊಂಡ ಮಹಿಳೆಯರು ನವಸಾಕ್ಷರರಾಗುವಷ್ಟರಲ್ಲಿ (ಆ ಜಿಲ್ಲೆಯ ಜಿಲ್ಲಾ ಕಲೆಕ್ಟರ್ ಮಹಿಳೆಯಾಗಿರುತ್ತಾರೆ.) ಇವರಿಗೆ ಸೈಕಲ್ ಕಲಿಸಿ, ಸೈಕಲ್ ಗಳನ್ನು ಒದಗಿಸುವ ಒಂದು ಚಾರಿತ್ರಿಕ ಬದಲಾವಣೆಗೆ ಕಾರಣರಾಗುತ್ತಾರೆ. ಸೈಕಲ್ ಚಕ್ರದ ಚಲನಶೀಲತೆಯಂತೆ ಅವರ ಬದುಕಿನ ಚಕ್ರವು ತಿರುಗುತ್ತದೆ. ಸೈಕಲ್ ಮೇಲೆ ಕೊಡಗಳನ್ನು ಕಟ್ಟಿಕೊಂಡು ಹೋಗಿ ನೀರು ತಂದುಕೊಳ್ಳುವ ಮೂಲಕ ಸ್ವಾವಲಂಬಿತನ ಮತ್ತು ಕಾಲದ ಮಿಗಿತಾಯವನ್ನು ಕಂಡುಕೊಳ್ಳುವುದು ಆ ಕಾಲಕ್ಕೆ ಒಂದು ದೊಡ್ಡ ಸಂಚಲನವನ್ನುಂಟುಮಾಡಿತು.

ಹಾಗೆ ಆಂಧ್ರದ ದಬ್ಬಗುಂಟೆ ಮಾದರಿ. ನವಸಾಕ್ಷರ ಮಹಿಳೆಯರು ತಮ್ಮ ಓದಿನ ಪಠ್ಯದಲ್ಲಿದ್ದ "ಆಡವಾಳ್ಳಂತೆ ಏಕಮೈತೇ" ಎಂಬ ಪಾಠ ಓದಿ ಪ್ರೇರಣೆಗೊಂಡು ಸಾರಾಯಿ ವಿರುದ್ಧ ದೊಡ್ಡ ಹೋರಾಟ ಮಾಡಿ ಆಂಧ್ರಪ್ರದೇಶ ರಾಜ್ಯಾದ್ಯಂತ ಸಾರಾಯಿ ನಿಷೇಧಿಸುವಂತಾಗಲು ಕಾರಣಕರ್ತರಾದರು. ಹೆಣ್ಣುಮಕ್ಕಳು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು, ತಮ್ಮ ಶಕ್ತಿ ಎಂತಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಘಟನೆ ಇದಾಗಿದ್ದು ಅನೇಕ ರಾಜ್ಯಗಳ ಮಹಿಳೆಯರ ಹೋರಾಟಕ್ಕೆ ಇದು ಸ್ಫೂರ್ತಿಯಾಗಿತ್ತು.

73ನೇ ತಿದ್ದುಪಡಿ ಮೂಲಕ ದೊರಕಿಸಿಕೊಂಡ ರಾಜಕೀಯ ಅಧಿಕಾರ ಮಹಿಳೆಯರಿಗೆ 3 ಹಂತದಲ್ಲಿ ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯಿತಿಗಳಲ್ಲಿ ಅಧಿಕಾರ ನಡೆಸುವ ಅವಕಾಶ ದೊರಕಿಸಿತು. ಆ ಮೂಲಕ ಅನೇಕ ಮಹತ್ವದ ಕೆಲಸ ಮಾಡಿದ್ದಾರೆ. ಕೆಲವೆಡೆ ಮಹಿಳೆಯರ ಮುನ್ನಡೆ ಇಂದಿಗೂ ಮುಂದುವರೆದಿದೆ. ಮಹಾರಾಷ್ಟ್ರ ಮುಂತಾದ ಕಡೆ ಅನೇಕ ಉದಾಹರಣೆಗಳಿವೆ. ಅಕ್ಷರವನ್ನು

ದಕ್ಕಿಸಿಕೊಂಡ ಪರಿಣಾಮವಾಗಿ ಇವೆಲ್ಲ ಸಾಧ್ಯವಾಗಿದೆ ಎನ್ನುವುದು ಮುಖ್ಯ.

ಆಗಿನ ಸಂದರ್ಭದಲ್ಲಿ ಆ ಮಹಿಳೆಯರು ದಿಟ್ಟ ಹೆಜ್ಜೆಯನ್ನು ಇಟ್ಟು ಕಾರ್ಯ ಸಾಧಿಸುವ ಕೆಲಸವಿದೆಯಲ್ಲ ಅದು ತುಂಬಾ ಮಹತ್ವಪೂರ್ಣವಾದದ್ದು. ಇದನ್ನೆಲ್ಲಾ ಏಕೆ ಹೇಳಿದೆ ಎಂದರೆ "ಹಿಂದಣ ಹೆಜ್ಜೆಯ ಮರೆತರೆ ಮುಂದಣ ಹೆಜ್ಜೆ ಇಡಲಾಗದು" ಎಂಬಂತೆ ಚರಿತ್ರೆಯನ್ನು ಅರಿಯದವರಿಂದ ಚರಿತ್ರೆ ಸೃಷ್ಟಿಯಾಗದು. ಆದ್ದರಿಂದ ನಮ್ಮ ಹಿಂದಿನ ಕಾರ್ಯ ಸಾಧಕರ ಪ್ರೇರಣೆ ಮುಂದಿನ ಕಾರ್ಯ ಸಾಧನೆಗೆ ಪೂರಕ ಹಾಗೂ ಪ್ರೇರಕಶಕ್ತಿಯಾಗಲಿ ಎಂದು ಆಶಿಸುತ್ತೇನೆ.

# ಖಂಡನಾನಿರ್ಣಯ

ಡಾ॥ ಅರುಂಧತಿ ಡಿ

ಸಮಾಜದಲ್ಲಿ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಸರ್ಕಾರದ ನಿಷ್ಕ್ರಿಯತೆನ್ನು ಪ್ರಶ್ನಿಸುವ ಮತ್ತು ಖಂಡಿಸುವ ಖಂಡನಾ ನಿರ್ಣಯಗಳನ್ನು ಜಾಥಾದ ನಂತರ ಗಾಜಿನ ಮನೆಯಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಖಂಡನಾ ನಿರ್ಣಯಗಳನ್ನು ಮಂಡಿಸುತ್ತಿದ್ದೇನೆ. ಇಲ್ಲಿ ಉಲ್ಲೇಖಿಸಿರುವ ಪ್ರಕರಣಗಳು ದಿನನಿತ್ಯವೂ ಭಾರತದಲ್ಲಿ ಅಲ್ಲಲ್ಲಿ ನಡೆಯುತ್ತಲೇ ಇವೆ. ಭಾರತದ ಆತ್ಮವೂ, ಭಾರತದ ಪ್ರಜೆಗಳ ಪ್ರಜ್ಞೆಯೂ ದಿನದಿಂದ ದಿನಕ್ಕೆ ಸೂಕ್ಷ್ಮವಾಗುತ್ತಾ ಸಾಗಿದೆ. ಚಾಮರಾಜನಗರದಲ್ಲಿ ನಡೆದ ಘಟನೆ– ಅನ್ಯ ಜಾತಿಗೆ ಸೇರಿದ ವಯಸ್ಸಿಗೆ ಬಂದ ಗಂಡು–ಹೆಣ್ಣು ಪರಸ್ಪರ ಪ್ರೇಮಿಸಿ ಊರು ಬಿಟ್ಟು ಹೋಗಿ ಮದುವೆಯಾಗಿ ಎರಡು ವರ್ಷದ ನಂತರ ಹೆತ್ತವರ ಮನೆಗೆ ಬಂದಾಗ ಆ ಊರಿನ ಕೆಲ ದೊಡ್ಡವರೆನಿಸಿಕೊಂಡವರು ಪಂಚಾಯಿತಿ ಸೇರಿ ಹುಡುಗ ಹುಡುಗಿಯ ಕುಟುಂಬದವರಿಗೆ 3 ಲಕ್ಷ ರೂಪಾಯಿಗಳಗಳನ್ನು ದಂಡ ವಿಧಿಸುತ್ತಾರೆ. ದಂಡವನ್ನು ಪಾವತಿಸಲಿಲ್ಲವೆಂದು ದಂಡವನ್ನು ದುಪ್ಪಟ್ಟು ಮಾಡಿ ಕಟ್ಟಬೇಕೆಂದು ಆಜ್ಞೆ ಮಾಡಿದ್ದಾರೆ. ನಾವು ಯಾವ ಕಾಲದಲ್ಲಿ ಇದ್ದೇವೆ? ವಯಸ್ಕರಾದ ಹೆಣ್ಣು–ಗಂಡು ಸ್ವ ಇಚ್ಛೆಯಿಂದ ಪ್ರೀತಿಸಿ ಮದುವೆಯಾಗಿ ಒಟ್ಟಿಗೆ ಬಾಳಬೇಕೆಂದು ಬಯಸುವುದೇ ತಪ್ಪಾ? ವಿಶ್ವಗುರುವಾಗಲು ಹೊರಟಿರುವ ಭಾರತ ಇದಕ್ಕೆ ಉತ್ತರಿಸಬೇಕು. ತುಮಕೂರು ಜಿಲ್ಲೆಯಲ್ಲಿ ಹೆತ್ತವರನ್ನು ಕಳೆದುಕೊಂಡ ಮೂವರು ಹೆಣ್ಣು ಮಕ್ಕಳು ಅಜ್ಜಿಯ ಆಶ್ರಯದಲ್ಲಿದ್ದರು. ಅನಾರೋಗ್ಯದಿಂದ ಅಜ್ಜಿ ನಿಧನ ಹೊಂದಿದಾಗ ದಾರಿ ಕಾಣದೆ ಆ ಮೂರು ಹೆಣ್ಣುಮಕ್ಕಳು ಆತ್ಮಹತ್ಯೆ ಮಾಡಿಕೊಂಡರಬಹುದೆಂದು ಶಂಕಿಸಲಾಗಿದೆ. ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಿದ್ದ ಮೂರು ಹೆಣ್ಣು ಮಕ್ಕಳ ದೇಹ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮನೆಯಲ್ಲಿ ಪತ್ತೆಯಾಗಿದೆ. ವಯಸ್ಸಿಗೆ ಬಂದ ಎಳೆಜೀವಗಳಿಗೆ ಬದುಕುವುದಕ್ಕಿಂತ ಒಟ್ಟಿಗೆ

ಸಾಯುವುದೇ ಮೇಲೆಂದು ಅನಿಸಿದ್ದಾದರು ಏಕೆ?

ಉತ್ತರ ಪ್ರದೇಶದ ಹತ್ರಾಸ್ ನಲ್ಲಿ ದಲಿತ ಹೆಣ್ಣು ಮಕ್ಕಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರವನ್ನು ಮೇಲಿನ ಜಾತಿಯ ಗಂಡಸರು ಎಸಗುತ್ತಾರೆ. ಆ ಹೆಣ್ಣುಮಕ್ಕಳು ಆಸ್ಪತ್ರೆಯಲ್ಲಿ ಸತ್ತಾಗ ಆ ಹುಡುಗಿಯ ತಂದೆ ತಾಯಿಗಳ ಗಮನಕ್ಕೂ ತರದೆ, ಮಕ್ಕಳ ಅಂತಿಮ ದರ್ಶನಕ್ಕೂ ಅವಕಾಶ ಕೊಡದೆ ಶವವನ್ನು ಪೊಲೀಸರು ಸುಟ್ಟು ಹಾಕುತ್ತಾರೆ.

ಎಂತಹ ಕಾಲಘಟ್ಟದಲ್ಲಿ ನಾವಿದ್ದೇವೆ? ಪ್ರಜಾಪ್ರಭುತ್ವದಲ್ಲಿ ಬಡವ-ಸಿರಿವಂತ, ಮೇಲುಜಾತಿ-ಕೆಳಜಾತಿಗಳ ನಡುವಿನ ಅಂತರ ಹೆಚ್ಚುತ್ತಲೇ ಹೋಗುತ್ತಿದೆ. 2002 ರ ಗುಜರಾತ್ ಜನಾಂಗೀಯ ನರಮೇಧದಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾದ ಬಿಲ್ಕೀಸ್ ಬಾನು ಪ್ರಕರಣದ ಆರೋಪಿಗಳನ್ನು ಗುಜರಾತ್ ಬಿಜೆಪಿ ಸರ್ಕಾರ ಸನ್ನಡೆಯತೆಯ ಆಧಾರದ ಮೇಲೆ ಬಿಡುಗಡೆಗೊಳಿಸುತ್ತದೆ. (ಸದ್ಯ ಸುಪ್ರೀಂಕೋರ್ಟ್ ಈ ಬೆಳವಣಿಗೆಯ ಬಗ್ಗೆ ಗುಜರಾತ್ ಸರ್ಕಾರಕ್ಕೆ ಛೀಮಾರಿ ಹಾಕಿ ಅತ್ಯಾಚಾರಿಗಳನ್ನು ಮತ್ತೆ ಜೈಲಿಗೆ ಹಾಕಿದೆ)

ಇಂತಹ ಧರ್ಮಾಂಧ ಅತ್ಯಾಚಾರಿಗಳನ್ನು, ಕೊಲೆಗಡುಕರನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಿದರೆ, ಸಮಾಜಕ್ಕೆ ಯಾವ ಸಂದೇಶ ಹೋಗುತ್ತದೆ? ಇಂತಹ ಜನಾಂಗೀಯ ದೌರ್ಜನ್ಯಗಳು, ದಲಿತರ ಮೇಲಿನ ಹಿಂಸೆ, ದೌರ್ಜನ್ಯಗಳು ಹೆಣ್ಣುಮಕ್ಕಳ ಬದುಕುವ ಹಕ್ಕನ್ನು ಕಸಿಯುವಂತ ಕೃತ್ಯಗಳಿಗೆ ಸರ್ಕಾರ ಮತ್ತು ಸಮಾಜ ಕಣ್ಗಾವಲಾಗಿ ಭಾರತದ ಬಹುತ್ವವನ್ನು ಕಾಪಾಡಲಿ ಎಂದು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಆಗ್ರಹಿಸುತ್ತದೆ.

# ಅರಿವಿನ ಪಯಣ – ದಮನತೆಯಿಂದ ದಿಟ್ಟತನದೆಡೆಗೆ

ಎನ್ ಇಂದಿರಮ್ಮ

"ನಾವು ಬೆಳೆದಂತೆಲ್ಲಾ, ನಮಗೆ ಪ್ರಪಂಚಜ್ಞಾನ ಬಂದ ಹಾಗೆ ಸಮಾಜದಲ್ಲಿ ನಮಗೆ ಆಗುವ ಶೋಷಣೆಯ ಬಗ್ಗೆ ಅರಿವು ಮೂಡಬೇಕು. ಆದರೆ ಅದೊಂದು ಸಹಜ ವಿಷಯವಾಗಿ ಹುಟ್ಟಿ ಬರುತ್ತಲೇ ಇಲ್ಲ. ಅದನ್ನು ತಿಳಿಯದೆ ಬೆಳೆಯುತ್ತಿರುವ ಹೆಣ್ಣು ಮಕ್ಕಳ ಸಮೂಹಕ್ಕೆ ಇಂತಹ ಕಾರ್ಯಕ್ರಮ ಕಣ್ಣು ತೆರೆಸಿತು. ಹೆಣ್ಣು-ಗಂಡು ನಡುವೆ ಸಮಾನತೆ ಬರಬೇಕು. ಬಾಲ್ಯ ವಿವಾಹ, ಶಿಕ್ಷಣ, ಲಿಂಗ ಭೇದ ಇದರ ಬಗ್ಗೆ ಅರಿವು ಮೂಡಬೇಕು. ಇಂದು ಹೆಣ್ಣುಮಕ್ಕಳು ಗಂಡುಮಕ್ಕಳಿಗೆ ಸಮನಾಗಿ ಸಾಮರ್ಥ್ಯ ತೋರುತ್ತಿದ್ದರೂ ಶೋಷಣೆ ಮಾತ್ರ ನಿಂತಿಲ್ಲ. ಇಂತಹ ಸಂದರ್ಭದಲ್ಲಿ ಅರಿವಿನ ಪಯಣ ನಮಗೆ ಭರವಸೆ ನೀಡಿತು." ಈ ಮಾತುಗಳು ಯಳನಾಡು ಸರ್ಕಾರಿ ಪ್ರೌಢಶಾಲೆಯ ರೂಪ ಅವರದು.

"ಹೆಣ್ಣನ್ನು ಕೀಳು ಎಂದು ನೋಡಬಾರದು. ಚರ್ಮದ ಬಣ್ಣ ಕಪ್ಪಾದರೇನು, ಬಿಳಿಯಾದರೇನು? ಕಪ್ಪು ಕಡಿಮೆಯೂ ಅಲ್ಲ; ಬಿಳುಪು, ಶ್ರೇಷ್ಠವೂ ಅಲ್ಲ. ಗಂಡು-ಹೆಣ್ಣು ಭೇದ ಸರಿಯಲ್ಲ" ಎಂದು ಹೇಳಿದ್ದು ಚಿಕ್ಕನಾಯಕನಹಳ್ಳಿಯ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವ ವಿನಯ್.

"ಗಂಡು ಮಕ್ಕಳು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಮಾಡಬಾರದು. ಅಲ್ಲದೆ ಅವರನ್ನು ಪ್ರೀತಿ ಮಾಡುತ್ತೇವೆ ಎಂದು ನಂಬಿಸುವುದು, ಗಿಫ್ಟ್ ಆಸೆ ತೋರಿಸಿ ಮರುಳು ಮಾಡುವುದು ನಡೆಯುತ್ತಿದೆ. ಇದರ ಬಗ್ಗೆ ನಾವು ಎಚ್ಚರದಿಂದಿರಬೇಕು. ಚಿಕ್ಕಂದಿನಿಂದಲೂ ಹೆಣ್ಣು-ಗಂಡು ಪರಸ್ಪರ ಸ್ನೇಹಿತರಂತೆ ಇರಬೇಕು." ಇದು ಕೋರಾದ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ನಿತಿನ್ ನಾಯಕ್ ಮಾತು.

"ಈ ಸಮಾಜದಲ್ಲಿ ಗಂಡು-ಹೆಣ್ಣು ಭೇದ ಮಾಡಬಾರದು. ವರ್ಣಭೇದ

ಮಾಡಬಾರದು. ಅಂಕುಡೊಂಕುಗಳೇನೆ ಇದ್ದರೂ ತಿದ್ದಿಕೊಂಡು ನಡೆಯಬೇಕು, ಯಾವುದೇ ಸಮಸ್ಯೆ ಬಂದರೂ ಧೈರ್ಯದಿಂದ ಎದುರಿಸಬೇಕು, ಕೀಳರಿಮೆ ಬಿಡಬೇಕು ಎಂಬ ಅರಿವು ಈ ಕಾರ್ಯಕ್ರಮದ ಹಾಡುಗಳಿಂದ ನಮಗೆ ಉಂಟಾಯಿತು. ಸ್ಟೇಜ್ ಫಿಯರ್ ಹೋಯಿತು. ನಮಗೆ ಧೈರ್ಯ ಬಂದಷ್ಟು ಸಮಸ್ಯೆ ಎದುರಿಸುವುದು ಸುಲಭ. ಸಮಾಜದಲ್ಲಿ ಹೆಣ್ಣು ಮಕ್ಕಳು ಬದುಕುವುದು ಹೇಗೆ ಎಂಬ ಜ್ಞಾನ ಮೂಡಿಬಂತು. ಮುಟ್ಟು ಮೈಲಿಗೆ ಎಂಬ ಭಾವನೆ ಇತ್ತು. ಆದರೆ ವೈಜ್ಞಾನಿಕತೆ ತಿಳಿದ ಮೇಲೆ ಎಲ್ಲವೂ ನಿರಾಳವಾಯಿತು" ಎಂದವರು ಮುರಾರ್ಜಿ ವಸತಿ ಶಾಲೆಯಲ್ಲಿ 9ನೇ ತರಗತಿಯಲ್ಲಿ ಓದುತ್ತಿರುವ ಸುಚಿತ್ರ.

"ತಲತಲಾಂತರದಿಂದ ಮುಟ್ಟು ಮೈಲಿಗೆ ಎಂದುಕೊಂಡು ನಮ್ಮ ಹೆಣ್ಣು ಮಕ್ಕಳಿಗೆ ತುಂಬಾ ತೊಂದರೆ ಕೊಟ್ಟಿದ್ದೇವೆ. ನಿಮ್ಮ ಹಾಡು ಕೇಳಿ ನಮಗೆ ಜ್ಞಾನದ ಬಾಗಿಲು ತೆರೆದಂತಾಗಿದೆ. ಇನ್ನು ಮುಂದೆ ನಮ್ಮೂರಿನಲ್ಲಿ ಹಾಗಾಗದಂತೆ ನೋಡಿಕೊಳ್ಳುತ್ತೇವೆ." ಇವು ತಿಮ್ಮಪ್ಪನ ಹಟ್ಟಿಯ ಕರಿಯಮ್ಮ ಅವರ ಮಾತುಗಳು.

ಮೇಲಿನ ಅಭಿಪ್ರಾಯಗಳು ಕಪೋಲಕಲ್ಪಿತ ವಿಚಾರಗಳಲ್ಲ. ನಮ್ಮ ಕಾರ್ಯಕ್ರಮದ ಮೂಲಕ ಪಡೆದ ನಿಜ ಅನುಭವಗಳು. 'ಅರಿವಿನ ಪಯಣ' ಎಂಬ ಕಾರ್ಯಕ್ರಮ ತೆರೆದಿಟ್ಟ ಸತ್ಯಗಳು.

2022 ನೇ ಇಸವಿಯ ಜುಲೈ ತಿಂಗಳ 16, 17ನೇ ದಿನಾಂಕಗಳಂದು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ದೇವರಾಯನದುರ್ಗದಲ್ಲಿ 'ಅರಿವಿನ ಪಯಣ' ತರಬೇತಿ ಕಾರ್ಯಾಗಾರವಿದೆ ಭಾಗವಹಿಸಿ ಎಂಬ ಕರೆ ಬಂತು. ಒಕ್ಕೂಟದಲ್ಲಿರುವ ತುಮಕೂರಿನ ಗೆಳತಿಯರು ಇದಕ್ಕೆ ಇಂಬಾಗಿ ನಿಂತಿರುವುದು ತಿಳಿದಂತೆ ಚಿಕ್ಕನಾಯಕನಹಳ್ಳಿಯಿಂದ 12 ಜನರ ತಂಡ ಹೊರಟು ನಿಂತಿತು. 1990 ರಿಂದಲೇ ಸಾಕ್ಷರತಾ ಆಂದೋಲನದಿಂದ ಮೊದಲುಗೊಂಡು ಪರಿಸರ, ಮಹಿಳೆ, ಶಿಕ್ಷಣ, ಕೃಷಿ ಮುಂತಾದ ಚಳುವಳಿಗಳಲ್ಲಿ ಅನುಭವ ಇರುವ ನಾವು ಈ ವಿಷಯದಲ್ಲೂ ಸಹಜವಾಗಿ ಆಸಕ್ತಿ ಹೊಂದಿ ದೇವರಾಯನದುರ್ಗದ ಕಡೆಗೆ ಹೊರಟೆವು. ಸುಮಾರು ನೂರು ಜನ ಶಿಬಿರದಲ್ಲಿ ಭಾಗವಹಿಸಿದ್ದರು. ಆದರೆ ಎರಡೂ ದಿನ ಇದ್ದವರು ಹಲವರು. ಬಂದು ಹೋಗುತ್ತಿದ್ದವರು ಕೆಲವರು.

ಶಿಬಿರದಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ನಮಗೆ ಸಹಜ ಕುತೂಹಲವಿತ್ತು. ಶಿಬಿರದ ವಿಶೇಷತೆ ಎಂದರೆ ಅಲ್ಲಿನ ತರಬೇತುದಾರರು ಅಥವಾ ಸಂಪನ್ಮೂಲ ವ್ಯಕ್ತಿಗಳದು. ಅವರನ್ನು ಹಾಗೆ ಕರೆಯಬಹುದೋ ಅಥವಾ

ಕಲಾವಿದರು ಎನ್ನಬೇಕೋ ಅಥವಾ ಅನುವುಗಾರರು ಎನ್ನಬೇಕೋ ತಿಳಿಯದು. ಒಟ್ಟಿನಲ್ಲಿ ಇಡೀ ಪಯಣವನ್ನು ಸುಗಮವಾಗಿ ನಡೆಸಿಕೊಟ್ಟವರು ಅವರು. ವಾಣಿ ಪೆರಿಯೋಡಿ ಅವರ ನೇತೃತ್ವವಿತ್ತು. ಜೊತೆಗೆ ಪವಿತ್ರ, ರೇಖಾಂಬ, ಗೌರಿ, ಕೃತಿ, ಮಲ್ಲಿಕಾ ಅವರ ಸಹಕಾರವಿತ್ತು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಕರ್ನಾಟಕದಲ್ಲಿ ಎಚ್ಚೆತ್ತ ಮಹಿಳೆಯರ ಒಂದು ಸಮೂಹ. ಹನ್ನೊಂದು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಗುಂಪು. ಅದಕ್ಕೂ ಕೂಡ ಕಾರಣವಿತ್ತು. ಹನ್ನೊಂದು ವರ್ಷಗಳ ಹಿಂದೆ ನಡೆದ ನಿರ್ಭಯ ಪ್ರಕರಣ, ಮಂಗಳೂರಿನ ಪಬ್ ಮೇಲೆ ದಾಳಿ ಇವುಗಳೆಲ್ಲ ಪ್ರಜ್ಞಾವಂತ ಹೆಣ್ಣು ಮಕ್ಕಳನ್ನು ಕೆರಳಿಸಿದ್ದ ಪರಿಣಾಮ ಅಂದಿನಿಂದ ಆರಂಭಿಸಿ ಎಲ್ಲೇ ದೌರ್ಜನ್ಯ ನಡೆಯಲಿ ವಿರೋಧಿಸುತ್ತಾ ಸಂಘಟನೆ ಮಾಡುತ್ತಾ ಪ್ರತಿವರ್ಷ ಮಹಿಳಾ ಸಮುದಾಯದಲ್ಲಿ ಅರಿವು ಮೂಡಿಸುತ್ತ ಜಾಗೃತ ಮಹಿಳಾ ಸಮೂಹವನ್ನು ಹುಟ್ಟು ಹಾಕುತ್ತಿರುವುದು ಇವರ ಕೆಲಸ. ಅಷ್ಟೇ ಅಲ್ಲದೆ, ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಮಾರ್ಚಿನಲ್ಲಿ ಮಹಿಳಾ ದಿನಾಚರಣೆಯನ್ನು "ಮಹಿಳಾ ಚೈತನ್ಯದಿನ"ವನ್ನಾಗಿ ಮಾಡಿ ವಿಚಾರ ಸಂಕಿರಣ, ಮೆರವಣಿಗೆ, ಘೋಷ್ಠಿಗಳು ಇತ್ಯಾದಿ ಚಟುವಟಿಕೆಗಳೊಂದಿಗೆ ಅಲ್ಪವಿರಾಮ ಪಡೆಯುವುದು ಇದರ ಶಿಸ್ತು ಮತ್ತು ಸಂವಿಧಾನ.

ಅರಿವಿನ ಪಯಣ ವರ್ಷದ ಚಟುವಟಿಕೆಗಳಿಗೆ ತಳಹದಿ ಇದ್ದಂತೆ. ಇದು ಕೇವಲ ಒಂದೆರಡು ದಿನದ ಕಾರ್ಯಕ್ರಮವಲ್ಲ. ಮುಂದಿನ ಪಯಣವನ್ನು ಅರ್ಥಪೂರ್ಣಗೊಳಿಸಲು, ಜಿಲ್ಲೆಯಾದ್ಯಂತ ಮಹಿಳಾ ಸಮುದಾಯವನ್ನು ಎಚ್ಚರಗೊಳಿಸಲು ವರ್ಷವಿಡೀ ನಡೆಯುವ ಕಾಯಕ. ಮಾರ್ಚ್ 8 ರ ಕಾರ್ಯಕ್ರಮಕ್ಕೆ ವಾತಾವರಣ ನಿರ್ಮಾಣ ಕಾರ್ಯಕ್ರಮ ಎಂತಲೂ ಕರೆಯಬಹುದು.

ನಾವೆಲ್ಲರೂ ಪಯಣದ ಬಗ್ಗೆ ತುಂಬಾ ಕುತೂಹಲಿಗಳಾಗಿ ಕಾಯುತ್ತಿದ್ದೆವು. ಆರಂಭದಲ್ಲಿ ವಾಣಿ ಪೆರಿಯೋಡಿಯವರ ಪ್ರಸ್ತಾವನೆ ನಂತರ ಒಂದು ಗೀತೆ, "ಆಕೆಗೊಂದುತರ ಅವನಿಗೊಂದು ತರ.." ತುಂಬಾ ಸುಶ್ರಾವ್ಯವಾಗಿ ಮೂಡಿಬಂತು. ನಿಜಕ್ಕೂ ಅದು ಒಂದು ಹೊಸ ಲೋಕ. ಮೈ ಜುಮ್ ಎನ್ನುವ ಅನುಭವ. ಗುಂಪಿನಲ್ಲಿ ಹಾಡುವ ತಾಕತ್ತೇ ಹಾಗೆ. ನಂತರ ಹಾಡಿನ ವಿಮರ್ಶೆ. ಗೀತೆಯೇ ಹೇಳುವಂತೆ ಹೆಣ್ಣು–ಗಂಡಿನ ತಾರತಮ್ಯದ ಕುರಿತು ಚರ್ಚೆ.

ಮುಂದಿನ ಹೆಜ್ಜೆಗಳು ಹೀಗೆ ಸಾಗಿದವು– ರೇಖಾಂಬ ಒಂದು ಸುಂದರ

ಕಥೆ ಹೇಳಿದರು. ಐದು ನಿಮಿಷದಲ್ಲಿ ಮುಗಿಯುವ ಪುಟ್ಟ ಕಥೆ 'ಕಪ್ಪು ಬಲೂನು'. ಚರ್ಮದ ಬಣ್ಣದ ತಾರತಮ್ಯ ಸಾರುವ ಮತ್ತು ಕಪ್ಪು ಬಣ್ಣ ಹೊಂದಿರುವ ಹೆಣ್ಣುಮಕ್ಕಳು ಕೀಳರಿಮೆ ಬಿಡಿ ಎಂದು ಸಾಧಕಿಯರ ಉದಾಹರಣೆಗಳೊಂದಿಗೆ ಪ್ರಸ್ತುತ ಪಡಿಸುತ್ತಿದ್ದರೆ, ಇದನ್ನು ಹೀಗೂ ಮಂಡಿಸಬಹುದೆ ಎಂದು ಅಚ್ಚರಿಯಾಗುತ್ತಿತ್ತು.

ಎಲ್ಲರೂ ಕೂಡಿ ಸಣ್ಣ ರೂಪಕವನ್ನು ಪ್ರಸ್ತುತಪಡಿಸಿದರು. ಹೆಸರು 'ನೀಲಿ ರಿಬ್ಬನ್'. ಎಷ್ಟೊಂದು ವಿಷಯಗಳಿದ್ದವದರಲ್ಲಿ? ಹೆಣ್ಣುಮಕ್ಕಳಿಗೂ ಗಂಡುಮಕ್ಕಳಂತೆ ಎಲ್ಲಾ ವಿಷಯಗಳಿಗೂ ಸಂಭ್ರಮಿಸುವ ಹಕ್ಕಿದೆ. ನಗು ಎಂಬುದು ಮನುಷ್ಯ ಸಹಜ ಗುಣ. ಹೆಣ್ಣು ಮಕ್ಕಳು ಭಾವನೆ ವ್ಯಕ್ತಪಡಿಸುವಾಗ ಜೋರಾಗಿ ನಗುವುದು ಅವರ ವ್ಯಕ್ತಿತ್ವಕ್ಕೆ ಕುಂದಲ್ಲ. ಕಲೆ–ಸಂಸ್ಕೃತಿ ಎಲ್ಲವೂ ಇಬ್ಬರಿಗೂ ಸಮಾನ. ಲೈಂಗಿಕ ದೌರ್ಜನ್ಯದ ಸಂದರ್ಭ ಎದುರಿಸುವ ಬಗ್ಗೆ ಮನ ಮುಟ್ಟುವಂತೆ ನಿರೂಪಿಸಲ್ಪಟ್ಟವು. ಚರ್ಚೆಯಲ್ಲಿ ಪೋಕ್ಸೋ ಕಾಯ್ದೆ, ಅತ್ಯಾಚಾರಕ್ಕೆ ಒಳಗಾದವರಿಗೆ ಧೈರ್ಯ–ಭರವಸೆ, ಆಸೆ ತೋರಿಸಿ ಮೋಸ ಮಾಡುವವರ ಬಗ್ಗೆ ಎಚ್ಚರ, ಅನ್ಯಾಯವಾದಾಗ ಸಮಾಜದ ಮುಂದೆ ತೆರೆದಿಡುವ ದಿಟ್ಟತೆ ಇಷ್ಟೆಲ್ಲಾ ವಿಶ್ವಾಸ ತುಂಬುವ ಕೆಲಸವನ್ನು ಈ ರೂಪಕ ಸಮರ್ಥವಾಗಿ ನಿರ್ವಹಿಸಿತು.

ಮಧ್ಯ ಮಧ್ಯ ಹಾಡುಗಳು ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಕ್ಕೆ, ಮೂಢ ಆಚಾರಗಳ ಶೋಷಣೆಗೆ ಉತ್ತರ ನೀಡುವಂತಿದ್ದವು. "ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ " ಹಾಡು ಮುಟ್ಟು ಒಂದು ಪ್ರಕೃತಿಸಹಜ ಕ್ರಿಯೆ ಎಂದು ವಿವರಿಸುತ್ತಿತ್ತು. ಅದರ ನಂತರ ಹಿಂದಿನ ವೈಜ್ಞಾನಿಕ ಸತ್ಯವನ್ನು ವಿವರಿಸಲಾಗುತ್ತಿತ್ತು

"ಕುಲ ಕುಲವೆಂದು" ಒಂದು ಪುಟ್ಟ ನಾಟಕ. ಇದರಲ್ಲಿ ಅಸ್ಪೃಶ್ಯತೆ ಆಚರಣೆ ಬಗ್ಗೆ ಪಾತ್ರಗಳೇ ವಿವರಿಸುತ್ತವೆ. "ದುರ್ಗಾ" ಒಂದು ಏಕವ್ಯಕ್ತಿ ಪ್ರದರ್ಶನ. ಕೌಟುಂಬಿಕ ದೌರ್ಜನ್ಯದ ಹೃದಯಸ್ಪರ್ಶಿ ಪ್ರಸ್ತುತಿ. ದೌರ್ಜನ್ಯದ ಸಂದರ್ಭವನ್ನು ಎದುರಿಸುವುದು ಹೇಗೆ? ಅಭಿನಯದ ನಂತರದ ಚರ್ಚೆಯಲ್ಲೇ ಎಲ್ಲದಕ್ಕೂ ಉತ್ತರ ನೀಡಲಾಗುತ್ತಿತ್ತು.

"ಭಾರತವೆಂದರೆ ಸುವರ್ಣ ಧ್ವಜವು" ಹಾಡಿನ ಮೂಲಕ ಸುವರ್ಣ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮಿಸುವ ಪ್ರಯತ್ನವೂ ಇದರಲ್ಲಿತ್ತು. ಸಂವಿಧಾನದ ವಿವರಣೆ, ಸ್ವಾತಂತ್ರ ಹೋರಾಟದಲ್ಲಿ ದುಡಿದ ಬೆಳಕಿಗೆ ಬಾರದ ಹೆಣ್ಣು ಜೀವಗಳ ಕುರಿತು ಮಾತುಗಳು, ಅಭಿನಯದ ಮೂಲಕ ವಿವರಣೆ ಮತ್ತೆ ಇಂಬು ಕೊಡುವ

ಕಿರುಹೊತ್ತಿಗೆ ಎಲ್ಲವೂ ಇಡೀ ಪಯಣಕ್ಕೆ ಕಳಶವೆಂಬಂತಿತ್ತು.

ಪಯಣದ ಕೊನೆಯಲ್ಲಿ ಸಂವಿಧಾನವನ್ನು ಓದುವುದು, ಪ್ರತಿಜ್ಞಾವಿಧಿ ಸ್ವೀಕರಿಸುವುದು ಕಡ್ಡಾಯವಾಗಿತ್ತು.

ಎರಡು ದಿನ ಹಾಡಿ ಕುಣಿದು ಕೇವಲ ಮೋಜು ಮಾಡಿದ್ದಲ್ಲ. ಹಾಡು, ನಾಟಕ, ರೂಪಕ ನಮ್ಮ ಮೇಲೆ ಅರಿವಿನ ಧಾರೆಯನ್ನೇ ಎರೆದಿತ್ತು. ಇದನ್ನು ಜಿಲ್ಲೆಯಾದ್ಯಂತ ಜನ ಸಮೂಹದ ನಡುವೆ ತೆಗೆದುಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿತ್ತು. ಆ ಎಚ್ಚರದೊಂದಿಗೆ ಎಲ್ಲರೂ ತಮ್ಮ ತಮ್ಮ ಊರಿಗೆ ತೆರಳಿದರು.

ಅಂತೆಯೇ ಕಾರ್ಯಾಚರಣೆಯು ಆರಂಭವಾಯಿತು. ಜಿಲ್ಲಾಮಟ್ಟದಲ್ಲಿ ಉದ್ಘಾಟನೆಗಾಗಿ ಸ್ಥಳ ನಿಗದಿಯಾಯಿತು. ಆಗಸ್ಟ್ 27ನೇ ತಾರೀಕು ತುಮಕೂರಿನ ಎಂಪ್ರೆಸ್ ಶಾಲೆಯ ಆವರಣದಲ್ಲಿ ಅಂದು ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದ ಡಾ. ಕೆ ವಿದ್ಯಾಕುಮಾರಿಯವರು, ಖ್ಯಾತ ವೈದ್ಯರಾದ ಡಾ. ಹನುಮಕ್ಕ ಹಾಗೂ ಕಾಲೇಜಿನ ಪ್ರಾಂಶುಪಾಲರು ಮುಂತಾದವರ ಉಪಸ್ಥಿತಿಯಲ್ಲಿ ಪಾರಿವಾಳ ಹಾರಿಬಿಡುವುದರ ಮೂಲಕ ಉದ್ಘಾಟಿಸಿದರು. ಅನೇಕ ಹಾಡುಗಳು, ರೂಪಕ, ನಾಟಕ ಪ್ರಸ್ತುತಪಡಿಸಲ್ಪಟ್ಟವು. ಇದನ್ನು ಪರಿಣಾಮಕಾರಿಯಾಗಿ ಕೆಲಸಕ್ಕೆ ಮುಟ್ಟಿಸಲು ಪಣ ತೊಡಲಾಯಿತು.

ಅರಿವಿನ ಪಯಣವನ್ನು ಜನ ಸಮುದಾಯದ ಮಧ್ಯೆ ತೆಗೆದುಕೊಂಡು ಹೋಗುವುದು ಅಷ್ಟು ಸುಲಭವಾಗಿರಲಿಲ್ಲ. ಮೊದಲು ತಂಡ ಕಟ್ಟ ಬೇಕಾಗಿತ್ತು. ತಂಡ ಗಟ್ಟಿಯಾಗಿದ್ದರೆ ಕೆಲಸ ಸುಲಭ. ಚಿಕ್ಕನಾಯಕನಹಳ್ಳಿಯಲ್ಲಿ ಒಂದು ದಿನದ ಕಾರ್ಯಗಾರವನ್ನು ಮಾಡಿ ತರಬೇತಿಯೊಂದಿಗೆ ತಂಡ ರಚನೆಯಾಯಿತು. ಇತರೆ ತಾಲ್ಲೂಕುಗಳಲ್ಲಿ ಆಗದಿದ್ದರೂ ತುಮಕೂರು ತಾಲ್ಲೂಕಿನಲ್ಲಿ, ಗುಬ್ಬಿ ತಾಲ್ಲೂಕಿನಲ್ಲಿ, ಶಿರಾ ತಾಲ್ಲೂಕಿನಲ್ಲಿ, ಮಧುಗಿರಿಯಲ್ಲಿ, ತುರುವೇಕೆರೆ, ತಿಪಟೂರಿನಲ್ಲಿ ಅರಿವಿನ ಪಯಣ ಕಾರ್ಯಕ್ರಮಗಳಾದವು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಿಶೇಷವಾಗಿ 45 ಕಡೆ ಕಾರ್ಯಕ್ರಮ ನಡೆದವು. ಕುಪ್ಪೂರು ಎಂಬ ಗ್ರಾಮದಲ್ಲಿ ಮಹಿಳೆಯರ ಗುಂಪಿನ ನಡುವೆ ಮೊದಲು ಅರಿವಿನ ಪಯಣ ಪ್ರಯೋಗಿಸಲಾಯಿತು. ಯಶಸ್ವಿಯೂ ಆಯಿತು.

**ಯಾರ್ಯಾರಿಗೆ ತಲುಪಿತು?**

ಅರಿವಿನ ಪಯಣ ಸಾಗಿದ ಸ್ಥಳಗಳು ಮತ್ತು ಜನ ಅಷ್ಟೇ ವೈವಿಧ್ಯಮಯ.

ಹಳ್ಳಿಗಳು, ಗೊಲ್ಲರಹಟ್ಟಿಗಳು, ದಲಿತರ ಕಾಲೋನಿಗಳು, ವಸತಿ ನಿಲಯಗಳು, ಲಂಬಾಣಿ ತಾಂಡಗಳು, ಮುಸ್ಲಿಂ ಕೇರಿಗಳು, ಕಾಲೇಜುಗಳು ಮತ್ತು ಶಾಲೆಗಳು. ಇದರ ನಡುವೆ ಚರ್ಚೆಗಳು ನಿಜಕ್ಕೂ ವೈವಿಧ್ಯಮಯ ಮತ್ತು ಅವಿಸ್ಮರಣೀಯ ಅನುಭವ ನೀಡಿದವು. ವಿದ್ಯಾರ್ಥಿಗಳ ನಡುವೆ ಚರ್ಚೆ ಮಾಡುವಾಗ "ಕಪ್ಪು ಬಲೂನು", "ನೀಲಿ ರಿಬ್ಬನ್" ತುಂಬಾ ಪರಿಣಾಮ ಬೀರುತ್ತಿದ್ದವು. ಕಥೆಯನ್ನು, ರೂಪಕವನ್ನು ಪ್ರಸ್ತುತ ಪಡಿಸುತ್ತಿದ್ದ ಮಾದರಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು. "ಕಪ್ಪು ಬಲೂನು" ಪ್ರಸ್ತುತಿಯ ಆರಂಭದಲ್ಲಿ ಕಪ್ಪು ಬಣ್ಣದ ವಿದ್ಯಾರ್ಥಿನಿಯರ ಮುಖದಲ್ಲಿ ವಿಷಾದ ಆವರಿಸುತ್ತಿತ್ತು. ಚರ್ಚೆಯ ಮೂಲಕ ಆತ್ಮವಿಶ್ವಾಸ ತುಂಬಿದಾಗ ಮುಖದಲ್ಲಿ ಸಮಾಧಾನ ಮೂಡುತ್ತಿತ್ತು. "ನೀಲಿ ರಿಬ್ಬನ್" ಕೂಡ ಅಷ್ಟೇ ಪರಿಣಾಮ ಬೀರಿತು. ಲೈಂಗಿಕ ದೌರ್ಜನ್ಯ, ಅತ್ಯಾಚಾರ ಮುಂತಾದ ಸಂದರ್ಭಗಳನ್ನು ಎದುರಿಸುವ ಕುರಿತು ಧೈರ್ಯ ತುಂಬುವ ಪ್ರಯತ್ನಗಳ ಕುರಿತು ಹೇಳಲಾಯಿತು. ತಮ್ಮ ಹೆಣ್ಣು ಮಕ್ಕಳಿಗೆ ಈ ರೀತಿಯ ಅನ್ಯಾಯಗಳಾದ ಸಂದರ್ಭಗಳಲ್ಲಿ ತಾವು ಹೇಗೆ ಎದುರಿಸುತ್ತೇವೆ ಎಂದು ತಾಯಂದಿರು ಮಾತನಾಡುತ್ತಿದ್ದರೆ, ನಮ್ಮಲ್ಲಿ ಧನ್ಯತೆ ಮೂಡುತ್ತಿತ್ತು.

ಇನ್ನು "ಮುಟ್ಟು ಮುಟ್ಟೆಂದೇಕೆ.." ಹಾಡಂತೂ ಎಲ್ಲಾ ಹದಿಹರೆಯದ ಹೆಣ್ಣು ಮಕ್ಕಳನ್ನು, ವಿದ್ಯಾರ್ಥಿನಿಯರನ್ನು, ಮಹಿಳೆಯರನ್ನು ಕಾಡಿರಲು ಸಾಕು. ಮುಟ್ಟು ಮೈಲಿಗೆ ಅಲ್ಲ ಅದೊಂದು ವಯೋಸಹಜವಾಗಿ ಹೆಣ್ಣು ಮಕ್ಕಳ ದೇಹದಲ್ಲಾಗುವ ಬದಲಾವಣೆ ಎಂದು ಹೇಳಿ, ಅದರ ಹಿಂದಿರುವ ವೈಜ್ಞಾನಿಕ ಕಾರಣಗಳನ್ನು ವಿವರಿಸಿದಾಗ ನಿಟ್ಟುಸಿರು ಬಿಟ್ಟವರೂ ಇದ್ದರು. ಇದು ಕೆಟ್ಟದು, ಶಾಪ ಎಂದುಕೊಂಡಿದ್ದವರು ಈ ಕ್ರಿಯೆಯ ಬಗ್ಗೆ ನಮಗೆ ಹೆಮ್ಮೆ ಇದೆ ಎಂದು ಹೇಳುವವರೆಗೂ ಬದಲಾವಣೆ ಕಂಡು ಬಂತು. ಅಷ್ಟೇ ಅಲ್ಲ ನಮ್ಮ ಹೆಣ್ಣು ಮಕ್ಕಳಿಗೆ ಈ ಕುರಿತು ಅರಿವು ಮೂಡಿಸುತ್ತೇವೆ ಎಂದು ಪ್ರತಿಕ್ರಿಯಿಸಿದರು. ವಿಶೇಷವಾಗಿ ಗೊಲ್ಲರಹಟ್ಟಿಗಳಲ್ಲಿ ಗ್ರಾಮದ ಹಿರಿಯರ ನಿರ್ಬಂಧದ ನಡುವೆಯೂ ಅನಿಷ್ಠ ಪದ್ಧತಿ ಕೈಬಿಡುವುದಾಗಿ ದೃಢವಾಗಿ ಹೇಳಿದರು.

ಸುವರ್ಣ ಸ್ವಾತಂತ್ರ್ಯೋತ್ಸವದ ವಿಷಯಗಳು, ಭಾರತವೆಂದರೆ ಎಂಬ ಹಾಡು, ಸ್ವಾತಂತ್ರ್ಯಕ್ಕಾಗಿ ದುಡಿದ ಹೆಣ್ಣು ಜೀವಗಳನ್ನು ನೆನೆದು ಆ ಕಥೆಗಳನ್ನು ಹೇಳುವುದರ ಮೂಲಕ ತಂಡದ ಸದಸ್ಯರೇ ಹೆಮ್ಮೆ ಪಟ್ಟೆವು. ಅಜ್ಞಾತವಾಗಿ ಉಳಿದ ಆ ಜೀವಗಳ ನೆನಪು ಶಾಲಾ ವಿದ್ಯಾರ್ಥಿಗಳ ಜ್ಞಾನದ ಹರವನ್ನು ಮತ್ತೂ ವಿಸ್ತರಿಸಲು ನೆರವಾಯಿತು.

ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿನಿಯರದ್ದೇ ಬೇರೆ ಸಮಸ್ಯೆಗಳಿರುತ್ತವೆ. ಅವರಿಗೆ ಮುಟ್ಟಾಗುವ ಕ್ರಿಯೆ, ಆ ಸಂದರ್ಭದಲ್ಲಿ ಪಾಲಿಸಬೇಕಾದ ಸ್ವಚ್ಛತೆ ಎಲ್ಲವೂ ಯಾರೂ ಹೇಳಿಕೊಡುವುದಿಲ್ಲ. ನಾವು ಅವರಿಗೆ ಪ್ರತ್ಯೇಕವಾಗಿ ಈ ವಿಷಯಗಳ ಕುರಿತು ಮಾತನಾಡಿದೆವು. ನಮ್ಮಲ್ಲಿ ಮನಬಿಚ್ಚಿ ಸಮಸ್ಯೆಗಳನ್ನು ಹೇಳಿಕೊಂಡ ಸಂದರ್ಭಗಳೂ ಇದ್ದವು.

ಕೆಲವು ಸ್ಥಳಗಳಲ್ಲಿ ಸತ್ಯದ ಸೌಂದರ್ಯ, ಒಳ್ಳೆಯ ಸ್ಪರ್ಶ ಕೆಟ್ಟ ಸ್ಪರ್ಶದ ಬಗ್ಗೆ ಮಾತನಾಡಿದರು. ಈ ವಿಷಯಗಳನ್ನು ಮನಮುಟ್ಟುವಂತೆ ಉದಾಹರಣೆಗಳೊಂದಿಗೆ ಹೇಳುತ್ತಿದ್ದವರು ತರಂಗಿಣಿ. ಅಲ್ಲದೆ ಆ ಸಂದರ್ಭಗಳನ್ನು ನಿರ್ವಹಿಸುವುದು ಹೇಗೆ ಎಂಬ ಕಿವಿ ಮಾತುಗಳೂ ಇರುತ್ತಿದ್ದವು. ವಿದ್ಯಾರ್ಥಿ ಸಮೂಹಕ್ಕಂತೂ ಈ ವಿಷಯಗಳು ಅಮೂಲ್ಯ ಜ್ಞಾನ ನೀಡಿದವು.

**ನಾವು ಬದಲಾದೆವು!**

ಮಹಿಳಾ ಸಮಾನತೆ, ಸಬಲೀಕರಣ ಎಂದು ಹಲವಾರು ವರ್ಷಗಳಿಂದ ಸಮುದಾಯದ ನಡುವೆ ಭಾಷಣ ಮಾಡಿ ಮಾತ್ರ ಗೊತ್ತಿತ್ತು ನಮಗೆ. ಭಾಷಣದ ಮಾದರಿಗಿಂತ ಈ ಸಾಂಸ್ಕೃತಿಕ ಪ್ರಕಾರಗಳಾದ ಹಾಡು, ರೂಪಕ, ನಾಟಕ ಹೆಚ್ಚು ಪರಿಣಾಮಕಾರಿ ಎಂದೆನಿಸಿತು. ಇತರ ವಿಷಯಗಳಿಗೂ ಉದಾ– ಆರೋಗ್ಯ, ಮದ್ಯಪಾನ ನಿಷೇಧ, ಸಾಂಪ್ರದಾಯಿಕ ಕೃಷಿ ಪದ್ಧತಿಗಳು ಇತ್ಯಾದಿ. ಇದೇ ಮಾದರಿಯನ್ನು ಬಳಸಬಹುದು ಎಂಬುದು ಅನುಭವಕ್ಕೆ ಬಂತು. ಎಂದೂ ಹಾಡದವರು, ಅಭಿನಯ ಮಾಡದವರೂ ಕೂಡ ಸ್ವತಃ ಹಾಡಿದರು, ಅಭಿನಯಿಸಿದರು, ಕಲಾವಿದರಾದರು.

ತುಮಕೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಸುಮಾರು ನೂರಾರು ಸ್ಥಳಗಳಿಗೆ ತೆರಳಿದ ಸಾಂಸ್ಕೃತಿಕ ಪಯಣ, ಅರಿವಿನ ಪಯಣ ಸಾವಿರಾರು ಜನರ ಮನದ ನಿಲ್ದಾಣಗಳಲ್ಲಿ ಛಾಪು ಮೂಡಿಸಿದ, ಎಚ್ಚರ ನೀಡುವ ಪಯಣ ಇದು. ಈ ಪಯಣ ಮುಂದೆ ಸಾಗುತ್ತಲೇ ಇರಬೇಕು. ಜನಮಾನಸದಲ್ಲಿ ಎಚ್ಚರ ಮೂಡಿಸುತ್ತಲೇ ಇರಬೇಕು.

# ಮೌನ ಜಾಗೃತಿ – ಕಪ್ಪುಡುಗೆಯಲ್ಲಿ ಮಹಿಳೆಯರು

ಡಾ. ಎಚ್.ಎಸ್. ಅನುಪಮಾ

ಯುದ್ಧ ಕಾಲವೋ, ಶಾಂತಿ ಕಾಲವೋ, ಎಲ್ಲ ಕಾಲದಲ್ಲಿ ಯುದ್ಧಹಿಂಸೆ ಜನರನ್ನು ಬಾಧಿಸಿದೆ. ಅದರ ಸ್ವರೂಪ, ಸ್ಥಳ, ತೀವ್ರತೆ ಏನೇ ಆಗಿರಲಿ, ಯುದ್ಧ ಕೊನೆಗೂ ಬಾಧಿಸುವುದು ಹೆಣ್ಣನ್ನೇ. ಯಾರು ಗೆದ್ದರೂ, ಯಾರು ಸೋತರೂ ವಿಧವೆಯರು, ಮಕ್ಕಳನ್ನು ಕಳೆದುಕೊಂಡ ಅಮ್ಮಂದಿರು, ಸೋದರರನ್ನು ಕಳೆದುಕೊಂಡ ಸೋದರಿಯರು ಸೃಷ್ಟಿಯಾಗುತ್ತಾರೆ. ಸೈನ್ಯದಿಂದ ಹೆಣ್ಣು ಬರ್ಬರ ಅತ್ಯಾಚಾರ, ಲೈಂಗಿಕ ದೌರ್ಜನ್ಯಕ್ಕೊಳಗಾಗುತ್ತಾಳೆ. ವೀರರ ಮರಣಗಳು ಸಾವಿರಾರು ಕುಟುಂಬಗಳ ಸಮತೋಲನ ಮತ್ತು ಜೀವಿತವನ್ನೇ ಏರುಪೇರು ಮಾಡುತ್ತವೆ. ಈಗ ದೇಶದೇಶಗಳ ನಡುವೆ ನೇರಾನೇರ ಯುದ್ಧ ನಡೆಯದೇ ಇರಬಹುದು. ಆದರೆ ಗಡಿ, ಉಗ್ರಗಾಮಿ, ರಕ್ಷಣೆಯ ನೆಪದಲ್ಲಿ ನಿರಂತರ ಯುದ್ಧ ಚಾಲ್ತಿಯಲ್ಲಿದೆ. ಅದಕ್ಕೆ ನೀರೆರೆಯಲು ರಾಷ್ಟ್ರೀಯತೆ, ದೇಶಭಕ್ತಿ, ಸುರಕ್ಷತೆ–ಸಮಗ್ರತೆ ಎಂಬಿತ್ಯಾದಿ ಭಾರವಾದ ಶೀರ್ಷಿಕೆಗಳಿವೆ. ಆಂತರಿಕ ಮತ್ತು ಬಾಹ್ಯ ಭದ್ರತೆಯ ಕಾರಣಕ್ಕಾಗಿ ನಮ್ಮದೇ ದೇಶಗಳ ನಮ್ಮದೇ ಸರ್ಕಾರಗಳು ರೂಪಿಸುವ ಯುದ್ಧನೀತಿಗಳಿಂದಾಗಿ ನಮ್ಮ ಮನೆಗೇ ನಾವು ಬೆಂಕಿಯಿಟ್ಟುಕೊಳ್ಳುವಂತಾಗುತ್ತದೆ. ಮಿಲಿಟರಿಯ ವಿಷಯ ಗುಪ್ತವಾಗಿರುವುದರಿಂದ ರಾಷ್ಟ್ರೀಯ ಹಿತಾಸಕ್ತಿಗೆಂದು ತೆಗೆದುಕೊಳ್ಳುವ ನಿರ್ಧಾರಗಳು ಪರಿಣಾಮ ಅನುಭವಿಸಿದ ಮೇಲಷ್ಟೇ ಜನಸಾಮಾನ್ಯರಿಗೆ ತಿಳಿದುಬರುತ್ತದೆ.

ಹೆಣ್ಣು, ಹೊನ್ನು, ಮಣ್ಣಿಗಾಗಿ ಎಂಬ ಉನ್ಮಾದದಿಂದ ಮಾಡುವ ಯುದ್ಧ ಮತ್ತು ತತ್ಸಂಬಂಧಿ ಹಿಂಸೆ ಸಮಾಜದ ನೈತಿಕತೆಯ ನೇಯ್ಗೆಯನ್ನೇ ಭ್ರಷ್ಟಗೊಳಿಸುತ್ತದೆ. ಅದು ನೂರಕ್ಕೆ ನೂರು 'ಅತಿ ಪುರುಷ' ಮನಃಸ್ಥಿತಿಯ ಸೃಷ್ಟಿ. ಎಂದೇ ಅದನ್ನು ಪ್ರತಿರೋಧಿಸುವುದು ತಾಯಿ ಮನಸುಗಳಿಗಲ್ಲದೇ ಬೇರೆಯವರಿಗೆ ಸಾಧ್ಯವಿಲ್ಲ. ಮನುಷ್ಯ ಮನುಷ್ಯನಾಗಿ ಉಳಿಯಲು ಹಿಂಸೆಯನ್ನು

ಪ್ರತಿರೋಧಿಸುವುದು ಗಡಿಗೆರೆಯಿರದ ತಾಯಂದಿರ ಪರಮ ಕರ್ತವ್ಯ ಎಂದು ಮಹಿಳೆ ಮರೆಯುವಂತಿಲ್ಲ. ಅಂಥ ಒಂದು ಪ್ರಯತ್ನ 'ವಿಮೆನ್ ಇನ್ ಬ್ಲಾಕ್'.

1988ರ ಜನವರಿಯಲ್ಲಿ ಜೆರುಸಲೇಂನ ಇಸ್ರೇಲಿ ಮಹಿಳೆಯರಿಂದ ಶುರುವಾದ 'ವಿಮೆನ್ ಇನ್ ಬ್ಲಾಕ್' ಎನ್ನುವುದು ಕಪ್ಪು ಉಡುಗೆ ಧರಿಸಿದ ಮಹಿಳೆಯರ ಯುದ್ಧವಿರೋಧಿ ಸಂಘಟನೆ. ಕಪ್ಪು ಬಣ್ಣ ದುಃಖ ಸೂಚಕ, ಮರಣ ಸೂಚಕ. ಆದರೆ ಒಂದು ನಿಷ್ಕ್ರಿಯ ಸಂಕೇತವನ್ನು ಹಿಂಸೆಯ ವಿರುದ್ಧ ಪ್ರತಿರೋಧದ ಮತ್ತು ದಿಟ್ಟತನದ ಸಂಕೇತವಾಗಿ ಬಳಸಿಕೊಂಡು ಹುಟ್ಟಿದ್ದು ವಿಮೆನ್ ಇನ್ ಬ್ಲಾಕ್. ಆಕ್ರೋಶವನ್ನು ಪದಗಳಿಲ್ಲದೆ ತೋರಿಸಬಹುದಾದ ಭಾಷೆಯ ಸಂಕೇತವಾಗಿ ಮೌನವಿದೆ. ಅದನ್ನೂ ಸಾಂಕೇತಿಕವಾಗಿ ವಿಮೆನ್ ಇನ್ ಬ್ಲಾಕ್ ಬಳಸಿಕೊಂಡಿತು.

1987ರಲ್ಲಿ ಇಸ್ರೇಲ್, ವೆಸ್ಟ್ ಬ್ಯಾಂಕ್ ಮತ್ತು ಗಾಜಾ ಪಟ್ಟಿ ಆಕ್ರಮಿಸಿಕೊಂಡ 20 ವರ್ಷದ ಬಳಿಕ ಮೊದಲ ಪ್ಯಾಲೆಸ್ಟೀನಿಯನ್ ಇಂತಿಫಾದಾ ಶುರುವಾಯಿತು. ಇಸ್ರೇಲಿ ಸೇನೆ ನಗರಗಳನ್ನಾವರಿಸಿಕೊಂಡಿತು. ಆಗ ಸಂಭವಿಸಿದ ಮಾನವ ಹಕ್ಕು ಉಲ್ಲಂಘನೆಯನ್ನು ವಿರೋಧಿಸಿ ಈ ಸಂಘಟನೆ ಹುಟ್ಟಿಕೊಂಡಿತು. ಆ ಮೊದಲು ದ. ಆಫ್ರಿಕಾ, ಅರ್ಜೆಂಟೀನಾದಲ್ಲಿ ಕಂಡುಬಂದ ಅಹಿಂಸಾತ್ಮಕ ಪ್ರತಿರೋಧದ ಸ್ವರೂಪದಿಂದ ಸ್ಫೂರ್ತಿ ಪಡೆದ ಕೆಲವು ಇಸ್ರೇಲಿ ಮಹಿಳೆಯರು ಪ್ರತಿ ಶುಕ್ರವಾರ ಜೆರುಸಲೇಂನ ನಡುಭಾಗದ ಹಗಾರ್ ಸ್ಕ್ವೇರ್ (ಅಥವಾ ಪ್ಯಾರಿಸ್ ಸ್ಕ್ವೇರ್)ನಲ್ಲಿ ಮಧ್ಯಾಹ್ನ ಒಂದರಿಂದ ಎರಡರ ತನಕ ಗುಂಡಿನ ಚಕಮಕಿಯಲ್ಲಿ ಮಡಿದವರ ಸಾವಿಗೆ ಶೋಕಿಸುತ್ತ ಕಪ್ಪು ಬಟ್ಟೆ ಧರಿಸಿ ಮೌನವಾಗಿ ನಿಂತರು. ಬಿಚ್ಚಿದ ಹಸ್ತದ ಕಪ್ಪು ಫ್ಲಕಾರ್ಡಿನಲ್ಲಿ 'ಸ್ಟಾಪ್ ಆಕ್ಯುಪೇಷನ್' ಎಂದು ಬರೆಯಲಾಗಿತ್ತು. ಕೂಡಲೇ ಇದು ಇಸ್ರೇಲಿನ ಇತರ ನಗರಗಳಿಗೂ ಹರಡಿತು. ಇಸ್ರೇಲ್ ಪ್ರಜೆಗಳಾದ ಅರಬ್ ಪ್ಯಾಲಸ್ಟೀನಿಯನ್ನರು ಹೆಚ್ಚಿರುವ ಉತ್ತರ ಇಸ್ರೇಲಿನಲ್ಲಿ ಈ ಪ್ರತಿಭಟನೆ ಗಮನ ಸೆಳೆಯಿತು. ಎರಡೂ ದೇಶಗಳ ನಡುವೆ ಸಂಪರ್ಕವಿರಿಸಿಕೊಂಡ, ಗಡಿ ದಾಟಿ ಎರಡೂ ಕಡೆಯ ಜೈಲುಗಳಿಗೆ ಭೇಟಿ ನೀಡುವ ಸಪ್ಲೈ ಗುಂಪಿನೊಡನೆ ಅದು ಸಂಪರ್ಕ ಸಾಧಿಸಿತು. ಚಳುವಳಿಯೋಪಾದಿಯಲ್ಲಿ ವಾರಕ್ಕೊಮ್ಮೆ ಮಹಿಳೆಯರು ನಗರದ ಚೌಕಗಳಲ್ಲಿ, ಹೆದ್ದಾರಿ ಜಂಕ್ಷನ್‌ಗಳಲ್ಲಿ, ಮೌನವಾಗಿ ಕಪ್ಪುಬಟ್ಟೆ ಧರಿಸಿ ನಿಂತು ಜನರ ಗಮನ ಸೆಳೆದರು. ಇದಕ್ಕೆ ಯಾವ ನಿರ್ದಿಷ್ಟ ಚೌಕಟ್ಟೂ ಇರಲಿಲ್ಲ. ಪ್ರತಿ ಊರಿನ ಮಹಿಳೆಯರೂ ಅಲ್ಲಲ್ಲಿನ ಪ್ರತಿಭಟನೆಯ ಸ್ವರೂಪ ನಿರ್ಧರಿಸಿದರು. 1993ರ ತನಕ ಪ್ರತಿವಾರ ಹೆಚ್ಚು ಕಡಿಮೆ 40 ನಗರಗಳಲ್ಲಿ ಈ ಜಾಗೃತಿ ನಡೆಯುತ್ತಿತ್ತು. 1993ರ ಓಸ್ಲೋ ಒಪ್ಪಂದವಾದ ಬಳಿಕ ಮೌನಜಾಗೃತಿಯ ಸಂಖ್ಯೆ ಕಡಿಮೆಯಾದರೂ ಮತ್ತೆ ಹಿಂಸೆ ಶುರುವಾದಾಗ ಮೊದಲಿನಂತೇ ಮುಂದುವರೆಯಿತು.

ಇದು ನಿಧಾನವಾಗಿ ಬೇರೆಬೇರೆ ದೇಶಗಳಿಗೂ ಹಬ್ಬಿತು. ಜರ್ಮನಿ, ಯುಗೋಸ್ಲಾವಿಯಾ, ಭಾರತ, ನೇಪಾಳ, ಅಮೆರಿಕ, ಆಸ್ಟ್ರೇಲಿಯಾ, ಫಿಲಿಪೀನ್ಸ್, ಮಾಲಿ, ಕೆನಡ, ಇಂಗ್ಲೆಂಡ್, ಇಟಲಿ, ಸ್ವಿಜರ್ಲೆಂಡ್, ಜಪಾನ್, ಫ್ರಾನ್ಸ್, ಸ್ವೀಡನ್, ಟರ್ಕಿ, ನೈರೋಬಿ, ದಕ್ಷಿಣ ಆಫ್ರಿಕಾ, ಮೆಕ್ಸಿಕೋ, ನೆದರ್‌ಲೆಂಡ್, ಉತ್ತರ ಐರ್ಲೆಂಡ್, ಸ್ಪೇನ್ ಹೀಗೇ ಹಲವಾರು ದೇಶಗಳ ಮಹಿಳೆಯರನ್ನು ಸಕ್ರಿಯವಾಗಿಸಿತು. ಉಳಿದ ದೇಶಗಳ ಸಂಘಟನೆಗೆ ಇಸ್ರೇಲಿನ ಸಮಸ್ಯೆ ಜೊತೆಗೆ ಸಂಬಂಧವಿರಲಿಲ್ಲ. ಅವರೆಲ್ಲ ತಮ್ಮನ್ನು ಬಾಧಿಸುತ್ತಿದ್ದ ರಾಜಕೀಯ ಹಾಗೂ ಸಾಮಾಜಿಕ ಕಾರಣಗಳನ್ನು ಮುಂದಿಟ್ಟುಕೊಂಡು ಪ್ರತಿಭಟಿಸಿದರು. ಜನಾಂಗೀಯ ಕಲಹ, ಯುದ್ಧ, ಅಣ್ವಸ್ತ್ರ, ಶಸ್ತ್ರಾಸ್ತ್ರ ತಯಾರಿಕೆ, ಮಹಿಳಾ ದೌರ್ಜನ್ಯ ಇತ್ಯಾದಿ ಮಾನವ ಹೃದಯಗಳ ನಡುವೆ ಅಸಹನೆ, ದ್ವೇಷ ಬಿತ್ತುವ ಎಲ್ಲ ಪ್ರಯತ್ನಗಳನ್ನು ಈ ಸಂಘಟನೆಯ ಮಹಿಳೆಯರು ಪ್ರತಿಭಟಿಸಿದರು.

ಚಿಕ್ಕ ಆದರೆ ಹರಿತವಾದ ಸಂದೇಶವುಳ್ಳ ಸ್ಲೋಗನ್ನುಗಳನ್ನು ಆ ಮಹಿಳೆಯರು ಹಿಡಿದರು. ಕೆಲ ಸ್ಲೋಗನ್ನುಗಳನ್ನು ನೋಡಿ: 'ಇನ್ನು ಸುರಕ್ಷಿತ ವಿಶ್ವ, ಮಹಿಳೆಯರಿಗಾಗಿ', 'ಅಹಿಂಸಾತ್ಮಕ ನಾಳೆ, ಮಕ್ಕಳ ಹಕ್ಕು,' 'ಯುದ್ಧಕ್ಕೆ ಋತುಚಕ್ರದ ಮೇಲೆ ಹೊಟ್ಟೆಯುರಿ', 'ಇನ್ನು ಕಾರುಣ್ಯಮಯ ವಿಶ್ವ ಕಲ್ಪಿಸಿಕೊಳ್ಳಿ', 'ಬೇಕಿರುವುದು ನ್ಯಾಯ, ಪ್ರತೀಕಾರವಲ್ಲ' ಹೀಗೇ. ಈ ಸಂಘಟನೆಯು ಬೇರೆಬೇರೆ ಅಹಿಂಸಾ ಮಾರ್ಗಗಳನ್ನೂ ಅನುಸರಿಸಿತು – ಕಪ್ಪು ಬಟ್ಟೆ ಧರಿಸಿ ರಸ್ತೆ ತಡೆ ಮಾಡುವುದು; ಮಿಲಿಟರಿ ಬೇಸ್ ಮತ್ತಿತರ ನಿಷೇಧಿತ ಪ್ರದೇಶಗಳಿಗೆ ಹೋಗುವುದು; ಸಾಕ್ಷಿಗಳೆದುರು ಅಹಿಂಸಾತ್ಮಕವಾಗಿ ಕಾನೂನು ಭಂಗ ಮಾಡುವುದು ಇತ್ಯಾದಿ. 1990ರಲ್ಲಿ ಯುಗೋಸ್ಲಾವಿಯಾದ ಮಹಿಳೆಯರು ಅಲ್ಲಿ ತೀವ್ರಗೊಳ್ಳತೊಡಗಿದ್ದ ರಾಷ್ಟ್ರೀಯತೆ ಹಾಗೂ ಆ ನೆಪದ ಹಿಂಸೆಯನ್ನು ನೇರವಾಗಿ ಖಂಡಿಸಿದರು. ರಾಷ್ಟ್ರವಾದಿಗಳ ರಕ್ತಪಾತದ ರಾಜಕಾರಣವನ್ನು ಟೀಕಿಸಿದರು. ಆದರೆ ಅವರನ್ನು ದೇಶದ್ರೋಹಿಗಳೆಂದು ಜರಿದು ಅವರ ಮೇಲೆ ಹಿಂಸಾತ್ಮಕ ಆಕ್ರಮಣ ನಡೆದವು. ಆದರೂ ಮಹಿಳೆಯರು ಮೌನ ಪ್ರತಿಭಟನೆ ನಿಲ್ಲಿಸಲಿಲ್ಲ. ಇಸ್ರೇಲಿನಲ್ಲೂ ಈ ಸಂಘಟನೆಯ ಮಹಿಳೆಯರಿಗೆ ವಿರುದ್ಧವಾಗಿ 'ಭವಿಷ್ಯದ ಇಸ್ರೇಲ್' ಎಂಬ ಹಸಿರು ಟೋಪಿ ಧರಿಸಿದ ಮಹಿಳಾ ಸಂಘಟನೆ ಶುರುಮಾಡಲಾಯಿತು. ಇವರನ್ನು ಅರಬ್ ಏಜೆಂಟರಂತೆ ನೋಡಲಾಯಿತು. ದಾರಿಹೋಕರು 'ಸೂಳೆಯರು', 'ದ್ರೋಹಿಗಳು' ಎಂದು ಈ ಮಹಿಳೆಯರನ್ನು ಜರಿದರು. ಅದೆಲ್ಲವನ್ನು ಘನತೆಯಿಂದ ಸಹಿಸಿ ಮೌನ ಪ್ರದರ್ಶನ ಮುಂದುವರೆಯಿತು.

ಭಾರತದಲ್ಲಿ ಈ ಪ್ರತಿಭಟನೆ 1992ರಲ್ಲಿ ಶುರುವಾಯಿತು. ಮೊತ್ತಮೊದಲು

ಬೆಂಗಳೂರಿನಲ್ಲಿ ಕೌಟುಂಬಿಕ ದೌರ್ಜನ್ಯದ ವಿರುದ್ಧ ಹೋರಾಡುವ 'ವಿಮೋಚನಾ' ಸಂಸ್ಥೆ ಮೌನಜಾಗೃತಿಯನ್ನು ಸಂಘಟಿಸಿತು. ಅಯೋಧ್ಯಾ ರಾಮಮಂದಿರ ಗಲಾಟೆ ಮತ್ತು ಬಾಬ್ರಿ ಮಸೀದಿ ಧ್ವಂಸದ ವಿರುದ್ಧ, ಹಿಂದೂ ರಾಷ್ಟ್ರೀಯತೆ ಹೆಸರಿನ ಹಿಂಸಾ ರಾಜಕಾರಣದ ವಿರುದ್ಧ, ವಿಮೆನ್ ಇನ್ ಬ್ಲಾಕ್ ಅನ್ನು ಪ್ರತಿ ಗುರುವಾರ ಸಂಘಟಿಸಲಾಯಿತು. ಚೆನ್ನೈ, ಮುಂಬೈ, ಕೊಲ್ಲಾಪುರ, ದೆಹಲಿ ಇತ್ಯಾದಿ ದೇಶದ ನಾನಾ ಕಡೆ ಅಸಹನೆ ಮತ್ತು ದ್ವೇಷದ ರಾಜಕಾರಣ ಹಬ್ಬುವುದು ಬೇಡ ಎಂದು ಮಹಿಳೆಯರು ಮೌನವಾಗಿ ಬೀದಿಬೀದಿಗಳಲ್ಲಿ ನಿಂತರು. ಪ್ರಜಾಪ್ರಭುತ್ವ ವ್ಯವಸ್ಥೆಯ ದೇಶದಲ್ಲಿ ಕಾನೂನುಬದ್ಧವಾಗಿಯೇ ನಡೆಯುತ್ತಿರುವ ಪ್ರಭುತ್ವದ ಹಿಂಸೆಯನ್ನು ಅದು ಪ್ರಶ್ನಿಸಿತು. ರಾಜಕೀಯ ವಿಷಯಗಳ ಜೊತೆಗೇ ಮಹಿಳಾ ದೌರ್ಜನ್ಯವನ್ನೂ ವಿರೋಧಿಸಲಾಯಿತು. ವರದಕ್ಷಿಣೆ, ವಧುದಹನ, ಸ್ತ್ರೀ ಭ್ರೂಣಹತ್ಯೆ, ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ನೀಲಿಚಿತ್ರ ಮುಂತಾದ ವಿಷಯಗಳತ್ತ ಪ್ಲಕಾರ್ಡುಗಳು ಗಮನ ಸೆಳೆದವು.

ಯಾವುದೇ ದೇಶದ, ಯಾವುದೇ ಗುಂಪಿನ ಮಹಿಳೆಯರು ಒಗ್ಗೂಡಿ ವಿಮೆನ್ ಇನ್ ಬ್ಲಾಕ್ ಸಂಘಟಿಸಬಹುದು. ಮೆರವಣಿಗೆಯಿಲ್ಲ, ಧಿಕ್ಕಾರ ಕೂಗಬೇಕಿಲ್ಲ. ಸುಲಭವಾಗಿ ಜನರನ್ನು ಸೇರಿಸಬಹುದು, ಮಕ್ಕಳನ್ನೂ ಕರೆತರಬಹುದು. ವಿಮೆನ್ ಇನ್ ಬ್ಲಾಕ್ ಸಂಘಟನೆಗೆ ಸಂವಿಧಾನ ಇಲ್ಲ. ಮ್ಯಾನಿಫೆಸ್ಟೋ ಇಲ್ಲ. ಕ್ರಿಯೆ ಮತ್ತು ಮಾತುಗಳಲ್ಲೇ ಅದರ ಆಶಯ ಸ್ಪಷ್ಟವಾಗಬೇಕು. ಒಂದು ಸ್ತ್ರೀವಾದಿ ತಿಳುವಳಿಕೆ ಗಟ್ಟಿಯಾಗಿ ಅದರ ಬೆನ್ನಿಗಿದೆ: ಯುದ್ಧಕಾಲದಲ್ಲಿ–ಶಾಂತಿ ಕಾಲದಲ್ಲಿ; ಆಂತರಿಕ ಅಥವಾ ಬಾಹ್ಯ ಸ್ವರೂಪಗಳಲ್ಲಿ ಪುರುಷ ಸಮಾಜ ಎಸಗುವ ದೌರ್ಜನ್ಯ ಅಂತರ್‌ಸಂಬಂಧ ಹೊಂದಿದೆ ಎನ್ನುವುದು. ಹಿಂಸೆ ದೊಡ್ಡ ಜನಸಮುದಾಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಧನವಾಗಿದೆ ಎಂಬ ಅರಿವೂ ಅದಕ್ಕಿದೆ. ಆದ್ದರಿಂದ ಅದು ಹಿಂಸೆಯನ್ನು ವಿರೋಧಿಸುತ್ತದೆ. ಹಿಂಸೆ ವಿರೋಧಿಸುವ ಪುರುಷರೂ ಈ ಸಂಘಟನೆಯ ಜೊತೆಗಿದ್ದಾರೆ.

ಇದಕ್ಕೀಗ ವಿಶ್ವಾದ್ಯಂತ 10 ಸಾವಿರಕ್ಕಿಂತ ಅಧಿಕ ಕ್ರಿಯಾಶೀಲ ಮಹಿಳೆಯರು ಕಾರ್ಯಕರ್ತರಾಗಿದ್ದಾರೆ ಎಂದು ಅಂದಾಜಿಸಲಾಗಿದೆ. ಜೆರುಸಲೇಂ, ಬೀಜಿಂಗ್, ಸರ್ಬಿಯಾ, ಬ್ರಸೆಲ್ಸ್ ಸೇರಿದಂತೆ ಕೆಲವು ಕಡೆ ಅಂತರರಾಷ್ಟ್ರೀಯ ಸಮ್ಮೇಳನ ನಡೆಸಿದೆ. ಎಲ್ಲ ದೇಶಗಳ ಸಂಘಟನೆಗಳ ಹೆಣ್ಣುಮಕ್ಕಳು ಇ ಮೇಲ್ ಮೂಲಕ ಸಂಪರ್ಕ ಇಟ್ಟುಕೊಂಡಿದ್ದಾರೆ. ಮಿಲೆನಿಯಂ ಶಾಂತಿಪ್ರಶಸ್ತಿಯೂ ಇದಕ್ಕೆ ಲಭಿಸಿದೆ. ವರ್ಲ್ಡ್ ಸೋಶಿಯಲ್ ಫೋರಂನ ಸಹಸಂಘಟನೆಯಾಗಿ ಜಾಗತೀಕರಣ ಮತ್ತು ಸಾಮ್ರಾಜ್ಯಶಾಹಿಯ ಭಿನ್ನ ರೂಪಗಳನ್ನೂ ಇದು ವಿರೋಧಿಸುತ್ತಿದೆ.

ಹೆಣ್ಣೇನೂ ಅಭಿಜಾತ ಅಹಿಂಸಾ ಪ್ರತಿಪಾದಕಳಲ್ಲ. ಆದರೆ ನ್ಯಾಯ ಮತ್ತು ದಮನ ಈ ಎರಡೂ ಏನು ಎನ್ನುವುದು ಒಂದಲ್ಲ ಒಂದು ಕಾರಣಕ್ಕಾಗಿ ದಮನಿತಳಾದ ಮಹಿಳೆಗೆ ಚೆನ್ನಾಗಿ ಗೊತ್ತು. ಹಾಗಾಗಿ ಯುದ್ಧ, ಹಿಂಸೆಯ ಅನುಭವ ಗಂಡು ಮತ್ತು ಹೆಣ್ಣಿಗೆ ತುಂಬ ಭಿನ್ನವಾಗಿದೆ. ಹಿಂಸೆ ಕುರಿತ ಸ್ತ್ರೀವಾದಿ ವಿಶ್ಲೇಷಣೆ ಬೇರೆಯೇ ಇರುತ್ತದೆ. ಎಲ್ಲಿ ಹಿಂಸೆಯಿದೆಯೋ ಅಲ್ಲಿ ದೌರ್ಜನ್ಯ ಇದ್ದೇ ಇರುತ್ತದೆ. ಎಂದೇ ಹುತಾತ್ಮಳಾಗಬಯಸದೇ ತನ್ನ ಭಿನ್ನ ದೃಷ್ಟಿ ಹಾಗೂ ಶಕ್ತಿಯನ್ನು ತೋರಿಸುವುದು ಇಂಥ ಸಂಘಟನೆಗಳ ಹಿಂದಿನ ತಾತ್ವಿಕತೆಯಾಗಿದೆ.

ಆಳ್ವಿಕರಿಗೊಂದು ಅಧಿಕಾರವಿದ್ದಂತೆ ಬೀದಿಗೊಂದು ಅಧಿಕಾರವಿರುತ್ತದೆ. ಅಧಿಕಾರ ಒಂದೆಡೆ ಸಂಚಯವಾಗುವುದನ್ನು ತಡೆಗಟ್ಟಿ, ವಿಕೇಂದ್ರೀಕರಿಸುವ ಒಂದು ಚಲನಶೀಲ ಸಮತೋಲನದ ಶಕ್ತಿ ಬೀದಿಗಿರುತ್ತದೆ. ಬೀದಿಗಿರುವ ಶಕ್ತಿ ಮತ್ತು ಅಧಿಕಾರ ಎರಡನ್ನೂ ಸರಿಯಾಗಿ ಬಳಸಿಕೊಳ್ಳುವುದರಲ್ಲಿ ಸಮಾಜ ಸೋತಿರುವುದರಿಂದಲೇ ನಾಗರಿಕ ಸಮಾಜದಲ್ಲೂ ಅನಾಗರಿಕ ಕ್ರೌರ್ಯ ಅನಾಯಾಸವಾಗಿ ಪ್ರವೇಶ ಪಡೆದಿದೆ. ಹಿಂಸೆಗೆಳೆಸದಂತೆ ಅತ್ಯಂತ ಸರಳವಾಗಿ ಜನರನ್ನು ತಲುಪುವ ಸಾಧ್ಯತೆ ಬೀದಿಗಿದೆ. ವಂಚಿತ ಮತ್ತು ಅಸಹಾಯಕ ವ್ಯಕ್ತಿ ಇಡೀ ಸಮಾಜದ ಅಂತಃಸಾಕ್ಷಿ ಪ್ರಶ್ನಿಸಲು ಹಾಗೂ ತನ್ನೆದೆಯೊಳಗಿನ ಸಿಟ್ಟನ್ನು ನೈತಿಕ ಆಕ್ರೋಶವಾಗಿಸಲು ಬೀದಿಯನ್ನು ಬಳಸಿಕೊಳ್ಳಬೇಕು. ಅದರಲ್ಲೂ ಮಹಿಳೆಯರು ದೌರ್ಜನ್ಯ ನಿಲ್ಲಿಸುವಂತೆ ಹಕ್ಕೊತ್ತಾಯ ತರಲು, ವಂಚಿಸಲ್ಪಟ್ಟ ರಾಜಕೀಯ ಅವಕಾಶವನ್ನು ಸಾಮುದಾಯಿಕವಾಗಿ ಕಂಡುಕೊಳ್ಳಲು ಹಾಗೂ ಸೋದರತೆ–ಮಾನವತೆಗಳನ್ನು ಹಂಚಲು ಈ ಸುಲಭ ವಿಧಾನ ಬಳಸಿಕೊಳ್ಳಲೇಬೇಕು.

ಮೌನ ಪ್ರತಿಭಟನೆ ಎಂದೊಡನೆ ಕೆಲ ಹೋರಾಟದ ಜೀವಗಳು, 'ಮೌನ ಸಾಕಾಗಿ ಹೋಗಿದೆ, ಅದರಲ್ಲೂ ಮಹಿಳೆಯರಿಗೆ, ದಮನಿತರಿಗೆ. ಮಾತಾಡಬೇಕು ನಾವಿನ್ನು, ಮತ್ತೇಕೆ ಮೌನ?' ಎನ್ನುತ್ತಾರೆ. ಪ್ರತಿರೋಧ, ಜಾಗೃತಿಗೆ ಮಾತೊಂದು ಮಾರ್ಗ ಕಲ್ಪಿಸಿದರೆ ಮೌನವೊಂದು ಮಾರ್ಗ ತೋರಿಸುತ್ತದೆ. ದೀಪವೊಂದು ಬೆಳಕಾದರೆ, ಅಕ್ಷರವೊಂದು ಜ್ಯೋತಿಯಾಗುತ್ತದೆ. ಮನೆಯಲ್ಲಿ ಹೇರಲ್ಪಟ್ಟ ಮೌನ ದಮನವಾದರೆ ಸಾರ್ವಜನಿಕ ಸ್ಥಳದಲ್ಲಿ ಒಂದೆಡೆ ಒಗ್ಗೂಡಿ ಮೌನವಾಗಿ ನಿಲ್ಲುವಿಕೆ ಅಂತರಂಗದೊಳಗೊಂದು ಸಂಚಲನ ಉಂಟುಮಾಡಿ ಎಲ್ಲರೊಳಗೊಂದೆಂಬ ಭಾವ, ಧೈರ್ಯ ಮೂಡಿಸುತ್ತದೆ. ಎಂದೇ ಪ್ರತಿರೋಧದ ಮಾರ್ಗವಾಗಿ ಯಾವುದೂ ಅಮುಖ್ಯವಲ್ಲ. ಇದೂ ಬೇಕು, ಅದೂ ಇರಲಿ.

ಇದನ್ನರಿತು ನಾನು ಕಾರ್ಯಕರ್ತೆಯಾಗಿರುವ ಕರ್ನಾಟಕ ರಾಜ್ಯ

ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2012ರ ನಿರ್ಭಯಾ ಪ್ರಕರಣದ ಬಳಿಕ ಪ್ರತಿ ವರ್ಷ ನಡೆಸುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಜಾಗೃತಿ-ಸಮಾವೇಶಗಳಲ್ಲಿ ಊರೂರುಗಳಲ್ಲಿ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ಸಂಘಟಿಸುತ್ತ ಬಂದಿದೆ. ಅವರಂತಲ್ಲ, ನಾವಂತಲ್ಲ. ದಮನ, ಅನ್ಯಾಯ, ದೌರ್ಜನ್ಯಗಳು ನಡೆಯುತ್ತಿರುವಾಗ ಅದಕ್ಕೆ ಮೂಕ ಸಾಕ್ಷಿಯಾಗದೇ ನಮ್ಮ ಮನದಲ್ಲಿರುವುದನ್ನು ಪ್ಲಕಾರ್ಡುಗಳಲ್ಲಿ ಹಿಡಿದು ಕಪ್ಪು ಉಡುಗೆ ಧರಿಸಿ ನಿಲ್ಲೋಣ. ನಮ್ಮ ಮನದಾಳದ ಸಾತ್ವಿಕ ಸಿಟ್ಟು ಸಮಾಜದ ನೈತಿಕ ಧೈರ್ಯವಾಗಿ ಭಾಷಾಂತರಗೊಳ್ಳಲೆಂದು ಒಂದು ಹೆಜ್ಜೆ ಮುಂದಿಟ್ಟು ಹೋಗೋಣ. ಇಲ್ಲಿ, ಈ ಹೊತ್ತು ಮಾತ್ರವಲ್ಲ, ಅವಶ್ಯವೆನಿಸಿದಾಗಲೆಲ್ಲ ನಮ್ಮನಮ್ಮ ಊರುಗಳಲ್ಲಿ ಈ ಅಹಿಂಸಾತ್ಮಕ ಪ್ರಯೋಗ ಮಾಡಿ ನೋಡೋಣ.



ಗುಲ್ಬರ್ಗದಲ್ಲಿ ತುಮಕೂರಿನ ಪರವಾಗಿ ಗಿಡ ಪಡೆಯುತ್ತಿರುವ ಡಾ.ಅರುಂಧತಿ

# ದಹಿಸುತಿದೆ ದೌರ್ಜನ್ಯದ ಧಗೆ

ಡಾ. ಆಶಾ ಬಗ್ಗನಡು

ತಂದೆ, ಪ್ರೇಮಿ, ಪತಿ, ಸ್ನೇಹಿತ, ಗುರು, ಅದೆಷ್ಟು ಆತ್ಮೀಯ ಬಂಧಗಳು. ಪ್ರೀತಿಯ ರೂಪಗಳು. ಪ್ರೀತಿಯಲಿ ತಲೆಯ ನೇವರಿಸುತ್ತಲೇ ಕತ್ತು ಹಿಚುಕಿವೆಯೇ? ಪ್ರೀತಿಯು ಸುಧೆ ಹರಿಸುತ್ತಲೇ ಪಾಷಾಣವನ್ನಿಕ್ಕಿವೆಯೇ? ಆತ್ಮೀಯರೇ ಆಗಂತುಕರಾಗಿ ಹೋಗುವ ಪರಿ ಮಹಿಳಾ ಬದುಕಿಗೆ ಹೊಸತಲ್ಲವಾದರೂ ತನ್ನ ಆತ್ಮೀಯರೇ ಮೃಗೀಯವಾಗಿ ವರ್ತಿಸಿದರೆ ಆ ಹೆಣ್ಣು ಜೀವ ಅನುಭವಿಸುವ ಅಭದ್ರತೆಯ ಭಯ ಅದೆಷ್ಟೋ. ಅಂತು ಹೆಣ್ಣು ಮಗಳೊಬ್ಬಳು ತನ್ನ ಗಂಡ, ಪ್ರೇಮಿ, ಅಥವಾ ತನ್ನ ನಿಕಟವರ್ತಿಗಳಿಂದಲೇ ಲೈಂಗಿಕ ದೌರ್ಜನ್ಯ ಅನುಭವಿಸುವುದು ಅಥವಾ ಕೊಲೆಯಾಗುತ್ತಿರುವುದು ಇಂದು ಸಾಮಾನ್ಯ ವಿಚಾರವಾಗಿದೆ. ಹೆಣ್ಣುಮಕ್ಕಳನ್ನು ಹೆಚ್ಚು ಹಿಂಸಿಸಿ ಕಾಡುವವರು ಇನ್ನೆಲ್ಲೋ ಇರದೆ ಅವಳ ಸುತ್ತಲೇ ಅವಳ ಪರಿಚಯದವರಲ್ಲಿಯೇ ಇರುತ್ತಾರೆಂಬುದು ಘೋರ ಸತ್ಯವಾಗಿದೆ.

ತನ್ನವರು ಮತ್ತು ಆತ್ಮೀಯ ಪರಿಚಯವರಿಂದಲೇ ಮಹಿಳೆಗೆ ಅಪಾಯವಿರುವ ಭೀಕರತೆ ಭಾರತದಲ್ಲಿ ಹೆಚ್ಚುತ್ತಲೇ ಇದ್ದು, ಪ್ರತಿ ಗಂಟೆಗೆ ಐದಕ್ಕಿಂತ ಹೆಚ್ಚು ಮಹಿಳೆಯರು ಅಥವಾ ಹುಡುಗಿಯರು ಅವರ ಸ್ವಂತ ಕುಟುಂಬದಲ್ಲಿ ತನ್ನ ಪರಿಚಿತರಿಂದಲೇ ಕೊಲೆಯಾಗುತ್ತಾರೆ ಎನ್ನುತ್ತವೆ. ಇತ್ತೀಚಿನ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಬಿಡುಗಡೆ ಮಾಡಿರುವ ಮತ್ತು ವಿಶ್ವಸಂಸ್ಥೆ ವರದಿಳು.

ಹೆಣ್ಣಿನ ಮೇಲಿನ ಅಮಾನುಷ ಕ್ರೂರ ಚರಿತ್ರೆಗೆ ಬಹಳ ದೊಡ್ಡ ಇತಿಹಾಸವಿದ್ದು ಅದು ಮಹಿಳೆಯರ ವಿರುದ್ಧದ ಹಿಂಸೆಯ ಕುರಿತಂತೆ ಅವರ ಹಕ್ಕುಗಳ ಪರವಾಗಿ ವ್ಯಾಪಕ ಜಾಗೃತಿಯನ್ನು ಸಾರ್ವಜನಿಕರಲ್ಲಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಮಹಿಳೆಯರ ವಿರುದ್ಧದ ಹಿಂಸೆಯ ಕ್ರೌರ್ಯದ ಕಿರುಕುಳದ ಅಪರಾಧಿಕ ಸಂಹಿತೆಗಳನ್ನು ಕಾನೂನು ಕಾಯ್ದೆಗಳಲ್ಲಿ ಚಾರಿತ್ರಿಕ ಬದಲಾವಣೆ

ತರುವಲ್ಲಿ ಮಹಿಳಾ ಪರ ಹೋರಾಟಗಾರರು ಶ್ರಮ ವಹಿಸಿದ್ದಾರೆ. ಮಹಿಳಾ ಪರ ಮನಸುಗಳ ಇಂತಹ ಸತತ ಪ್ರಯತ್ನದ ಫಲ ಮಹಿಳೆಯರ ಹಲವು ಸಮಸ್ಯೆಗಳು ನಿವಾರಣೆಗೊಂಡಾಗ್ಯೂ ಕಾಲ ಬದಲಾದ ಹಾಗೆ ಹೊಸ ಸ್ವರೂಪದಲ್ಲಿ ಮಹಿಳಾ ಸಮಸ್ಯೆಗಳು ಇಂದಿಗೂ ಅವಳನ್ನು ಕಾಡುತ್ತಲೇ ಇವೆ. ದೇಶದ ಪರಿಸ್ಥಿತಿ ಕ್ಷಿಪ್ರಗತಿಯಲ್ಲಿ ಬದಲಾಗುತ್ತಾ ನಾವೆಷ್ಟು ಮುಂದುವರೆದಿದ್ದಾಗ್ಯೂ ಮಹಿಳೆಯರೂ ಕೂಡ ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣಗೊಂಡಾಗ್ಯೂ ಮಹಿಳೆಯರ ಮೇಲಿನ ದೌರ್ಜನ್ಯಗಳೂ ಹೆಚ್ಚುತ್ತಿವೆ. ಸಬಲೀಕರಣಗೊಂಡ ಸರಳಗಳ ಹಿಂದೆ ಪಿತೃ ಮನಸ್ಥಿತಿ ಅವಿತು ಕುಳಿತಿರುವ ಕಾರಣದಿಂದಲೇ ಸಬಲೀಕರಣಗೊಂಡ ಮಹಿಳೆಯು ಇಲ್ಲಿ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾಳೆ.

ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿ–2023 ರ ಪ್ರಕಾರ 2020ಕ್ಕಿಂತ 2021ರಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಸಂಖ್ಯೆ 56.5 ರಿಂದ 64.5% ಅಂದರೆ 15.3ರಷ್ಟು ಹೆಚ್ಚಳವಾಗಿದೆ. ಇದರಲ್ಲಿ ಕೌಟುಂಬಿಕ ದೌರ್ಜನ್ಯದ ಪಾಲೇ ಹೆಚ್ಚಿದ್ದು, ಮನೆ, ಕುಟುಂಬ ಹೆಣ್ಣುಮಕ್ಕಳಿಗೆ ಸುರಕ್ಷಿತ ತಾಣ ಎನ್ನುವಾಗಲೇ, ಒಟ್ಟಾರೆ ಪ್ರಕರಣಗಳಲ್ಲಿ ಶೇ 31.8 ರಷ್ಟು ಅಧಿಕ ಪ್ರಮಾಣದಲ್ಲಿ ಕೌಟುಂಬಿಕ ದೌರ್ಜನ್ಯ ಪ್ರಕರಣಗಳೇ ದಾಖಲಾಗಿವೆ. ಅಂತರ್ಜಾತಿ, ಧರ್ಮಗಳ ವಿವಾಹವಾದ ಹೆಣ್ಣು ಮಕ್ಕಳನ್ನು ಮನೆತನದ ಮರ್ಯಾದೆಯ ಹೆಸರಿನಲ್ಲಿ ಕೊಲ್ಲುವ ಮರ್ಯಾದಸ್ಥರಿಗೆ ಬಲಿಯಾದವರೂ, ಭೋಗದ ಬದುಕಿನ ಕಾರಣ ಹೆಚ್ಚುತ್ತಿರುವ ವರದಕ್ಷಿಣೆ ಕ್ರೌರ್ಯಗಳಿಗೆ ಬಲಿಯಾದವರು ಈ ಲೆಕ್ಕದಲ್ಲಿದ್ದಾರೆ. ಅಂದರೆ ಮಹಿಳೆ ಮನೆಯೊಳಗೆ ತನ್ನ ಆತ್ಮೀಯ ವಲಯದಲ್ಲೇ ಸುರಕ್ಷಿತಳಾಗುಳಿದಿಲ್ಲ. ಸ್ಥಾಪಿತ ಪಿತೃ ವ್ಯವಸ್ಥೆಯ ಜೊತೆಗೆ ಬಂಡವಾಳಶಾಹಿಯು ಸೇರಿಕೊಂಡಿದ್ದರ ಪರಿಣಾಮ ಭೋಗದ ಸರಕಾಗಿ ಬಿಂಬಿತವಾಗುತ್ತಿರುವ ಪರಿಣಾಮ ಅತ್ಯಾಚಾರಗಳು ಪ್ರತಿ ಕ್ಷಣವೂ ಏರುತ್ತಿದ್ದು, ಆಸಿಡ್ ದಾಳಿ, ಸೈಬರ್ ಕ್ರೈಂ, ಕಣ್ಮರೆ, ಕಳ್ಳಸಾಗಣೆ, ಅಪಹರಣ ಪ್ರಕರಣಗಳು ಏರುಗತಿಯಲ್ಲಿವೆ.

ಇದೇ ನವೆಂಬರ್ 25 ಮಹಿಳಾ ದೌರ್ಜನ್ಯ ವಿರೋಧಿ ನಿರ್ಮೂಲನಾ ದಿನ. ಇದು ಪ್ರತಿ ವರ್ಷ ಸೆಂಟರ್ ಫಾರ್ ವುಮೆನ್ಸ್ ಗ್ಲೋಬಲ್ ಲೀಡರ್‌ಶಿಪ್‌ನಿಂದ ಸಂಯೋಜಿಸಲ್ಪಡುತ್ತಿದ್ದು, ಈ ವರ್ಷ ಮಹಿಳೆಯರು ಮತ್ತು ಹುಡುಗಿಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಹೂಡಿಕೆ ಮಾಡಿ ಎಂಬ ಘೋಷವಾಕ್ಯದೊಂದಿಗೆ ಆಚರಿಸಲ್ಪಡುತ್ತಿದೆ. ಲಿಂಗಾಧಾರಿತ ಹಿಂಸಾಚಾರವನ್ನು

ತಡೆಗಟ್ಟುವಲ್ಲಿ ಸರ್ಕಾರಗಳು ಹೇಗೆ ಹೂಡಿಕೆ ಮಾಡುತ್ತಿವೆ ಎಂಬುದನ್ನು ಹಂಚಿಕೊಳ್ಳಲು ಮತ್ತು ತುರ್ತು ಹೂಡಿಕೆಗಾಗಿ ವಿಶ್ವಾದ್ಯಂತ ಕರೆ ನೀಡುತ್ತಿದೆ. ಮಹಿಳಾ ದೌರ್ಜನ್ಯವನ್ನು ತಡೆಯುವ ನಿಟ್ಟಿನಲ್ಲಿ ಹೆಣ್ಣು ಮಕ್ಕಳಲ್ಲಿ ತಮ್ಮ ಶೋಷಿತ ಬದುಕಿನ ಬಗೆಗೆ ಅರಿವನ್ನು, ಗಂಡು ಮಕ್ಕಳಲ್ಲಿ ಲಿಂಗ ಸಂವೇದನಾಶೀಲತೆಯನ್ನು ಮೂಡಿಸುವಲ್ಲಿ ಸಾರ್ವಜನಿಕರ ಪಾಲು ಇದೆಯಾದರೂ, ಸರ್ಕಾರಗಳು ಆ ನಿಟ್ಟಿನಲ್ಲಿ ರೂಪಿಸುವ ಕಾರ್ಯಯೋಜನೆಗಳು, ಹೂಡಿಕೆಗಳು ಮಹಿಳಾ ದೌರ್ಜನ್ಯ ತಡೆಯುವ ನಿಟ್ಟಿನಲ್ಲಿ ಬಹಳ ಮಹತ್ವದ್ದಾಗಿದೆ.

ಜಾಗತಿಕ ತಜ್ಞರ ಸಮೀಕ್ಷೆಯ ಪ್ರಕಾರ ದಿನೇ ದಿನೇ ಭಾರತ ಮಹಿಳೆಯರಿಗೆ ವಿಶ್ವದಲ್ಲಿಯೇ ಅತ್ಯಂತ ಅಪಾಯಕಾರಿ ರಾಷ್ಟ್ರವಾಗುತ್ತಿದೆ. ನಿರಂತರವಾಗಿ ಹೆಚ್ಚುತ್ತಿರುವ ಮಹಿಳಾ ದೌರ್ಜನ್ಯಗಳು ಇದಕ್ಕೆ ಮುಖ್ಯ ಕಾರಣವಾಗಿವೆ. ಚುನಾವಣೆ ಸಮೀಪಿಸಿದಾಗ ಸಾಲು–ಸಾಲು ಮಹಿಳಾ ಪರ ಯೋಜನೆಗಳನ್ನು ಘೋಷಿಸುವ ರಾಜಕೀಯ ಪಕ್ಷಗಳು ಮಹಿಳಾ ದೌರ್ಜನ್ಯದ ಕುರಿತು ಗಮನ ಹರಿಸುವುದು ಕಡಿಮೆಯೇ ಕೇವಲ ಆರ್ಥಿಕ ಉನ್ನತಿಯೊಂದೇ ಸಬಲೀಕರಣದ ಮಾನದಂಡ ಎಂದು ಪರಿಭಾವಿಸುವ ಸರ್ಕಾರಗಳು ಬಹು ದೊಡ್ಡ ಮತಬ್ಯಾಂಕ್ ಆದ ಮಹಿಳೆಯರನ್ನು ಸೆಳೆಯುವ ತಂತ್ರಗಾರಿಕೆಯ ಭಾಗವಾಗಿ ಒಂದಿಷ್ಟು ಯೋಜನೆಗಳನ್ನು, ಉಚಿತ ಕೊಡುಗೆಗಳನ್ನು ಘೋಷಿಸುತ್ತವೆ. ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತಿಕರಣಗೊಳಿಸುವ ನಿಟ್ಟಿನಲ್ಲಿ ಈ ಯೋಜನೆಗಳು ಮಹತ್ವದ ಪಾತ್ರ ವಹಿಸುತ್ತವೆಯಾದರೂ, ಮಹಿಳೆಯರ ಸಮಗ್ರ ರಕ್ಷಣೆ, ಅಭಿವೃದ್ಧಿ ಸ್ವಾವಲಂಬನೆ, ಸ್ವಾಯತ್ತತೆಯ ಬದುಕಿನ ಭರವಸೆಗಳಲ್ಲ. ಮಹಿಳೆಯರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಮಹಿಳಾ ದೌರ್ಜನ್ಯದ ವಿವಿಧ ಆಯಾಮಗಳನ್ನು ಮಟ್ಟ ಹಾಕುವ ಮಹಿಳಾ ದೌರ್ಜನ್ಯವನ್ನು ನಿವಾರಿಸುವ ನಿಟ್ಟಿನ ಯೋಜನೆಗಳನ್ನು ಸರ್ಕಾರ ರೂಪಿಸುವುದು ಬಹಳ ಕಡಿಮೆ. ಕೆಲವೊಂದು ಅನಿವಾರ್ಯದ ಸಂದರ್ಭಗಳಲ್ಲಿ ರೂಪುಗೊಳ್ಳಬಹುದಾದ ಯೋಜನೆಗಳು ಇಚ್ಛಾಶಕ್ತಿಯ ಕೊರತೆಯ ಕಾರಣ ನೆನೆಗುದಿಗೆ ಬಿದ್ದಿರುವುದು ಈ ಹೊತ್ತಿನ ವಾಸ್ತವ.

ಇತ್ತೀಚಿನ ದಿನಮಾನಗಳಲ್ಲಿ ರಾಷ್ಟ್ರ ಸಂಸ್ಕೃತಿಗಳ ಹೆಸರಿನಲ್ಲಿ ಹೆಣ್ಣನ್ನು ಮತ್ತದೇ ಸಾಂಪ್ರದಾಯಿಕ ಸಿದ್ಧ ಸೂತ್ರಕ್ಕೆ ಕಟ್ಟಿಡುವ ದೊಡ್ಡ ಹುನ್ನಾರಗಳು ನಡೆಯುತ್ತಿವೆ. ಹೆಣ್ಣನ್ನು ಸಂಸ್ಕೃತಿಯ ಕಟ್ಟಿಗೆ ಬಿಗಿದಿಡುವ ಭೀಕರ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ ಅನಿಸುತ್ತದೆ. ಕೆಲವು ವರ್ಷಗಳಿಂದ ಅವಳು ಏನು ಉಡಬೇಕು. ಎಷ್ಟು ತೊಡಬೇಕು ಏನು ಧರಿಸಬೇಕು. ಎಷ್ಟು ಸಮಯದವರೆಗೆ ಓಡಾಡಬೇಕು. ಎಂಬ ನಿರ್ದೇಶನಗಳು ಹೆಚ್ಚುತ್ತಿವೆ. ಹಿಜಾಬ್, ಕುಂಕುಮ ಪ್ರಕರಣಗಳು,

ಇತ್ತಿಚೆಗೆ ರಾಜ್ಯ ಸರ್ಕಾರ ಮಹಿಳೆಯರಿಗೆ ನೀಡಿದ ಉಚಿತ ಕೊಡುಗೆಗಳನ್ನು ಕುರಿತ ಸಂವೇದನಾ ರಹಿತ ಮಾತುಗಳು, ಹೆಣ್ಣಿನ ದೇಹ ಮತ್ತು ಮನಸ್ಸುಗಳನ್ನು ಬಿಗಿದಿಡುವ ಹುನ್ನಾರಗಳೇ ಆಗಿದ್ದು, ಅಘೋಷಿತ ಮನುವಾದಿಗಳು ಎಲ್ಲೆಡೆಯಲ್ಲೂ ಅವತರಿಸುತ್ತಾ ಹೆಣ್ಣನ್ನು ಮತ್ತದೇ ಸಿದ್ದ ಸೂತ್ರಕ್ಕೆ ಕಟ್ಟಿಡುವ ತಂತ್ರಗಳನ್ನು ಹೆಣೆಯುತ್ತಿದ್ದಾರೆ.

ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚುತ್ತಿರುವ ಇಂತಹ ಮಹಿಳಾ ವಿರೋಧಿ ಆಲೋಚನಾ ಕ್ರಮಗಳು ಪುರುಷ ಪ್ರಧಾನ ಮನಸ್ಥಿತಿಯ ಕಾರಣಕ್ಕಾಗಿ ಅಲ್ಲ .ಇಂಥ ಸಂಕಥನಗಳು ನೆಡೆಯುತ್ತಿರುವುದು ರಾಜಕೀಯದ ಕಾರಣಕ್ಕಾಗಿ ಕಳೆದ 10 ವರ್ಷಗಳಿಂದ ಕಟ್ಟಲ್ಪಡುತ್ತಿರುವ ಇಂತಹ ಸಂಕಥನಗಳು ಮಹಿಳೆಯರನ್ನು ಸುಮಾರು 1000 ವರ್ಷಗಳಷ್ಟು ಮಹಿಳೆಯರನ್ನು ಹಿಂದಕ್ಕೆ ಎಳೆಯುವ ತಂತ್ರಗಾರಿಕೆಯ ಭಾಗವಾಗಿ ಮಹಿಳೆಯ ಹಿಮ್ಮುಖ ಚಲನೆಗೆ ಕಾರಣವಾಗಿವೆ. ಎನ್ನುವ ಪ್ರತಿಭಾ ನಂದಕುಮಾರ್ ಇಂತಹ ಸಂಕಥನಗಳನ್ನು ಕೇಂದ್ರ ಸರ್ಕಾರದ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಗುರುತಿಸುತ್ತಾರೆ. ಅವಕಾಶ, ಅಧಿಕಾರ, ಲಾಭಕೋರತನಗಳ ಹಿನ್ನೆಲೆಯ ಇಂಥ ಸಂಕಥನಗಳು ಮೂಲಭೂತವಾದವನ್ನು, ಕೋಮುವಾದವನ್ನು ಹೆಚ್ಚಿಸುತ್ತಾ, ಹೆಣ್ಣನ್ನು ಭೋಗದ ನೆಲೆಯಲ್ಲಿ ಸರುಕಿನ ನೆಲೆಯಲ್ಲಿ ಭದ್ರ ಪಡಿಸುತ್ತಾ ಉನ್ನಾವೋ, ಕಥುವಾ, ಮಣಿಪುರ, ಹತ್ರಾಸ್ ಅತ್ಯಾಚಾರಗಳು, ಬೆತ್ತಲೆ ಮೆರವಣಿಗೆ, ಕುಸ್ತಿಪಟುಗಳ ಹೋರಾಟ,ಪ್ರಕರಣಗಳಲ್ಲಿ ಪ್ರತಿಫಲಿಸುತ್ತಿವೆ.

ಮಹಿಳಾ ಬದುಕನ್ನು ಬದಲಿಸುವ ಕಾರ್ಯ ಯೋಜನೆಗಳು, ಕಾನೂನುಗಳು ನಮ್ಮ ನಾಯಕರ ಹೃದಯದಿಂದ ಹೊರಮೂಡಬೇಕೇ ಹೊರತು, ಕೇವಲ ರಾಜಕೀಯ ಲೆಕ್ಕಚಾರಗಳಿಂದ ಅಲ್ಲ. ಸರ್ಕಾರಗಳು ಮಹಿಳೆಯರನ್ನು ತಮ್ಮ ಓಟ್ ಬ್ಯಾಂಕ್ ಆಗಿ ನೋಡುವ ಮನೋಭಾವದ ಆಚೆಗೆ ಅವಳನ್ನು ಪುರುಷ ಸಮಾನವಾಗಿ, ಘನತೆಯ ಜೀವವನ್ನಾಗಿ ನೋಡುವ ಒಡಲುಗೊಳ್ಳುವವರೆಗೂ ಮಹಿಳೆಯರಿಗೆ ಈ ದುಸ್ಥಿತಿ ತಪ್ಪಿದ್ದಲ್ಲ. ದೇಶದಾದ್ಯಂತ ಅಸಂಖ್ಯ ಮಹಿಳಾ ಪರ ಮನಸುಗಳು ತಮ್ಮ ಜೀವಿತದ ಸಾರ ಸರ್ವಸ್ವವನ್ನೆಲ್ಲಾ ನೊಂದ ಶೋಷಿತ ಮಹಿಳೆಯರಿಗೆ ಮೀಸಲಿಟ್ಟು ಸಮಾಜದಲ್ಲಿ ಲಿಂಗ ಸಂವೇದನಾಶೀಲತೆಯನ್ನು ಮೂಡಿಸುವ ನಿಟ್ಟಿನಲ್ಲಿ ನಿರತರಾಗಿರುವುದರಿಂದ ಮಹಿಳಾ ಬದುಕು ಸಹ್ಯವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪಾತ್ರ ಶ್ಲಾಘನೀಯವಾಗಿದ್ದು. ಮಹಿಳೆಯ ಅಸ್ತಿತ್ವ ಅಪಾಯದಂಚನ್ನು ತಲುಪುತ್ತಿರುವ ದುರಿತ ಕಾಲದಲ್ಲಿ ಒಂದಾಗಿರುವ ಸಮಾನ ಮನಸ್ಕ ಪ್ರಗತಿಪರ ಮಹಿಳಾ ಪ್ರಜ್ಞೆಗೆ

ಚಾರಿತ್ರಿಕ ಮಹತ್ವವಿದ್ದು. ಹೀಗೆ ಒಟ್ಟಾದ ಈ ಮನಸುಗಳು "ನಾನು ನೀನು ಅವಳು ಇವಳು ಹೆಣ್ಣಾಗಿ ನೊಂದವರು ಕೈಗೆ ಕೈ ಕೈ ಕೂಡಿಸವ್ವಾ ಹೊಸ ಜಗತ್ತು ನಮ್ಮದು" ಕವಿತೆಯ ಸಾಲುಗಳನ್ನು ಹಾಡುತ್ತ ಹರಿದ ಬಟ್ಟೆಗಳ ಸೇರಿಸುವ ಮೂಲಕ ಕೌದಿಯನ್ನು ಸಾಂಕೇತಿಕವಾಗಿ ಹೊಲಿಯುತ್ತಾ ಕರ್ನಾಟಕದಾದ್ಯಂತ ಬೆಸೆದುಕೊಂಡು ಬಂದ ಮನಸುಗಳು ಅಸಂಖ್ಯ. ಮಹಿಳಾ ಶೋಷಣೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸೈದ್ಧಾಂತಿಕ ತಿಳುವಳಿಕೆಯ ಒಟ್ಟೊಟ್ಟಿಗೆ ಚಳುವಳಿಯ ಸಹಭಾಗಿತ್ವಕ್ಕೆ ಪ್ರಾಮುಖ್ಯತೆಯಿದ್ದು ಬೌದ್ಧಿಕತೆ ಮತ್ತು ಜನ ಚಳುವಳಿ ಎರಡು ಮಿಳಿತಗೊಂಡಿರುವ ಬಗೆಯೇ ಈ ಒಕ್ಕೂಟದ ವಿಶೇಷತೆ. ಒಂದು ವರ್ಷದ ಹಿಂದೆ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ತುಮಕೂರಿನ ಹಲವು ಕ್ರಿಯಾಶೀಲ ವ್ಯಕ್ತಿ ಮತ್ತು ಸಂಘಟನೆಗಳೊಂದಿಗೆ ಸೇರಿ ಹಲವು ಹಂತಗಳಲ್ಲಿ ಮಹತ್ವದ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡತೆ ಕಾರ್ಯಾಗಾರಗಳನ್ನು, ಸಭೆಗಳನ್ನು ನಡೆಸಿ. ಸಮಿತಿಗಳನ್ನು ರಚಿಸಿ ಮಾರ್ಚ 7, 8 2023 ರಂದು ಆಯೋಜಿಸಿದ ಮಹಿಳಾದಿನಾಚರಣೆ ಸಮಾವೇಶಕ್ಕೆ ಭಾರತದ ಮತ್ತು ಕರ್ನಾಟಕದ ಹಲವು ಭಾಗಗಳಿಂದ ಬಂದ ಮಹಿಳಾ ಪರ ಮನಸುಗಳು ಅವರೆಲ್ಲರೂ ಸೇರಿ ಕಟ್ಟಿದ ಮಹಿಳಾ ಪ್ರಜ್ಞೆ, ಮಹಿಳಾ ಪರ ನಿಲವು ಸಾಮಾಜಿಕವಾಗಿ ಗಟ್ಟಿಗೊಳ್ಳುವತ್ತ ಪ್ರೇರಕಶಕ್ತಿಯಾಗಿದೆ.

# ಮಾದರಿ ರಾಜಕಾರಣಿ ಕೇರಳದ ಶೈಲಜಾ ಟೀಚರ್

ಸಂದರ್ಶನ : ಎನ್ ಗಾಯತ್ರಿ

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಈ ವರ್ಷದ ಮಹಿಳಾ ದಿನಾಚರಣೆಯನ್ನು ತುಮಕೂರಿನಲ್ಲಿ ಆಚರಿಸುವ ಸಂದರ್ಭದಲ್ಲಿ ಆ ಕಾರ್ಯಕ್ರಮಕ್ಕೆ ಕೇರಳದ ಶೈಲಜಾ ಟೀಚರ್ ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಾನು ಗೆಳತಿ ಕೆ.ಎಸ್.ವಿಮಲಾ ಅವರ ನೆರವಿನಿಂದ ಶೈಲಜಾ ಟೀಚರ್ ಅವರನ್ನು ಹೊಸತು ಪತ್ರಿಕೆಗಾಗಿ ಸಂದರ್ಶಿಸಿದೆ.

**ಹೊಸತು:** ನಮಸ್ಕಾರ. ಕೊರೊನಾ ಕಾಲದ ಸಂದರ್ಭದಲ್ಲಿ ಕೇರಳದ ಆರೋಗ್ಯ ಸಚಿವೆಯಾಗಿ ನೀವು ಕಾರ್ಯನಿರ್ವಹಿಸಿದ ಶೈಲಿಯ ಬಗ್ಗೆ ನಮಗೆಲ್ಲಾ ತುಂಬ ಹೆಮ್ಮೆಯಿದೆ. ಅದಕ್ಕಾಗಿ ನಿಮಗೆ ಅಭಿನಂದನೆಗಳು. ನಿಮ್ಮನ್ನು ಹೊಸತು ಪತ್ರಿಕೆಗೆ ಸಂದರ್ಶಿಸಲು ಸಂತೋಷವಾಗುತ್ತದೆ.

**ಶೈಲಜ:** ನಮಸ್ಕಾರ.

**ಹೊಸತು:** ನಿಮ್ಮ ಈ ಸಕ್ರಿಯ ರಾಜಕಾರಣಕ್ಕೆ ಪೂರಕವಾದ ಕೌಟುಂಬಿಕ ಹಿನ್ನೆಲೆ ಹೇಗಿತ್ತು?

**ಶೈಲಜ:** ಹೌದು. ನಮ್ಮದು ರಾಜಕೀಯ ಹಿನ್ನೆಲೆಯಿರುವ ಕುಟುಂಬ; ಆದರೆ ರಾಜಕಾರಣಿಗಳ ಕುಟುಂಬವಲ್ಲ. ನನ್ನ ಅಜ್ಜಿ ತುಂಬ ಧೈರ್ಯವಂತ ಹೆಣ್ಣು ಮಗಳು. ಅವಳ ಸೋದರರೆಲ್ಲಾ ರಾಜಕೀಯದಲ್ಲಿದ್ದರು. ನನ್ನ ಅಜ್ಜಿಯ ತಂದೆ ತುಂಬ ಅನುಕೂಲಸ್ಥರಾಗಿದ್ದರು. ಅವರು ಬ್ರಿಟಿಷರ ಎಸ್ಟೇಟುಗಳಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದರು. ಆ ಕಾರಣಕ್ಕೆ ಸಿರಿವಂತರಾಗಿದ್ದರು. ಅವರು ಸತ್ತ ನಂತರ

ನನ್ನ ಅಜ್ಜಿಯ ಸೋದರರು ರಾಜಕೀಯ ಕಾರ್ಯಕರ್ತರಾಗಿ ಕೆಲಸ ಮಾಡಿದರು, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರಲ್ಲಿ ಒಬ್ಬರು ರಾಮಣಿ ಸ್ಥಳೀಯ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದರು. ಆ ಕಾಲದಲ್ಲಿ ಬ್ರಿಟಿಷರ ಸೈನಿಕ ಪಡೆಯಲ್ಲಿ ಒಂದು ವಿಶೇಷ ಘಟಕವು 'ಮಲಬಾರ್ ಪೊಲೀಸ್ ಫೋರ್ಸ್' ಎಂಬ ತಂಡವಿರುತ್ತಿತ್ತು. ಅವರಿಗೆ ಕಮ್ಯುನಿಸ್ಟ್ ಚಳುವಳಿಯನ್ನು ಅಡಗಿಸುವುದೇ ಮುಖ್ಯ ಕೆಲಸವಾಗಿತ್ತು. ಇವರು ನಮ್ಮ ಅಜ್ಜಿಯ ಸೋದರ ರಾಮಣಿಯನ್ನು ಸೆರೆ ಹಿಡಿದು ಬಂಧಿಸಿ ಜೈಲಿನಲ್ಲಿಯೂ ಚೆನ್ನಾಗಿ ಥಳಿಸಿ ಹಿಂಸೆ ಕೊಟ್ಟಿದ್ದರು. ಆ ಎಲ್ಲ ಹೊಡೆತ ಬಡಿತದಿಂದ ಅವರು ಜೈಲಿನಲ್ಲಿಯೇ ಸಾಯಬೇಕಾಯಿತು. ಹೀಗೆ ಅವರು ಉಳಿದವರನ್ನು ಹಿಂಸಿಸುತ್ತಿದ್ದರು. ಅವರ ತಮ್ಮ ಕೃಷ್ಣನ್ ಕೂಡ ಅಷ್ಟೇ ಧೈರ್ಯಶಾಲಿ ಮನುಷ್ಯ ಮತ್ತು ದೊಡ್ಡ ನಾಯಕರಾಗಿದ್ದರು. ಅವರು ಭೂಮಿಯ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರು. ರೈತ ಹೋರಾಟಗಳಲ್ಲಿ ಮುಂದಿದ್ದ ಅವರುಗಳ ಮೇಲೆ 1950ರಲ್ಲಿ ಗುಂಡು ಹಾರಿಸಲಾಗಿತ್ತು. ಆಗ ಅವರನ್ನು ಬಂಧಿಸಿ ತಮಿಳುನಾಡಿನ ಸೇಲಂ ಜೈಲಿಗೆ ಹಾಕಿದ್ದರು. ಜೈಲಿನಲ್ಲಿ ಹೆಚ್ಚು ಪೆಟ್ಟು ತಿಂದರೂ ಬಿಡುಗಡೆಯ ನಂತರ ಆಸ್ಪತ್ರೆಗೆ ಸೇರಿಸಿದ ಮೇಲೆ ಅವರು ಉಳಿದುಕೊಂಡರು. ಇದಾದ ನಂತರ ರಾಜಕೀಯದಲ್ಲಿ ಸಕ್ರಿಯರಾದವರ ಕುಟುಂಬದ ಮೇಲೂ ಆಕ್ರಮಣ ಮಾಡುವುದು ನಡೆದಿತ್ತು. ಒಮ್ಮೆ ನಮ್ಮ ಮನೆಗೆ ಬೆಂಕಿ ಹಾಕುವ ಪ್ರಯತ್ನವನ್ನು ಮಾಡಿದ್ದರು. ನೆರೆಯ ಜಮೀನಿನ ಜನರು ಬಂದು ನಮ್ಮನ್ನು ಈ ಅವಘಡದಿಂದ ತಪ್ಪಿಸಿದರು. ಈ ಎಲ್ಲ ತಾಪತ್ರಯದಲ್ಲಿ ನಮ್ಮ ಬಹುಪಾಲು ಜಮೀನನ್ನು ಮಾರಬೇಕಾಯಿತು. ಪಕ್ಷದ ಕಾರ್ಯಗಳಿಗಾಗಿ ನಮ್ಮ ಜಮೀನನ್ನು ಮಾರಿದ್ದರಿಂದ ನಾವು ಎಲ್ಲಾ ಕಳೆದುಕೊಂಡು ಬಡವರಾದೆವು.

**ಹೊಸತು:** ಈ ಎಲ್ಲಾ ಹಿನ್ನೆಲೆ ನಿಮ್ಮ ರಾಜಕೀಯ ಪ್ರವೇಶಕ್ಕೆ ಕಾರಣವಾಯಿತು ಎನ್ನಬಹುದೇ?

**ಶೈಲಜ:** ಒಂದು ರೀತಿಯಲ್ಲಿ ನಿಜ. ಆದರೆ ನನಗೆ ನಮ್ಮ ಅಜ್ಜಿಯ ಪ್ರಭಾವ ಹೆಚ್ಚಿತ್ತು. ಆರನೇ ಕ್ಲಾಸ್ ಮಾತ್ರ ಓದಿದ್ದ ಅವರು ತುಂಬ ಪುಸ್ತಕಗಳನ್ನು ಓದುತ್ತಿದ್ದರು. ತುಂಬ ಚೆನ್ನಾಗಿ ಕತೆಗಳನ್ನು ಹೇಳುತ್ತಿದ್ದರು. ಅವು ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಕತೆಗಳು ಆಗಿದ್ದವು. ಜೊತೆಗೆ, ನಮ್ಮ ನಾಡಿನ ರೈತರ, ಜನಸಾಮಾನ್ಯರ ಹೋರಾಟದ ಕತೆಗಳೂ ಆಗಿದ್ದವು. ಅವುಗಳಲ್ಲಿ ಕೈಯ್ಯೂರು ರೈತರ ಹೋರಾಟದ ಕತೆ ಮತ್ತು ಆ ಹೋರಾಟದಲ್ಲಿ ಹುತಾತ್ಮರಾದ ವೀರ ಕಲಿಗಳ ಕತೆಗಳನ್ನು ಕೇಳುತ್ತಿದ್ದಾಗ ಮೈಜುಮ್ಮೆನ್ನುತ್ತಿತ್ತು. ಈ ಕತೆಗಳನ್ನು ಕೇಳುತ್ತಾ ಬೆಳೆದ ನಾನು ಶಾಲೆಯಲ್ಲಿರುವಾಗಲೇ ಎಸ್.ಎಫ್.ಐ. ವಿದ್ಯಾರ್ಥಿ ಸಂಘಟನೆಗೆ ಸೇರಿಕೊಂಡಿದ್ದೆ.

**ಹೊಸತು:** ನೀವು ಶಿಕ್ಷಕಿಯಾಗಿ ಕೆಲಸ ಮಾಡಿದ್ದೀರಿ. ಎಡ ಸರ್ಕಾರದ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಜೊತೆಗೆ ಜನವಾದಿ ಮಹಿಳಾ ಸಂಘಟನೆಯ ನಾಯಕಿಯಾಗಿಯೂ ಕೆಲಸ ಮಾಡಿದ್ದೀರಿ. ಈ ಮೂರೂ ಸ್ಥಾನದ ಹಿನ್ನೆಲೆಯಿಂದ ನೋಡಿದಾಗ ಶಬರಿ ಮಲೈ ಪ್ರಕರಣವನ್ನು ಹೇಗೆ ಅರ್ಥೈಸುತ್ತೀರಿ?

**ಶೈಲಜ:** ನನಗೆ ಅರ್ಥವಾಗಲಿಲ್ಲ.

**ಹೊಸತು:** ಮೇಡಂ, ನಮ್ಮ ಸಂವಿಧಾನ ನಮಗೆ ಉಪಾಸನೆಯ ಸ್ವಾತಂತ್ರ್ಯ ಕೊಟ್ಟಿದೆ. ಹಾಗೆ ಈ ವಿಷಯದಲ್ಲಿ ಮಹಿಳೆಯರ ಹಕ್ಕಿನ ಉಲ್ಲಂಘನೆಯಾಗಿದೆ. ಮಹಿಳೆಯರು ಮುಟ್ಟಾಗುವುದರಿಂದ ಅಶುದ್ಧರು, ಎನ್ನುವ ಮೂಢನಂಬಿಕೆಯು ಇದರ ಜೊತೆಗೆ ಸೇರಿದೆ. ಹೀಗೆ ಈ ಮೂಢನಂಬಿಕೆಯನ್ನು ನಿವಾರಿಸಲು ನೀವು ಮತ್ತು ನಿಮ್ಮ ಸರ್ಕಾರ ಕೈಗೊಂಡ ಕ್ರಮಗಳೇನು?

**ಶೈಲಜ:** ಹೌದು. ಶಬರಿ ಮಲೈ ಪ್ರಕರಣ ಅಷ್ಟೇ ಅಲ್ಲ, ದೇವರ ಹೆಸರಿನಲ್ಲಿ ನರಬಲಿಗಳು ಆಗುತ್ತಿವೆ. ಅದೊಂದು ರೀತಿಯ ಫ್ಯೂಡಲ್ ಮನೋಭಾವದ ಮುಂದುವರಿಕೆ. ಶಿಕ್ಷಣದ ಮಟ್ಟ ಎಷ್ಟೇ ಏರುತ್ತಿದ್ದರೂ ನವ ಬಂಡವಾಳಶಾಹಿ ಮೂಢನಂಬಿಕೆಯ ಹೊಸ ಹೊಸ ರೂಪವನ್ನು ಹುಟ್ಟುಹಾಕುತ್ತಿದೆ. ಅದರ ವಿರುದ್ಧದ ಹೋರಾಟ ನಿರಂತರವಾಗಿ ಸಾಗಬೇಕು. ಒಂದೇ ದಿನದಲ್ಲಿ ಬದಲಾವಣೆ ಮೂಡಿಬರುವುದಿಲ್ಲ. ನಮ್ಮಲ್ಲಿ ನಾರಾಯಣ ಗುರು ಮುಂತಾದವರ ಸಮಾಜ ಸುಧಾರಣೆಯ ಒಂದು ಪರಂಪರೆಯೇ ಇದೆ. ಬಂಡವಾಳಶಾಹಿ ವ್ಯವಸ್ಥೆಯಿಂದ ಜನರು ಐಷಾರಾಮದ ಬದುಕನ್ನು ಇಚ್ಛಿಸುತ್ತಾರೆ. ತಮ್ಮ ಅನುಕೂಲಕ್ಕೆ ಮೂಢನಂಬಿಕೆಗಳನ್ನು ಬೆಳೆಸುತ್ತಿದ್ದಾರೆ. ಇದು ನಮಗೆ ನಿಜವಾಗಿಯೂ ತಲೆ ನೋವಿನ ವಿಷಯವಾಗಿದೆ. ನಾನು ಶಿಕ್ಷಕಿಯಾಗಿದ್ದಾಗ ಇಂತಹ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳಲ್ಲಿ ಹಂಚಿಕೊಳ್ಳುತ್ತಿದ್ದೆ.

**ಹೊಸತು:** ಕರ್ನಾಟಕ, ಮಹಾರಾಷ್ಟ್ರದಲ್ಲಿ ಹಲವಾರು ಹೋರಾಟದ ಪರಿಣಾಮವಾಗಿ ಮೂಢನಂಬಿಕೆ ವಿರೋಧಿ ಮಸೂದೆಯನ್ನು ಜಾರಿಗೆ ತರಲಾಗಿದೆ. ಕೇರಳದಲ್ಲಿ ಅಂತಹ ಪ್ರಯತ್ನಗಳು ನಡೆದಿವೆಯೇ?

**ಶೈಲಜ:** ಅಂತಹ ಮಸೂದೆಯಿಲ್ಲ. ತರಬೇಕೆಂಬ ಯೋಚನೆಯೇನೋ ಇದೆ.

**ಹೊಸತು:** ನಿಮ್ಮ ಅವಧಿಯಲ್ಲಿ ಆರಂಭವಾದ 'ಜೆಂಡರ್ ಪಾರ್ಕ್' ಕುರಿತು ಸ್ವಲ್ಪ ಹೇಳುತ್ತೀರಾ?

**ಶೈಲಜ:** ಜೆಂಡರ್ ಪಾರ್ಕ್ ಯೋಜನೆ ಒಂದು ಮಾಸ್ಟರ್ ಪ್ಲಾನ್. ಇಡೀ ದೇಶದಲ್ಲಿಯೇ ಮೊದಲನೆಯದಾದ ವಿಶಿಷ್ಟವಾದ ಯೋಜನೆ. ನಾನು ಸಚಿವೆಯಾಗುವುದಕ್ಕೂ ಮುಂಚೆಯೇ ಆರಂಭವಾಗಿದ್ದರೂ ಹೆಚ್ಚು ಕೆಲಸ ನಡೆದಿರಲಿಲ್ಲ. ಇದು 300 ಕೋಟಿ ರೂಪಾಯಿಗಳ ಮಹತ್ವಾಕಾಂಕ್ಷಿ ಯೋಜನೆ. ಸರ್ಕಾರ ಈ ಯೋಜನೆಗೆ 25 ಎಕರೆ ಭೂಮಿಯನ್ನು ನೀಡಿದ್ದಲ್ಲದೆ, 25 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿತ್ತು. ಅದರಲ್ಲಿ ಮೂರು ಟವರ್‌ಗಳನ್ನು ಕಟ್ಟಿದ್ದೆವು. ಟವರ್ ಅಂದರೆ ಆ ಕಟ್ಟಡದೊಳಗೆ ಮಹಿಳೆಯರಿಗೆ ಸಂಬಂಧಪಟ್ಟಂತೆ ಹೊಸ ಹೊಸ ಸಮಕಾಲೀನವಾಗಿ ಮೌಲಿಕವಾದ ಸಂಗತಿಗಳನ್ನು ಪರಿಚಯಿಸುವ ಉದ್ದೇಶವಿತ್ತು. ಇದಕ್ಕೆ ವಿಶ್ವಸಂಸ್ಥೆಯ ಸಹಯೋಗವನ್ನೂ ಪಡೆದುಕೊಂಡಿದ್ದೆವು. ಮಹಿಳೆಯರಿಗೆ ಅವರ ಚಟುವಟಿಕೆಗಳನ್ನು ನಡೆಸಿಕೊಳ್ಳಲು ಅವರದೇ ಆದ ಸ್ಪೇಸ್, ಬೇರೆ ದೇಶಗಳ ಮಹಿಳೆಯರೊಂದಿಗೆ ಸಂಪರ್ಕ–ಸಂಬಂಧಗಳಿಗೆ ಅನುಕೂಲ, ಬೇರೆ ದೇಶಗಳಿಗೆ ಓದಲು ಮತ್ತು ದುಡಿಯಲು ಹೋಗುವ ಮಹಿಳೆಯರಿಗೆ ಅನುಕೂಲವಾಗುವಂತೆ ವಿದೇಶಿ ಭಾಷೆಗಳಲ್ಲಿ ತರಬೇತಿ ಕೇಂದ್ರ – ಇವನ್ನೆಲ್ಲಾ ಮಾಡುವ ಯೋಜನೆಗಳಿದ್ದವು. ಮುಖ್ಯವಾಗಿ ಸಾಮಾಜಿಕ ವ್ಯವಹಾರಕ್ಕೆ ಅನುವು ಮಾಡಿಕೊಡುವುದು. ಇವತ್ತು ಸಾಮಾಜಿಕ ವ್ಯವಹಾರ ತುಂಬ ಜನಪ್ರಿಯವಾದ ಪರಿಕಲ್ಪನೆಯಾಗಿದೆ. ಹಾಗೆಯೇ ನಮ್ಮ ಪಾರಂಪರಿಕ ಕೇಂದ್ರವನ್ನು ಸ್ಥಾಪಿಸುವುದು. ಅಂದರೆ, ನಮ್ಮ ಮಹಿಳೆಯರ ಸ್ವದೇಶಿ ಜ್ಞಾನ ಮತ್ತು ಅನುಭವವನ್ನು ಬಳಸಿಕೊಂಡು ತಯಾರಿಸುವ ಉತ್ಪನ್ನಗಳು. ನಮ್ಮ ಗಿರಿ ಜನರು ಅರಣ್ಯ ಪ್ರದೇಶಗಳ ಉತ್ಪನ್ನಗಳಿಂದ ತಯಾರಿಸುವ ಕರಕುಶಲ ವಸ್ತುಗಳು, ವನಸ್ಪತಿಯ ಔಷಧಗಳು ಮತ್ತು ಪದಾರ್ಥಗಳ ಜ್ಞಾನವನ್ನು ಸಂರಕ್ಷಿಸುವ ವ್ಯವಸ್ಥೆಯನ್ನು ಮಾಡಲು ಯೋಜಿಸಲಾಗಿತ್ತು. ಅಲ್ಲಿ ಒಂದು ದೊಡ್ಡ ಸಭಾಭವನವನ್ನು ಕಟ್ಟಲಾಗಿದೆ. ಚಿಕ್ಕದಾದರೂ ಒಂದು ಮ್ಯೂಸಿಯಂಗೆ ವ್ಯವಸ್ಥೆ ಮಾಡಲಾಗಿದೆ. ಡಿಜಿಟಲ್ ಗ್ರಂಥಭಂಡಾರವಿದೆ. 2021ರ ಫೆಬ್ರವರಿಯಲ್ಲಿ 'ಲಿಂಗ ಸಮಾನತೆ'ಯ ವಸ್ತುವನ್ನಿಟ್ಟುಕೊಂಡು ಒಂದು ವಿಶ್ವ ಮಹಿಳಾ ಸಮ್ಮೇಳನವನ್ನು ಆಯೋಜಿಸಿದ್ದೆವು. ಅದರಲ್ಲಿ ಮುಖ್ಯವಾಗಿ ಮಹಿಳೆಯರು 'ಸಾಮಾಜಿಕ ವ್ಯವಹಾರ'ವನ್ನು ನಡೆಸುವುದರ ಬಗ್ಗೆ ಚರ್ಚೆ ಮಾಡಲಾಯಿತು. ಕರೋನಾ ಸಮಸ್ಯೆಯಿಂದಾಗಿ ಅದರಲ್ಲಿ ಹೆಚ್ಚು ದೇಶಗಳು ಭಾಗವಹಿಸಲಿಲ್ಲ. ಆದರೂ ಕೆಲವು ರಾಷ್ಟ್ರಗಳು ಆನ್ ಲೈನ್‌ನಲ್ಲಿ ಭಾಗವಹಿಸಿದ್ದವು. ಆದರೆ ಒಂದೂವರೆ ವರ್ಷಗಳ ಕಾಲಕ್ಕಿಂತಲೂ ಹೆಚ್ಚು ಸಮಯ ಕಾಡಿದ ಕೊರೋನಾದ ಹಾವಳಿಯಿಂದ ಈ ಯೋಜನೆ ಸ್ಥಗಿತಗೊಂಡಿದೆ. ಅದನ್ನು ಈಗ ಮುಂದುವರೆಸಬೇಕಾಗಿದೆ.

**ಹೊಸತು:** ನೀವು ಎರಡು ಪುಸ್ತಕಗಳನ್ನು ಬರೆದಿದ್ದೀರಲ್ಲಾ, ಅದನ್ನು ಕುರಿತು ಹೇಳುವಿರಾ?

**ಶೈಲಜಾ:** ನಾನು ಎರಡು ಪುಸ್ತಕಗಳನ್ನು ಬರೆದಿದ್ದೀನಿ. ಒಂದು 'ವರ್ತಮಾನವುಮ್ ಸ್ತ್ರೀಸಮೂಹವಮ್' ಎನ್ನುವುದು ಲೇಖನಗಳ ಸಂಗ್ರಹ. ಕೇರಳದ ಜನವಾದಿ ಮಹಿಳಾ ಸಂಘಟನೆಯ ಮುಖವಾಣಿಯಾದ 'ಸ್ತ್ರೀ ಶಬ್ದಮ್' ನ ಸಂಪಾದಕಿಯಾಗಿ ಕೆಲಸ ಮಾಡುತ್ತಿದ್ದಾಗ ಬರೆದ ಲೇಖನಗಳ ಸಂಗ್ರಹ ಅದು. ಮತ್ತೊಂದು ಚೀನ ರಾಷ್ಟ್ರಮ್, ರಾಷ್ಟ್ರೀಯಮ್, ಕಳಚ' . ನಾನು ಪಕ್ಷದ ಇತರ ನಾಯಕರೊಂದಿಗೆ ಚೀನಾ ಪ್ರವಾಸ ಮಾಡಿದ್ದೆ. ಆ ನನ್ನ ಪ್ರವಾಸ ಕಥನ ಮತ್ತು ಚೀನಾ ಚರಿತ್ರೆಯನ್ನು ಕುರಿತ ನನ್ನ ಚಿಂತನೆಗಳು ಈ ಪುಸ್ತಕದಲ್ಲಿ ಸಿಕ್ಕುತ್ತವೆ. ಚೀನಾದ ಬಗ್ಗೆ ಹಲವಾರು ಕಪೋಲ ಕಲ್ಪಿತ ಕತೆಗಳನ್ನು ಕೇಳಿದ್ದ ನನಗೆ ಅಲ್ಲಿಗೆ ಹೋದ ಮೇಲೆ ವಾಸ್ತವವೇ ಬೇರೆ ಅನ್ನಿಸಿತು. ಚೀನಾ ದೇಶದ ಬಗ್ಗೆ, ಅಲ್ಲಿನ ಚರಿತ್ರೆ ಮತ್ತು ರಾಜಕೀಯದ ಬಗ್ಗೆ ಅದನ್ನು ಕುರಿತು ಬರೆದಿದ್ದೇನೆ.

ಅಲೆಕ್ಸಾಂಡ್ರಾ ಕೊಲಂತೈ ಬಗ್ಗೆ ಬರೆದಿರುವೆ. ಅವಳ ವಿಚಾರಗಳ ಬಗ್ಗೆ ನನಗೆ ತುಂಬ ಆಸಕ್ತಿಯಿದೆ. ಹಾಗೆಯೇ ಗೌರವೂ ಇದೆ. ಅವಳು ಸ್ತ್ರೀವಾದ ಎಂದರೇನು ಎನ್ನುವುದನ್ನು ಸ್ಪಷ್ಟವಾಗಿ ವಿವರಿಸುತ್ತಾಳೆ. ನೂರು ವರ್ಷಗಳಿಗೂ ಹಿಂದೆಯೇ 1907, 1910 ಮತ್ತು 1911ರಲ್ಲಿ ವಿಶ್ವ ಮಹಿಳಾ ಸಮ್ಮೇಳನದಲ್ಲಿ ಭಾಗವಹಿಸಿದ್ದಾಗ ನಡೆದ ಚರ್ಚೆಯನ್ನು ಉದಾಹರಿಸಿ ಹೇಳುವ  ಸಮಾಜವಾದಿ ಸ್ತ್ರೀವಾದ ಮತ್ತು ಬೂರ್ಷ್ವಾ ಸ್ತ್ರೀವಾದವನ್ನು ಕುರಿತು ಅವರು ಹೇಳುವ ವಿಚಾರಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೆಣ್ಣಿಗೆ ಲೈಂಗಿಕ ಸ್ವಾತಂತ್ರ್ಯ ಇರಬೇಕು ಎನ್ನುವ ಅವಳ ಮಾತನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. ಈ ಕುರಿತ ಅವಳ ವಿಚಾರಗಳ ಬಗ್ಗೆ ನನಗೆ ಒಪ್ಪಿಗೆಯಿದೆ. ಗಂಡ ಹೆಂಡತಿಯ ಸಂಬಂಧವು ಸಂಗಾತಿತನದ್ದಾಗಿರಬೇಕು, ಎನ್ನುವುದು ಅವಳ ಮುಖ್ಯ ವಾದ.

**ಹೊಸತು:** ಮಹಿಳಾ ಮೀಸಲಾತಿಯನ್ನು ಲೋಕಸಭೆಯಲ್ಲಿ ಮಂಡಿಸುವುದಾಗಲಿ, ಚರ್ಚಿಸುವುದಾಗಲಿ ಮಾಡದೇ ಒಂದು ದಶಕವೇ ಸರಿದು ಹೋಗಿದೆ. ಮಹಿಳಾ ಸಂಘಟನೆಗಳು ಈ ವಿಷಯವನ್ನು ಮುನ್ನೆಲೆಗೆ ತರುತ್ತಿಲ್ಲ. ಒಂದು ರೀತಿಯಲ್ಲಿ ಅದು ನೆನೆಗುದ್ದಿಗೆ ಬಿದ್ದಿದೆ. ಇದಕ್ಕೆ ಏನು ಹೇಳುವಿರಿ?

**ಶೈಲಜ:** ಹೌದು. ಆಳುವ ಸರ್ಕಾರದ ನೀತಿಯೇ ಹಾಗಿದೆ. ಅದರಲ್ಲಿ ಬದಲಾವಣೆಯೇ ಆಗಿಲ್ಲ. ಫ್ಯೂಡಲ್ ಸಂಸ್ಕೃತಿ ಹಾಗೆಯೇ ಮುಂದುವರಿಯುತ್ತದೆ. ಜೊತೆಗೆ ಬಂಡವಾಳಶಾಹಿ ಸಂಸ್ಕೃತಿಯೂ ಸೇರಿಕೊಂಡಿದೆ. ಇನ್ನು ಮಹಿಳಾ

ಸಂಘಟನೆಗಳು ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಇದನ್ನು ಒಂದು ಹಕ್ಕೊತ್ತಾಯವಾಗಿ ಮಂಡಿಸುತ್ತಿದ್ದಾರೆ. ಇಷ್ಟೇ ಸಾಲದು ಎನ್ನುವುದು ನನಗೆ ಗೊತ್ತು. ಮಹಿಳೆಯರ ಐಕ್ಯತೆಯೇ ಇಂದು ಅಪಾಯದಲ್ಲಿದೆ. ಎಲ್ಲರೂ ಒಟ್ಟಾಗಿ ಹೋರಾಡದ ಹೊರತು ಸರ್ಕಾರದ ಮೇಲೆ ಒತ್ತಡ ತರಲು ಸಾಧ್ಯವಿಲ್ಲ. ಮೊದಲಿಗೆ ಪ್ರಜಾಪ್ರಭುತ್ವದ ನಿಜವಾದ ಅಂತಸ್ಸತ್ವವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಆಗ ಮಾತ್ರ ಈ ಮೀಸಲಾತಿಯ ಅಗತ್ಯ ಅರ್ಥವಾಗುತ್ತದೆ.

**ಹೊಸತು:** ಮೇಡಂ, ಪ್ರಧಾನ ವಾಹಿನಿಯ ಮಹಿಳಾ ಚಳುವಳಿಗಳು ಜಾತಿ ಪ್ರಶ್ನೆಯನ್ನು ಗಮನಿಸಿಲ್ಲ, ಎಂಬ ಆರೋಪವಿದೆ. ಇದು ನಿಜವಾ? ನಿಜ ಎನ್ನುವುದಾದರೆ, ಆಗ ಅದಕ್ಕಾಗಿ ಏನು ಮಾಡಬೇಕು?

**ಶೈಲಜ:** ಹಿಂದಿನಿಂದಲೂ ಜಾತಿ ಸಮಸ್ಯೆಯು ನಮ್ಮ ಸಾಮಾಜಿಕ ಬದುಕನ್ನು ಪೆಡಂಭೂತವಾಗಿ ಕಾಡುತ್ತಿದೆ. ಪ್ರಜಾಪ್ರಭುತ್ವಕ್ಕೆ ದೊಡ್ಡ ಶಾಪವಾಗಿ ಪರಿಣಮಿಸಿದೆ. ಇತ್ತೀಚೆಗೆ 'ಅಸ್ಮಿತೆಯ ರಾಜಕೀಯ'ದಿಂದಾಗಿ ಪ್ರತ್ಯೇಕ ದಲಿತ ಮಹಿಳಾ ಚಳುವಳಿಯ ಬಗ್ಗೆ ಮಾತುಗಳು ಹೆಚ್ಚು ಕೇಳಿಬರುತ್ತಿವೆ. ಇದು ಹಿಂದುತ್ವವಾದಿಗಳಿಗೆ ಅನುಕೂಲವಾಗಿದೆ. ಹಿಂದೆ, ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲೂ ಜಾತಿ ವಿನಾಶದ ಹೋರಾಟಗಳು ನಡೆದಿವೆ. ಅಂಬೇಡ್ಕರ್ ಅವರೂ ಜಾತಿ ವಿನಾಶದ, ಮಹಿಳೆಯರ ಹೋರಾಟವನ್ನು ಕೈಗೆತ್ತಿಕೊಂಡಿದ್ದರು. ಆ ಸಂದರ್ಭದಲ್ಲಿ ಮಹಿಳಾ ಶಕ್ತಿ ಒಂದಾಗಿದ್ದರಿಂದಲೇ ಸ್ವಾತಂತ್ರ್ಯ ಪಡೆಯುವುದಕ್ಕೆ ಸಾಧ್ಯವಾಯಿತು. ಮಹಿಳಾ ಶೋಷಣೆಯ ವಿರುದ್ಧ ಹೋರಾಡುವುದು ಮತ್ತು ಜಾತಿ ವಿರುದ್ಧ ಹೋರಾಡುವುದು ಪ್ರಜಾಪ್ರಭುತ್ವ ಚಳುವಳಿಯ ಭಾಗವಾಗಬೇಕು. ಜಾತಿ ಸಮಸ್ಯೆಯ ವಿರುದ್ಧ ನಾವು ಎಲ್ಲರನ್ನೂ ಸಂಘಟಿಸಬೇಕು.

**ಹೊಸತು:** ವಂದನೆಗಳು ಮೇಡಂ.

ಕೃಪೆ: ಹೊಸತು

# ಬೀಡಿ ಕಾರ್ಮಿಕರ ಬವಣೆಗಳು

ಶಹತಾಜ್

ನಮಸ್ಕಾರ ನನ್ನ ಹೆಸರು ಹೆಸರು ಶಾಹತಾಜ್ ನಾನು ಬೀಡಿ ಕಾರ್ಮಿಕಳಾಗಿದ್ದೆನೆ. ಮೂಲತಃ ನಾನು ಬೀಡಿ ಕಾರ್ಮಿಕ ಕುಟುಂಬದಲ್ಲಿ ಹುಟ್ಟಿದವಳು ನನಗೆ ಮನೆಯಲ್ಲಿದ್ದ ಬಡತನದ ಕಾರಣ ಸ್ಕೂಲನ್ನು 4–5 ಕ್ಲಾಸ್ಗೆ ಬಿಡಿಸಿದರು. ನನಗೆ ಬುದ್ಧಿ ಬಂದಾಗ್ಲಿಂದನು ನಾನು ಬೀಡಿ ಎಲೆ, ತಂಬಾಕು, ದಾರ ಬೀಡಿ ಕಟ್ಟೋ ಮರ ಇದರ ಜೊತೆಗೆ ನನ್ನ 48–50 ವರ್ಷಗಳ ಜೀವನ ಸವೆಸಿದ್ದೆನೆ. ನಾನು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ (ರಿ.) ಸಿಐಟಿಯು ಅಧ್ಯಕ್ಷೆಯಾಗಿದ್ದೇನೆ. ಈಗ ನನಗೆ ಪಿಂಚಣಿ ಬರಬೇಕು ಅರ್ಜಿ ಸಲ್ಲಿಸಿ ಪಿಂಚಣಿಗಾಗಿ ಕಾಯುತ್ತಿದ್ದೇನೆ. ಬೀಡಿ ಉದ್ಯಮ ನನ್ನಂತಹ ಲಕ್ಷಾಂತರ ಜನ ಹೆಣ್ಣುಮಕ್ಕಳಿಗೆ, ಒಂಟಿ ಮಹಿಳೆಯರಿಗೆ ಜೀವನ ನಿರ್ವಹಣೆಯ ಮಾರ್ಗ, ನಮ್ಮ ತುತ್ತಿನ ಚೀಲ ತುಂಬುವ ದಾರಿಯಾಗಿ ದಶಕಗಳಿಂದ ಇತ್ತು ಅದರೆ ಈಗ ಪರಿಸ್ಥಿತಿ ಬದಲಾಗಿದೆ

ಬೀಡಿ ಕೈಗಾರಿಕೆಯ ಪರಿಸ್ಥಿತಿ; ದೇಶಲ್ಲಿ ಬೀಡಿ ಉದ್ಯಮವನ್ನು ನಂಬಿ ಬದುಕು ಸಾಗಿಸುವ ಬೀಡಿ ಕಾರ್ಮಿಕರು, ತಂಬಾಕುಕಾರ್ಮಿಕರು, ದಾರ.ದಾರಕ್ಕೆ ಬಣ್ಣಹಾಕುವ, ಲೇಬಲ್ ಮುದ್ರಿಸುವ, ಲೇಬಲ್ ಹಾಕುವ ಕಾರ್ಮಿಕರು, ಮಾರಾಟ ಮಾಡುವವರು ಸೇರಿ 16–17 ರಾಜ್ಯಗಳಲ್ಲಿ ಸರಿ ಸುಮಾರು 3 ಕೋಟಿ ಜನರಿದ್ದಾರೆ. ರಾಜ್ಯದಲ್ಲಿ 23 ಜಿಲ್ಲೆಗಳಲ್ಲಿ ಸರಿ ಸುಮಾರು 7–8 ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ಅದರಲ್ಲಿ 99% ರಷ್ಟು ಮಹಿಳೆಯರು ಕರಾವಳಿ ಪ್ರದೇಶದಲ್ಲಿ ಎಲ್ಲಾ ಧರ್ಮಿಯರು ಬೀಡಿ ಕಟ್ಟಿದರೆ, ಘಟ್ಟದಿಂದ ಈಚೆಗೆ ಬಹುಪಾಲು ಮುಸ್ಲಿಂ ಮಹಿಳೆಯರೆ ಇದ್ದಾರೆ. ತುಮಕೂರು ಜಿಲ್ಲೆಯಲ್ಲಿ ಸಹ ಬೀಡಿ ಉದ್ಯಮವು ಹಾಲಿ 60–70 ಸಾವಿರ ಕುಟುಂಬಗಳಿಗೆ ಅನ್ನದ ದಾರಿಯಾಗಿದೆ.

ಬೀಡಿ ಉದ್ಯಮದ ಮತ್ತು ಕಾರ್ಮಿಕರ ಸ್ಥಿತಿ; " ತಂಬಾಕು ಮುಕ್ತ ಜಗತ್ತು–2020"ದ ಒಡಂಬಡಿಕೆ ಭಾರತ ಸರ್ಕಾರವು ಅಟಲ್ ಬಿಹಾರಿ ವಾಜಪಾಯಿ ಅವರು ಪ್ರಧಾನಿ ಅಗಿದ್ದಾಗ ಸಹಿ ಹಾಕಿತು. ಅದಾದ ನಂತರ ದೇಶದಲ್ಲಿ ಕೋರ್ಟಗಳಲ್ಲಿ ಸಹ ಧೂಮ ಪಾನ ನಿಷೇಧ ಪರ ತೀರ್ಪು ಮತ್ತು ಹೆಚ್ಚುತಿರುವ ಆರೋಗ್ಯ ಕಾಳಜಿಯ ನಡುವೆಯು ಬೀಡಿ ಮತ್ತು ತಂಬಾಕು ಉತ್ಪನ್ನಗಳು ದೇಶ–ರಾಜ್ಯದಲ್ಲಿ ಬೀಡಿ ಉತ್ಪಾದನೆಯು ನಡೆಯುತ್ತಿದೆ. ಬೀಡಿ ಬಳಕೆಗೆ (ಸೇದುವುದು / ಮಾರಾಟಕ್ಕೆ) ಸರ್ಕಾರ ಸಾಕಷ್ಟು ಕಠಿಣ ನಿರ್ಬಂಧದ ಕ್ರಮಗಳ ನಡುವೆಯು ಬೀಡಿ ಮಾಲೀಕರು ಉತ್ಪಾಧನೆಯನ್ನು ನಡೆಸುತ್ತಲೆ ಇದ್ದಾರೆ. ಬೀಡಿ ಉದ್ಯಮದ ಮೇಲಷ್ಟೆ ಅವಲಂಭಿತವಾಗಿರುವ ಕಾರ್ಮಿಕರ ಸಂಖ್ಯೆಯಲ್ಲಿ ಇಳಿಕೆ ಯಾಗುತ್ತಲೆ ಇದೆ. ಬೀಡಿ ಕಾರ್ಮಿಕರಿಗೆ ಕಡಿಮೆ ಕೂಲಿ ಇರುವ ಕಾರಣ ಇತರೆ ಹೆಚ್ಚಿನ ಕೂಲಿ ನೀಡುವ ಕೆಲಸಗಳಿಗೆ ವಲಸೆಯು ನೆಡೆಯುತ್ತಿದೆ. ಪರಿಸ್ಥಿತಿಯ ಲಾಭ ಪಡೆಯುತ್ತಿರುವ ಮಾಲಿಕರು ಕಾನೂನು ಬದ್ದವಾಗಿ ಇರುವ ಕಾರ್ಮಿಕರಿಗೆ 2–3 ದಿನಗಳ ಕೆಲಸವಷ್ಟೆ ನಿಡುತ್ತಿದ್ದಾರೆ. ಕಾನೂನು ಬದ್ದವಲ್ಲದ ಬೀಡಿ ಕೆಲಸವು ಹೆಚ್ಚು ನಡೆಯುತ್ತಿದೆ. ಕಾರ್ಮಿಕರ ಕನಿಷ್ಟ ಕೂಲಿ ನೀಡುತ್ತಿಲ್ಲ. ರಾಜ್ಯದ ಬೀಡಿ ಉದ್ಯಮವು ದಿನದಿಂದ ದಿನಕ್ಕೆ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿದೆ. ಬೀಡಿ ಕೆಲಸವನ್ನು ಹಲವು ದಶಕಗಳಿಂದ ನಂಬಿದ್ದ ಬೀಡಿ ಕಾರ್ಮಿಕರಿಗೆ ಪರಿಯರ್ಾಯ ಉದ್ಯೋಗ–ಪರಿಹಾರ ರೂಪಿಸುವ ನಿಟ್ಟಿನಲ್ಲಿ ಸರ್ಕಾರಗಳಿಗೆ ಕಿಂಚಿತ್ತು ಅಸಕ್ತಿಯೆ ಇಲ್ಲದಂತಾಗಿದೆ. ಇದರಿಂದ ಕೊಟ್ಯಾಂತರ ಕಾರ್ಮಿಕರು ಸಂಕಟದ ಬದಕುನ್ನು ಸಾಗಿಸುವಂತಾಗಿದೆ.

ಧೂಮಪಾನ ನಿಷೇಧದ ಜಾರಿಯಿಂದ ನಿರಂತರವಾಗಿ ಬೀಡಿ ಮಾರಾಟಕ್ಕೆ ತೊಂದರೆಯಾಗುತ್ತಿದ್ದು, ಇದರ ಪರಿಣಾಮ ಬೀಡಿ ಕೆಲಸದ ಮೇಲೆ ಬೀಳುತ್ತಿದೆ. ಹಾಗಾಗಿ ಬೀಡಿ ಕಾರ್ಮಿಕರಿಗ ಪೂರ್ಣ ಕೆಲಸ ಇಲ್ಲದ ಸ್ಥಿತಿ ಕೆಲವೆಡೆ ಇದೆ. ಮಂಗಳೂರು, ಉಡುಪಿ ತುಮಕೂರು ಇತರೆಡೆ ವಾರದಲ್ಲಿ 2–3 ದಿನದ ಕೆಲಸಮಾತ್ರ ಸಿಗುತ್ತಿದೆ. ಮತ್ತೆ ಕೆಲವೆಡೆಗಳಲ್ಲಿ ಕಾನೂನು ಸೌಲಭ್ಯ ನೀಡದ ಬೀಡಿ ಫ್ಯಾಕ್ಟರಿಗಳು ಕೆಲಸವನ್ನು ಸಾಕಷ್ಟು ನೀಡುತ್ತಿರುವ ಅನುಭವಗಳು ಇರುವುದನ್ನು ಗಮನಿಸಬಹುದಾಗಿದೆ.

ಸರ್ಕಾರ ನಿಗಧಿಗೊಳಿಸಿರುವ ಕನಿಷ್ಟ ಕೂಲಿಯುನ್ನು ರಾಜ್ಯದ ಉಚ್ಚನ್ಯಾಯಲಯದಲ್ಲಿ ಮಾಲೀಕರು ಪ್ರಶ್ನಿಸಿರುವುದರಿಂದ ಜಾರಿಯಾಗದ ಸ್ಥಿತಿ ಕಳೆದ 5–6 ವರ್ಷಗಳಿಂದ ಇದೆ. ಅದು ಹಿಂದಿನ ತುಟ್ಟಿಭತ್ಯೆ ವಿಚಾರದಲ್ಲಿ ಸಹ ನ್ಯಾಯಲಯದಲ್ಲಿ ಮೊಕದ್ದಮೆಯು ಇರುವ ಕಾರಣ ಅದು ಸಹ ಕಾರ್ಮಿಕರಿಗೆ ಸಿಗದೆ ಹಾಗೆ ಬಾಕಿಯಾಗಿದೆ.

ಬಿಡಿಕಾರ್ಮಿಕರ ಪರ್ಯಾಯ& ಪರಿಹಾರದ ಜೊತೆ ಜೊತೆಯಲ್ಲಿ ಬೀಡಿ ಉದ್ಯಮದ ಕನಿಷ್ಟ ಕೂಲಿಯನ್ನು ಪರಿಷ್ಕರಿಸಿ 5 ವರ್ಷಗಳು ಸಂದಿರುವ ಕಾರಣ ಅದನ್ನು ಬೆಲೆ ಏರಿಕೆಗೆ ಅನುಗುಣವಾಗಿ ಹೆಚ್ಚಿಸಲು ಸಹ ಸರ್ಕಾರ ಅಸಕ್ತಿ ತೋರುತ್ತಿಲ್ಲ. ಪಕ್ಕದ ಕೇರಳ ರಾಜ್ಯದಲ್ಲಿ ಅಲ್ಲಿನ ಕಮ್ಯುನಿಸ್ಟ್ ಸರ್ಕಾರ ಬೀಡಿ ಕಾರ್ಮಿಕರಿಗೆ ಉತ್ತಮ ಸೌಲಭ್ಯಗಳನ್ನು ನೀಡಿದೆ. ನಮ್ಮ ರಾಜ್ಯದಲ್ಲಿ ಅದು ಸಿಗುತ್ತಿಲ್ಲ.

ಹೋರಾಟಗಳಿಂದ ಗಳಿಸಿದ ಕಲ್ಯಾಣ ಕಾರ್ಯಕ್ರಮಗಳ– ನಿಲ್ಲಿಸದ ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ ನಡೆ: ಬೀಡಿ ಕಾರ್ಮಿಕರ ಕಲ್ಯಾಣ ಕರ ಸಂಗ್ರಹವನ್ನು ನಿಲ್ಲಿಸಲಾಗಿದೆ. ಬೀಡಿ ಕಾರ್ಮಿಕರ ಕ್ಷೇಮಾಬಿವೃದ್ದಿ ನಿಧಿ ಇಲ್ಲದ ಕಾರಣ ವಿಧ್ಯಾರ್ಥಿ ವೇತನ ಒಂದನ್ನು ಬಿಟ್ಟು ಉಳಿದ ಸೌಲಭ್ಯಗಳನ್ನು ನಿಲ್ಲಿಸಲಾಗಿದೆ. ಹೃದಯ, ಕಿಡ್ನಿ, ಕ್ಯಾನ್ಸರ್, ಮತ್ತಿತರೆ ಭಿಕರ ಕಾಯಿಲೆಗಳ ಚಿಕಿತ್ಸ ವೆಚ್ಚದ ಮರು ಪಾವತಿ, ಮತ್ತು ಮನೆ ಕಟ್ಟಲು ಇದ್ದ ಸಾಲ ಸೌಲಭ್ಯ ಮತ್ತು ಸಬ್ಸಿಡಿ, ಕನ್ನಡಕ ಕೊಳ್ಳಲು ಇದ್ದ ಸಹಾಯ, ಫಿ.ಎಫ್ ಇಲ್ಲದೆ ಗುರುತಿನ ಚೀಟಿ ಇರುವ ಬೀಡಿ ಕಾರ್ಮಿಕರ ಮರಣಕ್ಕೆ 10,000 ಸಹಾಯ ಧನ ಹೀಗೆ ಇದ್ದ ಎಲ್ಲಾ ಸೌಲಭ್ಯಗಳು ನಿಂತಿದೆ, ದೇಶದ ಬೀಡಿ ಕಾರ್ಮಿಕರಿಗೆ ಇದ್ದ ಈ ಸೌಲಭ್ಯಗಳನ್ನು ಕಸಿದಿರುವುದರ ವಿರುದ್ದ ಬೀಡಿ ಕಾರ್ಮಿಕರು ಅಲ್ಲಲ್ಲಿ ಪ್ರತಿರೋಧ ತೋರುತ್ತಿದ್ದಾರೆ. ಬೀಡಿ ಕಾರ್ಮಿಕರರು ಕೇಂದ್ರ ಸರ್ಕಾರ ಈ ಸೌಲಭ್ಯಗಳನ್ನು ಮರು ಸ್ಥಾಫಿಸುವಂತೆ ನಿರಂತರವಾದ ಚಳುವಳಿ ನಡೆಯುತ್ತಿವೆ.

ದೇಶದಲ್ಲಿ ಇದ್ದ ಬೀಡಿ ಕಾರ್ಮಿಕರ 237 ಸಂಚಾರಿ ಚಿಕಿತ್ಸಾಲಯಗಳು ಹಾಗು 11 ಕೇಂದ್ರ ಅಸ್ಪತ್ರೆಗಳನ್ನು ಕಾರ್ಮಿಕರ ರಾಜ್ಯ ವಿಮಾ ಯೋಜನೆ (ಇಎಸ್ಐ) ಗೆ ವರ್ಗವಣೆಯ ಕಾರ್ಯ ಪೂರ್ಣಗೊಂಡಿದೆ. ಈ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯಲು ಬೀಡಿ ಕಾರ್ಮಿಕರು ಇ.ಎಸ್.ಐ ಕಾರ್ಡಗಳನ್ನು ಪಡೆಯುವುದು ಅಗತ್ಯವಾಗಿದೆ. ಕಾರ್ಡಗಳನ್ನು ಸರ್ಕಾರ ನೀಡುತಿಲ್ಲ. ಈ ಬಗ್ಗೆ ಸಿಐಟಿಯು ನಿಂದ ಇಎಸ್ಐ ಕೇಂದ್ರ ಸಲಹಾ ಸಮಿತಿ ಸದಸ್ಯರಾದ ಸಂಗಾತಿ ಪ್ರಶಾಂತ್ ಎನ್. ಚೌಧರಿ ಇಎಸ್ಐ ಕೇಂದ್ರ ನಿರ್ದೇಶಕರಿಗೆ ಬರೆದ ಪತ್ರಕ್ಕೆ ಪ್ರತಿಕಿಯೆ ನಿಡಿರುವ ಅವರು 10 ಜನಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಮಾಸಿಕ ಸಂಬಳ ರೂ 21000 ಕಡಿಮೆ ಇರುವ ಕಾರ್ಮಿಕರಿಗೆ ಕಾಯಿದೆ ಅನ್ವಯಒಳಗೊಳ್ಳಲಾಗುವುದು. ಬೀಡಿ ಉದ್ಯಮದಲ್ಲಿ ಸಹ ಇದು ಅನ್ವಯವಾಗಲಿದೆ ಎಂದಿರುವ ಅವರು ಅಸಂಘಟಿತ ವಲಯದಡಿಯಲ್ಲಿ ಬರುವ ಬೀಡಿ ಕಾರ್ಮಿಕರಿಗೆ ಇಎಸ್ಐ ಸೌಲಭ್ಯವು ಸಾಮಾಜಿಕ ಸುರಕ್ಷತ ಸಂಹಿತೆ 2020 ರ ಜಾರಿಯ ನಂತರದಲ್ಲಿ ಅಷ್ಟೆ ಎಂದು ಹೇಳುವ ಮೂಲಕ ಜಾರಿಕೊಳ್ಳುವ ಉತ್ತರವನ್ನು ನೀಡಿದೆ.

“ಬೀಡಿ ಕಾರ್ಮಿಕರ ಕಲ್ಯಾಣ ಕಾಯಿದೆ– 1976, “ಬೀಡಿ ಕಾರ್ಮಿಕರ ಸೆಸ್ ಕಾಯಿದೆ– 1970” ಗಳನ್ನು ಸಹ ಕಾರ್ಮಿಕ ಸಂಹಿತೆಯ ಹೆಸರಲ್ಲಿ ಇಲ್ಲದಂತೆ ಮಾಡಲಾಗಿದೆ, ಬೀಡಿ ಕಾರ್ಮಿಕರಿಗೆ ಮತ್ತು ಅವಲಂಬಿತರಿಗೆ ಇದ್ದ ಹಲವು ಸೌಲಭ್ಯಗಳಿಗೆ ಅಗತ್ಯ ಹಣಕಾಸು ಲಭ್ಯತೆ ಇಲ್ಲದೆ ನಿಲ್ಲಿಸಲಾಗುತ್ತಿದೆ. ಅದರೆ ಸರ್ಕಾರ ಮಾತ್ರ ಬೀಡಿ ಕಚ್ಚಾ ವಸ್ತುಗಳಾದ ಬೀಡಿಎಲೆ, ತಂಬಾಕು ಮೇಲೆ ಪತ್ರೇಕ ಪತ್ಯೆಕ ವಾಗಿ ಜಿ.ಎಸ್.ಟಿಯನ್ನುಗರಿಷ್ಟ ಪ್ರಮಾಣದಲ್ಲಿ ವಿಧಿಸಿ ತನ್ನಖಜಾನೆಭರ್ತಿಮಾಡುತ್ತಿದೆ. ಬೀಡಿ ಕೈಗಾರಿಕೆಯಿಂದ ತಮ್ಮ ತುತ್ತಿನ ಚೀಲ ತುಂಬವ ಕೋಟಿ ಜನರಿಗೆ ಕೆಲಸ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಜನರ ದುಡಿಮೆಯಿಂದ ಹತ್ತಾರು ವರ್ಷಗಳಿಂದ ಸಾವಿರಾರು ಕೋಟಿ ತೆರಿಗೆ ಪಡೆದ ಕೇಂದ್ರ ಸರ್ಕಾರ ಬಡ ಬೀಡಿ ಕಾರ್ಮಿಕರಿಗೆ ಪರ್ಯಾಯ ರೂಪಿಸಬೇಕಾದ ಹೊಣೆಗಾರಿಕೆ ಇದೆಯಲ್ಲವೇ?

**ಬೀಡಿ & ಸೀಗಾರ್ ಕಾರ್ಮಿಕರ ಸೇವಾ ಶರತ್ತುಗಳ ಕಾಯಿದೆ– 1966 ಇಲ್ಲವಾಗಿಸಿದ ಕೇಂದ್ರ ಸರ್ಕಾರ:**

ನಮ್ಮ ರಕ್ಷಣೆಗೆ ಹಲವು ಧೀರೋಧಾತ್ತರು ಹೋರಾಟಗಳನ್ನು ನಡೆಸಿ ಬೀಡಿಕಾರ್ಮಿಕರ ಹಿತರಕ್ಷಣೆಗಾಗಿ ತರಲಾಗಿದ್ದ ‘ಬೀಡಿ ಮತ್ತು ಸೀಗಾರ್ ಕಾರ್ಮಿಕರ ಸೇವಾ ಷರತ್ತು ಕಾಯಿದೆ – 1966’ ಅನ್ನು ನೂತನ ಸಂಹಿತೆಗಳ ಹೆಸರಲ್ಲಿ ಇಲ್ಲದೆಂತೆ ಮಾಡಲಾಗಿದೆ. ಇನ್ನು ಮುಂದೆ ಹೊಸ ಸಂಹಿತೆಗಳಲ್ಲಿ ಔದ್ಯೋಗಿಕ ಸುರಕ್ಷತೆ, ಆರೋಗ್ಯ, ಮತ್ತು ಸೇವಾ ಷರತ್ತುಗಳ ಸಂಹಿತೆ – 2020 ರಲ್ಲಿ ವಿಲಿನಗೊಳಿಸಲಾಗಿದೆ. ಇದರಿಂದ ದಶಕಗಳ ಕಾಲ ಹೋರಾಟದಿಂದ ಬೀಡಿ ಕಾರ್ಮಿಕರ ಸೇವಾ ಶರತ್ತುಗಳಿಗೆ ಸಂಬಂದಿಸಿದಂತೆ ಗಳಿಸಿದ ಕಾನೂನಾತ್ಮಕ ರಕ್ಷಣೆಯು ಇನ್ನ ಮುಂದೆ ಇರುತ್ತದೆ ಎಂದು ಹೇಳಲಾಗದು. ಕಾರಣ ಈ ಹೋಸ ಸಂಹಿತೆಯು ಎಲ್ಲಾ ಕಾರ್ಮಿಕರಿಗೆ ಇರುವ ಸಾಮಾನ್ಯ ಕಾಯಿದೆಯಾಗಿದೆ. ಇದು ಬೀಡಿ ಕಾರ್ಮಿಕರಿಗೆ ಇದ್ದ ಸವಲತ್ತುಗಳು & ರಕ್ಷಣೆಗಳು ಈ ಸಂಹಿತೆಯಲ್ಲಿ ಸಿಗಲಾರದು.

ಬೀಡಿ ಕಾರ್ಮಿಕರ ಚಳುವಳಿಗಳ ಪರಿಣಾಮ ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಕಾಯಿದೆ– 1976, ಬೀಡಿ ಕಾರ್ಮಿಕರ ಕಲ್ಯಾಣ ಸೆಸ್ ಕಾಯಿದೆ–1976 ಗಳನ್ನು ರೂಪಿಸಿ ಬೀಡಿ ಕಾರ್ಮಿಕರ ಮತ್ತು ಅವರ ಅವಲಂಬಿತರಿಗೆ ಅರೋಗ್ಯ – ಚಿಕಿತ್ಸೆ, ಮಕ್ಕಳ ಶಿಕ್ಷಣಕ್ಕೆ ನೇರವು, ಮನೆ ಕಟ್ಟಿಕೋಡಲು ಹೀಗೆ ಇದ್ದ ಸೌಲಭ್ಯಗಳಿಗೆ ಅಗತ್ಯ ಆರ್ಥಿಕ ಸಂಪನ್ಮೂಲಗಳ ಸಂಗ್ರಹಕ್ಕೆ ಮತ್ತು ನಿರ್ವಹಣೆಗೆ ಇದ್ದ ಕಾಯಿದೆಯು

ಒಂದು ದೇಶ ಒಂದು ತೇರಿಗೆ ಹೆಸರಲ್ಲಿ ಕೇಂದ್ರದ ಬಿ.ಜೆ.ಪಿ ಸರ್ಕಾರ ಜಿ.ಎಸ್.ಟಿ ಜಾರಿಗೊಳಿಸಿದ ಕಾರಣ ಈ ಕಾಯಿದೆಯು ಇಲ್ಲದಂತಾಗಿದೆ. ಇದರಿಂದ ಬೀಡಿ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನ, ಮತ್ತಿತರೆ ಸೌಲಭ್ಯಗಳಿಗೆ ಹಣಕಾಸು ಲಭ್ಯತೆ ಇಲ್ಲದಂತಾಗಿದೆ. ಯೋಜನೆಗಳು ಅರ್ಧಕ್ಕೆ ನಿಂತಿದೆ, ಇನ್ನು ಸಹ ಕೇಂದ್ರ ಸರ್ಕಾರ ಜಿ.ಎಸ್.ಟಿ ಮೂಲಕ ತಂಬಾಕು ಉತ್ಪನ್ನಗಳ ಮೇಲೆ 28% ಗರಿಷ್ಟ ತೇರಿಗೆ ಹಾಕಲಾಗುತ್ತದೆ. ಅದರೆ ಇದನ್ನು ಬೀಡಿ ಕಾರ್ಮಿಕರ ಕಲ್ಯಾಣ ನೀಧಿಗೆ ನೀಡದೆ ವಂಚಿಸಲಾಗುತ್ತಿದೆ.

ಈ ಹಿಂದೆ ಸಮರಧೀರ ಚಳುವಳಿಗಳನ್ನು ನಡೆಸಿರುವ ಬೀಡಿ ಕಾರ್ಮಿಕ ಮಹಿಳೆಯರು ಬೆಂಗಳೂರು ಚಲೋ, ಮೈಸೂರು ಚಲೋ, ದೆಹಲಿ ಚಲೋಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗಿಯಾಗಿ ತಮ್ಮ ಸಮಸ್ಯೆಗಳ ಇತ್ಯಾರ್ಥಕ್ಕೆ ಮಾಲಿಕರು. ಸರ್ಕಾರಗಳ ವಿರುದ್ದ ಗಟ್ಟಿ ಧ್ವನಿಯನ್ನೆ ಎತ್ತಿದವರು, ತಮಗಾಗಿ ಹಲವು ಕಾನೂನುಗಳನ್ನು ರೂಪಿಸುವಂತೆ ಮಾಡುವಲ್ಲಿ ಯಶಸ್ವಿಯು ಅದರು. ಕನಿಷ್ಟ ಕೂಲಿ, ಬೋನಸ್, ಭವಿಷ್ಯ ನಿಧಿ, ಕಲ್ಯಾಣ ಕಾರ್ಯಕ್ರಮಗಳು, ಗುತ್ತಿಗೆದಾರರ ದಬ್ಬಾಳಿಕೆಗಳ ವಿರುದ್ದವು ಅಂಜದೆ ನಿಂತವರು. ಮಾಲಿಕರ ಚಮಚಾಗಳು ಕಾರ್ಮಿಕರ ದಿಕ್ಕು ತಪ್ಪಿಸುವ ಪ್ರಯತ್ನಗಳನ್ನು ನಡೆಸಿದಾಗ ಗೆರಿಲ್ಲಾ ಮಾದರಿ ಹೋರಾಟಗಳನ್ನು ತುಮಕೂರಿನ ಬೀಡಿ ಕಾರ್ಮಿಕ ಚಳುವಳಿ ನಡೆಸಿರುವುದನ್ನು ನೆಸಪಿಸಬೇಕಾಗುತ್ತದೆ. ಅಂಧಕಾರ ಕವಿದಿರುವ ಬೀಡಿ ಕಾರ್ಮಿಕರ ಬದುಕಿಗೆ ಸರ್ಕಾರಗಳು ಪರ್ಯಾಯ ಉದ್ಯೋಗ ಮತ್ತು ಪರಿಹಾರ ನೀಡುವತ್ತ ತಕ್ಷಣವೆ ಗಮನ ಹರಿಸಬೇಕಾಗಿದೆ.

ಬರಹ ರೂಪ: ಮುಜೀಬ್, CITU

# ಹೆಣ್ಣು–ಬದುಕು–ಸವಾಲುಗಳು



# ಕೈ ಕೈ ಜೋಡಿಸೋಣ

ವಾಣಿ ಪೆರಿಯೋಡಿ

ಎಲ್ಲರಿಗೂ ಮಹಿಳಾ ದಿನದ ಶುಭಾಶಯಗಳು. ರಾಶಿ ರಾಶಿ ಪ್ರೀತಿಯೊಂದಿಗೆ ಎಲ್ಲರಿಗೂ ಸ್ವಾಗತ. ಬಹಳ ಮುಖ್ಯ ದಿನ, ನಮ್ಮ ಪ್ರೀತಿಯನ್ನ, ಒಡನಾಟವನ್ನ, ಬಂಧುತ್ವವನ್ನ ಸಂಭ್ರಮಿಸುವ ದಿನ. ಮಹಿಳಾ ಚೈತನ್ಯ ದಿನ. ಈ ದಿನದ ಅನುಭವವನ್ನು ಸಮೃದ್ಧಗೊಳಿಸಲಿಕ್ಕೆ ಅನೇಕರು ಸೇರಿದ್ದೇವೆ. ವೇದಿಕೆಯ ಮೇಲೆ, ಇಂದಿನ ಅಧ್ಯಕ್ಷತೆ ವಹಿಸಿದವರು ಶ್ರೀಮತಿ ಇಂದಿರಮ್ಮ, ತುಮಕೂರಿನ ಚಿಕ್ಕನಾಯಕನ ಹಳ್ಳಿಯವರು. ಶಿಕ್ಷಕರಾಗಿ ಕೆಲಸಮಾಡಿ ನಿವೃತ್ತರಾದವರು. ಅರಿವಿನ ಪಯಣದ ತಂಡ ಕಟ್ಟಿಕೊಂಡು ಲಿಂಗತ್ವ ಸಮನ್ಯಾಯದ ಪರಿಕಲ್ಪನೆಯನ್ನು ಅತ್ಯಂತ ವಿಶಾಲ ನೆಲೆಯಲ್ಲಿ ಜನರಿಗೆ ತಲಪಿಸಿದಂತಹವರು. ಅವರಿಗೆ ಒಕ್ಕೂಟದ ಪರವಾಗಿ ಪ್ರೀತಿಯ ಸ್ವಾಗತ.

ಇಂದಿನ ದಿಕ್ಸೂಚಿ ಭಾಷಣ ಮಾಡಲು ಬಂದವರು. ವಿಹಾನ್ ಬೆಂಗಳೂರು. ಇವರ ಅನುಭವ ಬಹಳ ದೊಡ್ಡದು. ತಮ್ಮ ಟ್ರಾನ್ಸ್ ಮ್ಯಾನ್ ಅನುಭವ ನಮ್ಮ ಜೊತೆ ಹೇಳಿಕೊಳ್ಳಲಿದ್ದಾರೆ. ನಿನ್ನೆ ಅವರ ಜೊತೆ ಒಂದು ಸಂವಾದ ಕೂಡಾ ನಡೆಯಿತು. ಅವರ ಅನುಭವ ನಮ್ಮ ಅರಿವನ್ನು ವಿಸ್ತರಿಸುತ್ತದೆ ಎಂಬ ನಂಬಿಕೆ ಜೊತೆಗೆ ಅವರನ್ನೂ ಸ್ವಾಗತಿಸುತ್ತೇನೆ.

ಮಹಿಳಾ ದಿನಾಚರಣೆ ಕುರಿತು ಮಾತಾಡಲು ಬಂದಿರುವ ಸುಮನ ಅವರು, ವಕೀಲರು, ಮೈಸೂರಿನವರು, ಪ್ರಾರಂಭದಿಂದಲೇ ಒಕ್ಕೂಟದ ಜೊತೆಗೇ ಇದ್ದು ಒಕ್ಕೂಟದ ಬೆಳವಣಿಗೆಯಲ್ಲಿ ಪಾತ್ರವಹಿಸಿದವರು – ಅವರಿಗೂ ಸ್ವಾಗತ.

ಸಂವಿಧಾನ ಪೀಠಿಕೆ ಓದಲಿರುವ ಲೇಖಕಿಯಾಗಿರುವ ವಾಣಿ ಸತೀಶ್

ಅವರಿಗೆ ಪ್ರೀತಿಯ ಸ್ವಾಗತ.

ಡಾ.ಗೀತಾ ವಸಂತ ಹಾಗೂ ಡಾ.ಜ್ಯೋತಿಯವರು ವಿಶ್ವವಿದ್ಯಾನಿಲಯದ ಉಪನ್ಯಾಸಕರು. ಒಕ್ಕೂಟದ ಒಡನಾಡಿಗಳು, ತುಮಕೂರಿನ ಪ್ರಕ್ರಿಯೆಯನ್ನು ಬೆಂಬಲಿಸಿದವರು ಅವರಿಗೂ ನಮ್ಮ ಪ್ರೀತಿಯ ಸ್ವಾಗತ. ಡಾ. ಕೆ ಗಿರಿಜಾರವರು, ಅವರಿಗೂ ಸ್ವಾಗತ. ತುಮಕೂರಿನ ಒಕ್ಕೂಟದಲ್ಲಿ ಭಾಗಿಯಾದವರು. ವೇದಿಕೆಯ ಮುಂಭಾಗದಲ್ಲಿ ಆಸೀನರಾಗಿರುವ ಎಲ್ಲಾ ಸಂಗಾತಿಗಳಿಗೂ ಮತ್ತೊಮ್ಮೆ ಸ್ವಾಗತ.

ಇದು ನಮ್ಮ ಹನ್ನೊಂದನೆಯ ವರುಷ. ಮಂಗಳೂರಿನ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ್ದು ನೆನಪಾಗ್ತಾ ಇತ್ತು. ಹತ್ತು ವರುಷಗಳೇ ಕಳೆದವು. ಹತ್ತು ವರುಷ ವಯಸ್ಸೂ ಹೆಚ್ಚಾಗಿದೆ. ಹತ್ತು ಹಲವು ಅನುಭವಗಳಿಂದ ಆದ ಕಲಿಕೆಗಳು ಮಾಗುತ್ತಾ ಇವೆ. ಮಧ್ಯೆ ಮಧ್ಯೆ ನಡೆಸುವ ಅವಲೋಕನಗಳು, ವಿಮರ್ಶೆಗಳು ನಮ್ಮ ಹೆಜ್ಜೆ ಗುರುತುಗಳನ್ನು ದಾಖಲಿಸಿವೆ, ಮುಂದಿನ ದಾರಿಗೆ ಅನುವು ಮಾಡಿ ಕೊಟ್ಟಿವೆ. ಇಂದು ಈ ಸಂಭ್ರಮದ ಜೊತೆ ಜೊತೆಗೆ ಆತ್ಮಾವಲೋಕನವೂ ನಮ್ಮೊಳಗೆ ನಡೆಯಲೇ ಬೇಕಾಗಿದೆ.

**ಚಿಂತನೆಗೆ ಹಚ್ಚುವ ವಿಚಾರ ಸಂಕಿರಣ**

ಎಲ್ಲರಿಗೂ ಗೊತ್ತಿರುವ ಹಾಗೆ, ಬೃಹತ್ ಮೆರವಣಿಗೆ, ಸಾರ್ವಜನಿಕ ಸಮಾವೇಶ, ಕಪ್ಪು ಉಡುಪಿನಲ್ಲಿ ಮಹಿಳೆಯರು ಮತ್ತು ವಿಚಾರ ಸಂಕಿರಣ ನಮ್ಮ ಸಮಾವೇಶದ ಪ್ರಮುಖ ಅಂಶಗಳು. ಪ್ರತಿಯೊಂದಕ್ಕೂ ಅದರದ್ದೇ ಆದ ಮಹತ್ವ ಇದೆ. ಅಂತೆಯೇ ವಿಚಾರ ಸಂಕಿರಣಕ್ಕೆ ಅದರದ್ದೇ ಆದ ಉದ್ದೇಶಗಳು ಇವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳುವ ಶಿಕ್ಷಣ, ಸಂಘಟನೆ, ಹೋರಾಟ ಈ ಹೊತ್ತಿಗೆ ಬಹಳ ಪ್ರಸ್ತುತ. ಯಾವುದೇ ಕೆಲಸ ಮಾಡಲು ಅರಿವು ಬೇಕು, ಬೌದ್ಧಿಕ ವಿಚಾರಗಳಿಗೂ ತೆರೆದುಕೊಳ್ಳಬೇಕು, ಸಾಮಾಜಿಕ ಆಗುಹೋಗುಗಳನ್ನು ಹೆಣ್ಣು ನೋಟದಲ್ಲಿ ಅರ್ಥ ಮಾಡಿಕೊಳ್ಳಬೇಕು. ಇದು ಸಾಧ್ಯವಾದಾಗ ಮಾತ್ರ ಗಟ್ಟಿಯಾದ ನಿಲುವು ತೆಗೆದುಕೊಳ್ಳುವುದು ಸಾಧ್ಯವಾಗುತ್ತದೆ. ಈ ಅರಿವನ್ನು ಸಮೃದ್ಧವಾಗಿ ಕೊಡುವಂತಹ ಕಾರ್ಯಕ್ರಮ ವಿಚಾರ ಸಂಕಿರಣ. ಈ ವಿಚಾರ ಸಂಕಿರಣದಲ್ಲಿ ಸ್ಥಳೀಯವಾಗಿ ಮತ್ತು ಹೊರ ರಾಜ್ಯಗಳಲ್ಲಿ ಮಹಿಳಾ ಪರ ಕೆಲಸ ಮಾಡಿದಂತಹ, ಹೊಸ ಚಿಂತನೆಗಳನ್ನು ಕೊಟ್ಟಂತಹ, ಅನೇಕ ವಿಚಾರವಾದಿಗಳು, ಸ್ತ್ರೀವಾದಿಗಳು ನಮ್ಮ ಜೊತೆಗಿದ್ದು, ನಮ್ಮ ಅರಿವನ್ನು ಹೆಚ್ಚಿಸಿದ್ದಾರೆ. ಮಂಗಳೂರಿನಿಂದ ಹಿಡಿದು, ಕಲಬುರಗಿವರೆಗೂ ಬಂದ ವ್ಯಕ್ತಿಗಳನ್ನು ನೆನಪಿಸಿಕೊಳ್ಳುವುದೇ ಆನಂದ.

ಮಹಾರಾಷ್ಟ್ರದ ಚಿಂತಕರು, ದಲಿತ ಲೇಖಕರು ಆಗಿರುವ ಊರ್ಮಿಳಾ

ಪವಾರ್, ಬೆಂಗಳೂರಿನ ವಿಮೋಚನಾ ಸಂಸ್ಥೆ ಹುಟ್ಟುಹಾಕಿದ ಕಾರಿನ್ ಕುಮಾರ್, ಚೆನ್ನೈನ ಚಿಂತರು ಲೇಖಕರು ವಿ ಗೀತಾ, ದೆಹಲಿಯ ಜೆ.ಎನ್.ಯುನಲ್ಲಿ ಪ್ರೊಫೆಸರ್ ಆಗಿರುವು ಉಮಾ ಚಕ್ರವರ್ತಿ, ಒರಿಸ್ಸಾದ ಸಾಮಾಜಿಕ ಕಾರ್ಯಕರ್ತರು ಮತ್ತು ಚಿಂತಕರಾದ ರಂಜನಾ ಪಾಡಿ, ಪುಣೆಯ ಸಾಮಾಜಿಕ ಕಾರ್ಯಕರ್ತರೂ ಚಿಂತಕರೂ ಆದ ಮನಿಷಾ ಗುಪ್ತೆ, ದೆಹಲಿಯ ಚಿಂತಕರಾದ ಮಣಿಮಾಲಾ, ಆಂಧ್ರದ ಲೇಖಕರು ಮತ್ತು ಸಾಮಾಜಿಕ ಕಾರ್ಯಕರ್ತರಾದ ಓಲ್ಗಾ, ಆಂಧ್ರದ ಲೇಖಕರು ಮತ್ತು ಸಾಮಾಜಿಕ ಕಾರ್ಯಕರ್ತರಾದ ಜೋಪಾದಿ ಸುಭದ್ರಾ, ಜನವಾದಿ ಮಹಿಳಾ ಸಂಘಟನೆಯ ಮರಿಯಂ ಧಾವಳೆ – ಈ ಒಬ್ಬೊಬ್ಬರ ಬಗ್ಗೆಯೂ ತಿಳಿದುಕೊಳ್ಳುವುದು ಬಹಳ ಇದೆ. ಆ ಒಡನಾಟಗಳು ಪ್ರೇರಣೆ ನೀಡಿವೆ, ವಿಚಾರಗಳ ಜೊತೆಗೆ ಸಹೋದರಿತ್ವವನ್ನೂ ಬೆಳೆಸಿವೆ. ಪ್ರತಿಸಾರಿಯೂ ಸ್ತ್ರೀವಾದ ಚಿಂತನೆಯನ್ನು ಮೂಲವಾಗಿ ಇಟ್ಟುಕೊಂಡು ಮಹಿಳೆ ಮತ್ತು ರಾಜಕೀಯ ಇರಬಹುದು, ಕೃಷಿಯ ಬಿಕ್ಕಟ್ಟುಗಳು ಇರಬಹುದು, ಕೌಟುಂಬಿಕ, ಲೈಂಗಿಕ ದೌರ್ಜನ್ಯಗಳು ಇರಬಹುದು, ಸಂವಿಧಾನ ಇರಬಹುದು – ಆ ಹೊತ್ತಿಗೆ ಪ್ರಸ್ತುತ ಅನಿಸುವ ವಿಚಾರಗಳನ್ನು ಎತ್ತಿಕೊಳ್ಳುತ್ತಾ ಬಂದಿದ್ದೇವೆ.

**ನಮ್ಮ ಘೋಷವಾಕ್ಯಗಳು ನಮ್ಮ ಆಶಯದ ಪ್ರತೀಕಗಳು:**

ನಮ್ಮ ಚಿಂತನೆಗಳು ಹರಿದು ಬಂದ ರೀತಿ, ನಮ್ಮ ಘೋಷವಾಕ್ಯಗಳಲ್ಲಿ ಬಹಳ ಚೆನ್ನಾಗಿ, ಪ್ರತಿಪಾದನೆ ಆಗುತ್ತಾ ಬಂದಿದೆ. ನಮ್ಮ ಈ ವರುಷದ ಘೋಷವಾಕ್ಯ "ಸಂವಿಧಾನವೇ ಉಸಿರು, ಬಹುತ್ವವೇ ಬದುಕು" ನಾಲ್ಕು ಪದಗಳು ಸರಳ ಪದಗಳು ಅನಿಸಿದರೂ, ಈ ಎರಡು ವಾಕ್ಯಗಳನ್ನು ರೂಪಿಸುವುದಕ್ಕೆ, ನಾವು ಸಾಕಷ್ಟು ಸಮಯ ತೆಗೆದುಕೊಂಡಿದ್ದೆವೆ. ಯಾಕೆ ಇದು ಬೇಕು, ಯಾಕೆ ಇದುವೇ ಬೇಕು, ಈ ಪದಗಳ ಮಹತ್ವ ಏನು ಎಂಬುದು ಚಿಂತೆನಯನ್ನು ಹರಿತಗೊಳಿಸುವುದು ಮಾತ್ರವಲ್ಲ  ನಮ್ಮ ಬದುಕಿಗೆ ನಮ್ಮ ಕೆಲಸಕ್ಕೆ ಒಂದು ದಿಕ್ಸೂಚಿ ಕೊಟ್ಟಿದೆ. ಮಹಾ ವಿಚಾರಗಳನ್ನು ಅತ್ಯಂತ ಸರಳವಾಗಿ ಜನಮನಕ್ಕೆ ತಲಪಿಸುವಲ್ಲಿ ಸಹಕಾರಿಯಾಗಿದೆ. ಸಂವಿಧಾನ ಅಂದರೆ ಅದು ಎಲ್ಲೋ ಸರಕಾರದ ಕಡತದಲ್ಲಿ ಬರೆದಿಟ್ಟ ಪುಸ್ತಕ ಮಾತ್ರವಲ್ಲ, ಅದು ನಮಗೆ ನಮ್ಮ ಉಸಿರಿನಷ್ಟು ಅಗತ್ಯ ಎಂಬ ಚಿಂತನೆಯನ್ನು ಜನರ ಕಿವಿ ಸೇರಬೇಕು ಎಂಬ ಆಶಯದ ಜೊತೆಗೆ ಈ ಘೋಷವಾಕ್ಯ ಇಟ್ಟುಕೊಂಡಿದ್ದೇವೆ.

ನಮ್ಮ ಮಂಗಳೂರಿನ ಘೋಷವಾಕ್ಯ – "ಇನ್ನು ಸಾಕು". ಮಹಿಳೆಯರ ಮೇಲೆ ನಡೀತಾ ಇರುವ ದೌರ್ಜನ್ಯಗಳು ಇನ್ನು ಸಾಕು, ಅಂತ ಹೇಳಿಕೊಂಡದ್ದು

ಇಂದಿಗೂ ಕೂಡಾ ನಮ್ಮ ಮನದೊಳಗೆ ಧ್ವನಿ ಎಬ್ಬಿಸುತ್ತಾ ಇದೆ. "ಇನ್ನು ಸಾಕು" ಅಂತ ಹೇಳುತ್ತಾನೇ ಇರಬೇಕಾಗುತ್ತೆ, ದಿನ ನಿತ್ಯ ದೌರ್ಜನ್ಯದ ಕಥೆಗಳನ್ನು ಪಾಡುಗಳನ್ನು ಕೇಳಿಸಿಕೊಳ್ಳುತ್ತಾ ಇದ್ದೇವೆ. ಅದಕ್ಕೆ ಪ್ರತಿಕ್ರಿಯೆ ನೀಡುವುದು ಈವತ್ತಿಗೂ ಕೂಡ ನಮ್ಮ ಕರ್ತವ್ಯ ಆಗಿದೆ ಅನ್ನುವುದನ್ನು ನೆನಪಿಸುತ್ತಲೇ ಇರುತ್ತದೆ. ಇದು ಪ್ರತಿ ದಿನ ಕಸ ಗುಡಿಸುವ ಹಾಗೆ, ಪ್ರತಿ ದಿನ ಕಸ ಗುಡಿಸಲೇ ಬೇಕು, ಧೂಳು ತುಂಬಿಕೊಳ್ಳುತ್ತಾನೇ ಇರುತ್ತೆ, ಇದು ನಿಲ್ಲಿಸುವ ಕೆಲಸವಲ್ಲ, ಹೇಳುತ್ತಾನೇ ಇರಬೇಕು, ಮಾಡುತ್ತಾನೇ ಇರಬೇಕು ಅಂತ ಎಚ್ಚರಿಸುತ್ತಲೇ ಇರುತ್ತದೆ. ಇನ್ನೊಂದು ಘೋಷವಾಕ್ಯ "ಮೆರವಣಿಗೆ ಹೊರಡುತ್ತೇವೆ". ವಿನಯಾ ವಕ್ಕುಂದ ಹಾಡಿನ ಸಾಲು. ಈ ಸಾಲು ವಿವಿಧ ಚಿಂತನೆಗಳಿಗೆ ಎಡೆಮಾಡಿ ಕೊಟ್ಟಿದೆ. "ಮೆರವಣಿಗೆ ಹೊರಡುತ್ತೇವೆ" ಅಲ್ಲ, ಹೊರಟಿದ್ದೇವೆ ಅನ್ನುವ; ಅನುದಿನವೂ ಮೆರವಣಿಗೆ ಹೊರಡುತ್ತೇವೆ ಅನ್ನುವ ಭಾವವನ್ನು  ಗಟ್ಟಿಮಾಡಿದೆ. ಈ ಮೆರವಣಿಗೆ ಕೂಡ ಒಂದು ಅದ್ಭುತವಾದಂತಹ ಅನುಭವ, ಇದು ಒಂದು ಸಮೂಹದ ಗುರುತನ್ನು ಗಟ್ಟಿ ಮಾಡುತ್ತದೆ. ನನಗೆ ಯಾವಾಗಲೂ ಮೆರವಣಿಗೆಯಲ್ಲಿ ನಡೆಯುವಾಗ, ನಾನು ಕಳೆದುಹೋದ ಹಾಗೆ ಅನಿಸುತ್ತದೆ. ನಾನು ಕಳೆದುಹೋಗಿ, ಒಂದು ಸಮೂಹದ ಭಾಗವಾಗಿ ಗುರುತು ಪಡೆಯುವುದು ಇದೆಯಲ್ಲಾ, ಅದು ವಿಶೇಷ.

ಇನ್ನೊಂದು ಘೋಷವಾಕ್ಯ ನಾನು ಹೇಳಲೇ ಬೇಕು. ಅದು, "ನನ್ನ ದೇಹ, ನನ್ನ ಹಕ್ಕು" ಎಂಬುದು. ಈ ಘೋಷವಾಕ್ಯವನ್ನು ಅನೇಕರಿಗೆ ಇನ್ನೂ ಅರಗಿಸಿಕೊಳ್ಳಲಿಕ್ಕೆ ಆಗಲಿಲ್ಲ. ಕೇಳಿಸಿಕೊಂಡ ತಕ್ಷಣ, ಇದು ಅತಿರೇಕ ಆಯಿತು, ಅನ್ನುವ ಪ್ರತಿಕ್ರಿಯೆ ಬರುತ್ತದೆ. ಇದನ್ನು ಅರ್ಥಮಾಡಿಸುವುದು ಒಂದು ಸವಾಲೇ ಆಗುತ್ತದೆ. ನನ್ನ ದೇಹ ನನ್ನ ಹಕ್ಕು ಅಂದರೆ ಏನು? ಹಕ್ಕು ಅನ್ನುವುದೇ ತುಂಬಾ ಘನತೆಯ ಪದ. ನಮಗೆ ಆಹಾರದ ಹಕ್ಕು ಬೇಕು ಅಂದರೆ ಅತಿರೇಕ ಅಂತೀವಾ ನಾವು? ನಮಗೆ ಚಲನಶೀಲತೆ ಬೇಕು ಅಂದರೆ ಅತಿರೇಕ ಅಂತೀವಾ ನಾವು? ನನ್ನ ದೇಹ ನನ್ನ ಹಕ್ಕು ಅಂದಾಗ ಅದು ಅತಿರೇಕ ಆಗಿ ಯಾಕೆ ಕಾಣಬೇಕು? ಇದೂ ಒಂದು ಹಕ್ಕು, ಯಾಕೆಂದರೆ ಇಡೀ ಮಹಿಳಾ ಚಳವಳಿಯಲ್ಲಿ ನಾವು ಗಮನಿಸಿದ ಒಂದು ಅಂಶ ಏನು ಅಂದರೆ, ನಿರ್ಬಂಧಗಳು ಹೆಣ್ಣಿನ ದೇಹದ ಮೇಲೆ ಚಿಕ್ಕ ವಯಸ್ಸಿನಿಂದಲೂ ಶುರುವಾಗುತ್ತದೆ. ಕೈಕಾಲು ಆಡಿಸುವುದರಿಂದ ಹಿಡಿದು ನಮ್ಮ ದೇಹ ಆರಾಮವಾಗಿ ಚಲನೆ ಮಾಡದ ಹಾಗೆ, ನಿರ್ಬಂಧಗಳನ್ನು ಮಾಡಲಾಗಿದೆ. ಮುಟ್ಟು ಅನ್ನುವ ಹೆಸರಿನಲ್ಲಿ ದೇಹದ ಮೇಲೆ ಮತ್ತೆ ನಿರ್ಬಂಧ. ಎಲ್ಲಾ ದೌರ್ಜನ್ಯಗಳೂ, ಅದರಲ್ಲೂ ಮುಖ್ಯವಾಗಿ ಲೈಂಗಿಕ ದೌರ್ಜನ್ಯಗಳು, ಕೇಂದ್ರವಾಗಿರಿಸಿರುವುದೇ ದೇಹವನ್ನು. ಪ್ರಜನನ ವಿಚಾರಕ್ಕೆ ಬಂದರೂ

ಎಷ್ಟೊಂದು ವಿಚಾರದ ಮೇಲೆ ನಿರ್ಬಂಧಗಳು. ಈ ಎಲ್ಲಾ ನಿರ್ಬಂಧಗಳನ್ನು ಪ್ರಶ್ನಿಸುವುದೇ ನನ್ನ ದೇಹ ನನ್ನ ಹಕ್ಕು. ಅದರಲ್ಲಿ ಯಾವುದೇ ಅತಿರೇಕ ಇಲ್ಲ, ಘನತೆಯಿಂದ ಕೇಳುವಂತಹಾ ಒಂದು ಹಕ್ಕು ಅದು. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ, ಮತ್ತೆ ಈ ದೇಹದ, ನಿರಾಳತೆಯ ಜೊತೆಜೊತೆಗೇನೇ ಮನಸ್ಸಿನ ಮುಕ್ತತೆಯೂ ಸಾಧ್ಯವಾಗುತ್ತದೆ. ದೇಹ ಮನಸ್ಸು ಜೊತೆ ಜೊತೆಗೆ ನಿರಾಳವಾಗುತ್ತಾ ಹೋಗುತ್ತದೆ; ಅಂತ ನಾವು ನಂಬುತ್ತೇವೆ.

ಇನ್ನೊಂದು ನಮ್ಮ ಘೋಷವಾಕ್ಯ "ನಮ್ಮ ಮತ ನಮ್ಮ ಆಯ್ಕೆ, ಇರಲಿ ಹೆಣ್ಣೋಟದ ಹೆಗ್ಗಳಿಕೆ". ಇದು ನಾವು ಮಹಿಳೆಯರಾಗಿ ರಾಜಕೀಯವಾಗಿ ನಮ್ಮ ನೆಲೆಯೇನು? ನಾವು ಅದರ ಜೊತೆಗೆ ಹೇಗೆ ಗುರುತಿಸಿಕೊಳ್ಳುತ್ತೇವೆ? ಎಂಬುದು ನಮ್ಮನ್ನು ನಾವು ಪ್ರಶ್ನೆ ಮಾಡಿಕೊಳ್ಳುವ, ಚಿಂತನೆ ಮಾಡಿಕೊಳ್ಳುವ ಉದ್ದೇಶವನ್ನು ಹೊಂದಿತ್ತು. ಬರೇ ಚುನಾವಣಾ ರಾಜಕೀಯ ಮಾತ್ರವಲ್ಲದೆ ಮಹಿಳಾ ಚಳವಳಿಗಳು ಮೊದಲಿಂದಲೇ ಹೇಳಿಕೊಂಡು ಬಂದಿರುವ "ಪರ್ಸನಲ್ ಈಸ್ ಪೊಲಿಟಿಕಲ್" ಎಂಬುದನ್ನೂ ಅರ್ಥಮಾಡಿಕೊಳ್ಳುವುದೂ ಅಗತ್ಯ. ಅಂದರೆ ರಾಜಕೀಯ ಅನ್ನುವುದು ನಮ್ಮ ಎಲ್ಲಾ ಕೆಲಸಗಳಲ್ಲಿ ಇದೆ, ಅದನ್ನು ರಾಜಕೀಯ ಪ್ರಜ್ಞೆಯಾಗಿ ಗುರುತಿಸಿಕೊಳ್ಳುವುದು ಮತ್ತು ನಡೆಸಿಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ.

ಹೀಗೆ, ಈ ಎಲ್ಲಾ ಘೋಷವಾಕ್ಯಗಳನ್ನು ರೂಪಿಸುವಾಗಲೂ ಸಾಕಷ್ಟು ಸಾಮೂಹಿಕ ಚಿಂತನೆಗಳು ನಡೆಯುತ್ತವೆ, ಇದರಿಂದಾಗಿ ಹೊಸ ಚಿಂತನೆಯನ್ನು, ಹೊಸ ಸಾಧ್ಯತೆಯನ್ನು ಸರಳ ರೂಪದಲ್ಲಿ ತರುವುದು ಸಾಧ್ಯವಾಗುತ್ತದೆ. ಬದುಕಿನಲ್ಲಿ ಕೆಲಸದಲ್ಲಿ ಅಳವಡಿಸಿಕೊಳ್ಳುವ ದಾರಿ ಕಾಣುತ್ತದೆ. ಅಷ್ಟೇ ಅಲ್ಲ ಇದು ರೂಪುಗೊಂಡ ಮೇಲೆ ಇತರರೊಂದಿಗೆ ಸಂವಾದಕ್ಕೂ ಎಡೆ ಮಾಡಿಕೊಡುತ್ತದೆ.

**ಅರಿವಿನ ಹನಿ ಬಿತ್ತುವ/ಸಿಂಪಡಿಸುವ ಅರಿವಿನ ಪಯಣ:**

ಇನ್ನೊಂದು ಈ ಸಮಾವೇಶದ, ಒಕ್ಕೂಟದ ಆಪ್ತವಾದಂತಹ ಕೆಲಸ ಎಂದರೆ ಅರಿವಿನ ಪಯಣ. ಈ ಪ್ರಕ್ರಿಯೆ ನಿಧಾನವಾಗಿ ರೂಪುಗೊಳ್ಳುತ್ತಾ ಬಂದಿದೆ. ಸಮಾವೇಶಕ್ಕೆ ಯುವಜನತೆಯನ್ನು ಕರೆಯುವ ಸಲುವಾಗಿ ಕಾಲೇಜುಗಳಿಗೆ, ಊರೂರುಗಳಿಗೆ ಹೋಗುವುದು ಇದ್ದೇ ಇತ್ತು. ಕ್ರಮೇಣ, ವರುಷದ ಕೊನೆಯಲ್ಲಿ ಒಂದು ದೊಡ್ಡ ಕಾರ್ಯಕ್ರಮದ ಜೊತೆಗೆ ಸಾವಿರಾರು ಮಂದಿಯ ಜೊತೆಗೆ ಒಡನಾಟ ಪಡೆಯುವ ಆಶಯ ಹುಟ್ಟಿಕೊಂಡಿತು. ಆ ಪ್ರಕಾರವೇ, ಶಾಲಾ, ಕಾಲೇಜು, ಊರು, ಸಮುದಾಯದ ಬಳಿ ಹೋಗಿ ಹಾಡು, ಕಥೆ, ನಾಟಕ ಮಾಡುತ್ತಾ, ಸಮಾಜದಲ್ಲಿ ನಡೆಯುವ ತಾರತಮ್ಯ, ಲೈಂಗಿಕ ದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ಜಾತಿ

ತಾರತಮ್ಯ, ಇವೆಲ್ಲವನ್ನೂ ಇಟ್ಟುಕೊಂಡು ಒಂದು ಆಪ್ತವಾದ ಮಾತುಕತೆ, ಚಿಂತನೆಯನ್ನು ಹುಟ್ಟಿಸುವಂತಹಾ ಒಂದು ಪ್ರಕ್ರಿಯೆಯಾಗಿ ರೂಪುಗೊಂಡಿತು. ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡವರಿಗೆ ಇದು ಒಂದು ಹೊಸ ಅನುಭೂತಿಯನ್ನು ನೀಡುತ್ತದೆ. ಕೊಪ್ಪಳದಲ್ಲಿ 'ಕೈಗೆ ಕೈ ಜೋಡಿಸೋಣ' ಎಂಬ ಹೆಸರಿನಲ್ಲಿ ಖಚಿತವಾದ ರೂಪ ಸಿಕ್ಕಿದ್ದು; ಶಿವಮೊಗ್ಗದಲ್ಲಿ "ಅರಿವಿನ ಪಯಣ" ಎಂಬ ಹೆಸರು ಪಡೆಯಿತು. ಇದು ಅರಿವು ಬಿತ್ತುವಂತಹ ಒಂದು ಕೆಲಸ. ಇಲ್ಲಿ ಯಾವುದೇ ವಿಚಾರಗಳನ್ನು ಹೇರುವಂತೆ ಆಗಬಾರದು ಅಂತ ಖಚಿತಮಾಡಿಕೊಂಡಿದ್ದೇವೆ.

ತುಮಕೂರಿನಲ್ಲಿ ವರುಷದ ಮೊದಲ ದಿನಗಳಲ್ಲೇ ಅರಿವಿನ ಪಯಣ ನಡೆಸುವ ರೀತಿನೀತಿಗಳ ಬಗ್ಗೆ ಕಾರ್ಯಾಗಾರ ನಡೆಯಿತು. ಅನೇಕರು ಮುಂದಿನ ದಿನಗಳಲ್ಲಿ ಅರಿವಿನ ಪಯಣ ನಡೆಸಿದರು. ತುಮಕೂರಿನ ಸಂಗಾತಿಗಳು ಅರಿವಿನ ಪಯಣದಲ್ಲಿ ತಮ್ಮದೂ ಕೆಲವು ಕೊಡುಗೆ ನೀಡಿದರು. ಸೌಂದರ್ಯದ ಕುರಿತು ಒಂದು ಏಕವ್ಯಕ್ತಿ ಅಭಿನಯವನ್ನು ಹಾಗೂ ಕುವೆಂಪು ಅವರ 'ನಿರಂಕುಶಮತಿಗಳಾಗಿ' ಎಂಬ ವಿಚಾರದ ಪ್ರಸ್ತುತಿಯನ್ನು ಸೇರಿಸಿದರು. ಚಿಕ್ಕ ನಾಯಕನ ಹಳ್ಳಿಯ ಇಂದಿರಮ್ಮ ಅವರು ತಮ್ಮ ತಂಡದ ಜೊತೆಗೆ ತರಬೇತಿಯಲ್ಲಿ ಭಾಗವಹಿಸಿ, ಅತ್ಯಂತ ಶ್ರದ್ಧೆಯಿಂದ ತಮ್ಮ ಊರಿನಲ್ಲಿ ನೂರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿದರು. ಶಾಲಾ, ಕಾಲೇಜುಗಳಲ್ಲದೆ ಗೊಲ್ಲರ ಹಟ್ಟಿಯಂತಹ ಜಾಗಗಳಿಗೂ ಹೋದರು. ಮುಟ್ಟಿನ ಕಾರಣಕ್ಕೆ ದೂರ ಕೂರಿಸುವ ಸಮುದಾಯದ ಹತ್ತಿರ ಹೋಗಿ ಮಾತಾಡಿದರು. ಇನ್ನೂ ಅನೇಕ ಮಂದಿ ಸಂಗಾತಿಗಳು, ಉತ್ಸಾಹದಿಂದ ತಮತಮಗೆ ಸಿಗುವ ಮಂದಿ ಜೊತೆಗೆ ಸೇರಿಕೊಂಡು ಒಂದಷ್ಟು ಕಾರ್ಯಕ್ರಮ ನೀಡಿದರು. ಈ ಗುಂಪಿನಲ್ಲಿ ದೀಪಿಕಾ ಹೊಸತಾಗಿ ನಾಟಕಗಳನ್ನು ಕಲಿತು ಬಹಳ ಪ್ರೀತಿಯಿಂದ ಮಾಡಿದರು. ಗುಬ್ಬಿಯ ಹಕ್ಕಿ ಪಕ್ಕ ತಂಡದ ಮಕ್ಕಳು ಹಾಡು, ನಾಟಕ ಕಲಿತುಕೊಂಡು ತಾವು ಓದುವ ಶಾಲಾ ಕಾಲೇಜುಗಳು ಸೇರಿದಂತೆ ಕೆಲವು ಕಾರ್ಯಕ್ರಮ ನೀಡಿದರು. ಮಕ್ಕಳು ಹಾಡು, ನಾಟಕದೊಂದಿಗೆ ವಿಚಾರವನ್ನೂ ಅರ್ಥಮಾಡಿಕೊಳ್ಳುತ್ತಾ, ಆತ್ಮವಿಶ್ವಾಸ ಬೆಳೆಸಿಕೊಂಡಿದ್ದು ಕಾಣಬಹುದಿತ್ತು. ಈ ಗುಂಪುಗಳೊಂದಿಗೆ ಓಡಾಡಿಕೊಂಡು ಅರಿವಿನ ಪಯಣದಲ್ಲಿ ಭಾಗಿಯಾಗುವ ಒಂದಿಷ್ಟು ಅವಕಾಶ ನನಗೂ ಸಿಕ್ಕಿತ್ತು. ಕಾರ್ಯಕ್ರಮದ ನಂತರ ಮಕ್ಕಳ ಅನಿಸಿಕೆ ಕೇಳಿಸಿಕೊಳ್ಳುವುದೇ ಒಂದು ಚಂದ. ಕೆಲವೊಮ್ಮೆ ಮಕ್ಕಳು ಬಹಳ ಸಂಕೋಚ ಪಟ್ಟುಕೊಂಡು ಮಾತಾಡದೆ ಇದ್ದರೂ, ಕಾರ್ಯಕ್ರಮ ಮುಗಿಸಿ ಹೊರಡುವಾಗ ಗುಂಪು ಗುಂಪಾಗಿ ಬೆನ್ನ ಹಿಂದೆಯೇ ಬಂದು ಮಾತಾಡಿಸಿ, ಕೈಕುಲುಕಿ ಹೋಗುವುದನ್ನು ನೋಡಲೂ ಚಂದ. ನೀಲಿ ರಿಬ್ಬನ್ – ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ನಾಟಕ

ಮಾಡಿದಾಗ, ಮೆತ್ತಗೆ ಹತ್ತಿರ ಬಂದು, 'ಇದು ನಿಮ್ಮ ಕತೇನಾ ಮಿಸ್' ಅಂತ ಕೇಳಿದ್ದಾರೆ.

ಅರಿವಿನ ಪಯಣ ಖಂಡಿತವಾಗಿ ಹನಿ ಹನಿಯಾಗಿಯಷ್ಟೇ ಪಸರಿಸುತ್ತಿರುವುದು. ಇದು ಇದರ ಒಂದು ಸೀಮಿತತೆ ಅಂತ ಒಪ್ಪಿಕೊಳ್ಳುತ್ತೇವೆ. ಆದರೆ ಇದರಲ್ಲಿ ತೊಡಗಿಸಿಕೊಂಡವರು ಕಾರ್ಯಕ್ರಮ ಮಾಡುತ್ತಾ ಮಾಡುತ್ತಾ ಅರಿವು ಹೆಚ್ಚಿಸಿಕೊಳ್ಳುವ ರೀತಿ, ನಿಲುವು ಗಟ್ಟಿಗೊಳ್ಳುವ ರೀತಿ, ಬಾಂಧವ್ಯ ಬೆಳೆಯುವ ರೀತಿಯೇ ಇದರ ಚಂದ. ಅರಿವಿನ ಪಯಣವನ್ನು ಇನ್ನೂ ಅರ್ಥಪೂರ್ಣವಾಗಿಸುವ ಸಾಧ್ಯತೆಗಳನ್ನು ಹುಡುಕುತ್ತಿದ್ದೇವೆ.

**ಬಂಧುತ್ವ ಕಟ್ಟುವ ಬೆಳೆಸುವ ಅನುಭವ**

ಕಣ್ಣಿಗೆ ಕಾಣುವಾಗ ಮಾರ್ಚ್ ತಿಂಗಳಲ್ಲಿ ನಡೆವ ಈ ಎರಡು ದಿನಗಳು ವರುಷದಲ್ಲಿ ಎದ್ದು ಕಾಣುತ್ತವೆ. ಜಾಥಾ, ಸಮಾವೇಶ, ಕಪ್ಪು ಉಡುಗೆಯಲ್ಲಿ ಮಹಿಳೆಯರು, ವಿಚಾರ ಸಂಕಿರಣ, ಈ ಎರಡು ದಿನಗಳನ್ನು ಆವರಿಸಿಕೊಂಡಿರುತ್ತದೆ, ಎರಡು ದಿನಗಳ ಜಾತ್ರೆ ಅನ್ನುವ ತರಹ ಕಾಣುತ್ತದೆ. "ಎರಡು ದಿನ ಜಾತ್ರೆ ಮಾಡಿ ಮುಗಿಸಿದರೆ ಆಯಿತಾ, ಏನಿದೆ ಇದರಲ್ಲಿ" – ಅನ್ನುವ ಟೀಕೆ ಕೂಡಾ ಇದೆ. ಆದರೆ ಈಗಾಗಲೇ ವಿವರಿಸಿರುವಂತೆ ಈ ಜಾತ್ರೆಯ ಹಿಂದೆ, ಒಂದು ವಿಸ್ತಾರವಾದ ಪ್ರಕ್ರಿಯೆ ಇದೆ. ಅನುಭವದ ಪದರಗಳು ಇವೆ. ಅದರ ಎಲ್ಲ ಪ್ರತಿಫಲನವಾಗಿ ಈ ಕ್ರಿಯೆ ಈವತ್ತು ಇಲ್ಲಿ ಮೂಡಿ ಬಂದಿದೆ. ಆಮೇಲೆ ಇದರ ಜೊತೆಗೆ ನಮಗೆ ಆಗುವ ಅನುಭವಗಳು, ಪ್ರತಿಫಲನಗಳು, ಚಿಂತನೆಗಳು, ನಮಗೆ ಒಂದು ತರಹದ ಸಮೂಹ ಪ್ರಜ್ಞೆಯನ್ನು ಸಮೂಹ ಬದ್ಧತೆಯನ್ನು ಸಮೂಹ ಶಕ್ತಿಯನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ ಎಂದರೆ ತಪ್ಪಾಗಲಾರದು. ಅದಕ್ಕಾಗಿ ನಾವು ಇದನ್ನು ಇಷ್ಟು ಸಂಭ್ರಮಿಸುತ್ತೇವೆ.

ಒಟ್ಟಿನಲಿ ಈ ಒಕ್ಕೂಟದ ಒಟ್ಟು ಪ್ರಕ್ರಿಯೆ, ಬಂಧುತ್ವವನ್ನು ಕಟ್ಟುವಂತಹ ಪ್ರಕ್ರಿಯೆ, ಒಂದೊಂದು ಜಿಲ್ಲೆಯಲ್ಲೂ ನಮ್ಮ ಬಳಗ ಹೆಚ್ಚುತ್ತಾ ಬಂದಿದೆ. ಎಲ್ಲಿಗೆ ಪಯಣ, ಯಾವ ಮನೆ, ಎಲ್ಲಿ ಊಟ, ಎಲ್ಲಿ ಸುತ್ತಾಟ, ಯಾರ ಜೊತೆಗೆ ಇರುತ್ತೇವೆ – ಎಲ್ಲವೂ ಪ್ರತಿಸಾರಿಯೂ ಹೊಸದೇ ಆಗಿರುತ್ತದೆ. ಹೊಸ ಮುಖಗಳು, ಹೊಸ ಪರಿಚಯಗಳು, ಹೊಸ ಒಡನಾಟಗಳು, ಹೊಸ ಕಲಿಕೆಗಳು, ಬದುಕನ್ನು ಅತ್ಯಂತ ಸಮೃದ್ಧಗೊಳಿಸಿವೆ. ಮತ್ತೆ ಪ್ರೀತಿ ಕಟ್ಟುವ ಕೆಲಸ ನಡೀತಾನೇ ಇದೆ; ಇದರ ಮಧ್ಯೆ ಕಳಚಿಕೊಳ್ಳುವುದು ಕೂಡಾ ಇರುತ್ತದೆ; ಜೊತೆಗೆ ಹೆಜ್ಜೆ ಹಾಕಲು ಇಷ್ಟವಿಲ್ಲದವರು, ಆಚೆ ಸರಿಯುತ್ತಾರೆ. ಒಟ್ಟಾಗಿ ನಮಗೆ ಏನು ಅನಿಸಿದೆಯಂದರೆ, ಜೊತೆಗೆ

ಹನ್ನೊಂದು ವರುಷಗಳ ಕಾಲ ಇದ್ದೇವೆ, ಈ ನದಿ ಹರೀತಾ ಬರುತ್ತಿರುವ ಹಾಗೇ, ಕಾಲುವೆಗಳು ಸೇರಿಕೊಳ್ಳುವ ಹಾಗೆ ಜನ ಸೇರಿಕೊಳ್ಳುತ್ತಾ ಬಂದಿದ್ದಾರೆ; ಸಮೃದ್ಧ ಅನುಭವ, ಶಕ್ತಿ ಕೊಡುವ ಅನುಭವ.

ಪ್ರತಿ ಜಿಲ್ಲೆಯಲ್ಲೂ ನಮಗೆ ಒಂದೆರಡು ತಂಗುದಾಣಗಳು ಸಿಗುತ್ತವೆ. ಇಲ್ಲಿ ನೆರವಾಗಿದ್ದು ಜನಚಳವಳಿ ಕೇಂದ್ರ. ಮುಜೀಬ್ ಮತ್ತು ಅವರ ಬಳಗ ಸದಾ ನಮ್ಮೊಂದಿಗಿದ್ದರು. ಸಭೆ, ಮಾತುಕತೆ, ಹರಟೆ, ಊಟ, ವಿರಾಮ ಎಲ್ಲವೂ ನಡೆದ ಜಾಗ ಜನಚಳವಳಿ ಕೇಂದ್ರ. ಅವರಿಗೆ ಮನದಾಳದ ಶರಣು. ತುಮಕೂರಿನ ಸಂಗಾತಿಯರು ಈ ಕಾರ್ಯಕ್ರಮವನ್ನು ನಿರೀಕ್ಷೆಗೆ ಮೀರಿ ನಡೆಸಿಕೊಟ್ಟಿದ್ದಾರೆ. ಅವರು ಇನ್ನು ನಮ್ಮ ಮುಂದಿನ ಹೆಜ್ಜೆಗಳಲ್ಲಿ ಜೊತೆಗಾರರು. ಅವರಿಗೂ ಪ್ರೀತಿಯಿಂದ ಶರಣು. ಹೀಗೇ ಬಂಧುತ್ವ ಕಟ್ಟುವ ಕೆಲಸದಲ್ಲಿ ಮುಂದುವರಿಯೋಣ. ಚಿಂತನೆ, ಅವಲೋಕನ, ಹರಟೆ, ಹಾಡು, ಕುಣಿತ, ಗದ್ದಲ, ಮೌನ ಎಲ್ಲವನ್ನೂ ಇಟ್ಟುಕೊಂಡು ಮುಂದುವರಿಯೋಣ. ನಮ್ಮಲ್ಲೂ ಇತಿಮಿತಿಗಳನ್ನು ಅರಿತುಕೊಳ್ಳುತ್ತಲೇ, ಅವನ್ನು ಒಪ್ಪಿಕೊಳ್ಳುತ್ತಲೇ ಸರಿಪಡಿಸಿಕೊಳ್ಳುತ್ತಲೇ ಮುಂದುವರಿಯೋಣ.

ಬಂಧುತ್ವ ಕಟ್ಟೋದು, ಬಂಧುತ್ವ ಉಳಿಸಿಕೊಳ್ಳುವುದು, ಸಮಾನತೆಯ ಆಶಯವನ್ನು ನಮ್ಮ ಬದುಕಿನಲ್ಲಿ ನಮ್ಮ ಮನೆಯಿಂದಲೇ, ಶುರುಮಾಡುವುದು ನಮ್ಮ ಕೆಲಸದ ಆಶಯ, ಎಲ್ಲರಿಗೂ ಪ್ರೀತಿಯ ವಂದನೆಗಳು.

# ವಿಹಾನ್ ಅವರ ಪರಿಚಯ

ಕೃತಿ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಹತ್ತು ವರ್ಷಗಳ ಅನುಭವದಲ್ಲಿ ಮಹಿಳಾ ದೌರ್ಜನ್ಯ ಅಥವಾ ಲಿಂಗಾಧಾರಿತ ದೌರ್ಜನ್ಯಗಳನ್ನು ಗಟ್ಟಿಯಾಗಿ ವಿರೋಧಿಸುತ್ತಾ ಬಂದಿದೆ. ತನ್ನ ಪ್ರಯಾಣದುದ್ದಕ್ಕೂ ಅದು ಎಲ್ಲಾ ವರ್ಗದ ಮಹಿಳೆಯರನ್ನು ಯಶಸ್ವಿಯಾಗಿ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ವಿಶೇಷವಾಗಿ ಸಮಾಜದ ಅವಗಣನೆಗೆ ಗುರಿಯಾದ ತೃತೀಯ ಲಿಂಗಿಗಳು ಅಥವಾ ಲಿಂಗತ್ವ ಅಲ್ಪಸಂಖ್ಯಾತರನ್ನು ತನ್ನೊಳಗೆ ಸೇರಿಸಿಕೊಂಡಿದೆ. ಈ ಸಮುದಾಯದಲ್ಲಿ ಲಿಂಗ ಪರಿವರ್ತನೆ ಮಾಡಿಕೊಂಡಿರುವವರು ಇದ್ದಾರೆ. ಲಿಂಗ ಪರಿವರ್ತಿತ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುವುದು ಗಂಡಾಗಿ ಜನಿಸಿ ಹೆಣ್ಣಾಗಿ ಬದಲಾಗಿರುವುದು. ಅಂತವರು ಒಕ್ಕೂಟದಲ್ಲಿಯೂ ತುಂಬಾ ಜನ ಇದ್ದಾರೆ. ಅವರಲ್ಲಿ ಕೆಲವರ ಆತ್ಮಚರಿತೆಗಳೂ ಬಂದಿವೆ.

ಆದರೆ 2023ರ ಮಾರ್ಚ್ 8ರಂದು ತುಮಕೂರಿನಲ್ಲಿ ನಡೆದ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ವಿಚಾರ ಸಂಕಿರಣ ಒಂದರ ದಿಕ್ಸೂಚಿ ಭಾಷಣ ಮಾಡಲು ಆಗಮಿಸಿದ ವಿಹಾನ್ ಅವರು ವಿಭಿನ್ನವಾಗಿ ನಿಲ್ಲುತ್ತಾರೆ. ಕಾರಣ ಲಿಂಗ ಪರಿವರ್ತಿಕ ಸಮುದಾಯದಲ್ಲಿ ವಿಶೇಷವಾಗಿ ಹೆಣ್ಣು ಗಂಡಾಗಿ ಪರಿವರ್ತಿತವಾಗಿರುವುದಕ್ಕೆ ವಿಹಾನ್ ಅವರು ಉತ್ತಮ ಉದಾಹರಣೆ. ಲಿಂಗತ್ವ ಅಲ್ಪಸಂಖ್ಯಾತರಲ್ಲಿಯೇ ತುಂಬಾ ವಿಶೇಷವಾದ ವ್ಯಕ್ತಿ ಮತ್ತು ಆದರ್ಶವಾದ ವ್ಯಕ್ತಿ.

ವಿಹಾನ್ ಎಂದರೆ ಬೆಳಕು ಎಂದರ್ಥ. ವಿಹಾನ್ ಹುಟ್ಟಿದ್ದು ಮಹಾರಾಷ್ಟ್ರದ ಪುಣೆಯಲ್ಲಿ. ಹುಟ್ಟಿದ್ದು ಹೆಣ್ಣಾಗಿ. ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ರಾಜ್ಯಶಾಸ್ತ್ರದಲ್ಲಿ ಪದವಿ ಪಡೆಯುತ್ತಿದ್ದಾಗ ಅವರಿಗೆ ಆ ಸಂದರ್ಭದಲ್ಲಿಯೇ ಒಳಗೆ ತಾನು ಗಂಡು ಎಂದು ಅನಿಸುತ್ತಿರುತ್ತದೆ. ಅಷ್ಟೇ ಅಲ್ಲ ಲಿಂಗ, ಜಾತಿ, ವರ್ಗ,

ಮೂರು ತರದ ತಾರತಮ್ಯ, ಕಿರುಕುಳವನ್ನು ಅನುಭವಿಸುತ್ತಿರುತ್ತಾರೆ. ತಾನು ಹೆಣ್ಣಾಗಿರುವುದಕ್ಕೆ ತನ್ನ ಮೇಲೆಯೇ ಹೆಚ್ಚು ಕೆಲಸದ ಹೊರೆ ಹಾಕಲ್ಪಡುತ್ತಿದ್ದಾರೆ ಎಂದು ಅವರಿಗೆ ನೋವಾಗಿರುತ್ತದೆ. ಮೇಲಿಂದ ಮೇಲೆ ಉಂಟಾಗುವ ಈ ನೋವನ್ನು ತೊಡೆದು ಹಾಕಲು ಓದಿನಲ್ಲಿ ತಮ್ಮನ್ನು ಹೆಚ್ಚು ಹೆಚ್ಚು ತೊಡಗಿಸಿಕೊಂಡರು. ಅಂಬೇಡ್ಕರ್ ಅವರನ್ನು ಆಳವಾಗಿ ಅಧ್ಯಯನ ಮಾಡಿದರು. ನಂತರ ಮುಂಬೈಗೆ ಬಂದು ಟಾಟಾ ಇನ್ ಸ್ಟಿಟ್ಯೂಟ್ ಆಫ್ ಸೋಶಿಯಲ್ ವರ್ಕ್ ನಲ್ಲಿ ಸಮಾಜ ಕಾರ್ಯ (social work) ನಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಅಷ್ಟಲ್ಲದೆ ಹಾರ್ವರ್ಡ್‌ನ ಕೆನಡಿ ಸ್ಕೂಲಿನಲ್ಲಿ ಲೀಡರ್ ಷಿಪ್ ತರಬೇತಿ ಪಡೆದು ಭಾರತಕ್ಕೆ ಹಿಂದಿರುಗುತ್ತಾರೆ. ಇಷ್ಟರಲ್ಲಿ ತನ್ನ ಲಿಂಗ ಗುರುತಿಸಿಕೊಳ್ಳಬೇಕೆಂದು, ವಿಶೇಷವಾಗಿ ಗಂಡಾಗಿ ಪರಿವರ್ತನೆಯಾಗಬೇಕೆಂಬ ಆಸೆಯಿಂದ ಮನೆ ಬಿಟ್ಟು ಬಂದು ದೆಹಲಿ ಸೇರುತ್ತಾರೆ. "ನನ್ನ ಲಿಂಗ ನನ್ನ ಹಕ್ಕು"ಎಂಬ ಮಾತು ಇಂತಹ ವ್ಯಕ್ತಿಗಳ ಜೀವನವನ್ನೇ ಬದಲಿಸಿದೆ.

ಪ್ರಸ್ತುತ ವಿಹಾನ್ ರವರು "ಹೈಯಾ"ಎನ್ನುವ ಎನ್‌ಜಿಓ ದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದು ಯುವಜನರಿಗಾಗಿ ಕೆಲಸ ಮಾಡುತ್ತದೆ. ಜೀವನದಲ್ಲಿ ಗೊಂದಲ, ತಳಮಳ, ತಾರತಮ್ಯ ಅನುಭವಿಸುತ್ತಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಕ್ವೀರ್ ಕೌನ್ಸಿಲರ್ ಆಗಿ ಕೆಲಸ ಮಾಡುತ್ತಿದ್ದಾರೆ.

"ಮ್ಯಾಸ್ಕುಲೈನಿಟಿ ಕುಚ್ ಮರ್ದಾನಿ ಗಪ್ ಚುಪ್" ಒಂದು ಪ್ರಸಾರವಾಹಿನಿ ಮಾಡುತ್ತಿದ್ದಾರೆ. ಅಲ್ಲದೆ ಒಳ್ಳೆಯ ಬರಹ, ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ಅಂಬೇಡ್ಕರೇಟ್ ಕ್ವೀರ್ ಫೆಮಿನಿಸ್ಟ್ ಎಂದು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ.

ಒಟ್ಟಿನಲ್ಲಿ ತಮ್ಮೆಲ್ಲರಿಗೂ ಹೆಣ್ತನ, ಗಂಡುತನ ಎಂಬುದಕ್ಕೆ ಮರು ವ್ಯಾಖ್ಯಾನ ಕುರಿತು ಅರಿವು ನೀಡಲು ಆ ದಿಕ್ಕಿನಲ್ಲಿ ಆಲೋಚನೆ ಮಾಡಲು ವಿಹಾನ್ ಮಾರ್ಗದರ್ಶಿಯಾಗಿರುತ್ತಾರೆ ಎಂಬುದು ಒಕ್ಕೂಟದ ಆಶಯ.

# ತೃತೀಯ ಲಿಂಗಿಗಳು ಮುಖ್ಯವಾಹಿನಿಯಲ್ಲಿರಬೇಕು

ವಿಹಾನ್

ಅವರು ನನ್ನ ಬಗ್ಗೆ ಏನು ಹೇಳಿದರು ಎಂದು ನನಗೆ ಅರ್ಥವಾಗಲಿಲ್ಲ; ಆದರೆ ನಾನು ಈಗ ಏನು ಮಾತನಾಡುತ್ತಿದ್ದೇನೆಂದು ನಿಮಗೆ ಅರ್ಥವಾಗಬೇಕೆಂದು ನಾನು ಬಯಸುತ್ತೇನೆ. ಮೊದಲನೆಯದಾಗಿ, ಜೈ ಭೀಮ್! ಜೈ ಸಾವಿತ್ರಿ!! ಎಲ್ಲರಿಗೂ ಸತ್ರಂಗಿ ಸಲಾಂ!!!

ನಾನು ಮಹಿಳೆ ಎಂದು ಗುರುತಿಸಿಕೊಳ್ಳದ ಕಾರಣ ಇಂದು, ಅಂತರರಾಷ್ಟ್ರೀಯ ಮಹಿಳಾ ದಿನದಂದು, ವೇದಿಕೆಯ ಮೇಲೆ ಬಂದು ಮಾತನಾಡಲು ಇದು ನನ್ನ ಸ್ಥಳವಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ ಅಖಿಲಾ ಅವರ ಕೋರಿಕೆಯ ಮೇರೆಗೆ ನಾನು ಇಲ್ಲಿಗೆ ಬಂದು, ನೀವು ಆಚರಿಸುತ್ತಿರುವ ಕರ್ನಾಟಕ ಮಹಿಳಾ ಶಕ್ತಿಯ ಸಮಾವೇಶವನ್ನು ವೀಕ್ಷಿಸಲು ಸಾಧ್ಯವಾಯಿತು. ಅವರು ಏರ್ಪಡಿಸಿರುವ ಎರಡೂ ಮಹಿಳಾ ಕಾರ್ಯಕ್ರಮಗಳು ತುಂಬಾ ಶಕ್ತಿಯುತವಾಗಿವೆ, ಅದು ನಾನು ನನ್ನ ಜೀವನದಲ್ಲಿ ಮತ್ತಷ್ಟು ಕೆಲಸ ಮಾಡಲು ನನಗೆ ಸ್ಫೂರ್ತಿ ನೀಡಿದೆ. ಈ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಧನ್ಯವಾದಗಳು.

ನಾನು ಹೊಸದಾಗಿ ಏನನ್ನೂ ಮಾತನಾಡಲು ಹೋಗುವುದಿಲ್ಲ. ಇಲ್ಲಿರುವ ಮಹಿಳೆಯರು ಹೆಚ್ಚಾಗಿ ಲಿಂಗ ತಾರತಮ್ಯ ರಹಿತ ಸ್ಥಳಗಳಲ್ಲಿ ದುಡಿಯುತ್ತಿದ್ದು, ಈ ವಿಷಯಗಳ ಕುರಿತು ರಾಜಕೀಯೇತರ ಸಂಸ್ಥೆಗಳ ಮೂಲಕ ಕೆಲಸ ಮಾಡುತ್ತಿದ್ದಾರೆ. ನನಗಾದ ಅನುಭವಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಇವು ಮಹಿಳಾ–ಮಹಿಳಾ ಸಂಗತಿಗಳು, ಜಾತಿ ವಿರೋಧಿ ಚಳುವಳಿಗಳು ಮತ್ತು ಪೂರ್ಣ ಮತ್ತು ಅರೆ ತೃತೀಯ ಲಿಂಗಿ ಚಳುವಳಿಗಳಲ್ಲಿ ನನ್ನ ನೇರ ಭಾಗವಹಿಸುವಿಕೆಯಿಂದಾಗಿ ಬಂದ ಅನುಭವಗಳು.

ಮೊದಲನೆಯದಾಗಿ ಎಲ್ಲರಿಗೂ, ತೃತೀಯ ಲಿಂಗಿ ಮಹಿಳೆಯರಿಗೂ – ಅವರು ಇಲ್ಲಿ ಇಲ್ಲದಿದ್ದರೂ ಈ ದೇಶದಲ್ಲಿರುವವರಿಗೆ – ಮಹಿಳಾ ದಿನಾಚರಣೆಯ ಶುಭಾಶಯಗಳು. ಮಹಿಳೆಯರ ಬಗ್ಗೆ ಮಾತನಾಡುವಾಗ, ನಾವು ತೃತೀಯ ಲಿಂಗಿ ಮಹಿಳೆಯರ ಬಗ್ಗೆ ಮರೆತುಬಿಡುತ್ತೇವೆ. ಎಲ್ಲಾ ಮಹಿಳೆಯರಿಗೂ, ಸಾಮಾನ್ಯ ಮಹಿಳೆಯರಿಗೂ, ಸಲಿಂಗಿ ಮಹಿಳೆಯರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳು. ನಾವು ಮಹಿಳೆಯರ ಬಗ್ಗೆ ಮಾತನಾಡುವಾಗ, ಎಲ್ಲಾ ಮಹಿಳೆಯರೂ ಸಾಮಾನ್ಯ ಮಹಿಳೆಯರಲ್ಲ, ಅವರಲ್ಲಿ ಕೆಲವರು ಲೈಂಗಿಕತೆಯಿಂದ ಸಲಿಂಗಿ ಮಹಿಳೆಯರು ಎಂಬುದುನ್ನು ನಾವು ಮರೆತುಬಿಡುತ್ತೇವೆ. ನಾವು ತೃತೀಯ ಲಿಂಗಿ ಜನರ ಬಗ್ಗೆ ಮಾತನಾಡುವಾಗ, ನಾವು ತೃತೀಯ ಲಿಂಗಿ ಮಹಿಳೆಯರ ಬಗ್ಗೆ ಅಥವಾ ತೃತೀಯ ಲಿಂಗಿ ಫೆಮಿನ್ಯೈನ್ ವಲಯದೊಂದಿಗೆ ಬರುವ ಕೆಲವು ಸ್ಥಳೀಯವಾಗಿ ಪರಿಚಯವಿರುವ ಗುಂಪುಗಳ ಬಗ್ಗೆ ಮಾತ್ರ ಯೋಚಿಸುತ್ತೇವೆ. ಆದರೆ ನಾವು ತೃತೀಯ ಲಿಂಗಿ ಮಹಿಳೆಯರು ಮತ್ತು ತೃತೀಯ ಲಿಂಗಿ ಪುರುಷರ ಮತ್ತು ಹುಟ್ಟುವಾಗ ಮಹಿಳೆಯರಾಗಿ ಗುರುತಿಸಲ್ಪಡದ, ಮಹಿಳೆಯರೆಂದು ಗುರುತಿಸಲ್ಪಡದ ವ್ಯಕ್ತಿಗಳೂ ಕೂಡ ಅಸ್ತಿತ್ವದಲ್ಲಿದ್ದಾರೆ ಎಂದು ನಾನು ನಿಮಗೆ ನೆನಪಿಸಲು ಬಯಸುತ್ತೇನೆ. ಎಲ್ಲಾ ಜೀವಗಳೂ ಮುಖ್ಯವೇ.

ನಾವು ತೃತೀಯ ಲಿಂಗಿಗಳು ಬೆಳೆಯುವಾಗ, ಹಲವಾರು ಸಮಸ್ಯೆಗಳನ್ನೂ, ಹಿಂಸೆಯನ್ನೂ ಎದುರಿಸುತ್ತೇವೆ. ನಮ್ಮ ಜೀವನದ ಬಗ್ಗೆ ಮಾತನಾಡುವಾಗ, ನಮಗೆ ಮುಖ್ಯವಾದ ನಮ್ಮ ಲಿಂಗ ಆಧಾರಿತ ಹಿಂಸಾಚಾರದ ಸಮಸ್ಯೆಗಳ ಬಗ್ಗೆ ನಿಮಗೆ ನೆನಪಿಸಲು ನಾನು ಇಲ್ಲಿ ಬಂದಿದ್ದೇನೆ. ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ, ನಮ್ಮ ಆಯ್ಕೆಗೆ ಸಂಬಂಧಿಸಿದ ವಿಷಯವನ್ನು ನಾವು ಮಾತನಾಡಲು ಬಯಸುತ್ತೇವೆ. ನಾನು ಏನಾಗಿರಲು ಬಯಸುತ್ತೇನೆಯೋ ಹಾಗೆಯೇ ಇರಬೇಕೆಂದು ಇಷ್ಟಪಡುತ್ತೇನೆ. ಇದು ರಾಜಕೀಯ ವಿಷಯವೂ ಆಗಿರಬಹುದು. ಮಹಿಳಾ ಚಳವಳಿಯು ನಮಗೆ ಅನೇಕ ಸೌಲಭ್ಯಗಳನ್ನು, ವೈಯಕ್ತಿಕವಾಗಿ ರಾಜಕೀಯ ಅನುಕೂಲಗಳನ್ನು, ನೀಡಿದೆ. ಇದು ನಮಗೆ ಮುಖ್ಯವೇ. ಆದರೆ ಇಂದು, ನಾವು ಜನರ ಧರ್ಮವನ್ನೂ, ಅವರ ಲಿಂಗತ್ವವನ್ನೂ, ಅವರು ಧರಿಸುವ ಉಡುಪಿನ ಆಧಾರದಲ್ಲಿ ನಿರ್ಣಯಿಸುವುದು ಹೆಚ್ಚಾಗುತ್ತಿದೆ. ಇಂದಿನ ಜಗತ್ತಿನಲ್ಲಿ ನಮ್ಮ ಆಯ್ಕೆಗಳು ಬಹಳ ಸೀಮಿತವಾಗುತ್ತಿವೆ. ನೀನು ನೀನೇ ಆಗಿರು ಎಂದು ನಾನು ಈ ವೇದಿಕೆಯಲ್ಲಿ ಕುಳಿತಿರುವ ಎಲ್ಲಾ ಮಹಿಳೆಯರಿಗೂ, ಪುರುಷರಿಗೂ ಹೇಳುತ್ತಿದ್ದೇನೆ. ಇಂದು ಎಲ್ಲವೂ ರಾಜಕೀಯವಾಗಿದೆ. ನಾವು ಏನು ತಿನ್ನುತ್ತೇವೆಂಬುದೂ ರಾಜಕೀಯ ವಿಷಯವಾಗಿ ಮಾರ್ಪಟ್ಟಿದೆ. ಏನನ್ನು

ತಿನ್ನುತ್ತಾರೆನ್ನುವ ಕಾರಣಕ್ಕಾಗಿ ಜನರು ಹಿಂಸೆಗೊಳಪಟ್ಟು, ನರಳುತ್ತಿದ್ದಾರೆ. ಆದ್ದರಿಂದ, ನಾವು ನಮಗಿಷ್ಟವಾದದ್ದನ್ನು ಮಾಡಲು ಬಯಸುವ ಯಾವುದನ್ನೇ ಆದರೂ, ಪೂರ್ಣ ಪ್ರಮಾಣದಲ್ಲಿ ಮಾಡಲು ಹಕ್ಕು ಪಡೆಯುವುದು ನಮಗೆಲ್ಲರಿಗೂ ಮುಖ್ಯವಾಗಿದೆ. ನಮ್ಮ ಮೂಲಭೂತ ವಸತಿ ಹಕ್ಕನ್ನು – ಆಶ್ರಯವನ್ನು – ಸಹ ಸರ್ಕಾರವು ಕಿತ್ತುಕೊಳ್ಳುತ್ತಿದೆ. ಅದಕ್ಕೆ ಹೆಚ್ಚಿನ ಉದಾಹರಣೆಗಳನ್ನು ನಾನಿಲ್ಲಿ ನೀಡಲು ಬಯಸುವುದಿಲ್ಲ; ಅವೇನೆಂದು  ನಮಗೆಲ್ಲರಿಗೂ ತಿಳಿದಿದೆ. ಇಂಥ ಪರಿಸ್ಥಿತಿಯಲ್ಲಿ, ನಾನು ಮಹಿಳೆಯರು, ನಿರ್ಲಕ್ಷಿತರು ಅಥವಾ ತೃತೀಯ ಲಿಂಗಿಗಳ ಬಗ್ಗೆ ಮಾತನಾಡುವುದು ಹೆಚ್ಚು ಕಷ್ಟಕರವಾಗುತ್ತಿದೆ. ಸುರಕ್ಷಿತ ವಸತಿ, ಆಶ್ರಯ ತಾಣ, ಸುರಕ್ಷತೆ, ಭದ್ರತೆಗಳು ನಮಗೆ ಸಿಗುತ್ತಿಲ್ಲ. ಇಂದಿನ ರಾಜಕೀಯ ಸನ್ನಿವೇಶದಲ್ಲಿ, ದೃಢವಾಗಿ ಯೋಚಿಸುವುದು, ನಮ್ಮ ಪ್ರತಿಯೊಂದು ಕಾರ್ಯಗಳು ಹೇಗೆ ಮುಖ್ಯವೆಂದು ನೋಡುವುದು ಮತ್ತು ನಮ್ಮ, ನಮ್ಮ ಆತ್ಮಸಾಕ್ಷಿಯಂತೆ ರಾಜಕೀಯ ಮಾಡುವುದು ನಮಗೆಲ್ಲರಿಗೂ ಮುಖ್ಯವಾಗಿದೆ. ನನ್ನ ಆತ್ಮಸಾಕ್ಷಿಯ ರಾಜಕೀಯವೇ ನನ್ನ ಗುರುತಾಗಿದ್ದರೂ, ಎಲ್ಲರದೂ ಒಂದೇ ಆಗಿರಬೇಕಿಲ್ಲ; ವಿಭಿನ್ನವಾಗಿರಬಹುದೆಂದೂ ನನಗೆ ತಿಳಿದಿದೆ. ಇದು ಸ್ವಲ್ಪ ವಿಚಿತ್ರವಾಗಿ ಕಾಣಿಸಬಹುದಾದರೂ, ಇದು ನಮಗೆ ಮುಖ್ಯ ಎಂದು ನಾನು ಪೂರ್ಣ ಆತ್ಮಸಾಕ್ಷಿಯೊಂದಿಗೆ, ರಾಜಕೀಯ ಪ್ರಜ್ಞೆಯೊಂದಿಗೆ ಹೇಳುತ್ತಿದ್ದೇನೆ. ನಮ್ಮ ಈಗಿನ ನ್ಯಾಯಾಂಗ ವ್ಯವಸ್ಥೆಯೂ ತೃತೀಯ ಲಿಂಗಿಗಳ ಪರವಾಗಿಲ್ಲ ಎಂದು ನಾನು ಹೇಳಲು ಬಯಸುತ್ತೇನೆ. ನಾವೆಲ್ಲರೂ ಒಗ್ಗೂಡಿ ಈ ಅನ್ಯಾಯಗಳ ವಿರುದ್ಧ ಒಗ್ಗಟ್ಟನ್ನು ತರಲು, ಒಗ್ಗಟ್ಟಿನಿಂದ ಹೋರಾಡಲು ಪ್ರಯತ್ನಿಸೋಣ.

ಮಹಿಳಾ ಚಳವಳಿಯಿಂದಾಗಿಯೇ ಇಂದು, ಒಬ್ಬ ತೃತೀಯ ಲಿಂಗಿ ವ್ಯಕ್ತಿಯಾಗಿ ನಾನು ಹಿಂಸೆ, ತಾರತಮ್ಯ ನೀತಿ, ಲೈಂಗಿಕ ಕಿರುಕುಳಗಳ ವ್ಯಾಖ್ಯಾನವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಇದಕ್ಕಾಗಿ ನಾನು ನಿಜವಾಗಿಯೂ ಮಹಿಳಾ ಚಳವಳಿಗಾರರಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ಮಹಿಳಾ ಚಳವಳಿಯು ನಮಗೆ ಒದಗಿಸಿರುವ ಸಹಾಯಗಳಿಂದಾಗಿಯೇ ಇಂದು ನಾವು ತೃತೀಯ ಲಿಂಗಿಗಳು ನಮಗಾಗುತ್ತಿರುವ ಹಿಂಸೆ, ತಾರತಮ್ಯ ಧೋರಣೆ ಮತ್ತು ನೋವುಗಳನ್ನು ಉತ್ತಮ ರೀತಿಯಲ್ಲಿ ಪರಿಹರಿಸಿಕೊಳ್ಳಲು ಸಮರ್ಥರಾಗಿದ್ದೇವೆ. ಹಿಂದೆ ಯಾವುದೋ ಒಂದು ದಿನ ಸಾವಿತ್ರಿ ಬಾಯಿ ಫುಲೆ ಎದ್ದುನಿಂತು ಮಹಿಳೆಯರಿಗಾಗಿ ಶಿಕ್ಷಣವನ್ನು ಪ್ರಾರಂಭಿಸಿದ್ದರಿಂದಾಗಿ ಇಂದು ನಾನು ನನ್ನ ಶಿಕ್ಷಣವನ್ನು ಪೂರ್ಣಗೊಳಿಸಲು ಸಾಧ್ಯವಾಯಿತು. ನಾನು ತೃತೀಯ ಲಿಂಗಿ ಆಗಿರುವುದರಿಂದ, ಅಂದಿನಂತಹ ಸಂದರ್ಭಗಳಲ್ಲಿ ನನಗೆ ಯಾವುದೇ

ರೀತಿಯ ಶಿಕ್ಷಣಕ್ಕೆ ಅವಕಾಶ ಸಿಗುತ್ತಿರಲಿಲ್ಲ ಎಂದು ನಾನು ಭಾವಿಸುತ್ತೇನೆ.

ಮಹಿಳಾ ಚಳುವಳಿಗಳ ಕಾರಣದಿಂದಾಗಿ ಕೌಟುಂಬಿಕ ಹಿಂಸೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ, ಲಿಂಗಾಧಾರಿತ ಹಿಂಸಾಚಾರದ ವಿರುದ್ಧ ಎಲ್ಲಾ ಕಾಯಿದೆಗಳು, ನೀತಿಗಳು ಮತ್ತು ನ್ಯಾಯಾಂಗ ವ್ಯವಸ್ಥೆಗಳು ಜಾರಿಯಲ್ಲಿದ್ದರೂ, ಅವು ಸಾಮಾನ್ಯ ಮಹಿಳೆಯರಿಗಾಗಿವೆಯಷ್ಟೇ ಇವೆ. ಈ ನ್ಯಾಯಾಂಗ ವ್ಯವಸ್ಥೆಗಳು ಕೇವಲ ಸಾಮಾನ್ಯ ಮಹಿಳೆಯರಿಗಾಗಿವೆಯಷ್ಟೇ ಜಾರಿಯಲ್ಲಿವೆ ಎಂದು ನಾನು ಹೇಳಲು ಬಯಸುತ್ತೇನೆ. ಯಾರೋ, ಕೆಲವು ಮಹಿಳೆಯರು ಮುಂದೆ ಬಂದು, ಅವುಗಳ ಬಗ್ಗೆ ಯೋಚಿಸಿ, ಅದಕ್ಕಾಗಿ ಹೋರಾಡಿದ್ದರಿಂದಾಗಿ, ಆ ವ್ಯವಸ್ಥೆಗಳನ್ನು ತರಲು ಸಾಧ್ಯವಾಗಿ, ಇಂದಿನ ದಿನಗಳಲ್ಲಿ, ಬಹಳಷ್ಟು ಮಹಿಳೆಯರು ಅವುಗಳನ್ನು ಬಳಸಲು ಸಾಧ್ಯವಾಗಿದೆ. ಅದರಿಂದಾಗಿ ನಾವು, ತೃತೀಯ ಲಿಂಗಿಗಳು ಇವುಗಳು ಕೇವಲ  ಸಾಮಾನ್ಯ ಮಹಿಳೆಯರಿಗಾಗಿವೆಯಷ್ಟೇ ಇವೆ ಎಂದು ಜೋರಾಗಿ ಹೇಳುವ ಸ್ಥಿತಿಯಲ್ಲಿದ್ದೇವೆ. ಈಗ ನಮಗೆ ಉತ್ತಮ ಕಾನೂನು ಬೇಕು, ಏಕೆಂದರೆ ನಾವು, ಮಹಿಳೆಯರೂ, ತೃತೀಯ ಲಿಂಗಿಗಳೂ ಜಾಗೃತರಾಗಿದ್ದೇವೆ.

ಇಂದು ಹಣದುಬ್ಬರವು ಬಹಳಷ್ಟು ಉಲ್ಬಣಗೊಂಡಿದೆ. ಇದು ಮಹಿಳೆಯರು, ನಿರ್ಲಕ್ಷಿತ ಜನರು ಮತ್ತು ತೃತೀಯ ಲಿಂಗಿಗಳ ಮೇಲೆ ತೀವ್ರವಾದ ಪರಿಣಾಮ ಬೀರುತ್ತಿದೆ. ಏಕೆಂದರೆ ನಮಗೆ ತೃತೀಯ ಲಿಂಗಿಗಳಿಗೆ ಉತ್ತಮ ಉದ್ಯೋಗಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ತಾರತಮ್ಯ ಮತ್ತು ತೃತೀಯ ಲಿಂಗಿಗಳೆಂಬ ಗುರುತಿನ ಕಾರಣದಿಂದಾಗಿ ಬಹಳಷ್ಟು ತೃತೀಯ ಲಿಂಗಿಗಳಿಗೆ ಉತ್ತಮ ಉದ್ಯೋಗಗಳನ್ನು ನಿರಾಕರಿಸಲಾಗುತ್ತಿದೆ. ನಮಗೆ ಅಗತ್ಯವಿರುವ ನಮ್ಮ ಮೂಲ ಗುರುತನ್ನು ಹೊಂದಿಲ್ಲದಿರುವುದು ಇದಕ್ಕೆ ಕಾರಣ. ನಾವು ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವಾಗ, ಬ್ಯಾಂಕ್ ಖಾತೆಗಳನ್ನು ತೆರೆಯಲು ಬಯಸಿದಾಗ, ನಮಗೆ ಸೂಕ್ತ ಗುರುತಿನ ಚೀಟಿಗಳನ್ನು ಹೊಂದಿಲ್ಲವೆಂಬ ಕಾರಣಕ್ಕಾಗಿ ಅವೆಲ್ಲವನ್ನೂ ನಿರಾಕರಿಸಲಾಗುತ್ತಿದೆ. ಆದರೆ ಮತದಾರರ ಗುರುತಿನ ಚೀಟಿಯನ್ನು ಮಾತ್ರ ಕಡ್ಡಾಯವಾಗಿ ನೀಡಲಾಗಿದೆ; ಏಕೆಂದರೆ, ರಾಜಕಾರಣಿಗಳಿಗೆ ನಮ್ಮ ಮತಗಳು ಬೇಕಲ್ಲ! ಹೀಗಾಗಿ, ಮತ ಚಲಾಯಿಸುವ ಹಕ್ಕನ್ನು ಮಾತ್ರ ನಾವು ಹೊಂದಿದ್ದೇವೆ. ಈ ಕಾರಣಗಳಿಗಾಗಿಯೇ ಇಂತಹ ವಿಷಯಗಳ ಬಗ್ಗೆ ಮಾತನಾಡಲು ಪ್ರಾರಂಭಿಸುವುದು ಈಗ ಹೆಚ್ಚು ಮುಖ್ಯವಾಗಿದೆ. ನಾವು ಬದಲಾವಣೆಗಳನ್ನು ತರುವ ಬಗ್ಗೆ ಮಾತನಾಡುವಾಗ ತೃತೀಯ ಲಿಂಗಿಗಳ ಹಕ್ಕುಗಳನ್ನು ರಕ್ಷಿಸುವ ಕಾಯಿದೆಗಳಲ್ಲಿ ನಾವು ಯಾವ ರೀತಿಯ ಬದಲಾವಣೆಗಳನ್ನು ತರುತ್ತಿದ್ದೇವೆ ಎಂಬುದು ಸಹ ಮುಖ್ಯ; ಏಕೆಂದರೆ ಈಗ ಜಾರಿಯಲ್ಲಿರುವ ಕಾಯ್ದೆಗಳು

ಉತ್ತಮವಾಗಿಲ್ಲ. ಇದು ಬಹಳಷ್ಟು ತೃತೀಯ ಲಿಂಗಿ ಜನರ ಮೇಲೆ ಕೆಟ್ಟ ರೀತಿಯ ಪರಿಣಾಮಗಳನ್ನು ಬೀರುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಸಿಎಎ, ಎನ್‌ಆರ್‌ಸಿ, ಏಕರೂಪ ನಾಗರಿಕ ಸಂಹಿತೆ ಕಾಯಿದೆ ಇತ್ಯಾದಿಗಳನ್ನು ದೇಶಕ್ಕೆ ಪರಿಚಯಿಸುತ್ತಿರುವುದರಿಂದ, ತೃತೀಯ ಲಿಂಗಿಗಳು ಮಾತ್ರವಲ್ಲ, ಸಾಮಾನ್ಯ ಮಹಿಳೆಯರೂ ಸಹ ಕೆಟ್ಟ ಪರಿಣಾಮಗಳನ್ನು ಅನುಭವಿಸುತ್ತಾರೆ ಎಂದು ನಮಗೆ ತಿಳಿದಿದೆ. ಅವರಲ್ಲಿ ಕೆಲವರಿಗೆ ಗುರುತಿನ ಚೀಟಿ ಇಲ್ಲದಿರಬಹುದು, ಕೆಲವರು ಅಂತರ್ಜಾತಿ/ ಅಂತರ್ಧರ್ಮ/ ಅಂತರ್ಲಿಂಗ ವಿವಾಹಗಳ ಕಾರಣದಿಂದಾಗಿ ಕುಟುಂಬದಿಂದ ಹೊರಹಾಕಲ್ಪಟ್ಟಿರಬಹುದು, ಕೌಟುಂಬಿಕ ದೌರ್ಜನ್ಯ, ವಿಚ್ಛೇದನ, ವರದಕ್ಷಿಣೆಯ ದುಷ್ಪರಿಣಾಮ ಇತ್ಯಾದಿಗಳಿಂದ ನೊಂದಿರಬಹುದು. ಇದು ನಾವೆಲ್ಲರೂ ಎಲ್ಲರನ್ನೂ ಒಳಗೊಳ್ಳುವ ರೀತಿಯಲ್ಲಿ ಯೋಚಿಸಬೇಕಾದ ಸಮಯ. ನಾವು ಮಹಿಳಾ ಹಕ್ಕುಗಳ ಬಗ್ಗೆ ಯೋಚಿಸುವಾಗ, ಸವರ್ಣ ವಲಯದ ಸಾಮಾನ್ಯ ಮಹಿಳೆಯರ ಬಗ್ಗೆ ಮಾತ್ರವಲ್ಲ, ನಿರ್ಲಕ್ಷಿತ ವಲಯದಿಂದ ಬಂದವರ ಬಗ್ಗೆಯೂ ಯೋಚಿಸಬೇಕು. ಇದನ್ನು ನಾನೇನೂ ಹೊಸದಾಗಿ ಹೇಳುತ್ತಿಲ್ಲ; ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಆದಿವಾಸಿ ಮಹಿಳೆಯರು, ದಲಿತ ಮಹಿಳೆಯರ ಬಗ್ಗೆ ದಶಕಗಳಿಂದ ಜನರು ಮಾತನಾಡುತ್ತಿದ್ದಾರೆ. ಈಗ ಕೇವಲ ಸಾಮಾನ್ಯ ಮಹಿಳೆಯರ ಬಗ್ಗೆ ಮಾತ್ರವಲ್ಲ, ತೃತೀಯ ಲಿಂಗಿ ಮಹಿಳೆಯರ ಬಗ್ಗೆ ಮಾತನಾಡುವುದು ಸಹ ಅಷ್ಟೇ ಮುಖ್ಯವಾಗಿದೆ.

ಬಂಡವಾಳೀಕರಣವು ಬಹಳಷ್ಟು ಹೆಚ್ಚುತ್ತಿದೆ. ಇದರ ದುಷ್ಪರಿಣಾಮವು ಆದಿವಾಸಿ ಸಮುದಾಯದ ಸ್ನೇಹಿತರ ಮೇಲೆ ಕೂಡ ಬಹಳಷ್ಟು ಆಗಿದೆ. ಈ ಎಲ್ಲಾ ತೊಂದರೆಗಳಿಗೂ ಈಗಿನ ಸರ್ಕಾರವು ತರುತ್ತಿರುವ ನೀತಿಗಳು ಮತ್ತು ಕಾಯಿದೆಗಳೇ ಕಾರಣ. ನಾವು ಜಲ್, ಜಂಗಲ್, ಜಮೀನ್ ಬಗ್ಗೆ ಮಾತನಾಡುವಾಗ ಅದು ಆದಿವಾಸಿಗಳ ವಲಯಕ್ಕೆ ಮಾತ್ರವಲ್ಲ, ನಮ್ಮೆಲ್ಲರ ಮೇಲೂ ದುಷ್ಪರಿಣಾಮಗಳನ್ನು ಬೀರುತ್ತಿದೆ. ನಾವು ಹವಾಮಾನ ಬದಲಾವಣೆ, ಜೀವನೋಪಾಯ, ಜಲ್, ಜಂಗಲ್, ಜಮೀನ್‌ಗಳ ಪರಿಣಾಮಗಳ ಬಗ್ಗೆ ಮಾತನಾಡುವಾಗ, ಆದಿವಾಸಿ ಮಹಿಳೆಯರು ಮತ್ತು ತೃತೀಯ ಲಿಂಗಿಗಳು ಎಲ್ಲರಿಗಿಂತ ಹೆಚ್ಚು ನೋವು ಅನುಭವಿಸುತ್ತಾರೆ.

ನಾವು ನಮ್ಮ ಹಕ್ಕುಗಳ ಬಗ್ಗೆ ಯೋಚಿಸುವಾಗ, ಈ ಮುಂದಿನ ಹಕ್ಕುಗಳ ಬಗ್ಗೆಯೂ ಯೋಚಿಸುವುದು ಹೆಚ್ಚು ಮುಖ್ಯವಾಗಿದೆ. ಲಿಂಗದ ಬಗ್ಗೆ ಮುಂಬರುವ ದಿನಗಳಲ್ಲಿ ತರಲಾಗುವ ಲಿಂಗೀಯ ಹಕ್ಕುಗಳ, ಗರ್ಭಪಾತದ ಹಕ್ಕುಗಳ ನೀತಿಗಳ ಬಗ್ಗೆ ವಿಶಾಲ ತಳಹದಿಯ ಮೇಲೆ ಯೋಚಿಸಲು ನಿಮಗೆ

ನೆನಪಿಸಲು ನಾನು ಬಯಸುತ್ತೇನೆ. ನಾನು ಮದುವೆಯ ಬಗ್ಗೆ ಒಲವನ್ನು ಹೊಂದಿಲ್ಲ. ಆದರೆ ಮದುವೆಯ ಹಕ್ಕುಗಳು ತೃತೀಯ ಲಿಂಗಿಗಳಿಗೂ ಮುಂದೆ ಅನ್ವಯಿಸಬಹುದು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ನಾವು, ತೃತೀಯ ಲಿಂಗಿಗಳೂ ಸಹ ಗರ್ಭಪಾತದ ಹಕ್ಕುಗಳನ್ನು ಹೊಂದಿರಬೇಕು ಎಂದು ನಾನು ಒತ್ತಾಯಿಸುತ್ತೇನೆ. ಏಕೆಂದರೆ ನಾವು ಕೂಡ ಈ ದೇಶದ ನಾಗರಿಕರಾಗಿದ್ದೇವೆ. ನಮ್ಮ ಈ ಹಕ್ಕಿನ ಬಗ್ಗೆಯೂ ಎದ್ದುನಿಂತು ಮಾತನಾಡಬೇಕೆಂದು ನಾನು ನಿಮಗೆ ನೆನಪಿಸುತ್ತೇನೆ. ತೃತೀಯ ಲಿಂಗಿ ಜನರು ಮತ್ತು ನಿರ್ಲಕ್ಷಿತ ವರ್ಗದ ಮಹಿಳೆಯರಿಗೆ ಯಾವುದೇ ಸಾಮಾಜಿಕ ಭದ್ರತೆ ಇಲ್ಲ. ಬಹಳಷ್ಟು ಕೆಳ ವರ್ಗದ ಒಂಟಿ ಪೋಷಕ ಮಹಿಳೆಯರು, ಒಂಟಿ ಮಾತೃ ಮಹಿಳೆಯರು ಏಕಾಂಗಿಯಾಗಿ ವಾಸಿಸುತ್ತಾರೆ – ಅವರು ತೃತೀಯ ಲಿಂಗಿ ಅಲ್ಲದಿರಬಹುದು – ಆದರೆ ಅವರಿಗೆ ಸಾಮಾಜಿಕ ಭದ್ರತೆಯ ಅಗತ್ಯವಿರುತ್ತದೆ. ಮಹಿಳೆಯರ ಆಸ್ತಿ ಹಕ್ಕುಗಳ ಬಗ್ಗೆಯೂ ನಾವು ಸಾಕಷ್ಟು ಯೋಚಿಸಿದ್ದೇವೆ. ತೃತೀಯ ಲಿಂಗಿ ಜನರ ಆಸ್ತಿ ಹಕ್ಕುಗಳ ಬಗ್ಗೆ ಯೋಚಿಸುವ ಸಮಯ ಇದು. ಜಾತಿ ವ್ಯವಸ್ಥೆಯನ್ನು ಪ್ರಶ್ನಿಸದೆ ಬದಲಾವಣೆ ಇಲ್ಲವಾದ್ದರಿಂದ ನಾವು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಲು ಬಯಸುತ್ತೇವೆ. ಜಾತಿ ಮತ್ತು ಲಿಂಗ ತಾರತಮ್ಯಗಳು ಜೊತೆ ಜೊತೆಯಲ್ಲೇ ಸಾಗುತ್ತವೆ. 2024 ರಲ್ಲಿ ಸಂಸತ್ತಿಗೆ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಅದರ ಬಗ್ಗೆ ನಾವೆಲ್ಲರೂ ಈಗಲೇ ಒಗ್ಗಟ್ಟಾಗಿ ನಿಂತು ಯೋಚಿಸಬೇಕು.

ಅನುವಾದ ಮತ್ತು ಬರಹ ರೂಪ: ಬಾ ಹ ಉಪೇಂದ್ರ

# ನಮಗೆ ಶಕ್ತಿ ತಂದಿತ್ತ ದಿನ

ಸುಮನಾ ನೆಟ್ಟಾರ್

ಎಲ್ಲರಿಗೂ ನಮಸ್ಕಾರ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು. ಗಾರ್ಮೆಂಟ್ಸ್ ಒಂದರ ಮಹಿಳಾ ಕಾರ್ಮಿಕರು ನೂರು ವರ್ಷಗಳ ಹಿಂದೆಯೇ ತಮ್ಮ ಮೂಲಭೂತ ಸೌಲಭ್ಯಗಳಿಗಾಗಿ, ಹಕ್ಕುಗಳಿಗಾಗಿ, ಸಮಾನತೆಗಾಗಿ ನಡೆಸಿದ ಹೋರಾಟದ ನೆನಪೇ ನಮ್ಮ ಇಂದಿನ ಈ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ. ಅಂದಿನ ಹೋರಾಟದ ನಾಯಕಿ ಕ್ಲಾರಾ ಝೆಟ್‌ಕಿನ್ ಅವರು ಮಹಿಳೆಯರಿಗೆಲ್ಲ ಹೋರಾಟಕ್ಕೆ ಕರೆಕೊಟ್ಟ ದಿನ ಮಾರ್ಚ್ 8.

ಇಂದು ಮಾಧ್ಯಮಗಳು, ಸಂಪರ್ಕ ಸಾಧನಗಳು ಮತ್ತು ಪ್ರಚಾರ ಸಾಕಷ್ಟು ಅನುಕೂಲಕರ ಸ್ಥಿತಿಯಲ್ಲಿವೆ. ಆದುದರಿಂದ ಮಹಿಳಾ ಚಳುವಳಿಗಳೆಂದರೆ ಅಸಂಖ್ಯಾತ ಮಹಿಳೆಯರು ಒಂದುಗೂಡಬಹುದಾಗಿದೆ. ಆದರೆ ಇಲ್ಲಿಗೆ ಸುಮಾರು ಒಂದು ಶತಮಾನದ ಹಿಂದೆಯೇ ಇವ್ಯಾವುದೇ ಸೌಲಭ್ಯಗಳಿಲ್ಲದ ಆ ದಿನಗಳಲ್ಲಿ ಕ್ಲಾರಾ ಕೊಟ್ಟ ಕರೆಗೆ 30,000 ಹೆಣ್ಣು ಮಕ್ಕಳು ಒಟ್ಟಾಗಿ ಹೋರಾಟಕ್ಕೆ ಬೀದಿಗಿಳಿದರೆಂದರೆ ಅವರುಗಳು ದೌರ್ಜನ್ಯಗಳಿಂದ ಎಷ್ಟು ನೊಂದಿರಬಹುದು, ಅವರ ಇಚ್ಛಾಶಕ್ತಿಯಾದರೂ ಎಂಥದ್ದಿರಬಹುದೆಂದು ನಾವೆಲ್ಲಾ ಅರ್ಥ ಮಾಡಿಕೊಳ್ಳಬೇಕಿದೆ.

ಅಂದಿನಿಂದ ಇಂದಿನವರೆಗೂ ಮಹಿಳಾ ಚಳುವಳಿಗಳು, ಹೋರಾಟಗಳು ನಡೆಯುತ್ತಲೇ ಇವೆ. 1975 ರಲ್ಲಿ ವಿಶ್ವಸಂಸ್ಥೆಯು ಮಾರ್ಚ್ 8ನೇ ತಾರೀಖನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷ, ಮಹಿಳಾ ದಿನಾಚರಣೆ ಎಂದು ಘೋಷಿಸಿತು. ಇಂದು ಜಗತ್ತಿನಾದ್ಯಂತ ಮಹಿಳೆಯರು ಸಮಾಜದ ಮುಖ್ಯ ವಾಹಿನಿಗೆ ಬರಲು ನಾನಾ ರೀತಿಯ ಹೋರಾಟಗಳನ್ನು ನಡೆಸುತ್ತಲೇ ಇದ್ದಾರೆ.

1992–93ನೇ ಸಾಲಿನಲ್ಲಿ ವಿಶ್ವಸಂಸ್ಥೆಯ ಸಭೆಯೊಂದರಲ್ಲಿ ಅಮೆರಿಕಾದ

ಮಹಿಳಾ ಪ್ರತಿನಿಧಿಯೊಬ್ಬರು ಕೇಳಿದ ಪ್ರಶ್ನೆ ಗಮನಾರ್ಹವಾಗಿದೆ. "ಜಗತ್ತಿನ ಎಲ್ಲಾ ದೇಶಗಳ ನಡುವೆ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವುದು ನಮ್ಮ ಉದ್ದೇಶ ಎನ್ನುತ್ತೀರಿ. ಶ್ರೀಮಂತ ರಾಷ್ಟ್ರಗಳು ಬಡ ರಾಷ್ಟ್ರಗಳ ಮೇಲೆ ಮಾಡುತ್ತಿರುವ ದೌರ್ಜನ್ಯಗಳು ಮಾತ್ರ ದೌರ್ಜನ್ಯವೇ? ಶಕ್ತಿಶಾಲಿ ತಂತ್ರಜ್ಞಾನ ಹೊಂದಿರುವ ದೇಶಗಳು ಕಮ್ಮಿ ತಂತ್ರಜ್ಞಾನ ಹೊಂದಿರುವ ದೇಶಗಳ ಮೇಲೆ ಮಾಡುವ ದೌರ್ಜನ್ಯ ದೌರ್ಜನ್ಯವಲ್ಲವೇ? ಬಿಳಿಯರು ಕರಿಯರ ಮೇಲೆ ಮಾಡುತ್ತಿರುವಂತಹ ದೌರ್ಜನ್ಯ ಮಾತ್ರ ದೌರ್ಜನ್ಯವೇ? ಹಾಗಾದರೆ ಎಲ್ಲಾ ವರ್ಗ, ವರ್ಣ, ಶ್ರೇಣಿ, ಬೌದ್ಧಿಕತೆಗಳಲ್ಲಿಯೂ ಮಹಿಳೆಯರ ಮೇಲೆ ಲೆಕ್ಕವಿಲ್ಲದಷ್ಟು ದೌರ್ಜನ್ಯಗಳು ನಡೆಯುತ್ತಿವೆಯಲ್ಲ ಇದು ದೌರ್ಜನ್ಯವಲ್ಲವೇ? ವಿಶ್ವದಾದ್ಯಂತ ಇರುವ ದಮನಿತ ಮಹಿಳೆಯರ ಸಂಕಷ್ಟಗಳನ್ನು ನಿವಾರಿಸಲು ವಿಶ್ವಸಂಸ್ಥೆಯು ಹಾಕಿಕೊಂಡಂತಹ ಕಾರ್ಯಕ್ರಮಗಳಾದರೂ ಏನು?" ಎಂದು ಕೇಳಿದ್ದಾರೆ ಆ ಮಹಿಳಾ ಪ್ರತಿನಿಧಿ.

ಎಷ್ಟೆಲ್ಲಾ ಕಾಯ್ದೆಗಳು, ಕಾನೂನುಗಳು ಬಂದರೂ ಲೆಕ್ಕವಿಲ್ಲದಷ್ಟು ಆಸಿಡ್ ದಾಳಿ, ಅತ್ಯಾಚಾರ, ಕೊಲೆ, ಹಿಂಸೆಗಳು ದಿನ ಬೆಳಗಾದರೆ ಮಹಿಳೆಯರ ಮೇಲೆ ನಡೆಯುತ್ತವೆ ಅನ್ನುವಂತಾದರೆ ನಮ್ಮ ಹೋರಾಟಕ್ಕೆ ಅರ್ಥವೇನು? ಎನ್ನುವಂತಹ ಪ್ರಶ್ನೆಗಳು ಏಳುತ್ತವೆ

ಇಂದಿನ ಕಾರ್ಯಕ್ರಮದಲ್ಲಿ ನಾನು ಜಾತ್ರೆಯ ರೀತಿಯಲ್ಲಿ ಸೇರಿ ಸಂಭ್ರಮಿಸುತ್ತಿದ್ದೇವೆ ಎಂದು ನಮ್ಮ ವಾಣಿ ಪೆರಿಯೋಡಿಯವರು ಹೇಳ್ತಾ ಇದ್ರು. ಇಂಥದೊಂದು ಸಂಭ್ರಮಕ್ಕೆ ಮೂಲ ಕಾರಣ ಸಂವಿಧಾನದಲ್ಲಿ ಮಹಿಳೆಯರಿಗೆ ಮೀಸಲಾತಿ ತಂದು ಕೊಟ್ಟಂತಹ ಮಹಾನುಭಾವ ಬಾಬಾಸಾಹೇಬ್ ಅಂಬೇಡ್ಕರ್ ಅವರು.

ನಮ್ಮ ವಿದ್ಯಾವಂತ ಹೆಣ್ಣು ಮಕ್ಕಳು ನಾವು ಓದಿದೆ, ಪದವಿಗಳಿಸಿಬಿಟ್ಟೆ, ಆರ್ಥಿಕವಾಗಿ ಸಬಲಳಾಗಿಬಿಟ್ಟೆ ಅಂತ ತಮ್ಮ ಪಾಡಿಗೆ ತಾವು ಸುಮ್ಮನೆ ಕೂರಬಾರದು. ತನ್ನಂತೆಯೇ ಅವಕಾಶ ವಂಚಿತರಾದ ಕಟ್ಟ ಕಡೆಯ ಸ್ನೇಹಿತೆ, ಸಹೋದರಿ, ಎಲ್ಲರೂ ಸಬಲರಾಗಬೇಕು, ಮುಖ್ಯ ವಾಹಿನಿಗೆ ಬರಬೇಕು ಎಂದು ಯೋಚಿಸಬೇಕು. ಈ ನಿಟ್ಟಿನಲ್ಲಿ ಸಮಾಜಮುಖಿವಾಗಿ ಕೆಲಸ ಮಾಡಬೇಕು. ಎಲ್ಲರೂ ಒಬ್ಬರಿಗೊಬ್ಬರು ಕೈಜೋಡಿಸಿದಾಗ ಮಾತ್ರ ನಾವು ಸಮಸಮಾಜದ ನಮ್ಮ ಗುರಿಯನ್ನು ತಲುಪಲು ಸಾಧ್ಯ.

ನಾವು ಒಂದು ಅಂಶವನ್ನು ಗಮನಿಸಬಹುದು. ಈ ಪ್ರಪಂಚದಲ್ಲಿ ಮೂರನೇ ಎರಡು ಭಾಗದಷ್ಟು ದುಡಿಮೆಯನ್ನು ಮಹಿಳೆ ಮಾಡುತ್ತಿದ್ದಾಳೆ. ಆದರೆ

ಆದಾಯವನ್ನು ಅನುಭವಿಸುವ ವಿಷಯದಲ್ಲಿ ಮಹಿಳೆ ಕೇವಲ ಹತ್ತನೇ ಒಂದು ಭಾಗವಾಗುತ್ತಾಳೆ. ಚರಾಸ್ತಿ, ಸ್ಥಿರಾಸ್ತಿಗಳ ಒಡೆತನದಲ್ಲಿಯೂ ಮಹಿಳೆ ಶೇಕಡ ಒಂದರಷ್ಟಾಗುತ್ತಾಳೆ. ಇಂತಹ ಅನ್ಯಾಯವನ್ನು ತಡೆಗಟ್ಟಲೇಬೇಕು. ಇದಕ್ಕಾಗಿ ಕಾನೂನಿನ ಅಸ್ತ್ರಗಳನ್ನು ನಾವು ಬಳಸಿಕೊಳ್ಳಬೇಕು.

ಸರ್ಕಾರಗಳು ಮಹಿಳಾ ಮೀಸಲಾತಿ, ಮಹಿಳಾ ಸಬಲೀಕರಣ, ಮಹಿಳಾ ಕಲ್ಯಾಣ ಇತ್ಯಾದಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಾಗ ನೆಪಮಾತ್ರಕ್ಕೆ ಒಬ್ಬ ಮಹಿಳೆಯನ್ನು ಛೇರ್ ಪರ್ಸನ್ ಎಂದು ಮಾಡುತ್ತಾರೆ. ಆದರೆ ಪುರುಷರೇ ಎಲ್ಲಾ ಕಾರ್ಯ ಯೋಜನೆಗಳನ್ನು ರೂಪಿಸುತ್ತಾರೆ. ಇದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದೀತು?

ಲೋಕಸಭೆಯಲ್ಲಾಗಲೀ, ವಿಧಾನಸಭೆಯಲ್ಲಾಲೀ ಶೇಕಡ 50ರಷ್ಟು ಮಹಿಳಾ ಮೀಸಲಾತಿಯನ್ನು ತರದೇ ಹೋದರೆ ಖಂಡಿತವಾಗಿಯೂ ನಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲ. 2004–05 ಸಾಲಿನಲ್ಲಿ ಆಂಧ್ರಪ್ರದೇಶದ ಸರ್ಕಾರ ತೆಗೆದುಕೊಂಡ ಕಾನೂನನ್ನು ಒಪ್ಪಿ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕನ್ನು ನೀಡಿದ್ದು ಸರಿಯಷ್ಟೆ. ಆದರೆ ಹೆಣ್ಣುಮಕ್ಕಳ ಸದೃಢ ಮತ್ತು ಘನತೆಯ ಬದುಕಿಗೆ ಅಷ್ಟು ಮಾತ್ರ ಸಾಕಾಗುವುದಿಲ್ಲ. ಸುಮಾರು 20–22 ವರ್ಷಗಳ ಕಾಲ ತನ್ನ ತಂದೆ ತಾಯಿಯರ ಜೊತೆ ಬೆಳೆದ ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಮದುವೆ ಮಾಡಿ ಕಳುಹಿಸಲಾಗುತ್ತದೆ. ಆ ಹೆಣ್ಣು ಮಗಳಿಗೆ ಅಲ್ಲಿಂದ ಮುಂದಕ್ಕೆ ಇರುವ ತನ್ನ ಇಡೀ ಜೀವಮಾನದ ದುಡಿತ, ಬದುಕು (ಸಾಯುವವರೆಗೂ) ಗಂಡನ ಮನೆಯಲ್ಲೇ. ಆದರೆ ಇವತ್ತಿಗೂ, ಈ ಕ್ಷಣಕ್ಕೂ ಕಾನೂನಿನಲ್ಲಿ ಯಾವುದೇ ಹಕ್ಕನ್ನು ಹೆಣ್ಣು ಮಕ್ಕಳಿಗೆ ಗಂಡನ ಆಸ್ತಿಯಲ್ಲಿ ಗಂಡ ಬದುಕಿದ್ದಾಗ ಕೊಟ್ಟಿಲ್ಲ ಅನ್ನುವುದು ವಿಪರ್ಯಾಸ ಹಾಗೂ ವಿಷಾದದ ಸಂಗತಿಯಾಗಿ.

ಇನ್ನು ಮಕ್ಕಳನ್ನು ಗುರುತಿಸುವಾಗಲೂ ತಂದೆಯ ಮೂಲಕವಾಗಿಯೇ ಗುರುತಿಸಲ್ಪಡುತ್ತಾರೆ. ಮೀಸಲಾತಿಯನ್ನು ಪಡೆಯುವಾಗ ತಂದೆಯ ಜಾತಿಯೇ ಪರಿಗಣಿಸಲ್ಪಡುತ್ತದೆಯೇ ಹೊರತು ತಾಯಿಯ ಜಾತಿಯಲ್ಲ. ಜಾತಿ ಗೋಡೆಯನ್ನು ದಾಟಿ ಅಂತರ್ಜಾತಿಯ, ಅಂತರ್ಧರ್ಮೀಯ ವಿವಾಹವಾದರೂ ಮತ್ತೆ ಯಾವುದಾದರೂ ಒಂದು ಜಾತಿ ಅಡಿಯಲ್ಲಿ ಸರ್ಕಾರದ ಗಣತಿಗೆ ಒಳಪಡಿಸುತ್ತೇವೆ. ಅದು ತಂದೆಯದ್ದೋ, ಗಂಡನದ್ದೋ ಜಾತಿ ಪರಿಗಣಿಸಲ್ಪಡುತ್ತದೆ. ತಾಯಿಯದ್ದೋ ಹೆಂಡತಿಯದ್ದೋ ಜಾತಿ ಮುನ್ನೆಲೆಗೆ ಯಾವುದೇ ಕಾರಣಕ್ಕೂ ಬರುವುದಿಲ್ಲ. ಇಂತಹ ಸಾಕಷ್ಟು ಬದಲಾವಣೆಗಳು ನಮ್ಮ ಸಮಾಜದಲ್ಲಿ ಆಗಲೇಬೇಕಿದೆ. ಗುರಿ

ತಲುಪುವವರೆಗೂ ನಮ್ಮ ಹೋರಾಟ ಮುಂದುವರಿಯಲೇಬೇಕು.

ಕೊನೆಯದಾಗಿ ಹೇಳುವುದೆಂದರೆ ಹೆಣ್ಣುಮಕ್ಕಳನ್ನು, ಮಹಿಳೆಯರನ್ನು ಅಂದರೆ ನಮ್ಮನ್ನು ಈ ಸಮಾಜ ದೇವತೆಗಳೆಂದು ಪೂಜಿಸುವುದು ನಮಗೆ ಬೇಕಾಗಿಲ್ಲ. ನಿಮ್ಮಂತೆ ಜೀವ ಭಾವಗಳಿರುವ ಮನುಷ್ಯರು ಎಂದು ಒಟ್ಟಿಗೆ ಹೆಜ್ಜೆಯಾಗುತ್ತಾ ಶಾಂತಿ–ಸಮಾನತೆಯಿಂದ, ಪರಸ್ಪರ ಗೌರವ–ಸೌಹಾರ್ದಗಳಿಂದ ಬದುಕುವಂತಾದರೆ ಅದಷ್ಟು ಸಾಕು ಎಂಬ ಆಶಯವನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಾ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂತಹ ತಮ್ಮೆಲ್ಲರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ನಮಸ್ಕಾರ.

ಬರಹ ರೂಪ: ರಾಣಿ ಚಂದ್ರಶೇಖರ್




ಗುಲ್ಬರ್ಗಾದಿಂದ ತುಮಕೂರಿಗೆ ಒಕ್ಕೂಟದಿಂದ ಡಾ. ಅರುಂಧತಿ ತಂದ ಗಿಡವನ್ನು ಕನ್ನಡ ಭವನದ ಆವರಣದಲ್ಲಿ ಹಾಕಲಾಯಿತು. ಇದರೊಂದಿಗೆ ತುಮಕೂರಿನಲ್ಲಿ ಒಕ್ಕೂಟದ ಚಟುವಟಿಕೆಗಳು ಪ್ರಾರಂಭವಾದವು.

# ಹೆಜ್ಜೆಗೆ ಹೆಜ್ಜೆ ಸೇರಿಸೋಣ

ಡಾ. ಗೀತಾ ವಸಂತ

ಎಲ್ಲಾ ಸಹೋದರಿಯರಿಗೆ ನಮಸ್ಕಾರ.

ಈ ಸಮಾವೇಶವು ಸಹೋದರಿತ್ವದ ಬಹುದೊಡ್ಡ ಆಶಯವನ್ನು ಸಾಕಾರಗೊಳಿಸುತ್ತಿದೆ. ಜಗತ್ತಿನ ಎಲ್ಲಾ ಕೇಡುಗಳನ್ನು ಎದುರಿಸಲು ನಾವೊಂದು ಸಮುದಾಯವಾಗಿ ಯೋಚಿಸುವ ಅಗತ್ಯವಿದೆ. ನಾವೆಲ್ಲ ಒಟ್ಟಿಗೆ ನಡೆದಾಗ ಒಂದು ಶಕ್ತಿಯಾಗಿ ಹೊಮ್ಮುತ್ತೇವೆ. ಲಿಂಗರಾಜಕಾರಣದ ಕಾರಣದಿಂದ ಛಿದ್ರವಾದ ನಮ್ಮ ಅಂತಃಸತ್ವವನ್ನು ಮತ್ತೆ ಒಗ್ಗೂಡಿಸಿಕೊಂಡು ಎದ್ದು ನಿಲ್ಲಲು ಇಂತಹ ಸಮಾವೇಶಗಳು ಸಹಾಯಕ. “ವೈಯುಕ್ತಿಕವೂ ರಾಜಕಾರಣವೇ” ಎಂಬ ಮಾತಿದೆ. ನಮ್ಮ ವ್ಯಕ್ತಿಗತ ಸಮಸ್ಯೆಗಳ ಬೇರು ವ್ಯವಸ್ಥೆಯಲ್ಲಿರುತ್ತದೆ. ವ್ಯವಸ್ಥೆಯು ಅಧಿಕಾರ ರಚನೆಗಳಿಂದ ಕೂಡಿರುತ್ತದೆ. ಈ ರಚನೆಗಳನ್ನು ಕಳಚಲು ನಾವು ಮತ್ತೆ ಸಮುದಾಯವಾಗಿಯೇ ಹೋರಾಡುವುದು ಅಗತ್ಯ. ಒಟ್ಟಾಗಿ ಅರಿಯುವ, ಒಟ್ಟಾಗಿ ಹೊಸದನ್ನು ಕಟ್ಟುವ ಪ್ರೇರಣೆಗಾಗಿ ನಾವಿಲ್ಲಿ ಸೇರಿದ್ದೇವೆ.

ನನ್ನ ದೇಹ ನನ್ನದು ಎಂಬುದು ಈ ಸಮಾವೇಶದ ಬೀಜವಾಕ್ಯ. ನಿಜ, ಇಷ್ಟು ಸರಳ ವಿಷಯವನ್ನು ಹೇಳಲು ನಾವು ಇಷ್ಟು ಸಮಯ ತೆಗೆದುಕೊಳ್ಳಬೇಕಾಯಿತು! ನಮ್ಮ ಪ್ರಾಕೃತಿಕವಾದ ದೇಹವನ್ನು ನಿಯಂತ್ರಿಸುವ ಸಾಂಸ್ಕೃತಿಕ ಪರಿಕಲ್ಪನೆಗಳಿಂದ ಬಿಡಿಸಿಕೊಳ್ಳಲು ಹೊಸ ಆಲೋಚನಾ ಕ್ರಮಗಳೇ ಬೇಕು. ಆದ್ದರಿಂದ ನನ್ನ ದೇಹವಷ್ಟೇ ಅಲ್ಲ, ನನ್ನ ಆಲೋಚನಾ ಕ್ರಮ ನನ್ನದು, ನನ್ನ ಪ್ರಜ್ಞೆ ನನ್ನದು ಎಂದು ಮುಂದುವರೆದು ಹೇಳಬೇಕಾಗಿದೆ. ನಮ್ಮ ಅಸ್ಮಿತೆಯ ಎಚ್ಚರದಿಂದ ಮಾತ್ರ ಇಂಥ ಮಾತುಗಳನ್ನು ಧೈರ್ಯವಾಗಿ ಆಡಲು ಸಾಧ್ಯ. ನನ್ನ ಲಿಂಗೀಯ ಅಸ್ಮಿತೆಯನ್ನು, ಅದು ಸ್ತ್ರೀ, ಪುರುಷ, ತೃತೀಯ ಲಿಂಗಿ, ಲಿಂಗ ಪರಿವರ್ತಿತ ಹೀಗೆ ಯಾವುದೇ ಆಗಿರಲಿ ಅದನ್ನು ಬದುಕುವ ಹಕ್ಕು ನಮಗಿದೆ.

ದೇಹಾನುಭವಗಳನ್ನು ಮರೆಮಾಚಿ ಕೃತಕ ನಿರೂಪಣೆಗಳನ್ನು ಅನಿವಾರ್ಯವಾಗಿ ನಮ್ಮದಾಗಿಸಿಕೊಂಡು ಬದುಕುವ ಬಿಕ್ಕಟ್ಟಿನಿಂದ ಹೊರ ಬರುತ್ತಿದ್ದೇವೆ. ಅದಕ್ಕೆ ಕಾರ್ಯಕ್ರಮದ ಮುಖ್ಯ ಭಾಷಣಕಾರರಾದ ವಿಹಾನ್ ಅವರ ಮಾತುಗಳೇ ಸಾಕ್ಷಿ. ಇಂಥ ಪ್ರಶ್ನೆಗಳನ್ನು ಸಿದ್ಧಮಾದರಿಗಳಲ್ಲಿ ಹುದುಗಿರುವ ವ್ಯವಸ್ಥೆಗೆ ಕೇಳದೇ ವಿಧಿ ಇಲ್ಲ. ಬದುಕುವ ಹಕ್ಕು ಹಾಗೂ ಅಭಿವ್ಯಕ್ತಿಸುವ ಹಕ್ಕು ಪರಸ್ಪರ ಪೂರಕ. ಈ ಪ್ರಶ್ನೆಗಳನ್ನು 'ನಾನು' ಆಗಿಮಾತ್ರ ಕೇಳದೆ 'ನಾವು' ಆಗಿ ಕೇಳುವಲ್ಲಿ ದೊಡ್ಡ ಸಂಚಲನ ಸಾಧ್ಯ. ಈ ಸಮಾವೇಶ ಅಂಥ ಸಂವಾದದಲ್ಲಿ ತೊಡಗಿದೆ. ಆದ್ದರಿಂದ ಈ ಆಶಯಗಳನ್ನು ನಾನು ಅನುಮೋದಿಸುತ್ತೇನೆ ಹಾಗೂ ಸಹಪಯಣಕ್ಕೆ ಹೆಜ್ಜೆಗಳನ್ನು ಜೋಡಿಸುತ್ತೇನೆ. ಧನ್ಯವಾದ.



ತುಮಕೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಪಾಟೀಲ್ ಅವರೊಂದಿಗೆ ಒಕ್ಕೂಟದ ಸಮಾವೇಶದ ಬಗ್ಗೆ ಚರ್ಚೆ ಮಾಡುತ್ತಿರುವುದು.

# ಸ್ವಶಕ್ತಿ ಜಾಗ್ರತಗೊಳಿಸಿಕೊಳ್ಳಬೇಕಾದ ಮಹಿಳೆ

ಡಾ. ಜ್ಯೋತಿ

ಸಾಮಾನ್ಯವಾಗಿ, ಮಹಿಳಾ ಸಬಲೀಕರಣದ ಕುರಿತು ಮಾತನಾಡುವಾಗ, ಮಹಿಳೆಯನ್ನು ಬಾಹ್ಯ ಜಗತ್ತು ಯಾವೆಲ್ಲಾ ರೀತಿ ಶೋಷಣೆ ಮಾಡುತ್ತಿದೆ ಮತ್ತು ಈ ಶೋಷಣೆಯಿಂದ ಮಹಿಳೆಯನ್ನು ಹೇಗೆ ಬಂಧಮುಕ್ತಗೊಳಿಸಬಹುದು ಎನ್ನುವುದನ್ನು ವಿಶ್ಲೇಷಿಸುತ್ತೇವೆ. ಆದರೆ, ಬಾಹ್ಯ ಶಕ್ತಿ ಕೇಂದ್ರಗಳಿಗೆ ಮಹಿಳೆ ಅಷ್ಟೊಂದು ಅವಲಂಬಿತಳಾಗಬೇಕಾಗಿಲ್ಲ. ಬದಲಾಗಿ, ಅವಳ ಶಕ್ತಿಯ ಅರಿವು ಅವಳಿಗಾದಲ್ಲಿ ಸಬಲೀಕರಣ ಯೋಜನೆ ಸುಲಭ ಸಾಧ್ಯವಾಗುತ್ತದೆ. ಇಂದು, ಈ ಆಯಾಮದತ್ತ ನಮ್ಮ ಗಮನ ಹರಿಸಬೇಕಿದೆ.

ಉದಾಹರಣೆಗೆ, 2023ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯವಾಕ್ಯ, 'ಡಿಜಿಟಲ್ ತಂತ್ರಜಾನದ ಮೂಲಕ ಮಹಿಳಾ ಸಬಲೀಕರಣ'. ಇಂದು, ಡಿಜಿಟಲ್ ತಂತ್ರಜ್ಞಾನವು ಮಹಿಳೆಯರ ಮೇಲೆ ಸಾಕಷ್ಟು ಶೋಷಣೆಗೆ ಕಾರಣವಾಗಿರುವುದನ್ನು ನಾವು ನೋಡಬಹುದು. ಸಾಮಾಜಿಕ ಜಾಲತಾಣಗಳಲ್ಲಿ ಮಹಿಳೆಯರ ಕುರಿತು ಅವಹೇಳನಕಾರಿ ಮಾತುಗಳನ್ನು, ವಿಡಿಯೋ ಗಳನ್ನು, ಕಾಮೆಂಟ್ಸ್ ಗಳನ್ನೂ ತೇಲಿಬಿಟ್ಟು ಇದರಿಂದ ಮನೋರಂಜನೆ ಅನುಭವಿಸುವ ಕಾಣದ ಮುಖಗಳಿವೆ. ಇವುಗಳ ಕುರಿತು ಎಚ್ಚರವಿರುವುದರ ಜೊತೆಗೆ, ಡಿಜಿಟಲ್ ತಂತ್ರಜ್ಞಾನವನ್ನು ಮಹಿಳೆಯರು ಪೂರಕವಾಗಿ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಬಳಸಿಕೊಳ್ಳಬಹುದು. ಇದಕ್ಕೊಂದು ಉತ್ತಮ ನಿದರ್ಶನವೆಂದರೆ 'ಮೀ– ಟೂ' ಆಂದೋಲನ. ತಮ್ಮ ಮೇಲಾದ ಲೈಂಗಿಕ ದೌರ್ಜನ್ಯಗಳನ್ನು ಮಹಿಳೆಯರಿಗೆ ಇನ್ನೂ ಕೂಡ ಧೈರ್ಯವಾಗಿ ಪ್ರತಿಭಟಿಸಲು, ಹೇಳಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ, ಅಪರಿಚಿತರ ಲೋಕದಂತಿರುವ ಡಿಜಿಟಲ್ ಪ್ರಪಂಚದಲ್ಲಿ ತಮ್ಮ ನೋವುಗಳನ್ನು ಮುಕ್ತವಾಗಿ ಮತ್ತು ದೈರ್ಯವಾಗಿ ಹಂಚಿಕೊಳ್ಳಲು ಸಾಧ್ಯವಾಗಿರುವುದರಿಂದಲೇ ಸಾಕಷ್ಟು ಮೀ–ಟೂ ಪ್ರಕರಣಗಳು ಬೆಳಕಿಗೆ ಬಂದು,

ಇದೊಂದು, ಪ್ರಪಂಚದಾದ್ಯಂತ ಮಹಿಳಾ ಹಕ್ಕುಗಳ ಜಾಗೃತಿ ಅಭಿಯಾನಕ್ಕೆ ಬುನಾದಿ ಹಾಕಿತು. ಹೀಗೆ, ಇಂದಿನ ಮಹಿಳೆಯರು ತಮ್ಮ ಪ್ರಪಂಚದಲ್ಲಿ ಲಭ್ಯವಿರುವ ಪರಿಕರಗಳ ಮೂಲಕವೇ ತಮ್ಮನ್ನು ಸಬಲೀಕರಣಗೊಳಿಸಬೇಕಾದುದು ವರ್ತಮಾನದ ಅಗತ್ಯ.

ಈ ನಿಟ್ಟಿನಲ್ಲಿ, ಇಂದಿನ ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರಗಳಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಅವಕಾಶಗಳು ಹಿಂದಿಗಿಂತ ಹೆಚ್ಚು ಮುಕ್ತವಾಗಿವೆ. ಹಾಗಾಗಿ, ಅವರು ಮಹಿಳೆಯರ ಕುರಿತಾಗಿ ಪ್ರಚಲಿತದಲ್ಲಿರುವ ಎಲ್ಲಾ ಮಿಥ್ಯೆಗಳನ್ನು ಧೈರ್ಯವಾಗಿ ಒಡೆದುಹಾಕಿ ಅವರ ಕನಸುಗಳನ್ನು ನನಸು ಮಾಡುವತ್ತ ಗಮನಹರಿಸುವುದಕ್ಕೆ ಇದು ಸಕಾಲ. ಈ ಮೂಲಕ ಮಹಿಳೆಯ ವ್ಯಾಖ್ಯಾನವನ್ನು ಪುನರ್ ನಿರ್ಮಿಸಬೇಕಾಗಿದೆ. ಇಚ್ಛಾಶಕ್ತಿಯೊಂದಿದ್ದರೆ, ಏನನ್ನೂ ತನ್ನದಾಗಿಸಬಹುದೆನ್ನುವ ಧ್ಯೇಯ ಮಂತ್ರದೊಂದಿಗೆ ಮುನ್ನೆಡೆಯುವ ಜೊತೆ ಜೊತೆಗೆ, ಸ್ವಾಭಿಮಾನದಿಂದ ತಮ್ಮ ಬಾಳನ್ನು ಕಟ್ಟಿಕೊಳ್ಳಲು ಇನ್ನೂ ಹಿಂಜರಿಯುತ್ತಾ ಹಿಂದುಳಿದಿರುವ ಅಕ್ಕತಂಗಿಯರನ್ನು ಕೈಹಿಡಿದು ಮುನ್ನೆಡೆಸುವ ಕಾರ್ಯವೂ ಆಗಬೇಕಾಗಿದೆ. ಅಷ್ಟೇ ಮುಖ್ಯವಾಗಿ, ನಾವು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪಟ್ಟ ಯಾತನೆಗಳನ್ನು ಮುಂದಿನ ಪೀಳಿಗೆಯ ಹೆಣ್ಣುಮಕ್ಕಳಾದರೂ ಪಡೆಯದಿರಲಿ ಎನ್ನುವ ನಿಟ್ಟಿನಲ್ಲಿ, ನಮ್ಮ ಗಂಡು ಮಕ್ಕಳನ್ನು ಬೆಳೆಸುವಾಗ ಅವರಲ್ಲಿ ಸಮಾನತೆಯ ತತ್ವವನ್ನು ಭಿತ್ತಿ ಬೆಳೆಸಿದಲ್ಲಿ, ಅದು ಮಹಿಳಾ ಸಬಲೀಕರಣ ಯೋಜನೆಗೆ ನಾವು ಕೈಜೋಡಿಸುವ ಸಮಾಜ ಸೇವೆ ಎನ್ನಬಹುದು.

# ನಾ ಮತ್ತೆ ಪುಟಿದೇಳುವೆ

ಡಾ. ಕೆ ಎಸ್ ಗಿರಿಜಾ

ಮಹಿಳಾ ದಿನಾಚರಣೆಗಳು ಮಹಿಳೆಯರ ಬದುಕಿನ ಮೈಲಿಗಲ್ಲುಗಳೇ ಸರಿ. ಈ ಗೋಷ್ಠಿಯ ವಿಚಾರಗಳಿಗೆ ಸಹಮತವನ್ನು ವ್ಯಕ್ತಪಡಿಸುತ್ತಾ, ಮಾತುಗಳಿಗೆ ಬದಲಾಗಿ ಮಾಯ ಏಂಜೆಲೊ ಅವರ 'And I Still Rise' ಪದ್ಯದ ಭಾವಾನುವಾದವನ್ನು ನಿಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ.

ನಾ ಮತ್ತೆ ಪುಟಿದೇಳುವೆ.
ನಿಮ್ಮ ಕಹಿಯಾದ, ತಿರುಚಿದ ಸುಳ್ಳುಗಳಿಂದ
ಇತಿಹಾಸದ ಪುಟಗಳಿಂದ ನನ್ನ ಅಳಿಸಬಹುದು
ಕಸದ ರಾಶಿಯಲ್ಲಿ ನನ್ನ ಹೊಸಕಬಹುದು.
ಆದರೂ ಧೂಳಿನ ಕಣದಂತೆ ನಾ ಏಳುವೆ.

ಸೂರ್ಯ ಚಂದ್ರರಂತೆ
ಸಮುದ್ರದ ಅಲೆಗಳಂತೆ
ಭರವಸೆಗಳು ಚಿಮ್ಮುವಂತೆ
ನಾ ಏಳುವೆ.

ತಲೆಬಾಗಿ ಕಣ್ಣುಗಳು ಕಳಾಹೀನವಾಗಿ ನಾನು
ಕುಸಿಯುವುದನ್ನು
ಕಣ್ಣಾಲಿಗಳಲ್ಲಿ ನೀರು ತುಂಬಿ
ಭುಜಗಳು ಕುಂದುವುದನ್ನು
ಭಾವಾತ್ಮಕ ಅಳುವಿನಿಂದ ದುರ್ಬಲ
ಗೊಂಡಿರುವುದನ್ನು
ನೀವು ನೋಡ ಬಯಸುವಿರೇನು?

ನಿಮ್ಮ ಮಾತುಗಳಿಂದ ನನ್ನ ಚುಚ್ಚಬಹುದು
ನಿಮ್ಮ ಕಣ್ಣುಗಳಿಂದ ಕತ್ತರಿಸಬಹುದು
ನಿಮ್ಮ ದ್ವೇಷಾಸೂಯೆಯಿಂದ ಕೊಲ್ಲಲೂಬಹುದು
ಆದರೂ ನಾನು ಏಳುವೆ.

ನನ್ನ ಪೂರ್ವೇತಿಹಾಸದ ಅಪಮಾನದ
ಗುಡಿಸಲುಗಳಿಂದ, ನೋವು ತುಂಬಿದ ಜೀವನದಿಂದ
ನಾ ಏಳುವೆ.

ಹಿಂಸೆ ಮತ್ತು ಭಯದ ರಾತ್ರಿಗಳನ್ನು
ಹಿಂದಕ್ಕಿಕ್ಕುತ್ತಾ, ನಾಳಿನ ಸುಂದರ ಬೆಳಕಿಗಾಗಿ
ನಾ ಏಳುವೆ.

ನನ್ನ ಪೂರ್ವಜರು ನೀಡಿದ
ಉಡುಗೊರೆಗಳನ್ನು ಸಂತಸದಿ ನೋಡುತ್ತಾ
ನನ್ನ ಕನಸುಗಳು ಸಾಕಾರಗೊಳಿಸುವ ಎಲ್ಲಾ
ಗುಲಾಮರ ಭರವಸೆಯಾಗಿ

ನಾ ಏಳುವೆ
ನಾ ಏಳುವೆ
ನಾ ಏಳುವೆ....

# ಬೆಳಕಿನೆಡೆಗೆ ಹೆಜ್ಜೆ ಹಾಕಿ

ಎನ್ ಇಂದಿರಮ್ಮ

ಇದು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ನಡೆದ 11ನೇ ರಾಜ್ಯಮಟ್ಟದ ಮಹಿಳಾ ದಿನಾಚರಣೆಯ ವಿಚಾರ ಸಂಕಿರಣದ ಮೊದಲ ಗೋಷ್ಠಿಯ ವಿಷಯ. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪ್ರಮುಖ ವಾರ್ಷಿಕ ಚಟುವಟಿಕೆ ಮಹಿಳಾ ದಿನಾಚರಣೆ. ಈ ಮಹಿಳಾ ದಿನಾಚರಣೆಗೆ ತುಮಕೂರು ವೇದಿಕೆಯಾಗಿದ್ದು ಒಂದು ಬಹಳ ವಿಶೇಷ. ಇದಕ್ಕೆ ಕಾರಣವೇ ತುಮಕೂರಿನ ಅನೇಕ ಮಹಿಳಾ ಹೋರಾಟಗಾರರು, ಸಾಹಿತಿಗಳು. ಇವರು ಸುಮಾರು ಮೂರು ದಶಕಗಳಿಂದ ಈ ಕ್ಷೇತ್ರದಲ್ಲಿ ನಿರಂತರವಾಗಿ ದುಡಿಯುತ್ತಿದ್ದಾರೆ. ಹಾಗಾಗಿಯೇ ಈ ವರ್ಷದ ಇಡೀ ಪಯಣಕ್ಕೆ ಅವರೇ ವೇದಿಕೆಯನ್ನು ಒದಗಿಸಿ, ಅದನ್ನು ಆಗುಮಾಡಲು ಟೊಂಕ ಕಟ್ಟಿ ನಿಂತರು.

ವರ್ಷಪೂರ್ತಿ ಸುಮಾರು ನೂರಾರು ಅರಿವಿನ ಪಯಣ ಕಾರ್ಯಕ್ರಮಗಳು ನಾಲ್ಕು ತಾಲ್ಲೂಕುಗಳಲ್ಲಿ "ಕಪ್ಪುಡುಗೆಯಲ್ಲಿ ಮಹಿಳೆಯರು" ಆಚರಿಸಿದ್ದು ಮಹಿಳಾ ದಿನಾಚರಣೆಯ ಹೊಸ್ತಿಲಿಗೆ ಯಶಸ್ವಿಯಾಗಿ ತಲುಪಿ, ಮಾರ್ಚ್ 7 ಮತ್ತು 8ನೇ ದಿನಗಳಂದು ಎರಡು ದಿನ ತುಮಕೂರಿನಲ್ಲಿ ಅದ್ದೂರಿ ಕಾರ್ಯಕ್ರಮ ನಡೆದಿದೆ.

ನಿನ್ನೆ ತುಮಕೂರಿನ ಟೌನ್ ಹಾಲ್ ಸರ್ಕಲ್ಲಿನಲ್ಲಿ ಸಾಲುಮರದ ತಿಮ್ಮಕ್ಕ ವೇದಿಕೆಯಲ್ಲಿ ಕೇರಳ ಸರ್ಕಾರದ ಹಾಲಿ ಶಾಸಕರು ಮತ್ತು ಮಾಜಿ ಆರೋಗ್ಯ ಸಚಿವರಾದ ಶ್ರೀಮತಿ ಕೆ ಕೆ ಶೈಲಜಾ ಇವರ ಉಪಸ್ಥಿತಿಯಲ್ಲಿ ಆಗಿನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಡಾ. ಕೆ ವಿದ್ಯಾಕುಮಾರಿಯವರು ಮೆರವಣಿಗೆ ಉದ್ಘಾಟಿಸಿದರು. ನಂತರ ಗಾಜಿನ ಮನೆಯಲ್ಲಿ ಸೂಲಗಿತ್ತಿ ನರಸಮ್ಮ ವೇದಿಕೆಯಲ್ಲಿ ಬೃಹತ್ ಸಾರ್ವಜನಿಕ ಸಮಾವೇಶ ನಡೆಯಿತು. ಸಾವಿರಾರು ಜನ ವಿದ್ಯಾರ್ಥಿಗಳು, ಮಹಿಳೆಯರು, ಕಾರ್ಯಕರ್ತರು

ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಅದೇ ದಿನ ಸಂಜೆ ಸ್ವಾತಂತ್ರ್ಯ ಚೌಕದಲ್ಲಿ "ಕಪ್ಪುಡುಗೆಯಲ್ಲಿ ಮಹಿಳೆಯರು" ಕಾರ್ಯಕ್ರಮದಲ್ಲಿ ಡಾ. ಎಚ್ ಎಸ್ ಅನುಪಮಾ, ನೂರಾರು ಮಹಿಳೆಯರು ಕತ್ತಲಿನಲ್ಲಿ ಮೇಣದ ಬತ್ತಿ ಹಿಡಿದು ಬೆಳಕಿನ ಧಾರೆ ಎರೆದರು.

ಇಂದು ಗುಬ್ಬಿವೀರಣ್ಣ ರಂಗಮಂದಿರದ ಸಾ ರಾ ಅಬೂಬಕರ್ ವೇದಿಕೆಯಲ್ಲಿ ವಿಚಾರ ಸಂಕಿರಣ ನಡೆಯುತ್ತಿದೆ. ಸಂಕಿರಣದಲ್ಲಿ ಮೊದಲ ಗೋಷ್ಠಿಯೇ ಹೆಣ್ಣು ಬದುಕು– ಸವಾಲು ಸಾಧ್ಯತೆಗಳು. ದಿಕ್ಸೂಚಿ ಮಾತನಾಡಿದವರು ಬೆಂಗಳೂರಿನ ವಿಹಾನ್ ರವರು. ವಿಹಾನ್ ಲಿಂಗ ಪರಿವರ್ತಿತ ಸಮುದಾಯಕ್ಕೆ ಸೇರಿದವರು. ವಿಶೇಷವಾಗಿ ಹೆಣ್ಣು ಗಂಡಾಗಿ ಪರಿವರ್ತಿತವಾದ ಅಸಾಧಾರಣ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿ. ಇವರೊಂದಿಗೆ ವೇದಿಕೆಯಲ್ಲಿ ಬದ್ಧತೆಯುಳ್ಳ ಸಾಮಾಜಿಕ ಕಾರ್ಯಕರ್ತರು, ವಕೀಲರು, ಪ್ರಾಧ್ಯಾಪಕರು ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ.

ಮೈಸೂರಿನ ವಕೀಲರು ಹಾಗೂ ಒಕ್ಕೂಟದ ಸದಸ್ಯರಾದ ಸುಮನ್ ರವರು ಮಹಿಳಾ ದಿನಾಚರಣೆಯ ಹಿನ್ನೆಲೆ, ಪ್ರಸ್ತುತತೆ ಮತ್ತು ಅದರ ಘೋಷವಾಕ್ಯ ಕುರಿತು ಮಾತನಾಡಿದರು. ವಿಹಾನ್ ದಿಕ್ಸೂಚಿ ಮಾತಿನಲ್ಲಿ ಇಂದು ನಮ್ಮ ಎಲ್ಲಾ ನಡವಳಿಕೆಗಳನ್ನು, ಉದಾಹರಣೆಗೆ– ನಮ್ಮ ಉಡುಪು, ಆಹಾರ, ಆಚಾರ–ವಿಚಾರಗಳನ್ನು ರಾಜಕೀಯವಾಗಿ ನೋಡಲಾಗುತ್ತಿದೆ. ಲಿಂಗ ಪರಿವರ್ತಿತ ಸಮುದಾಯವನ್ನು ರಾಜಕೀಯವಾಗಿ ನ್ಯಾಯಯುತವಾಗಿ ನಡೆಸಿಕೊಳ್ಳುವುದು ಕಾಣುತ್ತಿಲ್ಲ. ಆ ಸಮಾಜಕ್ಕೆ ಸಾಮಾಜಿಕ ಭದ್ರತೆ ಬೇಕು. ಲಿಂಗ ಅಸಮಾನ ಹಿಂಸೆಯಿಂದ ಮುಕ್ತಿ, ಆಸ್ತಿ ಹಕ್ಕುಗಳು, ವಿವಾಹ ಹಕ್ಕುಗಳು ಎಲ್ಲವನ್ನು ಒದಗಿಸಿ ಅವರನ್ನು ಮುಖ್ಯ ವಾಹಿನಿಗೆ ತರಬೇಕು. ಅವರನ್ನೂ ಒಳಗೊಳ್ಳಿಸುವುದು ಪ್ರಮುಖ ಕೆಲಸವಾಗಬೇಕು ಎಂದರು.

ಅನೇಕ ಸ್ನೇಹಿತರು ಪ್ರತಿಕ್ರಿಯೆ ನೀಡಿದ್ದಾರೆ. ಹೆಣ್ಣು ಮಕ್ಕಳ ಬದುಕಿನಲ್ಲಿ ಬರುವ ಸವಾಲು ಮತ್ತು ಸಾಧ್ಯತೆಗಳನ್ನು ಎಲ್ಲಾ ಸಮುದಾಯದ ಹೆಣ್ಣು ಮಕ್ಕಳ ದೃಷ್ಟಿಯಿಂದಲೂ ನೋಡಬೇಕು. ಸವಾಲುಗಳು ನಿರಂತರವಾಗಿವೆ. ದುಡಿಯುವ ಮಹಿಳೆಯರು 80% ಇರುವ ನಮ್ಮ ಸಮಾಜದಲ್ಲಿ ಎಲ್ಲಾ ರೀತಿಯಲ್ಲೂ ಅಂದರೆ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಸವಾಲುಗಳೇ ಹೆಚ್ಚು. ಇದನ್ನು ಸಮರ್ಥವಾಗಿ ನಿರ್ವಹಿಸಿ ಯಶಸ್ವಿಯಾದ ಬದುಕು ಕಟ್ಟಿಕೊಳ್ಳುವುದು ಮಹಿಳಾ ಸಮುದಾಯದ ಕೈಯಲ್ಲಿಯೇ

ಇದೆ. ಅವರಿಗೆ ನೀಡುವ ಶಿಕ್ಷಣ, ಕುಟುಂಬದಲ್ಲಿ ಗೌರವ, ಉದ್ಯೋಗಾವಕಾಶಗಳು, ಉನ್ನತ ಶಿಕ್ಷಣ, ರಾಜಕೀಯ ಅವಕಾಶಗಳನ್ನು ಅವರು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಬೇಕು. ಆಗ ಮಾತ್ರ ಬದುಕು ಅರ್ಥಪೂರ್ಣವೆನಿಸಿ ಸಮಸಮಾಜದತ್ತ ಮುಖ ಮಾಡಲು ಸಾಧ್ಯವಾಗುತ್ತದೆ.

ಗೋಷ್ಠಿಯಲ್ಲಿ ದಿಕ್ಸೂಚಿ ಮಾತುಗಳನ್ನಾಡಿದ ವಿಹಾನ್ ಅವರ ಮಾತುಗಳನ್ನು ಅನುಮೋದಿಸುತ್ತ, 26 ವರ್ಷದ ವಿಹಾನ್ ಅವರು ತಮ್ಮ ಜೀವನದಲ್ಲಿ ಅನೇಕ ತುಮುಲಗಳನ್ನು ಅನುಭವಿಸಿದರು. ಹೆಣ್ಣು ಮಗುವನ್ನು ಸಮಾಜ ದೈಹಿಕವಾಗಿ ದುಡಿಸಿಕೊಳ್ಳುವುದನ್ನು ವಿರೋಧಿಸಿ, ನಾನು ಹೆಣ್ಣಾಗಿರುವುದಿಲ್ಲ ಗಂಡಾಗಬೇಕು ಎಂದು ಪರಿವರ್ತಿತರಾದವರು ಅವರು. ಇಂಥ ವ್ಯಕ್ತಿ ವಿದೇಶದಲ್ಲಿ ಓದಿ ವಿವೇಕವನ್ನು ಪಡೆದ ನಂತರ ಮತ್ತೆ ಅಂತದೇ ಸಮುದಾಯವನ್ನು ಮೇಲೆತ್ತಲು ಶ್ರಮಿಸುತ್ತಿದ್ದಾರೆ. ಹೆಣ್ಣು ಗಂಡು ಭೌತಿಕ ವ್ಯತ್ಯಾಸವೇ ಹೊರತು ಮನಸ್ಸು ಅಲ್ಲ. ರಚನಾತ್ಮಕ ಕೆಲಸಕ್ಕೆ ಹೆಣ್ಣು ಗಂಡು ಬೇರೆ ಅಲ್ಲವೇ ಅಲ್ಲ. ಅದಕ್ಕೆ ಒಂದು ಮನಸ್ಸು ಮುಖ್ಯ.

ಮೈಸೂರಿನ ಸುಮನಾ ಅವರ ಮಾತನ್ನು ಸದಾ ನೆನಪಿಟ್ಟುಕೊಳ್ಳಬೇಕು. ಹೋರಾಟದ ಫಲವಾಗಿ ಮಹಿಳಾ ದಿನಾಚರಣೆ ಆಚರಣೆಗೆ ಬಂದಿತಾದರೂ ಮುಂದುವರಿಸುವುದು ಮುಖ್ಯ. ಜನಗಳ ಹತ್ತಿರ ಹೋಗಿ ಅವರಿಗೆ ಬೇಕಾಗುವ ಸಾಮಾಜಿಕ, ಭಾವನಾತ್ಮಕ, ನೈತಿಕ ಬೆಂಬಲ ನೀಡಬೇಕಾಗಿರುವುದು ಹೋರಾಟಗಾರರ ಲಕ್ಷಣ.

ಪ್ರೊ. ಗೀತಾ ವಸಂತ ಅವರ ಮಾತು ತುಂಬಾ ಅನುಕರಣೀಯ. ಸಮಾಜದಲ್ಲಿ ನಾನು ಮೊದಲು ಬದಲಾಗಬೇಕು; ನಂತರ ನಾವು ಆಗುತ್ತೇವೆ. ಮುಂದೆ ನಮ್ಮ ಅಸ್ಮಿತೆ ಸಮುದಾಯದೊಂದಿಗೆ ಮಾತ್ರ ಎಂಬ ಮಾತನ್ನು ಒಪ್ಪಬೇಕು.

ಮತ್ತೊಬ್ಬ ಪ್ರಾಧ್ಯಾಪಕರಾದ ಡಾ. ಜ್ಯೋತಿ ಅವರು ಹೆಣ್ಣು ಗಂಡು ಸೇರಿ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಹೇಳಿದ್ದಾರೆ. ಕೆಲವು ಬಾರಿ ಪ್ರತ್ಯೇಕವಾಗಿ ಕೆಲಸ ಮಾಡುವ ಸಂದರ್ಭ ಬಂದಾಗಲೂ ಎದೆಗುಂದದೆ ಕೆಲಸ ಮಾಡಬೇಕಾಗುತ್ತದೆ.

ಪ್ರೊ. ಟಿ ಗಿರಿಜಾ ಅವರು ಮಾಯಾ ಏಂಜಲೋ ಅವರ ಭಾವಾನುವಾದ ಕವಿತೆಯೊಂದರ "ನಾ ಮತ್ತೆ ಪುಟ್ಟಿದೇಳುವೆ" ಎಂಬ ಕವನ ವಾಚಿಸಿದರು. ಪುಟಿದೆದ್ದವರ ಬಗ್ಗೆ ಕವನ ರಚನೆಯಾಗಬೇಕು. ಹೆಣ್ಣುಮಕ್ಕಳ ಸಾಧನೆಗಳನ್ನು

ತಿಳಿಸುತ್ತಲೇ ಮಹಿಳಾ ಸಮುದಾಯವನ್ನು ಮೇಲೆತ್ತುವ ಕೆಲಸ ಸದಾ ಆಗುತ್ತಿರಬೇಕು.

ಹೆಣ್ಣುಮಕ್ಕಳಿಗೆ ಮಹಿಳಾ ದಿನಾಚರಣೆಯಂದು ಮಾತ್ರ ಸವಲತ್ತು ಕೊಡುವ ಬಗ್ಗೆ ಮಾತಾಡುವ ಸರ್ಕಾರ ಅವರ ಬದುಕನ್ನು ಮೇಲೆತ್ತುವ ರೀತಿಯಲ್ಲಿ ಯೋಚನೆ ಮಾಡುತ್ತಿಲ್ಲ. ಅವರ ಶಿಕ್ಷಣ ಉದ್ಯೋಗದಂತಹ ಕ್ಷೇತ್ರದಲ್ಲಿ ಸವಲತ್ತು ನೀಡಬೇಕು.

ಮಹಿಳಾ ದಿನಾಚರಣೆಯ ವಿಚಾರವೇ ಗೊತ್ತಿಲ್ಲದ ಸುಮಾರು 80% ಸಮುದಾಯಕ್ಕೆ ಅರಿವು ಮೂಡಿಸುವ ಕೆಲಸ ಆಗಬೇಕು. ನೀವು ವೋಟ್ ಬ್ಯಾಂಕ್ ಮಾತ್ರ ಅಲ್ಲ ಎಂದು ತಿಳಿ ಹೇಳುವವರು ಯಾರು? ಇದಕ್ಕೆ ನಾವೇ ಉತ್ತರ ಕೊಡಬೇಕು.

ಇಂದು ಸಮಾಜದಲ್ಲಿ ಆತಂಕಪಡುವ ಒಂದು ಬೆಳವಣಿಗೆ ನಡೆಯುತ್ತಿದೆ. ಹೆಣ್ಣು ಮಕ್ಕಳಿಗೆ ಆರ್ಥಿಕ ಶಕ್ತಿ ನೀಡುವ ಸಲುವಾಗಿ ಹುಟ್ಟಿಕೊಂಡಿರುವ ಅನೇಕ ಸಂಘ ಸಂಸ್ಥೆಗಳು ಅವರಿಗೆ ಸಾಲ ನೀಡುವ ಸಂಸ್ಥೆಗಳಾಗಿವೆ. ಆರ್ಥಿಕ ಸಬಲೀಕರಣದ ಹೆಸರಿನಲ್ಲಿ ಅವರನ್ನು ವಂಚಿಸಲಾಗುತ್ತಿದೆ. ಕೇವಲ ಹಣ ಒಂದೇ ಅವರ ಅವಶ್ಯಕತೆ ಎಂದು ನೋಡಲಾಗುತ್ತಿದೆ. ಸಾಲದ ಕೂಪದಲ್ಲಿ ಬಿದ್ದ ಅವರ ಜೀವ, ಜೀವನ ನೆಲೆ ಕಳೆದುಕೊಳ್ಳುವ ಹಂತ ತಲುಪುತ್ತಿದೆ. ಹಾಗಾಗಿ ಅವರಿಗೆ ಈ ಬಗ್ಗೆಯೂ ಅರಿವು ಮೂಡಿಸುವ ಕೆಲಸ ಆಗಬೇಕು. ಪಡೆದುಕೊಂಡ ಸಾಲ ಅವರನ್ನು ಸ್ವಾವಲಂಬಿಯಾಗುವಂತೆ ಮಾಡುವಂತೆ ಗಮನ ಹರಿಸಬೇಕು.

ಒಟ್ಟಾರೆ ಈ ಸಮಾವೇಶ ಯಶಸ್ವಿಯಾಗಿ ನಡೆದಿದೆ. ಅದಕ್ಕಾಗಿ ಶ್ರಮ ವಹಿಸಿದ ಎಲ್ಲ ಸಂಗಾತಿಗಳಿಗೂ ಅಭಿನಂದನೆ ಹಾಗೂ ಧನ್ಯವಾದಗಳು.

# ವಿಚಾರ ಮಂಥನ



# ಮಹಿಳೆ ಮತ್ತು ರಾಜಕೀಯ ಮೀಸಲಾತಿ

ಸಿ ಜಿ ಮಂಜುಳಾ

ಇಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಾಧನೆಗಳನ್ನು ಸಂಭ್ರಮಿಸುವ ಜಾಗತಿಕ ದಿನ. ಜೊತೆಗೆ ಲಿಂಗತ್ವ ಸಮಾನತೆಗೆ ಕ್ರಮಗಳನ್ನು ಕೈಗೊಳ್ಳುವ ಕರೆಯನ್ನೂ ನೀಡುವಂತಹ ದಿನ.

ಈ ವರ್ಷದ ಧ್ಯೇಯ ವಾಕ್ಯ – Digital Innovation and technology for gender equality ಎಂದರೆ, ಲಿಂಗತ್ವ ಸಮಾನತೆಗಾಗಿ ಆವಿಷ್ಕಾರ ಮತ್ತು ತಂತ್ರಜ್ಞಾನ.

ಆವಿಷ್ಕಾರ, ತಂತ್ರಜ್ಞಾನಗಳ ಮಾತಿರಲಿ, ನಮ್ಮ ರಾಷ್ಟ್ರದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಪ್ರಾತಿನಿಧ್ಯವಿನ್ನೂ ಪ್ರಾಥಮಿಕ ಹಂತದಲ್ಲೇ ಇದೆ. ಮಹಿಳಾ ಸಬಲೀಕರಣದ ಬಗ್ಗೆ ಬಿಡುಬೀಸಾದ ಹೇಳಿಕೆಗಳನ್ನು ನೀಡುವುದು ರಾಜಕಾರಣಿಗಳಿಗೆ ಮಾಮೂಲಿನ ಸಂಗತಿ. ಪ್ರತಿ ಬಾರಿ ಸಂಸತ್ ಅಧಿವೇಶನ ನಡೆಯುವಾಗ, ಮಹಿಳಾ ಮೀಸಲು ಮಸೂದೆ ಕುರಿತಾದ ಒತ್ತಾಯವೂ ಒಂದಿಷ್ಟು ಸದ್ದು ಮಾಡುವುದು ಕಳೆದ ಎರಡೂವರೆ ದಶಕಗಳಲ್ಲಿ ಒಂದು ವಿಧ್ಯುಕ್ತ ಆಚರಣೆಯೇ ಆಗಿಬಿಟ್ಟಿದೆ.

ಈ ಬಾರಿಯೂ, ಕೇಂದ್ರ ಬಜೆಟ್ ಮಂಡನೆಯಾದ ನಂತರದ ಬಜೆಟ್ ಅಧಿವೇಶನದ ಉತ್ತರಾರ್ಧ, ಮಾರ್ಚ್ 13ರಂದು ಆರಂಭವಾಗಲಿದ್ದು ಮತ್ತೆ ಮಹಿಳಾ ಮೀಸಲು ಮಸೂದೆಯ ವಿಚಾರ ಸದ್ದು ಮಾಡುತ್ತಿದೆ.

ಮಾರ್ಚ್ 10ರಂದು ದೆಹಲಿಯಲ್ಲಿ ಮಹಿಳಾ ಮೀಸಲು ಮಸೂದೆ ಮಂಡನೆಗೆ ಆಗ್ರಹಿಸಿ ಬಿಆರ್ ಎಸ್ ನಾಯಕಿ ಹಾಗೂ ತೆಲಂಗಾಣ ಮುಖ್ಯಮಂತ್ರಿ

ಕೆ ಚಂದ್ರಶೇಖರ ರಾವ್ ಅವರ ಪುತ್ರಿ ಕೆ. ಕವಿತಾ ಅವರು 'ಭಾರತ್ ಜಾಗೃತಿ' ಎನ್ ಜಿಓ ಆಶ್ರಯಲ್ಲಿ ಶಾಂತಿಯುತ ಪ್ರತಿಭಟನಾ ಧರಣಿ ನಡೆಸುವುದಾಗಿ ಹೇಳಿದ್ದಾರೆ.

1996ರಲ್ಲಿ ಎಚ್ ಡಿ ದೇವೇಗೌಡ ಅವರು ಪ್ರಧಾನಿಯಾಗಿದ್ದಾಗಿನ ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಮೊದಲ ಬಾರಿಗೆ ಮಂಡನೆಯಾದ ಮಹಿಳಾ ಮೀಸಲು ಮಸೂದೆಯು ಕಳೆದ 27 ವರ್ಷಗಳಿಂದ ಅನುಮೋದನೆಗಾಗಿ ಕಾದುಕೂತಿದೆ. ಈಗ ಮತ್ತೆ ಮಹಿಳಾ ಮೀಸಲು ಮಸೂದೆ ಅಂಗೀಕಾರಕ್ಕೆ ಬಹುತೇಕ ಪ್ರತಿಪಕ್ಷಗಳಿಂದ ಹೊಸದಾದ ಆಗ್ರಹಗಳು ಕೇಳಿ ಬರುತ್ತಿವೆ.

ಕಳೆದ ಎರಡು ಅವಧಿಗಳಿಂದ ಬಿಜೆಪಿಯು ಕೇಂದ್ರ ಸರ್ಕಾರದ ಆಡಳಿತ ಸೂತ್ರ ಹಿಡಿದಿದೆ. 2014 ಹಾಗೂ 2019ರ ಸಾರ್ವತ್ರಿಕ ಚುನಾವಣೆಗಳ ಸಂದರ್ಭದ ಬಿಜೆಪಿಯ ಪ್ರಣಾಳಿಕೆಗಳು ಮಹಿಳಾ ಮೀಸಲು ಮಸೂದೆ ಜಾರಿ ಮಾಡುವ ಭರವಸೆ ನೀಡಿದ್ದವು. ಆದರೆ, ಈ ಭರವಸೆಗಳ ಈಡೇರಿಕೆಗೆ ಇರುವ ಅಡ್ಡಿಯಾದರೂ ಏನು?

ಪ್ರಧಾನಿ ನರೇಂದ್ರ ಮೋದಿಯವರಂತೂ ನಾರಿ ಶಕ್ತಿ ಯ ಬಗ್ಗೆ ಮಾತನಾಡುತ್ತಲೇ ಇರುತ್ತಾರೆ. ಮಹಿಳಾ ನೇತೃತ್ವದ ಅಭಿವೃದ್ಧಿ ಮಂತ್ರವನ್ನೂ ಜಪಿಸಲಾಗುತ್ತಿರುತ್ತದೆ. ಆದರೆ ಶಾಸನಗಳನ್ನು ಮಾಡುವ ಅಧಿಕಾರದ ನೆಲೆಗಳಲ್ಲಿ ಮಹಿಳೆಗೆ ಪ್ರಾತಿನಿಧ್ಯವೇ ಇಲ್ಲದಿರುವ ಸಂದರ್ಭದಲ್ಲಿ ಈ ಮಾತುಗಳು ಹಾಗೂ ಆಶಯಗಳು ಕೇವಲ ಅಲಂಕಾರಿಕವಾದ ಸಾಂಕೇತಿಕತೆಯನ್ನಷ್ಟೇ ಧ್ವನಿಸುತ್ತವೆ.

## ಮಸೂದೆಯ ಉದ್ದೇಶ

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಶೇ 33ರಷ್ಟು ಸ್ಥಾನಗಳನ್ನು ಮಹಿಳೆಗೆ ಮೀಸಲಿಡುವುದು ಈ ಮಸೂದೆಯ ಮುಖ್ಯ ಉದ್ದೇಶ. ರೊಟೇಷನ್ ಆಧಾರದ ಮೇಲೆ ಈ ಸ್ಥಾನಗಳನ್ನು ಮೀಸಲಿಡಲಾಗುತ್ತದೆ.

## ಇತಿಹಾಸ

ಮಸೂದೆಯ ಮಂಡನೆಗೆ ಕಳೆದ 27 ವರ್ಷಗಳಲ್ಲಿ ಎಷ್ಟೆಲ್ಲಾ ಕಸರತ್ತುಗಳು ನಡೆದಿವೆ ಎಂಬುದನ್ನು ಇಂದು ಮತ್ತೊಮ್ಮೆ ನಾವು ನೆನಪಿಸಿಕೊಳ್ಳಬಹುದು. 1996ರಲ್ಲಿ ದೇವೇಗೌಡರ ಸರ್ಕಾರ ಆರಂಭಿಸಿದ ಉಪಕ್ರಮದ ನಂತರ ಈ ಮಸೂದೆಯು ಗೀತಾಮುಖರ್ಜಿ ನೇತೃತ್ವದ ಸಂಸತ್ತಿನ ಜಂಟಿ ಸಮಿತಿ ಪರಿಶೀಲನೆಗೆ ಒಳಪಟ್ಟಿತ್ತು. ಓಬಿಸಿ ಹಾಗೂ ಅಲ್ಪಸಂಖ್ಯಾತರಿಗೆ ಕೋಟಾ ಇಲ್ಲದಿರುವ ವಿಚಾರ ತೀವ್ರತರ ವಿರೋಧ, ಪ್ರತಿಭಟನೆಗಳಿಗೆ ಕಾರಣವಾಗಿ ಸಂಸತ್ತಿನ ಸದನ

ರಣರಂಗವಾಗಿ ಪರಿಣಮಿಸಿತ್ತು. ಒಳ ಮೀಸಲು ನೀಡುವವರೆಗೂ ಪ್ರತಿಭಟನೆ ನಡೆಸುವುದಾಗಿ ಸಮಾಜವಾದಿ ಪಕ್ಷದ ಮುಲಾಯಂ ಸಿಂಗ್ ಯಾದವ್, ಲಾಲು ಪ್ರಸಾದ್ ಹಾಗೂ ಶರದ್ ಯಾದವ್ ಪಟ್ಟು ಹಿಡಿದಿದ್ದರು. ಫೂಲನ್ ದೇವಿ ಹಾಗೂ ಕಲ್ಲು ಕುಟ್ಟುವ ಭಗವತಿಯಾ ದೇವಿಯಂತಹವರು (ಈ ಹಿಂದೆ ಈ ಇಬ್ಬರೂ ಅನಕ್ಷರಸ್ಥರು ಎಂಪಿಗಳಾಗಿದ್ದವರು) ಸಂಸತ್ತಿಗೆ ಬರಬೇಕು ಎಂಬುದು ತಮ್ಮ ಆಗ್ರಹವಾಗಿತ್ತು ಎಂದು ಅವರು ಹೇಳಿಕೊಂಡಿದ್ದರು. 1998ರಲ್ಲಿ ವಾಜಪೇಯಿ ಸರ್ಕಾರವೂ ಲೋಕಸಭೆಯಲ್ಲಿ ಮಸೂದೆ ಅಂಗೀಕಾರಕ್ಕೆ ಯತ್ನಿಸಿತು, ಆದರೆ ಸಾಧ್ಯವಾಗಲಿಲ್ಲ. 2008ರ ಮೇ ತಿಂಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ–1 ಸರ್ಕಾರವು ಮತ್ತೆ ಮಸೂದೆ ಮಂಡಿಸಿತು. ಮರು ಮಂಡನೆಯಾದ ನಂತರ, 2010ರ ಮಾರ್ಚ್ 9ರಂದು ರಾಜ್ಯಸಭೆಯಲ್ಲಿ ತೀವ್ರತರ ಚರ್ಚೆಗಳ ನಂತರ 186–1 ಮತಗಳಅಂತರದಲ್ಲಿ ಮಸೂದೆ ಅಂಗೀಕಾರವಾಗಿ ಇತಿಹಾಸ ಸೃಷ್ಟಿಸಿತು. ಆದರೆ ಲೋಕಸಭೆಗೆ ಹೋದ ಮಸೂದೆ ಮತ್ತೆ ಬೆಳಕು ಕಾಣಲೇ ಇಲ್ಲ. 2014ರಲ್ಲಿ ಲೋಕಸಭೆಯನ್ನು ವಿಸರ್ಜಿಸಿದ ನಂತರ ಅಸ್ತಿತ್ವ ಕಳೆದುಕೊಂಡ ಮಸೂದೆ ಮತ್ತೆ ಮೊದಲಿನ ಸ್ಥಿತಿಗೇ ಬಂದು ನಿಂತಿದೆ.

### ರಾಜಕೀಯ ಪಕ್ಷಗಳ ನಿಲುವು

ಬಹುತೇಕ ರಾಜಕೀಯ ಪಕ್ಷಗಳು ಮಹಿಳಾ ಮೀಸಲು ಮಸೂದೆಯ ಪರವಾದ ನಿಲುವನ್ನೇ ಹೊಂದಿರುವಂತೆ ತೋರ್ಪಡಿಸಿಕೊಳ್ಳುತ್ತಿವೆ. ಒಳಮೀಸಲಾತಿಗೆ ಆಗ್ರಹಿಸಿ ಆರ್ ಜೆಡಿ ಹಾಗೂ ಸಮಾಜವಾದಿ ಪಕ್ಷದೊಂದಿಗೆ ಈ ಮಸೂದೆಯನ್ನು ಒಂದು ಕಾಲದಲ್ಲಿ ಜೆಡಿಯು ವಿರೋಧಿಸಿತ್ತು. ಆದರೆ ಆ ನಂತರ ತನ್ನ ಅಭಿಪ್ರಾಯವನ್ನು ಬದಲಿಸಿಕೊಂಡಿರುವುದಾಗಿ ಜೆಡಿಯು ಹೇಳಿಕೊಂಡಿದೆ. ಎಲ್ ಜೆಪಿಯ ಚಿರಾಗ್ ಪಾಸ್ವಾನ್ ಹಾಗೂ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರುಗಳು ತಮ್ಮ ಭಾಷಣಗಳಲ್ಲಿ ಮಹಿಳಾ ಮೀಸಲು ಮಸೂದೆ ಪರ ಮಾತುಗಳನ್ನಾಡಿದ್ದಾರೆ.

ಹೋದ ವರ್ಷ ಚಳಿಗಾಲದ ಅಧಿವೇಶನ ನಡೆದಾಗಲೂ ಮೀಸಲು ಮಸೂದೆ ಸದ್ದು ಮಾಡಿತ್ತು. ಮಹಿಳಾ ಮೀಸಲು ಮಸೂದೆಯನ್ನು ಮತ್ತೆ ಮಂಡಿಸಬೇಕುಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅಧ್ಯಕ್ಷತೆಯ ಲೋಕಸಭಾ ವ್ಯವಹಾರ ಸಲಹಾ ಸಮಿತಿ ಸಭೆಯಲ್ಲಿ ತೃಣಮೂಲ ಕಾಂಗ್ರೆಸ್, ಜನತಾ ದಳ (ಯು) ಹಾಗೂ ಶಿರೋಮಣಿ ಅಕಾಲಿ ದಳ ಸೇರಿದಂತೆ ಹಲವು ಪಕ್ಷಗಳು ಒತ್ತಾಯಿಸಿದ್ದವು

2019ರ ಸಾರ್ವತ್ರಿಕ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಬಿಜು ಜನತಾ ದಳ (ಬಿಜೆಡಿ) ಕ್ರಮವಾಗಿ ಶೇ 40 ಹಾಗೂ ಶೇ 33 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಮಹಿಳೆಯರಿಗೆ ಸ್ಥಾನ ಮೀಸಲಿಡುವ ವಿಚಾರದಲ್ಲಿ ಈ ಎರಡು ಪ್ರಾದೇಶಿಕ ಪಕ್ಷಗಳು ಹೊಸ ಹೆಜ್ಜೆಗಳನ್ನು ಇರಿಸಿವೆ.

ಆಸಕ್ತಿದಾಯಕ ಸಂಗತಿ ಎಂದರೆ, ಟಿಎಂಸಿ ಯ ಶೇ 65ರಷ್ಟು ಮಹಿಳಾ ಅಭ್ಯರ್ಥಿಗಳು ಗೆದ್ದಿದ್ದಾರೆ (11/17). ಪುರುಷ ಅಭ್ಯರ್ಥಿಗಳ (11/25) ಗೆಲುವಿನ ಪ್ರಮಾಣ ಶೇ 44. ಹಾಗೆಯೇ ಬಿಜೆಡಿಯ ಶೇ 86ರಷ್ಟು ಮಹಿಳಾ ಅಭ್ಯರ್ಥಿಗಳು (6/7) ಗೆಲುವು ಸಾಧಿಸಿದ್ದಾರೆ. ಆದರೆ ಶೇ 43ರಷ್ಟು ಪುರುಷರು ಮಾತ್ರ (6/14) ಗೆಲುವು ಸಾಧಿಸಿದ್ದಾರೆ. ಸದ್ಯಕ್ಕೆ ರಾಷ್ಟ್ರದಲ್ಲಿ ಮಮತಾ ಬ್ಯಾನರ್ಜಿ ಏಕೈಕ ಮಹಿಳಾ ಮುಖ್ಯಮಂತ್ರಿ. ಮಹಿಳಾ ಮೀಸಲು ಮಸೂದೆ ಜಾರಿಯಾಗಿರದಿದ್ದರೂ ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ತೃಣಮೂಲ ಕಾಂಗ್ರೆಸ್ ನ 34% ಎಂಪಿಗಳು ಮಹಿಳೆಯರಾಗಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ವಕ್ತಾರರು ಹೇಳಿಕೊಂಡಿದ್ದಾರೆ.

ಸದ್ಯಕ್ಕೆ 17ನೇ ಲೋಕಸಭೆಯಲ್ಲಿನ ಎಂಪಿಗಳಲ್ಲಿ 15% ಮಾತ್ರ ಮಹಿಳೆಯರಿದ್ದಾರೆ,. ರಾಜ್ಯಸಭೆಯಲ್ಲಿ 12.2% ಎಂಪಿಗಳು ಮಾತ್ರ ಮಹಿಳೆಯರು. ಇದು ಜಾಗತಿಕ ಸರಾಸರಿ 25.5%ಗಿಂತ ಕಡಿಮೆ. ರಾಷ್ಟ್ರದಾದ್ಯಂತ ಎಲ್ಲಾ ರಾಜ್ಯಗಳಲ್ಲಿರುವ ಒಟ್ಟು ಶಾಸಕಿಯರಲ್ಲಿ ಕೇವಲ 8% ಮಾತ್ರ ಮಹಿಳೆಯರು. ಸ್ವಾತಂತ್ರ್ಯಾನಂತರ ಲೋಕಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವು ಆಮೆಯ ಗತಿಯಲ್ಲಷ್ಟೇ ಹೆಚ್ಚಾಗಿದೆ. 1952ರಲ್ಲಿ ರಚಿತವಾದ ಮೊದಲ ಲೋಕಸಭೆಯಲ್ಲಿ 4.4% ಮಹಿಳೆಯರು ಮಾತ್ರ ಇದ್ದರು. 2019ನೇ ಲೋಕಸಭಾ ಚುನಾವಣೆ ನಂತರ ಕೇವಲ 15% ಗೆ ಏರಿಕೆಯಾಗಿದೆ.

**ಮಹಿಳಾ ಮೀಸಲು ಮಸೂದೆಯು ಅಂಗೀಕಾರವಾಗದೆ ನೆನೆಗುದಿಗೆ ಸಿಲುಕಲು ಕಾರಣವಾದರೂ ಏನು?**

ಮಹಿಳೆಯರನ್ನು ನಾಯಕಿಯರಾಗಿ ಗುರುತಿಸಲು ತಿರಸ್ಕರಿಸುವ ಸಾಮಾಜಿಕ, ಸಾಂಸ್ಕೃತಿಕ ಮನೋಭಾವ ಮುಖ್ಯ ಕಾರಣ. ಸಮಾನತೆ ಬೇಕಿಲ್ಲ. ಹೆಚ್ಚು ಅಧಿಕಾರ ಬೇಕು ಎಂಬಂತಹ ಹಪಾಹಪಿಯೂ ಮಹಿಳೆಯರೊಂದಿಗೆ ಅಧಿಕಾರ ಹಂಚಿಕೆಗೆ ತಡೆಯಾಗುತ್ತಿದೆ.

ಬದಲಾವಣೆ ಎಂದರೆ ಕಳೆದುಕೊಳ್ಳುವುದೂ ಇರುತ್ತದೆ. ಅಧಿಕಾರ ಕಳೆದುಕೊಳ್ಳುವುದು ಪುರುಷ ರಾಜಕಾರಣಿಗಳಿಗೆ ಕಷ್ಟದ ಸಂಗತಿ. ಬಹುಶಃ

ಸ್ಥಾನಗಳನ್ನು ಹೆಚ್ಚಿಸಿದಲ್ಲಿ ಹೆಚ್ಚಿನ ವಿರೋಧ ಬರಲಾರದು ಎಂಬುದು ಒಂದು ಊಹೆ.

## ವಸ್ತು ಸ್ಥಿತಿ

ಚುನಾವಣೆಗಳಲ್ಲಿ ಸ್ಪರ್ಧಿಸಲು ಇಚ್ಛಿಸುವ ಮಹಿಳೆಯರ ಸಂಖ್ಯೆಯೂ ಹೆಚ್ಚುತ್ತಿದೆ, 1957ರ ಲೋಕಸಭಾ ಚುನಾವಣೆಗೆ 45 ಮಹಿಳಾ ಸ್ಪರ್ಧಿಗಳಿದ್ದರು. 2014ರಲ್ಲಿ ಮಹಿಳಾ ಸ್ಪರ್ಧಿಗಳ ಸಂಖ್ಯೆ 668ಕ್ಕೇರಿದೆ. ಅದು 15 ಪಟ್ಟು ಏರಿಕೆ. 2019ರಲ್ಲಿ ಇದು 716ಕ್ಕೆ ಏರಿದೆ. ರಾಜಕೀಯ ಪ್ರವೇಶಿಸುವ ಮಹಿಳಾ ಆಕಾಂಕ್ಷೆಯನ್ನು ಇದು ಬಿಂಬಿಸುತ್ತದೆ. ಪುರುಷ ಸ್ಪರ್ಧಿಗಳ ದತ್ತಾಂಶವನ್ನು ಪರಿಶೀಲಿಸಿದಲ್ಲಿ, ಏರಿಕೆ ಪ್ರಮಾಣ 5 ಪಟ್ಟು ಇದ್ದು 1474ರಿಂದ 7,583ಕ್ಕೆ ಏರಿಕೆ ಕಂಡಿದೆ. 1952ರಲ್ಲಿ ರಚನೆಯಾದ ಮೊದಲ ಲೋಕಸಭೆಯಲ್ಲಿ 24 ಮಹಿಳಾ ಎಂಪಿಗಳಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ ಮಹಿಳಾ ಎಂಪಿಗಳ ಸಂಖ್ಯೆ ಬರೀ 78.

ಆದರೆ 1952ರಿಂದ ಹಿಡಿದು ಪ್ರತೀ ಸಾರ್ವತ್ರಿಕ ಚುನಾವಣೆಗಳಲ್ಲಿ ಮಹಿಳಾ ಅಭ್ಯರ್ಥಿಗಳ ಗೆಲುವಿನ ಪ್ರಮಾಣ ಹೆಚ್ಚಾಗಿಯೇ ಇದೆ ಎಂಬುದನ್ನು ಚುನಾವಣಾ ಆಯೋಗದ ಅಂಕಿ ಅಂಶಗಳು ಹೇಳಿವೆ.

## ಸಮಾನ ಪ್ರಾತಿನಿಧ್ಯ ಏಕೆ ಬೇಕು?

ಸ್ವತಂತ್ರ ಭಾರತದಲ್ಲಿ ಸಂವಿಧಾನ ಅಳವಡಿಸಿಕೊಂಡಾಗ ಭಾರತದ ಮಹಿಳೆಯರು ಮತದಾನದ ಹಕ್ಕಿನ ಜೊತೆಗೆ ಚುನಾವಣೆಗೆ ನಿಲ್ಲುವ ಹಕ್ಕೂ ಪಡೆದುಕೊಂಡರು. ಆದರೆ ಈ ವಿಚಾರದಲ್ಲಿ ಅಸಮತೋಲನ ಎದ್ದು ಕಾಣಿಸುತ್ತಿದ್ದು ಸಮತೋಲನ ಸಾಧಿಸುವ ದಿಸೆಯಲ್ಲಿ ಕಾರ್ಯವಾಗಬೇಕು.

ಶಾಸನಸಭೆಗಳಲ್ಲಿ ಸಮಾನ ಪ್ರಾತಿನಿಧ್ಯವು ನಿರ್ಧಾರ ಕೈಗೊಳ್ಳುವಿಕೆ ಗುಣಮಟ್ಟವನ್ನು ಗಣನೀಯವಾಗಿ ಸುಧಾರಿಸುತ್ತದೆ. ಮಹಿಳೆ ಹಾಗೂ ರಾಷ್ಟ್ರವನ್ನು ಸಬಲಗೊಳಿಸುತ್ತದೆ.

ಇತ್ತೀಚೆಗೆ ಭಾರತೀಯ ಜನತಾ ಪಕ್ಷ (ಬಿಜೆಪಿ) ನಾಯಕ ಚಂದ್ರಕಾಂತ ಪಾಟೀಲ, ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಎಂಪಿ ಸುಪ್ರಿಯಾ ಸುಳೆಗೆ 'ಮನೆಗೆ ಹೋಗಿ ಅಡುಗೆ ಮಾಡಿ' ಎಂದಿದ್ದರು. ರಾಜಕಾರಣವೆನ್ನುವುದು 'ಪುರುಷರ ವೃತ್ತಿ' ಎಂಬ ಧೋರಣೆ ಇಲ್ಲಿ ಬಿಂಬಿತ. ರಾಜಕೀಯ ವ್ಯವಸ್ಥೆಯಲ್ಲಿರುವ ದಮನಕಾರಿ ಲಿಂಗತ್ವ ಶ್ರೇಣೀಕರಣದ ರಚನೆಯ ವ್ಯವಸ್ಥೆಯಅಸ್ತಿತ್ವವನ್ನೂ

ಇದು ಪ್ರತಿಬಿಂಬಿಸುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳಲು ಆರಂಭವಾದಾಗ ಇಂತಹ ಪೂರ್ವಗ್ರಹಗಳು ಕಮ್ಮಿಯಾಗಬಹುದು ಎಂಬುದು ನಿರೀಕ್ಷೆ. ಈ ಮಸೂದೆ ಕಾಯಿದೆಯಾಗಿ ಸಾಕಾರವಾದರೆ ಕರ್ನಾಟಕದಲ್ಲಿ 84 ಶಾಸಕಿಯರಿರುತ್ತಾರೆ ಎಂಬುದು ಸಾರ್ವಜನಿಕ ಬದುಕಿನ ಚಹರೆಯನ್ನು ಬದಲಿಸಬಲ್ಲುದು.

## ಮುಂದಿನ ದಾರಿ

ಚುನಾವಣಾ ರಾಜಕಾರಣದ ಮೇಲೆ ವಿವಿಧರೀತಿಗಳಲ್ಲಿ ಪರಿಣಾಮ ಬೀರುವ ಮಹಿಳಾ ಮತದಾರರ ಪ್ರಮಾಣ ಹೆಚ್ಚಾದಂತೆ ಶಾಸನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯದಲ್ಲಿ ಹೆಚ್ಚಳವಾಗದಿರುವುದು ವಿಷಾದನೀಯ. ಚುನಾಯಿತ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಹೊಂದಲು ಕಾನೂನು ತಡೆ ಏನೂ ಇಲ್ಲ. ಆದರೆ ಸಾಮಾಜಿಕ ಅಡೆತಡೆಗಳಿವೆ. ಹೀಗಾಗಿಯೇ ಸರ್ಕಾರದಿಂದ ಮೀಸಲು ನೀತಿಯಂತಹ 'ಅಫರ್ಮೇಟಿವ್ ಆಕ್ಷನ್' ಬೇಕು.

ಮಹಿಳಾ ಚಳವಳಿಯ ಒತ್ತಡಗಳ ಜೊತೆಗೇ, ಮತದಾರರಲ್ಲಿ ಮಹಿಳೆಯರೂ ಅರ್ಧದಷ್ಟಿರುವುದರಿಂದ ಯಾವ ರಾಜಕೀಯ ಪಕ್ಷವೂ ಮಹಿಳಾ ಸಂಖ್ಯೆಯನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಹೀಗಾಗಿಯೇ ತಾವು ಮಹಿಳಾ ಪರ ಎಂಬಂತೆ ಮಹಿಳೆ ಬಗ್ಗೆ ಮೊಸಳೆ ಕಣ್ಣೀರನ್ನು ರಾಜಕೀಯ ಪಕ್ಷಗಳು ಸುರಿಸುತ್ತಿವೆ.

ಮಹಿಳೆ ವಿರುದ್ಧ ಹೆಚ್ಚುತ್ತಿರುವ ಹಿಂಸೆ ಹಿನ್ನೆಲೆಯಲ್ಲಾದರೂ ಸಂಸತ್ತಿನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಬೇಕು. ಮಹಿಳೆಯ ದನಿ, ಆಕೆಯ ಕುರಿತಾದ ಕಾರ್ಯಸೂಚಿಗಳು ಕೇಳುವಂತಾಗಬೇಕು. ಆದರೆ ಸಂಸತ್ತಿನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾದರೆ ಸಮಸ್ಯೆಗಳು ಇಲ್ಲವಾಗುತ್ತವೆಯೇ ? ಬಹುಶಃ ಇಲ್ಲ. ಪಂಚಾಯಿತಿಗಳಲ್ಲಿ ಸರಪಂಚ– ಪತ್ನಿಯ ಹಾವಳಿ ಹೆಚ್ಚಿದಂತೆ ಚುನಾಯಿತ ಮಹಿಳೆಯರ ಪುರುಷ ಬಂಧುಗಳ 'ಕಾರ್ ಬಾರ್ ' ಹೆಚ್ಚಾಗಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಆದರೆ ಪರಿಸ್ಥಿತಿ ಸುಧಾರಣೆಯ ಸಾಧ್ಯತೆಗಳಂತೂ ಇರುತ್ತವೆ. ಪಂಚಾಯಿತಿ ರಾಜ್ – ಸ್ಥಳೀಯ ಸಂಸ್ಥೆಗಳಲ್ಲಿ ಸ್ವಲ್ಪ ಮಟ್ಟಿಗಾದರೂ ದಕ್ಕಿರುವ ಅಧಿಕಾರ ಮಹಿಳೆಯ ರಾಜಕೀಯ ಆಕಾಂಕ್ಷೆಗಳನ್ನು ಚಿಗುರೊಡೆಸಿವೆ. ಮಹಿಳಾ ಆಡಳಿತದಲ್ಲಾದ ಅಭಿವೃದ್ಧಿ ರೀತಿಗಳು ಗಮನ ಸೆಳೆದುಕೊಂಡಿರುವುದನ್ನೂ ಕಡೆಗಣಿಸಲಾಗದು.

ಮಹಿಳಾ ಮತದಾನ ಪ್ರಮಾಣ ಪ್ರತೀ ಚುನಾವಣೆಯಲ್ಲಿ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ರಾಜಕೀಯದಲ್ಲಿ ಮಹಿಳೆ ಮತದಾರಳಷ್ಟೇ ಅಲ್ಲ.; ರಾಜಕೀಯ

ಆಡಳಿತದ ಪ್ರಕ್ರಿಯೆಯಲ್ಲೂ ಆಕೆಯ ಒಳಗೊಳ್ಳುವಿಕೆ ಇರಬೇಕು ಎಂಬಂಥ ಸಂಕಥನ ಇಂದಿನ ತುರ್ತು. ಆಳವಾಗಿ ಬೇರೂರಿರವ ಜೆಂಡರ್ ಪೂರ್ವಗ್ರಹಗಳನ್ನು ಅಂತ್ಯಗೊಳಿಸಲು ಮೀಸಲಾತಿ ಪರಿಹಾರವೇನೂ ಅಲ್ಲಎಂಬುದು ನಿಜ. ಆದರೆ ವ್ಯತ್ಯಾಸವನ್ನು ಉಂಟು ಮಾಡಿ ಸಮಾನತೆ ಸಾಧಿಸಲು ಇದು ಅಗತ್ಯವಾದ ಕ್ರಮ. ಹೆಚ್ಚಿನ ಮಹಿಳೆಯರಿಗೆ ಟಿಕೆಟ್ ಲಭ್ಯವಾಗಬೇಕು ಎಂಬುದು ಚರ್ಚೆಗೆ ಒಳಪಡಬೇಕು. ಒತ್ತಡ , ಆಗ್ರಹ ಹೆಚ್ಚಬೇಕು.

ರಾಜಕಾರಣದಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಇಲ್ಲದಿರುವಿಕೆಯು ಪ್ರಾತಿನಿಧಿಕ ಪ್ರಜಾಪ್ರಭುತ್ವದ ವಿಚಾರ ಹಾಗೂ ಚೈತನ್ಯವನ್ನು ಕುಗ್ಗಿಸುತ್ತದೆ. ಜೊತೆಗೆ ಮಹಿಳೆಗೆ ಸಂವಿಧಾನ ಖಾತ್ರಿ ಪಡಿಸಿರುವ ಸಮಾನ ಸ್ಥಾನಮಾನ ಹಾಗೂ ಅವಕಾಶಗಳನ್ನೂ ನಿರಾಕರಿಸುತ್ತದೆ.

ಸಂವಿಧಾನದ 14ನೇ ವಿಧಿಯಲ್ಲಿ ಖಾತ್ರಿ ಪಡಿಸಲಾಗಿರುವ ಸಮಾನತೆ ಸಾಧನೆಗೆಗಾಗಿ ಈ ಬದ್ಧತೆಯನ್ನು ಪೂರ್ಣಗೊಳಿಸಬೇಕು. ಸಮಾನತೆಯ ಹಕ್ಕು , ಮೂಲಭೂತ ಹಕ್ಕು.

## ಪ್ರತಿಕ್ರಿಯೆಗಳು :

## ಸಂಕೋಲೆಗಳ ಕಿತ್ತೆಸೆದು ನಿಲ್ಲೋಣ

ಅಖಿಲಾ ವಿದ್ಯಾಸಂದ್ರ

ಎಲ್ಲರಿಗೂ ನಮಸ್ಕಾರ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.

ನಮ್ಮ ದೇಶದ ರಾಜಕಾರಣವನ್ನು ಎಲ್ಲರೂ ನೋಡ್ತಾ ಇದ್ದೀರಾ. ಯಾಕೆ ಇಂಥ ಅಧೋಗತಿಗೆ ಇಳಿದಿದೆ ಅಂತ ಹೇಳಿದ್ರೆ ನೆನ್ನೆ ಶೈಲಜಾ ಟೀಚರ್ ಹೇಳ್ತಾ ಇದ್ರು– ಕೆಲವೇ ಕೆಲವು ಸಮುದಾಯಗಳು ಆವಾಗ ರಾಜಕಾರಣ ಮಾಡುವಂತಹ, ಕಾನೂನು ತರುವಂತಹ, ಸಮಾಜಕ್ಕೆ ದಿಕ್ಕು ತೋರಿಸುವಂತಹ ಅಧಿಕಾರವನ್ನು ಪಡೆದುಕೊಂಡಿದ್ದರು. ಅವುಗಳೇ ಮಾಡಿದಂತಹ ಎಲ್ಲಾ ರೀತಿಯ ರಾಜಕಾರಣ– ಸಾಮಾಜಿಕ, ಸಾಂಸ್ಕೃತಿಕ, ಧರ್ಮರಾಜಕಾರಣ, ಮತ–ಪಂಥಗಳ ರಾಜಕಾರಣ

ಇವೆಲ್ಲವುಗಳ ಅತ್ಯಂತ ವಿಷಮ ಸ್ಥಿತಿಯನ್ನು ನಾವು ಇವತ್ತು ನೋಡುತ್ತಿದ್ದೇವೆ. ಅನುಭವಿಸುತ್ತಿದ್ದೇವೆ. ಆದ್ದರಿಂದ ಅದರ ವಿಷಮ ಸ್ಥಿತಿ ಏನೆಂದರೆ ಅಂತಹ ಕೀಳು ಮನೋಭಾವದ ಸೋಕಾಲ್ಡ್ 'ಮನು'ಜ ಪುರುಷರು; 'ಮಾನವೀ'ಜ ಪುರುಷರಲ್ಲ. 'ಮನು'ಗೆ ಹುಟ್ಟಿದಂತಹ ಪುರುಷರು ಇವತ್ತು ಕುಳಿತುಕೊಂಡು ರಾಜಕಾರಣದಲ್ಲಿ ವಿಜೃಂಭಿಸುತ್ತಿದ್ದಾರೆ. ಇಂತಹ ರಾಜಕಾರಣ ನಮಗೆ ಬೇಕಾಗಿಲ್ಲ.

ಕೆಲವು ದಶಕಗಳ ಹಿಂದೆ 33% ಮಹಿಳೆಯರಿಗೆ ಮೀಸಲಾತಿ ತರಲು ಹೊರಟಿದ್ದಂತಹ ಸರ್ಕಾರದ ನಿಲುವು ಏನಾಯಿತು ಅಂತ ಹೇಳುವಾಗ ಮಂಜುಳಾ ಮೇಡಂ ಮಾತಾಡ್ತಾ ಹೇಳ್ತಾ ಇದ್ರು– ಲಾಲುಪ್ರಸಾದ್ ಆಗಬಹುದು, ಮುಲಾಯಂ ಸಿಂಗ್ ಆಗಬಹುದು ಇನ್ನು ಯಾರಾದರೂ ಆಗಬಹುದು ಅಷ್ಟೆಲ್ಲ ಜನಗಳು ಒಳ ಮೀಸಲಾತಿ ಬೇಕೇ ಬೇಕು. ಇಲ್ಲ ಅಂದ್ರೆ ಅದೇ ಸಮುದಾಯಗಳು ಅಥವಾ ಈಗಿರುವ ರಾಜಕಾರಣಿಗಳ ಹೆಂಡತಿಯರು, ಮಕ್ಕಳು ಬಂದು ಕುಳಿತುಕೊಳ್ಳುತ್ತಾರೆ ಅಂತ ವಿರೋಧ ಮಾಡಿ ಬಿಲ್ ಪಾಸ್ ಆಗುವುದನ್ನ ತಡೆದಂತವರು, ಅದಾದ ಮೇಲೆ ಸದ್ದೇ ಎತ್ತಲಿಲ್ಲ. ಯಾರೂನೂ ಒಳ ಮೀಸಲಾತಿ ಹಾಕಿಬಿಟ್ಟು ಪಾಸ್ ಮಾಡಿ ನೀವು ನೆಕ್ಸ್ ಇಯರ್ ಅಥವಾ ಇಮ್ಮಿಡಿಯೇಟ್ ಆಗಿ ಅಂತ ಹೇಳುವ ತಾಕತ್ತು ಧಮ್ಮುಗಳು ಇರಲಿಲ್ಲವೇ ಅವರುಗಳಿಗೆ? ಅಂತೂ ತಡೆಯಬೇಕಾಗಿತ್ತು. ತಡೆದು ಮೂಲೆಗೆ ಬಿಸಾಕಿದ್ರು.

ಒಂದು ಬಿಲ್ ಅಂತ ಪಾಸಾಗಿದ್ರೆ ಕಡೇಪಕ್ಷ ಯಾರಾದರೂ ಮಹಿಳೆ ಬಂದು ಕೂರುತ್ತಿದ್ದರು. ನಮ್ಮ ಮಹಿಳೆಯರಿಗೆ ಹೇಳಬೇಕೆಂದರೆ ಜಾತಿ ಗೀತಿ ಇಲ್ಲ. ಅದರಲ್ಲಿ ಅವರು ಮುಳುಗೋಗಿದ್ದಾರೆ ಅಷ್ಟೇ. ಅವರನ್ನು ಈಚೆಗೆ ಎಳ್ಕೊಂಡು ಬರಬಹುದಿತ್ತು ನಾವು. ನಾವು ಹೋರಾಟ ಮಾಡಿ ಒಳ ಮೀಸಲಾತಿ ತರಬಹುದಿತ್ತು. ಆದರೆ ಅದು ಇನ್ನೊಂದು ಹೋರಾಟ ಆಗ್ತಿತ್ತು. ಒಂದು ಹೆಜ್ಜೆ ಮುಂದೆ ಬಂದಿದ್ರೆ ಇನ್ನೊಂದು ಹೆಜ್ಜೆ ತೆಗೆದುಕೊಳ್ಳೋಕೆ ಸುಲಭ ಆಗ್ತಾ ಇತ್ತು. ಆದರೆ ಅದನ್ನ ಪಾಸ್ ಮಾಡುವುದಕ್ಕೆ ಬಿಡದೆ ತಡೆದು ನಿಲ್ಲಿಸಿ ಬಿಟ್ರು. ಅದು ಒಂದು ಸ್ಟೋರೇಜ್ ನಲ್ಲಿ ಬಿದ್ದೋಗಿದೆ.

ಯಾವಾಗಲೋ 33% ಅಂದಿದ್ದು ಇಂದಿಗೂ 33% ಅಂತಾನೇ ಹೇಳ್ತಾ ಇದ್ದಾರೆ ಹೊರತು 50% ಅನ್ನೋದು ಯಾವನ ಬಾಯಲ್ಲೂ ಬರೋದಿಲ್ಲ! ಯಾಕೆ? ಮತ್ತೂ 33% ಬಾಲ ಹಿಡ್ಕೊಂಡಿದ್ದೀವಿ ನಾವು? ನಾವು ಅಗ್ರಹ ಮಾಡುವುದು, ಹಕ್ಕೊತ್ತಾಯ ಮಾಡುವುದು 50% ಗೆ.

ಮೆಜಾರಿಟಿ ಬಗ್ಗೆ ಮೇಡಂ ಮಾತಾಡ್ತಾ ಹೇಳ್ತಿದ್ರು– ಸಂಪೂರ್ಣ

ಮೆಜಾರಿಟಿ ಬಂದು ಸರ್ಕಾರ ರೂಪಿಸಿದಂತಹ ಇಂದಿನ ಕೇಂದ್ರ ಸರ್ಕಾರ ಅನಗತ್ಯವಾದಂತಹ ಅಥವಾ ಜನ ವಿರೋಧಿ ಕಾನೂನುಗಳನ್ನು ಸುಗ್ರೀವಾಜ್ಞೆ ಮೂಲಕ ತೆಗೆದುಕೊಂಡು ಬಂದಂತಹ ಇವತ್ತಿನ ಸರ್ಕಾರ ಧರ್ಮದ ಬಗ್ಗೆ "ಯತ್ರ ನಾರ್ಯರ್ಂತು ಪೂಜ್ಯಂತೇ .." ಅಂತ ಏನೇನೋ ಬೊಗಳೆ ಬಿಡುವಂತಹ ಜನಗಳು, ಏನೆಲ್ಲ ಮಾತಾಡುವಂತಹ ಜನಗಳು, ಮಹಿಳೆಯರು ದೇವತೆಗಳು ಅಂತೆಲ್ಲಾ ಹೇಳುವ ಜನಗಳು ಯಾಕೆ ಸುಗ್ರೀವಾಜ್ಞೆಯ ಮೂಲಕ ಇದನ್ನು ಪಾಸ್ ಮಾಡಲಿಕ್ಕಾಗಲಿಲ್ಲ? ಮಾಡಬಹುದಿತ್ತಲ್ಲ. ಯಾರು ತಡೆಯುತ್ತಿದ್ದರು ಅವರನ್ನು? ಅದನ್ನು ಮಾಡಲಿಕ್ಕೆ ಇವರಿಗೆ ತಾಕತ್ತು ಧಮ್ಮುಗಳು ಇರಲಿಲ್ಲವೇನು? ಆಯಿತು ಸರ್ಕಾರಕ್ಕೆ ಬುದ್ಧಿ ಇಲ್ಲ ಅಂತ ಬಿಟ್ಟುಬಿಡೋಣ. ಆದರೆ ಅದೇ ರಾಜಕೀಯ ಪಕ್ಷಗಳೇ ಸರ್ಕಾರ ಮಾಡೋದು. ಕಡೇಪಕ್ಷ ಯಾರಾದರೂ ಒಂದು ನಾಲ್ಕು ಜನ ಬಾಯಿಬಿಟ್ಟು ಮಾತಾಡಿ ನಾವು ಪಕ್ಷಗಳೇ ಒಮ್ಮತದಿಂದ ಒಂದು ಕ್ಷೇತ್ರದಲ್ಲಿ ಮಹಿಳೆಯರನ್ನೇ ನಿಲ್ಲಿಸೋಣ, ಗೆಲ್ಲಿಸೋಣ 50% ಇಲ್ದೇ ಹೋದ್ರು, 40%– 30% ಆದ್ರೂ ಪ್ರಯೋಗಕ್ಕಾದರೂ ಟ್ರೈ ಮಾಡೋಣ ಅಂತ ಹೇಳುತ್ತಾರೆಯೇ? ಯಾವುದೇ ರಾಜಕೀಯ ಪಕ್ಷವೂ ಕೂಡ– ನಾವು ಬದಲಾವಣೆಗೋಸ್ಕರ ಬರ್ತಾ ಇದ್ದೀವಿ ಅಂತ ಹೇಳುವಂತಹ, ಈವನ್ "ಆಮ್ ಆದ್ಮಿ ಪಾರ್ಟಿ"ಯಾಗಲಿ, ಇತ್ತೀಚೆಗೆ ಬೇರೆ ಯಾವ್ಯಾವುದೋ ಪಕ್ಷಗಳು ಬಂದಿವೆಯಲ್ಲ ಅವುಗಳಿಗೂ ಕೂಡ ಇಲ್ಲ. ಇನ್ನೆಂತಾ ಬದಲಾವಣೆಯನ್ನು ನಾವು ಅವುಗಳಿಂದ ನಿರೀಕ್ಷೆ ಮಾಡೋದು. ಮಹಿಳೆಯರು ಅಂದ್ರೆ ಅವರಿಗೆ ಗಣನೆಗೇ ಇಲ್ಲ. ಯಾರಿಗೂ ಕೂಡ ಮಹಿಳೆಯರ ಸಮಾನತೆ ಅನ್ನೋದು ವಿಷಯವೇ ಅಲ್ಲ! ಇದನ್ನ ಯೋಚನೆ ಮಾಡಬೇಕು.

ಇಂತಹ ಸಮಾಜಕ್ಕೆ ಮಹಿಳೆಯರು ಯಾಕೆ ಮಕ್ಕಳನ್ನು ಹೆತ್ತು, ಬೆಳೆಸಿ ಕೊಡುಗೆಯಾಗಿ ಕೊಡಬೇಕು? ಯಾಕೆ ಈ ಸಮಾಜವನ್ನು ಬದುಕಿಸಿ ಮುಂದುವರಿಸಬೇಕು? ಯಾವನೋ ಹೇಳ್ತಾ ಇರ್ತಾನೆ "ಹತ್ತಡಿರಿ ನೀವು, ಇಪ್ಪತ್ತಡಿರಿ, ನೂರು ಹಡೀರಿ" ಅಂತ. ಒಂದು, ಒಂದೇ ಒಂದು ಹಡೀಲಿ ಅವನು. ಆಯ್ತು ಹಡೆಯುವವರಿಗಾದರೂ ಇಂದು ಒಳ್ಳೆಯ ವ್ಯವಸ್ಥೆ ವಾತಾವರಣನಾದರೂ ಒದಗಿಸಿಕೊಡುತ್ತಾರಾ? ಇಲ್ಲ. ಏನೋ ಇವರದ್ದು ಆಸ್ತಿ ಅನ್ನೋ ಹಂಗೆ ನಡೆದುಕೊಳ್ಳುತ್ತಿದ್ದಾರೆ.

ಮಹಿಳೆ ತಮ್ಮ ಜೀವ ಪಣಕ್ಕಿಟ್ಟು ತನ್ನ ಅಮೂಲ್ಯವಾದ ಸಮಯವನ್ನು ಸಂಪೂರ್ಣವಾಗಿ ಅದಕ್ಕೋಸ್ಕರ ಮುಡುಪಾಗಿಟ್ಟು ಮಗುವನ್ನು ಹೆತ್ತು, ಹೊತ್ತು, ಪೋಷಿಸಿ, ಪೊರೆದು ಬುದ್ಧಿ ಕಲಿಸಿ ಏನೆಲ್ಲ ಮಾಡಿ ಸಮಾಜಕ್ಕೆ ಕೊಡುಗೆಯಾಗಿ ಕೊಡಬೇಕು ಅಂತ ನಿರೀಕ್ಷೆ ಮಾಡುತ್ತಾರೆ. ಅಂತಹ ಒಳ್ಳೆಯ ಮಗುವನ್ನು

ಸಮಾಜಕ್ಕೆ ಕೊಡುಗೆಯಾಗಿ ಕೊಡಬೇಕು ಅಂತ ನಿರೀಕ್ಷೆ ಮಾಡೋ ಈ ಸಮಾಜ ಆ ಮಹಿಳೆಯನ್ನು ಆ ಹೆಣ್ಣು ಮಗುವನ್ನು ಎಷ್ಟು ಒಳ್ಳೆಯ ರೀತಿಯಲ್ಲಿ ನಡೆಸಿಕೊಳ್ಳುತ್ತದೆ? ಎಷ್ಟು ಜ್ಞಾನವನ್ನು ಗಳಿಸಿಕೊಳ್ಳುವುದಕ್ಕೆ ಅವಕಾಶ ಕೊಡುತ್ತದೆ? ಎಷ್ಟು ನೆಮ್ಮದಿಯಿಂದ ಬೆಳೆಯುವುದಕ್ಕೆ ಅವಕಾಶ ಕೊಡುತ್ತದೆ? ಹೆದರಿಕೊಂಡು, ಬಚ್ಚಿಟ್ಟುಕೊಂಡು, ಸಂಕಟದಿಂದ ಬೆಳೆದಂತಹ ಒಂದು ಹೆಣ್ಣುಮಗಳು, ಅಪೌಷ್ಟಿಕತೆಯಿಂದ ನರಳುತ್ತಾ ಇರುವಂತಹ ಹೆಣ್ಣುಮಗಳು, ಹೊಡೆಸಿಕೊಂಡು, ಬಡಿಸಿಕೊಂಡು ಬಿದ್ದಿರುವಂತಹ ಹೆಣ್ಣು ಮಗಳು ಹೇಗೆ ಒಂದು ಒಳ್ಳೆಯ ಮಗುವನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಡಲಿಕ್ಕೆ ಸಾಧ್ಯ? ಎಷ್ಟು ಅಸಹ್ಯವಾದ expectation ಅಲ್ವ ಇದು?

ಆದರೂ ಕೂಡ ಅವಳು ಸ್ವಭಾವತಃ ಪ್ರಕೃತಿದತ್ತವಾಗಿ ಬಂದಿರುವ ಕೆಲವು ಗುಣಗಳಿಂದ ಮಗುವನ್ನು ಎಷ್ಟು ಸಾಧ್ಯವೊ ಅಷ್ಟು ಒಳ್ಳೆಯ ರೀತಿಯಲ್ಲಿ ಸಂರಕ್ಷಿಸಿ ಬೆಳೆಸಿ ಸಮಾಜಕ್ಕೆ ಕೊಡುಗೆಯಾಗಿ ಕೊಡುತ್ತಾಳೆ.

ಅದರಲ್ಲಿ ಗಂಡುಮಕ್ಕಳಾದವರು ಕೆಲವರು ಮಾತ್ರ ನಿಜವಾಗಿಯೂ ಮಾನವೀಯ ಜನರು ಅಂತ ಹೇಳಬಹುದು. ಅನೇಕರು ಹುಟ್ಟಿದ ಮೇಲೆ ತಾಯಿಯಿಂದಲೇ ಹುಟ್ಟಿದ್ದೀವಿ ಅನ್ನೋದನ್ನ ಮರೆತುಬಿಟ್ಟು ಹೆಣ್ಣುಮಕ್ಕಳನ್ನು ರೇಗಿಸುವುದು, ಅವಮಾನಿಸುವುದು, ಅತ್ಯಾಚಾರ ಮಾಡುವುದು ಕೆಟ್ಟದಾಗಿ ನಡೆಸಿಕೊಳ್ಳುವುದು ಮಾಡುತ್ತಾರೆ ಸಮಾಜ ಅವರನ್ನು ಮಾರ್ಪಾಡು ಮಾಡುತ್ತದೆ. ಬೆಳಿತಾ ಬೆಳಿತಾ ಅಂತಹ ಸಮಾಜಕ್ಕೆ ನಾವ್ಯಾಕೆ ಮಕ್ಕಳನ್ನು ಹೆತ್ತು ಕೊಡಬೇಕು "ಸಾಯಲಿ ಮನುಜ ಸಮಾಜ" ಅಂತ ಬಿಟ್ಟಾಕಿಬಿಡಬಹುದಲ್ಲ?

ಇಂತಹ ರಾಜಕಾರಣವನ್ನು ಅಕಸ್ಮಾತ್ ಮಹಿಳೆಯರು ಕೈಗೆತ್ತಿಕೊಂಡರೆ ಏನಾಗಬಹುದು ಈ ಮನುಜ ಪುರುಷರ ಸಮಾಜ? ಅವರದು ಯಾವುದೇ ರೀತಿಯ ರಾಜಕಾರಣವಿರಲಿ– ಸಾಂಸ್ಕೃತಿಕ, ಧಾರ್ಮಿಕ ಹೀಗೆ ಈ ನಿಟ್ಟಿನಲ್ಲಿ ಎಲ್ಲರೂ ಯೋಚನೆ ಮಾಡಬೇಕಾಗಿದೆ. ಒಬ್ಬ ಮಹಿಳೆ ಎಲೆಕ್ಷನ್ನಿಗೆ ನಿಂತಿದ್ದಾಳೆ ಅಂದರೆ ಅವಳಿಗೆ ಅನೇಕ ರೀತಿಯ ಅವಹೇಳನ ಮಾಡುತ್ತಾರೆ. ಅವಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮುಖಕ್ಕೆ ಕೆಸರೆರಚುವ ಪ್ರಯತ್ನ ಮಾಡುತ್ತಾರೆ.

ಹಾಗೂ–ಹೀಗೂ ಮಾಡಿ ಅಧಿಕಾರ ನಡೆಸುತ್ತಾ ಇದ್ದರೆ– ಮಮತಾ ಬ್ಯಾನರ್ಜಿ ಅಂತವರು. ಅವರ ಅಧಿಕಾರದ ಮೇಲೆಯೇ ಎಲ್ಲರಿಗೂ ಕಣ್ಣು. ಆಕೆಯ ಒಂದೊಂದು ಹೆಜ್ಜೆಯ ಮೇಲು ಎಲ್ಲರದೂ ಕಣ್ಣು ಇರುತ್ತದೆ. ಕ್ರಿಟಿಕ್ಸ್ ಮಾಡಲಿ ತೊಂದರೆ ಇಲ್ಲ. ಆದರೆ ಅವಹೇಳನ, ಅವಮಾನ ಮಾಡುವುದು ಇದೆಯಲ್ಲಾ

ಅವಳದ್ದೇ ರಾಜ್ಯಕ್ಕೆ ಹೋಗಿ "ದೀದೀ.. ಓಓ.. ದೀದೀ..." ಅಂತ ಹೆಣ್ಣುಮಕ್ಕಳನ್ನು ರೇಗಿಸುವಂತಹ ಟೋನ್ ನಲ್ಲಿ ಮಾತನಾಡುವುದು ಇದೆಯಲ್ಲ ಅದು ಯಾವ ಸಂಸ್ಕಾರ? ಇದನ್ನು ನಾವು ರಾಜಕಾರಣ ಅಂತ ಹೇಳಬೇಕಾಗುತ್ತಾ? ಅಸಹ್ಯ ಆಗುತ್ತದೆ. ಒಂದು ಉನ್ನತ ಸ್ಥಾನದಲ್ಲಿ ಇರಬೇಕಾದಂತಹ ವ್ಯಕ್ತಿ ಇಷ್ಟು ಕೆಟ್ಟದಾಗಿ ನಡೆದುಕೊಳ್ಳುವಂತದ್ದು ಆರೋಗ್ಯಕರವಾದ ರಾಜಕಾರಣವ?

ಹಾಗಾಗಿ ನಾವು ಇವತ್ತು ಈ ವೇದಿಕೆಯ ಮೇಲೆ ಹಕ್ಕೊತ್ತಾಯ ಮಾಡ್ತಾ ಇರುವಂತದ್ದು ಬರೀ 33% ಅಲ್ಲ. ಮತ್ತೆ ಯಾರದೋ ಭಿಕ್ಷೆ ಅಲ್ಲ. 50% ಮೀಸಲಾತಿ. ಮೀಸಲಾತಿ ಅಂತ ಅಂದ್ರೆ ನಮಗೇನೋ ಕೊಡಿ ಅಂತ ಕೇಳುವುದಲ್ಲ. ನಮ್ಮ ಹಕ್ಕಿನ ಜಾಗದಲ್ಲಿ ನೀವು ಕಾಲು ಹಾಕಿ ನಿಂತ್ಕೊಂಡಿದ್ದೀರಾ. ನಮ್ಮ ಹಕ್ಕುಗಳನ್ನು, ನಮ್ಮ ಸ್ಪೇಸ್ ಅನ್ನು ನೀವು ಸ್ಟಾಂಪ್ ಮಾಡ್ತಾ ಇರೋದು ಸರಿಯಲ್ಲ. ಇದು ಅನ್ಯಾಯ, ಅತ್ಯಾಚಾರ. ತೆಗೆಯಿರಿ ನಿಮ್ಮ ಕಾಲನ್ನು ಅಂತ ಹೇಳೋದು ಮೀಸಲಾತಿ. ನಾವಿಲ್ಲಿ ಹುಟ್ಟಿದ್ದೀವಿ. ನಾವು ನಿಮ್ಮ ಜೊತೆ ಹಂಚಿಕೊಳ್ಳುವುದಕ್ಕೆ ರೆಡಿ ಇದ್ದೇವೆ. ಆದರೆ ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿರುವುದನ್ನು, ದಬ್ಬಾಳಿಕೆಯನ್ನು ನಿಲ್ಲಿಸಿ ಅಂತ ಹೇಳುವುದು. 50% ಮೀಸಲಾತಿಯನ್ನು ಎಲ್ಲಾ ಕ್ಷೇತ್ರಗಳಲ್ಲೂ ಮತ್ತು ಎಲ್ಲಾ ಸ್ಥಳಗಳಲ್ಲೂ ಒತ್ತಾಯಿಸುತ್ತಾ ನಾವು ಇವತ್ತು ಈ ವೇದಿಕೆಯಿಂದ ಹಕ್ಕೊತ್ತಾಯ ಮಾಡ್ತಾ ಇದ್ದೇವೆ.

ನೀವು ಯಾವುದೇ ರೀತಿ ಹೇಳಿದರೂ ಕೂಡ ಸಮಾನತೆ ಮಹಿಳೆಯರಿಗೆ ದೊರಕಲೇಬೇಕು. ಅದನ್ನು ನಾವು ಪಡೆದುಕೊಂಡೇ ಪಡೆದುಕೊಳ್ಳುತ್ತೇವೆ. ನಮ್ಮ ಈ ಇಡೀ ಪ್ಲಾನೆಟ್ ನಾಶ ಆಗುವುದರ ಒಳಗಡೆ, ಕಡೇಪಕ್ಷ ನಾವು ಸಾಯುವುದರ ಒಳಗಡೆ ಆದ್ರೂ ಆಗುತ್ತೋ ಇಲ್ವೋ ಗೊತ್ತಿಲ್ಲ! ಪ್ಲಾನೆಟ್ ನಾಶ ಆಗೋವಂತದ್ದು ಏನಾದರೂ ಇದ್ದರೆ ಅಷ್ಟರೊಳಗಡೆ ಖಂಡಿತ ಸಾಧಿಸುತ್ತೇವೆ.

"ಸಮಾನತೆ ಭಿಕ್ಷೆಯಲ್ಲ
ನಮ್ಮ ಹಕ್ಕು ನಮ್ಮ ಹಕ್ಕು
ಸಮಾನತೆ ನಮ್ಮ ಹಕ್ಕು
ಭಿಕ್ಷೆಯಲ್ಲ ಭಿಕ್ಷೆಯಲ್ಲ"

ಬರಹ ರೂಪ: ಮೇ ನಾ ತರಂಗಿಣಿ

## ಮೀಸಲಾತಿ ಹಕ್ಕನ್ನು ದಕ್ಕಿಸಿಕೊಳ್ಳಬೇಕು

ಜೊಹರಾ ಮಂಗಳೂರು

ವೇದಿಕೆ ಮುಂಭಾಗದಲ್ಲಿರುವ ನನ್ನ ಎಲ್ಲ ಸಹೋದರ, ಸಹೋದರಿಯರೇ,

ವಿದ್ಯೆಗೆ ಸರಸ್ವತಿ, ಸಂಪತ್ತಿಗೆ ಲಕ್ಷ್ಮಿ, ಶಕ್ತಿಗೆ ಪಾರ್ವತಿ, ಎಲ್ಲಕ್ಕೂ ಮಿಗಿಲಾಗಿ ಜನ್ಮ ಕೊಟ್ಟವಳು ಹೆಣ್ಣು. ಮಹಿಳಾ ದಿನಾಚರಣೆಯ ಶುಭಾಶಯಗಳೊಂದಿಗೆ, ಈ ಸಂದರ್ಭದಲ್ಲಿ ಇಲ್ಲಿ ನನಗೆ ಸಿಕ್ಕಿರುವ ಅವಕಾಶದಲ್ಲಿ ಒಂದೆರಡು ಮಾತಾಡಲು ಇಚ್ಛಿಸುತ್ತೇನೆ.

ಈಗಾಗಲೇ ಮೇಡಂ ಮಂಜುಳಾ, ಅಖಿಲಾ ಅವರೆಲ್ಲಾ ಬಹಳಷ್ಟು ಚೆನ್ನಾಗಿ ಮಾತನಾಡಿದ್ದಾರೆ ಮಹಿಳಾ ಮೀಸಲಾತಿ ಬಗ್ಗೆ. ನಾನು ಅಷ್ಟು ದೊಡ್ಡದಾಗಿ ಮಾತನಾಡಲು ಹೋಗುವುದಿಲ್ಲ. ನಾನು ನನ್ನ ಸ್ವಂತ ಅನುಭವಗಳನ್ನು ನಿಮ್ಮ ಜೊತೆ ಹಂಚಿಕೊಳ್ಳಲಿಚ್ಛಿಸುತ್ತೇನೆ.

ನನ್ನ ಹೆಸರೇ ಹೇಳುವ ಹಾಗೆ ನಾನೊಬ್ಬ ಮುಸ್ಲಿಂ ಮಹಿಳೆ. ನನಗೆ ಗೊತ್ತಿಲ್ಲ, ನಾನು ಅಪ್ಲಿಕೇಷನ್ ಹಾಕಿ ಹುಟ್ಟಲಿಲ್ಲ, ಹಾಗೆ ಅಂತಹ ವ್ಯವಸ್ಥೆಯಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಅದಾಗೋದಿಲ್ಲ. ಆದರೆ ನಾನೊಬ್ಬ ಮುಸ್ಲಿಂ ಮಹಿಳೆಯಾಗಿ, ನಾನು ಬುರ್ಖಾ ಹಾಕದೇ, ಯಾವುದೇ ಕಣ್ಣು ಪರದೆ ಹಾಕದೇ ನಿಮ್ಮ ಮುಂದೆ ನಿಂತುಕೊಂಡು ಮಾತನಾಡುತ್ತಿದ್ದೇನೆ. ಅಂದರೆ ಮೀಸಲಾತಿ ಬಂದಿರೋದರಿಂದ, ಮೊದಲನೇದಾಗಿ ನಾನು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯಲ್ಲಿ ನನ್ನನ್ನು ಕರೆದು, ನಮ್ಮ ಮನೆಗೆ ಬಂದು, "ನೋಡಿ, ನೀವು ತುಂಬಾ ಚೆನ್ನಾಗಿ ಮಾತಾಡ್ತೀರಾ, ಎಲ್ಲರ ಜೊತೆನೂ ತುಂಬಾ ಚೆನ್ನಾಗಿ ಮಾತಾಡ್ತೀರಾ, ನೀವು ಪಂಚಾಯಿತಿ ಎಲೆಕ್ಷನ್ನಿಗೆ ನಿಂತುಕೊಳ್ಳಿ" ಅಂತಂದ್ರು. ದೇವರಾಣೆ ನನಗೆ ಗೊತ್ತಿಲ್ಲ ಪಂಚಾಯಿತಿ ಅಂದರೇನು ಅಂತ. ಮಾತಾಡ್ತಾ ಇದ್ದೆ ನಾನು. ಈಗಲೂ ಮಾತಾಡ್ತಾನೇ ಇದೀನಿ. ಸರಿ, ನಮ್ಮ ಮನೆಯಲ್ಲಿ ನನ್ನ ಗಂಡ, ನಮ್ಮ ಅತ್ತೆ, ನಮ್ಮ ಅಮ್ಮ, ನನ್ನ ತಮ್ಮಂದಿರೆಲ್ಲಾ, "ಅಯ್ಯೋ ಇಂತಹ ಅವಕಾಶ ಸಿಕ್ಕೋದಿಲ್ಲಾ. ಹೋಗಿ ಎಲೆಕ್ಷನ್ನಿಗೆ ನಿಂತುಕೋ" ಅಂತ ಹೇಳಿದರು. ಸರಿ ನಾನು ಪಂಚಾಯಿತಿ ಎಲೆಕ್ಷನ್ನಿಗೆ ನಿಂತುಕೊಂಡೆ. ನನಗೆ ಗೊತ್ತಿಲ್ಲದೆ ಇರುವಂತಹ ಒಂದು ವಾರ್ಡಿನಲ್ಲಿ ನನ್ನನ್ನು ನಿಲ್ಲಿಸಿದರು. ಸರಿಯಾಗಿ ಪರಿಚಯವಿಲ್ಲ, ನಾನು ಬೆಂಗಳೂರಿನವಳು; ನನ್ನ ಮಗಳ ವಿದ್ಯಾಭ್ಯಾಸಕ್ಕೆ ಅಂತ

ಬೆಂಗಳೂರಿನಿಂದ ಮಂಗಳೂರಿಗೆ ಹೋದವಳು. ಹೋಗಿ ಮೂರು ತಿಂಗಳಾಗಿದೆ ಅಷ್ಟೆ. ನನಗೆ ಗೊತ್ತಿಲ್ಲದೆ ಇರುವ ವಾರ್ಡಿನಲ್ಲಿ ನನ್ನನ್ನು ಎಲೆಕ್ಷನ್ನಿಗೆ ನಿಲ್ಲಿಸಿದರು. ನಿಲ್ಲಿಸೋದಕ್ಕಿಂತ ಮೊದಲು ಮನೆಗೆ ಬಂದು ಆರ್ಡರ್ ಮಾಡಿದರು, "ನೋಡು ಇದು ಬೆಂಗಳೂರಲ್ಲ, ನಿನಗೆ ಅವಕಾಶ ಕೊಡ್ತಾ ಇರೋದು ಸರಿ. ಅದರೆ ಮೀಸಲಾತಿ ಬಂದಿರೋದರಿಂದಲ್ಲ" ಅವರ ಪ್ರಕಾರ – ನಿನಗೆ ಅವಕಾಶ ಕೊಡ್ತಾ ಇದೀವಿ. ದಯವಿಟ್ಟು ನೀನು ಹೀಗೆಲ್ಲಾ ಇರಬೇಡಾ. ನಾವು ಮುಸ್ಲಿಮರು. ಇದು ಮಂಗಳೂರು, ಬೆಂಗಳೂರಲ್ಲ. ನೀನು ಬುರ್ಖಾ ಹಾಕಿಕೋ ಅಂದರು. ನನಗೆ ಕೈಕಾಲು ನಡುಗೋಕೆ ಶುರುವಾಯಿತು. ಓಟಿಗೆ ನಿಲ್ಲುವಂತಹ ಶಕ್ತಿ ಇದೆ, ಖುಷಿಯಾಯಿತು. ಆದರೆ ಬುರ್ಖಾ ಹಾಕ್ಕೋಬೇಕು ಅಂದರು. ನಮ್ಮ ಹಿರಿಯರೆಲ್ಲಾ ತುಂಬಾ ಒತ್ತಾಯ ಮಾಡಿದರು. ಆಗ ನಮ್ಮ ಮನೆಯವರೆಲ್ಲಾ, "ಒಂದು ಎಲೆಕ್ಷನ್ ಕಳೆಯೋ ತನಕ ಮಾತ್ರ ತಾನೇ, ಹಾಕ್ಕೊಳ್ಳೇ" ಅಂದರು. ಸರಿ, ನನ್ನ ಹತ್ತಿರ ಒಂದು ಬುರ್ಖಾನೂ ಇರಲಿಲ್ಲ. ಯಾರದೋ ನನ್ನ ಫ್ರೆಂಡ್ ಹತ್ತಿರ ಇದ್ದುದನ್ನೇ ಕೇಳಿ ಹಾಕ್ಕೊಂಡೆ. ಕಣ್ಣಿಗೂ ಕಟ್ಟಿಕೊಂಡೆ. ಒಂದೆರಡು ಸಲ ಎಡವಿ ಬಿದ್ದೆ ಕೂಡಾ. ಆಗಲಿಲ್ಲ. ಮಂಗಳೂರು ಸೆಕೆಗೆ ತಡೆದುಕೊಳ್ಳಲು ಆಗಲಿಲ್ಲ. ಆದರೂ ಬುರ್ಖಾ ಹಾಕ್ಕೊಂಡು ಮನೆ, ಮನೆಗೂ ಹೋಗಿ ಕೈಮುಗಿದು ಕೇಳಿಕೊಂಡೆ, "ದಯವಿಟ್ಟು ಓಟು ಹಾಕಿ, ದಯವಿಟ್ಟು ಓಟು ಹಾಕಿ. ನಾನು ಓಟಿಗೆ ನಿಂತಿದ್ದೇನೆ" ಅಂತ. ಗೊತ್ತಿಲ್ಲ, ಅವರು ನನ್ನಲ್ಲಿ ಏನು ನೋಡಿ ಓಟು ಹಾಕಿದರೋ ಅಂತ. ನನಗೆ ಬಹಳ ಬೇಜಾರಾಗ್ತಿತ್ತು, ಒಂದು ಓಟಿಗಾಗಿ ನಾನು ಇಷ್ಟೆಲ್ಲಾ ನಾಟಕ ಆಡಬೇಕಲ್ಲಾ ಅಂತ. ನೋವು ಕೂಡಾ ಆಯ್ತು. ಆದರೆ, ಗೊತ್ತಿಲ್ಲದೆ ಇದ್ದ ಆ ವಾರ್ಡಿನಲ್ಲಿ ನಾನು ತುಂಬಾ ಲೀಡ್ನಲ್ಲಿ ನಾನು ಗೆದ್ದೆ. ನನಗೆ ಈಗಲೂ ಕೂಡಾ ರೋಮಾಂಚನ ಆಗ್ತಾ ಇದೆ. ಹಾಗೇ, ಮೀಸಲಾತಿ ಬಂದು ಪಂಚಾಯಿತಿ ಉಪಾಧ್ಯಕ್ಷೆ ಕೂಡಾ ಆದೆ ನಾನು. ನಾನು ಅಂದುಕೊಳ್ಳದ ಒಂದು ಅನಿರೀಕ್ಷಿತ ಬೆಳವಣಿಗೆ ನನ್ನ ಜೀವನದಲ್ಲಿ ಆಯಿತು.

ಪಂಚಾಯಿತಿ ಉಪಾಧ್ಯಕ್ಷೆ ಆಗಿಯಾಯ್ತಲ್ಲಾ, ಮೆಲ್ಲಗೆ ಬುರ್ಖಾ ತೆಗೆದು ಮೂಲೆಗೆ ಹಾಕಿದೆ. ಒಂದು ಶಾಲು ಮಾತ್ರ ಹಾಕ್ಕೊಂಡೆ. ಏನು ಮಾಡಲಿ, ಬಿಡೋದಿಲ್ಲ. ಆಯ್ತು, ಸ್ವಲ್ಪ ದಿನ ಆದ ಮೇಲೆ ಮೀಟಿಂಗೆಲ್ಲಾ ಹಾಜರಾದೆ. ಆಯ್ತು, ಮೀಟಿಂಗಲ್ಲಿ ನನಗೇ ಗೊತ್ತಿಲ್ಲದ ಹಾಗೆ ನಾನು ಮಾತಾಡಕ್ಕೆ ಶುರುಮಾಡಿದೆ. ಸರಕಾರದಿಂದ ಸಿಗುವಂತಹ ಸೌಲಭ್ಯಗಳು ಹೆಣ್ಣುಮಕ್ಕಳಿಗೆ ಸಿಗ್ತಾ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಎಷ್ಟೋ ಹೆಣ್ಣುಮಕ್ಕಳು ಸರಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ತೆಗೆದುಕೊಳ್ತಾ ಇಲ್ಲ. ಅಂತಹವರಿಗೆ ವಿಧವಾ ವೇತನ,

ವೃದ್ಧಾಪ್ಯ ವೇತನ, ರೇಷನ್ ಕಾರ್ಡ್ ಇತ್ಯಾದಿಗಳನ್ನೆಲ್ಲಾ ಮಾಡಿಸಿಕೊಟ್ಟೆ. ಹಾಗೇ ಮೆಲ್ಲಗೆ, ಶಾಲನ್ನು ತಲೆಯಿಂದಲೂ ಜಾರಿಸಿಬಿಟ್ಟೆ. ಶುರುವಾಯ್ತಪ್ಪಾ ನನಗೆ. ನನ್ನ ಗಂಡ ವಿದೇಶದಲ್ಲಿರೋದು. ವಿದೇಶದಲ್ಲಿರೋ ನನ್ನ ಗಂಡನಿಗೆ ಬೆದರಿಕೆ ಪತ್ರಗಳು. "ನಿನಗೆ ಒಬ್ಬಳೇ ಮಗಳಿರೋದು. ನಿನ್ನ ಹೆಂಡತಿ ಧರ್ಮ ವಿರೋಧಿ ಕೆಲಸ ಮಾಡ್ತಾ ಇದ್ದಾಳೆ. ಅದರಿಂದ ನಿನ್ನ ಹೆಂಡತಿಯನ್ನು ಅಡಗಿಸಿಡು" ಅಂತ. ಹೀಗೆ ಅನೇಕ ಸವಾಲುಗಳು. ಮತ್ತೆ ಅದೇ ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯಿತಿಯಲ್ಲೂ ಅವಕಾಶ ಸಿಕ್ತು. ತಾಲ್ಲೂಕು ಪಂಚಾಯಿತಿಯಲ್ಲೂ ನಾನು ಗೆದ್ದೆ. ಆಗಲೂ ಕೂಡ ವಿದೇಶದಿಂದ ನನಗೆ ಬುರ್ಖಾಗಳು ಉಡುಗೊರೆಯಾಗಿ ಬಂದವು. ಈಗಲೂ ಅವುಗಳನ್ನು ಚೂಡಿದಾರ ಮಾಡಿ ಧರಿಸ್ತಾ ಇದೀನಿ ನಾನು. ನಾನು ಅದಕ್ಕೆಲ್ಲಾ ಹೆದರಲಿಲ್ಲ. ಯಾವ ದೇವರು ನನಗೆ ಶಕ್ತಿ ಕೊಡ್ತೋ ನನಗೆ ಗೊತ್ತಿಲ್ಲ. ವಿರೋಧಿಸ್ತಾ, ವಿರೋಧಿಸ್ತಾನೇ ನನಗೆ ತಾಲೂಕು ಪಂಚಾಯಿತಿಯಲ್ಲಿ ಮೂರನೇ ಬಾರಿ ಅವಕಾಶ ಸಿಕ್ತು. ಬೇರೆ ಕ್ಷೇತ್ರದಲ್ಲಿ, ಇನ್ಫೋಟೆಕ್??? ಆದರೆ ತುಂಬಾ ಅವಮಾನ ಮಾಡಿದರು, ತುಂಬಾ ಅವಹೇಳನ ಮಾಡಿದರು. ಬೆದರಿಕೆಗಳನ್ನು ಹಾಕಿದರು. ಮನೆಗೆ ಬೇಡದಿರುವ ಕರೆಗಳನ್ನು ಮಾಡಿದರು. ನನ್ನ ಮನೆಯಲ್ಲಿ ಕಳ್ಳತನಕ್ಕೆ ಪ್ರಯತ್ನ ಪಟ್ಟರು. ನಮ್ಮದು ಹೆಂಚಿನ ಮನೆ. ಹೆಂಚು ತೆಗೆದು ಒಳಗೆ ಇಳಿಯುವ ಪ್ರಯತ್ನ ಮಾಡಿದರು. ಆಗ ನನ್ನ ಎಲ್ಲಾ ಸಹೋದರ, ಸಹೋದರಿಯರು ನನಗೆ ಬೆಂಬಲ ನೀಡಿದರು. ಎಲ್ಲಾ ಇಲಾಖೆಯವರೂ ನನಗೆ  ಬೆಂಬಲ ನೀಡಿದರು. ಕೊನೆಗೆ ನಮ್ಮ ಮನೆಯಲ್ಲಿ, "ಸಾಕು, ಸಾಕು ನಿನ್ನ ರಾಜಕೀಯ. ನಿನ್ನ ಮಗಳು ಕಾಲೇಜಿಗೆ ಹೋಗ್ತಿದ್ದಾಳೆ. ಒಬ್ಬಳನ್ನೇ ಕಳಿಸುವಾಗ ಇವರೆಲ್ಲಾ ಏನು ಮಾಡ್ತಾರೋ ಗೊತ್ತಿಲ್ಲ" ಅಂತ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಮಗೆಲ್ಲಾ ಗೊತ್ತಿರಬಹುದು, ಕೆಟ್ಟ ಮನಸ್ಸಿನವರಿಲ್ಲ; ಎಲ್ಲರೂ ಒಳ್ಳೆಯ ಮನಸ್ಸಿನವರೇ. ಎಲ್ಲವನ್ನೂ ಬೇಗ ನಂಬಿ ಬಿಡ್ತೀವಿ. ಯಾವುದೇ ವ್ಯವಸ್ಥೆಯನ್ನು  ಬೇಗ ನಂಬಿ ಬಿಡ್ತೀವಿ.

ಹಾಗಾಗಿ, ಈ ಮೀಸಲಾತಿ ವ್ಯವಸ್ಥೆ ಬಂದಿರೋದರಿಂದ ನಾನು ನಾಲ್ಕು ಸಲ ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ,  ಆಗಿ, ಮುನಿಸಿಪಲ್ ಕೌನ್ಸಿಲರ್ ಆಗಿ, ನಾನು ಜನಸೇವೆ ಮಾಡಿದೆ. ಮೀಸಲಾತಿ ಇರೋದರಿಂದ ಮಾತ್ರ ನಾನು ನಾಲ್ಕು ಸಲ ಆ ಕ್ಷೇತ್ರದಿಂದ ಬಂದಿದ್ದೀನಿ. ಅದರ ಜೊತೆ ಕೊನೇವರೆಗೂ ನಾನು ನೇರವಾಗಿ 'ಬಿ' ಫಾರಂ ನೋಡಲಿಲ್ಲ. ಅದು ನೇರವಾಗಿ ನಮ್ಮ ಚುನಾವಣಾ ಅಧಿಕಾರಿಗಳ ಕೈಗೆ ಹೋಗ್ತಾ ಇತ್ತು. ಆದರೆ ಐದನೇ ಸಲ ನನಗೆ ಅವಕಾಶ ಸಿಗದಾಗ ಮಾತ್ರ ಗೊತ್ತಾಯ್ತು, ನನಗೂ ಗೊತ್ತು, ಒಬ್ಬ ಶಾಸಕಿಯಾಗುವ, ಒಬ್ಬ ಸಂಸದೆಯಾಗುವ ಸಾಮರ್ಥ್ಯ ಕೂಡ ಇದೆ ನನ್ನಲ್ಲಿ ಅಂತ. ಆದರೆ ಅದಕ್ಕೆ ಬೇಕಾದ

ಆರ್ಥಿಕ ಸಂಪನ್ಮೂಲ ನನ್ನಲ್ಲಿಲ್ಲ. ಈಗಂತೂ ಕೋಟಿಗಟ್ಟಲೆ ಹಣ ಕೊಟ್ಟು ತಾಲ್ಲೂಕು ಪಂಚಾಯಿತಿ ಟಿಕೆಟ್ ಪಡೀತಾರೆ, ಶಾಸಕ ಸ್ಥಾನಕ್ಕಂತೂ ಕೇಳುವಂತೆಯೇ ಇಲ್ಲ. ನನ್ನಲ್ಲಿ ಆರ್ಥಿಕ ಶಕ್ತಿ ಇಲ್ಲದಿದ್ದರೂ, ನಾಲ್ಕು ಸಲ ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ ಜನಸೇವೆ ಮಾಡಲು ಸಾಧ್ಯವಾಗಿದ್ದು ಮೀಸಲಾತಿಯಿಂದ ಮಾತ್ರ. ಆದರೆ ಐದನೇ ಸಲ, ಅವರಿಗೆ ಗೊತ್ತಾಯ್ತು, ಈಕೆಯನ್ನು ಬೆಳೆಯಲು ಬಿಟ್ರೆ, ಈಕೆ ಮೇಲು ಮೇಲಕ್ಕೆ ಬೆಳೀತಾನೇ ಹೋಗ್ತಾಳೆ ಅಂತ. ಆಗ, ಬಿ ಫಾರಂ ಬೇಕಾದರೆ, ಬಂದು ಇಂಥವರ ಕಾಲು ಹಿಡೀರಿ ಅಂದ್ರು. ನಮ್ಮ ನಾಯಕರ ಕಾಲು ಹಿಡಿದು ಬಿ ಫಾರಂ ತಗೋಬೇಕಂತೆ! ನಾನು ಹೇಳಿದೆ, ನಾನು ನಾಯಕರ ಕಾಲು ಹಿಡಿದು ಬಿ ಫಾರಂ ತಗೋಳ್ಳೋದಿಲ್ಲ. ಪಕ್ಷಕ್ಕೆ ನಾನು ಬೇಕಿದ್ದರೆ, ನನಗೆ ಬಿ ಫಾರಂ ಕೊಡಿ ಅಂತ. ಕೊಡಲಿಲ್ಲ. ನನಗೆ ತುಂಬಾ ನಾಯಕರು ನನ್ನ ಮನೆಗೆ ಬಂದು ಹೇಳಿದರು, ನೋಡಿ, ಅಡ್ಜಸ್ಟ್ ಮಾಡಿಕೊಂಡು ಹೋಗಿ ಅಂತ. ಆಗ ನನಗೆ ಗೊತ್ತಾಗಲಿಲ್ಲ, ನನ್ನನು ಕೆಳಗಿಳಿಸಬೇಕು ಅಂತ ಹೀಗೆ ಹೇಳ್ತಿದ್ದಾರೆ ಅಂತ. ಸರಿ ಅಂತ ನಾನು ಸುಮ್ಮನಾದೆ. ಆನಂತರ ನಾನು ರಾಜಕೀಯದಿಂದ ನಿವೃತ್ತಿ ಹೊಂದಿ, ಆಗಿನಿಂದ ಮೌನವಾಗಿದ್ದೇನೆ. ನಾನು ಈ ರೀತಿ ಜನಗಳ ಮಧ್ಯೆ ಗುರುತಿಸಿಕೊಂಡಿದ್ದರೆ, ಇಷ್ಟು ಸಾಮರ್ಥ್ಯ ಪ್ರದರ್ಶಿಸಿದ್ದರೆ, ಅದಕ್ಕೆ ಈ ಮೀಸಲಾತಿಯೇ ಕಾರಣ.

ಇವತ್ತು ಇಲ್ಲಿ ತುಂಬಾ ಯುವಕ, ಯುವತಿಯರಿದ್ದೀರಿ. ನಿಮಗೆಲ್ಲಾ ನಾನು ಹೇಳೋದಿಷ್ಟೇ, ಚುನಾವಣೆ ಅಂದರೇನು? ಮೀಸಲಾತಿ ಅಂದರೇನು? ಅಥವ, ಅದರ ಆಗು ಹೋಗುಗಳೇನು ಅಂತ ನಿಮಗೆ ಯಾರಿಗೂ ಗೊತ್ತಿಲ್ಲ. ನೀವು ಮೊಬೈಲುಗಳಲ್ಲಿ ಎಷ್ಟು ಮಗ್ನರಾಗಿದ್ದೀರಿ ಅಂದರೆ, ಇಂದಿನ ರಾಜಕೀಯದ ಬಗ್ಗೆ ಅದರ ಗಂಧ ಗಾಳಿಯೂ ನಿಮಗೆ ಗೊತ್ತಿಲ್ಲದಂತಾಗಿದೆ. ಯುವಕ, ಯುವತಿಯರೇ ಎಚ್ಚೆತ್ತುಕೊಳ್ಳಿ. ನೋಡಿ ಇವತ್ತು ಪತ್ರಿಕೆ ನೋಡಿದರೆ, ಏನೆಲ್ಲಾ ಅಗ್ತಾ ಇದೆ? ನಿಮಗೆ ಕುಟುಂಬ ರಾಜಕೀಯ ಕಣ್ಣಿಗೆ ರಾಚುತ್ತದೆ. ಯಾಕೆ? ನಮ್ಮ ಯುವಕ, ಯುವತಿಯರಾರಿಗೂ ಸಾಮರ್ಥ್ಯವಿಲ್ಲವಾ? ಇವತ್ತು ಪಂಚಾಯಿತಿ ಚುನಾವಣೆಗಳಲ್ಲಿ ಎಷ್ಟೋ ಅವಿದ್ಯಾವಂತ ಮಹಿಳೆಯರು ಕೇವಲ ತಮ್ಮ ಅನುಭವದ ಬಲದಿಂದ ಸ್ಪರ್ಧಿಸ್ತಾ ಇದ್ದಾರೆ. ನಾನು ಪಂಚಾಯಿತಿ ಸದಸ್ಯೆಯಾಗಿದ್ದಾಗ ಗಮನಿಸಿದ್ದೇನೆಂದರೆ, ಗರಿಗರಿ ಇಸ್ತ್ರಿ ಮಾಡಿದ, ಒಂದೂ ಸುಕ್ಕಿಲ್ಲದ ಬಿಳಿ ಖಾದಿ ಬಟ್ಟೆ ಧರಿಸಿ ಬರುವ ಪುರುಷರಿಗೆ ಕುರ್ಚಿ ಹಾಕ್ತಾರೆ ಅಧಿಕಾರಿಗಳು, ಮಾಧ್ಯಮದವರು. ಆದರೆ, ಪಂಚಾಯಿತಿ ಅಧ್ಯಕ್ಷೆಯಾಗಿರುವ ಮಹಿಳೆಗೆ, ಅವಳು ಮೀಸಲಾತಿಯಿಂದ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾಳೆ ಎನ್ನುವ ಕಾರಣಕ್ಕೆ ಅವಳು ನಿಂತುಕೊಳ್ಳಬೇಕಾಗಿದೆ. ಅವಳೇ ನಿಂತುಕೊಳ್ತಾಳೆ.

ಅಂದರೆ ಎಷ್ಟರ ಮಟ್ಟಿನ ವ್ಯವಸ್ಥೆ ಇದೆ, ಅದು ಈಗಲೂ ಇದೆ, ಜನರ ಹತ್ತಿರ ಬೇಗ ಬೈಸಿಕೊಳ್ಳುವುದೂ ಅವಳೇ, ಒಂದು ಗ್ರಾಮ ಪಂಚಾಯಿತಿಯ/ ವಾರ್ಡಿನ/ ತಾಲ್ಲೂಕು ಪಂಚಾಯಿತಿಯ/ ಜಿಲ್ಲಾ ಪಂಚಾಯಿತಿಯ/ಮುನಿಸಿಪಲ್ ಕೌನ್ಸಿಲ್ ಸದಸ್ಯೆಯಾಗಿರಬಹುದು, ಜನರ ಹತ್ತಿರ ಬೈಸಿಕೊಳ್ಳುವುದೂ ಅವಳೇ. ಏಕೆಂದರೆ, ಶಾಸಕರು, ಸಂಸದರು ಜನರ ಕೈಗೆ ಸಿಕ್ಕೋದಿಲ್ಲ. ನಾವು ಆದಷ್ಟೂ ಸಾಮರ್ಥ್ಯದಿಂದ ನಡೆಸಿಕೊಂಡು ಹೋಗುತ್ತಿದ್ದೀವಿ ಈ ಮೀಸಲಾತಿ ಬಂದಿರೋದರಿಂದ. ಹಾಗಂತ ಹೇಳಿ ಎಷ್ಟೋ ಪಂಚಾಯಿತಿ ಸದಸ್ಯರು ಹಕ್ಕನ್ನು ಪಡೆದುಕೊಳ್ಳೋ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದಾರೆ. ಯಾಕೆ ಹೀಗೆ? ನಿಮಗೆ ಹಕ್ಕಿದೆಯಲ್ಲವಾ? ನಾವು ಇಷ್ಟು ದೊಡ್ಡ ದೊಡ್ಡ ಪದ್ಯಗಳನ್ನು ಹೇಳ್ತೀವಿ? ಮಾತಾಡ್ತೀವಿ? ನಮ್ಮ ಹಕ್ಕುಗಳು ನಮಗೆ ಗೊತ್ತಿಲ್ವಾ? ನಮ್ಮ ಹಕ್ಕುಗಳು ನಮಗೆ ಬೆಡವಾ? ಸರಿ ಹಠದಿಂದ, ದುಡ್ಡು ಖರ್ಚು ಮಾಡಿ ಮಹಿಳೆ ನಿಂತರೆ, ಅಖಿಲಾ ಮೇಡಂ ಹೇಳಿದ ಹಾಗೆ ಅವಳಿಗೆ ಮೇಲೆ ಅಪವಾದಗಳು.

ಒಬ್ಬ ಚಲನಚಿತ್ರ ನಟಿ ಚಲನಚಿತ್ರದಲ್ಲಿ ಯಾವುದೇ ವೇಷ ಹಾಕಿಕೊಂಡು ನಟನೆ ಮಾಡಿದರೂ, ಶಿಳ್ಳೆ ಹೊಡಿತೀರಾ? ಆದರೆ ಅವಳು ರಾಜಕೀಯಕ್ಕೆ ಬರಬೇಕು ಅಂದರೆ, ಶುರೂ, ಅವಳ ಅಪ್ಪ ಯಾರು? ಅಮ್ಮ ಯಾರು? ತಮ್ಮ ಯಾರು? ಅವಳ ಗಂಡ ಯಾರು? ಅವಳ ತಾತ ಯಾರು? ಬೇಕಾ ನಮಗೆ ಇದು? ಇದು ರಾಜಕೀಯದಲ್ಲಿರುವ ಅವ್ಯವಸ್ಥೆ. ಅಂದಿನಿಂದ ಇಂದಿನವರೆಗೂ ಇದು ಹಾಗೆಯೇ ಇದೆ. ಅದಕ್ಕೋಸ್ಕರವೇ ನಾವು ಎಷ್ಟೋ ಹೆಣ್ಣು ಮಕ್ಕಳು, "ನಮಸ್ಕಾರಾಪ್ಪಾ, ನಮಗೆ ರಾಜಕೀಯವೇ ಬೇಡ" ಅಂತಿರೋದು. ಈಗ ರಾಜಕೀಯ ಹೇಗೆ ಅಂತ ಹೇಳಲಿಕ್ಕೇ ಸಾಧ್ಯವಿಲ್ಲ! ಕೋಟಿಗಟ್ಟಲೆ ಹಣವಿದ್ದರೆ ಮಾತ್ರ ರಾಜಕೀಯ ಸಾಧ್ಯ. ನೋಡಿ ಈಗ ಐದು ವರ್ಷ ಆದಮೇಲೆ ಬರ್ತಾ ಇದೆ. ನಾನೀಗ ಮಂಗಳೂರಲ್ಲಿಲ್ಲ, ಬೆಂಗಳೂರಲ್ಲಿದ್ದೇನೆ. ಬೆಂಗಳೂರಲ್ಲಂತೂ ಹೇಳೋದೇ ಬೇಡ. ಎಲ್ಲಾ ಮನೆಯವರಿಗೂ ಸೀರೆ, ಕುಕ್ಕರ್, ಕಾಲುಚೈನು, ಕಾಲುಂಗುರ, ಮೂಗುತಿ, ಇನ್ನೂ ಏನೇನು ಕೇಳ್ತೀರಿ? ಇದೆಲ್ಲಾ ಬೇಕಾ? ಹಾಗಾದರೆ, ಇಷ್ಟೊಂದು ಜನರಿಗೆ ಇಷ್ಟೆಲ್ಲಾ ಕೊಡಬೇಕಾದರೆ, ಐದು ವರ್ಷದೊಳಗೆ ನೀನು ಎಷ್ಟೆಲ್ಲಾ ಮಾಡಿರ್ತೀಯಾ ಅಲ್ವಾ? ಮೀಸಲಾತಿ ಇದ್ದರೂ ಹೆಣ್ಣು ಮಕ್ಕಳಿಗೆ ಅದಕ್ಕೇ ಟಿಕೆಟ್ ಕೊಡಲ್ಲಾ. ನಾವು ಲಂಚ ತೆಗೆದುಕೊಳ್ಳೋದಿಲ್ಲಾ, ಭ್ರಷ್ಟಾಚಾರ ಮಾಡೋದಿಲ್ಲಾ.

ಇವತ್ತು ನಮ್ಮ ಬಗ್ಗೆ ಮಾತಾಡೋದಿಕ್ಕೆ ಅವರಿಗೆ ಧ್ವನಿಯಿಲ್ಲ. ಕೆಲವರು ತುಂಬಾ ವಯಸ್ಸಾದೋರು. ಏನು ಅಪವಾದ ಬರುತ್ತೋ ನಮ್ಮ ಮೇಲೆ ಅಂತಾ ಹೆದರ್ತಾರೆ. ಯಾಕೆಂದರೆ, ನೋಡಿ ಇಂಥಾ ಪರಿಸ್ಥಿತಿ ನಮಗೆ ಬಂದಿದೆ. ತಾಲ್ಲೂಕು

ಪಂಚಾಯಿತಿ ಇರಬಹುದು, ಜಿಲ್ಲಾ ಪಂಚಾಯಿತಿ ಇರಬಹುದು, ಸಿನೆಮಾ ಕ್ಷೇತ್ರವಿರಬಹುದು... ಆದರೆ ರಾಜಕೀಯದಲ್ಲಿ ಮಾತ್ರ ಇಂಥಾ ಸ್ಥಿತಿ ಇದೆ.

ನಮ್ಮ ವಾಣಿಯವರು ಹೇಳಿದ ಹಾಗೆ, ನಾನು ನಮ್ಮ ಯುವತಿಯರಿಗೆ ಹೇಳತೀನಿ, ಎಚ್ಚೆತ್ತುಕೊಳ್ಳಿ. ರಾಜಕೀಯ ಕೂಡ ನಿಮ್ಮ ಹಕ್ಕು. ನಿಮ್ಮಂತಹ ಯುವಜನರು ಮುಂದೆ ಬರಬೇಕು. ನಮ್ಮ ದೇಶವನ್ನು ಮುನ್ನಡೆಸಬೇಕು. ನಮ್ಮ ರಾಜ್ಯವನ್ನು ಮುನ್ನಡೆಸಬೇಕು. ಅದು ನಿಮ್ಮಿಂದ ಮಾತ್ರ ಸಾಧ್ಯ. ಮೀಸಲಾತಿ ಇದ್ದರೂ, ಇರದಿದ್ದರೂ, ನೀವು ರಾಜಕೀಯದಲ್ಲಿ ಸೇವೆ ಮಾಡಬೇಕು ಅಂತಾ ಹೇಳತಾ, ನನ್ನ ಮಾತನ್ನು ಮುಗಿಸ್ತೇನೆ, ನಿಮಗೆಲ್ಲರಿಗೂ ಧನ್ಯವಾದಗಳು.

ತಡರಾತ್ರಿಯಲ್ಲಿ ಬಸ್ಸು, ಆಟೋ ಹಿಡಿದು ಇತರರನ್ನು ಅವಲಂಬಿಸದೆ, ದ್ವಿಚಕ್ರ ವಾಹನವಿದ್ದವರು ಅದರಲ್ಲಿಯೇ ಓಡಾಡುವುದು, ತಮ್ಮ ತಮ್ಮ ಅನುಕೂಲಗಳನ್ನು ತಾವೇ ಕಲ್ಪಿಸಿಕೊಂಡು ನಿಸ್ವಾರ್ಥತೆಯಿಂದ ಅರಿವಿನ ಪಯಣ ನಡೆಸಿದ್ದು ವಿಶಿಷ್ಟ ವಿಭಿನ್ನವಾದ ದಾಖಲೆ.

# ಮಹಿಳೆ ಮತ್ತು ಸಾಂಸ್ಕೃತಿಕ ರಾಜಕಾರಣ

ಡಾ. ಸಬಿತಾ ಬನ್ನಾಡಿ

ಸಂಸ್ಕೃತಿ ಎಂಬ ಪದ ಬಳಕೆಗೆ ಬಂದುದು ಬಹಳ ತಡವಾಗಿ. ನಮ್ಮ ಹಳಗನ್ನಡ, ನಡುಗನ್ನಡಗಳಲ್ಲಿ ಈ ಪದ ಕಾಣುವುದಿಲ್ಲ. ಆದರೆ ಹೀಗೆ ತಡವಾಗಿ ಚಲಾವಣೆಗೆ ಬಂದ ಈ ಪದ ಬಹಳ ಬೇಗ ವ್ಯಾಪಿಸಿಕೊಂಡಿತು. ಪದವಾಗಿ ಮಾತ್ರವಲ್ಲ, ಬದುಕಿನ ನಡೆಗೊಂದು ನಿರ್ದೇಶನವಾಗಿಯೂ ಆವರಿಸಿಕೊಂಡಿತು. ಭಾಷೆಗಳಿಗೆ ಒಂದು ಸೂಚನೆ ಇರುತ್ತದೆ. ಈ ಸೂಚನೆಗಳು ಅರ್ಥಗಳನ್ನು ಕಟ್ಟುತ್ತವೆ, ಪ್ರತಿನಿಧಿಸುತ್ತವೆ, ಬಳಕೆಯಾಗುತ್ತವೆ ಮತ್ತು ಪುನರುತ್ಪಾದನೆಯಾಗುತ್ತವೆ. ಸಂಸ್ಕೃತಿಯ ಸಂದರ್ಭದಲ್ಲಿ ಕೂಡಾ ಇದು ಆಗುತ್ತದೆ. ಯಾಕೆಂದರೆ, ಸಂಸ್ಕೃತಿ ಮತ್ತು ಅಧಿಕಾರಕ್ಕೆ ನೇರ ನಂಟು ಇದೆ. ಯಾರ ಕೈಯಲ್ಲಿ ಅಧಿಕಾರ ಇದೆಯೋ ಅವರು ಕಟ್ಟುವ ಕಥನಗಳು ಸಂಸ್ಕೃತಿಯಾಗಿ ಸ್ಥಾಪನೆಯಾಗುತ್ತವೆ. ಅದು ನಡೆ, ನುಡಿ, ಆಹಾರ, ಉಡುಗೆ, ಆಚರಣೆ, ಲಿಂಗತ್ವ ಇತ್ಯಾದಿ ಯಾವ ವಿಷಯವೇ ಆಗಿರಲಿ ಅವುಗಳನ್ನು ತಮಗೆ ಬೇಕಾದಂತೆ ಬಗ್ಗಿಸಿಕೊಳ್ಳಲು, ಅಳ್ಳಕಗೊಳಿಸಿಕೊಳ್ಳಲು, ವಿಜೃಂಭಿಸಲು ಪ್ರಭುತ್ವದ ಬೇರೆ ಬೇರೆ ರೂಪಗಳು ಪ್ರಯತ್ನಿಸುತ್ತಲೇ ಇರುತ್ತವೆ. ಈ ಕಥನಗಳನ್ನು ಹೇಗೆಲ್ಲಾ ಹೇರಿಕೆ ಮಾಡಲಾಗುತ್ತದೆಯೆಂದರೆ, ಬೇರೆ ಕಥನಗಳೂ ಇರುತ್ತವೆ ಎಂಬುದನ್ನೇ ನಗಣ್ಯ ಮಾಡಲಾಗುತ್ತದೆ ಅಥವಾ ಅಮುಖ್ಯಗೊಳಿಸಲಾಗುತ್ತದೆ ಅಥವಾ ತಾತ್ಸಾರ ಮಾಡಿ ಮೂಲೆಗುಂಪು ಮಾಡಲಾಗುತ್ತದೆ. ಒಂದು ಚಿಕ್ಕದೆಂದು ಕಾಣಿಸುವ, ಆದರೆ ಅದೊಂದು ಕೊರಳ ಕೋಳದಂತೆ ಕೆಲಸ ಮಾಡುವ ಉದಾಹರಣೆಯನ್ನೇ ನೋಡೋಣ. 'ತಾಳಿ' ಎಂಬ ಲೋಹದ ಚೂರೊಂದು ಅಥವಾ ಅರಸಿನದ ಕೊಂಬೊಂದು ಗಂಡ ಕಟ್ಟುವ ಕಾರಣಕ್ಕೆ ಬ್ರಹ್ಮಗಂಟಾಗುತ್ತದೆ. ಮಾತ್ರವಲ್ಲ, ಅದರ ಮಹಿಮೆಯನ್ನು ಪುಂಖಾನುಪುಂಖವಾಗಿ ಸಾರುವ ಸಿನಿಮಾ ಮಾಡಿ ಎಲ್ಲರ ತಲೆಯಲ್ಲಿ ಅದನ್ನು ಭದ್ರಗೊಳಿಸಲಾಗುತ್ತದೆ. ಎಷ್ಟು ಭದ್ರಗೊಳಿಸಲಾಗುತ್ತದೆಯೆಂದರೆ ಅದನ್ನು

ತೊಳೆಯಲೂ ಕತ್ತಿನಿಂದ ತೆಗೆಯಲಾರದಷ್ಟು. ಆದರೆ ಇದರ ಎದುರಿಗೆ ಇನ್ನೊಂದು ಕಥನ ಇರುವುದನ್ನೇ ನಾವು ಗಮನಿಸುವುದಿಲ್ಲ. ಅದನ್ನು ಅಧಿಕೃತಗೊಳಿಸುವುದೂ ಇಲ್ಲ. ನಾನು ಹುಟ್ಟಿದ ಜಾತಿಯಲ್ಲಿ ತಾಳಿ ಅನ್ನುವುದೇ ಇಲ್ಲ. 90ರ ದಶಕದಲ್ಲಿ ಅದು ಫ್ಯಾಶನ್ ಆಗಿ ಸೇರಿಕೊಂಡಿತು. ನನ್ನಮ್ಮ ಯಾವತ್ತೂ ತಾಳಿ ಹಾಕಿಲ್ಲ. ಆದರೆ ಕರಿಮಣಿ ಮಾತ್ರ ಕಡ್ಡಾಯ. ಈ ಕರಿಮಣಿಯನ್ನು ಮದುವೆ ದಿನ ಬೆಳಿಗ್ಗೆ ಮದುಮಗಳೇ ಹಾಕಿಕೊಳ್ಳುತ್ತಿದ್ದಳು. ಕಾಲುಂಗುರವನ್ನೂ ಅಷ್ಟೇ. ನಮ್ಮಲ್ಲಿ ಮದುವೆ ಅಂದರೆ ಹಿರಿಯರಿಂದ ಗಂಗೆಯ ಧಾರೆ ಅಷ್ಟೇ. ಅವಳು ಅವನಿಗೂ, ಅವನು ಅವಳಿಗೂ ಹಾರ ಬಿಟ್ಟು ಇನ್ನೇನನ್ನೂ ಹಾಕುವುದಿಲ್ಲ. ಕ್ರಮೇಣ ಗಂಡು ರೆಡಿಮೇಡ್ ಸರವನ್ನು ಕುತ್ತಿಗೆಗೆ ಹಾರದಂತೆ ಹಾಕುವ ಪರಂಪರೆ ಶುರುವಾಯಿತು. ಈಗ ಅದೇ ಕಾಯಂ ಆಗಿದೆ. ನಮ್ಮಲ್ಲಿ ಹೆಣ್ಣೇ ವಂಶ ಮುಂದುವರಿಸುವ ಸಂತತಿಯಾಗಿರುವುದೂ ಮೊದಲಿದ್ದ ಸ್ವಾಯತ್ತತೆಗೆ ಕಾರಣ ಆಗಿದ್ದಿರಬಹುದು.

ಆಫ್ರಿಕನ್ ಚಿಂತಕಿ ಚಿಮಮಾಂಡಾ ಇಡಿಚಿ 'ಡೇಂಜರ್ ಆಫ್ ಸಿಂಗಲ್ ಸ್ಟೋರೀಸ್' (ಯೂ ಟ್ಯೂಬ್‌ನಲ್ಲಿ ಲಭ್ಯ) ಬಗ್ಗೆ ಮಾತಾಡುತ್ತಾಳೆ. ತಾನು ಬಡವರ ಬಗ್ಗೆ, ಅವರ ಬಡತನದ ದಾರುಣತೆಯ ಬಗ್ಗೆ ಕೇಳಿದ್ದೆ. ಆದರೆ ಅವರ ಕಲಾ ಪ್ರತಿಭೆ, ಸಂತೋಷದ ಬಗೆಗೆ ತನಗೆ ತಿಳಿದಿರಲಿಲ್ಲ. ತಾನೊಮ್ಮೆ ಹಳ್ಳಿಗೆ ಹೋಗಿದ್ದಾಗ, ಅವರ ಮನೆಗಳಿಗೆ ಹೋದಾಗಲೇ ತನಗೆ ಅವರೂ ಸಂತೋಷವಾಗಿ ಇರುವ ಸೃಜನಶೀಲತೆಯನ್ನು ಹೊಂದಿರುವುದು ತಿಳಿಯಿತು ಎನ್ನುತ್ತಾಳೆ. ಅದೇ ರೀತಿ ಹೆಣ್ಣಿನ ಬಗೆಗೆ ಕಟ್ಟಿಕೊಟ್ಟಿರುವ ಎಲ್ಲಾ ನರೇಟಿವ್‌ಗೂ ಎದುರಾಗಿ ಇನ್ನೊಂದು ನರೇಟಿವ್ ಇದ್ದೇ ಇರುತ್ತದೆ. ಇದು ಹಲವರ ಗಮನಕ್ಕೂ ಬಂದಿರುತ್ತದೆ. ಆದರೆ ಅದು ತಳ ಸಮುದಾಯದ, ದಲಿತರ, ಲಿಂಗಾಂತರಿಗಳ ಅನುಭವಗಳಾಗಿದ್ದರೆ ಅದಕ್ಕೆ ಅಧಿಕೃತತೆಯೇ ಇರುವುದಿಲ್ಲ. ನಮ್ಮ ಕಡೆ ಕಾಡಂಚಿನ ಕುಡಿಯರ ಹೆಂಗಸರು ಮೊಣಕಾಲತನಕ ಸೀರೆ ಕಟ್ಟಿ, ಕುತ್ತಿಗೆಯ ಹತ್ತಿರ ಗಂಟು ಹಾಕಿಕೊಂಡು, ಕೊರಳ ತುಂಬಾ ಮಣಿಸರ ಹಾಕೋತಿದ್ರು. ರವಿಕೆ ಧರಿಸುತ್ತಿರಲಿಲ್ಲ. ಈಕೆ ಭಾರತದ ಮಾತೆ ಅಲ್ವಾ? ಇದನ್ನು ಅನಾಗರೀಕಗೊಳಿಸಿದ್ದು ಯಾರು? ಹಾಗೆಯೇ ತಳ ಸಮುದಾಯಗಳಲ್ಲಿದ್ದ ವಿಧವೆಯರ ಮದುವೆ, ಕೂಡಿಕೆಗಳ ಪದ್ಧತಿಯನ್ನು ಗಂಭೀರವಾಗಿ ಪರಿಗಣಿಸಲಾಯಿತೇ? ಸಹಗಮನದ ವಿರುದ್ಧ ನಡೆ ಇಲ್ಲಿದೆಯಲ್ಲವೇ? ವಿಧವೆಯರ ತಲೆಬೋಳಿಸುವುದರ ವಿರುದ್ಧ ನಡೆ ಇಲ್ಲಿದೆಯಲ್ಲವೇ? ಆದರೆ ಇದೆಂದೂ ನೀತಿ ನಿರೂಪಕರ ಕಣ್ಣಿಗೆ ಬೀಳುವುದು ಇರಲಿ, ನಮ್ಮ ಬರಹಗಾರರ, ಹೋರಾಟಗಾರರ ಕಣ್ಣಿಗೂ ಬಿದ್ದಿರಲಿಲ್ಲ ಅಲ್ಲವೇ? ಇದೇ ಸಾಂಸ್ಕೃತಿಕ ರಾಜಕಾರಣ. ಹೆಣ್ಣು ದುರ್ಬಲಳು, ಒಂಟಿಯಾಗಿ ನಿಭಾಯಿಸಲಾರಳು,

ಗಂಡಿನ ರಕ್ಷಣೆ ಇರಲೇ ಬೇಕು ಎಂಬುದನ್ನು ಸುಳ್ಳು ಮಾಡಿದ ಸಾವಿರಾರು ಉದಾಹರಣೆಗಳು, ಕತೆಗಳು ನಮ್ಮ ಸುತ್ತಿನ ಬಡ/ ತಳವರ್ಗದ ಮಹಿಳೆಯರ ಜೀವನಗಾಥೆಯಲ್ಲಿ ಇದ್ದರೂ ಅದನ್ನು ಬದುಕು ಎಂದೇ ಪರಿಗಣಿಸುವುದಿಲ್ಲ. ಡಾ. ವಿಜಯಾ ಅವರ 'ಕುದಿ ಎಸರು' ಆತ್ಮಕತೆಯಲ್ಲಿ ಬರುವ ಪ್ರಸಂಗವೊಂದನ್ನು ನೆನಪಿಸಿಕೊಳ್ಳಬಹುದು. ಸುಶಿಕ್ಷಿತಳಾದ ಲೇಖಕಿ ಪದೇ ಪದೇ ತನ್ನ ಗಂಡನ ಪೈಶಾಚಿಕ ಹಿಂಸೆಗೆ ಬಲಿಯಾಗಿ ಸಾವಿನಿಂದ ಕೂದಲೆಳೆಯ ಅಂತರದಿಂದ ಪಾರಾಗಿರುತ್ತಾಳೆ. ಒಮ್ಮೆ ಪ್ರಜ್ಞೆತಪ್ಪಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಲೇಖಕಿಯನ್ನು ನೋಡಿದ ಕೆಲಸದಾಕೆ 'ಇನ್ನೂ ಅವನ ಜೊತೆಗೆ ಯಾಕೆ ಬದುಕಿದ್ದೀಯಾ?' ಎಂಬ ಪ್ರಶ್ನೆ ಹಾಕುತ್ತಾಳೆ. ನಾಲ್ಕು ಮನೆ ಮುಸುರೆ ಮಾಡಿ ಬದುಕುವ, ಅಕ್ಷರವಿಲ್ಲದ, ತಾನೇ ಒಂಟಿಯಾಗಿ ಮಕ್ಕಳನ್ನು ಬೆಳೆಸಿ ಬಾಳುವುದಕ್ಕೆ ಹೆದರದೇ ಇರುವಾಗ ನೀನ್ಯಾಕೆ ಹೆದರುತ್ತೀಯಾ? ಎಂದು ಗದರುತ್ತಾಳೆ. ಅವಳ ಈ ಮಾತು ಲೇಖಕಿಗೆ ಧೈರ್ಯ ನೀಡುತ್ತದೆ. ಒಬ್ಬ ನಿರಕ್ಷರಿಗೆ ಇರುವ ಈ ಸ್ಪಷ್ಟತೆ ನಮಗ್ಯಾಕೆ ಇರುವುದಿಲ್ಲ? ಏಕೆಂದರೆ, ನಾವು ಹೇಗೆ 'ತರಬೇತಿ'ಗೆ ಒಳಗಾಗಿರ್ತೀವಿ ಅಂದರೆ, ನಿರಕ್ಷರಿಯ ಕುಟುಂಬದಿಂದಲೇ ಬಂದಿದ್ದರೂ 'ಸುಶಿಕ್ಷಿತ'ರೆನಿಸಿದ ಕೂಡಲೇ, 'ಭಾರತೀಯ' ಹೆಣ್ಣಿನ ಮಾದರಿಗಳ ಪ್ರತಿರೂಪಗಳಾಗಲು ಹಾತೊರೆಯುತ್ತಾ ದುರ್ಬಲರಾಗುತ್ತೇವೆ. ನಮ್ಮದೇ ಇತಿಹಾಸದಲ್ಲಿ ಇದ್ದ ರಮಾಬಾಯಿ, ತಾರಾಬಾಯಿ ಶಿಂದೆ, ಕಮಲಾದೇವಿ ಚಟ್ಟೋಪಾಧ್ಯಾಯ, ಸಾವಿತ್ರಿಬಾಯಿ ಫುಲೆ, ಫಾತಿಮಾ ಶೇಕ್ ರ ದಾರಿಯಲ್ಲಿ ನಡೆವ ಬದಲು ಇಂದಿನ ಅತ್ಯಾಧುನಿಕ ಕಾಲದಲ್ಲಿನ ಅತ್ಯಾಧುನಿಕ ತಂತ್ರಜ್ಞಾನವನ್ನು, ಮೌಢ್ಯವನ್ನು ದಾಟಿಸಲು, ಕಲಿಯಲು ಬಳಸುತ್ತಿದ್ದೇವೆ. ಈ ಕಾಲದಲ್ಲೂ ಹೆಣ್ಣನ್ನು ಗಾಜಿಗೆ ಹೋಲಿಸುವ, ಹೆಣ್ಣು ಆಕ್ರಮಣಗಳಿಂದ ತಪ್ಪಿಸಿಕೊಳ್ಳಲು ಕರಾಟೆ ಕಲಿಯಿರಿ ಎಂದು ಬೋಧಿಸುವ ಮೂಲಕ ಅವಳ ಮೇಲಿನ ಎಲ್ಲಾ ಆಕ್ರಮಣಗಳಿಗೆ ಅವಳನ್ನೇ ಹೊಣೆ ಮಾಡಲಾಗುತ್ತಿದೆ. ಆದರೆ ಕಲಿಯಬೇಕಾದ್ದು ಇದನ್ನಲ್ಲ, ಹೆಣ್ಣಿನ ಮೇಲಿನ ದೌರ್ಜನ್ಯಗಳ ಮೂಲ ಎಲ್ಲಿದೆ ಎಂಬ ತಿಳಿವನ್ನು ಮರೆಮಾಚುತ್ತಿರುವ ಸಾಂಸ್ಕೃತಿಕ ರಾಜಕಾರಣವನ್ನು ಅನಾವರಣ ಮಾಡಬೇಕಾಗಿರುವುದನ್ನು. ಒಂದೆಡೆ ಸಂಸ್ಕೃತಿಯ ಮೂಲಕ ಸ್ತ್ರೀಯರನ್ನು ಗೌರವಿಸುತ್ತೇವೆ ಎನ್ನುತ್ತಲೇ ಅತ್ಯಾಚಾರಿಗಳನ್ನು ಗೌರವಿಸಲಾಗುತ್ತಿದೆ – ಅದೂ ಹೆಣ್ಣಿನ ಮೂಲಕವೇ. ಹೆಣ್ಣಿನ ಮೇಲಿನ ದಾಳಿಗಳನ್ನೂ ತಮಗೆ ಬೇಕಾದಂತೆ ನಿರೂಪಿಸಲಾಗುತ್ತದೆ, ತಮಗೆ ಬೇಡದವರಿಗೆ ಮಾತ್ರ ಶಿಕ್ಷೆ ನೀಡಲಾಗುತ್ತದೆ, ತಮ್ಮ ಮಿತ್ರರನ್ನು ಹೇಗಾದರೂ ರಕ್ಷಿಸಲಾಗುತ್ತದೆ ಎಂಬುದನ್ನು ಕಳೆದ ಹತ್ತು ವರ್ಷಗಳಲ್ಲಿ ದೇಶದಲ್ಲಿ ನಡೆದ ನಾಲ್ಕು ಅತ್ಯಾಚಾರ ಪ್ರಕರಣಗಳ ಮತ್ತು ಅವುಗಳ ತನಿಖೆಯ ಹಿನ್ನೆಲೆಯಲ್ಲಿ ಗಮನಿಸಬಹುದು.

ನಿರ್ಭಯಾ ಪ್ರಕರಣದಲ್ಲಿ ಜನ ವ್ಯಾಪಕವಾಗಿ ಪ್ರತಿಭಟಿಸಿದರು. ಕಾನೂನಿನ ಪ್ರಕ್ರಿಯೆ ನಡೆದು ಅಪರಾಧಿಗಳಿಗೆ ಶಿಕ್ಷೆಯಾಗುವ ಮೂಲಕ ಪ್ರಕರಣ ಕೊನೆಗೊಂಡಿತು. ಹೈದರಾಬಾದ್ ವೈದ್ಯೆಯ ಪ್ರಕರಣದಲ್ಲಿ– ಸಾರ್ವಜನಿಕ ರೋಷವನ್ನು ತಡೆಯುವ ನಿಟ್ಟಿನಲ್ಲಿ ಸಿನಿಮೀಯವಾಗಿ ಎನ್‌ಕೌಂಟರ್ ಮಾಡಿ ಅಪರಾಧಿಗಳನ್ನು ಕೊಂದು ಅಂತ್ಯ ಕಾಣಿಸಲಾಯಿತು. ಉನ್ನಾವಾ ಪ್ರಕರಣದಲ್ಲಿ ಸಂತ್ರಸ್ತೆಯ ವಕೀಲೆಗೆ ಬೆದರಿಕೆ ಹಾಕಲಾಯಿತು. ಸಂತ್ರಸ್ಥೆಯ ತಂದೆ, ಬಂಧುಗಳ ಅನುಮಾನಾಸ್ಪದ ಸಾವು ಸಂಭವಿಸಿತು. ಕೇಸನ್ನು ಮೂಲೆಗುಂಪು ಮಾಡಲಾಯಿತು. ಹತ್ರಾಸ್ ಪ್ರಕರಣದಲ್ಲಿ – ಇಡೀ ಆಡಳಿತವೇ ಸಂಪೂರ್ಣ ಪ್ರಕರಣವನ್ನು ಮರೆಮಾಚಿತು. ಪತ್ರಕರ್ತೆಯೊಬ್ಬಳಿಂದ ಪ್ರಕರಣ ಹೊರಬಂತು. ಆದರೆ ಸಾಕ್ಷ್ಯಾಧಾರಗಳ ಕೊರತೆಯಿಂದ ಅಪರಾಧಿಗಳು ನಿರಪರಾಧಿಗಳೆನಿಸಿಕೊಂಡರು. ಈ ನಾಲ್ಕರಲ್ಲಿ ಮೊದಲೆರಡು ಪ್ರಕರಣದ ಅಪರಾಧಿಗಳು ದುರ್ಬಲ ಹಿನ್ನೆಲೆಯವರು. ಇವರಿಗೆ ಶಿಕ್ಷೆಯಾಯಿತು. ಆದರೆ ನಂತರದ ಎರಡು ಪ್ರಕರಣದಲ್ಲಿ ಅಪರಾಧಿಗಳು ಪ್ರಬಲ ಹಿನ್ನೆಲೆಯವರು. ಅವರನ್ನು ಏನೂ ಮಾಡಲು ಸಾಧ್ಯವಾಗಲಿಲ್ಲ. ಈಗ ಹೇಳಿ – ಗಾಜಿನಂತಹ ಹೆಣ್ಣು ತನ್ನನ್ನೇ ಕಾಪಾಡಿಕೊಳ್ಳಬೇಕೆನ್ನುವವರು, ಹೆಣ್ಣು ತನ್ನ ರಕ್ಷಣೆಗಾಗಿ ಕರಾಟೆ ಕಲಿಯಬೇಕು ಎನ್ನುವವರು ಮೇಲಿನ ಸಂಗತಿಗಳ ಬಗ್ಗೆ ಯಾಕೆ ಮಾತಾಡುವುದಿಲ್ಲ?

ಖ್ಯಾತ ಸ್ತ್ರೀವಾದಿ ಬೆಲ್ ಹುಕ್ಸ್ ದೌರ್ಜನ್ಯವನ್ನು ಮೂಲದಲ್ಲಿ ಹೇಗೆ ಗ್ರಹಿಸಬೇಕು ಎಂಬುದನ್ನು ಹೀಗೆ ಹೇಳುತ್ತಾಳೆ: "ಮಹಿಳೆಯ ಮೇಲಾಗುತ್ತಿರುವುದು ಎಲ್ಲ ಬಗೆಯ ದೌರ್ಜನ್ಯಗಳ ಒಂದು ರೂಪ. ಅದು ಕೇವಲ ಪುರುಷ ದೌರ್ಜನ್ಯವೆಂದಷ್ಟೇ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ಸಾಮಾಜಿಕ ರಚನೆಗಳಲ್ಲಿ ಹಾಸುಹೊಕ್ಕಾಗಿರುವ ಎಲ್ಲಾ ರೀತಿಯ/ ಬಗೆಯ ದಬ್ಬಾಳಿಕೆಗಳನ್ನು ವಿರೋಧಿಸಿ ನಿಲ್ಲುವುದನ್ನು ಕಲಿತ ಹೊರತು, ಅವರ ಮೇಲೆ ನಡೆಯುವ ದೌರ್ಜನ್ಯಗಳು ಕೂಡಾ ಕೊನೆಗಾಣಲಾರವು. ಮಾತ್ರವಲ್ಲ, ಪುರುಷ ಪ್ರಾಬಲ್ಯದ ವ್ಯವಸ್ಥೆಯನ್ನು ಮಹಿಳೆಯರು ಏಕೆ ಮತ್ತು ಹೇಗೆ ಒಪ್ಪಿಕೊಂಡು ಬಿಡುತ್ತಾರೆ/ ಸಮರ್ಥಿಸುತ್ತಾರೆ, ಮಧ್ಯವರ್ತಿಗಳಾಗುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಈ ಸಮಾಜ ವ್ಯವಸ್ಥೆಯಲ್ಲಿ ಕಾಣುವ ಎಲ್ಲ ಬಗೆಯ ಆಪ್ತ ಸಂಬಂಧಗಳೂ ಅಧಿಕಾರ ಮತ್ತು ದಬ್ಬಾಳಿಕೆಗಳ ಚೌಕಟ್ಟನ್ನೇ ಆಧರಿಸಿವೆ. ಪುರುಷರು ಕೆಲಸ ಮಾಡುವ ಜಾಗದಲ್ಲಿ ಯಾವುದೇ ಶ್ರೇಣೀಕರಣ, ಶೋಷಣೆಗಳನ್ನು ಪ್ರತಿಭಟಿಸದೆ ಸಹಿಸಿಕೊಳ್ಳುತ್ತಾರೆ. ಅವರಿಗೆ, 'ನಿಮ್ಮ ಪುರುಷಾಧಿಕಾರವನ್ನು ಮನೆಯಲ್ಲಿ ತೋರಿಸಬಹುದೇ ಹೊರತು ದುಡಿಯುವ ವಲಯದಲ್ಲಿ ಅಲ್ಲ' ಎಂಬ ಸೂಚನೆ/

ತಿದ್ದುವಿಕೆ ನಡೆದು ಹೋಗಿದೆ. ಮನೆಯಲ್ಲಿ ನಡೆಸುವ ದೌರ್ಜನ್ಯಗಳ ಬಗೆಗೆ ಗಂಡಿಗೆ ಭಯವಿಲ್ಲ. ಅವಳು ಸತ್ತರೂ ಉದಾಸೀನ ಮಾಡಲಾಗುತ್ತದೆ. ಅದರ ಪರಿಗಣನೆಯೇ ಇರುವುದಿಲ್ಲ. ಅಪರೂಪಕ್ಕೆ ನೆಪಮಾತ್ರದ ಶಿಕ್ಷೆ ಆಗುತ್ತೆ. ಹೆಣ್ಣು ಕೂಡಾ ಇದನ್ನೇ ಅನುಕರಿಸುವುದಿದೆ. ಇದನ್ನು ಅವಳು ಹೆಣ್ಣು ಎಂಬ ಏಕೈಕ ಕಾರಣಕ್ಕೆ ನಿವಾರಿಸಲು ಬರುವುದಿಲ್ಲ. ಅವಳಿಗೂ ಮೂಲತಃ ದೌರ್ಜನ್ಯ ವಿರೋಧಿ ಮನಸ್ಥಿತಿ ಬೇಕು. ಇಲ್ಲವಾದಲ್ಲಿ ಬಡವರು, ಅಸ್ಪೃಶ್ಯರು, ದುರ್ಬಲರಾದ ಪುರುಷ ಮತ್ತು ಮಹಿಳೆಯರನ್ನು ಆಕೆ ದಮನಿಸುತ್ತಾಳೆ. ಹೀಗಾಗಿ ಇಬ್ಬರೂ ಈ ಸರಪಣಿ ತುಂಡರಿಸಬೇಕು. ಇದಕ್ಕೆ ಗಂಡಸರೂ ಪಿತೃಪ್ರಧಾನತೆಯ/ ಗಂಡಾಳಿಕೆಯ ಮೌಲ್ಯವನ್ನು ತಿರಸ್ಕರಿಸುವುದೊಂದೇ ದಾರಿ ನಮ್ಮ ಮುಂದಿರುವುದು" (ಸ್ತ್ರೀವಾದ ಅಂಚಿನಿಂದ ಕೇಂದ್ರದೆಡೆಗೆ; ಅನು: ಎಚ್.ಎಸ್. ಶ್ರೀಮತಿ; ಪ್ರ: ಸಂಗಾತ ಪುಸ್ತಕ; 2020; ಪು: 229). ಒಮ್ಮುಖದ ಕಥನಗಳ ರಾಜಕಾರಣವು ಸೃಷ್ಟಿಸಿರುವ 'ಒಂದು ಕತೆ'ಯನ್ನು ಬಿಟ್ಟು ಹಿಂಸೆ, ದಬ್ಬಾಳಿಕೆ, ದೌರ್ಜನ್ಯಗಳ ಮೂಲ ಬೇರುಗಳನ್ನೇ ಕಿತ್ತಾಗ ಬದಲಾವಣೆ ಸಾಧ್ಯ. ಹಿಂದೂ ಕೋಡ್ ಬಿಲ್ ಇಂತಹ ಒಂದು ನಡೆಯಾಗಿತ್ತು. ಅಂದು ಅದನ್ನು ವಿರೋಧಿಸಿದವರೇ ಇಂದು ಬೇರನ್ನೇ ಬತ್ತಿಸುವ ಶಕ್ತಿಯಾಗಿ ಬೆಳೆದಿದ್ದಾರೆ. ಇವೆಲ್ಲದರ ಪರಿಣಾಮವಾಗಿ ಬದುಕಿನ ಸವಿಯನ್ನೇ ಕಳೆದುಕೊಂಡಿರುವ ಹೆಣ್ಣು ಗಂಡುಗಳಿಬ್ಬರೂ ನಮ್ಮ ಕಣ್ಮುಂದೆ ಇದ್ದಾರೆ. ತುರ್ತಾಗಿ ಆಗಬೇಕಿರುವುದು ಹುಸಿ ಪೌರುಷದ ವಿಮೋಚನೆ. ಮತ್ತು ಇವುಗಳನ್ನು ಗಟ್ಟಿಗೊಳಿಸುವ ಒಮ್ಮುಖ ಕಥನಗಳಿಂದ ವಿಮೋಚನೆ. ಇದರಿಂದ ಹೆಣ್ಣು ಗಂಡುಗಳಿಬ್ಬರ ವಿಮೋಚನೆ ಸಾಧ್ಯ. ಜೆಂಡರ್ ಪೊಲಿಟಿಕ್ಸ್‌ನ ಭಾಗವಾಗಿ ಸಾಂಸ್ಕೃತಿಕ ರಾಜಕಾರಣ ಸದಾ ಕೆಲಸ ಮಾಡಿದೆ, ಮಾಡುತ್ತಿದೆ ಎಂಬ ಎಚ್ಚರ ನಮ್ಮನ್ನು ಪೊರೆಯಬೇಕು.

### ಪ್ರತಿಕ್ರಿಯೆಗಳು :

## ಸಮಾಜಕ್ಕೆ ಹೆಣ್ಣಿನ ಮನಃಸ್ಥಿತಿ ಬರಬೇಕು

ರೇಶ್ಮಾ ಗುಳೇದಗುಡ್ಡ

ಅಚ್ಚುಕಟ್ಟಾದ ಒಂದು ಕಾರ್ಯಕ್ರಮ ನಡೆಸಿಕೊಡುತ್ತಿರುವುದಕ್ಕೆ ತುಮಕೂರಿನ

ಬಳಗದವರಿಗೆ ತುಂಬು ಹೃದಯದ ಧನ್ಯವಾದಗಳು. ನಾನು ತುಮಕೂರಿಗೆ ತುಂಬಾ ದೂರದವಳಲ್ಲ, ನನ್ನ ಬಾಲ್ಯ ಮತ್ತು ನನ್ನ ಶಿಕ್ಷಣ ಇಲ್ಲಿಯೇ ಆಗಿದೆ. ಇದು ಸಹಾ ನನ್ನ ಊರು ಅಂತ ಹೇಳಿಕೊಳ್ಳಕ್ಕೆ ನಾನು ತುಂಬಾ ಹೆಮ್ಮೆ ಪಡುತ್ತೀನಿ. ನನ್ನ ತಂದೆ ಇಲ್ಲಿ ಎಮ್‌ಜಿಎಮ್ ಕಾಲೇಜಿನಲ್ಲಿ ಹಿಂದಿ ಶಿಕ್ಷಕರಾಗಿ ಇದ್ದರು. ಅದಕ್ಕೆ ಪಾವಗಡ ಮತ್ತು ತುಮಕೂರು ನನಗೆ ತುಂಬಾ ಹತ್ತಿರ ಇರತಕ್ಕಂತಹ ಊರುಗಳು.

ಈಗ ನೇರವಾಗಿ ಮಾತಿಗೆ ಬರುವುದಾದರೆ, ಮಹಿಳೆ ಮತ್ತು ಸಾಂಸ್ಕೃತಿಕ ರಾಜಕಾರಣದ ಬಗ್ಗೆ, ಸುಮಾರು ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಬಹುಮುಖ್ಯವಾಗಿ ನಾನು ನನ್ನ ಅನುಭವಗಳನ್ನು ಇಟ್ಟುಕೊಂಡು ಕೆಲವು ವಿಚಾರಗಳನ್ನು ಚರ್ಚೆ ಮಾಡುತ್ತೇನೆ. ಪುರುಷಪ್ರಧಾನ ವ್ಯವಸ್ಥೆ ಅಂತ ಮಾತುಕತೆ ಬರುತ್ತೆ ಮತ್ತು ಈವತ್ತು ಮಹಿಳಾ ದಿನಾಚರಣೆ ಅಂತ ಹೆಮ್ಮೆಯಿಂದ ಸಂತೋಷದಿಂದ ಬೀಗ್ತಾ ಇದ್ದೇವೆ, ಏನು ಪೋಸ್ಟರ್‌ಗಳ ಸುರಿಮಳೆಯೇ ಇದೆ ಆನ್‌ಲೈನಿನಲ್ಲಿ, ಹಾರೈಕೆಗಳ ಸುರಿಮಳೆ ಇದೆ, ಹೆಣ್ಣು ಹಾಗೆ, ಹೆಣ್ಣು ಹೀಗೆ ಅಂತ. ಆದರೆ ನಿಜವಾಗಿಯೂ ಪರಿಸ್ಥಿತಿ ಹೇಗಿದೆ ಅಂತ ನಾವು ಕಣ್ತೆರೆದು ನೋಡಿದಾಗ, ಬಹಳಷ್ಟು ಕರಾಳವಾದ ಒಂದು ಮುಖ ಕಾಣುತ್ತದೆ. ಇಲ್ಲಿ ನಾವು ಎಷ್ಟು ಸುಲಭವಾಗಿ ಹಾರೈಕೆಗಳನ್ನು ಹಾಕ್ತೇವೆ, ಆದರೆ ನಿಜವಾಗಲೂ ಹೆಣ್ಣಿಗೆ ಆಗುವಂತಹ ನೋವು, ಶೋಷಣೆ, ಅನ್ಯಾಯ ಎಷ್ಟು ದೊಡ್ಡದು. ಹೆಣ್ಣು ತಾನು ಶೋಷಣೆಗೆ ಒಳಗಾದಾಗ, ಅಥವಾ ಒಳಗಾಗ್ತಿರೋವಾಗ ಯಾರೂ ಅದನ್ನ ತಡೆಯೋದಿಲ್ಲ. ಬಹಳಷ್ಟು ಸಾರಿ ದಿವ್ಯವಾದ ಮೌನಕ್ಕೆ ಸಮಾಜ ಜಾರುತ್ತೆ. ಆದರೂ ಹೆಣ್ಣು ಸಮಾಜಕ್ಕೇ ಆಧಾರ, ಕುಟುಂಬಕ್ಕೇ ಆಧಾರ ಅಂತ ಹೇಳುತ್ತಿರುತ್ತಾರೆ. ಕುಟುಂಬಕ್ಕೆ ಆಧಾರ ಅಂದರೆ ಏನು? ಕುಟುಂಬದ ಮೌಲ್ಯಗಳನ್ನು ಕಾಪಾಡಬೇಕು. ಹೆಣ್ಣಿಗೆ ಮಾತ್ರ ಇದು ಅನ್ವಯಿಸುತ್ತಾ, ಗಂಡಿಗೆ ಅನ್ವಯಿಸುವುದಿಲ್ವಾ? ಒಂಟಿ ಹೆಣ್ಣು ಬದುಕಬೇಕಾ? ಗಂಡ ಬಿಟ್ಟವಳು, ಅಥವಾ ಗಂಡ ತೀರಿದಂತಹ ಹೆಣ್ಣು, ಬದುಕೋದು ಎಷ್ಟು ಅಸಾಧ್ಯವಾಗಿದೆ ಈವಾಗ. ಹೆಂಡತಿ ಬಿಟ್ಟ ಗಂಡನಿಗೆ ಎಷ್ಟರ ಮಟ್ಟಿಗೆ ನೀವು ಬುದ್ಧಿ ಹೇಳುತ್ತೀರಾ? ಅದೇ ಮಗುವನ್ನು ಬಿಟ್ಟು ಹೋದ ತಾಯಿ ಬಗ್ಗೆ ಎಷ್ಟು ಮಾತಾಡುತ್ತೀರಾ? ಮದುವೆಯಾಗದ ಹೆಣ್ಣಿಗೆ ಎಷ್ಟು ಮಾತಾಡುತ್ತೀರಾ? ಬಂಜೆಯಾದ ಹೆಣ್ಣಿಗೆ ಎಷ್ಟು ಮಾತಾಡುತ್ತೀರಾ? ಇನ್ನೂ ಮುಗಿದಿಲ್ಲ ಇದು, ಹೆಚ್ಚಾಗ್ತಾನೇ ಹೋಗ್ತಾ ಇದೆ. ಎಷ್ಟೊಂದು ಜನ ಖಿನ್ನತೆಗೆ ಜಾರ್ತಾ ಇದ್ದೇವೆ. ಅದರಲ್ಲೂ ಓದಿರುವಂತಹ ಯುವಜನತೆ ಖಿನ್ನತೆಗೆ ಜಾರ್ತಾ ಇದ್ದೇವೆ. ಆತ್ಮಹತ್ಯೆಗಳು ಆಗುತ್ತಿವೆ, ಕೌಟುಂಬಿಕ ದೌರ್ಜನ್ಯಗಳಲ್ಲಿ ಸುಮಾರು ಆತ್ಮಹತ್ಯೆಗಳು ಆಗುತ್ತಾ ಇವೆ. ಯಾರಾದ್ರೂ ನೋಡ್ತಾ ಇದ್ದಾರಾ? ಯಾರು

ಇದರ ಬಗ್ಗೆ ಚರ್ಚೆ ಮಾಡ್ತಾರೆ? ಇಷ್ಟು ಜನ ಕೌಟುಂಬಿಕ ದೌರ್ಜನ್ಯವನ್ನು ತೆಗೆದುಕೊಂಡು, ಪೋಲೀಸ್ ಆಗಿರಬಹುದು, ಸಂಘ ಸಂಸ್ಥೆಗಳಾಗಿರಬಹುದು ಅಥವಾ ನ್ಯಾಯಾಲಯಕ್ಕೆ ಹೋಗುವುದಾಗಿರಬಹುದು, ಎಷ್ಟು ಜನಕ್ಕೆ ಇದು ಅವಕಾಶ ಇದೆ? ಬಿಡ್ತಾರಾ ಅಷ್ಟು ಸುಲಭವಾಗಿ ಹೋಗೋದಿಕ್ಕೆ?

ಅಕ್ಕಮಹಾದೇವಿ ಪುಸ್ತಕದಲ್ಲಿ ಡಾ.ಎಚ್.ಎಸ್.ಅನುಪಮಾ ಅವರು ಬರೆದಿದ್ದಾರೆ, ಮಂಡಲ ಮನೆ, ಕಸಪಯ್ಯನ ಮನೆಯಲ್ಲಿ ಆದಂತಹ ತಿಕ್ಕಾಟಗಳು, ಘರ್ಷಣೆಗಳು, ಅವಳ ಬಳಗ ಇರಲಿ, ಹೊರಗಿನವರು ಇರಲಿ, ಗೊತ್ತಿದ್ರೂ ಸಹಾ ನೀನು ಇಲ್ಲೇ ಇರು ಅಂತ ಅವಳಿಗೆ ಹೇಳ್ತಾರೆ. ಸಣ್ಣವಳಿದ್ದಾಗ ನೀವು ಮಗಳಿಗೆ ಎಷ್ಟು ಚಂದವಾಗಿ ನೋಡ್ತೀರಾ: ಕಾಲಿಗೊಂದು ಗೆಜ್ಜೆ, ಬಟ್ಟೆ, ಕೇಳಿದ್ದು ಶಾಲೆ, ಆದರೆ ವಿವಾಹದಿಂದ ಅಥವಾ ಬೇರೆ ದೌರ್ಜನ್ಯದಿಂದ ಬಳಲುವಾಗ ಎಲ್ಲರ ಕಿವಿಯೂ ಕಿವುಡಾಗಿರ್ತದೆ. ಎಲ್ಲರೂ ಹೇಳೋದು ಒಂದೇ ಮಾತು 'ಹೊಂದಾಣಿಕೆ'. ಈ ಹೊಂದಾಣಿಕೆ ಅನ್ನುವ ಪದದ ಅರ್ಥ ಇನ್ನೂ ನನಗೆ ಆಗಿಲ್ಲ. ಜೀವನದಲ್ಲಿ ಹೊಂದಾಣಿಕೆ ಇರಬೇಕಾ ಅಥವಾ ಇಡೀ ಜೀವನಾನೇ ಹೊಂದಾಣಿಕೆ ಆಗಬೇಕಾ? ಜೀವನದಲ್ಲಿ ಹೊಂದಾಣಿಕೆ ಇರಬೇಕು, ನಿಜ ಒಪ್ಪಿಕೊಳ್ಳೋಣ. ಇಡೀ ಜೀವನಾನೇ ಹೊಂದಾಣಿಕೆ ಆದರೆ ಏನಿದೆ ನಮ್ಮ ಐಡೆಂಟಿಟಿ? ಬೇಡ್ವಾ ನಮಗೆ ಐಡೆಂಟಿಟಿ..ಮತ್ತೆ ನಮ್ಮನ್ಯಾಕೆ ಓದಿಸ್ತೀರಿ? ಇದನ್ನೇ ಓದಬೇಕು, ಅದನ್ನೇ ಓದಬೇಕು, ಆದರೆ ಗಂಡನ ಮನೆಯಿಂದ ಅವಳು ವಾಪಾಸು ಬರಬಾರದು, ಅವಳು ಅಲ್ಲಿಯೇ ಬಿದ್ದಿರಬೇಕು. ಏನೇ ಆದರೂ ಅವಳು ಅಲ್ಲಿಯೇ ಇರಬೇಕು. ಗಂಡ ಹೇಗೇ ಇರಲಿ ನೀವು ಹೋಗಬೇಕು, ಇದನ್ನು ಗಂಡಿಗೆ ಯಾಕೆ ಅನ್ವಯಿಸೋದಿಲ್ಲ? ಎಲ್ಲಾ ಹೆಂಡತಿಯ ತಪ್ಪಲ್ಲ, ಹೆಂಡತೀನ ಚೆನ್ನಾಗಿ ನೋಡ್ಕೋ, ಇದು ನಿನ್ನ ಜವಾಬ್ದಾರಿ ಅಂತ ಗಂಡಿಗೆ ಯಾಕೆ ಹೇಳಲ್ಲ? ಗಂಡು ಸಮಾಜಕ್ಕೆ ಯಾರೂ ಏನೂ ಹೇಳೋದೇ ಇಲ್ಲ. ನೀನು ಮಗೂನ ಮಾಡ್ಕೋ, ನೀನು ಮಗೂನ ಜವಾಬ್ದಾರಿ ತಗೋ ಅಂತ ಹೇಳಿಕೊಡುತ್ತೀವಾ?

ಹೌದು ಈವತ್ತು ನೀವು ರಾಮ ಮಂದಿರ ನಿರ್ಮಾಣ ಮಾಡ್ತೀರಿ, ನಮ್ಮ ವಿರೋಧ ಖಂಡಿತಾ ಇಲ್ಲ. ಕಂಡವರ ಹೆಂಡತಿಯನ್ನು ಕಣ್ಣೆತ್ತಿ ನೋಡದ, ಅಪ್ಪನ ಆಸ್ತಿಗೆ ಹೊಂಚು ಹಾಕದ, ತನ್ನ ಆದರ್ಶಗಳಿಗಾಗಿ ರಾಮ ಬದುಕ್ತಾನೆ ಅಂತ ಆದ್ರೆ, ನಿಮ್ಮಲ್ಲಿ ಅಂತಹ ರಾಮ ಆವರಿಸುತ್ತಾನೆ ಅಂತ ಆದ್ರೆ ಕಟ್ರಿ, ಎಷ್ಟು ಬೇಕಾದ್ರೂ ಕಟ್ಟಿ. ಹೆಂಡತಿ ಸತ್ತ ಗಂಡನಿಗೆ ಅಥವಾ ಹೆಂಡತಿ ಬಿಟ್ಟ ಗಂಡನಿಗೆ ತೋರಿಸುವಷ್ಟು ಮರುಕ, ಹೆಣ್ಣುಮಗೂಗೆ ತೋರಿಸೊಲ್ಲ ನೀವು ಯಾರೂ?

ಮಹಿಳಾ ದಿನಾಚರಣೆ ಮಾತ್ರ ಅಬ್ಬರದಿಂದ ಆಚರಿಸುತ್ತೇವೆ ನಾವು. 'ಬೇಟಿ ಬಚಾವ್, ಬೇಟಿ ಪಢಾವ್' ಕ್ಯಾ ಪಢಾವ್ ಕ್ಯಾ ಬಚಾವ್? ಶಾಲೆ, ಶಿಕ್ಷಣ, ಮೌಲ್ಯ ಎಲ್ಲಾ ಮಾತಾಡುವ ವಸ್ತುಗಳಾಗಿದಾವೆ. ನಾವು ಏನನ್ನು ಓದಿಸ್ಬೇಕು, ಏನನ್ನು ಕೇಳಿಸ್ಕೋಬೇಕು, ಏನೇನು ಬಟ್ಟೆ ಹಾಕ್ಕೊಂಡು ಹೋಗಬೇಕು, ಎಲ್ಲವನ್ನೂ ನೀವೇ ವಿಚಾರ ಮಾಡ್ತೀರಿ ಅನ್ನೋದಾದ್ರೆ, ಮತ್ತೆ ನಾವು ಏನಕ್ಕೆ? ಯಾವುದೇ ಸಂದರ್ಶನಕ್ಕೆ ಹೋದರೆ ಅಥವಾ ಯಾವುದೇ ಪರೀಕ್ಷಾ ಕೊಠಡಿಗೆ ಹೋದ್ರೆ, ನೀವು ಯಾವ ಬಟ್ಟೆ ಹಾಕ್ಕೊಂಡು ಬರುತ್ತೀರಿ, ಅದು ಮುಖ್ಯ ಅಲ್ಲ, ನಿಮ್ಮಲ್ಲಿ ಎಷ್ಟು ವಿಚಾರಧಾರೆ ಇದೆ, ಎಷ್ಟು ವಿಷಯವನ್ನು ನೀವು ಅರ್ಥಮಾಡಿಕೊಂಡಿದ್ದೀರಿ, ಅದು ಮುಖ್ಯ.

ಈ ವಿದ್ಯೆ ಒಂದು ಇಲ್ಲದಿದ್ರೆ, ಈವತ್ತು ಮೇರಿ ಕ್ಯೂರಿ ರೇಡಿಯಂ ಮಹಾಮಾತೆ ಆಗ್ತಿದ್ಲಾ? ಇಡೀ ಮೇರಿ ಕ್ಯೂರಿಯ ಬದುಕನ್ನು ನೋಡಿದಾಗ ಅಚ್ಚರಿಯೆನಿಸುತ್ತದೆ. ಪೋಲೆಂಡಿನಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನಿಷೇಧವಾಗಿತ್ತು. ಅಂತಹಾ ಪ್ರದೇಶದಲ್ಲಿ ಮೇರಿ ಕ್ಯೂರಿ ಹುಟ್ಟಿದ್ದು. ಇಂದು ನಾವು ಅವರ ಬಗ್ಗೆ ಓದ್ತೀವಿ. ಅವರ ಒಂದು ಸಂಶೋಧನೆ ರಸಾಯನ ಶಾಸ್ತ್ರಕ್ಕೆ ಭಾರೀ ಕೊಡುಗ ನೀಡಿದೆ ಅಂತ. ಇಷ್ಟೆಲ್ಲಾ ಧೈರ್ಯ ತಿಳುವಳಿಕೆ ಬಂದಿದ್ದು ಎಲ್ಲಿಂದ? ಶಿಕ್ಷಣದಿಂದ, ಒಂದುಕಡೆ ನಮ್ಮನ್ನು ಬಟ್ಟೆ ವಿಚಾರವಾಗಿ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತೀರಿ, ಸಾಮಾಜಿಕ ಕಟ್ಟುಪಾಡುಗಳನ್ನು ಹೇರಿ ನಮ್ಮತನಾನ ನಮ್ಮಿಂದ ಕಿತ್ತುಕೊಳ್ಳುತ್ತೀರಿ. ನಮ್ಮಲ್ಲಿ, ಮಹಿಳೆಯರಲ್ಲಿ ಭಾವನಾತ್ಮಕ ತಿಕ್ಕಾಟಗಳು ಬಹಳಷ್ಟು ಇರುತ್ತವೆ. ಪ್ರತಿಯೊಬ್ಬ ಮಹಿಳೆಗೂ ಇರುತ್ತೆ, ಬಹಳಷ್ಟು ಮಂದಿ ಹೇಳುತ್ತಾರೆ, ನನಗೆ ಫೋನ್ ಮಾಡಿ, 'ಏಯ್, ಗಂಡನ ಜೊತೆ ಇರೋರೆಲ್ಲಾ ನಾವು ಚೆನ್ನಾಗಿ ಇರಲ್ಲ ಕಣೇ, ನಮ್ಮದೇ ಆದ ನೋವುಗಳು ಇರ್ತವೆ, ನಮ್ಮನ್ನು ಯಾರೂ ಕೇಳಲ್ಲ. ತವರು ಮನೆಯವರೂ ಕೇಳಲ್ಲ, ಗಂಡನ ಮನೆಯವರಂತೂ ಮೊದಲೇ ಕೇಳಲ್ಲ'.

ದಯವಿಟ್ಟು ನಿಮ್ಮ ನೋಟವನ್ನು ಸರಿಪಡಿಸಿಕೊಳ್ಳಿ. ಹೆಣ್ಣು ಕಣ್ಣಿನಿಂದ ನೋಡಿ. ಯಾವ ಹೆಣ್ಣು ಎಲ್ಲಿಗೇ ಹೋದರೂ ಪ್ರಶ್ನೆ ಕೇಳೋದು ಇಷ್ಟೇ ಅವಳಿಗೆ, 'ಗಂಡ ಚೆನ್ನಾಗಿದ್ದಾನೆ, ಒಳ್ಳೆ ಆಫೀಸರ್ ಇದ್ದಾನೆ, ನೀನು ಸುಮ್ಮನಿದ್ದು ಬಿಡು, ಹೊಂದಾಣಿಕೆ ಮಾಡಿಕೋ' ಅಂತ. ಕೇಳುವ ಕಿವಿಗಳು ಇವೆಯಲ್ಲಾ, ಸಮಸ್ಯೆಯನ್ನು ಆಲಿಸುವ ಕಿವಿಗಳು ಇವೆಯಲ್ಲಾ, ಇವುಗಳಲ್ಲಿ ಹೆಣ್ಣು ಕಣ್ಣುಗಳು ಬರಬೇಕು, ಹೆಣ್ಣು ಮನಸ್ಥಿತಿ ಬರಬೇಕು. ಬಹುಶಃ ಬರಬಹುದು. ಮುಂದಾದರೂ ಬರಬಹುದು ಎಂಬ ಭರವಸೆಯೊಂದಿಗೆ ನನ್ನ ಮಾತು ಮುಗಿಸುತ್ತೇನೆ. ಧನ್ಯವಾದಗಳು.

## ಮೆಟ್ಟಿ ನಿಲ್ಲುವುದನ್ನು ಕಲಿಯಬೇಕು

ಭಾಗೀರಥಿ ಸಾಗರ

ಮಹಿಳೆ ಸಾಂಸ್ಕೃತಿಕವಾಗಿ ರಾಜಕಾರಣದಲ್ಲಿ ಹೇಗೆ, ಕೆಲಸ ಮಾಡ್ತಾಳೆ, ಮಾಡ್ತಾ ಇರಬೇಕಾಗುತ್ತೆ ಎಂಬ ಬಗ್ಗೆ ನನ್ನ ಎರಡು ಅನಿಸಿಕೆಯನ್ನ ಅನುಭವದೊಂದಿಗೆ, ಹಂಚಿಕೊಳ್ಳಕ್ಕೆ ಇಷ್ಟಪಡ್ತೀನಿ. ನಾನು ಮಹಿಳಾ ಸಂಘಟನೆ ಜೊತೆಗೆ ಕಳೆದ ಹತ್ತು ವರುಷಗಳಿಂದ ಇದ್ದೇನೆ. ಜೊತೆಗೆ ನಾನು ರಂಗಭೂಮಿ ಕಲಾವಿದೆ, ಜನಪದ ಕಲಾವಿದೆ, ಈ ಕ್ಷೇತ್ರದಲ್ಲಿ ನಾನು, ಯಾವ ರೀತಿ ನನ್ನ ಸಮಯ ಮತ್ತು ಚಟುವಟಿಕೆಗಳನ್ನು ಕಳೆದಿದ್ದೀನಿ, ಅದರ ಮಧ್ಯೆ ಯಾವ ರೀತಿಯ ರಾಜಕೀಯವಾದ ಸಮಸ್ಯೆಗಳು ಎದುರಾಗುತ್ತಾ ಇದ್ದುವು ಅನ್ನುವುದರ ಬಗ್ಗೆ ಎರಡು ಮಾತು ಆಡುತ್ತೀನಿ.

ನಾನೊಬ್ಬ ರಂಗಭೂಮಿ ಕಲಾವಿದೆ. ನಾಲಕ್ಕನೇ ತರಗತಿಯಲ್ಲಿ ಓದುತ್ತಿರಬೇಕಿದ್ದರೇ ನಾನು, ರಂಗಭೂಮಿಗೆ ಇಳಿದವಳು. ಯಾಕೆಂದರೆ ನಾನು ರಂಗಭೂಮಿ ಕ್ಷೇತ್ರ, ಹೆಗ್ಗೋಡಿನ ನೀನಾಸಂನಂತಹ ಜಾಗದಲ್ಲಿ ಹುಟ್ಟಿ ಬೆಳೆದವಳು, ಹಾಗಾಗಿ ವಿದ್ಯಾರ್ಥಿ ಜೀವನದಲ್ಲೇ, ಆ ಒಂದು ಕ್ಷೇತ್ರಕ್ಕೆ ಇಳಿದು ಅಂದಿನಿಂದ ಇಂದಿನವರೆಗೂ ಸಕ್ರಿಯವಾಗಿ ಇದ್ದೇನೆ. ಸುಮಾರು 18 ನಾಟಕದ ನಿರ್ದೇಶಕರ ಜೊತೆಯಲ್ಲಿ, ಒಬ್ಬ ಕಲಾವಿದೆಯಾಗಿ ಕೆಲಸ ಮಾಡಿದ್ದೀನಿ, ಆ ಕೆಲಸ ಮಾಡುವಂತಹಾ ಸಂದರ್ಭದಲ್ಲಿ ಬಹಳಷ್ಟು ನೋವುಗಳನ್ನು ನಾನು ರಾಜಕೀಯವಾಗಿ, ಅನುಭವಿಸಿದೀನಿ. ಒಬ್ಬ ಹೆಣ್ಣುಮಗಳಿಗೆ ಇರಬಹುದು, ಅಥವಾ, ಒಬ್ಬ ಮಹಿಳೆಗೆ ಇರಬಹುದು ಒಂದು ಪಾತ್ರ ಕೊಡಬೇಕಾಗಿದ್ದರೆ, ಯಾವ ರೀತಿ ಒಂದು ಪರುಷಪ್ರಧಾನ ಸಮಾಜದಲ್ಲಿ, ಈ ನಿರ್ದೇಶಕರಾಗಿ ಕೆಲಸ ಮಾಡತಕ್ಕಂತಹ ವ್ಯಕ್ತಿಗಳು, ಆಯ್ಕೆ ಮಾಡುತ್ತಾರೆ? ಮೊದಲಿಗೆ, ನೋಡೋದಿಕ್ಕೆ ಚಂದ ಇರಬೇಕು, ವಾಕ್ಚಾತುರ್ಯ ಇರಬೇಕು, ಯಾವ ಪಾತ್ರ ಕೊಟ್ಟರೆ ಮೌನವಾಗಿರ್ತಾಳೆ ಯಾವ ಪಾತ್ರ ಕೊಟ್ಟರೆ ಸ್ಟ್ರಾಂಗ್ ಆಗ್ತಾಳೆ ಎಲ್ಲಾ ತಿಳ್ಕೊಂಡು ಅದಕ್ಕೆ ಸರಿಯಾಗಿ ರಾಜಕೀಯ, ಮಾಡ್ತಾರೆ. ನಮ್ಮಂತಹವರು ಎಲೆ ಮರೆ ಕಾಯಿಯಂತೆ, ಒಬ್ಬ ಕಲಾವಿದೆಯಾಗಿ ಕೆಲಸ ಮಾಡುತ್ತೇವೆ. ಒಂದು ನಾಟಕದಲ್ಲಿ ಏನೋ, ಸಣ್ಣ ಪಾತ್ರ ಕೊಡಬಹುದು, ಇನ್ನ್ಯಾವುದರಲ್ಲೋ ಇನ್ನ್ಯಾವುದೋ ಕೊಡಬಹುದು, ಯಾವಾಗ್ಲೂ ಅದನ್ನೇ ಕೊಡ್ತಾಕೊಡ್ತಾ ಬಂದಾಗ, ನಾವು ಯಾವಾಗ ಮುಂಚೂಣಿಗೆ ಬರುತ್ತೀವೋ ಗೊತ್ತಾಗುವುದಿಲ್ಲ. ಮನೆಯಲ್ಲಿ ಕೇಳ್ತಾರೆ, ಏನು ಪಾತ್ರ ಕೊಟ್ಟರು ಅಂತ. ಈಗಂತೂ

ಪರವಾಗಿಲ್ಲ, ನನಗೆ ವಯಸ್ಸಾಗಿದೆ ಬಿಡೇ, ರಾಜಕುಮಾರಿ ಪಾತ್ರ ಕೊಡ್ತಾರೇನೇ ಅಂತ ಹೇಳಿ ಬಾಯಿ ಮುಚ್ಚಿಸುತ್ತೇನೆ, ಈ ಕ್ಷೇತ್ರದಲ್ಲಿ ಈ ತರಹದ ಒಂದು ವಿಚಾರ ನಡೆಯುತ್ತೆ.

ರಂಗಭೂಮಿ ವ್ಯವಸ್ಥೆ ಒಳಗಡೆ, ಹೆಚ್ಚು ಪುರುಷರು, ನಿರ್ದೇಶಕರಾಗಿ ಇರುತ್ತಾರೆ, ನಮ್ ಹೆಣ್ಣುಮಕ್ಕಳು ಈಗಲೂ ಕೂಡ, ವಿರಳ. ಉದಾಹರಣೆಗೆ ನಾನು ಇರುವಂತಹ ಊರಲ್ಲಿ, ಸಾಗರ ತಾಲೂಕಲ್ಲಿ, ಬೇಕಾದಷ್ಟು ಜನ ಪುರುಷರು ನಿರ್ದೇಶಕರು ಆಗಿದ್ದಾರೆ. ಮಹಿಳೆಯರು ಬೆರಳೆಣಿಕೆಯಷ್ಟು ಇದ್ದಾರೆ. ಈವತ್ತಿಗೂ ಹಾಗೆಯೇ ಇದೆ. ಮಹಿಳೆಯರು ಯಾಕೆ ನಿರ್ದೇಶಕರಾಗಿ ಕೆಲಸ ಮಾಡಬಾರದು? ಅವರೇ ಯಾಕೆ? ನಾವೂ ಮಾಡಬಹುದಲ್ಲಾ. ಅದೇ ತರಹ ಜನಪದ ಕ್ಷೇತ್ರದಲ್ಲಿ, ಎಷ್ಟು ಒಳ್ಳೆಯ ಕಲಾವಿದರು ಮಹಿಳೆಯರು ಇದ್ದಾರೆ, ಅವರಿಗೆ ಬೇಕಾದಷ್ಟು ವ್ಯವಸ್ಥೆಗಳನ್ನು ಕಲ್ಪಿಸಿ, ಮಾಸಾಶಸನ ಇರಬಹುದು, ಅವರ ಗುಂಪಿಗೆ ಯಾವುದಾದರೂ ಸಹಾಯಧನ ಇರಬಹುದು, ಕೊಡಿಸಬೇಕು. ನಾನು, ನಾಟಕ ಅಕ್ಯಾಡಮಿ ಇರಬಹುದು, ಕನ್ನಡ ಸಂಸ್ಕೃತಿ ಇಲಾಖೆ ಇರಬಹುದು, ಅಲ್ಲಿ ಹೋಗಿ ಕೇಳಬೇಕಿದ್ರೆ ಅಲ್ಲೂ ಕೂಡಾ, ರಾಜಕೀಯ, ಹೆಣ್ಣು ಮಕ್ಕಳ ಬಗ್ಗೆ ಕೇಳುವಾಗ ಕೊಡುವಾಗ, ಒಂದು ರೀತಿ ಕಣ್ಣಲಿ ಕಣ್ಣಿಟ್ಟು, ನೋಡಿ ಯೋಚನೆ ಮಾಡಿ ಕೊಡುವಂತಹ ಸ್ಥಿತಿ ಈವತ್ತಿಗೂ ಕೂಡಾ ಇದೆ, ನಾವು ಅನುಭವಿಸುತ್ತಲೇ ಇದ್ದೇವೆ. ಈವತ್ತು ನೀನಾಸಂ ನಂತಹ ಕ್ಷೇತ್ರದಲ್ಲಿ, ನಾವು ಕೆಲಸ ಮಾಡುತ್ತಿದ್ದೇವೆ, ಆದರೂ ನಾವು ಏನೋ ಒಂದು ಕೇಳಕ್ಕೆ ಹೋದರೆ, ಹೆಣ್ಣು ಮಕ್ಕಳು ಕಟ್ಕೊಂಡಂತಹ ಸಂಸ್ಥೆಗೆ, ಅವಕಾಶ ಸಿಗಲ್ಲ.  ಎಲ್ಲೆಲ್ಲೂ ಅಡೆತಡೆಗಳು ಬರುತ್ತವೆ.

ಹಾಗಂತ ಈಗ ನಾವು ಮಹಿಳೆಯರು ಮೆಟ್ಟಿ ನಿಲ್ಲಲು ಕಲಿತಿದ್ದೇವೆ. ಯಾವುದಕ್ಕೂ ನಾನು ಕಮ್ಮಿ ಅಂತ ಅನಿಸುವುದಿಲ್ಲ. ಈವತ್ತು ಅಂತಹಾ ದೊಡ್ಡ ಆತಂಕ ಏನಿಲ್ಲ, ಬಂದರೂ ಕೂಡಾ ಎದುರಿಸುವಂತಹ ಶಕ್ತಿ ಇದೆ, ಆ ಶಕ್ತಿ ಬಂದಿರೋದೇ ನಮಗೆ ಈ ಮಹಿಳಾ ಒಕ್ಕೂಟದಿಂದ. ನಾವು ಒಟ್ಟಾಗಿ ಹೋದಾಗ, ಎಲ್ಲವನ್ನೂ ನಮಗೆ ಪಡ್ಕೊಳಕ್ಕೆ, ಅನುಕೂಲವಾಗುತ್ತೆ. ಮತ್ತೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಣ್ಣುಮಕ್ಕಳೇ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುವುದನ್ನು ನಾವು ನೋಡ್ತಾನೇ ಇದ್ದೇವೆ. ನಾವು ಯಾರೂ ಹಿಂದೇಟು ಹಾಕುವುದು ಬೇಡ, ಏನೇ ಬಂದರೂ ನಾವು ರಾಜಕೀಯವಾಗಿ ಎದುರಿಸೋದಕ್ಕೆ ಮುಂದಾಗೋಣ.

# ಸರಕು ಸಂಸ್ಕೃತಿ ಮತ್ತು ಮಹಿಳೆ

ಡಾ. ಸುಶಿ ಕಾಡನಕುಪ್ಪೆ

ಮಹಿಳೆಯರ ಶೋಷಣೆ ಮತ್ತು ಪ್ರಗತಿಯ ವಿಚಾರಗಳು ವಸ್ತುನಿಷ್ಠ ವಿಶ್ಲೇಷಣೆಗೆ ಒಳಪಡಬೇಕಾದರೆ ನಾವು ಹಾಕಿಕೊಳ್ಳುವ ಪ್ರಶ್ನೆಗಳು ಯಾವುವು ಎಂಬುದು ಮುಖ್ಯವಾಗುತ್ತದೆ. ಸಾಂಸ್ಕೃತಿಕ ರಾಜಕಾರಣ ಮಹಿಳೆಯ ಅಸ್ತಿತ್ವ ಮತ್ತು ವಿಕಸನದ ಅರಿವಿಗೆ ಸಿದ್ಧ ಮಾದರಿಯ ಉತ್ತರಗಳನ್ನು ಜನಮಾನಸದಲ್ಲಿ ನೆಲೆಯೂರಿಸಿರುವಾಗ, ಹೊಸ ಆಯಾಮಗಳ ಪ್ರಶ್ನೆಗಳು ಮುಖ್ಯವಾಗುತ್ತವೆ. ಮಹಿಳೆಯ ವಿಕಸನದ ಹಾದಿ ಮತ್ತು ಆಕೆಯ ಮುಂದಿರುವ ಸಮಸ್ಯೆಗಳನ್ನು ಅರಿಯಲು ಇರುವ ಮುಖ್ಯವಾದ ಅಸ್ತ್ರ ಪ್ರಶ್ನೆಗಳೇ ಆಗಿವೆ. ಪ್ರಶ್ನೆಗಳು ವೈಚಾರಿಕ ಮತ್ತು ವೈಜ್ಞಾನಿಕ ನೆಲೆಗಟ್ಟಿನಿಂದ ಹುಟ್ಟಿ ಸಾಮಾಜಿಕ, ಜೈವಿಕ, ಆರ್ಥಿಕ ಮತ್ತಿತರ ಆಯಾಮಗಳನ್ನು ಹೊಂದಿರಬೇಕಾಗುತ್ತದೆ. ಹಾಗೆಯೇ ಸ್ವವಿಮರ್ಶೆಯ ಪ್ರಶ್ನೆಗಳು ಸಹ ಮುಖ್ಯವಾಗುತ್ತವೆ. ಈ ನಿಟ್ಟಿನಲ್ಲಿ ನಡೆಯುವ ನಮ್ಮ ಹುಡುಕಾಟ ಪ್ರಾಮಾಣಿಕವಾದ ವಸ್ತುನಿಷ್ಠ ಪ್ರಶ್ನೆಗಳಿಂದ ಹುಟ್ಟಿದ್ದಾದರೆ ಅರ್ಥಪೂರ್ಣ ಒಳನೋಟಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಇಂತಹ ಸಾಕಷ್ಟು ವೈಜ್ಞಾನಿಕ ಪ್ರಯತ್ನಗಳು ಮಹಿಳೆಯ ವಿಚಾರದಲ್ಲಿ ಸಂಶೋಧನೆಗಳ ಮೂಲಕ ನಡೆದಿವೆ. ಮಹಿಳೆಯ ವಿಷಯಗಳ ಹಲವು ಆಯಾಮಗಳಲ್ಲಿ ಸಂಸ್ಕೃತಿಯ ಪ್ರಭಾವದ ಪರಿಣಾಮಗಳನ್ನು ತಿಳಿಯುವುದೂ ಆಗಿದೆ. ಇವತ್ತಿನ ವಿಚಾರ ಸಂಕಿರಣದಲ್ಲಿ, ನಾವು ಬದುಕುತ್ತಿರುವ ಈ ಕಾಲಘಟ್ಟದ ಬಹುಮುಖ್ಯವಾದ ಸಾಂಸ್ಕೃತಿಕ ಪ್ರಭಾವವಾದ ಸರಕು ಸಂಸ್ಕೃತಿಯ ಬಗ್ಗೆ ಕೆಲವು ಮಾತುಗಳನ್ನು ಹಂಚಿಕೊಳ್ಳಬಹುದು.

ಸರಕು ಸಂಸ್ಕೃತಿಯ ಬಗ್ಗೆ ವಿಶ್ಲೇಷಿಸುವ ಮೊದಲು, 'ಸರಕು' ಎಂದರೇನು ಎಂಬುದನ್ನು ತಿಳಿಯಬಹುದು. ಸರಕು ಎಂಬುದು ಒಂದು ವಸ್ತುವಾಗಿರಬಹುದು ಅಥವಾ ಒಂದು ವ್ಯಕ್ತಿಯಿಂದ ಪಡೆಯುವ ಸೇವೆಯಾಗಿರಬಹುದು ಅಥವಾ

ಅನುಭವಗಳು ಕೂಡ ಆಗಿರಬಹುದು. ಸರಕಿಗೆ ಒಂದು ನಿರ್ದಿಷ್ಟವಾದ ಬೆಲೆಯನ್ನು ಸಹ ನಿಗದಿ ಪಡಿಸಿರಲಾಗಿರುತ್ತದೆ. ನಮ್ಮ ಜೀವನವನ್ನು ಒಂದು ಮಾರುಕಟ್ಟೆಗೆ ಸಮೀಕರಿಸಿದಾಗ ಸಮಾಜದಲ್ಲಿ ಬದುಕುವ ಎಲ್ಲಾ ಜೀವಿಗಳಿಗೂ ಬೆಲೆ ನಿಗದಿಯಾಗಿರುವಂತೆ ಕಾಣುತ್ತದೆ. ಸರಕು ಸಂಸ್ಕೃತಿಯನ್ನು ಉಸಿರಾಡುವ ಸಮಾಜದಲ್ಲಿ ಅದರ ಸಮುದಾಯ ಪ್ರಜ್ಞೆಯು ಲಾಭ–ನಷ್ಟದ ಆಲೋಚನೆಗಳ ಮೂಲಕ ಮನುಷ್ಯ ಸಂಬಂಧಗಳನ್ನು ಪರಿಭಾವಿಸುತ್ತದೆ. ಆ ಸಮಾಜದ ಆಚರಣೆಗಳು ಶುಷ್ಕ ವ್ಯಾವಹಾರಿಕ ಪ್ರಜ್ಞೆಯ ಮೂಲಕ ತನ್ನ ಸಂಸ್ಕೃತಿಯನ್ನು ವ್ಯಕ್ತಪಡಿಸುತ್ತವೆ. ಇಂತಹ ಸಮಾಜದಲ್ಲಿ ಹುಟ್ಟುವ ನಮ್ಮ ವರ್ತನೆಗಳು ಸರಕಿನ ಬೆಲೆಯನ್ನು ಆಧರಿಸಿರುತ್ತವೆ. ಇಲ್ಲಿ 'ಸರಕು' ಒಬ್ಬ ಜೀವಂತ ವ್ಯಕ್ತಿಯೇ ಆಗಿದ್ದರೂ ವ್ಯಕ್ತಿಯ ಮೌಲ್ಯವನ್ನು 'ಬೆಲೆ' ಕಟ್ಟಿನೋಡುವ ವರ್ತನೆಗಳು ಹುಟ್ಟಿಕೊಳ್ಳುತ್ತವೆ. ಈ ಸರಕು ಒಬ್ಬ ಮಹಿಳೆಯಾಗಿರಬಹುದು, ಪುರುಷನಾಗಿರಬಹುದು, ಮಕ್ಕಳಾಗಿರಬಹುದು ಅಥವಾ ವೃದ್ಧರಾಗಿರಬಹುದು. ವ್ಯಕ್ತಿ ಕೇಂದ್ರಿತ ಸ್ವಾರ್ಥದ ದೃಷ್ಟಿಕೋನ ಇಂತಹ ಸರಕು ಸಂಸ್ಕೃತಿಯ ಸಮಾಜದ ನಿರ್ಮಾಣದಲ್ಲಿ ಅತಿ ಮುಖ್ಯವಾದ ಪಾತ್ರ ವಹಿಸಿರುತ್ತದೆ. ಈಗಿನ ಕಾಲಘಟ್ಟದಲ್ಲಿ ಸರಕು ಸಂಸ್ಕೃತಿಯನ್ನು ನೆಲೆಯೂರಿಸುವ ಬಂಡವಾಳಶಾಹಿ ವ್ಯವಸ್ಥೆಯ ಪಾತ್ರ ಮುಖ್ಯವೆನಿಸುತ್ತದೆ.

ಸುಮಾರು 16ನೇ ಶತಮಾನದ ಹೊತ್ತಿಗೆ ಸೃಷ್ಟಿಯಾದ ಬಂಡವಾಳಶಾಹಿ ವ್ಯವಸ್ಥೆ ಸಮಾಜವು ಸರಕು ಸಂಸ್ಕೃತಿಯನ್ನು ಹೊದ್ದಿಕೊಳ್ಳಲು ಅನುವು ಮಾಡಿಕೊಟ್ಟಿತು. 18ನೇ ಶತಮಾನದ ಹೊತ್ತಿಗೆ ಬಂಡವಾಳಶಾಹಿಯ ವ್ಯವಸ್ಥಿತ ಮಾರುಕಟ್ಟೆ ಬೇರೂರಿತು. ಇದರೊಟ್ಟಿಗೆ ಮಾನವ ಜನಾಂಗದ ಪ್ರಜ್ಞೆಯನ್ನು ಸರಕು ಸಂಸ್ಕೃತಿಯ ಕಡೆಗೆ ಪರಿವರ್ತನೆಗೊಳಿಸಿತು. ಇಲ್ಲಿ ವ್ಯಕ್ತಿ ಕೇಂದ್ರಿತ ಪ್ರಜ್ಞೆ ತನ್ನ ಅಂತರ್ಮುಖಿ ಅವಲೋಕನದ ಮೂಲಕ ತನ್ನನ್ನು ತಾನು ಅರಿಯುವ ಆಯಾಮವನ್ನು ಕಳೆದುಕೊಂಡು ಲಾಭ–ನಷ್ಟಗಳ ವ್ಯಾವಹಾರಿಕ ಕೇಂದ್ರಿತ ವ್ಯಕ್ತಿಯನ್ನು ಸೃಷ್ಟಿ ಮಾಡಿತು.

ಮಾನವ ಜನಾಂಗದ ಜೀವಿತಾವಧಿಯಲ್ಲಿ ನಾವು ಇನ್ನೂ ಬಹು ಕಾಲ ಚಲಿಸಬೇಕಾಗಿದೆ. ನಮ್ಮ 300,000 ವರ್ಷಗಳ ವಿಕಸನದ ಅವಧಿ ಮಹಿಳೆಯ ವಿಕಸನದ ಹಾದಿಯಲ್ಲಾದ ಶೋಷಣೆಗಳನ್ನು ಅರಿಯುವ ಅವಕಾಶವನ್ನು ನೀಡುತ್ತದೆ. ಮಾನವ ಜನಾಂಗದ ಬೌದ್ಧಿಕ ವಿಕಸನವು ಇನ್ನೂ ಹದಿಹರೆಯದ ಹೊಸ್ತಿಲಲ್ಲಿರುವ ಹಾಗೆ ನಮಗೆ ಕಾಣುತ್ತದೆ. ನಮ್ಮ ಬೌದ್ಧಿಕ ಮಟ್ಟದಲ್ಲಿನ ಕ್ಷಮತೆಯ ಅಂತಿಮ ಘಟ್ಟವನ್ನು ತಲುಪಲು ಇನ್ನೂ ಬಹು ಕಾಲ ಶ್ರಮಿಸಬೇಕಾಗಿದೆ. ಈ ರೀತಿಯ ಅವಲೋಕನ ನಮ್ಮ ವೈರುಧ್ಯಗಳು, ಸಣ್ಣತನಗಳು ಮತ್ತು ನಮ್ಮ

ಆಲೋಚನಾ ಕ್ರಮದಲ್ಲಿನ ಕೊರತೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಬಹುದು. ಈ ಅರಿವಿನ ದಿಕ್ಕಿನಲ್ಲಿ ನೋಡಿದರೆ ಮಾನವ ಜನಾಂಗದ ವಿಕಸನ ಹಾದಿಯಲ್ಲಿ ಅತಿ ಹೆಚ್ಚು ಶೋಷಣೆಗೆ ಒಳಗಾಗಿರುವ ಜೀವಿಯಾಗಿ ಮಹಿಳೆ ನಮಗೆ ಕಾಣುತ್ತಾಳೆ. ಇಲ್ಲಿ ಸರಕು ಸಂಸ್ಕೃತಿಯ ಪ್ರಭಾವವನ್ನೂ ನಾವು ಅವಲೋಕಿಸಬಹುದು.

ನಾಗರೀಕತೆಯ ವಿಕಸನದ ದಾರಿಗಳಲ್ಲಿ ಒಂದಾದ ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸಿರುವ ಸರಕು ಸಂಸ್ಕೃತಿಯ ಅಧ್ಯಯನ ಕೆಲವು ಒಳನೋಟಗಳನ್ನು ನೀಡಬಲ್ಲದು. ಮಹಿಳೆಯನ್ನು ಒಂದು 'ಸರಕಾಗಿ' ನೋಡುವ ದೃಷ್ಟಿ ಈ ವ್ಯವಸ್ಥೆಯಿಂದ ಉತ್ಪತ್ತಿಯಾಗಿದೆ ಎಂದು ಅನಿಸಿದರೂ ಈ ಪರಿಕಲ್ಪನೆ ಇನ್ನೂ ಹಿಂದಿನಿಂದಲೂ ಇದ್ದಿರಬಹುದು. ವ್ಯವಸಾಯ ಪದ್ಧತಿಯ ಆಗಮನದೊಂದಿಗೆ ಹುಟ್ಟಿಕೊಂಡ 'ಆಸ್ತಿ' ಎಂಬ ಪರಿಕಲ್ಪನೆ ಮಹಿಳೆಯನ್ನೂ ಒಂದು ಆಸ್ತಿಯನ್ನಾಗಿಸಿದ್ದನ್ನು ನಾವು ನೋಡಬಹುದು. ಆಧುನಿಕ ಸಮಾಜ ಮಾರುಕಟ್ಟೆಗಳ ಮೂಲಕ ತನ್ನ ಸರಕು ಸಂಸ್ಕೃತಿಯ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲಾರಂಭಿಸಿದಾಗ ಇದರ ಪ್ರಭಾವವು ಮಹಿಳೆಯನ್ನೂ ಆವರಿಸಿದೆ. ಮಹಿಳೆಯನ್ನು ಒಂದು ಸರಕಾಗಿ ನೋಡಿದಾಗ ಅವಳು ಒಂದು ಉತ್ಪನ್ನವಾಗುತ್ತಾಳೆ. ಹಾಗಾಗಿ ಅವಳು ಇತರರಿಗೆ ಸೇವೆಗಳನ್ನು ನೀಡುವುದಕ್ಕಾಗಿಯೇ ಇರುವ ಉತ್ಪನ್ನವಾಗುತ್ತಾಳೆ ಅಥವಾ ಅವಳು ರಂಜನೆಗಾಗಿ ಸುಖದ ಅನುಭವಗಳನ್ನು ಪಡೆಯಬಹುದಾದ ಸರಕಾಗುತ್ತಾಳೆ.

ಇದರ ಇನ್ನೊಂದು ಆಯಾಮವೆಂದರೆ ಆಧುನಿಕ ಬದುಕಿನಲ್ಲಿ ಹೆಣ್ಣು ಕೊಳ್ಳುಬಾಕಿಯಾಗಿದ್ದು ಆಕೆಯು ಸರಕಿನ ಹಿಂದೆ ಬಿದ್ದಿದ್ದಾಳೆ ಎಂಬುದು. ಹೀಗೆ ಹೆಣ್ಣನ್ನು ಒಂದು ಸರಕಾಗಿಯೂ ಮತ್ತು ಅದೇ ಹೆಣ್ಣನ್ನು ಕೊಳ್ಳುಬಾಕಿಯಾಗಿಯೂ ಈ ಪಿತೃಪ್ರಧಾನ ಸಮಾಜವು ವರ್ಣಿಸುತ್ತದೆ. ಈ ದ್ವಂದ್ವವನ್ನು ನಾವು ಅರ್ಥಮಾಡಿಕೊಳ್ಳುವ ಅವಶ್ಯಕತೆಯಿದೆ. ಸರಕು ಸಂಸ್ಕೃತಿ ಮಹಿಳೆಯ ಮೇಲೆ ಬೀರುತ್ತಿರುವ ಪ್ರಭಾವ ಮತ್ತು ಮಹಿಳೆಯೇ ಸರಕಾಗಿರುವ ವಿದ್ಯಮಾನಗಳಿಗೆ ಹಲವು ಆಯಾಮಗಳಿವೆ. ಅವುಗಳಲ್ಲಿ ಹೆಣ್ಣಿನ ದೇಹವನ್ನು ಒಂದು ಸರಕಿನ ರೀತಿಯಲ್ಲಿ ಹೇಗೆ ನಾವು ಬಳಸಿಕೊಂಡಿದ್ದೇವೆ ಎಂಬ ಆಯಾಮದ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

ಇತಿಹಾಸದುದ್ದಕ್ಕೂ ಹೆಣ್ಣಿನ ದೇಹವನ್ನು ಸರಕಿನ ರೀತಿಯಲ್ಲಿ ಪರಿಭಾವಿಸುವುದನ್ನು ನಾವು ಕಾಣಬಹುದು. ಕೆಲವು ಉದಾಹರಣೆಗಳನ್ನು ನೋಡೋಣ. 19ನೇ ಶತಮಾನದ ದಕ್ಷಿಣ ಆಫ್ರಿಕಾದಲ್ಲಿ ಯೂರೋಪಿನ

ಬಿಳಿಯ ವ್ಯಾಪಾರಿಯೊಬ್ಬ ಆ ನೆಲದ ಹೆಣ್ಣುಮಕ್ಕಳು ಕೃಷಿ ಭೂಮಿಯಲ್ಲಿ ದುಡಿಯುವುದನ್ನು ನೋಡಿ ಚಕಿತನಾಗುತ್ತಾನೆ. ದೃಢ ದೇಹಾಕೃತಿಯ ಹೆಣ್ಣು ಸೊಂಟ ಬಗ್ಗಿಸಿ ಭೂಮಿಯಲ್ಲಿ ದುಡಿಯುವಾಗ ಆರು ಕಾಲಿನ ಪ್ರಾಣಿಯೊಂದು ನಡೆದಾಡುತ್ತಿದೆಯೆನೋ ಎಂಬಂತೆ ದೂರಕ್ಕೆ ಅವನಿಗೆ ಕಾಣಿಸುತ್ತದೆಯಂತೆ. ಆಫ್ರಿಕಾ ಹೆಣ್ಣಿನ ಸ್ತನಗಳು ದೂರದಿಂದ ನೋಡಲು ಎರಡು ಕಾಲುಗಳಂತೆ ಕಂಡವಂತೆ. ಇಷ್ಟು ಬಲಿಷ್ಟವಾದ ಜೀವಿಯಿಂದ ನಮ್ಮ ಕೃಷಿ ಭೂಮಿಯಲ್ಲಿ ದುಡಿಸಿಕೊಳ್ಳಬಹುದು ಎಂದು ಅಂದಾಜಿಸಿದ ಆತನ ಆಲೋಚನೆ ಗುಲಾಮಗಿರಿಗೆ ನಾಂದಿಯಾಯಿತು ಎನ್ನಲಾಗುತ್ತದೆ. ಇದರರ್ಥ ಹೆಣ್ಣನ್ನು ಒಂದು ದೇಹವಿರುವ ಜೀವಿ, ದುಡಿಮೆಗೆ ಬೇಕಾಗುವಷ್ಟು ಬುದ್ಧಿಶಕ್ತಿಯಿರುವ ಒಂದು ಯಂತ್ರದ ರೀತಿ ನೋಡಲಾಗಿದೆ. ಗುಲಾಮಗಿರಿಗೆ ಪುರುಷರೂ ಶೋಷಣೆಗೆ ಒಳಗಾದರೂ ಹೆಣ್ಣು ತನ್ನ ಲಿಂಗಕ್ಕೆ ಅಂಟಿಕೊಂಡಿರುವ ಅಸಮಾನತೆಯಿಂದ ಇನ್ನಷ್ಟು ಶೋಷಣೆಗೆ ಒಳಗಾಗಿರುವುದು ಸತ್ಯ.

ಇನ್ನೊಂದು ಐತಿಹಾಸಿಕ ಉದಾಹರಣೆ 19ನೇ ಶತಮಾನದ ಸಾರಾ ಬಾರ್ಟ್‌ಮನ್ ಎಂಬ ಮಹಿಳೆಯ ಕುರಿತಾಗಿ ನೋಡಬಹುದು. ಸಾರಾ ಬಾರ್ಟ್‌ಮನ್ ಎಂಬ ದಕ್ಷಿಣ ಆಫ್ರಿಕಾದ ಒಂದು ಬುಡಕಟ್ಟು ಜನಾಂಗದ ಮಹಿಳೆಯನ್ನು ಫ್ರಾನ್ಸ್‌ನಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿಡಲಾಗಿತ್ತು. ಆಕೆಯ ನಿತಂಬಗಳು ಅತ್ಯಂತ ದೊಡ್ಡ ಗಾತ್ರದ್ದಾಗಿದ್ದರಿಂದ ಯೂರೋಪಿನ ಜನರು ಕುತೂಹಲಕ್ಕಾಗಿ ನೋಡಲು ಬರುತ್ತಿದ್ದರು. ಆಕೆಯ ನಿಧನದ ನಂತರವೂ ಆಕೆಯ ದೇಹವನ್ನು ಮ್ಯೂಸಿಯಮ್‌ನಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು. ಆಕೆಯ ದೇಹದ ಪಳೆಯುಳಿಕೆಗಳನ್ನು ದಕ್ಷಿಣ ಆಫ್ರಿಕಾ ದೇಶಕ್ಕೆ ವಾಪಸ್ಸು ನೀಡುವಂತೆ ನೆಲ್ಸನ್ ಮಂಡೇಲಾ ಅವರು 1994ರಲ್ಲಿ ಫ್ರಾನ್ಸ್ ದೇಶಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿಗೆ 2002 ರಲ್ಲಿ ಸಮ್ಮತಿ ದೊರಕಿ ಆಕೆಯ ದೇಹದ ಪಳೆಯುಳಿಕೆಗಳನ್ನು ಆಕೆಯ ಹುಟ್ಟೂರಾದ ಗಾಮ್ಟೂಸ್ ವ್ಯಾಲಿಯಲ್ಲಿ ಹೂಳಲಾಯಿತು. ಒಂದು ಹೆಣ್ಣನ್ನು ಪ್ರಾಣಿಯ ರೀತಿಯಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿಟ್ಟು ಪ್ರೇಕ್ಷಕರ ಲೈಂಗಿಕ ಆಸೆಗಳಿಂದ ಹಣ ಮಾಡಿಕೊಂಡ ಈ ನಿದರ್ಶನ ಸರಕು ಸಂಸ್ಕೃತಿಯಲ್ಲಿ ಹೆಣ್ಣು ಸರಕಾಗಿದ್ದನ್ನು ತೋರಿಸುತ್ತದೆ.

ಅಮೇರಿಕಾದ 'ಜಾಬ್' ಎನ್ನುವ ಒಂದು ಸಿಗರೇಟ್ ಕಂಪನಿ ಸಿಗರೇಟ್ ಮಾರಾಟವನ್ನು ಉತ್ತೇಜನಗೊಳಿಸಲು ಜಾಹಿರಾತುಗಳನ್ನು ಬಳಸಿಕೊಂಡರೂ ಸಿಗರೇಟ್ ಮಾರಾಟ ಅಷ್ಟೇನು ಹೆಚ್ಚಾಗುವುದಿಲ್ಲ. ಆಗ ಜಾಹೀರಾತುಗಳನ್ನು ಸೃಷ್ಟಿಸುತ್ತಿದ್ದ ಅಲ್ಫಾಂಜೆ ಮ್ಯೂಚಾ ಎಂಬ ಕಲಾವಿದ 1896ರಲ್ಲಿ ಜಾಹಿರಾತಿನ ಪೋಸ್ಟರಿಗೆ ಹೆಣ್ಣನ್ನು ಬಳಸಲು ನಿರ್ಧರಿಸುತ್ತಾನೆ. ಆಗಿನ ಕಾಲದ ಹೆಣ್ಣಿನ ಪರಿಸ್ಥಿತಿಗೆ

ಆಧುನಿಕತೆಯ ಸೋಗನ್ನು ನೀಡಲು ಆಕೆಯ ಬೆರಳುಗಳಿಗೆ ಸಿಗರೆಟನ್ನು ಆಲ್ಫಾಂಜೆ ನೀಡುತ್ತಾನೆ. ಒಮ್ಮೆಯೇ ಅವಳು ಸಿಗರೇಟ್ ಸೇದುವ ಕ್ರಾಂತಿಕಾರಿ ಮಹಿಳೆಯಾಗಿ ಜನರನ್ನು ಸೆಳೆಯುವ ವಸ್ತುವಾಗಿಸುತ್ತಾನೆ. ಈ ಸಿಗರೇಟ್ ಜಾಹೀರಾತಿನಿಂದ ತಂಬಾಕಿನ ವ್ಯಾಪಾರವೂ ಉತ್ತೇಜನಗೊಳ್ಳುತ್ತದೆ. ಒಂದು ಹೆಣ್ಣಿನ ದೈಹಿಕ ಸೌಂದರ್ಯದ ಜೊತೆಗೆ ಆಕೆಯ ವ್ಯಕ್ತಿತ್ವಕ್ಕೆ ಸಮಾಜದ ಸಿದ್ಧಮಾದರಿಯ ವಿರುದ್ಧ ಬಂಡಾಯವೇಳುವ ಛಾಯೆಯನ್ನು ವ್ಯಾಪಾರದ ಲಾಭಕ್ಕೋಸ್ಕರ ಉಪಯೋಗಿಸಿಕೊಳ್ಳಲಾಯಿತು. ಆರೋಗ್ಯಕ್ಕೆ ಹಾನಿಕಾರಕ ತಂಬಾಕನ್ನು ಮಾರುಕಟ್ಟೆಯು ಸಮಾಜದ ಮೇಲೆ ಹೇರುವ ಕೃತ್ಯದಲ್ಲೂ ಹೆಣ್ಣೇ ಬೇಕಾಯಿತು. ಹೆಣ್ಣಿನ ಆರ್ದ್ರತೆಯನ್ನು ಜಾಹೀರಾತಿನಲ್ಲಿ ಬಳಸಿ ಸಿಗರೇಟ್ ಸೇದುವವರಲ್ಲಿ ಒಂದು ಬಗೆಯ ಸುರಕ್ಷಿತ ಭಾವವನ್ನು ತಂದುಕೊಡಲಾಯಿತು.

ಈಗಿನ ಕಾಲಘಟ್ಟದಲ್ಲೂ ಹೆಣ್ಣಿನ ದೇಹದ ಮೂಲಕ ಲಾಭ ಮಾಡಿಕೊಳ್ಳುವ ಸಂದರ್ಭಗಳು ಬೇರೆ ಬೇರೆ ರೂಪಗಳಲ್ಲಿ ಸಮಾಜದಲ್ಲಿ ಹಾಸುಹೊಕ್ಕಿವೆ. ಹಲವಾರು ದೇಶಗಳಲ್ಲಿ ಆಕೆಯ ದೇಹವನ್ನು ಶೋಷಣೆ ಮಾಡುವ ವೇಶ್ಯಾವಾಟಿಕೆ ಎಷ್ಟು ಲಾಭದಾಯಕವಾಗಿದೆಯೆಂದರೆ ಉದಾಹರಣೆಗೆ ಥೈಲ್ಯಾಂಡಿನ ದೇಶದ ಜಿಡಿಪಿಯ 10% ರಷ್ಟು ಪಾಲುದಾರಿಕೆ ಆ ದೇಶದ ವೇಶ್ಯಾವಾಟಿಕೆ ಚಟುವಟಿಕೆಗಳಿಗಿದೆ. ಹಾಗೆಯೇ ಯಾವುದೇ ದೇಶದ ಪ್ರಗತಿಯ ಸಂಕೇತವಾಗಿ ನಾವು ಬಳಸುವ ಅತಿ ಮುಖ್ಯ ಮಾನದಂಡಗಳು ಹೆಣ್ಣಿನ ದೈಹಿಕ ಆರೋಗ್ಯಕ್ಕೆ ಸಂಬಂಧಿಸಿವೆ. ಉದಾಹರಣೆಗೆ, ತಾಯಿಯ ಮರಣ ಪ್ರಮಾಣ, ಶಿಶು ಮರಣ ಪ್ರಮಾಣ ಇತ್ಯಾದಿ ಮಾನವ ಅಭಿವೃದ್ಧಿ ಸೂಚ್ಯಾಂಕಗಳು ಹೆಣ್ಣಿನ ಮೇಲೆಯೇ ಅವಲಂಬಿಸಿದೆ.

ಹಾಗೆಯೇ ಹೆಣ್ಣು ಸರಕು ಸಂಸ್ಕೃತಿಯ ಒಂದು ಭಾಗವಾಗಿ ಮತ್ತೊಬ್ಬ ಹೆಣ್ಣನ್ನು ಸರಕಿನ ರೀತಿಯಲ್ಲಿ ಬಳಸಿಕೊಳ್ಳುವುದನ್ನೂ ನಾವು ಕಾಣುತ್ತೇವೆ. ಮೇಲ್ಜಾತಿ/ಮೇಲ್ವರ್ಗದ ಹೆಣ್ಣು ಕೆಳಜಾತಿ/ಕೆಳವರ್ಗದ ಹೆಣ್ಣನ್ನು ಬಳಸಿಕೊಳ್ಳುವುದಾಗಲಿ ಅಥವಾ ಮಾರುಕಟ್ಟೆಯ ಜಾಲಕ್ಕೆ ಬಿದ್ದಿರುವ ಕೊಳ್ಳುಬಾಕ ಹೆಣ್ಣೇ ಆಗಿಸಿರುವುದನ್ನೂ ನೋಡಿದಾಗ ಈ ವಿದ್ಯಮಾನಕ್ಕಿರುವ ಕಾರಣಗಳನ್ನು ಅವಲೋಕನ ಮಾಡಬೇಕಾಗುತ್ತದೆ.

ಸರಕು ಸಂಸ್ಕೃತಿಯು ಸೃಷ್ಟಿಸುವ ಸಾಮಾಜಿಕ ಮತ್ತು ಮಾನಸಿಕ ಲೋಕದ ವಿಶಿಷ್ಟತೆಯೆಂದರೆ ಅದು ನಮ್ಮನ್ನು ನಮ್ಮಿಂದ ಪರಕೀಯಗೊಳಿಸುವುದು ಆಗಿದೆ. ನಾನು ಒಂದು ವ್ಯಕ್ತಿಯಾಗಿ ನನ್ನನ್ನು ನಾನು ಅರಿಯಲು ಸಾಧ್ಯವಾದರೆ ನನ್ನ

ಅಭಿವ್ಯಕ್ತಿಗಳ ಅರ್ಥ ನಮಗೆ ತಿಳಿಯುತ್ತದೆ. ಸಮಾಜದಲ್ಲಿ ನನ್ನ ಪಾಲುದಾರಿಕೆಗೆ ನನ್ನದೇ ಆದ ಅಸ್ಮಿತೆಯಿದೆಯೋ ಅಥವಾ ಅದು ಬೇರೊಂದು ವಿದ್ಯಮಾನ ಅಥವಾ ಆ ವಿದ್ಯಮಾನದ ಹಿಂದಿರುವ ಕೈಗಳ ಪ್ರಭಾವದಿಂದ ಸೇರ್ಪಡೆಯಾಗಿದೆಯೋ ತಿಳಿಯದಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಈ ವಿದ್ಯಮಾನಗಳು ನಮಗೆ ಅರಿವಿಲ್ಲದಂತೆಯೇ ನಡೆಯುತ್ತಿರುತ್ತವೆ. ಏಕೆಂದರೆ ನನ್ನನ್ನು ನಾನು ತಿಳಿಯಲು ಇಲ್ಲದಿರುವ ಅವಕಾಶ. ಪ್ರಗತಿಪರ ದೇಶಗಳಲ್ಲಿ ಶೈಕ್ಷಣಿಕ ಅವಕಾಶಗಳಿಂದ ಪ್ರಗತಿ ಹೊಂದಿದ ಮಹಿಳೆ ಆರ್ಥಿಕ ಸ್ವಾತಂತ್ರದಿಂದಷ್ಟೇ ತನ್ನ ಬಗೆಗಿನ ಅರಿವನ್ನು ಪಡೆದಿದ್ದಾಳೆ ಎನ್ನಲಾಗದು.

ಬಂಡವಾಳಶಾಹಿ ವ್ಯವಸ್ಥೆಯು ಮನುಷ್ಯ ಜೀವನವನ್ನು ಮಾರುಕಟ್ಟೆಯಾಗಿ ರೂಪಾಂತರಗೊಳಿಸಿರುವುದರಿಂದ ಇದರಲ್ಲಿ ಅತಿ ಹೆಚ್ಚು ಭ್ರಮೆಗೆ ಸಿಲುಕಿರುವುದು ಹೆಣ್ಣೇ. ಈ ಭ್ರಮೆಯ ಸೃಷ್ಟಿಯಿಂದ ಪಿತೃಪ್ರಧಾನ ಸಮಾಜದ ಮಾರುಕಟ್ಟೆಗೆ ಲಾಭವಿದೆ. ಪಿತೃಪ್ರಧಾನ ಸಮಾಜವು ಹೆಣ್ಣಿಗೆ ಅಧಿಕಾರದಲ್ಲಿ ಪಾಲುದಾರಿಕೆಯನ್ನು ನೀಡಲು ಹಿಂಜರಿಯುತ್ತದೆ. ತನ್ನ ಅಧಿಕಾರವನ್ನು ಹೀಗೆಯೇ ಭದ್ರ ಪಡಿಸಿಕೊಳ್ಳುವ ಪಿತೃಪ್ರಧಾನ ಮನಸ್ಥಿತಿಗಳು ಹೆಣ್ಣನ್ನು ವೈಚಾರಿಕ ಅರಿವಿನ ಕಡೆಗೆ ಒಯ್ಯಲು ಇಷ್ಟಪಡುವುದಿಲ್ಲ.

ಈ ಚಕ್ರವ್ಯೂಹದಲ್ಲಿ ಮಹಿಳೆ ತನಗೆ ತಾನೇ ಪರಕೀಯಳಾಗಿದ್ದಾಳೆ. ಹಾಗಾಗಿ ಅವಳನ್ನು ಹೇಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಅರಿಯುವ ವೈಚಾರಿಕ ಕ್ಷಮತೆಯ ಕೊರತೆ ಆಕೆಗಿದೆ. ಈ ಕೊರತೆಯನ್ನು ಆಕೆಯೇ ನೀಗಿಸಿಕೊಳ್ಳಬೇಕಾಗಿದೆ. ಪೋಲಂಕಿ ರಾಮಮೂರ್ತಿಯವರು 'ರಾಮಾಯಣ'ವನ್ನು 'ಸೀತಾಯಣ' ಎನ್ನಬೇಕು ಎಂದು ವಿಚಾರ ಮಾಡುವ ಮತ್ತು ದಾಖಲಿಸುವ ವೈಚಾರಿಕತೆ ಒಬ್ಬ ಹೆಣ್ಣಿಗೆ ಆ ಕಾಲದಲ್ಲಿ ಏಕೆ ಮೂಡಲಿಲ್ಲ ಎನ್ನುವ ರೀತಿಯ ಪ್ರಶ್ನೆಗಳು ಮುಖ್ಯವಾಗುತ್ತವೆ. ಹಲವು ಹೊಸ ರೂಪಗಳ ಸೀತಾಯಣಗಳು ನಮ್ಮ ನಡುವೆ ಈಗಲೂ ಇವೆ.  ಈ ನಿಟ್ಟಿನಲ್ಲಿ ಶೈಕ್ಷಣಿಕ ಅರಿವಿನ ಜೊತೆಗೆ ಸಾರ್ವಜನಿಕ ಚರ್ಚೆ ಮತ್ತು ಸಂವಾದಗಳು ಈ ವಿಚಾರಗಳನ್ನು ಹೆಚ್ಚು ಮುನ್ನಲೆಗೆ ತರಬೇಕಾಗಿದೆ.

## ಪ್ರತಿಕ್ರಿಯೆಗಳು :

### ಸರಕು ಸಂಸ್ಕೃತಿ ಮತ್ತು ಮಹಿಳೆ

ಮಂಜುಳ ಸುನಿಲ್

ಮಹಿಳೆಯನ್ನು ಒಂದು ವಸ್ತುವಾಗಿ, ಸರಕು ವಸ್ತುವನ್ನಾಗಿ ನೋಡುವುದು,ವ್ಯಾಪಾರೀಕರಣದ ನೆಲೆಯಲ್ಲಿ ನೋಡುವುದು, ಇದೇನು ಇತ್ತೀಚಿಗಿನ ಬೆಳವಣಿಗೆಯಲ್ಲ. ಮನುಕುಲವು ಆದಿಮ ಸಮಾಜದಿಂದ ನಾಗರೀಕರಣದತ್ತ ಹೊರಳುವ ಸಂದರ್ಭದಲ್ಲಿ, ಯಾವಾಗ ದನ, ಕರು, ಕುದುರೆ, ಶಸ್ತ್ರ, ಅಸ್ತ್ರ, ಒಡವೆ, ಭೂಮಿಗಳ ಪಟ್ಟಿಯಲ್ಲಿ ಅಂದರೆ ಆಸ್ತಿಯ ಪಟ್ಟಿಯಲ್ಲಿ ಸೇರಿಕೊಂಡಳೋ, ಆಗಲೇ ಈ ಸರಕು ಸಂಸ್ಕೃತಿಯ ಉಗಮವಾಯಿತೆಂದು ಹೇಳಬಹುದು. ಅದಕ್ಕೆ ಸಮಾಜಶಾಸ್ತ್ರಜ್ಞ ಏಂಗೇಲ್ಸ್‌ರವರು ಮಾತೃಮೂಲ ಸಂಸ್ಕೃತಿಯಿಂದ ಪುರುಷ ಪ್ರಧಾನ ಸಂಸ್ಕೃತಿಗೆ ಆದ ಈ ಪಲ್ಲಟವನ್ನು ಮನುಕುಲದ ಇತಿಹಾಸದ ಮಹಾ ದುರಂತ ಎಂದು ಹೇಳಿದ್ದಾರೆ.

ನಮ್ಮ ಆಡು ಮಾತಿನಲ್ಲೇ ನಾವು ಗಮನಿಸಬಹುದು, " ದಾನದಲ್ಲೇ ಮಹಾ ದಾನ ಕನ್ಯಾದಾನ" ಕನ್ಯೆಯನ್ನು ದಾನ ಮಾಡಲು ಅವಳೇನು ವಸ್ತುವೇ? ಅಷ್ಟೇ ಏಕೆ? ಹುಡುಗಿಯನ್ನು ಯಾವೂರಿಗೆ ಕೊಟ್ಟದ್ದು, ಎಲ್ಲಿಗೆ ಕೊಟ್ಟದ್ದು ಹೀಗೆ..ಸರಕು ಸಂಸ್ಕೃತಿಯ ಎಳೆಗಳನ್ನು, ಕುರುಹುಗಳನ್ನು ಕಾಣಬಹದು.

ಮತ್ತೆ ಸುಮಾರು 90ರ ದಶಕದಲ್ಲಿ ಜಾಗತೀಕರಣ ತನ್ನ ಕಬಂಧಬಾಹು ಚಾಚಿದಾಗ, ತೆರೆದ ಮಾರುಕಟ್ಟೆಗೆ ಜಗತ್ತು ತೆರೆದುಕೊಂಡಾಗ, ಮಹಿಳೆ ಸರಕಾಗಿ ಪರಿವರ್ತಿತವಾಗಿ ಬಿಟ್ಟಿದ್ದಳು. ನಾವು ಆಗಿನ ಬಾಲಿವುಡ್ ಹಾಡುಗಳನ್ನು ಗಮನಿಸಿದರೆ ಇದಕ್ಕೆ ನಿದರ್ಶನಗಳು ಸಿಗುತ್ತದೆ. "ತೂ ಚೀಸ್ ಬಡೀ ಹೇ ಮಸ್ತ್ ಮಸ್ತ್..." ಅಥವಾ " ಕ್ಯಾ ಚೀಸ್ ಹೋ ತುಮ್ಹೆ ಮಾಲೂಮ್ ನಹೀ" ಹೀಗೆ ಹಾಡುಗಳ ಪಟ್ಟಿಗಳೇ ಸಿಗಬಹುದು. ಕೇಳಲು ಕ್ಯಾಚಿ ಆಗಿ, ರಮ್ಯವಾಗಿದ್ದು, ನೀನು ಎಂತಹ ಅಮೂಲ್ಯ ವಸ್ತುವೆಂದು ನಿನಗೆ ಗೊತ್ತಿಲ್ಲವೆಂದು ನಂಬಿಸಿ ಬಿಟ್ಟಿದ್ದು, ಹಾಗೆಯೇ ಮಹಿಳೆ ತಾನು ಸರಕು ಆಗಿ ಪರಿವರ್ತಿತವಾದುದ್ದನ್ನು ತಣ್ಣಗೆ ಒಪ್ಪಿಕೊಂಡು ಬಿಟ್ಟ ಹಾಗೆ ಕಾಣಿಸುತ್ತದೆ.

ಯುವಜನರರೊಂದಿಗೆ ಕೆಲಸ ಮಾಡುತ್ತಾ ಯುವಜನರ ಸಮಸ್ಯೆಗಳಿಗೆ

ಉತ್ತರ ಹುಡುಕುವ, ಅವರನ್ನು ಸಶಕ್ತರನ್ನಾಗಿಸುವ ಪ್ರಕ್ರಿಯೆಯಲ್ಲಿರುವ ನನ್ನ ವೃತ್ತಿಯಲ್ಲಿ ಮಹಿಳೆ ತಾನು ಸರಕ್ಕಾಗಿ ಪರಿವರ್ತಿತವಾದುದ್ದನ್ನು, ಒಪ್ಪಿಕೊಂಡಿರುವುದಕ್ಕೆ ಹಲವಾರು ನೂರಾರು ಉದಾಹರಣೆಗಳು ನನ್ನ ಗಮನಕ್ಕೆ ಬಂದಿದೆ. ಒಮ್ಮೆ ವಿದ್ಯಾರ್ಥಿನಿಯೊರ್ವಳು ತನಗೆ ಇನ್ಸ್ಟಾಗ್ರಾಂ ನಲ್ಲಿ ಓರ್ವ ಹುಡುಗ ಪರಿಚಯವಾಗಿದ್ದು, ತನ್ನ ಪ್ರೇಮ ಹೇಗೆ ಗೆಳತನದಿಂದ ಆರಂಭವಾಗಿ ಈಗ ಪ್ರೇಮ ಅಂಕುರವಾಗಿದೆ ಎಂಬುದನ್ನು ಆಕೆ ತುಂಬಾ ಖುಶಿಯಾಗಿ ಹಂಚಿಕೊಂಡಳು. ಹೀಗೆ ದಿನಾ ಅಪ್ಡೇಟ್ ಮಾಡುತ್ತಾ ಒಂದು ದಿನ ಹೇಳಿದಳು, "ಈವರೆಗೆ ನಾವು ಮುಖತಃ ಭೇಟಿಯಾಗಿಲ್ಲ. ನಾಡಿದ್ದು ನಮ್ಮ ಡೇಟ್ ಇದೆ," ಅಂತ ಬಹಳ ಥ್ರಿಲ್ ಆಗಿದ್ದಳು. ಮತ್ತೆ ಸುಮಾರು ದಿನಗಳ ನಂತರ ಮತ್ತೆ ಕಚೇರಿಗೆ ಬಂದವಳೇ "ಮೇಡಂ, ನಮ್ಮ ಮೊದಲ ಡೇಟ್ ನಂತರ ಆತ ನನ್ನನ್ನು ಸಂಪರ್ಕಿಸಲಿಲ್ಲ. ನಾನು ಸ್ವಲ್ಪ ದಪ್ಪಗೆ, ಮತ್ತು ಕಪ್ಪು ಇದ್ದೇನಲ್ಲಾ ಅದಕ್ಕೆ ಅವನಿಗೆ ಇಷ್ಟವಾಗಲಿಲ್ಲವೇನೋ? ಸಣ್ಣಗಾಗಲು ಏನು ಮಾಡುವುದು?" ಎಂದು ನೋವಿನಿಂದ ಹಂಚಿದಳು. ತಾನು ಸಣ್ಣಗೆ, ತೆಳ್ಳಗೆ ಬೆಳ್ಳಗೆ ಇದ್ದರೇ ಚೆಂದ, ಎನ್ನುವ ಕಲ್ಪನೆ, ಈಕೆ ತಲೆಯಲ್ಲಿ ಯಾರು ತುಂಬಿದ್ದರು? ಚೆಂದದ ಪರಿಕಲ್ಪನೆಯ ಹಿಂದೆ ಹೆಣ್ಣು ಹೀಗಿರಬೇಕು. ಹಾಗಿದ್ದಾಗ ಮಾತ್ರ ಅವಳಿಗೆ ಬೇಡಿಕೆ, ಇಲ್ಲವಾದರೆ ಪ್ರೇಮಕ್ಕೂ ಲಾಯಕ್ಕಲ್ಲ, ಈ ಚೆಂದದ ಪರಿಕಲ್ಪನೆಯ ಹಿಂದಿರುವ ಸರಕು (ಕ್ರೀಮ್, ಜಿಮ್ಮು, ಫೇಸುವಾಶು, ಪೌಡರು, ಗ್ರೀನ್ ಟೀ) ಮಾರಾಟ ಸಂಸ್ಕೃತಿಗೂ ಅವಳನ್ನೇ ಸರಕ್ಕಾಗಿಸುವ, ದಾರಿಯಾಗಿಸಿರುವ ಪರಿಯೇ ಬಹಳ ಜಾಣತನದ್ದು ಮತ್ತೆ ಅಕ್ಷರಶಃ ಪುರುಷ ಪ್ರಧಾನ ಮನಸ್ಥಿತಿಯ ಪಡಿಯಚ್ಚು. ಹೌದು ಜಾಗತಿಕದ ಎಲ್ಲಾ ಮಾರುಕಟ್ಟೆ ತಂತ್ರಗಾರಿಕೆಯ ಹಿಂದೆ ಪುರುಷ ಪ್ರಧಾನ ಮನಸ್ಥಿತಿ ಇದೆ, ಅಥವಾ ಅದನ್ನು ಯಥಾವತ್ ಉಳಿಸಿಕೊಳ್ಳುವ ಯೋಚನೆಯಿದೆ.

ಮಹಿಳೆಯ ದೇಹದ ಅಳತೆ, ಬಣ್ಣ ಮಾತ್ರವಲ್ಲ ಆಕೆಯ ಆರೋಗ್ಯ, ಲೈಂಗಿಕತೆ, ಒಲವು, ಭಾವನೆಗಳನ್ನು ಕೂಡ ಸರಕು ಮನೋಭಾವದ ಮಾರುಕಟ್ಟೆ ನಿಯಂತ್ರಿಸುತ್ತದೆ. ಆಕೆಯ ಮಮತೆಯ, ಮಾತೃತ್ವ ಭಾವನೆಗಳು, ಮೌಲ್ಯಗಳು ಮದರ್ಸ್ ಡೇ ಆಗಿ, ಅಥವಾ ಇನ್ನಿತರ ಮಾರುಕಟ್ಟೆ ಆಗಿ ಮಾರ್ಪಾಡಾಗಿದೆ.

ಧರ್ಮ, ಶೀಲ, ಸೌಂದರ್ಯ, ಇವುಗಳ ಹೆಸರಿನಲ್ಲಿ ಸರಕು ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ, ಜವಬ್ದಾರಿಯನ್ನು ಹೆಣ್ಣುಮಕ್ಕಳಿಗೆ ಅವರಿಗೆ ಗೊತ್ತಾಗದಂತೆ ಹೆಣ್ಣು ಮಕ್ಕಳು ಒಪ್ಪಿಕೊಳ್ಳುವಂತೆ ಬಹಳ ಜಾಣತನದಿಂದ ಪುರುಷ ಪ್ರಧಾನ ವ್ಯವಸ್ಥೆ ಮಾಡಿದೆ. ಹಾಗಾಗಿ ಎಲ್ಲಿಯವರೆಗೆ ಪ್ರಜ್ಞಾಪೂರ್ವಕವಾಗಿ ವಿಶ್ಲೇಷಣಾತ್ಮಕ ನೋಟವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ

ಯುವಜನರು ಇದನ್ನು ಪ್ರಶ್ನಿಸುವುದಿಲ್ಲವೋ ಅಲ್ಲಿಯ ವರೆಗೆ ಸರಕು ಸಂಸ್ಕೃತಿಯು ನಮ್ಮ ನಡುವೆ ಇರುತ್ತದೆ. ಕೃತಕವಾದ ಸರಕು ಸಂಸ್ಕೃತಿಯ ಮೌಲ್ಯವನ್ನು ಒಡೆಯುವಂತಹ, ತಂತ್ರಗಾರಿಕೆಯನ್ನು ಹೆಣೆಯುವುದು, ಇಂತಹ ವಿಷಯನ್ನು ಚರ್ಚಿಸುವ, ಪ್ರಶ್ನಿಸುವ ಎಚ್ಚರಿಸುವ ಮನೋಭಾವ ಬೆಳೆಸುವ ಪರ್ಯಾಯ ಶಿಕ್ಷಣ ವ್ಯವಸ್ಥೆಯನ್ನು  ಕಟ್ಟುವ ಕೆಲಸಗಳು ಸದ್ಯದ ನಮ್ಮ ತುರ್ತು ಎಂದು ಹೇಳುತ್ತಾ ಇಂತಹ ಮಹಿಳಾ ಚಳುವಳಿಗಳು ನಮ್ಮನ್ನು ಚಿಂತನೆಗಳಿಗೆ ಹಚ್ಚಲು, ಪ್ರೇರೇಪಿಸಲು ಸಹಕಾರಿಯಾಗಲಿದೆ. ಎಂದು ಹೇಳುತ್ತಾ ಮಾತಾಡಲು ಅವಕಾಶ ಮಾಡಿಕೊಟ್ಟದಕ್ಕಾಗಿ ವಂದನೆಗಳು.

## ಹೊನ್ನು ಮಣ್ಣಿನಂತೆಯೇ ಹೆಣ್ಣು

ರಾಜೇಶ್ವರಿ ಜೋಶಿ

ವೈವಿಧ್ಯಮಯವಾದ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಸ್ಥಾನಮಾನ ಮಾತ್ರ ಒಂದೇ ತೆರನಾಗಿ ಇರುವುದು ಕಂಡುಬರುತ್ತದೆ. ಯಾವ ದೃಷ್ಟಿಕೋನದಿಂದ ನೋಡಿದರೂ ಅವಳನ್ನೊಬ್ಬ ಸ್ವತಂತ್ರ ವ್ಯಕ್ತಿಯಾಗಿ ಪರಿಗಣಿಸಿದ್ದು ಇಲ್ಲವೇ ಇಲ್ಲ ಎಂದು ಹೇಳಬಹುದೇನೊ. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣನ್ನು ಶಕ್ತಿ ದೇವತೆ, ವಿದ್ಯಾದೇವತೆ ಎಂದು ಆರಾಧಿಸುವುದೇನೋ ಹೌದು. ಆದರೆ ನಿಜ ಜೀವನದಲ್ಲಿ ಹೆಣ್ಣನ್ನು ಸರಕಾಗಿಯೋ, ಕೆಲಸ ಮಾಡುವ ಸಾಧನವಾಗಿಯೋ ಕಂಡದ್ದೇ ಜಾಸ್ತಿ. ಗ್ರಾಮೀಣ ಮಹಿಳೆಯರ, ಮಕ್ಕಳ ಜೊತೆಗೆ ಕೆಲಸ ಮಾಡುತ್ತಿರುವ ನಾನು ಹೆಣ್ಣಿನ ವಿಚಾರವಾಗಿ ಬೇರೆ ಬೇರೆ ಸಮುದಾಯಗಳಲ್ಲಿ ಕಂಡದ್ದನ್ನು, ಒಟ್ಟಾರೆಯಾಗಿ ನನ್ನ ಅನುಭವಕ್ಕೆ ಬಂದ ಕೆಲವು ವಿಚಾರಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುವೆ.

ನಾನು ತುಂಬ ಚಿಕ್ಕವಳಿರುವಾಗ ನಮ್ಮ ಮನೆಯ ಪಕ್ಕದಲ್ಲಿಯೇ ಒಂದು ಬಾಲ್ಯ ವಿವಾಹ ನಡೆದಿತ್ತು. ಬಾಲ್ಯ ವಿವಾಹ ಮಾಡುವುದು ಅಪರಾಧ ಎಂಬುದು ಕೂಡ ನನಗಾಗ ತಿಳಿದಿರಲಿಲ್ಲ. ವಿದ್ಯಾಭ್ಯಾಸಕ್ಕೆಂದು ಬೇರೆಕಡೆಗೆ ಹೋದ ನನಗೆ ಹಲವು ವರ್ಷಗಳ ನಂತರ ತಿಳಿದು ಬಂದದ್ದೇನೆಂದರೆ ಆ ಹುಡುಗಿ ಈಗ ಗಂಡನ ಮನೆಯಲ್ಲಿ ಇರುವುದಿಲ್ಲ ಎಂಬುದು. ಕಾರಣ ಕೇಳಿದಾಗ ಗೊತ್ತಾಗಿದ್ದು, ಆ

ಹುಡುಗಿಗೆ ಸಾಕಷ್ಟು ಗೋಡಂಬಿ, ಬದಾಮಿನಂಥ ಪೌಷ್ಟಿಕ ತಿನಿಸು ಕೊಟ್ಟರೂ ಅವಳು ಇನ್ನೂ ದೊಡ್ಡವಳಾಗಿಲ್ಲ. ಅವನೋ ಹರೆಯಕ್ಕೆ ಬಂದವ, ಅವನಿಗೊಂದು ಹೆಣ್ಣು ಬೇಕಲ್ಲ, ಅದಕ್ಕೆ ಬೇರೆ ಹೆಣ್ಣಿನ ಜೊತೆಗೆ ಇರುವ ವ್ಯವಸ್ಥೆ ಮಾಡಿದ್ದಾರೆ ಎಂಬ ವಿಚಾರ. ಅವರಿಗೆ ತಮ್ಮ ಮಗನ ದೈಹಿಕ ಬಯಕೆಗಳನ್ನು ಪೂರೈಸುವ ಒಂದು ಸಾಧನ ಬೇಕಾಗಿತ್ತೇ ಹೊರತು, ಒಬ್ಬ ಜೀವನ ಸಂಗಾತಿಯೋ, ಮನೆಯ ಸೊಸೆಯಾಗಿಯೋ ಅಲ್ಲ.

ವೈದಿಕ ವಿವಾಹ ಪದ್ಧತಿಯಲ್ಲಿ ಮದುಮಗಳನ್ನು "ಸಮ್ರಾಜ್ಞ ಶ್ವಶುರೇ ಭವ, ಸಮ್ರಾಜ್ಞ ಶ್ವಸವಾಂ ಭವ." (ಅತ್ತೆ, ಮಾವ, ಮೈದುನ, ನಾದಿನಿ ಎಲ್ಲರಿಗೂ ನೀನು ಸಮ್ರಾಜ್ಞೆಯಂತಿರು) ಎಂದು ಆಶೀರ್ವದಿಸುವುದೇನೋ ಹೌದು. ಆದರೆ ಅವಳನ್ನು ಗಂಡಿಗೆ ಧಾರೆಯೆರೆದು ಕೊಟ್ಟು ಕನ್ಯಾದಾನ ಮಾಡುವ ಪ್ರಕ್ರಿಯೆಗೆ ಹೆಚ್ಚು ಮಹತ್ವ ಕೊಡಲಾಗುತ್ತದೆ. ಮಗಳನ್ನು ಅಮೂಲ್ಯವಾದ ಆಸ್ತಿಯೆಂದು ಪರಿಗಣಿಸಿ ಯೋಗ್ಯ ವರನನ್ನು ಹುಡುಕಿ ಅವನಿಗೆ ದಕ್ಷಿಣೆ (ವರದಕ್ಷಿಣೆ)ಯಿತ್ತು ಕನ್ಯೆಯನ್ನು ದಾನ ಮಾಡಲಾಗುತ್ತದೆ. ಇನ್ನು ಮದುವೆಯಾಗಿ ಅವಳು ಗಂಡನ ಮನೆಗೆ ಹೋದಳೆಂದರೆ ಅಲ್ಲಿ ಅವಳು ಅವರ ಸ್ವತ್ತು. ಅವರ ಪರವಾನಿಗೆ ಇಲ್ಲದೇ ಇವಳಿಗೆ ಓದು ಮುಂದುವರಿಸುವ, ಹೊರಗಡೆ ಕೆಲಸ ಮಾಡುವ ಮನಸ್ಸಿದ್ದರೂ ಮಾಡುವ ಹಾಗಿಲ್ಲ. ಮನೆಗೆಲಸವೇ ಅವಳ ಮುಖ್ಯ ಕೆಲಸವಾಗಿ ಬಿಡುತ್ತದೆ. ಮಗನಿಗೆ ತಕ್ಕ ಜೀವನ ಸಂಗಾತಿ ಬೇಕು ಅನ್ನುವುದಕ್ಕಿಂತ ಮನೆಗೆಲಸ, ಅಡುಗೆ ಸರಿಯಾಗಿ ಮಾಡುವಂಥ ಸೊಸೆ ಬರಬೇಕು ಎಂಬುದು ಗಂಡಿನ ಮನೆಯವರ ನಿರೀಕ್ಷೆಯಾಗಿರುತ್ತದೆ. ಒಟ್ಟಿನಲ್ಲಿ ಅವಳೊಂದು ಒಳ್ಳೆಯ ವಾಷಿಂಗ್ ಮಶೀನು, ಡಿಶ್ ವಾಷರ್ ತರಹ ಅಚ್ಚುಕಟ್ಟಾಗಿ ಕೆಲಸ ನಿಭಾಯಿಸುವವಳಾಗಿರಬೇಕು. ಜೊತೆಗೆ ಮಕ್ಕಳನ್ನು ಹೆತ್ತುಕೊಡುವ ಯಂತ್ರ ಕೂಡ.

ಹೆಣ್ಣುಮಕ್ಕಳು ಚಂದಕಾಣಬೇಕು, ಯಾವಾಗಲೂ ಅಲಂಕಾರ ಮಾಡಿಕೊಂಡಿರಬೇಕು ಎಂಬ ಭಾವನೆ ಕೆಲ ಸಮುದಾಯಗಳಲ್ಲಿ ತುಂಬ ಆಳವಾಗಿ ಬೇರೂರಿದೆ. ನನ್ನ ತಮ್ಮನ ಮಗಳ ಹಾಸ್ಟೆಲ್ ಸಂಗಾತಿಯೊಬ್ಬಳು ಅಲಮಾರಿನ ಒಂದು ಭಾಗವನ್ನು ಪೂರ್ತಿ ಅಲಂಕಾರಕ್ಕೆ ಬೇಕಾಗುವ ಕಾಸ್ಮೆಟಿಕ್ಸ್‌ಗಳಿಗೇ ಮೀಸಲಿಟ್ಟಿದ್ದಳಂತೆ. ಇಷ್ಟೆಲ್ಲ ಯಾಕೆ ತಂದದ್ದು ಎಂದು ಕೇಳಿದಾಗ ಅವಳಿಂದ ಬಂದ ಉತ್ತರ ಹಮಾರೆ ಯಹಾಂ ಲಡಕಿಯೋಂಕೋ ಹಮೇಶಾ ಸಜಧಜಕೆ ರೆಹನೇ ಕೋ ಕಹಾ ಜಾತಾ ಹೈ." ಅಂತ. ಇಲ್ಲಿ ಅಲಂಕಾರ ಮಾಡಿಕೊಳ್ಳುವುದು ಅವಳ ಇಷ್ಟವಾಗಿರದೇ ಅವಳಿರುವ ಸಮಾಜದ ಹೇರಿಕೆಯಾಗಿದೆ. ಅದನ್ನು ಈ ಯುವತಿ ಸ್ವಾಭಾವಿಕ ಎನ್ನುವಂತೆ ಪಾಲಿಸುತ್ತಿದ್ದಳು. ಸಮಾಜ ಹೆಣ್ಣನ್ನು ಒಂದು ಆಕರ್ಷಕ

ವಸ್ತುವಾಗಿ ಪರಿಗಣಿಸುತ್ತಿದೆ ಎಂಬ ವಿಚಾರ ಇಂಜಿನಿಯರಿಂಗ್ ಕಲಿಯಲು ಬಂದ ಈ ಯುವತಿಗೂ ಅರ್ಥವಾಗದಷ್ಟು ಆಳವಾಗಿ ಬೇರೂರಿದೆಯೇ?

ಹೆಣ್ಣು ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿದವಳೆಂದು ತಿಳಿಯುವವರ ಸಂಖ್ಯೆ ಬೆರಳೆಣಿಕೆಯಷ್ಟಾದರೂ ಇದೆಯೇ ಎಂಬುದು ನನ್ನ ಅನುಮಾನ. ನಾನು ಮುಂಬಯಿಯಲ್ಲಿದ್ದ ಸಮಯದಲ್ಲಿ ರೈಲ್ವೇ ಸ್ಟೇಶನ್ನಿನಿಂದ ಮನೆಗೆ ಹೋಗುವಾಗ ಸುಶಿಕ್ಷಿತ ಗಂಡಸರಿಬ್ಬರ ನಡುವಿನ ಸಂಭಾಷಣೆ ನನ್ನ ಕಿವಿಗೆ ಬಿತ್ತು. ಹೆಣ್ಣು ಮಕ್ಕಳು ಚಪ್ಪಲಿ ಇದ್ದ ಹಾಗಂತೆ. ಅವರನ್ನು ಯಾವಜಾಗದಲ್ಲಿ ಇಡಬೇಕೋ ಅಲ್ಲಿಯೇ ಇಡಬೇಕು. ಇಲ್ಲಾ ಅಂದ್ರೆ ತಲೆಮೇಲೆ ಕೂಡುತ್ತಾರಂತೆ.

ಕಲಿತವರೋ, ಕಲಿಯದವರೋ, ಗ್ರಾಮೀಣರೋ, ಆಧುನಿಕರೋ ಯಾರೇ ಆಗಿರಲಿ ಬೇರೆ ಬೇರೆ ಸ್ತರಗಳಲ್ಲಿ (ಅಮೂಲ್ಯವಾದ ಆಸ್ತಿಯಿಂದ ಚಪ್ಪಲಿಯ ತನಕ) ಹೆಣ್ಣನ್ನು ಒಂದು ವಸ್ತುವಾಗಿಯೇ ಕಣಲಾಗುತ್ತದೆ. ಹೊನ್ನು, ಮಣ್ಣು, ಹೆಣ್ಣು ಎಂದು ನಮ್ಮ ಸಮಾಜ ಬಹಳ ಸಹಜವಾಗಿಯೇ ಹೋಲಿಕೆ ಮಾಡುತ್ತದೆ. ಇಂಥ ದೃಷ್ಟಿಕೋನದಿಂದ ಹೊರಬಂದು, ಸಮಾಜ ಅವಳನ್ನೊಬ್ಬ ಸ್ವತಂತ್ರ ವ್ಯಕ್ತಿಯಾಗಿ ನೋಡವಂಥ ದೃಷ್ಟಿಕೋನವನ್ನು ಬೆಳಸುವತ್ತ ನಮ್ಮ ಅರಿವಿನ ಪಯಣದ ಕಾರ್ಯಕ್ರಮಗಳು ಸಾಗಲಿ ಎಂದು ಆಶಿಸುತ್ತ ವಿರಮಿಸುವೆ. ಧನ್ಯವಾದಗಳು.

# ಮಹಿಳಾ ಹೋರಾಟ ಇಂದು

## ಪ್ರತಿಕ್ರಿಯೆಗಳು :

**ಸಿರಿಗೌರಿ**

ಜನಶಕ್ತಿ, ಬೆಂಗಳೂರು

ಯಾವುದೇ ಹೋರಾಟ ಗಮನಿಸಿದರೆ ಅಲ್ಲಿ ಮಹಿಳೆಯರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪಾಲ್ಗೊಳ್ಳದೆ ಯಾವ ಆಂದೋಲನವು ಯಶಸ್ವಿಯಾಗುವುದಿಲ್ಲ ಎಂಬುದು ಇತಿಹಾಸ ನಿರೂಪಿಸಿರುವ ಸತ್ಯ. ಸಣ್ಣ ಗುಂಪುಗಳನ್ನು ಕಟ್ಟಿಕೊಂಡು ಬೀಡಿ ಕಾರ್ಮಿಕರಾಗಿ ಸ್ವ–ಸಹಾಯ ಸಂಘಗಳಲ್ಲಿ ಹಣ ಉಳಿತಾಯ ಮಾಡುವ ಅನಿವಾರ್ಯ ಕಾರಣಕ್ಕೆ ಒಗ್ಗಟ್ಟಾಗುತ್ತಿದ್ದರೂ ಕೆಲವು ಕಡೆ ಅಷ್ಟಕ್ಕೇ ಸೀಮಿತಗೊಳ್ಳದೆ ತಮ್ಮ ಸಮುದಾಯದ ಒಳಗೆ ಸದಸ್ಯರ ಮನೆಯಲ್ಲಿ ನಡೆಯುವ ಕೌಟುಂಬಿಕ ದೌರ್ಜನ್ಯಗಳ ವಿರುದ್ಧ ಸಮಸ್ಯೆಗಳನ್ನು ಅಟೆಂಡ್ ಮಾಡುವ ನಿಟ್ಟಿನಲ್ಲಿ ಒಗ್ಗೂಡುತ್ತಿವೆ. ಅಂತಹದೇ ಚಿಕ್ಕ ಗುಂಪು ಆಸಿಡ್ ದಾಳಿಯಂತಹ ಕ್ರೂರ, ಅಮಾನುಷ ಕೃತ್ಯದ ವಿರುದ್ಧವು ಬೀದಿ ಮತ್ತು ಕಾನೂನಿನಲ್ಲಿ ದೀರ್ಘ ಸಂಘರ್ಷದಿಂದ ಕೆಲವು ಮುಖ್ಯವಾದ ಬದಲಾವಣೆಗಳಿಗೂ ಕಾರಣವಾಗಿದ್ದಿದೆ. ಅಲ್ಲದೆ ಪ್ರಸ್ತುತ ವಿಷಯಗಳಿಗೆ ಸ್ಪಂದಿಸುತ್ತಾ ದೊಡ್ಡ ದೊಡ್ಡ ಹೋರಾಟಗಳ ಭಾಗವಾಗುತ್ತಾ ಮುಂದೆ ಸಾಗುತ್ತಿದೆ. ಇದರ ಪರಿಣಾಮ ನಿಚ್ಚಳವಾಗಿ ಕಂಡಿದ್ದು ಧರ್ಮಸ್ಥಳದ ಸೌಜನ್ಯಳ ಮೇಲೆ ನಡೆದ ಅತ್ಯಾಚಾರ ಮತ್ತು ಬರ್ಬರ ಕೊಲೆಯ ವಿರುದ್ಧ ಅಲ್ಲಿನ ಸಂಘಟನೆಗಳಿಗೆ ಸಾಥ್ ಕೊಟ್ಟಿದ್ದು ಮತ್ತು ಧರ್ಮಸ್ಥಳದಂತಹ ದೊಡ್ಡ ಸಂಸ್ಥೆಯ ವಿರುದ್ಧ ಒಂದಷ್ಟು ಮಹಿಳೆಯರಾದರೂ ಸಂಘಕ್ಕೆ ಹಣ ಕಟ್ಟುವುದಿಲ್ಲ ಎಂಬ ಪ್ರತಿರೋಧವನ್ನು ದಿಟ್ಟವಾಗಿ ಒಡ್ಡಿದ್ದು. ಇಂತಹ ಹೇಳಿಕೆಗಳು ಅಪರಾಧಿಗಳ ರಕ್ಷಕರ ಬಲವನ್ನು ಕುಬ್ಜಗೊಳಿಸಿದ್ದು ಸಾಮಾನ್ಯ ಸಂಗತಿಯಲ್ಲ. ಇನ್ನು ಮದ್ಯಪಾನದ ವಿರುದ್ಧದ ದನಿಯು ಕರ್ನಾಟಕದ

ಮನೆಗಳಿಂದಲೇ ಹೆಚ್ಚಾಗಿ ಹೋರಾಟದ ರೂಪವನ್ನು ಪಡೆದುಕೊಳ್ಳುವುದರಲ್ಲಿ ಸ್ವಸಹಾಯ ಸಂಘಗಳ ಪಾತ್ರ ದೊಡ್ಡದಿದೆ. ಸಮಾಜದಲ್ಲಿ ನನ್ನ ಜೆಂಡರ್ ಹೆಣ್ಣೋ ಗಂಡೋ ನಾನೇ ತೀರ್ಮಾನಿಸುವೆ ಎಂಬ ದಿಟ್ಟತನದ ಹೋರಾಟ ಸುಮಾರು ವರ್ಷಗಳಿಂದ ನಡೆಯುತ್ತಿದ್ದರೂ ಕಳೆದ 15–20 ವರ್ಷಗಳಲ್ಲಿ ಪುರುಷ ಕೇಂದ್ರಿತ ಆಲೋಚನೆಗೆ ಪೆಟ್ಟು ಕೊಟ್ಟಿದ್ದು ಇದೆ ಲಿಂಗತ್ವ ಅಲ್ಪಸಂಖ್ಯಾತರ ಸುದೀರ್ಘ ಸಮರ ಮತ್ತೊಂದು ಬಗೆಯದು. ಸಮಾಜದ ಆಳದಲ್ಲಿ ಬೇರು ಬಿಟ್ಟಿರುವ ಬ್ರಾಹ್ಮಣೀಯ ಪಿತೃ ಪ್ರಾಧಾನ್ಯತೆಯನ್ನು ಗುರುತಿಸಿ ಕಿತ್ತೊಗೆಯಬೇಕೆಂದು ಪ್ರಜ್ಞಾಪೂರ್ವಕವಾಗಿ ಪ್ರತಿಯೊಬ್ಬರಿಗೂ ಸಮಾನವಾದ ಘನತೆಯ ಬದುಕಿಗಾಗಿ ಸದ್ದು ಗದ್ದಲವಿಲ್ಲದೆ ನಿರಂತರವಾಗಿ ಕೆಲಸ ಮಾಡುತ್ತಿರುವ ಅನೇಕ ಸಂಘಟನೆಗಳಿವೆ. 2022 ರಲ್ಲಿ ಗುಜರಾತಿನಲ್ಲಿ ಹಿಂದುತ್ವವಾದಿಗಳು ನಡೆಸಿದ ಗಲಭೆಯಲ್ಲಿ ಬಿಲ್ಕಿಸ್ ಬಾನುವಿನ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ, ಮನೆ ಮಂದಿಯನ್ನು ಕಳೆದುಕೊಂಡು ಸುಮಾರು ವರ್ಷಗಳು ಹೋರಾಡಿ ಭಾರತದ ಪ್ರಜ್ಞಾವಂತರ ಬೆಂಬಲದಿಂದ ಸಣ್ಣಮಟ್ಟದ ಜಯ ಸಿಕ್ಕಿತಾದರೂ ಮೊನ್ನೆ ತಾನೆ ಸನ್ನಡತೆಯ ಆಧಾರದ ಮೇಲೆ 11 ಜನರನ್ನು ಸುಪ್ರೀಂ ಕೋರ್ಟು ಬಿಡುಗಡೆಗೊಳಿಸಿದ್ದರ ವಿರುದ್ಧವೂ ಕರ್ನಾಟಕದ ಮಹಿಳಾಪರ ದನಿಗಳು ಒಗ್ಗೂಡಿ ವಿರೋಧ ವ್ಯಕ್ತಪಡಿಸಿದವು.

ಎರಡನೆಯದು ಮಹಿಳಾ ಕಾರ್ಮಿಕರ ಪರವಾದ ಹಕ್ಕೊತ್ತಾಯಗಳನ್ನು ಮುಂದಿಡುತ್ತಾ ಅದರ ಸುತ್ತ ಹಮ್ಮಿಕೊಂಡ ಬೃಹದಾಕಾರದ ಪ್ರತಿಭಟನೆಗಳು. ಇದುವರೆಗೆ ಹೋರಾಟಗಳು ಎಂದಕ್ಷಣ ನಮ್ಮ ಕಣ್ಣ ಮುಂದೆ ಬರುವುದು ಹಿಂಡಿಂಡು ಪುರುಷ ನಾಯಕರು. ಈ ಯಾಂತ್ರಿಕವಾದ ದೃಷ್ಟಿಕೋನವನ್ನೇ ಬದಲಿಸಿ ಸಾವಿರಾರು ಸಂಖ್ಯೆಯ ಹೆಣ್ಣು ಮಕ್ಕಳು ಹಗಲು ಇರುಳು ಎನ್ನದೆ, ಮಕ್ಕಳು ಮರಿಗಳನ್ನು ಕಟ್ಟಿಕೊಂಡು ತುತ್ತಿನ ಬುತ್ತಿಯನ್ನು ಹೊತ್ತು ಬೀದಿಯಲ್ಲೇ ಉಂಡು, ಅಲ್ಲೇ ಮಲಗಿ ಪ್ರತಿಭಟಿಸುವುದು ಸುಲಭದ ಮಾತಲ್ಲ. ಇವು ಇಡೀ ಸಮಾಜದ ಗಮನವನ್ನು ಸೆಳೆದು ಜನರ ಅನುಕಂಪಕ್ಕೂ ಕಾರಣವಾಯಿತು. ಈ ರೀತಿಯ ಕಾರ್ಮಿಕ ಮಹಿಳೆಯರ ತಳಮಟ್ಟದ ಪ್ರತಿರೋಧದಿಂದ ಬಂದ ಅನುಭವ ಕೂಡ ಒಟ್ಟಾರೆ ಮಹಿಳಾ ಚಳುವಳಿಯ ತಿಳಿವಳಿಕೆಯನ್ನು ಎತ್ತರಿಸುವ ಮೂಲಕ ಸ್ತ್ರೀವಾದಿ ಚಳುವಳಿಯ ಹೋರಾಟಕ್ಕೆ ಹೊಸ ಭಾಷೆಯನ್ನು ಹುಟ್ಟು ಹಾಕಿದೆ. ಇದರಲ್ಲಿ ಅಂಗನವಾಡಿ ಆಶಾ ಕಾರ್ಯಕರ್ತೆಯರು ಹಾಗೂ ಕಾರ್ಮಿಕರ ಇತಿಹಾಸದಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಪ್ರತಿರೋಧವೆಂದರೆ ಗಾರ್ಮೆಂಟ್ಸ್ ಕಾರ್ಮಿಕರ ಆಂದೋಲನಗಳು. ಪಿ ಎಫ್ ನ ವಿರುದ್ಧ ಪ್ರತಿರೋಧ ಕೇಂದ್ರ ಸರ್ಕಾರವನ್ನು ಪತರುಗುಟ್ಟಿಸಿತು. ಬೇರೆ ದಾರಿ ಇಲ್ಲದೆ ಅನಿವಾರ್ಯವಾಗಿ

ವಾಪಸ್ ಪಡೆಯಬೇಕಾಯಿತು. ಇದು ಇಡೀ ಕಾರ್ಮಿಕರ ಚರಿತ್ರೆಯಲ್ಲಿ ನೆನಪಿನಲ್ಲಿ ಉಳಿಯುವಂತದ್ದು. ಸ್ತ್ರೀಯರು ಗಟ್ಟಿ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಲ್ಲರು ಎನ್ನುವುದಕ್ಕೆ ಈ ಹೋರಾಟಗಳು ಸಾಕ್ಷಿಯಾಗಿವೆ. ನಗರವನ್ನು ಸದಾ ಸ್ವಚ್ಛವಾಗಿಡುವ ಪೌರಕಾರ್ಮಿಕರು ಸಮಾಜದ ಡಾಕ್ಟರುಗಳಿದ್ದಂತೆ. ವರ್ಷದ 365 ದಿನಗಳು ರಜೆ ಇಲ್ಲದೆ ಕಾಯಕವೇ ಕೈಲಾಸ ಎಂದು ದುಡಿಯುವ ಇವರಿಗೆ ತೀರಾ ಇತ್ತೀಚಿನ ತನಕ ಯಾವುದೇ ಕನಿಷ್ಠ ನಾಗರಿಕ ಸೌಲಭ್ಯವು ದೊರೆಯುತ್ತಿರಲಿಲ್ಲ. ಒಂದೊಂದು ಹಕ್ಕೊತ್ತಾಯವನ್ನು ಪಡೆಯಲು ಸಾಕಷ್ಟು ಗುದ್ದಾಡಬೇಕಾಗಿದೆ. ಸರ್ಕಾರವು ಇವರನ್ನು ಗೌರವಯುತವಾಗಿ ನಡೆಸಿಕೊಳ್ಳುವುದಿಲ್ಲ. ಇತ್ತ ನಾಗರೀಕರೆನಿಸಿಕೊಂಡವರಿಂದಲೂ ಜಾತಿಯ ಕಾರಣಕ್ಕೆ ನಿಂದನೆಗೆ ಒಳಗಾಗುತ್ತಿರುವುದುಂಟು. ಸಂಘಟಿತ ಹೋರಾಟದ ಬಲದಿಂದ ದೊರೆತ ಫಲ ಬರಿ ಹೆಂಗಸರಿಗೆ ಮಾತ್ರವಲ್ಲ ಬದಲಿಗೆ ಗಂಡ, ಮನೆ, ಮಕ್ಕಳ ಶಿಕ್ಷಣದಿಂದ ಇಡೀ ಕುಟುಂಬವನ್ನು ಉನ್ನತ ಹಂತಕ್ಕೆ ಕೊಂಡೊಯ್ಯುವುದರ ಮುಖಾಂತರ ಇಡೀ ಸಮಾಜದ ಏಳಿಗೆಗೆ ಕಾರಣವಾಗುವ ಸಂಗತಿ ನಮಗೆ ತಿಳಿದಿರಬೇಕು. ಕರೋನಾದಂತಹ ಸಾಮಾಜಿಕ ಪಿಡುಗು ಬಂದಾಗಲೂ ಮನೆಗಳನ್ನು ಉಳಿಸಿದ್ದು ಇದೆ ಅಮ್ಮಂದಿರ ಸಾಸಿವೆ ಡಬ್ಬಿ ಆರ್ಥಿಕತೆ.

ಇಂದು ಪ್ರತಿಭಟಿಸದಿದ್ದರೆ ಉಳಿಗಾಲವಿಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ಬಿಜೆಪಿ ಸರ್ಕಾರ ಜಾರಿಗೆ ತಂದ ಎನ್‌ಆರ್‌ಸಿ, ಎನ್‌ಪಿಆರ್ ಸಂದರ್ಭದಲ್ಲಿ ಇದೇ ಪಂಕ್ಚರ್ ಅಂಗಡಿ ಗಿರಾಕಿಗಳೆಂದು ಜರಿಯುತ್ತಿದ್ದ ಅನಕ್ಷರಸ್ಥ ಬುರ್ಖಾದಾರಿ ಹೆಣ್ಣು ಮಕ್ಕಳೇ ಇದರ ನೇತೃತ್ವ ವಹಿಸಿದ್ದು ದೇಶಾದ್ಯಂತ ನೂರಾರು ಶಾಹಿದ್ ಭಾಗಗಳನ್ನು ಕಟ್ಟಿ ಸಾವಿರಾರು ಸಾಮಾನ್ಯ ಮಹಿಳೆಯರು ಇದರ ಭಾಗವಾಗಿ ಗಟ್ಟಿ ಹೋರಾಟದ ತಳಪಾಯವನ್ನು ರೂಪಿಸಿದರು. ಈ ಹೋರಾಟವನ್ನು ಇಡೀ ದೇಶವೇ ಒಮ್ಮೆ ತಿರುಗಿ ನೋಡುವ ಹಾಗೆ ಮಾಡಿದ್ದಲ್ಲದೆ, ಕೇಂದ್ರದ ಆಡಳಿತ ವರ್ಗವೇ ಮಣಿದು ಕಾಯ್ದೆಯನ್ನೇ ವಾಪಸ್ಸು ಪಡೆಯಲು ಯಶಸ್ವಿಯಾದ ಪ್ರಮುಖ ಹೋರಾಟ ಕೂಡ.

ಮೂರನೆಯದು ದೇಶದ ಬದಲಾವಣೆಯ ಭಾಗವಾಗಿ ನಡೆಯುತ್ತಿರುವ ಹೋರಾಟವಾಗಿ ಗುರುತಿಸಬಹುದು. ಇದು ನೇರವಾಗಿ ಮಹಿಳೆಯರ ನಾಯಕತ್ವದಲ್ಲಿಲ್ಲದಿದ್ದರೂ. ಜನರಲ್ ಹೋರಾಟವಾದರೂ ಇದರಲ್ಲಿ ಮಹಿಳೆಯರ ಕೊಡುಗೆ ಮಹತ್ತರವಾಗಿದೆ ಎಂಬುದು ಮರೆಯುವ ಹಾಗಿಲ್ಲ. ದೆಹಲಿಯಲ್ಲಿ ಸತತ ಒಂದು ವರ್ಷದ ಕಾಲ ರೈತ ವಿರೋಧಿ 3 ಕಾಯ್ದೆಗಳು ವಾಪಸ್ ಪಡೆಯುವವರೆಗೂ ಮನೆಗಳಿಗೆ ಹಿಂತಿರುಗದಂತೆ ತಮ್ಮ ಮನೆಯ ಗಂಡಸರನ್ನು

ತಾಕಿತು ಮಾಡುತ್ತ ಹೊಲ ಮನೆಯ ಎರಡು ಕಡೆಯ ಕೆಲಸಗಳನ್ನು ಸಮರ್ಥವಾಗಿ ನಿಭಾಯಿಸಿ ಹೋರಾಟದಲ್ಲಿಯೂ ಸಕ್ರಿಯರಾಗಿದ್ದು ಇದೇ ರೈತ ಮಹಿಳೆಯರು. ಈ ಮಾತನ್ನು ಹೇಳಿದ್ದು ಹೋರಾಟ ನಿರತ ರೈತ ನಾಯಕರೇ.

ವಿಶ್ವವಿದ್ಯಾಲಯಗಳಲ್ಲಿ ದೊಡ್ಡ ಸದ್ದು ಮಾಡಿದ ವಿದ್ಯಾರ್ಥಿಗಳ ಪ್ರತಿಭಟನೆಯಲ್ಲಿ ಪಟ್ಟು ಬಿಡದೆ ಪ್ರಬಲವಾಗಿ ಸೆಡ್ಡು ಹೊಡೆದಿದ್ದರಲ್ಲಿ ಮಹಿಳೆಯರ ಪಾಲೇ ಹೆಚ್ಚಿದೆ ಎನ್ನಬಹುದು. ಬನಾರಸ್ ವಿದ್ಯಾರ್ಥಿನಿ ಒಬ್ಬಳು ತನ್ನ ತಲೆಯನ್ನು ಬೋಳಿಸಿಕೊಳ್ಳುವ ಮೂಲಕ ಹಿಂದುತ್ವವಾದಿಗಳಿಗೆ ತಿರುಗೇಟು ನೀಡಿದ್ದಳು. ಮಹಿಳೆಯರು ಎಂದ ಮಾತ್ರಕ್ಕೆ ನಾವೆಲ್ಲರೂ ಒಂದೇ ಅಲ್ಲ. ಇಲ್ಲಿ ಜಾತಿಯ ಶ್ರೇಣೀಕರಣವು ಇದೆ. ವರ್ಗದ ಅಸಮಾನತೆ ಇದೆ. ಧರ್ಮ, ಜೆಂಡರ್ ಮತ್ತೆ ರಾಷ್ಟ್ರೀಯತೆಯೂ ಇದೆ. ನಾವೆಲ್ಲರೂ ಒಂದೇ ಎಂದರೆ ಆಯಾಯ ಸಮುದಾಯಗಳು ಶತಮಾನಗಳಿಂದ ಅನುಭವಿಸಿಕೊಂಡು ಬರುತ್ತಿರುವ ತಾರತಮ್ಯವನ್ನು ನಾವು ನಿರಾಕರಿಸಿದಂತೆ ಆಗುತ್ತದೆ. ಹಾಗೆಂದ ಮಾತ್ರಕ್ಕೆ ನಾವು ಬಿಡಿ ಬಿಡಿಯಾಗಿ ಇರಬೇಕು ಎಂಬುದು ಅರ್ಥವಲ್ಲ. ಮೇಲಿನ ಎಲ್ಲಾ ಅಸಮಾನತೆಯ ವಿರುದ್ಧ ಮಹಿಳೆಯರನ್ನು ಅಣಿಗೊಳಿಸುತ್ತಾ ಜಾಗೃತಿ ಮೂಡಿಸುವ ಕೆಲಸವನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ಹಾಗಾದಾಗ ನಾವು ಬಿಡಿಯಾಗಿದ್ದು ಇಡಿಯಾಗುವುದರತ್ತ ಸಾಗುವ ವಿಶಾಲ ಕಣ್ಣಿನ ನೋಟವನ್ನು ಮಹಿಳೆಯರಲ್ಲಿ ಬಿತ್ತಬೇಕಿದೆ.

ಮುಖ್ಯವಾಗಿ ಚರ್ಚಿಸಬೇಕಾದ ವಿಷಯವೆಂದರೆ ಇಂದು ದೇಶ ಫ್ಯಾಸಿಸಮ್‌ನ ಕಾಲಘಟ್ಟದಲ್ಲಿದೆ. ಒಬ್ಬನೇ ನಾಯಕ ಒಂದೇ ಹಿಂದೂ ಧರ್ಮ ಎಂಬ ಅಪಾಯವು ವಿವಿಧತೆಯಲ್ಲಿ ಏಕತೆಯನ್ನು ನಮ್ಮ ಸಹಬಾಳ್ವೆಯ ಪರಂಪರೆಯನ್ನು ಸಂವಿಧಾನದ ಆಶಯವನ್ನು ಗಾಳಿಗೆ ತೂರುವ ಸಂದಿಗ್ಧ ಸ್ಥಿತಿಯಲ್ಲಿದ್ದೇವೆ. (ಮಹಿಳಾ ಚಳುವಳಿಯಾಗಿ ನಾವು ಎದುರಿಸುತ್ತಿದ್ದೇವೆ.) ಹತ್ತಾರು ಪ್ರಶ್ನೆಗಳು ಭಾರತದ ಪ್ರಗತಿಪರ ಸಂಘಟನೆಗಳ ಮುಂದಿವೆ. ನಾವು ಇಷ್ಟಕ್ಕೆ ಸೀಮಿತವಾಗುತ್ತೇವೆಯೋ ಅಥವಾ ಜವಾಬ್ದಾರಿಯಿಂದ ಕಾಲದ ಕರೆಯನ್ನು ಅರ್ಥ ಮಾಡಿಕೊಂಡು ಫ್ಯಾಸಿಸಮ್ ನಿಂದ ಮಹಿಳೆಯರ ಮೇಲಾಗುತ್ತಿರುವ ದುಷ್ಪರಿಣಾಮದ ಕುರಿತು ಚಿಂತನ ಮಂಥನ ನಡೆಸಿ ಚಳುವಳಿಯನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತೇವೆಯೋ ಎನ್ನುವುದು ನಮ್ಮ ಮುಂದಿರುವ ದೊಡ್ಡ ಸವಾಲಿಗೆ ನಾವು ಮುಖಾಮುಖಿ ಆಗಬೇಕಿದೆ. ಆಗ ಮಾತ್ರ ಮಹಿಳೆಯರಾಗಿ ನಾವೆಲ್ಲರೂ ಒಂದೇ ಎನ್ನುವುದಕ್ಕೆ ಶಕ್ತಿ ಬರುತ್ತದೆ.

# ಜಾಗೃತಿಯೊಂದೇ ಮಾರ್ಗ

ಗೀತಾಲಕ್ಷ್ಮಿ, ತಿಪಟೂರು

ಕಾಲದ ಮನೆಯಲ್ಲಿ ಬದುಕು ಹರಡಿಕೊಳ್ಳಲು ಆರಂಭವಾದಂದಿನಿಂದಲೂ ಅನುಭವಗಳ ಮೊತ್ತ ಜೀವವಿಕಾಸದ ಕಲಿಕೆಯಲ್ಲಿ ದಾಖಲಾಗುತ್ತಾ ಹೋಗಿದೆ. ಈ ದಾಖಲಾತಿಯನ್ನು ಯಾವ ಬಗೆಯ ಪರ್ಯಾಯ ಪದಗಳ ಮೂಸೆಯಲ್ಲಿ ಅರೆಯದೆ ಗಮನಿಸುತ್ತಾ ಹೋದರೆ ಲಿಂಗಸೂಕ್ಷ್ಮತೆಯ ಪರಿಣಾಮ ಹಾಗೂ ಕಾರಣಗಳನ್ನು ಗ್ರಹಿಸಲು ಅಗಣಿತ ನೆಲೆಗಳ ದಾರಿ ಕಾಣುತ್ತವೆ. ವಿಕಾಸ ಥಿಯರಿಯ ಮೂಲವನ್ನು ಒಪ್ಪುತ್ತಲೇ ಬೆಳೆದ ಮನುಷ್ಯರ ಲೋಕದಲ್ಲಿ ಭಿನ್ನ ಬಗೆಯ ಜಿಜ್ಞಾಸೆ ಹೊತ್ತ ಧ್ಯೆಯಗಳು ಕವಲೊಡೆದು ಸವಾಲುಗಳಾಗುತ್ತಾ ಹೋಗಿರುವುದು ಪಾರದರ್ಶಕವಾಗಿ ಕಾಣುತ್ತಲೇ ಬಂದಿದೆ. ಸಮಾಜ, ಕುಟುಂಬ, ಶಿಕ್ಷಣ, ಹೋರಾಟ ಹೀಗೆ ರೂಪ ಕಂಡುಕೊಳ್ಳುತ್ತಾ ನಡೆದ ಸ್ಥಿತಿಗಳಲ್ಲಿ ಕ್ರಮೇಣ ಬಹುದೊಡ್ಡ ಸ್ಥಿತ್ಯಂತರಗಳಾದವು. ಬದುಕಿನ ಚಹರೆಗಳನ್ನು ಗಮನಿಸಿದರೆ ಹೆಚ್ಚೆಚ್ಚು ದಪ್ಪ ನಿರ್ಣಯಗಳನ್ನು ಪುರುಷರು ತಮ್ಮ ಹಿಡಿತಕ್ಕೆ ಒಪ್ಪಿಸಿಕೊಂಡದ್ದು ದುರಂತವೇ ಸರಿ. ದಬ್ಬಾಳಿಕೆ ಹಲವು ಕ್ಷೇತ್ರಗಳಲ್ಲಿ ಹಲವಾರು ರೂಪಗಳಲ್ಲಿ ಹುಟ್ಟತೊಡಗಿ ನೇರ ಆಕ್ರಮಣಕ್ಕೆ ಗುರಿ ಮಾಡಿಕೊಂಡದ್ದು ಹೆಣ್ಣು ಮಕ್ಕಳನ್ನು ಮಾತ್ರ. ಇಲ್ಲಿಂದ ಗಟ್ಟಿ ನಡಿಗೆಯನ್ನು ಸಿದ್ಧ ಮಾಡಿಕೊಂಡ ಪುರುಷರು ಹೆಣ್ಣು ಮಕ್ಕಳು ಇರುವ, ದುಡಿಯುವ ಎಲ್ಲಾ ಕ್ಷೇತ್ರಗಳಲ್ಲಿ ಪಂಜರಗಳನ್ನು ನಿರ್ಮಿಸುತ್ತ ನಾವೇ ಮೊದಲೆಂಬ ನ್ಯಾಯವಲ್ಲದ ಆತ್ಮರತಿಯಲ್ಲಿ ಬೀಗುತ್ತಾ ಸಾಗಿದ್ದು ಬಹುದೊಡ್ಡ ಅಪಾಯವಾಗಿ ಪ್ರಪಂಚವನ್ನೇ ಸುತ್ತುವರೆದಿದೆ. ವೇದ ಪುರಾಣಗಳ ಕಾಲಾವಧಿ ಸವೆದು ಆಧುನಿಕತೆಗೆ ಒಪ್ಪಿಸಿಕೊಂಡರೂ ಕೂಡ ತೀವ್ರ ಶೋಷಣೆಗಳು ಮುಖ ಬದಲಿಸಿಕೊಂಡು ಮಹಿಳೆಯರ ಬದುಕಿನಲ್ಲಿ ಕ್ಷಾಮ ಸೃಷ್ಟಿಸುತ್ತಿರುವುದು ಅವಿವೇಕದ ಪರಮಾವಧಿ. ಈ ದುರಿತ ಕೆಲಸಗಳನ್ನು ಯಾವ ಹೋರಾಟಗಳಿಂದಲೂ ನಿಯಂತ್ರಿಸಲಾಗದ ಪಲ್ಲಟಗಳನ್ನು ಸಮಸ್ಥಿತಿಗೆ ತರಲು ಆಗದ ಶಂಕೆಗಳು ಹಿಂದಿನ ಮತ್ತು ಪ್ರಸ್ತುತದ ಯಾವ ಮಹಿಳಾ ಹೋರಾಟಗಾರರನ್ನು ಕಾಡದೇ ಬಿಟ್ಟಿಲ್ಲ. ಕಾಲದಿಂದ ಕಾಲಕ್ಕೆ ಮಹಿಳಾ ಹೋರಾಟಗಾರ್ತಿಯರ ಸಂಖ್ಯೆ ಹೆಚ್ಚಿದರೂ ಪುರುಷರ ಹಲ್ಲೆ, ಹಿಡಿತಗಳೂ ಕೂಡ ವಿಕಾರಗೊಳ್ಳುತ್ತಲೇ ಇರುವ ಸ್ಥಿತಿಗಳಂತೂ ಬದಲಾಗಿಲ್ಲ. ಸಮಕಾಲೀನ ರಾಜಕಾರಣ ಕೂಡ ನ್ಯಾಯಾಚಾರದ ಬದ್ಧತೆಗಳಿಗೆ ವಿರುದ್ಧವಾಗಿ ಪುರುಷರ ಒಪ್ಪಿತ ಬರ್ಬರತೆಯನ್ನು ಬೆಂಬಲಿಸುತ್ತಿರುವ ಘಟನೆಗಳು

ಆತಂಕಗಳನ್ನು ಹೆಚ್ಚಿಸುತ್ತವೆ.

ಎಷ್ಟೆಲ್ಲ ಬದಲಾವಣೆಗಳ ನಡುವೆ ಇರುವ ಮಹಿಳೆಯರ ಪಾಡುಗಳಿಗೆ ಕಡಿವಾಣ ಹಾಕುವ ಮೆದುಳು ಪರಿಶೀಲನೆಗೆ ಎದುರಾಗುವ ಮೂಲಕ ಇಲ್ಲಿಯ ಅರಾಜಕತೆಯನ್ನು ನಿಯಂತ್ರಿಸಬೇಕು. ಎಷ್ಟೆಲ್ಲ ಕುಸಿತಗಳು ಮತ್ತು ಪ್ರಗತಿಯ ಹಲವು ಬಗೆಗಳು ಇಂದಿನ ಮಹಿಳಾ ಹೋರಾಟದ ಎಲ್ಲಾ ವಿಚಾರಗಳನ್ನು ಹೊಕ್ಕು ಗಮನಿಸಿದರೆ ಎಷ್ಟೆಲ್ಲ ಕುಸಿತ ಹಾಗೂ ಪ್ರಗತಿ ಒಟ್ಟಿಗೆ ಕಾಣುತ್ತವೆ. ಈ ಪ್ರಗತಿ ಕುಸಿತಗಳ ಫಲಿತಾಂಶದ ಪಲ್ಲಟಗಳನ್ನು ಮತ್ತು ಮಹಿಳಾ ಸಬಲೀಕರಣ ಇಂದಿನ ಚಳುವಳಿಗೆ ಸಿಗುತ್ತಿರುವ ಫಲ ಹೆಣ್ಣುಮಕ್ಕಳು ಸುರಕ್ಷಿತ ಧ್ಯೆಯಗಳನ್ನು ನಿರಾಳವಾಗಿ ತಲುಪುವಂತದ್ದೇನು ಅಲ್ಲ.

ಇವತ್ತಿಗೆ ಮಹಿಳೆಯರ ಮುಂದೆ ಇರುವ ಜರೂರುಗಳನ್ನು ನೋಡಿದರೆ ಬಹಳ ದೊಡ್ಡವೇ ಸವಾಲುಗಳನ್ನು ದಿನವೂ ಎದುರಿಸಲೇಬೇಕಾದ ಅನಿವಾರ್ಯತೆ ಕೂಡ ಸಮಸ್ಯೆಯಾಗಿ ಕಾಡುತ್ತಿದೆ. ಪುರುಷರನ್ನು ಜೀವನದ ಕಸುವೇ ಆಗಿ ನೋಡಿ ಅನಿಶ್ಚಿತತೆಯಿಂದ ಸದಾ ಬಳಲುವ ಹೆಣ್ಣುಗಳು ಕೂಡ ಪೂರ್ವದ ಮಹಿಳಾ ಜಾಗೃತಿ ಹೋರಾಟಗಾರರ ಜಾಡುಗಳನ್ನು ತುಳಿಯಬೇಕು. ಜಗತ್ತಿನ ಪುರುಷರ ಹಿಡಿತದಲ್ಲಿ ಇರುವ ಬಹುಮುಖ್ಯವಾದ ಹುದ್ದೆಗಳು, ಕುಟುಂಬ, ಸಮಾಜ, ರಾಜಕಾರಣ ಇತ್ಯಾದಿಗಳನ್ನು ಒಂದಿಷ್ಟು ಕಾಲವಾದರೂ ಹೆಣ್ಣು ಮಕ್ಕಳೇ ವಶಪಡಿಸಿಕೊಂಡು ಶುದ್ಧಗೊಳಿಸುವ ಅಪ್ರತಿಮ ಕೆಲಸವೊಂದು ಇಂದು ಮಹಿಳೆಯರಿಂದಲೇ ಆಗಬೇಕು. ಪೂರ್ವದ ಹಿರಿಯ ಚಿಂತಕರಾದ ಅನೇಕ ಜನ ಮಹಿಳೆಯರು ಕಟ್ಟಿದ ಸಂಘಟನೆಗಳು ಹೋರಾಟಗಳೇ ಶೋಷಣೆಯ ತೀವ್ರತೆ ಹೆಚ್ಚಿದ ಕಾಲದಲ್ಲೆಲ್ಲ ಪ್ರಬುದ್ಧ ಚಿಂತನೆಗಳಾಗಿ ಅಸಹಾಯಕರಾದ ಹೆಣ್ಣುಮಕ್ಕಳನ್ನು ಪೊರೆದಿವೆ ಜೊತೆಗೆ ಇಂದಿನ ಹೋರಾಟಗಳಿಗೆ ಕೂಡ ಭೂಮಿಕೆಯಾಗಿ ಚಳುವಳಿಯ ಶಕ್ತಿಯನ್ನು ಹೆಚ್ಚಿಸಿವೆ. ಪುರುಷರ ದಿಟ್ಟತನವೇನಿದ್ದರು ಹಿಂಸೆಯನ್ನು ಬಳಿದುಕೊಂಡದ್ದು. ಕುಟುಂಬದ ಏಳುಬೀಳುಗಳಲ್ಲಿ ಪ್ರಧಾನ ಪಾತ್ರ ವಹಿಸಿ ಪೊರೆಯುವ ಮಹಿಳೆಯರ ವಿಶ್ವಾಸ ಕೂಡ ಒಂದು ಹೋರಾಟವೇ. ದುಡಿಮೆ ಹಾಗೂ ಸವಾಲುಗಳಿಗೆ ನಿರಂತರವಾಗಿ ತೆರೆದುಕೊಂಡ ಮಹಿಳೆಯರ ಮುಂದೆ ಇರುವ ಸವಾಲುಗಳು ಕಠಿಣವಾದವುಗಳೇ ಹೊರತು ಸ್ವಾತಂತ್ರ್ಯ ಮತ್ತು ನೆಮ್ಮದಿಯ ನಿರಾಳತೆಗಳೇನಲ್ಲ. ಭಿನ್ನ ಅರಾಜಕತೆಯನ್ನು ಹುಟ್ಟುಹಾಕುತ್ತಿರುವ ದೇಶಗಳಲ್ಲಿ ಲಿಂಗ ಸಮಾನತೆಯ ಪ್ರಜ್ಞೆಯೊಂದು ಹರಡಿಕೊಳ್ಳಲು ಅರಿವಿನ ಪಯಣಗಳು ಇನ್ನೂ ತೀವ್ರವಾಗಿ ಆವರಿಸಬೇಕಿದೆ. ಇಂದು ಪುರಾಣಗಳನ್ನು ಪ್ರಸ್ತುತವೆನಿಸುವಂತೆ ಜನಸಮುದಾಯದ ಭಾವಸಾಂದ್ರತೆಗೆ ತುಂಬಿರುವ

ಸಾಹಿತ್ಯದೊಳಗಿನ ರಾಜಕಾರಣಕ್ಕೆ ಬೈರಪ್ಪನವರಂತಹ ಬರಹಗಾರರಿಗಿಂತ ಇರಾವತಿ ಕರ್ವೆಯವರಂತಹ ವೈಚಾರಿಕತೆಯ ಸತ್ಯಕ್ಕೆ ಮಾನ್ಯತೆ ಕೊಟ್ಟ ಲೇಖಕಿಯರನ್ನು ಹೆಚ್ಚು ಓದುವ ಅಗತ್ಯವಿದೆ. ಆದಿವಾಸಿ ಜನರ ಬದುಕಿಗೆ ಆಸರೆಯಾಗಿ ಹೋರಾಟಕ್ಕಿಳಿದ ಇಂಥಹ ಶಕ್ತರು ಮುಖ್ಯರಾಗಬೇಕು. ಆಧುನಿಕತೆಯ ಅತೃಪ್ತಿಗಳನ್ನು ಬಿಗಿದುಕೊಂಡ ಜನ ನಡೆಸುವ ಅತೃಪ್ತ ಕ್ರೌರ್ಯಗಳಿಗೆ ಮುಂದಾದ ಅನಾಗರಿಕ ವಿದ್ಯಾವಂತ ದುಷ್ಟರು, ರಾಜಕಾರಣಿಗಳ ವಿರುದ್ಧವೂ ದಿಟ್ಟವಾಗಿ ನಿಂತು ಹೋರಾಡಿದ ಸಾವಿರಾರು ಜನ ಮಹಿಳೆಯರು ಬದಲಾವಣೆಯ ಹೊಸತನಕ್ಕೆ ಕಾರಣರಾಗಿ ಒಂದಷ್ಟು ಜಾಗಗಳಿಗೆ ವಿಶಾಲ ಅರಿವಿನ ಚೈತನ್ಯಗಳಾಗಿದ್ದಾರೆ.

ನಿರ್ಲಜ್ಜ ಪುರುಷರ ಆಯ್ಕೆಗಳಲ್ಲಿ ಉಳಿದು ಸಾಗುತ್ತಿರುವ ಸಂಪ್ರದಾಯಗಳ ಹೆಸರಿನ ಬೂಟಾಟಿಕೆಯ ಕವಚಗಳನ್ನು ಹರಿಯಲು ಹೋರಾಟಕ್ಕಿಳಿದ ಹಿರಿಯ ಉತ್ಕಟ ಜೀವಪ್ರೇಮದ ಅನೇಕ ಮಹಿಳೆಯರನ್ನು ಧರಿಸಿಯೇ ಇವತ್ತಿನ ಮಹಿಳೆಯರ ಚಳುವಳಿಗಳು ದನಿತುಂಬಿಕೊಳ್ಳುತ್ತಿವೆ. ಬರ್ಬರತೆಯ ಅತ್ಯಂತ ನಿಕೃಷ್ಟ ಹೇರಿಕೆಗಳು ತಾಂಡವವಾಡುತ್ತಿದ್ದ ಸಮಾಜದಲ್ಲಿ ಜನಿಸಿದ ತಾಯಿ ಸಾವಿತ್ರಿ ಬಾಯಿ ಪುಲೆಯವರ ಹೋರಾಟದ ಬದ್ಧತೆ ಮತ್ತು ಆಶಯವೆ ಹೆಣ್ಣು ಮಕ್ಕಳ ಕಣ್ಣಲ್ಲಿ ಹತಾಶೆ, ಶೋಷಣೆಗಳ ಆಚೆಗಿನ ಅಕ್ಷರ ಜ್ಞಾನಕ್ಕೆ ದಾರಿಯಾಗಿ ಅರಿವೆಂಬ ಅಕ್ಷರಗಳ ಫಸಲು ಸಮೃದ್ಧಗೊಂಡಿದ್ದು. ಬದುಕಿನ ಚಲನೆಗೆ ಮುಖ್ಯಶಕ್ತಿ ಶಿಕ್ಷಣ. ಗಂಡುಮಕ್ಕಳಿಗೆ ಸುತ್ತಿಕೊಂಡಿದ್ದ ಶಿಕ್ಷಣಕ್ಕೆ ಬಿಡುಗಡೆ ಸಿಕ್ಕಿ ಹೆಣ್ಣುಮಕ್ಕಳ ಅಂತರ್ಯದ ಪ್ರಜ್ಞೆಯಾಗಿ ಅರಳಲು ಕಸುವು ಬಂದಿದ್ದೇ ಮಾತೆ ಸಾವಿತ್ರಿಬಾಯಿ ಫುಲೆಯವರ ನಿರಂತರ ಹೋರಾಟದಿಂದ. ಅಶಕ್ತ ಕುಟುಂಬಗಳ ಹೆಣ್ಣುಮಕ್ಕಳು ಕಲಿತು ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಎಷ್ಟೆಲ್ಲ ಹಲ್ಲೆಗಳ ನಡುವೆಯೂ ಒಂದಿಷ್ಟು ನ್ಯಾಯ ಸಿಕ್ಕಿದ್ದರೂ ಕೂಡ, ಆಚಾರ, ವಿಚಾರಗಳಿಗೆ ವಿರುದ್ಧವಾದ ಅಪಾಯಗಳನ್ನು ಬೆಳೆಸುತ್ತಿರುವ ಪುರುಷರ ತಗ್ಗದ ಗರ್ವದ ತಾಪಗಳು ಇಂದಿಗೂ ಮಹಿಳಾ ಸಬಲೀಕರಣದ ಚಳುವಳಿಗಳಿಗೆ ಅಡ್ಡವಾಗಿ ತಾಪ ತಟ್ಟದೇ ಇಲ್ಲ. ಭಾರತದ ಅನೇಕ ರಾಜ್ಯಗಳಲ್ಲಿ ಸತತವಾಗಿ ಉಲ್ಬಣಿಸುತ್ತಿರುವ ಕೇಡುಗಳಿಗೆ ಅದೆಷ್ಟು ಹೆಣ್ಣುಗಳು ಬಲಿಯಾಗುತ್ತಿದ್ದಾರೊ? ದಲಿತರ ಕೇರಿಗಳಲ್ಲಿ ವರದಿಯಾಗದೆ ಮುಚ್ಚಿಹೋಗುತ್ತಿರುವ ಲೆಕ್ಕವಿಲ್ಲದಷ್ಟು ರಕ್ತಸಿಕ್ತ ದುರ್ಘಟನೆಗಳು ನಿಲ್ಲಲು ಸಶಕ್ತ ಹೋರಾಟಗಳು ನಡೆದರೂ ಕೂಡ ಕಾನೂನಿನ ಹಾಗೂ ರಾಜಕಾರಣಿಗಳ ಕೈವಾಡದಿಂದ ಚಳುವಳಿಗಳು ಸೋತ ನಿದರ್ಶನಗಳೂ ಇವೆ. ಮಾಧ್ಯಮಗಳು ಅರಾಜಕತೆಯ ಜಾಡು ಹಿಡಿದು ಇಂತಹ ಅಸಹಾಯಕರ ನೋವುಗಳನ್ನು ವರದಿ ಮಾಡದೆ ಹೋದರು ಕೂಡ ಇಂದು ಕರ್ನಾಟಕದಾದ್ಯಂತ ಚುರುಕಾಗಿ

ಚಳುವಳಿಗೆ ಬಲತುಂಬುತ್ತಿರುವ ಅನೇಕ ಹಿರಿಯ ಕಿರಿಯ ಲೇಖಕಿಯರು ಮತ್ತು ಹೋರಾಟಗಾರ್ತಿಯರ ದಿಟ್ಟ ನಿಲುವು ನಿರ್ಧಾರಗಳಿಂದ ಸಿಕ್ಕ ಜಯವನ್ನು ಮರೆಯುವಂತಿಲ್ಲ.

ಇತ್ತೀಚೆಗೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಒಂದು ಹಳ್ಳಿಗೆ ಹೋದಾಗ ಕಮಲಮ್ಮ ಎನ್ನುವ ಹಿರಿಯ ತಾಯಿಯೊಬ್ಬರು ಹೇಳಿಕೊಂಡ ಅನುಭವಗಳನ್ನು ತಾಸುಗಟ್ಟಲೆ ಕೇಳಿದ ನನಗೆ ಪುರುಷರೇ ಇಲ್ಲದ ಜಗತ್ತಿನಲ್ಲಿ ಮಹಿಳೆಯರು ಸ್ವೇಚ್ಛೆಯಿಂದ ನಲಿಯುವ ಕಾಲವೊಂದು ಬರಲಿ ಎನಿಸಿದ್ದು ಸುಳ್ಳಲ್ಲ. ನೂರಾರು ವರ್ಷಗಳಿಂದ ಆ ಭಾಗದ ಮಹಿಳೆಯರಿಗೆ ಎದುರಾದ ಸವಾಲುಗಳೆಂದರೆ ಜೀವನ ನಿರ್ವಹಣೆಗೆ ಅಡವಿಯಲ್ಲಿ ಅಲೆದು ಕಟ್ಟಿಗೆ ಜೋಡಿಸಿ ಸಂತೆಯನ್ನು ನೆಚ್ಚುವುದು, ಉಳ್ಳವರ ಮನೆ ಹೊಲಗಳಲ್ಲಿ ಕೂಲಿ ಮಾಡುತ್ತ ಹಂತಹಂತವಾಗಿ ಶ್ರಮಕ್ಕೆ ಒಡ್ಡಿಕೊಳ್ಳುವುದೇ ಆಗಿದೆ. ಮೈಸೂರು ಜಿಲ್ಲೆಯ ಅನೇಕ ಗ್ರಾಮಗಳ ಮಹಿಳೆಯರ ಅಳಲು ಹೇಳತೀರದು. ಇವರ ಅನಿಶ್ಚಿತತೆ, ಅಗತ್ಯ, ಅನಿವಾರ್ಯತೆ ಯಾವುದಕ್ಕೂ ಸುಲಭ ದಾರಿಗಳಿಲ್ಲ. ಅವಿರತ ದುಡಿಮೆ, ಹೋರಾಟದ ಜೊತೆಗೆ ಕುಟುಂಬ, ಹೆಂಡಕ್ಕೆ ಅಂಟಿಕೊಂಡಿರುವ ನಿಷ್ಪ್ರಯೋಜಕ ಗಂಡಂದಿರು, ಮಕ್ಕಳು, ಹಿರಿಯರು ಎಲ್ಲರನ್ನೂ ಸಲಹುವ ಮಹಾತಾಯಂದಿರನ್ನು ನೋಡಿ ಸೋಜಿಗದೊಂದಿಗೆ ಗೌರವಿಸಿದೆ. ನನ್ನೊಳಗೆ ದೌರ್ಬಲ್ಯ ಕಾಣಿಸಿದರೆ ಅಲ್ಲಿನ ತಾಯಂದಿರು ಧುತ್ತೆಂದು ಒಳಗಿಳಿದು ಧೈರ್ಯ ತುಂಬುತ್ತಾರೆ. ಚಾಮರಾಜನಗರ ಜಿಲ್ಲೆಯ ಗೋಪಿನಾಥಮ್ ಕಾಡಿನ ಆಸುಪಾಸಿನಲ್ಲಿ ಇರುವ ಮಹಿಳೆಯರ ಅಳಲುಗಳಂತು ಹೇಳತೀರದು. ಬೆಳಗಾದರೆ ಮನೆಯ ಅಂಗಳದಲ್ಲಿ ಅಮಲೇರಿಸಿಕೊಂಡು ಬಿದ್ದಿರುವ ಅನೇಕ ಗಂಡಸರನ್ನು ತಿದ್ದಲಾಗದೆ ಸೋತು ಬಾಳನ್ನು ಉಳಿಸಿಕೊಳ್ಳಲು ನಡುಗಾಡಿನಿಂದ ಉದ್ದನೆಯ ತೂಕದ ತುಂಡುಗಳನ್ನು ಹೊತ್ತು ತಂದು ವ್ಯವಹಾರ. ಬದುಕನ್ನು ಉಸಿರಾಡಿಸುವ ಇಲ್ಲಿನ ಮಹಿಳೆಯರ ನಿತ್ಯದ ಹೋರಾಟಕ್ಕೆ ಮುಕ್ತಿಯೇ ಇಲ್ಲ. ಸರ್ಕಾರ ನಿಮಗೆ ಯಾವ ಅನುಕೂಲ ಮಾಡಿಲ್ಲವೇ ಎಂಬುದಾಗಿ ವಿಚಾರಿಸಿದರೆ ಅಯ್ಯೋ ಓಟಿಗೆ ಬರೋರು ಮಾನೆಟ್ಟ ಜನ ಎಂದೇ ಅವರ ಅಸಲೀ ಮುಖಗಳ ವಂಚನೆಯನ್ನು ಕುರಿತು ಉಗಿಯುತ್ತಾರೆ. ಮಕ್ಕಳಿಗೆ ಮಮತೆಯುಣಿಸಿ ನಶೆಯ ನಿರರ್ಥಕ ಗಂಡಸರನ್ನು ಜತನ ಮಾಡುವ ಇವರ ದೊಡ್ಡತನಕ್ಕೆ ಏನು ಹೇಳಲಿ!?

ಕಳೆದ ಎರಡು ವರ್ಷಗಳ ಹಿಂದೆ ದೊಡ್ಡಬಳ್ಳಾಪುರದ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ಕೆಲಸ ಮಾಡುವ ಒಂದಿಷ್ಟು ಜನ ಹೆಣ್ಣು ಮಕ್ಕಳನ್ನು ಭೇಟಿಮಾಡಿದಾಗ ದುಡಿಮೆಯ ಕುರಿತು ಲವಲವಿಕೆಯಲ್ಲಿ ಮಾತನಾಡಿದರು. ಕಡಿಮೆ ಸಂಬಳದಲ್ಲಿ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡುವ ಈ ತಾಯಂದಿರನ್ನು ನಿಮ್ಮ ಪತಿಯರು ಏನು

ಕೆಲಸ ಕೇಳಿದರೆ ಶೇಕಡಾ ಐವತ್ತಕ್ಕೂ ಹೆಚ್ಚು ಜನ ಮಹಿಳೆಯರು ಥೂ ಉಗೀರಿ ಮಕ್ಕೆ. ಆ ಲಜ್ಜೆಗೆಟ್ಟ ಗಂಡುಸ್ರುನ್ನ ನೆಚ್ಕಂಡ್ರೆ ಮಕ್ಕುಮರಿನ ಬೆನ್ನಿಗೆ ಕಟ್ಕಂಡು ಕೆರೆ ಬಾವಿ ನೋಡ್ಕಬೇಕಷ್ಟೆಯ ಎಂದು ನೊಂದುಕೊಂಡರು. ಬೆಳಾಗೆದ್ರೆ ಇದೇ ಹೋರಾಟ ಹೇಗೆ ಒಗ್ಗಿತು ನಿಮಗೆ ಎಂದರೆ ಅವರ ಬಾಯಲ್ಲಿ ಬಂದ ಮಾತಿಗೆ ಕಣ್ಣೀರು ಬಂತು. ಈ ಗಂಡುಸ್ರು ಕೈಲಿ ಏನು ಕಿಸ್ಯಲ್ಲ ಕಣವ್ವ, ಒಂದಿನ ಹೆಂಗುಸ್ರಿಲ್ಲ ಅಂದ್ರೆ ಮನೆಮಠ ಮಾರ್ಕಂಡು ತಿಕ್ಲತ್ತಿ ತಿರುಗರೆ ನೋಡ್ರಿ ಕೂಳು ನೀರು ಗತಿ ಇಲ್ದಲೆಯ. ದುರ್ಬಲರು ಈ ಗಂಡುಸ್ರು, ಇನ್ನೇನ್ಮಾಡದು ಕಟ್ಕಂಡಿರ ತಪ್ಗೆ ಮಕ್ಕು ಬೀದಿ ಪಾಲಾಗ್ತವೆ ಅಂತ ಹಲ್ಕಚ್ಕಂಡು ಮನೆ, ಮಕ್ಕುನ್ನ ಜ್ವಾಪಾನ ಮಾಡ್ತೀವಿ ಅಂದ್ರು. ಏನೇ ವ್ಯಥೆಯಾದರೂ ಬಾಳನ್ನು ಅರಗಿಸಿಕೊಂಡು ಧೃತಿಗೆಡದೆ ಹೋರಾಡುವ ಇವರಿಗೆ ಯಾವ ಸೂಫಿ, ಸಿದ್ಧರು, ಅವಧೂತರು ಉಪದೇಶ ಮಾಡಿಲ್ಲ. ಎಲ್ಲವೂ ಬದುಕಿನ ಕಣ್ಣರಳಿಸುವ ಸವಾಲುಗಳೆ.

ಅಲೆಮಾರಿ ಮಹಿಳೆಯರನ್ನು ತುಂಬಾ ಕಡೆ ಕಂಡು ಮಾತನಾಡಿಸಿದ್ದೇನೆ. ಅವರ ಗೋಳಂತು ನರಕ. ಆದರೂ ಅವರೆಂದೂ ಬದುಕಲು ಕುಗ್ಗಿದವರಲ್ಲ. ಕುಟುಂಬವನ್ನೇ ಏರ್ಕಂಡು ಊರೂರು ಅಲೆದು, ಹೊರರಾಜ್ಯಗಳಿಗೂ ಹೋಗಿ ಅನೇಕ ಭಾಷೆಗಳನ್ನು ಕಲಿತು ಹೇಗೆಲ್ಲಾ ಬದುಕನ್ನು ಕಾಪಿಟ್ಟುಕೊಳ್ಳುತ್ತಾರೆ. ಜಾಗತೀಕರಣದ ನಂತರ ಹುಟ್ಟಿದ ಉದ್ಯಮಕ್ಕೆ ಹೃದಯವೇ ಇಲ್ಲ. ಇಲ್ಲಿ ಎಲ್ಲವೂ ಲಾಭನಷ್ಟದ ಲೆಕ್ಕಾಚಾರವಷ್ಟೆ. ಎಲ್ಲಾ ಬಗೆಯ ಸಮಾನತೆಗಳಿಗೆ ಒಂದು ಕಾಲ ಬರುತ್ತದೆ ಎಂಬ ಕುರಿತು ವಿಶ್ವಾಸವೇ ಇಲ್ಲ. ಎಲ್ಲಾ ಜಾಗಗಳು ಬಡವರು ಮತ್ತು ಮಹಿಳೆಯರನ್ನೇ ಬಲಿಕೇಳುತ್ತವೆ. ವೃತ್ತಿಕ್ಷೇತ್ರಗಳಲ್ಲಂತೂ ಯಾವ ಹೆಣ್ಣು ಮಗಳು ನಿರುಮ್ಮಳವಾಗಿ ದುಡಿಯಲು ಆಗುತ್ತಿಲ್ಲ. ಒಂದೊಂದು ಭಾಗದಲ್ಲಿಯೂ ನೂರೆಂಟು ತರದ ಶೋಷಣೆ, ಹಲ್ಲೆಗೆ ತಲೆಯೊಡ್ಡಿ ಬದುಕುತ್ತಿರುವ ಮಹಿಳೆಯರಿಗೆ ಯಾವ ರಕ್ಷೆಯೂ ಇಲ್ಲವೆನಿಸುತ್ತದೆ. ಇಂದು ನೂರೆಂಟು ಬಗೆಯ ಮಹಿಳಾ ಚಳುವಳಿಗಳು ನಡೆದು ಒಂದಷ್ಟು ಬದಲಾದ ನೆಮ್ಮದಿ ನ್ಯಾಯ ಸಿಕ್ಕಿದೆ ಎನಿಸಿದರೂ ಕೂಡ ಲೆಕ್ಕಕ್ಕೆ ಸಿಗದಷ್ಟು ಮಹಿಳೆಯರ ಬದುಕು ದನಿಕಳೆದುಕೊಂಡು ತೊಟ್ಟಿಲಿಗೆ ನೇತುಬಿದ್ದು ಸವೆಯುತ್ತಿದೆ. ಮದುವೆ, ಹಡೆಯುವುದು, ಬೇಯುವುದು, ಹೊರಗೆ ದುಡಿಮೆ, ಅವಮಾನ, ಅನುಮಾನ, ಅನಿಶ್ಚಿತ ಬವಣೆಗಳಲ್ಲಿ ನರಳುತ್ತಲೇ ಹೋರಾಡುತ್ತಿರುವವರ ನಡುವೆ ಇವರೆಲ್ಲರ ಒಳಿತಿಗಾಗಿಯೇ ಹೋರಾಡುತ್ತಿರುವ ಮಹಿಳಾ ಸಾಧಕರ ಶಕ್ತಿ ಹೆಚ್ಚಲಿ.

# ಸ್ವಂತಿಕೆಯ ಉಳಿವಿಗಾಗಿ ಹೋರಾಟ

## ಶಾಂತಮ್ಮ ಕೋಲಾರ

"ಮಹಿಳೆ ಮತ್ತು ರಾಜಕೀಯ ಮೀಸಲಾತಿ", "ಮಹಿಳೆ ಮತ್ತು ಸಾಂಸ್ಕೃತಿಕ ರಾಜಕಾರಣ", "ಸರಕು ಸಂಸ್ಕೃತಿ ಮತ್ತು ಮಹಿಳೆ", "ಮಹಿಳಾ ಹೋರಾಟ ಇಂದು" ಕುರಿತಂತೆ ಎಲ್ಲರೂ ಸವಿಸ್ತಾರವಾಗಿ ಮಾತನಾಡಿದ್ದಾರೆ.

ವಿಚಾರಗೋಷ್ಠಿಗಳಲ್ಲಿ 4 ಜನ ಪ್ರಬಂಧ ಮಂಡಿಸಿದರು. ಹಾಗೂ ಪ್ರತೀ ಗೋಷ್ಠಿಗೂ ಇಬ್ಬಿಬ್ಬರು ಪ್ರತಿಕ್ರಿಯೆ ನೀಡಿದ್ದಾರೆ. 2023 ರ ತುಮಕೂರು ಸಮಾವೇಶ ಸಮಾಜವಾದಿ ನೆಲೆಗಟ್ಟಿನ ಮೇಲೆ ಮಹಿಳಾ ಸಮಾನತೆ ಕಟ್ಟುವುದಾಗಿದ್ದು, ಒಕ್ಕೂಟದ ಮೂಲ ಆಶಯ ಧ್ಯೇಯವಾಕ್ಯ "ಸಮಾನತೆಯೆಡೆಗೆ ನಮ್ಮ ನಡಿಗೆ." ತುಮಕೂರು ಜಿಲ್ಲೆಯ ಘೋಷವಾಕ್ಯ "ಸಂವಿಧಾನವೇ ಉಸಿರು; ಬಹುತ್ವವೇ ಬದುಕು" ಎಂದಾಗಿದೆ.

ಮೀಸಲಾತಿಗಾಗಿ ಹೋರಾಡಿ ನಾವು ಅಧಿಕಾರ ಗಳಿಸಿಕೊಂಡರೂ ಸ್ವತಂತ್ರವಾಗಿ ಕೆಲಸ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಗೆದ್ದ ಮಹಿಳೆಯ ಬದಲಿಗೆ ಆಕೆಯ ಪತಿ ಮಾತನಾಡುವ ಸನ್ನಿವೇಶಗಳನ್ನೇ ಹೆಚ್ಚಾಗಿ ಕಾಣುತ್ತಿದ್ದೇವೆ. ಹೀಗಾಗಿ ಮೀಸಲಾತಿ ಪಡೆದರೂ ಕಷ್ಟ ಎನ್ನುವಂತಾಗಿದೆ. ಮೊದಲು ಮಹಿಳೆಯರನ್ನು ಸದೃಢರನ್ನಾಗಿಸಿ ಆ ಸ್ಥಾನಕ್ಕೆ ತರಬೇಕಾಗಿದೆ.

ಸಾಂಸ್ಕೃತಿಕ ರಾಜಕಾರಣದಲ್ಲಿ ರಂಗಭೂಮಿಯಲ್ಲಿಯೂ ಶೋಷಣೆಗಳಾಗುತ್ತಿವೆ. ಇಂತಹ ಬಟ್ಟೆ ತೊಡು, ತಲೆ ಮೇಲೆ ಸೆರಗು ಹೊದೆಯಲು ಹೇಳುವುದು ಇತ್ಯಾದಿ. ಹಾಗೆಯೇ ಸಿನಿಮಾ ಕ್ಷೇತ್ರದಲ್ಲಿ ಕೂಡ ಪುರುಷರ ನಿರ್ದೇಶನದಂತೆಯೇ ಮಹಿಳೆ ನಡೆದುಕೊಳ್ಳಬೇಕಾಗುತ್ತದೆ. ಬಟ್ಟೆ ಹಾಕಿ ಸಂಸ್ಕೃತಿಯನ್ನು ಉಳಿಸಿ ಎನ್ನುವವರು ಪುರುಷರೇ; ಬಟ್ಟೆ ಬಿಚ್ಚಿ ನಮ್ಮನ್ನು ಉಳಿಸಿ ಎನ್ನುವವರು ಪುರುಷರೇ ಆಗಿದ್ದಾರೆ. ಆದರೆ ಆಹಾರ, ಬಟ್ಟೆ ನಮ್ಮ ಹಕ್ಕು. ಅವರು

ಬಿಚ್ಚು ಅಂದಾಗ ಬಿಚ್ಚೋಕೆ ಹಾಕ್ಕೋ ಅಂದಾಗ ಹಾಕೋದಕ್ಕೆ ನಾವು ಅವರ ಕೈಯಾಟದ ಗೊಂಬೆಗಳಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಈ ಹೊತ್ತಿಗೂ ಹೆಣ್ಣನ್ನು ಸರಕಾಗಿಯೇ ನೋಡುತ್ತಾರೆ. ಅವರಿಗೆ ಹುಷಾರಿಲ್ಲದಾಗ, ಅಡಿಗೆ ಮಾಡೋಕಾಗಲ್ಲ ಬಟ್ಟೆ ಒಗೆಯೋಕೆ ಆಗಲ್ಲ ಅಂದ್ರೆ "ನಿನ್ನನ್ನು ತಂದಿರೋದ್ಯಾಕೆ" ಎನ್ನುತ್ತಾರೆ. ತಂದೆ ತಾಯಿಗಳಿಗೆ ಹೇಳಿದರೆ ನಿನ್ನನ್ನು ಕೊಟ್ಟಿರೋದು ಯಾಕೆ ಎನ್ನುತ್ತಾರೆ. ಅವರ ಅಗತ್ಯಗಳಿಗನುಗುಣವಾಗಿ ನಮ್ಮನ್ನು ತರುತ್ತಾರೆಯೇ? ಮಹಿಳೆ ಒಂದು ಮಷಿನ್ನಾ? ಮನೆಯ ಫ್ರಿಜ್, ವಾಷಿಂಗ್ ಮಷಿನ್ ಇತ್ಯಾದಿಗಳಂತೆ ಹೆಣ್ಣನ್ನು ಒಂದು ಸರಕಿನಂತೆ ಕಾಣುವ ಮನೋಭಾವ ಹೆಚ್ಚಾಗಿದೆ. ದೌರ್ಜನ್ಯ ರಹಿತ ಸಮಾಜದ ಕನಸನ್ನು ಕಾಣುವ ನಾವು ಶೋಷಣೆಗಳಿಗೆ ಬಲಿಯಾಗುತ್ತಲೇ ಬದುಕುತ್ತಿದ್ದೇವೆ. ನಿತ್ಯದ ನಮ್ಮ ಅಗತ್ಯ ಅನಿವಾರ್ಯತೆಗಳಿಗೂ ಕೂಡ ಸಾಕಷ್ಟು ಹೋರಾಡುವುದೇ ಆಗಿದೆ.

ಇಲ್ಲಿ ಇಷ್ಟೆಲ್ಲಾ ಹೆಣ್ಣು ಮಕ್ಕಳು ಸೇರಿದ್ದೀವಿ. ನಮ್ಮ ಕಾರ್ಯಕ್ರಮ ಅಂದುಕೊಂಡಿದ್ದೀವಿ. ಆದರೆ ಬಹುತೇಕರ ಮನಸ್ಸು ಇಲ್ಲಿಲ್ಲವೇ ಇಲ್ಲ. ಗೃಹಿಣಿಯರಾಗಿದ್ದರೆ ನಮ್ಮ ನಮ್ಮ ಮನೆಗಳಲ್ಲಿ ಏನಾಯ್ತೋ, ಗಂಡ ಮಕ್ಕಳು ಏನು ಮಾಡುತ್ತಿದ್ದಾರೋ ಅನ್ನುವ ಯೋಚನೆ ಕಾಡಿದರೆ; ಉದ್ಯೋಗಸ್ಥ ಮಹಿಳೆಯರಿಗೆ ತಮ್ಮ ಕೆಲಸ ಕುರಿತ ಆತಂಕಗಳು ಕಾಡುತ್ತವೆ.

ಇಷ್ಟೆಲ್ಲದರ ನಡುವೆಯೂ ಸಮಸಮಾಜಕ್ಕಾಗಿ ತಮ್ಮ ಸ್ವಂತಿಕೆಯ ಉಳಿವಿಗಾಗಿ ನಾವು ಹೋರಾಡುವುದು ನಮಗೆ ಅನಿವಾರ್ಯವಾಗಿದೆ.

ಬರಹ ರೂಪ: ರಂಗಮ್ಮ ಹೊದೆಕಲ್

# ಪಯಣದ ಅಂಚಿನಲಿ ಅರಿವು ಸಾಗುತ್ತಿರಲಿ

ಡಾ. ಸುಲೋಚನಾ

ರೇಡಿಯೋ ಸಿದ್ಧಾರ್ಥ

ದಿನಾಂಕ: 03–03–2023 ರಂದು ಬೆಳಗ್ಗೆ 10:30 ಕ್ಕೆ ತುಮಕೂರು ನಗರದ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿ ನಡೆಯಿತು. 'ಸಮತೆಯೆಡೆಗೆ ನಮ್ಮ ನಡಿಗೆ' ಹಾಗೂ 'ಸಂವಿಧಾನವೇ ಉಸಿರು ಬಹುತ್ವವೇ ಬದುಕು' ಎಂಬ ಧ್ಯೇಯವಾಕ್ಯಗಳ ಅಡಿಯಲ್ಲಿ ತುಮಕೂರಿನಲ್ಲಿ ಇದೇ ಮಾರ್ಚ್ 7 ಮತ್ತು 8 ರಂದು ಬೃಹತ್ ಮಟ್ಟದ ಸಮಾವೇಶವನ್ನು ಆಯೋಜನೆ ಮಾಡಿರುವ ಕುರಿತು ಮಾಹಿತಿ ನೀಡಿದರು. ಕರ್ನಾಟಕದ ವಿವಿಧ ಭಾಗಗಳಿಂದ ಪುರುಷರು ಮತ್ತು ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸಾಹಿತ್ಯ ಸಂಘಟನೆ, ರಂಗಕರ್ಮಿಗಳು, ಲೇಖಕಿಯರ ಸಂಘ, ಪ್ರಗತಿಪರ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ಆಶಾ ಕಾರ್ಯಕರ್ತೆಯರು, ಅಕಾಡೆಮಿಕ್ ಮಹಿಳಾ ಬಳಗ, ಸರ್ವಧರ್ಮ, ಲಿಂಗ ತಾರತಮ್ಯತೆ ಇಲ್ಲದಂತೆ ಎಲ್ಲರೂ ಕೂಡ ಭಾಗಿಯಾಗಬಹುದೆಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಲಾಗಿತ್ತು.

ತುಮಕೂರಿನ ಖ್ಯಾತ ಸಾಹಿತಿ ಹಾಗೂ ಪ್ರಗತಿಪರ ಚಿಂತಕರಾದ ಬಾ.ಹ. ರಮಾಕುಮಾರಿ, ಶೈಲಾ ನಾಗರಾಜ್, ಮಲ್ಲಿಕಾ ಬಸವರಾಜು, ಡಾ. ಅರುಂಧತಿ, ರಾಣಿ ಚಂದ್ರಶೇಖರ್, ಪ್ರವೇಣಿ, ಕಲ್ಯಾಣಿ ಮುಂತಾದ ಪ್ರಗತಿಪರ ಚಿಂತಕರು ಗೋಷ್ಠಿಯಲ್ಲಿ ಹಾಜರಿದ್ದು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದರು. ತುಮಕೂರಿನ ಸಮುದಾಯ ಬಾನುಲಿ ರೇಡಿಯೋ ಸಿದ್ಧಾರ್ಥದಿಂದ ಮಾಧ್ಯಮ ಪ್ರತಿನಿಧಿಯಾಗಿ ನಾನು ಸಹ ಭಾಗವಹಿಸಿದ್ದೆ. ಈ ಪತ್ರಿಕಾ ಗೋಷ್ಟಿಯಲ್ಲಿ ತುಮಕೂರು ಪತ್ರಕರ್ತರ ಸಂಘದ ಅಧ್ಯಕ್ಷರಾಗಿರುವ ಚಿ ನಿ ಪುರುಷೋತ್ತಮ್, ದೂರದರ್ಶನದ ಪ್ರತಿನಿಧಿ ಈರಣ್ಣ, ಟಿವಿ9 ಮಹೇಶ್, ಸುವರ್ಣ ವಾಹಿನಿ ಮಹಂತೇಶ್, ಪಬ್ಲಿಕ್ ಟಿವಿಯ ಮಂಜುನಾಥ್, ಪ್ರಜಾವಾಣಿಯ ಮರಿಯಪ್ಪ ವಿಜಯಕರ್ನಾಟಕದ ಶಶಿಧರ್,

ವಿಜಯವಾಣಿಯ ಜಗನ್ನಾಥ್, ವಿಶ್ವಕನ್ನಡಿಯ ಸತೀಶ್, ಪ್ರಜಾಪ್ರಗತಿಯ ವರದಿಗಾರರು ಹಾಗೂ ಬಹುತೇಕ ಮಂದಿ ವಿವಿಧ ಖಾಸಗಿ ವಾಹಿನಿಗಳ ವರದಿಗಾರರು ಹಾಜರಿದ್ದರು.

ಮಾಧ್ಯಮದವರು ಈ ಪತ್ರಿಕಾಗೋಷ್ಟಿಯಲ್ಲಿ ಈ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಮೂಲ ಉದ್ದೇಶ ಮತ್ತು ಸಾಮಾಜಿಕ ಕಳಕಳಿಯ ಬಗೆಗೆ ಕೆಲವು ಪ್ರಶ್ನೆಗಳನ್ನು ಕೇಳಿದರು.

**ಪ್ರಶ್ನೆ: ಈ ಬೃಹತ್ ಸಮಾವೇಶ ಯಾವುದಾದರೂ ರಾಜಕೀಯ ಪಕ್ಷದ ಸಿದ್ಧಾಂತಕ್ಕೆ ಒಳಗೊಂಡಿದೆಯೇ?**

ಉತ್ತರ: ಇಲ್ಲ ಈ ಸಂಘಟನೆ ಸಂಪೂರ್ಣವಾಗಿ ಜನಪರವಾದದ್ದು ಯಾವುದೇ ರಾಜಕೀಯ ಪೂರ್ವಾಗ್ರಹಗಳಿಲ್ಲದಂತೆ ಶೋಷಿತ ಸಮುದಾಯಗಳ ಮತ್ತು ಮಹಿಳೆಯರ ದನಿಯಾಗಲು, ಸಮಾಜದಲ್ಲಿ ತುಳಿತಕ್ಕೊಳಪಟ್ಟ ಸಮೂಹಕ್ಕೆ ಸಾಮಾಜಿಕ ನ್ಯಾಯ ದೊರಕಿಸುವ ಮಹತ್ವದ ಸಮಾವೇಶವಾಗಿದೆ

**ಪ್ರಶ್ನೆ: ವಿಧಾನಸಭಾ ಚುನಾವಣೆ ಸಮೀಪಿಸುತ್ತಿದೆ. ಚುನಾವಣಾ ಪ್ರೋಟೋಕಾಲ್ ಗಳನ್ನು ಈ ಎರಡು ದಿನದ ಸಮಾವೇಶದಲ್ಲಿ ಕಡ್ಡಾಯವಾಗಿ ಅನುಸರಿಸುತ್ತೀರಾ?**

ಉತ್ತರ: ವಿಧಾನಸಭಾ ಚುನಾವಣೆಯ ಎಲ್ಲಾ ಪ್ರೋಟೋಕಾಲ್ ಗಳನ್ನು ನಮ್ಮ ಸಂಘಟನೆಯ ಎಲ್ಲಾ ಸಂಗಾತಿಗಳು ಸಹ ಕಡ್ಡಾಯವಾಗಿ ಅನುಸರಿಸುತ್ತಿದ್ದೇವೆ. ಯಾವುದೇ ರಾಜಕೀಯ ಪಕ್ಷದ ಪ್ರಣಾಳಿಕೆಗಳು, ಚಿಹ್ನೆ, ಅಜೆಂಡಾ ಅಥವಾ ಯಾವುದೇ ರಾಜಕೀಯ ವ್ಯಕ್ತಿಗಳನ್ನು ಈ ಸಮಾವೇಶಕ್ಕೆ ನಾವು ಆಹ್ವಾನಿಸುತ್ತಿಲ್ಲ. ಇದು ಸಂಪೂರ್ಣವಾಗಿ ಸಾಮಾನ್ಯ ಜನರ ನಾಡಿಮಿಡಿತಗಳನ್ನು ಒಳಗೊಂಡಿದೆ.

**ಪ್ರಶ್ನೆ: ಗ್ರಾಮೀಣ ಮಹಿಳೆಯರು ನಿಮ್ಮ ಈ ಸಮಾವೇಶದಲ್ಲಿ ಭಾಗಿಯಾಗುತ್ತಿದ್ದಾರೆಯೇ? ಈ ಸಮಾವೇಶದ ಬಗೆಗೆ ಗ್ರಾಮೀಣ ಮಟ್ಟದಲ್ಲಿ ಸಹ ಅರಿವಿದೆಯೇ?**

ಉತ್ತರ: ಹೌದು "ಅರಿವಿನ ಪಯಣ" ಎಂಬ ಕಾರ್ಯಕ್ರಮದ ಮೂಲಕ ಹಲವಾರು ಹಳ್ಳಿಗಳಲ್ಲಿ, ವಾರ್ಡ್ ಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ, ಹಟ್ಟಿಗಳಲ್ಲಿ, ಕೆಲವು ಕುಗ್ರಾಮಗಳಲ್ಲಿ ಸಹ ಸಭೆ ಮತ್ತು ಅಂದೋಲನಗಳನ್ನು ಆಯೋಜನೆ ಮಾಡಲಾಗಿದ್ದು ಶ್ರೀ ಸಾಮಾನ್ಯರ ಜೊತೆಗೆ ದಲಿತರು, ದಮನಿತರು, ಕಾರ್ಮಿಕರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಕೂಲಿಕಾರ್ಮಿಕರು, ಶಾಲೆ

ಕಾಲೇಜುಗಳ ವಿದ್ಯಾರ್ಥಿಗಳೊಟ್ಟಿಗೆ ಸಹ ಒಡನಾಟ ಹೊಂದಿದ್ದೇವೆ. ಅವರೆಲ್ಲರೂ ಸಹ ಈ ಸಮಾವೇಶದಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಮೇಲಿನ ಎಲ್ಲಾ ವಿಷಯಗಳ ಬಗೆಗೆ ಚರ್ಚೆಯಾಯಿತು. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಷಯಗಳ ಕುರಿತಾದ ಕಿರುಹೊತ್ತಿಗೆಗಳು, ಪೋಸ್ಟರ್ಸ್ ಗಳು ಕರಪತ್ರಗಳನ್ನು ಈ ಸಂದರ್ಭದಲ್ಲಿ ವಿತರಿಸಲಾಯಿತು.

ದಿ: 3.3.2023 ರಂದು ನಡೆದ ಈ ಪತ್ರಿಕಾಗೋಷ್ಠಿಯ ಮುಖ್ಯ ಭಾಗಗಳನ್ನು ನಾವು ನಮ್ಮ ತುಮಕೂರಿನ ಹೆಮ್ಮೆಯ ಸಮುದಾಯ ವಾಹಿನಿ ರೇಡಿಯೋ ಸಿದ್ಧಾರ್ಥ 90.8 ನಲ್ಲಿ ಸಹ ಧ್ವನಿಮುದ್ರಿತ ಪ್ರಸಾರ ಮಾಡಿದ್ದೆವು. ಖಾಸಗಿ ವಾಹಿನಿಗಳಲ್ಲಿ ಮತ್ತು ಸ್ಥಳೀಯ ಹಾಗೂ ರಾಜ್ಯ ಮಟ್ಟದಲ್ಲಿನ ಪತ್ರಿಕೆಗಳಲ್ಲಿ ಸಹ ದಿ: 4.03.2023 ರಂದು ಈ ಪತ್ರಿಕಾಗೋಷ್ಠಿಯ ವರದಿಗಳು ಪ್ರಕಟಗೊಂಡಿವೆ.

ಅದರಂತೆ ಮಾರ್ಚ್ 7, 2023 ರ ಬೆಳಗ್ಗೆ 10 ಕ್ಕೆ ಟೌನ್ ಹಾಲ್ ವೃತ್ತದಿಂದ ಅಮಾನಿಕೆರೆಯ ಗಾಜಿನ ಮನೆಯವರೆಗೆ ಹಕ್ಕೊತ್ತಾಯ ಜಾಥಾ, ಮೆರವಣಿಗೆ ನಡೆಯಿತು. ಮೆರವಣಿಗೆಯನ್ನು ಜಿಲ್ಲಾ ಪಂಚಾಯತ್ತಿನ ಸಿ ಇ ಒ ಡಾ. ಕೆ ವಿದ್ಯಾಕುಮಾರಿ ಅವರು ಉದ್ಘಾಟಿಸಿ ಸಾಮಾನ್ಯ ಮಹಿಳೆಗೂ ಗೌರವ ಸಿಗುವಂತಾದಾಗ ಮಾತ್ರ ಇಂತಹ ದಿನಾಚರಣೆಗೆ ಅರ್ಥ ಸಿಗುತ್ತದೆ ಎಂದರು. ಕೇರಳದ ಮಾಜಿ ಆರೋಗ್ಯ ಮಂತ್ರಿಗಳಾದ ಕೆ ಕೆ ಶೈಲಜಾ ಅವರು ಕಾರ್ಯಕ್ರಮದ ದಿಕ್ಸೂಚಿ ಮಾತುಗಳನ್ನಾಡಿ, ಅಪಾಯದಲ್ಲಿರುವ ಸಂವಿಧಾನ ಮತ್ತು ಅದರ ಆಶಯಗಳನ್ನು ರಕ್ಷಿಸಬೇಕೆಂದು ತಿಳಿಸಿದರು.

ಮಾರ್ಚ್ 8, 2023 ರ ಬೆಳಗ್ಗೆ 10 ಗಂಟೆಗೆ ಗುಬ್ಬಿವೀರಣ್ಣ ರಂಗಮಂದಿರದಲ್ಲಿ “ಹೆಣ್ಣು ಬದುಕು: ಸವಾಲು–ಸಾಧ್ಯತೆಗಳು” ಎಂಬ ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಹಾಗೂ ವಿವಿಧ ಜಿಲ್ಲೆಯ ಮಹಿಳೆ / ಪುರುಷರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಾವಿರಾರು ಮಹಿಳೆಯರನ್ನು, ಪುರುಷರನ್ನು, ವಿದ್ಯಾರ್ಥಿಗಳು ಮತ್ತು ಯುವ ವೃಂದವನ್ನು ತನ್ನತ್ತ ಸೆಳೆದು ಅರ್ಥಪೂರ್ಣವಾಗಿ ಸಂಪನ್ನಗೊಂಡ ಈ ಕಾರ್ಯಕ್ರಮ ತುಮಕೂರಿನಲ್ಲಿ ಒಂದು ಇತಿಹಾಸ ಸೃಷ್ಟಿಸಿತು. ಎಂದೂ ಕೊನೆಗೊಳ್ಳದ “ಅರಿವಿನ ಪಯಣ” ನಿರಂತರವಾಗಿ ನಡೆಯುತ್ತಿರಲಿ. ದುರಿತ ಕಾಲದ ಅನಿಶ್ಚಿತ ಕಾಲಘಟ್ಟದಲ್ಲಿ ಎದೆಗುಂದಿ ನಿಂತಿರುವ ಮಹಿಳೆ ಮತ್ತು ಜನಸಮುದಾಯಕ್ಕೆ ಅರಿವನ್ನು ಹಂಚಿ ಜಾಗೃತಗೊಳಿಸುವ ಕೆಲಸ ನಿಲ್ಲದಿರಲಿ ಎಂದು ಹಾರೈಸುತ್ತೇನೆ.

# ಅನ್ಯಾಯ ದೌರ್ಜನ್ಯಗಳ ವಿರುದ್ಧ ದನಿ ಎತ್ತಿದ ಒಕ್ಕೂಟ

ಬಾ ಹ ರಮಾಕುಮಾರಿ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ 2023 ನೇ ಸಾಲಿನಲ್ಲಿ ಮಹಿಳಾ ದಿನಾಚರಣೆ ಆಚರಿಸಲು ತುಮಕೂರು ಜಿಲ್ಲೆ ಆಯ್ಕೆಯಾಯಿತು. ವಿವಿಧ ದಿನಗಳಂದು ಸಭೆಗಳು, ಅರಿವಿನ ಪಯಣದ ಕಾರ್ಯಾಗಾರಗಳು ನಡೆದವು. 2022ನೇ ಆಗಸ್ಟ್ 19, 20, 21 ರಂದು ಮೂರು ದಿನಗಳ ಅಧ್ಯಯನ ಶಿಬಿರ ಆಯೋಜಿಸಲಾಗಿತ್ತು. ಆ ವೇಳೆಯಲ್ಲಿ ಗುಜರಾತಿನ ಬಿಲ್ಕಿಸ್ ಬಾನು ಭೀಕರ ಅತ್ಯಾಚಾರ ಪ್ರಕರಣದ ಅಪರಾಧಿಗಳನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಅವರ ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಿದ ಸುದ್ದಿ ಆಘಾತ ಉಂಟು ಮಾಡಿತು. ವಿವಿಧ ಜಿಲ್ಲೆ ವಿವಿಧ ಸಂಘಟನೆಗಳಿಂದ ಬಂದು ಶಿಬಿರದಲ್ಲಿ ಪಾಲ್ಗೊಂಡಿದ್ದವರಲ್ಲಿ ವಿದ್ಯುತ್ ಸಂಚಾರವಾದಂತಾಗಿ ಕೂಡಲೇ ತುಮಕೂರು ಸಿಐಟಿಯು ಸಂಗಾತಿಗಳ ಸಹಕಾರದಿಂದ ಅಂದೇ ಪ್ರತಿಭಟನೆಗೆ ಸಿದ್ಧಗೊಂಡು ಎಲ್ಲರೂ ಟೌನ್ ಹಾಲ್ ಸರ್ಕಲ್ ಬಳಿ ದೌಡಾಯಿಸಿ ಮಾನವ ಸರಪಳಿ ನಿರ್ಮಿಸಿ ಘಟನೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಲಾಯಿತು.

ಸಾಮೂಹಿಕ ಅತ್ಯಾಚಾರಿ ಅಪರಾಧಿಗಳನ್ನು ಸನ್ನಡತೆ ಹೆಸರಿನಲ್ಲಿ ಬಿಡುಗಡೆ ಮಾಡಿರುವ ಕ್ರಮ ನಾಗರಿಕ ಸಮಾಜಕ್ಕೆ ಎಸಗುವ ಅಪಮಾನ. ಸಮಾಜಕ್ಕೆ ತಪ್ಪು ಸಂದೇಶ ರವಾನಿಸಿದಂತಾಗಿದೆ. ಈಗಾಗಲೇ ಗಾಬರಿ ಹುಟ್ಟಿಸುವಂತಹ ರೀತಿಯಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಲೆ ಇದ್ದು ಇಂತಹ ನೀತಿಗಳು ಅಪರಾಧಕ್ಕೆ ಉತ್ತೇಜಿಸಿದಂತಾಗುತ್ತದೆ. ಗುಜರಾತಿನಲ್ಲಿ ಈ ಅಪರಾಧಿಗಳು ಜೈಲಿನಿಂದ ಹೊರ ಬರುತ್ತಿದ್ದಂತೆ ತಿಲಕ ಇಟ್ಟು ಸ್ವಾಗತಿಸಿ ಸಂಭ್ರಮಿಸಿದ್ದನ್ನು ನೋಡಿದರೆ ನಾವೆಷ್ಟು ಅನಾಗರಿಕರು ಎಂಬುದನ್ನು ಸೂಚಿಸುತ್ತದೆ. ಇಂತಹ ಘನ ಘೋರ ಕೃತ್ಯವ್ಯಸಗಿದವರನ್ನು ಸನ್ನಡತೆ ಮೇಲೆ ಬಿಡುಗಡೆ ಮಾಡಬೇಕೆಂದು ಕಾನೂನಾಗಲಿ

ಯಾರೇ ಆಗಲಿ ಹೇಳಲು ಸಾಧ್ಯವಿಲ್ಲ. ಆದರೆ ಸರ್ಕಾರ ಇದನ್ನು ಮಾಡಿ ಮಹಿಳಾ ವಿರೋಧಿ ಎನಿಸಿಕೊಂಡಿದೆ ಎಂದೆಲ್ಲಾ ಪ್ರತಿಭಟನಾಕಾರರು ಅಭಿಪ್ರಾಯಪಟ್ಟರು. ಸರ್ಕಾರದ ಈ ತೀರ್ಮಾನ ದೇಶಕ್ಕೆ ದೊಡ್ಡ ಕಳಂಕ ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಮೀನಾಕ್ಷಿ ಬಾಳಿ ಅವರು ಆಕ್ರೋಶ ವ್ಯಕ್ತಪಡಿಸಿದರು

ಈ ಪ್ರತಿಭಟನೆಯಲ್ಲಿ ಬಾ ಹ ರಮಾಕುಮಾರಿ, ಡಾ. ಬಿ ಸಿ ಶೈಲಾ ನಾಗರಾಜ್, ಡಾ. ಅರುಂಧತಿ, ಲೇಖಕಿಯರ ಸಂಘದ ಮಲ್ಲಿಕಾ ಬಸವರಾಜು, ಸಮರ್ಥ್ ಫೌಂಡೇಶನ್ ನ ರಾಣಿ ಚಂದ್ರಶೇಖರ್, ಸಿ ಐ ಟಿ ಯು ನ ಸೈಯದ್ ಮುಜೀಬ್, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ಬಿ ಉಮೇಶ್, ಅಜ್ಜಪ್ಪ, ಸೈಯದ್ ತಾಜುದ್ದೀನ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಂ ಕೆ ಸುಬ್ರಹ್ಮಣ್ಯ, ಪಂಚಾಯತ್ ನೌಕರರ ಸಂಘದ ನಾಗೇಶ್, ಲಲಿತಾ ಮಲ್ಲಪ್ಪ, ಪಾರ್ವತಮ್ಮ ರಾಜಕುಮಾರ್, ಗಂಗಲಕ್ಷ್ಮಿ, ಎ ಎಲ್ ಲೀಲಾವತಿ, ರಾಜ್ಯ ಒಕ್ಕೂಟದ ಸಂಗಾತಿಗಳಾದ ಜನಶಕ್ತಿಯ ಮಲ್ಲಿಗೆ ಸಿರಿಮನೆ, ಗೌರಿ, ಅಖಿಲಾ ವಿದ್ಯಾಸಂದ್ರ, ಧಾರವಾಡದ ಶಾರದಾ ಗೋಪಾಲ್, ಮೈಸೂರಿನ ರತಿ ರಾವ್, ಇ. ಮಮತಾ, ಯಜಮಾನ್, ವಕೀಲರಾದ ಶಾರದಾ ಬಾಯಿ ಜಿ, ಶಿವಮೊಗ್ಗದ ಭಾಗೀರಥಿ, ಕೆ ಬಿ ರೇಣುಕಾ, ಮೈಸೂರಿನ ಬಿ ಸಿ ಮಂಜುಳಾ, ಕೋಲಾರದ ನೇತ್ರಾವತಿ, ಕೆ ವಿ ಪುಷ್ಪಲತಾ, ಹೊಸಪೇಟೆಯ ನಸ್ರೀನ್, ಮರಿಯಂಬಿ, ಲತಾ ಮುಂತಾದ ನೂರಾರು ಜನ ಭಾಗವಹಿಸಿದ್ದು ಬಹುದೊಡ್ಡ ಪ್ರತಿಭಟನೆ, ಮಾನವ ಸರಪಳಿ ತುಮಕೂರಿನಲ್ಲಿ ಒಂದು ಇತಿಹಾಸ ಸೃಷ್ಟಿಸಿತು.

ಅಪರಾಧಿಗಳ ಬಿಡುಗಡೆಯನ್ನು ರದ್ದುಗೊಳಿಸಿ ತಕ್ಷಣವೇ ಅವರನ್ನು ಪುನರ್ಬಂಧಿಸಿ, ಶಿಕ್ಷೆಗೆ ಒಳಪಡಿಸಿ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿಯಬೇಕೆಂದು ರಾಷ್ಟ್ರಪತಿಗಳಿಗೆ ಒಕ್ಕೂಟದ ಪರವಾಗಿ ಮನವಿ ಕಳುಹಿಸಲಾಯಿತು.

ಈ ಬೆಳವಣಿಗೆಯ ಜೊತೆಯಲ್ಲಿಯೇ 11 ಜನ ಅಪರಾಧಿಗಳ ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್, ಸಾಮಾಜಿಕ ಕಾರ್ಯಕರ್ತೆ ರೂಪ ರೇಖಾ ರಾಣಿ ಅರ್ಜಿ ಸಲ್ಲಿಸಿದ್ದು, ಅರ್ಜಿಯ ಪರವಾಗಿ ವಕೀಲರಾದ ಕಪಿಲ್ ಸಿಬಲ್ ಮತ್ತು ಅಪರ್ಣಾ ಭಟ್ ವಾದ ಮಂಡಿಸಿ ಅರ್ಜಿಯ ವಿಚಾರಣೆಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಬೇಕೆಂದು ಮನವಿ ಮಾಡಿದರು. ಅರ್ಜಿಯ ಮುಖ್ಯ ಪ್ರಶ್ನೆ

"ನಾವು ಅವಧಿ ಪೂರ್ವ ಬಿಡುಗಡೆಯನ್ನು ಪ್ರಶ್ನಿಸುತ್ತಿದ್ದೇವೆ ಹೊರತು ಕೋರ್ಟ್ ಆದೇಶವನ್ನಲ್ಲ. ನ್ಯಾಯಾಲಯವು ಸರಿಯಾಗಿಯೇ ಮಾಡಿದೆ. ಆದರೆ ಗುಜರಾತ್ ಸರ್ಕಾರವು ಯಾವ ಆಧಾರದಲ್ಲಿ ಅತ್ಯಾಚಾರ ಅಪರಾಧಿಗಳನ್ನು ಬಿಡುಗಡೆ ಮಾಡಿತು ಎಂಬುದಷ್ಟೇ ನಮ್ಮ ಪ್ರಶ್ನೆ" ಎಂದು ವಕೀಲರು ನ್ಯಾಯಾಲಯಕ್ಕೆ ಹೇಳಿದ್ದಾರೆ. ಈ ಬಗ್ಗೆ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಕೂಡ ಪ್ರತ್ಯೇಕ ಅರ್ಜಿ ಸಲ್ಲಿಸಿರುವುದನ್ನು ಕೂಡ ಗಮನಿಸಬೇಕು

ಈ ಒಂದು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತ್ವರಿತವಾಗಿ ಸ್ಪಂದಿಸಿ, ವಿಚಾರಣೆ ನಡೆಸಿ, ಆದೇಶವನ್ನು ರದ್ದುಗೊಳಿಸಿ, ಬಿಡುಗಡೆಗೊಂಡಿದ್ದ ಅಪರಾಧಿಗಳನ್ನು ಪುನಃ ಜೈಲು ಸೇರುವಂತೆ ಆದೇಶ ಮಾಡಿ ನ್ಯಾಯವನ್ನು ಎತ್ತಿ ಹಿಡಿದು ಸಾರ್ವಜನಿಕರ ಮನದಲ್ಲಿ ನ್ಯಾಯಸ್ಥಾನದ ಬಗೆಗಿನ ನಂಬಿಕೆಯನ್ನು ಪುನಃಸ್ಥಾಪನೆಗೊಳಿಸಿದೆ. ಅಲ್ಲದೆ ಅಪರಾಧಿಗಳು ಕೌಟುಂಬಿಕ ಸಮಸ್ಯೆ ಮುಂದೆ ಮಾಡಿ ಕಾಲಾವಕಾಶ ಕೋರಿ ಸಲ್ಲಿಸಿದ್ದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿ ಅಪರಾಧದ ವಿರುದ್ಧ ನಿಂತಿರುವುದು ಸ್ವಾಗತಾರ್ಹ. ಎಲ್ಲ ಹೋರಾಟಗಾರರಿಗೂ ಧನ್ಯವಾದಗಳು. ಅಭಿನಂದನೆಗಳು.

### ಏನಿದು ಪ್ರಕರಣ?

2002ರಲ್ಲಿ ವಿಶ್ವವೇ ಛೀಮಾರಿ ಹಾಕಿದ ಗೋಧ್ರಾ ಹತ್ಯಾಕಾಂಡದ ನರಸಂಹಾರದ ಸಂದರ್ಭದಲ್ಲಿ ಬಿಲ್ಕಿಸ್ ಬಾನು ಎಂಬ ಮಹಿಳೆ ಕುಟುಂಬದ ಸದಸ್ಯರೊಂದಿಗೆ ಜೀವ ರಕ್ಷಿಸಿಕೊಳ್ಳಲು ಹೋಗುತ್ತಿರುವಾಗ ಅಟ್ಟಾಡಿಸಿಕೊಂಡು ಬಂದ ದುಷ್ಕರ್ಮಿಗಳು ಐದು ತಿಂಗಳ ಗರ್ಭಿಣಿ ಬಿಲ್ಕಿಸ್ ಬಾನುವಿನ ಮೇಲೆ ಅತ್ಯಾಚಾರ ಎಸಗಿದ್ದಲ್ಲದೇ ಅವಳ ಕುಟುಂಬದ ಏಳು ಸದಸ್ಯರನ್ನು ಬರ್ಬರವಾಗಿ ಹತ್ಯೆಗೈದರು.

ಅವಳು ಸತ್ತೇಹೋದಳೆಂದು ಭಾವಿಸಿ ದುಷ್ಕರ್ಮಿಗಳು ಕೆಲಸ ಮುಗಿಯಿತೆಂದು ಪರಾರಿಯಾದರು. ಆಶ್ಚರ್ಯವೆಂಬಂತೆ ಬಿಲ್ಕಿಸ್ ಬಾನು ಎದ್ದುಬಂದು ಧೀಮಂತಿಕೆಯಿಂದ ಪೊಲೀಸರಿಗೆ ದೂರನ್ನು ಕೂಡಾ ಸಲ್ಲಿಸಿದಳು. ಅಲ್ಲಿಯೂ ನ್ಯಾಯ ಸಿಗುವುದಿಲ್ಲವೆಂದು ಗೊತ್ತಾದಾಗ ಮಾನವ ಹಕ್ಕು ಆಯೋಗಕ್ಕೆ ದೂರು ಸಲ್ಲಿಸಿ ಹರಸಾಹಸ ಪಟ್ಟು ನ್ಯಾಯ ಪಡೆಯುವಲ್ಲಿ ಸಫಲಳಾಗಿದ್ದಳು. ಇಡೀ ಗೋಧ್ರಾ ಘಟನೆ ಕೋಮುವಾದಿ ರಾಜಕಾರಣದ ಚಕ್ರವ್ಯೂಹವೇ ಆಗಿತ್ತು. ಹೀಗಾಗಿ ಗುಜರಾತಿನಲ್ಲಿ ನ್ಯಾಯ ಪ್ರಕ್ರಿಯೆ ನಡೆಯುವುದು ಉಚಿತವಲ್ಲವೆಂದು

ಪ್ರಕರಣವನ್ನು ಮುಂಬೈ ಹೈಕೋರ್ಟಿಗೆ ವರ್ಗಾಯಿಸಲಾಗಿತ್ತು. ಅಲ್ಲಿ ಸಕಲ ಸಾಕ್ಷಿ ಪುರಾವೆಗಳೊಂದಿಗೆ ನಡೆದ ಘಟನೆ ಧೃಡೀಕರಣಗೊಂಡು 11 ಜನರನ್ನು ಅಪರಾಧಿಗಳೆಂದು ಸಾಬೀತಾಗಿ ಅವರಿಗೆಲ್ಲ ಜನವರಿ 21, 2008ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ಇಂಥ ಬರ್ಬರಿಕ ರೇಪಿಸ್ಟ್ ಗಳನ್ನು 'ಅಜಾದೀಕಾ ಅಮೃತ ಮಹೋತ್ಸವ'ದ ಸಂಭ್ರಮದ ಸಂದರ್ಭದಲ್ಲಿ 75ನೇ ಸ್ವಾತಂತ್ರ್ಯೋತ್ಸವ ಅಗಸ್ಟ್ ಹದಿನೈದರಂದು ಕ್ಷಮಾದಾನ ನೀಡಿ ಬಿಡುಗಡೆ ಗೊಳಿಸಲಾಗಿದೆ. ಬಿಡುಗಡೆಗೊಂಡ ಅಪರಾಧಿಗಳನ್ನು ತಿಲಕವಿಟ್ಟು, ಹೂಹಾರ ಹಾಕಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದ್ದು ಮಹಿಳಾ ಲೋಕಕ್ಕೆ ಮಾಡಿದ ಅಕ್ರಮ ಅಪಚಾರ. ಏಕೆಂದರೆ ಅತ್ಯಾಚಾರ, ಭ್ರಷ್ಟಾಚಾರ, ಕೊಲೆ ಇಂಥ ನೀಚ ಕೃತ್ಯಗಳಲ್ಲಿ ತೊಡಗಿಕೊಂಡು ಶಿಕ್ಷೆಗೆ ಒಳಗಾದ ಅಪರಾಧಿಗಳಿಗೆ ಕ್ಷಮಾದಾನ ಕೊಡಕೂಡದು ಎಂದು ಕೇಂದ್ರ ಸರಕಾರದ ಸ್ಪಷ್ಟ ಅದೇಶವಿದೆ. ಹೀಗಿರುವಾಗಲೂ ಈ 11 ಅಪರಾಧಿಗಳನ್ನು ಸನ್ನಡತೆಯ ನೆಪವೊಡ್ಡಿ ಬಿಡುಗಡೆಗೊಳಿಸಲಾಗಿದೆ. ಗ್ಯಾಂಗ್ ರೇಪ್ ಮಾಡಿ 7 ಜನರನ್ನು ಛಿದ್ರ ಛಿದ್ರ ಮಾಡಿದ, ಗರ್ಭಿಣಿ ಮಹಿಳೆಯನ್ನು 22 ಬಾರಿ ಅತ್ಯಾಚಾರ ಮಾಡಿದ ಕ್ರೂರಿಗಳು ಅದೆಂತಹ ಸನ್ನಡತೆ ತೋರಿಸಿರಬಹುದು? ಇಲ್ಲಿ ಸನ್ನಡತೆ ಎಂಬುದೇ ಒಂದು ತಂತ್ರವಾಗಿರುವುದು ನಿಚ್ಚಳವಾಗಿದೆ. ಒಂದೆಡೆ ಸ್ವಾತಂತ್ರ್ಯೋತ್ಸವದ ದಿನದಂದು ಕೆಂಪು ಕೋಟೆಯ ಮೇಲೆ ನಿಂತು ಹೆಣ್ಣು ಮಕ್ಕಳ ಸಂಪೂರ್ಣ ಹೊಣೆಗಾರಿಕೆ ಸರಕಾರದ್ದು ಎಂದು ಪ್ರಧಾನ ಮಂತ್ರಿಗಳು ಘೋಷಿಸುತ್ತಾರೆ. ಇನ್ನೊಂದೆಡೆ ಅದೇ ಘಳಿಗೆಯಲ್ಲಿ ರೇಪಿಸ್ಟರನ್ನು ವಿವೇಚನೆ ಇಲ್ಲದೆ ತಾಂತ್ರಿಕ ಪ್ರಕ್ರಿಯೆಗಳನ್ನು ಪೂರೈಸುವ ಕುತಂತ್ರ ಮಾಡಿ ಗುಜರಾತ್ ಸರಕಾರ ಬಿಡುಗಡೆಗೊಳಿಸುತ್ತದೆ. ಇದು ಈ ಶತಮಾನದ ಬಹುದೊಡ್ಡ ವೈರುಧ್ಯ.

# ಮನಸುಗಳ ಪೋಣಿಸುವ ಕೌದಿ

ಶೈಲಜ ಜೆ ಕೆ, ಸಿರಾ

ಅಂದು ಭಾನುವಾರ, ಅದೊಂದು ವಿಶಾಲವಾದ ಪಡಸಾಲೆ, ಹತ್ತು ಹಲವು ಮಹಿಳೆಯರು ಬಣ್ಣ ಬಣ್ಣದ ಚೌಕಳಿ ಬಟ್ಟೆಗಳನ್ನು ಹಿಡಿದು ಕಾಮನ ಬಣ್ಣದಿಂದ ಆಚೆಯ ಅನನ್ಯತೆಯನ್ನೇ ಇದರಲ್ಲಿ ಅಡಗಿದೆಯೇನೋ ಎಂಬಂತೆ ಕೌದಿ ಹೆಣೆಯತೊಡಗಿದ್ದರು. ಸಂಸಾರದ ಜಂಜಾಟಗಳನ್ನು ಒಂದು ದಿನಕ್ಕೆ ಮಾತ್ರ ಮಾರಿಕೊಂಡಂತೆ ನಿರುಮ್ಮಳ ಮುಖಗಳು. ತಮ್ಮ ಅಸ್ತಿತ್ವವನ್ನು ಅದರೊಳಗೆ ಹುಡುಕುತಿದ್ದಂತೆ.

ಕಣ್ಗಳ ಕ್ಯಾಮರಾದಲ್ಲಿ ಎಂದೋ ಸೆರೆಹಿಡಿದಿದ್ದೋ? ಅಥವಾ ಮನವು ಧ್ವನಿಸಿದ ಚಿತ್ರವನ್ನೋ ಬಟ್ಟೆಗಳ ಮೇಲೆ ಮೂಡಿಸುತ್ತಾ, ಹಾಡುತ್ತಾ, ಕಥೆ, ಕವಿತೆಗಳನ್ನು ವಾಚಿಸುತ್ತಾ, ಚರ್ಚಿಸುತ್ತಾ ಹೊಲಿಯುವುದರಲ್ಲಿ ತಲ್ಲೀನರಾಗಿದ್ದರು. ಕೆಲವರು ಅವರಿಗೆಂದೇ ವಿಟಮಿನ್ಯುಕ್ತ ಅಡುಗೆ ಮಾಡುತ್ತಿದ್ದರು. ಚುಮುಚುಮು ಚಳಿಯಿಂದಾಗಿ ತುಟಿ ಆಗಾಗ ಕಾಫಿ ಕಪ್‌ಗಳನ್ನ ಚುಂಬಿಸುತ್ತಾ ಸಾಗುತ್ತಿತ್ತು.

ಪಡಸಾಲೆಯ ಕುರ್ಚಿಗಳ ಮೇಲೆ ಹಿಂದೆ ಹೆಣೆದ ಕೆಲವು ಚಿತ್ರ ಚಿತ್ತಾರದ ಕೌದಿಗಳನ್ನು ಪ್ರದರ್ಶಿಸಿದ್ದರು. ಅದರಲ್ಲೊಂದು ನನ್ನ ಗಮನ ಸೆಳೆದಿತ್ತು. ಒಂದು ಮಗ್ಗುಲಲ್ಲಿ ಕೌದಿ ಹೆಣೆದವರ ಸಹಿಗಳು ಫೀನಿಕ್ಸ್ ಪಕ್ಷಿಯನ್ನು ಸುತ್ತುವರೆದು ಅದರ ಜೊತೆ ಪೈಪೋಟಿಗಿಳಿದಂತೆ ಬೂದಿಯಿಂದೆದ್ದು ಹಾರುತ್ತಿದ್ದವು. ಇನ್ನೊಂದು ಮಗ್ಗುಲಲ್ಲಿ ಅವರ ಭಾವನೆಗಳನ್ನು ದಾರದಲ್ಲಿ ಹೊಲೆದು ಬಂಧಿಸಿದ್ದರು. ಕಷ್ಟದ ಬಾಯನ್ನು ಹೊಕ್ಕರೂ ಫೀನಿಕ್ಸ್ ಪಕ್ಷಿಯಂತೆ ಮತ್ತೆ ಹುಟ್ಟಿ ಹಾರುತ್ತೇವೆ ಎಂದು ತೋರಿಸುವಂತಿತ್ತು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ರಾಜ್ಯ ಪ್ರತಿನಿಧಿಯಾದ ವಾಣಿ ಪೆರಿಯೋಡಿರವರು ತಮ್ಮ ಎಂಟು ವರ್ಷದ ಪುಟ್ಟ

ಗೆಳತಿಯ ಹುಟ್ಟು ಹಬ್ಬಕ್ಕೆಂದು ಎಂಟು ಮೀನು, ಎಂಟು ಚಿಟ್ಟೆ, ಎಂಟು ರೈಲು, ಎಂಟು ಬಳೆ, ಎಂಟು ಬಲೂನು ಹೀಗೆ ಎಂಟರ ನಂಟನ್ನು ಕೌದಿಯಲ್ಲಿ ಅರಳಿಸಿದ್ದರು. ಹಾಗೆಯೇ ಸ್ವತಃ ಅವರೇ ಅವರ ಅರವತ್ತನೇ ಹುಟ್ಟುಹಬ್ಬಕ್ಕೆ ದಾರದಿಂದ ಚಿತ್ರಿಸಿಕೊಂಡ ದುಪ್ಪಟವು ಕೌದಿಗಳ ಸಾಲಿನಲ್ಲಿ ನಿಂತು ನಗುತ್ತಿತ್ತು.

ತಮಟೆ ರಾಮಕ್ಕನವರು ಅವರ ಮೊಮ್ಮಕ್ಕಳಿಗೆ ಹೊದೆಯಲು ಅವರ ಸೀರೆಗಳನ್ನು ಜೋಡಿಸಿ ಕೌದಿ ಹೊಲೆದದ್ದನ್ನು ನೆನಪಿಸಿಕೊಂಡರು. ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬಗೆಬಗೆಯ ಕೌದಿಗಳು ಬೆರಳುಗಳ ಮಧ್ಯೆ ಅರಳಿದ್ದಕ್ಕೆ ಇಲ್ಲಿನ ಕೌದಿಗಳೇ ಸಾಕ್ಷಿಯೆನ್ನುವಂತಿದ್ದವು.

ದೆಹಲಿಯ ನಿರ್ಭಯ ಪ್ರಕರಣ ಮತ್ತು ಇದಕ್ಕೆ ಸಾಮ್ಯತೆಯುಳ್ಳವು ಪ್ರಜಾತಂತ್ರದ ಮೂಲ ಆಶಯಕ್ಕೆ ಧಕ್ಕೆಯನ್ನುಂಟು ಮಾಡುತ್ತಿರುವುದು ಮಹಿಳಾ ಪರ ಮನಸ್ಸುಗಳಿಗೆ ಆಘಾತವನ್ನೊಡ್ಡಿತ್ತು. ಇದರ ಫಲದ ಕೂಸೆ ಈ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ ವಿರೋಧಿ ಒಕ್ಕೂಟ. ಇದು ನಮ್ಮ ಸುತ್ತಲಿನ ಎಲ್ಲಾ ತರಹದ ಹೆಣ್ಣು ಮಕ್ಕಳ ಲಿಂಗಸೂಕ್ಷ್ಮತೆ ಮತ್ತು ರೂಪಾಂತರಿ ದೌರ್ಜನ್ಯಗಳನ್ನು ತಡೆಗಟ್ಟುವ ಕನಸಿನೊಂದಿಗೆ ಜಾತಿ, ಉದ್ಯೋಗ, ದೇಶ, ಧರ್ಮ, ಸಂಘಟನೆಗಳ ಭೇದವಿಲ್ಲದೆ ಎಲ್ಲರೂ ಒಟ್ಟಾಗಿ ಅಕ್ಷರದವ್ವ ಸಾವಿತ್ರಿಬಾಯಿ ಪುಲೆಯವರನ್ನು ಸ್ಮರಿಸುತ್ತಾ ಶಾಲಾ ಕಾಲೇಜುಗಳಲ್ಲಿ ಅರಿವನ್ನು ಬಿತ್ತುತ್ತಾ ಸಾಗುತ್ತಿತ್ತು. ಇದರ ಮೊದಲ ಹೆಜ್ಜೆ 2013 ರಂದು ಮಂಗಳೂರಿನಲ್ಲಿ "ಇನ್ನು ಸಾಕು" ಎಂಬ ಘೋಷ ವಾಕ್ಯದೊಂದಿಗೆ ಮೌನ ಪ್ರತಿಭಟನೆ ನಡೆಸಿತು. ಹೀಗೆ ಕೆಲ ಹಿರಿಯ ಮಹಿಳಾ ಮಣಿಗಳು ತಮ್ಮ ಕೈ ಕೈ ಹಿಡಿದು ಆಚೀಚೆ ಕೈಗಳನ್ನು ತೆರೆದು ನಡೆಯುತ್ತಾ ಆ ಕೈಗೆ ಮತ್ತೆ ಕೈ ಸೇರಿಸಿಕೊಳ್ಳುತ್ತಾ ತನ್ನ ಬಾಹುಗಳಿಂದ ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಮಂಡ್ಯ, ಕೋಲಾರ, ಕಲಬುರ್ಗಿಯನ್ನು ಬಳಸಿಕೊಂಡು 2023ಕ್ಕೆ ತುಮಕೂರನ್ನು ತಲುಪಿ, ಇಲ್ಲಿನ ಎಲ್ಲಾ ತಾಲ್ಲೂಕುಗಳಲ್ಲಿ ಅರಿವನ್ನು ಮಿಂಚಿಸಿ 2023 ಮಾರ್ಚ್ ಏಳು ಮತ್ತು ಎಂಟರಂದು ಬೃಹತ್ ಸಮಾವೇಶವನ್ನು ಮಾಡಲಾಯಿತು. ಇದರ ಮುಂದುವರಿದ ಭಾಗವೇ ಇಂದಿನ ಕೌದಿ ಹೆಣಿಗೆ.

ಅಬ್ಬಾ! ಎಷ್ಟೆಲ್ಲಾ ನಡಿಗೆ, ಹಿನ್ನೋಟ. ಕೌದಿ ಎಂದಾಕ್ಷಣ ನೆನಪಿಗೆ ಬರುವುದು ನಮ್ಮ ಜೋಗಪ್ಪೋಳು. ಹಳೆಯದಾದ ತುಂಡು ಬಟ್ಟೆಗಳನ್ನು ದಪ್ಪನೆಯ ದಾರದಿಂದ ಜೋಡಿಸಿ, ಹೊಲೆದ ರಂಗುರಂಗಿನ ಜೋಳಿಗೆ ಹಾಗೂ ಕೌದಿಯ ಉಡುಗೆ, ಮೇಲೊಂದು ಕೌದಿಯ ದುಪ್ಪಟ ತೊಟ್ಟು ತಂಬೂರಿ ಹಿಡಿದು

: ಜೋಗಪ್ಪಾ? ಸಿಂಹ ಬಲವಾದ ಜೋಗಿ? ಹರನೇ ಬಾಗಿಸಿ ಕೇಳುತ್ತಾನೆ? ಎಂದು ಹಾಡುತ್ತಾ ಬರುತ್ತಿದ್ದರು. ಇವರು ಊರಿನ ಅಂಚಿನಲ್ಲಿ ತಾವೆ ಹೊಲೆದ ಕೌದಿಗಳಿಂದ ಹಾಕುತ್ತಿದ್ದ ರಂಗುರಂಗಿನ ಗುಡಾರಗಳನ್ನು ಮಕ್ಕಳು ದೊಡ್ಡವರೆನ್ನದೆ ಎಲ್ಲರೂ ಬೆರೆಗುಗಣ್ಣಿನಿಂದ ನೋಡುತ್ತಿದ್ದೆವು. ಈಗಲೂ ಸಹ ಜೋಗಪ್ಪೋಗಳು ಕೌದಿಗಳನ್ನು, ಕೌದಿ ಉಡುಪುಗಳನ್ನು ಬಳಸುವುದು ವಾಡಿಕೆ. ಹಳೆಯದಾದ ಹತ್ತಿ ಸೀರೆಗಳು ಮತ್ತು ಪಂಚೆಗಳನ್ನು ಐದಾರು ಮಡಿಕೆಯಲ್ಲಿ ಜೋಡಿಸಿ ಹೊಲಿಯಲಾಗಿ ಇದು ತುಂಬಾ ಬೆಚ್ಚಗಿರುತ್ತಿತ್ತು.

ಪ್ರಸ್ತುತ ಕೌದಿ ಹೊಲೆದುಕೊಳ್ಳುವ ಜೋಗಪ್ಪೋಗಳು ಕಡಿಮೆಯಾಗಿದ್ದರೂ ಹೊಟ್ಟೆಪಾಡಿಗಾಗಿ ಊರೂರು ಸುತ್ತಿ ಯಂತ್ರಗಳನ್ನು ಬಳಸಿ ಕೌದಿ ಹೊಲೆದುಕೊಟ್ಟು ಹಣ ಗಳಿಸುತ್ತಿರುವುದೂ ಉಂಟು. ಒಟ್ಟಾರೆ ಅವರಿಗೊಂದು ಉದ್ಯೋಗ ದೊರೆತಂತಾಗಿದೆ.

ನಾನು ಸಹ ಕೌದಿಗೆ ಮಾರುಹೋಗಿ ವಿದ್ಯಾರ್ಥಿ ದೆಸೆಯಲ್ಲಿಯೇ ನನ್ನ ಹಳೆಯ ದುಪ್ಪಟಳನ್ನೆಲ್ಲಾ ಜೋಡಿಸಿ ನಾಲ್ಕಾರು ಕೌದಿಗಳನ್ನು ಹೊಲೆದಿದ್ದೆ. ಹಾಗೆಯೇ ಹೆಗ್ಗೋಡಿಗೆ ಭೇಟಿ ಕೊಟ್ಟಾಗ ಚರಕದಲ್ಲಿ ಖಾದಿ ಕೌದಿಯನ್ನು ಕೊಂಡು ತಂದಿದ್ದೆ. ಈಗ ಯಾವುದೋ ಟೈಲರ್ ಅಂಗಡಿಗೆ ತೆರಳಿ ಅಳಿದುಳಿದ ಹತ್ತಿ ಬಟ್ಟೆಯ ತುಂಡುಗಳನ್ನು ತಂದು ಮಡಗಿದ್ದೇನೆ. ಇದು ಹೊಸ ಕೌದಿ ಹೊಲೆಯುವ ತಯಾರಿ.

ಹೀಗೆ 17–12–2023 ರಂದು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯ ಒಕ್ಕೂಟದ ಸಂಗಾತಿಗಳು ಕೌದಿ ಹೊಲೆಯುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕೇಳಿ ಸಂತೋಷದಿಂದಲೇ ನನ್ನ ಕಿರಿಯ ಮಗಳನ್ನು ಎಳೆದುಕೊಂಡು ನಡೆದೆ. ಹನ್ನೆರಡರ ಹರೆಯದ ಹೊಸ್ತಿಲಲ್ಲಿ ನಿಂತ ಒಕ್ಕೂಟ ಈಗ ಉಡುಪಿಯತ್ತ ಸಾಗಿದೆ. ಇಡೀ ವರ್ಷ ದೌರ್ಜನ್ಯಗಳ ವಿರುದ್ಧ ಅರಿವನ್ನುಂಟುಮಾಡಿ ಮಹಿಳೆಯರ ಅಸ್ತಿತ್ವದ ಬಗ್ಗೆ ತಿಳಿಸುತ್ತಾ ಸಾಗಿ 2024ರ ಮಾರ್ಚ್ ಎಂಟು ಮತ್ತು ಒಂಭತ್ತರಂದು ರಾಜ್ಯ ಮಟ್ಟದ ಮಹಿಳಾ ಸಮಾವೇಶ ಮಾಡಲು ತೀರ್ಮಾನಿಸಿರುತ್ತಾರೆ. ಅಂದು ಆ ವೇದಿಕೆಯನ್ನು ಅಲಂಕರಿಸುವ ಮುಖ್ಯ ಅತಿಥಿಗೆ ತುಮಕೂರಿನಲ್ಲಿ ಜನ್ಮ ತಾಳಿದ ಕೌದಿಯು ಗೌರವ ಸಮರ್ಪಣೆಯಾಗಲಿದೆ. ಇಲ್ಲಿನ ಹೆಂಗೆಳೆಯರ ದಾರದ ಬಿಸಿಉಸಿರು ಅವರನ್ನು ಬೆಚ್ಚಗಾಗಿಸಲಿದೆ.

ಕೌದಿಯಲ್ಲಿ ರಂಗುರಂಗಿನ ಹೂಗಳು, ಪಾತರಗಿತ್ತಿಯರು, ಕಲ್ಪತರು

ನಾಡಿನ ಕಲ್ಪವೃಕ್ಷಗಳು ಅರಳಿದ್ದವು. ಹೆಣ್ಣು, ಗಂಡು, ಮಕ್ಕಳು, ಅಧಿಕಾರಿ ಎಂಬ ಬೇಧವಿಲ್ಲದೇ ಎಲ್ಲ ವಯಸ್ಸಿನವರು ಇಲ್ಲಿ ಸೇರಿದ್ದರು. ಬೇರೆ ಬೇರೆ ಊರು, ತಾಲ್ಲೂಕು, ಜಿಲ್ಲೆಯಿಂದ ಬಂದ ಸಂಗಾತಿಗಳು ಮನಸ್ಸು ಮನಸ್ಸುಗಳ ಬೆಸೆಯುವ ಕೌದಿ ಹೊಲೆಯುತ್ತಿದ್ದರು.

ಕ.ಸಾ.ಪ.ದ ನಿಕಟಪೂರ್ವ ಅಧ್ಯಕ್ಷರಾದ ಬಾ.ಹ. ರಮಾಕುಮಾರಿ ಮೇಡಂ ಅವರ "ಹೃದಯ ಹರಿದಿದೆ ಹೊಲೆಯುವ ಮನಸ್ಸುಗಳಿಲ್ಲ" ಎಂಬ ಕವಿತೆಯ ಸಾಲನ್ನು ನೆನೆಯುತ್ತಾ ಇಂದು ಇವರೆಲ್ಲಾ ಬಣ್ಣಬಣ್ಣದ ದಾರದಿಂದ ಹರಿದ ಹೃದಯಕ್ಕೆ ಬಣ್ಣದ ಲೇಪನ ಮಾಡಿ ಹುರಿದುಂಬಿಸುತ್ತಿದ್ದಾರೆ. ಎಲ್ಲರೂ ಕೌದಿ ಹೊಲೆಯುತ್ತಾ ಮನಸ್ಸು ಮನಸ್ಸುಗಳ ಪೋಣಿಸುತ್ತಿದ್ದಾರೆ.



ತುಮಕೂರಿನ ಟೂಡ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಅವರಿಗೆ ಸಮಾವೇಶಕ್ಕೆ ಗಾಜಿನ ಮನೆಯನ್ನು ನೀಡಲು ಮನವಿ ಪತ್ರ ಸಲ್ಲಿಸುತ್ತಿರುವುದು

# Bird -View of Okkuta

A slew of specific incidents in 2012- the Delhi Nirbhaya Case, pub and home stay attacks on women in Mangalore and overall increasing violence against women made a group of women both concerned and uncomfortable. Incidents like these constitute a threat to democracy. The core value of democracy is equality, which is in question. This sense of discomfort escalated, leading on to the formation of Karnataka Rajya Mahila Dourjanya Virodhi Okkuta, which subscribes to principles of non-violence and democracy.

Support for this venture came from likeminded people from all over Karnataka. From its inception till date around 160 organisations have gathered under this umbrella. These organisations represent Dalit and Women's groups, Unions of Anganwadi Workers, Mid day Meals Workers, ASHA Workers, Pourkarmika Workers, Garment Workers, Sex Workers, Transgenders, Writers and Pro-People's Movements and individuals from literature, academic, professionals, theatre. People who subscribe to democratic social values like equality, social justice and those who are pro life can be part of this Okkuta. This network has been organising International Women's Day events since 2013.

## WOMEN'S DAY EVENTS TILL DATE

International Women's Day (March 8th) is celebrated as a two day event in different districts across the state. A common format has been adopted for these events. Day 1 is usually a seminar on women's broader and locally relevant issues. The evening of Day 1 is dedicated to Women in Black, which is an hour of a silent protest at a public venue. Day 2 is a big rally with thousands of women and a convention in a public place. The events were well attended. Around 1000 people attended the seminars and 4000-5000 people attended the rallies and public events. The guests from outside the state we have invited so far are:

- 2013- Mangalore- Urmila Pawar from Maharashtra, Bhanwari Devi from Rajasthan.
- 2014- Mysore - Corinne Kumar from Mysore, Group of women of Meira Paibi from Manipur - Ima Nanbi, Chitra Ahintam and Renu Takalembam.
- 2015- Bangalore - V Geetha from Chennai, Rashida Bi and Champa Devi Shukla from Bhopal (working for the gas affected victims).
- 2016- Vijayapura - Uma Chakravarti, JNU, New Delhi and Medha Patkar from Narmada Bachao Andolan.
- 2017- Koppal Ranjana Padi from Orissa, Gogu Shyamala from Andhra, Kavita Krishnan IPWA.
- 2018- Shimoga Manisha Gupte, PuNe, Flavia Agnes, Majlis, Mumbai.
- 2019- Dharwad. Amarjith Kaur, General secretary AITUC, Manimala, New Delhi, Latha PM, Mumbai.

- 2020- Mandya - Volga from Hyderabad, Shabnam Hashmi.
- 2021- Kolar. Due to covid threat, one day event held. Joopaka Subhadra from Telangana was our chief guest.
- 2022- Kalaburagi - Mariyam Dhavale, Janavadi Mahila Sanghatan's all India Gen secretary,
- 2023- Jan Okkuta-10- celebrating and reviewing 10 years of Federation's activities. Prof Janaki Nair and Ruth Manorama were with us for the day long seminar.
- 2023- Tumaku- Com K K Shyalaja, Former Health Minister of Kerala addressed the Jatha and Transman Vihaan from Mumbai was our chief Guest at Seminar.

This year we are planning to organise IWD-2024 on March 8th and 9th at Udupi which is 75 kms away from Mangalore. Our flagship gender sensitivity programme Arivina PayaNa has already been started in Nov 2023, and teams are visiting schools, colleges and hostels across Udupi district. All activities culminate and strengthen our IWD Jatha which will take place on March 8th and Seminar on March 9th.


To meet the expenditure of these conventions, the federation, as a part of its political course, has decided not to collect any institutionalized funding. So the collections are made from the public and likeminded individuals and organizations. And money is also collected by selling small booklets and handkerchiefs. The federation maintains transparency in its accounts. Our effort has been wholeheartedly supported by the public at large.




ದೇವರಾಯನ ದುರ್ಗದಲ್ಲಿ ನಡೆದ ಕಾರ್ಯಾಗಾರ



# ನಮ್ಮ ನಡೆ–ನಮ್ಮ ದನಿ



# ಅರಿವಿನ ಪಯಣ ಒಂದು ಮೆಲುಕು

ಮೇ. ನಾ. ತರಂಗಿಣಿ

ಅದೊಂದು ದಿನ ಸಂಜೆ ಬಾ ಹ ರಮಾಕುಮಾರಿ ಮೇಡಂ ಅವರನ್ನು ಭೇಟಿಯಾಗಲೆಂದು ಅವರು ಮೊದಲೇ ತಿಳಿಸಿದಂತೆ ತುಮಕೂರಿನ ಜನಚಳುವಳಿ ಕೇಂದ್ರಕ್ಕೆ ಹೋದೆ. ಮೇಡಂ ಅವರ ಜೊತೆ ಡಾ. ಅರುಂಧತಿ, ಮಲ್ಲಿಕಾ ಬಸವರಾಜು, ಅಕ್ಕಮ್ಮ, ರಾಣಿ ಚಂದ್ರಶೇಖರ್ ಮೊದಲಾದವರೆಲ್ಲ ಸೇರಿ ಏನೋ ಚರ್ಚೆ ನಡೆಸುತ್ತಿದ್ದರು. ನಾನು ಅವರೊಂದಿಗೆ ಸೇರಿ ಸುಮ್ಮನೆ ಕುಳಿತು ಎಲ್ಲವನ್ನು ಆಲಿಸುತ್ತಿದ್ದೆ.

ಹಾಡಿನ ತಂಡದಲ್ಲಿ ಯಾರು ಯಾರು ಇರಬೇಕು, ಏಕವ್ಯಕ್ತಿ ಪ್ರದರ್ಶನವನ್ನು ಯಾರು ಯಾರು ಕೊಡುವುದು ಇತ್ಯಾದಿ ಜವಾಬ್ದಾರಿಗಳ ಹಂಚಿಕೆಯಾಗುತ್ತಿತ್ತು. "ಸತ್ಯದ ಸೌಂದರ್ಯ" ಏಕ ವ್ಯಕ್ತಿ ಪ್ರದರ್ಶನ ಯಾರು ಮಾಡುವುದು ಎಂಬ ವಿಚಾರ ಬಂದಾಗ ರಮಾಕುಮಾರಿ ಮೇಡಂ ಅವರು ನನ್ನನ್ನು ಸೂಚಿಸಿದರು. ಉಳಿದವರು ಒಮ್ಮೆ ಆ ಸ್ಕ್ರಿಪ್ಟ್ ಓದಿ ನೋಡೋಣ ಎಂದರು. ವೃತ್ತಿಯಲ್ಲಿ ಕನ್ನಡ ಉಪನ್ಯಾಸಕಿಯಾಗಿದ್ದರಿಂದ ಸ್ಪಷ್ಟ ಉಚ್ಚಾರಣೆ ಹಾಗೂ ಭಾವದ ಏರಿಳಿತಗಳೊಂದಿಗೆ ಓದುವುದು ಕಷ್ಟವೆನಿಸಲಿಲ್ಲ. ಎಲ್ಲರೂ ಒಮ್ಮತದಿಂದ ಒಪ್ಪಿಕೊಂಡರು. ಹೀಗೆ ಮೇಡಂ ಅವರ ಬೇಟೆಗೆಂದು ಹೋದ ನಾನು ಆಕಸ್ಮಿಕವಾಗಿ ಅರಿವಿನ ಪಯಣದ ಪಯಣಿಗಳಾದೆ. ಪಯಣದ ಪ್ರತಿ ಹೆಜ್ಜೆಯೂ ನನ್ನನ್ನು ರೂಪಿಸುತ್ತಾ ಹೋಯಿತು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅಡಿಯಲ್ಲಿ ನಮ್ಮ ತುಮಕೂರು ಜಿಲ್ಲೆಯಲ್ಲಿ ನಡೆದ ಅರಿವಿನ ಪಯಣದ ಸುಮಾರು 25 ಕಾರ್ಯಕ್ರಮಗಳಲ್ಲಿ ಭಾಗವಹಿಸಿದ, ಅನುಭವ ಕಟ್ಟಿಕೊಂಡೆ. ಸಮುದಾಯದೊಡನೆ ಬೆರೆತ ಸುಕೃತ ನನ್ನದು. ಶಾಲಾ-ಕಾಲೇಜುಗಳಲ್ಲಿ, ಹಾಸ್ಟೆಲ್ ಗಳಲ್ಲಿ ವಸತಿ ಶಾಲೆಗಳು, ಗೊಲ್ಲರಹಟ್ಟಿಗಳು ಹೀಗೆ ನಮ್ಮ ಸಂಗಾತಿಗಳೊಂದಿಗೆ

ಒಂದಲ್ಲ ಒಂದು ದಿನ
ಈ ನೆಲದ ಹೆಣ್ಣುಗಳು

ಮೆರವಣಿಗೆ ಹೊರಡುತ್ತಾರೆ . ಎಂದು ಹಾಡುತ್ತಾ ಮೆರವಣಿಗೆ ಹೊರಟೇಬಿಟ್ಟೆವು. ಗೃಹಿಣಿಯರು, ಉದ್ಯೋಗಸ್ಥ ಮಹಿಳೆಯರು, ನಿವೃತ್ತರು, ಯುವತಿಯರು, ಕಲಾವಿದೆಯರನ್ನೊಳಗೊಂಡ ಎಂಟ್ಹತ್ತು ಜನರ ನಮ್ಮ ತಂಡ

ಶಾಲಾ–ಕಾಲೇಜುಗಳ ಅಂಗಳದೊಳಗೆ ಒಕ್ಕೂಟದ ಬ್ಯಾನರ್ ಕಟ್ಟಿ ನಿಂತೆವೆಂದರೆ ಎಲ್ಲರಿಗೂ ಕುತೂಹಲ, ಆಸಕ್ತಿ. ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದರು.

ವರ್ಣ ತಾರತಮ್ಯ ಕುರಿತು ಮಾತಾಡುವ "ಕಪ್ಪುಬಲೂನ್", ಶ್ರಮದ ಮಹತ್ವ ಸಾರುವ "ಬೆವರು", ಲೈಂಗಿಕ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ "ನೀಲಿರಿಬ್ಬನ್", ಕೌಟುಂಬಿಕ ದೌರ್ಜನ್ಯವನ್ನು ಪ್ರಶ್ನಿಸುವ "ದುರ್ಗಾ", ಜಾತಿ ತಾರತಮ್ಯ ಸಲ್ಲದು ಎನ್ನುವ "ಕುಲಕುಲವೆಂದು", ಕುವೆಂಪುರವರ "ಜಲಗಾರ", "ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ", ಸತ್ಯವೇ ನಿಜವಾದ ಸೌಂದರ್ಯವೆನ್ನುವ "ಸತ್ಯದ ಸೌಂದರ್ಯ" ಮೊದಲಾದ ಏಕವ್ಯಕ್ತಿ ಪ್ರದರ್ಶನಗಳು, ಸೃಷ್ಟಿಕ್ರಿಯೆಯ ನೈಸರ್ಗಿಕ ಸಹಜತೆಯನ್ನು ತಿಳಿಸುವ "ಮುಟ್ಟು ಮುಟ್ಟೆಂದು.." ಲಿಂಗತಾರತಮ್ಯವನ್ನು ಕುರಿತಾದ "ಅವಳಿಗೊಂದುತರ ಅವನಿಗೊಂದುತರ", "ಯಾರು ಮಾಡಿದರು ಕಾಣೆ" ಭಾರತದ ಸಾಂವಿಧಾನಿಕ ಸಮರಸವನ್ನು ಸಾರುವ "ಭಾರತವೆಂದರೆ ಬರಿ ನೆಲವಲ್ಲ" ಮೊದಲಾದ ಹಾಡುಗಳು ಇವೆಲ್ಲವುಗಳ ಕುರಿತಾದ ಚರ್ಚೆ ಸಂವಾದಗಳು ನಿಜವಾಗಿಯೂ ಒಂದು ಸಶಕ್ತವಾದ ಸಂಚಲನವನ್ನು ಉಂಟು ಮಾಡುತ್ತಿದ್ದವು.

ತಮಗೂ ತಮ್ಮವರಿಗೂ ಆದ, ಆಗುತ್ತಿರುವ ಅನ್ಯಾಯದ ನೆನಪಾದಂತಾಗಿ ಅಲ್ಲಿ ಅದ್ಯಾರವೋ ಕಣ್ಣುಗಳು ಪಸೆಯಾಗುತ್ತಿದ್ದವು. ಹದಿವಯಸ್ಸಿನ ಹುಡುಗಿಯರಲ್ಲಿ ದೌರ್ಜನ್ಯದ ವಿರುದ್ಧದ ಆಕ್ರೋಶ ಹೊರಹೊಮ್ಮುತ್ತಿತ್ತು. ಗಂಡು ಮಕ್ಕಳ ಮನಸ್ಸಿನಲ್ಲಿ ಜವಾಬ್ದಾರಿ ಮೂಡುತ್ತಿತ್ತು. ಹೆಣ್ತನಕ್ಕೊಂದು ಆತ್ಮವಿಶ್ವಾಸ ಮೂಡುತ್ತಿತ್ತು.

ಕಾರ್ಯಕ್ರಮಗಳನ್ನು ನೀಡಿ ಬಂದಂತೆಲ್ಲ ನಮ್ಮ ಗುಂಪಿನ ವಿಶ್ವಾಸ ಇಮ್ಮಡಿಸುತ್ತಿತ್ತು. ನಾವು ಹೆಣ್ಣು ಮಕ್ಕಳು ಹೀಗೆ ಒಟ್ಟಾಗಿ ಹೊರಡುವುದೇ ಒಂದು ಶಕ್ತಿ. ಅಂಧ ಮತ್ತು ಕಿವುಡು ಮಕ್ಕಳ ವಸತಿ ಶಾಲೆಯೊಂದಕ್ಕೆ ನಾವು ಕಾರ್ಯಕ್ರಮ ಕೊಡಲು ಹೋಗಿದ್ದಾಗ ಅವರ ಸೈನ್ ಲಾಂಗ್ವೇಜ್ ನಮಗೆ ಗೊತ್ತಿಲ್ಲದಿದ್ದರೂ ಆ ಮಕ್ಕಳಿಗೆ ನಮ್ಮ ಕಾರ್ಯಕ್ರಮದ ಉದ್ದೇಶ ಅರ್ಥವಾಗುತ್ತಿತ್ತು. ಅತ್ಯಂತ ಜೀವಂತಿಕೆಯಿಂದ ಕಾರ್ಯಕ್ರಮದಲ್ಲಿ ಭಾಗಿಯಾದರು. ಶಬ್ಬಾಷ್.... ಲಲ್ಲಲ್ಲಲ್ಲಾ... ಎಂದು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ಚಿಕ್ಕಣ್ಣಯ್ಯನ ಹಟ್ಟಿ ಎಂಬ ಗೊಲ್ಲರಹಟ್ಟಿಯಲ್ಲಿ ನಮ್ಮ ಅರಿವಿನ ಪಯಣದ ತಂಡ ಹೋದಾಗ ಸಮಯ ಸುಮಾರು ಸಂಜೆ 5:00 ಆಗಿತ್ತು. ಶಾಲೆಯ ಸಮಯ ಮೀರಿತ್ತು. ದೇವಾಲಯದ ಹೊರ ಆವರಣದಲ್ಲಿ ಸೇರಿಕೊಂಡೆವು. ಅಂದು ಯಾವುದೋ ಗ್ರಹಣ. ತಂಡದಲ್ಲಿ ಇದ್ದ ಸಂಗಾತಿಗಳಲ್ಲಿ ಪಾರ್ವತಮ್ಮ

ರಾಜಕುಮಾರ್, ಗಂಗಲಕ್ಷ್ಮೀ, ಅಕ್ಕಮ್ಮ ಮತ್ತು ನಾವು ಸಾಕ್ಷರತಾ ಕಾರ್ಯಕ್ರಮಗಳಲ್ಲಿ, ಬೀದಿ ನಾಟಕಗಳಲ್ಲಿ ಹಾಡಿ ಅಭಿನಯಿಸಿ ಅಭ್ಯಾಸವಿದ್ದವರಾದ್ದರಿಂದ ಹೆಚ್ಚು ತಲೆ ಕೆಡಿಸಿಕೊಳ್ಳದೆ ಸಂತೆ ನಡೆಯುತ್ತಿದ್ದ ಮೈದಾನವನ್ನೇ ವೇದಿಕೆಯಾಗಿಸಿಕೊಂಡೆವು. ಒಂದು ಮರದ ಕಾಂಡ ಮತ್ತು ಕಲ್ಲು ಕಂಬದ ನಡುವೆ ನಮ್ಮ ಒಕ್ಕೂಟದ ಬ್ಯಾನರ್ ಕಟ್ಟಿದೆವು. ಖಂಜರ ನುಡಿಸುತ್ತಾ

ಮುಟ್ಟು ಮುಟ್ಟೆಂದೇಕೆ
ಕೀಳರಿಮೆ ಹೊಂದುವಿರಿ
ಮುಟ್ಟಲ್ಲವೇ ನಮ್ಮ
ಸೃಷ್ಟಿಯ ಗುಟ್ಟು...

ಎಂದು ಹಾಡಲು ಶುರುವಿಟ್ಟೆವು. ಜನರ ಗಮನವೆಲ್ಲಾ ನಮ್ಮ ಕಡೆ ತಿರುಗಿತು. ಹೆಂಗಸರು, ಮಕ್ಕಳು, ಮುದುಕರು, ಯುವಕರು ಎಲ್ಲರೂ ನಿಧಾನವಾಗಿ ನಮ್ಮ ಸುತ್ತಲೂ ಸೇರಿದರು. ತಂಗಿ ದೀಪಿಕಾ "ದುರ್ಗಾ" ಪ್ರದರ್ಶನ ನೀಡುತ್ತಿದ್ದರೆ ಬೇವಿನ ಮರದಡಿಯ ಟೀ ಅಂಗಡಿಯಲ್ಲಿ ಅಜ್ಜಮ್ಮ "ಹೂಕಣೇಳವ್ವ ನೀ ಯೋಳೋದು ಕರೆಕ್ಟು. ಅಂಗಂತವಾ ಹೆಂಡ್ರು ಗಂಡನ್ ಇಡ್ಕಂಡು ಬಡುದ್ರೆ ಸರಿಯಾದತಾ? ಹೆಂಡ್ರು ಗಂಡನ್ ಬಡುದ್ರೂ ಇಂಸೆಯಾ, ಗಂಡ ಹೆಂಡ್ರುನ್ ಹೊಡುದ್ರೂ ಇಂಸೆಯಾ ಕಣ್ ತಗೋ. ಎಲ್ರೂ ಮನುಸ್ರೆಯಾ ಅಲ್ವ?" ಎಂದಾಗ ಆ ಕಾರ್ಯಕ್ರಮಕ್ಕೆ ಅದೇ ಅಧ್ಯಕ್ಷರ ಭಾಷಣದಂತಾಯಿತು.

ಈ ಪಯಣದ ಮರೆಯಲಾರದ ಮತ್ತೊಂದು ಕಾರ್ಯಕ್ರಮದ ಕುರಿತಾಗಿ ಇಲ್ಲಿ ಹೇಳಲೇಬೇಕು. ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನ ಸಂದರ್ಭ. ಜಿಟಿಜಿಟಿ ಜಡಿ ಮಳೆ ಹದಿನೈದು ದಿನ ತಿಂಗಳುಗಟ್ಟಲೆ ಬಿಟ್ಟು ಬಿಟ್ಟು ಸುರಿಯುತ್ತಲೇ ಇತ್ತು.. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಎನ್ ಇಂದಿರಮ್ಮನವರು ರಾಮಪ್ಪನಹಟ್ಟಿ ಎಂಬ ಗೊಲ್ಲರಹಟ್ಟಿಯಲ್ಲಿ ಅರಿವಿನ ಪಯಣಕ್ಕೆ ದಿನಾಂಕ ನಿಗದಿಪಡಿಸಿದ್ದರು. ಬೆಳಗ್ಗೆ ಪಯಣ ಹೊರಡಬೇಕು ರಾತ್ರಿಯಿಡೀ ಮಳೆ. ಬೆಳಗ್ಗೆಯು ಸೋಂಯ್ ಎಂದು ಸುರಿಯುತ್ತಲೇ ಇತ್ತು. ಮೇಡಂಗೆ ಫೋನಾಯಿಸಿ ಏನು ಮಾಡುವುದು ಎಂದು ಕೇಳಿದೆ. ದಿನಾಂಕ ನಿಗದಿಪಡಿಸಿ ಆಗಿದೆ ಹೋಗೋಣ ಎಂದರು ನಿರ್ಧಾರದ ಧ್ವನಿಯಲ್ಲಿ. ನಿಗದಿತವಾದ ಯಾವುದೇ ಬಸ್ಸಿನ ಸಂಪರ್ಕವಿಲ್ಲದ ಮೂಲೆಯೊಂದರ ಹಳ್ಳಿಯದು. ಆಟೋವೊಂದನ್ನು ಗೊತ್ತು ಮಾಡಿಕೊಂಡು ಚಿಕ್ಕನಾಯಕನಹಳ್ಳಿಯಿಂದ ಅರಿವಿನ ಪಯಣದ ತಂಡ ಮಳೆಯಲ್ಲೇ ಶಾಲು, ಸ್ವೆಟರುಗಳೊಂದಿಗೆ ಹೊರಟೇಬಿಟ್ಟೆವು.

ಅಂದು ಭಾನುವಾರ. ಶಾಲೆಯ ಮೈದಾನದಲ್ಲಿ ಹಿಂದಿನ ದಿನವೇ

ಶಾಮಿಯಾನ ಕುರ್ಚಿಗಳನ್ನು ಹಾಕಿಸಿ ವ್ಯವಸ್ಥೆ ಮಾಡಿದ್ದರು. ರಾತ್ರಿಯಿಡೀ ಸುರಿದ ಮತ್ತು ಬೆಳಗ್ಗೆಯೂ ಸುರಿಯುತ್ತಿದ್ದ ಮಳೆಯಿಂದಾಗಿ ನೆನೆದು ತೊಪ್ಪೆಯಾಗಿದ್ದವು. ಮಳೆಯ ದೆಸೆಯಿಂದ ಬೀದಿಗಳಲ್ಲಿ ಜನರ ಸುಳಿವಿಲ್ಲ. ಇಂದಿರಮ್ಮನವರು ಅವರ ಪರಿಚಯದವರೊಬ್ಬರನ್ನು ಫೋನ್ ಮಾಡಿ ಕರೆಸಿಕೊಂಡರು. ಪರಿಸ್ಥಿತಿ ಹೀಗಿದೆ. ಜನ ಸೇರಲು ಸಾಧ್ಯವೇ ಇಲ್ಲ. ಹಿಂದಿರುಗೋಣವೇ ಎಂದಾಗ ಇದಕ್ಕೆ ಒಪ್ಪದ ಇಂದಿರಮ್ಮನವರು ಅದು ಯಾರದೋ ಮನೆಯ ಚಾವಡಿಯ ಅಡಿಯಲ್ಲಿ ಒಕ್ಕೂಟದ ಬ್ಯಾನರ್ ಕಟ್ಟಿಸಿಯೆಬಿಟ್ಟರು. ಅಲ್ಲೇ ಜಗಲಿಯ ಮೇಲೆ ಚಕ್ಕಂಬಕ್ಕಳ ಹಾಕಿ ಕುಳಿತು ಕಾರ್ಯಕ್ರಮ ಶುರು ಮಾಡಿಸಿಬಿಟ್ಟರು. ಮೇಡಂ ಕರೆಸಿಕೊಂಡಿದ್ದ ಪರಿಚಯದ ಆ ಹೆಣ್ಣು ಮಗಳು ಬಹುಶಃ ಅಂಗನವಾಡಿಯ ಕಾರ್ಯಕರ್ತೆ ಇರಬೇಕು. ಕೊಡೆ ಹಿಡಿದುಕೊಂಡೆ ಎಲ್ಲರ ಮನೆಗಳಿಗೆ ಸುದ್ದಿ ಮುಟ್ಟಿಸಿದರು. ಬೆಳಗಿನ ಉಪಹಾರ ಮುಗಿಸಿಕೊಂಡು ಒಬ್ಬೊಬ್ಬರಾಗಿ ಗೋಣಿಚೀಲದ ಗೊಪ್ಪಟ್ಟೆ ಹೊದ್ದು, ಎಲೆ ಅಡಿಕೆಯಿಂದ ಬಾಯಿ ಕೆಂಪಗೆ ಮಾಡಿಕೊಂಡು ಚಾವಡಿಗಳಿಗೆ ಬಂದು ಕೂತುಕೊಳ್ಳತೊಡಗಿದರು.

ಅಬ್ಬಬ್ಬ!! ನೋಡ ನೋಡುತ್ತಲೇ 40–50 ಜನರ ಗುಂಪು ಸೇರಿತು. ದುರ್ಗಾ, ನೀಲಿ ರಿಬ್ಬನ್ ಏಕವ್ಯಕ್ತಿ ಪ್ರದರ್ಶನಗಳಿಗೆ ತಾವೇ ಮೈಯಾಗಿ, ಕಿವಿಯಾಗಿ, ಕಣ್ಣಾಗಿ, ಬಾಯಾಗಿ ಬೆರೆತುಹೋದರು. ಮುಟ್ಟಿನ ಹಾಡು ಮತ್ತು ಸಂವಾದ ಗೊಲ್ಲರಹಟ್ಟಿಯ ಹೆಣ್ಣು ಮಕ್ಕಳೊಳಗೆ ಬಹುದೊಡ್ಡ ಅರಿವನ್ನು ಮೂಡಿಸಿತ್ತು.

"ಈಗ ನಾವ್ಯಾರೂ ಹೊರಗಾದಾಗ ಗುಡ್ಲು ಕೂರಕ್ಕಿಲ್ಲ. ಕೂಸು, ಬಾಣಂತಿಯನ್ನು ಮನೆಯೊಳಗೆ ಸುಧಾರಿಸುತ್ತೀವಿ ಬಿಡ್ರಿ ಮೇಡಮ್ಮಾರೆ" ಎಂದು ಒಕ್ಕೊರಲಿನಿಂದ ಹೇಳುವಾಗ ಅವರ ಕಂಗಳಲ್ಲಿ ಆತ್ಮವಿಶ್ವಾಸದ ಹೊಳಪಿತ್ತು.

ಹೊರಗೆ ಮಳೆ ಸೋಂಯ್ ಎಂದು ಸುರಿಯುತ್ತಲೇ ಇತ್ತು. ಆಟೋ ಅಣ್ಣ ನಮ್ಮನ್ನು ಕಾದುಕೊಂಡು ಆಟೋ ಒಳಗೆ ಕುಳಿತಿದ್ದ. ಇಂದಿರಮ್ಮನವರ ಬದ್ಧತೆ ಮತ್ತು ಉತ್ಸಾಹ ನಮ್ಮೆಲ್ಲರಿಗೂ ಮಾದರಿಯನಿಸಿತು. ಇಚ್ಛಾಶಕ್ತಿ ಬಲವಾಗಿದ್ದರೆ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಅಂದುಕೊಂಡದ್ದನ್ನು ಸಾಧಿಸಬಹುದು ಎಂಬುದಕ್ಕೆ ರಾಮಪ್ಪನಹಟ್ಟಿಯ ಈ ಯಶಸ್ವಿ ಕಾರ್ಯಕ್ರಮ ಸಾಕ್ಷಿಯಾಗಿತ್ತು.

ಹೀಗೆ ಅರಿವಿನ ಪಯಣದೊಂದಿಗೆ ಸಮುದಾಯದಲ್ಲಿ ಅರಿವು ಮೂಡಿಸುವುದರ ಜೊತೆಯಲ್ಲಿ ನಾನು ಹೊಸತನ್ನು ಕಲಿಯುತ್ತಾ ಹೋದೆ. ಹಾಡುಗಳು, ರೂಪಕ, ಸಂವಾದಗಳ ಮೂಲಕ ಎಂತಹ ಗಂಭೀರ ವಿಷಯಗಳನ್ನೂ ಸರಳವಾಗಿ ದಾಟಿಸಬಹುದು ಎಂಬುದು ಮನವರಿಕೆಯಾಯಿತು. ಈ ಅಂಶವನ್ನು

ನನ್ನ ವೃತ್ತಿಬದುಕಿಗೆ ಅಳವಡಿಸಿಕೊಂಡೆ. ವಿದ್ಯಾರ್ಥಿಗಳು ಮೊದಲಿಗಿಂತಲೂ ಹೆಚ್ಚು ಆಸಕ್ತಿ, ಲಬಲವಿಕೆಯಿಂದ ಕಲಿಕೆಯಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ನನಗೆ ಖುಷಿ ಅನ್ನಿಸುತ್ತದೆ. ಎರಡು ತಾಲ್ಲೂಕುಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಅವಕಾಶ ಸಿಕ್ಕಿದ್ದು ಹೆಮ್ಮೆ ಎನಿಸುತ್ತದೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅಡಿಯಲ್ಲಿ ಸಾಮಾಜಿಕವಾಗಿ ಗುರುತಿಸಲ್ಪಟ್ಟುವುದರಿಂದ ನನ್ನ ಆತ್ಮವಿಶ್ವಾಸ ಮತ್ತು ಘನತೆ ಹೆಚ್ಚಿದೆ. ಕೆಲಸ ಮಾಡುವ ಸ್ಥಳದಲ್ಲಿ ವಿನಾಕಾರಣ ಉಂಟಾಗುತ್ತಿದ್ದ ಕಿರಿಕಿರಿಗಳು ಕಡಿಮೆಯಾಗಿವೆ. ಮಹಿಳಾ ಸಹೋದ್ಯೋಗಿಗಳು ಪ್ರೀತಿ ಅಭಿಮಾನದಿಂದ ನಡೆಸಿಕೊಳ್ಳುತ್ತಾರೆ. ಏನಾದರೂ ಸಮಸ್ಯೆಗಳಿದ್ದರೆ ಹಂಚಿಕೊಳ್ಳುತ್ತಾರೆ. ಒಟ್ಟಿಗೆ ಪರಿಹಾರ ಕಂಡುಕೊಳ್ಳುತ್ತೇವೆ. ಬಸ್ ಪ್ರಯಾಣದಲ್ಲಿ ಪುರುಷ ಸಹಪ್ರಯಾಣಿಕರಿಂದ ಅನುಭವಿಸುತ್ತಿದ್ದ ಕಿರಿಕಿರಿಗೆ ಪರಿಹಾರ ಸಿಕ್ಕಿದೆ. "ಯಾಕಪ್ಪ ಸುಮ್ ಸುಮ್ನೆ ತಳ್ತೀಯ? ಸರಿಯಾಗಿ ನಿಲ್ಲೋದಕ್ಕೆ ನಿಂಗೇನು ಕಷ್ಟ?" ಎಂದು ದನಿ ಎತ್ತಿ ಕೇಳುವಷ್ಟು ಧೈರ್ಯ ಬಂದಿದೆ.

"ಮಹಿಳಾ ಹೋರಾಟ ಅಂದ್ರೆ ಪುರುಷರನ್ನು ದ್ವೇಷಿಸುವುದು ಅಂತ ಅಲ್ಲ" ಅನ್ನುವ ತಿಳುವಳಿಕೆಯೂ ಮೂಡಿದೆ. "ಸಮತೆಯೆಡೆಗೆ ನಮ್ಮ ನಡಿಗೆ" ಎಂದು ಸಾರಿದ ಒಕ್ಕೂಟಕ್ಕೆ ಧನ್ಯವಾದಗಳು.

ಒಕ್ಕೂಟಕ್ಕೆ ನನ್ನನ್ನು ಪರಿಚಯಿಸಿದ ಬಾ ಹ ರಮಾಕುಮಾರಿ ಮೇಡಂ ಅವರಿಗೆ ಹಾಗೂ ಅತ್ಯಂತ ಬದ್ಧತೆಯಿಂದ ಅರಿವಿನ ಪಯಣದಲ್ಲಿ ತೊಡಗಿಸಿಕೊಂಡು ನಮ್ಮೆಲ್ಲರಿಗೂ ಮಾದರಿಯಾದ ಗುರುಗಳಾದ ಎನ್ ಇಂದಿರಮ್ಮನವರಿಗೆ, ಒಕ್ಕೂಟದ ಹಿರಿಯ-ಕಿರಿಯ ಎಲ್ಲಾ ಗೆಳತಿಯರಿಗೆ, ಸ್ನೇಹಿತರಾದ ಮುಜೀಬ್, ಚಂದ್ರಶೇಖರ್ ಮೊದಲಾದವರೆಲ್ಲರಿಗೂ ತುಂಬಾ ತುಂಬಾ ಪ್ರೀತಿ ಹಾಗೂ ಧನ್ಯವಾದಗಳು.

# ಪೌರಕಾರ್ಮಿಕರಿಗೆ ಗೌರವ ಸಿಗಬೇಕು

ಶ್ವೇತಾ, ಪೌರ ಕಾರ್ಮಿಕರು

ನಾನು ಹಲವಾರು ವರ್ಷಗಳಿಂದ ಪೌರಕಾರ್ಮಿಕಳಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಇತರರಿಗೆ ಇಲ್ಲದಂತಹ ಕೆಲವು ಸಂಕಷ್ಟಗಳು ನಮಗೆ ಇದೆ. ಪ್ರತಿದಿನ ಬೆಳಗ್ಗೆ 5 ಗಂಟೆಯಿಂದ 6 ಗಂಟೆ ಒಳಗೆ ಆಫೀಸಿಗೆ ಹೋಗಿ ಸಹಿ ಮಾಡಬೇಕು. ಅದೆಷ್ಟೋ ಪೌರ ಕಾರ್ಮಿಕರು ಈ ವೇಳೆಗೆ ತಲುಪಬೇಕಾದರೆ ಬೆಳಗಿನ 3–4 ಗಂಟೆಗೇ ಮನೆ ಬಿಟ್ಟು ಬರಬೇಕಾಗಿರುತ್ತದೆ. ಚಳಿ, ಗಾಳಿ, ಕತ್ತಲು ಎನ್ನದೆ ಬರುವಾಗ ಎಷ್ಟೋ ಬಾರಿ ಅಪಘಾತಗಳಾಗುತ್ತವೆ. ನಿದ್ದೆಯ ಮಂಪರು, ಅನಾರೋಗ್ಯ, ನಿಶ್ಯಕ್ತಿ ಏನೆಲ್ಲಾ ಇದ್ದರೂ ಜನರೆಲ್ಲರೂ ಅವರವರ ಮನೆಯೊಳಗೆ ಸುಖ ನಿದ್ರೆ ಮಾಡುತ್ತಿದ್ದರೆ ನಾವುಗಳು ಬೀದಿಯಲ್ಲಿ ಕೆಲಸ ಮಾಡುತ್ತಿರುತ್ತೇವೆ. ನಮ್ಮ ಕೆಲಸ ನಿಕೃಷ್ಟವೆಂದು ನಾವೆಂದೂ ಭಾವಿಸದೆ ಶ್ರದ್ಧೆಯಿಂದಲೇ ಮಾಡುತ್ತಿದ್ದೇವೆ. ಸಮಾಜ ನಮ್ಮ ಕೆಲಸಕ್ಕೆ ಗೌರವ ನೀಡಬೇಕು. ನಮ್ಮನ್ನು ಕೀಳಾಗಿ ನೋಡುವ ಮನೋಭಾವ ಸಲ್ಲದು. ಮಹಿಳೆಯರಂತೂ ಬೆಳಗ್ಗೆ ಬೇಗನೆ ಕೆಲಸಕ್ಕೆ ಬರುವ ಕಾರಣ ಅಡಿಗೆ, ತಿಂಡಿ, ಮಕ್ಕಳನ್ನು ಶಾಲೆಗೆ ಕಳುಹಿಸುವುದು ಇತ್ಯಾದಿ ತೊಂದರೆಗಳಿರುತ್ತವೆ.

ಕೆಲಸಕ್ಕೆ ಹೋಗುವಾಗ ಕೆಲವು ಮನೆಗಳಲ್ಲಿ ಕುಡಿಯಲು ನೀರು ಕೇಳಿದರೆ ಬಾಟಲನ್ನು ದೂರದಿಂದ ಎಸೆಯುವ ಸಂದರ್ಭದಲ್ಲಿ ಮನಸ್ಸಿಗೆ ತೀವ್ರ ನೋವುಂಟಾಗುತ್ತದೆ. ಕರೋನದ ಸಮಯದಲ್ಲಿ ಪ್ರಾಣಭಯ ತ್ಯಜಿಸಿ ಜನರಿಗಾಗಿ ಓಡಾಡಿ, ಶವಸಂಸ್ಕಾರಕ್ಕೆ ಅವರ ಮಕ್ಕಳೇ ಮುಂದಾಗದಾದಗ ಪೌರಕಾರ್ಮಿಕರೇ ಆ ಕೆಲಸ ಮಾಡಿ ಅದೆಷ್ಟೋ ಜನ ಸೋಂಕಿಗೆ ಒಳಗಾಗಿ ಮರಣ ಹೊಂದಿದ ಬಗ್ಗೆ ಸಂಕಟವಿದೆ.

ಸರ್ಕಾರ ಪೌರಕಾರ್ಮಿಕರ ಕೆಲಸ ಕಾಯಂ ಮಾಡಬೇಕು. ಪಿಂಚಣಿ ಭತ್ಯೆ ಇತ್ಯಾದಿಗಳು ಸರಿಯಾಗಿ ವ್ಯವಸ್ಥೆಯಾಗಬೇಕು. ಪೌರಕಾರ್ಮಿಕರಿಗೆ ಸುರಕ್ಷತೆ, ಆರೋಗ್ಯರಕ್ಷಣೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಅನುಕೂಲ ಮಾಡಿಕೊಡಬೇಕು. ಪೌರಕಾರ್ಮಿಕರ ಗಂಡ ಸತ್ತರೆ ಅವನ ಪತ್ನಿಗೆ ಕೆಲಸ ನೀಡಬೇಕು. ಹಾಗಾದರೆ ಪೌರಕಾರ್ಮಿಕರು ಸ್ವಲ್ಪವಾದರೂ ಆತ್ಮಗೌರವದಿಂದ ಕೆಲಸ ಮಾಡಲು ಸಾಧ್ಯ.

# ನಡೆ–ನುಡಿ ಒಂದಾಗಿ ಇರೋಣ

ಡಾ॥ ಅರುಂಧತಿ ಡಿ

2023ರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ತುಮಕೂರಿನಲ್ಲಿ ಸಂಪನ್ನಗೊಂಡಿದ್ದು, ಅದರ ಅಂಗವಾಗಿ ಒಂದು ಸಂಚಿಕೆ ಹೊರ ಬರಬೇಕಿತ್ತು. ಒಂದು ಲೇಖನ ಕೊಡುವಂತೆ ಎಲ್ಲರ ಒತ್ತಾಯವಿದ್ದರೂ ಬರೆದಿರಲಿಲ್ಲ. ಬಾಹ ರಮಾಕುಮಾರಿಯವರ ನಿಮ್ಮದೊಂದು ಲೇಖನ ಕೊಡಲೇಬೇಕು. ಗುಲ್ಬರ್ಗದಿಂದ ಗಿಡ ತರುವ ಮೂಲಕ ಜಿಲ್ಲೆಗೆ ಕಾರ್ಯಕ್ರಮ ತಂದವರು ನೀವೇ ಅಲ್ಲವೇ ಎಂದು ಫೋನಾಯಿಸಿ, ಮೆಸೇಜ್ ಮಾಡಿ ಒತ್ತಾಯ ಮಾಡಿದುದರ ಫಲವಾಗಿ ಸಮಯ ಹೊಂದಿಸಿಕೊಂಡು ಕೂತೆ. ಹೊರಗಡೆ ಗದ್ದಲದ ವಾತಾವರಣ. ಓಹ್ ಇಂದು ತಾರೀಕು 22.01.2024. ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾನ ದಿನ. ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಸಂವಿಧಾನದ ಅಡಿಯಲ್ಲಿ ಅಯೋಧ್ಯದಲ್ಲಿದ್ದ ಬಾಬರಿ ಮಸೀದಿಯನ್ನು ಒಡೆದು ಹಾಕಿ, ರಾಮನು ಹುಟ್ಟಿದ್ದೇ ಅಲ್ಲೆಂದು ವಾದಿಸಿ, ಗೆದ್ದು ರಾಮಮಂದಿರ ಕಟ್ಟಿದ ದಿನ. ಈ ಗೆಲುವಿನ ಅಂಗವಾಗಿ ಗಲ್ಲಿ ಗಲ್ಲಿಗಳಲ್ಲಿ ಮಂತ್ರೋಚ್ಚಾರ, ಭಜನೆ, ಅಯೋಧ್ಯೆಯ ಕಾರ್ಯಕ್ರಮದ live relay ಯ ಅಬ್ಬರ...

ಈ ದೇಶದ ಅಧ್ಯಾತ್ಮದ ತಿರುಳನ್ನು ಹೊಸಕಿ, ಮೂಢನಂಬಿಕೆಗಳ ವಿಷ ಹಿಂಡುತ್ತಾ ದೇಶವಾಸಿಗಳ ಪ್ರೀತಿ, ಸಹಬಾಳ್ವೆ, ಸಹಿಷ್ಣುತೆ, ನೆಮ್ಮದಿಗಳನ್ನೇ ತುರ್ತುನಿಗಾವಣೆಯ ವೆಂಟಿಲೇಟರ್ ಮೇಲೆ ಬದುಕುವಂತೆ ಮಾಡಿದುದರ ಪರಿಣಾಮ ಇಡೀ ಇಂಡಿಯಾ ರೋಗಗ್ರಸ್ತವಾಗಿ ಪರಸ್ಪರ ಹರಿಹಾಯುತ್ತಾ, ಚಡಪಡಿಸುತ್ತಾ ಆಸ್ಪತ್ರೆಗಳು, ಜೈಲು, ಕೋರ್ಟುಗಳು ತುಂಬಿ ತುಳುಕಾಡುತ್ತ ನೆಮ್ಮದಿ ಎನ್ನುವುದು ಮರೀಚಿಕೆಯಾಗುತ್ತಿರುವ ಕಾಲಘಟ್ಟದಲ್ಲಿ ಮಹಿಳೆಯರ ಅರಿವೇ ಇದಕ್ಕೆ ಪ್ರಾಣವಾಯು ಆಗಬಲ್ಲದು ಎಂಬ ನಂಬಿಕೆಯಿಂದ 10 –15 ವರ್ಷಗಳಿಂದ ಮಹಿಳೆಯರ ಸಂಘಟನೆಗಳ ನಡುವೆ ಬೆಸೆಯುವ ಕೊಂಡಿಯಂತೆ ಕರ್ನಾಟಕದ ಮಹಿಳಾ ದೌರ್ಜನ್ಯದ ವಿರೋಧಿ ಒಕ್ಕೂಟ ಕೆಲಸ ಮಾಡುತ್ತಿದೆ.

ಒಂದೊಂದು ವರ್ಷ ಒಂದೊಂದು ಜಿಲ್ಲೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿ, ಕಳೆದ ವರ್ಷ ತುಮಕೂರು ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡ ಪ್ರಯುಕ್ತ ತುಮಕೂರಿನ ಕಾರ್ಮಿಕ ಸಂಘಗಳು, ರೈತ

ಸಂಘ, ಸಮತಾ ಬಳಗ, ದಲಿತ ಸಂಘಗಳು, ಸವಿತಾ ಸಂಘಟನೆ, ವರದಕ್ಷಿಣೆ ವಿರೋಧಿ ವೇದಿಕೆ, ಕರ್ನಾಟಕ ಲೇಖಕಿಯರ ಸಂಘ (ರಿ), ತುಮಕೂರು ಶಾಖೆ, ಚಿಕ್ಕನಾಯಕನಹಳ್ಳಿಯ ಸೃಜನಾ, ಶಿರಾ ತಾಲೂಕಿನ ಕನ್ನಡ ಸಂಘಟನೆಗಳು, ಗುಬ್ಬಿಯ ಹಕ್ಕಿ–ಪಕ್ಕ ಬಳಗ, ಕದಳೀ, ಭಾರತೀಯ ವೈದ್ಯಕೀಯ ಸಂಘದ ಸದಸ್ಯರು, ಲಾಯರ್ ಫೋರಂನ ಸದಸ್ಯರು, ಜಿಲ್ಲೆಯ ಹಲವಾರು ಮಹಿಳಾ ಸಂಘಟನೆಗಳು ಸೇರಿ ವರ್ಷ ಪೂರ್ತಿ ಶಾಲಾ–ಕಾಲೇಜುಗಳಲ್ಲಿ ಲಿಂಗಸೂಕ್ಷ್ಮತೆ, ಸಂವಿಧಾನದ ಆಶಯ, ವೈಜ್ಞಾನಿಕ ಮನೋಭಾವ, ಜಾತ್ಯಾತೀತತೆ, ಸತ್ಯ ಮತ್ತು ನೆಮ್ಮದಿಗೆ ಅಗತ್ಯತೆ ಇವುಗಳ ತಿರುಳಿರುವ ಕಿರು ನಾಟಕ, ಹಾಡು, ಸಂವಾದಗಳನ್ನು ನಡೆಸುತ್ತ ಮಕ್ಕಳಲ್ಲಿ ಪ್ರಶ್ನಿಸುವ ಮನೋಭಾವವನ್ನು ಎಚ್ಚರಿಸುತ್ತಾ ಅವರ ಪ್ರಶ್ನೆಗಳಿಂದಾಗಿ ತಮ್ಮ ಅರಿವನ್ನು ವಿಸ್ತರಿಸಿಕೊಳ್ಳುತ್ತಾ ಗೆಳತಿಯರಾದ ಬಾ ಹ ರಮಾಕುಮಾರಿ, ಇಂದಿರಮ್ಮ, ಮಲ್ಲಿಕಾ, ಪ್ರವೇಣಿ, ಮಮ್ತಾಜ್, ರಾಣಿ ಚಂದ್ರಶೇಖರ್, ದೀಪಿಕಾ, ಪಾರ್ವತಮ್ಮ, ಶೈಲಜಾ, ಅಕ್ಕಮ್ಮ, ಹೇಮಾ, ಭಾಗ್ಯ, ಗೀತಾ ಲಕ್ಷ್ಮಿ, ಗೀತಾ, ಆಶಾರಾಣಿ, ಚೇತನ, ಗಂಗಲಕ್ಷ್ಮೀ, ಶೈಲಾ ನಾಗರಾಜ್, ಚಂದ್ರಶೇಖರ್, ಮುಜೀಜ್, ಸ್ಲಂ ಜನಾಂದೋಲನ ಅರುಣ್ ಮತ್ತು ತಂಡದವರು, ಡಮರುಗ ದೇವರಾಜ್, ರಾಮಕೃಷ್ಣಪ್ಪ, ಹೇಮಲತಾ, ರಾಜ್ಯ ಸಮಿತಿಯಿಂದ ಅಖಿಲಾ, ವಾಣಿ ಪರಿಯೊಡಿ, ಲಿನೆಟ್, ಗೌರಿ, ರೆಖಾಂಬ, ಸುಮನ್ ಸಬೀಹರ ಸಹಕಾರದಿಂದ ತಂಡಗಳನ್ನು ಮಾಡಿಕೊಂಡು ತುಮಕೂರು ಜಿಲ್ಲೆಯ ಶಾಲಾ–ಕಾಲೇಜುಗಳಲ್ಲಿ ಅರವಿನ ಪಯಣದ ಕಾರ್ಯಕ್ರಮಗಳನ್ನೂ ನಡೆಸಿದರು. (ಅನುಬಂಧ ನೋಡಿ)

ಅಧ್ಯಯನ ಶಿಬಿರಗಳು, ನಾಡಿನ ಹಲವು ವಿದ್ವಾಂಸರಿಂದ ವಿಚಾರ ಗೋಷ್ಠಿಗಳು, ಪರಸ್ಪರ ವಿಚಾರ ವಿನಿಮಯ, ಅನಿಸಿಕೆಗಳು, ಹಾಡು ಇವುಗಳನ್ನು ನಡೆಸಿ ಮಾರ್ಚ್ 7 ಮತ್ತು 8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಅಂಗವಾಗಿ ಕಾಲೇಜು–ಶಾಲಾ ವಿದ್ಯಾರ್ಥಿಗಳು, ರಾಜ್ಯದ ಮೂಲೆಮೂಲೆಯಿಂದ ಬಂದಿದ್ದ ಒಕ್ಕೂಟದ ಸ್ನೇಹಿತರು, ಸಾರ್ವಜನಿಕರು ಸೇರಿ ಸಾವಿರ ಜನರು ತುಮಕೂರು ಸಾರ್ವಜನಿಕರಲ್ಲಿ ಸಂಚಲನ ಹುಟ್ಟಿಸುವ ಹೋರಾಟದ ಹಾಡುಗಳನ್ನು ಹಾಡುತ್ತಾ ಮಹಿಳಾಪರ, ಜೀವಪರ ಘೋಷಣೆಗಳನ್ನು ಕೂಗುತ್ತಾ, ಪ್ಲೆಕಾರ್ಡ್ಗಳನ್ನು ಹಿಡಿದು ಸಾವಿರಾರು ಜನ ಜಾಥಾ ಹೊರಟು, ನಂತರ ಅಮಾನಿಕೆರೆಯ ಗಾಜಿನ ಮನೆಯಲ್ಲಿ ಬಹಿರಂಗ ಸಭೆಯಲ್ಲಿ ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಮಹಿಳಾ ಪರವಾದ, ನೆಮ್ಮದಿಯ ಬದುಕಿಗೆ ಪೂರಕವಾದ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು. ಆ ದಿನ ಸಂಜೆ ಸ್ವತಂತ್ರ ಚೌಕದಲ್ಲಿ ಕಪ್ಪು ಉಡುಗೆಯಲ್ಲಿ ಮಹಿಳೆಯರು ಸೇರಿದಾಗ ಆನೇಕಲ್ಲಿನ ಮಮತಾರವರ

ಕಂಚಿನ ಕಂಠದಿಂದ ಹೊಮ್ಮುತ್ತಿದ್ದ ಹೋರಾಟದ ಹಾಡುಗಳು ತುಮಕೂರಿಗರನ್ನು ಬಡಿದೆಬ್ಬಿಸುವಂತಿದ್ದವು. ಮಹಿಳೆಯರು ಯುದ್ಧವಿರೋಧಿ ನಿಲುವನ್ನು ಪ್ರಸ್ತುತಪಡಿಸುವ ಈ ಕಾರ್ಯಕ್ರಮದ ಇತಿಹಾಸವನ್ನು ಡಾ. ಅನುಪಮರವರು ಮನಮುಟ್ಟುವಂತೆ ವಿವರಿಸಿದರು. ಸಂಜೆಗತ್ತಲಲ್ಲಿ ಕೈಯಲ್ಲಿ ಬೆಳಕಿನ ಮೇಣದಬತ್ತಿಗಳನ್ನು ಹಿಡಿದ ಮಹಿಳೆಯರು ಕೂಗುಮಾರಿಗಳಿಗೆ ಉತ್ತರವೆಂಬಂತೆ ಒಂದು ಗಂಟೆಯ ಕಾಲ ಮೌನವಾಗಿ ಬೆಳಕಿನ ಭರವಸೆಗಳಂತೆ ನಿಂತಿದ್ದರು.

ಈ ಎಲ್ಲಾ ಕಾರ್ಯಕ್ರಮಗಳ ಯಶಸ್ವಿಯಲ್ಲಿ ಮಾಜಿ ಶಾಸಕರಾದ ರಾಜಣ್ಣ, ರಫೀಕ್ ಅಹಮದ್, ಹಿರಿಯ ಅಡ್ವೋಕೇಟ್ ರವಿವರ್ಮ ಕುಮಾರ್, ಮುರಳೀಧರ ಹಾಲಪ್ಪ, ಡಾ. ಬಸವರಾಜು, ಡಾ. ರಂಗಸ್ವಾಮಿ, ಬಾಲಕೃಷ್ಣಪ್ಪ, ಡಾ. ಚಂದ್ರಕಲಾ, ಮಂಡಿಪೇಟೆಯ  ವರ್ತಕರು. ಜನಚಳುವಳಿ ಕೇಂದ್ರದ ಮುಜೀಬ್, ಸುಬ್ರಹ್ಮಣ್ಯ ಬಿ, ಉಮೇಶ, ಚಂದ್ರಶೇಖರ್ ಮುಂತಾದ ಅನೇಕ ಸಂಗಾತಿಗಳ ಅದಮ್ಯ ಚೇತನಗಳ ಸಹಕಾರವನ್ನು ನೆನೆಯುತ್ತಾ ನಡೆಗೂ ನುಡಿಗೂ ಅಂತರವಿಲ್ಲದ ಬದುಕು ನಮ್ಮದಾಗಲಿ ಎಂದು ಆಶಿಸುತ್ತಾ ಉಡುಪಿಯಲ್ಲಿ ನಡೆಯುತ್ತಿರುವ 2024 ರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಶುಭಾಶಯ ಕೋರುತ್ತಾ

"ಇಲ್ಲಿ ಯಾರು ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ" ಎನ್ನುವ ರಸಋಷಿ ಕುವೆಂಪುರವರ ಸಾಲುಗಳಿಗೆ ನಮಿಸುತ್ತಾ ನನ್ನ ಮಾತುಗಳಿಗೆ ವಿರಾಮ ಇಡುತ್ತಿದ್ದೇನೆ.

# ಅರಿವಿನ ಪಯಣ – ತಲ್ಲಣಗಳ ಚಿತ್ರಣ

ರಾಮಕೃಷ್ಣಪ್ಪ

ಅರಿವಿನ ಪಯಣ ಹೆಸರಿನಲ್ಲಿ ಕಳೆದ ವರ್ಷ ಮಹಿಳಾ ದಿನಾಚರಣೆ ಅಂಗವಾಗಿ ತುಮಕೂರು ಜಿಲ್ಲೆಯಲ್ಲಿ ನಡೆದ ಅಭಿಯಾನ ಮಹಿಳಾ ಸಮುದಾಯದ ನಿತ್ಯ ಜೀವನದಲ್ಲಿ ಘಟಿಸುತ್ತಿರುವ ನೈಜ ತಲ್ಲಣಗಳ ಚಿತ್ರಣ.ಶತ ಶತಮಾನಗಳ ಶೋಷಣೆ ಯಿಂದ ನಲುಗಿರುವ ಮಹಿಳಾ ಸಮುದಾಯ, ಅತ್ಯಾಧುನಿಕ ಕಾಲಘಟ್ಟ ದಲ್ಲೂ ಶೋಷಣೆ ಮುಕ್ತ

ಜೀವನ ಕಂಡುಕೊಳ್ಳಲು ಸಾಧ್ಯವಾಗಿಲ್ಲವೆಂಬುದನ್ನು ಮನಮುಟ್ಟುವಂತೆ ಪ್ರದರ್ಶಿಸುವ ಅರಿವಿನ ಪಯಣ ಮಹಿಳಾ ಸಮುದಾಯ ಪುರುಷಾಧಿಪತ್ಯವನ್ನು ಧಿಕ್ಕರಿಸುವ, ಪ್ರಶ್ನಿಸುವ ಮನಸ್ಥಿತಿ ಉಂಟುಮಾಡು ವಲ್ಲಿ ಯಶಸ್ಸು ಕಂಡಿದೆ.

ಕಳೆದ ಶತಮಾನದ ತೊಂಭತ್ತರ ದಶಕದಲ್ಲಿ " ಸಮಾನತೆ, ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ " ಘೋಷಣೆಯೊಂದಿಗೆ ದೇಶದಾದ್ಯಂತ ಜನ ವಿಜ್ಞಾನ ಸಂಘಟನೆಗಳು ನಡೆಸಿದ ಮಹಿಳಾ ಜಾಥಾ ನಂತರದಲ್ಲಿ, ಇಂತಹ ಮಹಿಳಾ ಜಾಗೃತಿ ಜಾಥಾ ಜಾರಿಗೊಂಡಿರಲಿಲ್ಲ. ಚಿಕ್ಕನಾಯಕನಹಳ್ಳಿ ಸೃಜನ ಮಹಿಳಾ ಸಂಘಟನೆ ಕಟಿಬದ್ಧತೆ ಯಿಂದ ಮಹಿಳಾ ಸಮುದಾಯದ ನಡುವೆ ಪರಿಣಾಮಕಾರಿಯಾಗಿ ಪ್ರದರ್ಶಿಸಿದ ರೂಪಕ, ಕಥೆ, ಸಂವಾದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಆಶಯಕ್ಕೆ ತಕ್ಕಂತಿತ್ತು. ಬಹುಶಃ ಜಿಲ್ಲೆಯ ಇತರ ತಾಲ್ಲೂಕುಗಳಲ್ಲಿ ಈ ರೀತಿಯ ಅರಿವಿನ ಪಯಣ ಕಾರ್ಯಕ್ರಮ ಗಳು ನಡೆದಿದ್ದರೆ ಮಹಿಳಾ ಚಳುವಳಿಗೆ ಪುಷ್ಠಿ ಸಿಗುವ ಸಾಧ್ಯತೆಯಿತ್ತು.

ಅರಿವಿನ ಪಯಣ ಮುಂದುವರಿದ ಚಟುವಟಿಕೆಗಳನ್ನು ರೂಪಿಸಿದ್ದರೆ, ಚಳುವಳಿಗೆ ನಿರಂತರತೆ ಸಿಗುವ ಸಾಧ್ಯತೆಯಿತ್ತು. ಈಗಲೂ ಅರಿವಿನ ಪಯಣ ಚಟುವಟಿಕೆ ಗಳನ್ನು ಮುಂದುವರಿ ಸಲು ಕಾಲ ಮಿಂಚಿಲ್ಲ. ಕೆಲವರು ಅರಿವಿನ ಪಯಣ ಮನರಂಜನೆ ಕಾರ್ಯಕ್ರಮ ಎಂದು ಭಾವಿಸಿ ನೃತ್ಯ ಮಾಡುವುದು, ಹಾಸ್ಯ ಪ್ರಸಂಗಗಳಂತೆ ನಗುವ ನಗಿಸುವ ಪ್ರಯತ್ನಗಳು ನಡೆದಿವೆ. ಅರಿವಿನ ಪಯಣ ಮಹಿಳಾ ಸಮುದಾಯವನ್ನು ಎಚ್ಚರಿಸುವ, ಜಾಗೃತ ಗೊಳಿಸುವ ಕೈಂಕರ್ಯ.

ರಂಜನೆ ಹಾಸ್ಯ ಎಂಬಂತೆ ಪ್ರದರ್ಶನ ಗೊಂಡರೆ ಮಹಿಳಾ ಚಳುವಳಿ ಅಪಹಾಸ್ಯಕ್ಕೆ ಈಡಾಗುವುದು. ಅರಿವಿನ ಪಯಣ ರೂಪಿಸಿದ ದೌರ್ಜನ್ಯ

ವಿರೋಧಿ ಒಕ್ಕೂಟದವರಿಗೆ, ಅರಿವಿನ ಪಯಣ ಸಾಹಿತ್ಯ ರಚಿಸಿದವರಿಗೆ ಮತ್ತು ಸಂಘಟಿಸಿದವರಿಗೆಲ್ಲಾ ಗೌರವ ಪೂರ್ವಕ ಅಭಿನಂದನೆಗಳು

## ವಿಭಿನ್ನ ಕಾರ್ಯಕ್ರಮದ ವಿಶಿಷ್ಟ ಅನುಭವ

ದೀಪಿಕಾ, ಮರಳೂರು

ಒಂದು ದಿನ ನನಗೆ ಡಾ. ಬಿ ಸಿ ಶೈಲಜಾ ನಾಗರಾಜರವರಿಂದ ಕರೆ ಬಂತು. "ಗಾಂಧಿನಗರದಲ್ಲಿರುವ ಜನಚಳುವಳಿ ಕೇಂದ್ರಕ್ಕೆ ಬಾ ಮಗಳೇ" ಎಂದರು. ನನಗೆ ಅದೊಂದು ಹೊಸ ಅನುಭವ. ನನ್ನ ಮೊದಲನೆಯ ಹೆಜ್ಜೆ ಅದು. ಅಂದು ನಾನು ಆ ಸಭಾಂಗಣಕ್ಕೆ ಬಂದೆ. ಎಲ್ಲಾ ಜಿಲ್ಲೆಯವರು ಒಂದು ಕಡೆ ಸೇರಿದ್ದು ನೋಡಿರಲಿಲ್ಲ. ಕಾರ್ಯಕ್ರಮದ ಉದ್ದೇಶ ನನಗೆ ತಿಳಿಯಿತು. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಲ್ಲಿ ಹತ್ತು ವರ್ಷಗಳಿಂದ ಅದರ ಜೊತೆಯಲ್ಲಿದ್ದ ಎಲ್ಲಾ ಹಿರಿಯರು ಬಂದಿದ್ದರು. ಆ ಸಭೆಯಲ್ಲಿ ನನಗೆ ತಿಳಿದದ್ದು ಈ ಬಾರಿ ತುಮಕೂರು ಜಿಲ್ಲೆಗೆ ಈ ಕಾರ್ಯಕ್ರಮ ಬಂದಿದೆ ಎಂದು. ಅದುವೇ ಅರಿವಿನ ಪಯಣ ಕಾರ್ಯಕ್ರಮ.

ನಂತರ ಒಕ್ಕೂಟದ ಹಲವು ಸಭೆಗಳು ತುಮಕೂರಿನಲ್ಲಿ ನಡೆದವು. ಅಧ್ಯಯನ ಶಿಬಿರ, ಮೂರು ದಿನದ ಕಾರ್ಯಾಗಾರ ಹೀಗೆ ಹಲವಾರು ಸಭೆಗಳು ನಡೆದ ನಂತರ ತುಮಕೂರಿನ ಎಲ್ಲಾ ಸಂಘಟನೆಗಳ ಸಂಗಾತಿಗಳು ಒಂದು ಕಡೆ ಸೇರಿ ಅರಿವಿನ ಪಯಣವನ್ನು ಎಲ್ಲಾ ಶಾಲಾ ಕಾಲೇಜಿನಲ್ಲಿ ನಡೆಸುತ್ತಾ ಸಾಗುವುದು ಕಾರ್ಯಕ್ರಮದ ಉದ್ದೇಶವಾಗಿತ್ತು. ಅದೊಂದು ಇಪ್ಪತ್ತು ಪುಟಗಳ ಪುಸ್ತಕ ತಿಳಿ ನೀಲಿ ಬಣ್ಣದ್ದು. ಅದರಲ್ಲಿ ಕಾರ್ಯಕ್ರಮದ ಪ್ರತಿಯೊಂದು ಮಾಹಿತಿಗಳೂ ಇದ್ದವು.

ಮುಟ್ಟು ಮುಟ್ಟು ಎಂದೇಕೆ ಮೆರವಣಿಗೆ ಹೊರಡುತ್ತೇವೆ ಆಕೆಗೊಂದು ತರ ಅವನಿಗೊಂದು ತರ ಹಾಗೆಯೇ ಮೂರು ನಾಟಕಗಳು ಕಪ್ಪು ಬಲೂನ್, ನೀಲಿ ರಿಬ್ಬನ್, ದುರ್ಗಾ ಇತ್ಯಾದಿ. ಕೊನೆಯಲ್ಲಿ ಸಂವಾದ ಚರ್ಚೆ. ಇದು ಅರಿವಿನ ಪಯಣದ ಕಾರ್ಯಕ್ರಮ. ಇದರ ಮೂಲಕ ಇಡೀ ಜಿಲ್ಲೆಯನ್ನು ಆವರಿಸಿಕೊಂಡಂತೆ ತಲುಪಬೇಕು ಎಂಬುವುದು ಎಲ್ಲರ ಜವಾಬ್ದಾರಿ.

ನನಗೆ ನೀಲಿ ರಿಬ್ಬನ್ ಹಾಗೂ ದುರ್ಗವನ್ನು ಕಲಿಸಿಕೊಟ್ಟರು. ತುಂಬಾ ವರ್ಷದ ನಂತರ ನಾನು ನಾಟಕವನ್ನು ಮತ್ತೆ ಕಲಿತಿದ್ದು. ನೋಡು ನೋಡುತ್ತಲೇ

ಶಾಲಾ-ಕಾಲೇಜುಗಳಲ್ಲಿ ಅರಿವಿನ ಪಯಣ ಕಾರ್ಯಕ್ರಮ ಶುರುವಾಗಿಯೇ ಬಿಟ್ಟಿತು. ನನಗಿನ್ನು ಕಾಲೇಜು ಶುರುವಾಗಿರಲಿಲ್ಲ. ಕರೆದ ಕಡೆಯೆಲ್ಲ ನಾನು ಮಕ್ಕಳಿಗಾಗಿ ಕಾರ್ಯಕ್ರಮಕ್ಕೆ ಹೋಗಿ ನನ್ನ ನಾಟಕವನ್ನು ಪ್ರದರ್ಶಿಸುತ್ತಿದ್ದೆ. ಒಂದು ದಿನ ಅಥವಾ ಎರಡು ದಿನ ಬೇರೆ ಊರುಗಳಲ್ಲಿ ಉಳಿಯುವ ಸಂದರ್ಭ. ಅದರಲ್ಲೂ ಬಾ ಹ ರಮಾಕುಮಾರಿ, ವರದಕ್ಷಿಣೆ ವೇದಿಕೆಯ ಪಾರ್ವತಮ್ಮ ರಾಜಕುಮಾರ್, ರಾಣಿ ಚಂದ್ರಶೇಖರ್, ಮಮ್ತಾಜ್, ತರಂಗಿಣಿ ಇನ್ನು ಹಲವಾರು ಹಿರಿಯರ ಜೊತೆ ಸಮಯ ಕಳೆಯುವುದು ನನಗೆ ಸಡಗರದ ಸಂಗತಿ ಎನಿಸಿತು. ವಾಣಿ ಪೆರಿಯೋಡಿ ಅವರ ಜೊತೆ ಗುಬ್ಬಿಯಲ್ಲಿ ನಾಲ್ಕು ದಿನಗಳು ಇದ್ದು ಹಕ್ಕಿ-ಪಕ್ಕ ಬಳಗದ ಮಕ್ಕಳೊಂದಿಗೆ ನಮ್ಮ ದಿನ ಕಳೆಯಿತು.

ಮಕ್ಕಳಿಗೆ ವಾಣಿ ಪೆರಿಯೋಡಿ ನಾಟಕಗಳನ್ನು ಕಲಿಸುತ್ತಿದ್ದ ರೀತಿ, ಅವರು ಹಾಕಿಸುತ್ತಿದ್ದ ಶಹಬ್ಬಾಸ್, ಚಪ್ಪಾಳೆ ಆ ತಾಳ್ಮೆ ಸಹನೆಯನ್ನು ನನ್ನಲ್ಲಿ ತುಂಬಿಕೊಂಡೆ. ನಂತರ ಮಧುಗಿರಿ, ತುರುವೇಕೆರೆ, ಹೆಬ್ಬೂರು, ಶಿರಾ, ತುಮಕೂರಿನ ಹಲವಾರು ಶಾಲಾ ಕಾಲೇಜುಗಳಲ್ಲಿ ನಡೆಯಿತು. ಅರಿವಿನ ಪಯಣ ಕಾರ್ಯಕ್ರಮ ಎನ್ನುವುದು ಮಕ್ಕಳ ಮನಸ್ಸಿನಲ್ಲಿ ರಾಜಾಜಿಸುತ್ತಿತ್ತು. ನನಗೆ ಈಗಲೂ ನೆನಪಿಗೆ ಬರುವುದು ಹಾಡುಗಳನ್ನು ಪ್ರಾಕ್ಟೀಸ್, ಮಾಡಲು ನಾಟಕವನ್ನು ಪ್ರಾಕ್ಟೀಸ್ ಮಾಡಲು ಹಲವಾರು ಬಾರಿ ಒಂದು ಕಡೆ ಸಭೆ ಸೇರುತ್ತಿದ್ದ ಚಂದದ ಅನುಭವ.

ತಿಂಗಳಿಗೆ ಒಂದು ಗೂಗಲ್ ಮೀಟಿಂಗ್. ತುಮಕೂರು ಹಾಗೂ ರಾಜ್ಯ ಒಕ್ಕೂಟದ ಸಂಗಾತಿಗಳು ಎಲ್ಲರೂ ಸೇರಿ ಅದರಲ್ಲಿ ಚರ್ಚೆ, ವಿಮರ್ಶೆ, ಮುಂದಿನ ಕಾರ್ಯಕ್ರಮಗಳ ಬಗ್ಗೆ ವಿವರಗಳು, ಎಲ್ಲರೊಂದಿಗೆ ಸ್ನೇಹ ಸಂಬಂಧಗಳನ್ನು ಬಲಪಡಿಸುತ್ತಾ ಹೋಯಿತು.

ನೋಡು ನೋಡುತ್ತಲೇ ಕಾರ್ಯಕ್ರಮದ ಮೂಲ ಉದ್ದೇಶದ ದಿನ ಬಂದಿಯೇ ಬಿಟ್ಟಿತು. ಅದುವೇ ಮಾರ್ಚ್ 7 ಮತ್ತು 8 ರ ಮಹಿಳಾ ದಿನಾಚರಣೆ. 7 ರಂದು ಬೆಳಿಗ್ಗೆ 9 ಗಂಟೆಗೆ ಹಲವಾರು ಕರ್ನಾಟಕದ ಸಾಧಕಿಯರು ಸೇರಿ ಟೌನ್ ಹಾಲ್ ನಿಂದ ಹೊರಟ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆ ಮುಗಿಸಿ ಬಂದ ನಂತರ ಒಂದು ಕಡೆ ಇಟ್ಟಿದ್ದ ಬಟ್ಟೆಗೆ ಬಣ್ಣದಲ್ಲಿ ತಮ್ಮ ಕೈ ಅದ್ದಿ ಗುರ್ತು ಮಾಡುವ ಮೂಲಕ ಬಹಿರಂಗ ಸಭೆಗೆ ಸಾಕ್ಷಿಯಾದರು. ನಂತರ ಎರಡು ದಿನದ ತುಮಕೂರು ಹಬ್ಬವೆಂದೇ ಹೇಳಬಹುದಾದ ಕಾರ್ಯಕ್ರಮ ಶುರುವಾಯಿತು. ಅದೇ ದಿನ ಸಂಜೆ ಕಪ್ಪು ಉಡುಪಿನಲ್ಲಿ ಎಲ್ಲಾ ಸಂಗಾತಿಗಳು ತುಮಕೂರು ಚೌಕದ ಬಳಿ ಸೇರಿದೆವು. ಸಂಜೆ ಆವರಿಸುತ್ತಾ ಬಂದಂತೆ ಕೈಗಳಲ್ಲಿ ಮೇಣದಬತ್ತಿಗಳನ್ನು ಹಿಡಿದು

ಎಲ್ಲಾರು ವೃತ್ತಾಕಾರವನ್ನು ಬಳಸಿ ಮೌನ ಪ್ರತಿಭಟನೆ ಮಾಡಿದೆವು. ಅದೊಂದು ಎಂದೂ ಮರೆಯದ ನೆನಪು. ಮಮತಾರವರು ಜೋರಾದ ಧ್ವನಿಯಲ್ಲಿ ಹಾಡಿದ ಹಾಡಿನಲ್ಲಿ ಸಮಾನತೆಯೆಂಬ ಕೂಗು ಕೇಳಿಸುತ್ತಿತ್ತು. ಮರುದಿನ ಒಂಬತ್ತು ಗಂಟೆಗೆ ಎಲ್ಲರೂ ಮತ್ತೆ ಗುಬ್ಬಿ ವೀರಣ್ಣ ಕಲಾಕ್ಷೇತ್ರ ಸೇರಿದ್ದೆವು. ವೇದಿಕೆಯ ಮೇಲೆ ತತ್ವಪದಗಳು ಶುರುವಾಗಿತ್ತು. ನಂತರ ವಿಚಾರಸಂಕಿರಣ, ಸಂವಾದ, ಚರ್ಚೆ, ವಿಮರ್ಶೆ, ಮಹಿಳಾ ಜಾಗೃತಿ ಕಾರ್ಯಕ್ರಮಗಳು ಆರಂಭವಾದವು. ರಂಗಮಂದಿರ ಕಿಕ್ಕಿರಿಯುವಷ್ಟು ಮಂದಿ ಅದರಲ್ಲಿ ಭಾಗವಹಿಸಿದ್ದರು.

ನಂತರ ದಿನಗಳಲ್ಲಿ ತುಮಕೂರಿನ ಶಾಲಾ-ಕಾಲೇಜುಗಳಲ್ಲಿ ಅರಿವಿನ ಪಯಣ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಾ ಬಂದಿದೆ. ಕೆಲವು ತಿಂಗಳು ಕಳೆದು ನಂತರ ಮತ್ತೆ ಎಲ್ಲರೂ ಸಭೆ ಸೇರಿದರು. ರಾಜ್ಯ ಒಕ್ಕೂಟದಿಂದ ಅಖಿಲ ವಿದ್ಯಾ ಸಂದ್ರ ಗೌರಿಯವರು ಆ ಸಭೆಗೆ ಬಂದಿದ್ದರು ಮುಂದೆ ನಡಿಯಬೇಕಿದ್ದ ಕೌದಿ ಹೊಲಿಯುವ ಕಾರ್ಯಕ್ರಮ, ಪುಸ್ತಕದ ಬಿಡುಗಡೆ, ಉಡುಪಿ ಜಿಲ್ಲೆಗೆ ತುಮಕೂರಿನಿಂದ ಕೊಡುಗೆ ಈ ವಿಷಯಗಳ ಕುರಿತಂತೆ ಚರ್ಚಿಸಲಾಯಿತು.

ಸಭೆಯಲ್ಲಿ ತುಮಕೂರು ಸಂಚಾಲಕಿಯಾಗಿ ನನ್ನನ್ನು ಆಯ್ಕೆ ಮಾಡಲಾಯಿತು. ಒಕ್ಕೂಟದ ಜೊತೆ ಎಂದಿಗೂ ಬಿಡಿಸಲಾಗದ ಸಂಬಂಧ ನನಗೆ ಕೂಡಿಬಂದಿದ್ದು ನನ್ನ ಅದೃಷ್ಟವೇ ಎಂದು ಭಾವಿಸುತ್ತೇನೆ. ಒಂದು ತಿಂಗಳು ಕಳೆದ ನಂತರ ಕೌದಿ ಹೊಲಿಯುವ ಕಾರ್ಯಕ್ರಮ ನಿಗದಿಯಾಯಿತು. ಅದೊಂದು ವಿಶಿಷ್ಟ ಅನುಭವ. ಮತ್ತೆ ರಾಜ್ಯ ಒಕ್ಕೂಟದವರು ಹಾಗೂ ತುಮಕೂರಿನ ಒಕ್ಕೂಟದವರು ಜೊತೆಯಲ್ಲಿ ಸೇರುವ ಮಧುರವಾದ ಸಂದರ್ಭವಾಗಿತ್ತು. ಅದೆಷ್ಟು ಸುಂದರವಾಗಿತ್ತು ಆ ದಿನ ಎಂಬುದನ್ನು ಶೈಲಜಾ ಅಕ್ಕ ಲೇಖನವನ್ನು ಬರೆದಿದ್ದಾರೆ. ತುಮಕೂರಿಗೆ ಪ್ರತಿ ವರ್ಷವೂ ಪ್ರತಿಯೊಂದು ಕಾರ್ಯಕ್ರಮಗಳ ಸಂಭ್ರಮದೊಂದಿಗೆ ಒಕ್ಕೂಟವು ನಮ್ಮೆನ್ನೆಲ್ಲ ಮತ್ತೆ ಮತ್ತೆ ಒಂದುಗೂಡಿಸಿತ್ತು. ಒಕ್ಕೂಟದ ಮೂಲ ಉದ್ದೇಶವೇ ಎಲ್ಲರೂ ಒಂದುಗೂಡಿಸುತ್ತಾ ಕೈಕೈ ಹಿಡಿಯುತ್ತಾ ಸಾಗುವುದಲ್ಲವೇ. ಒಕ್ಕೂಟದೊಂದಿಗೆ ನಡೆಸಿದ ಮಹಿಳಾ ದಿನಾಚರಣೆ ಇದು. 11ನೇ ಜಿಲ್ಲೆಯಾಗಿ ತುಮಕೂರಿನ ಪಯಣ ಸುಂದರವಾಗಿತ್ತು. ಇಂತಹದೊಂದು ಅನುಭವ ದೊರಕಿಸಿಕೊಟ್ಟ ನನ್ನ ಪ್ರೀತಿಯ ಒಕ್ಕೂಟದ ಎಲ್ಲಾ ಸಂಗಾತಿಗಳಿಗೆ ನನ್ನ ಪ್ರೀತಿಯ ಧನ್ಯವಾದಗಳು.

# ಹೋರಾಟವೇ ನನ್ನ ಬದುಕು

ಜಯಲಕ್ಷ್ಮಿ

ನನ್ನ ಹೆಸರು ಜಯಲಕ್ಷ್ಮಿ. ಊರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು. ತಂದೆ ಹನುಮಯ್ಯ. ತಾಯಿ ವೆಂಕಟಮ್ಮ. ನನ್ನ ತಂದೆ ತಾಯಿಗೆ ನಾನು 11ನೇ ಮಗಳು. ನನ್ನ 17ನೇ ವಯಸ್ಸಿಗೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುದೂರಿನ ಹನುಮಂತಯ್ಯನೊಂದಿಗೆ ಮದುವೆಯಾಯಿತು. ದಾಂಪತ್ಯದ ಫಲವಾಗಿ ಒಂದು ಹೆಣ್ಣು ಮತ್ತು ಒಂದು ಗಂಡು ಮಗು. ಗಂಡನಿಗೆ ಆರಂಭದಿಂದಲೂ ನನ್ನ ನಡೆ ನುಡಿಗಳ ಮೇಲೆ ಅನುಮಾನ. ಕುಡಿತದ ಚಟ ಬೇರೆ ಇತ್ತು. ಜೀವನ ನಡೆಸುವುದು ತುಂಬಾ ಕಷ್ಟವಾಗಿತ್ತು. ಮಕ್ಕಳನ್ನು ಸಾಕಲು ನಾನು ರೇಷ್ಮೆ ಕೈ ಮಗ್ಗದ ಕೆಲಸ ಕಲಿತೆ. ಗಂಡನಿಂದ ಹಿಂಸೆ ತುಂಬಾ ಇತ್ತು. ಚಾಕುವಿನಿಂದ ಕೆನ್ನೆಗೆ ಇರಿತ, ನೇಣು ಹಾಕಲು ಪ್ರಯತ್ನಿಸಿದ್ದು, ಕಲ್ಲಿನಿಂದ ತಲೆ ಜಜ್ಜಲು ಪ್ರಯತ್ನಿಸಿದ್ದು ಎಲ್ಲಾ ನಡೆಯಿತು. ಹೀಗೆ 10 ವರ್ಷಗಳು ಕಳೆಯಿತು. ಕುಡಿದ ಮತ್ತಿನಲ್ಲಿ ಮನೆಗೆ ಬಂದ ಅವನು ನನ್ನನ್ನು ಮತ್ತು ಮಕ್ಕಳನ್ನು ಮನೆಯಿಂದ ಆಚೆ ತಳ್ಳಿದ. ತಿಪಟೂರು ತಾಲ್ಲೂಕು, ಅಣ್ಣಾಪುರದ ತಂಗಿಯ ಮನೆಗೆ ಹೋಗಿ ಅಲ್ಲಿಯೂ ಕೈ ಮಗ್ಗದಲ್ಲಿ ನೇಯ್ಗೆ ಕೆಲಸ ಮುಂದುವರಿಸಿದೆ. ಜೀವನ ಸುಧಾರಿಸಿತು. ಆದರೆ ಇವನ ಕಾಟ ನನಗೆ ಅಲ್ಲೂ ತಪ್ಪಲಿಲ್ಲ. ಮನೆಗೆ ಸೇರಿಸಿಕೋ ಎಂದು ದುಂಬಾಲು ಬಿದ್ದ. ನಾನು ಜಗ್ಗಲಿಲ್ಲ. ಪೆಟ್ರೋಲ್ ಸುರಿದು ಸುಡಲು ಪ್ರಯತ್ನಿಸಿದ. ಜನ ಬಿಡಿಸಿದರು. ಪೊಲೀಸರಿಗೆ ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ. ಆದರೆ ಆ ಕರಾಳ ದಿನ ಒಂದು ಬಂದೇ ಬಂತು. 26–3–2023ರ ರಾತ್ರಿ ಕೆಲಸ ಮುಗಿಸಿ ಮನೆಗೆ ಬರುವ ದಾರಿಯಲ್ಲಿ, ಸ್ನೇಹಿತರ ಮನೆಯಲ್ಲಿ ಕುಳಿತಿದ್ದಾಗ ಅಲ್ಲಿಗೆ ಬಂದು ಸುಮಾರು ಒಂದು ಲೀಟರಿನಷ್ಟು ಆಸಿಡ್ ಅನ್ನು ನನ್ನ ಮೇಲೆ ಸುರಿದೆ ಬಿಟ್ಟ. ದೇಹ ಸುಮಾರು 70% ಭಾಗ ಸುಟ್ಟು ಹೋಗಿತ್ತು. ಆ ಯಾತನೆ ಯಾರಿಗೂ ಬೇಡ. ವಿಕಾರವಾಗಿದ್ದ ಮುಖ. ಮಕ್ಕಳು ಹತ್ತಿರ ಬರಲು ಹೆದರುತ್ತಿದ್ದರು. ಆಗ ನನ್ನ ಉಳಿಸಿದ್ದು ತಿಪಟೂರು ಸರ್ಕಾರಿ ಆಸ್ಪತ್ರೆಯ ಸರ್ಜನ್ ಡಾ. ಸುರೇಶರವರು. ನಂತರ ಅನೇಕ ಕಡೆ ಚಿಕಿತ್ಸೆಗಳಾದವು. ಹಣಕ್ಕೆ ತೊಂದರೆಯಾದಾಗ ಚಂದಾ ಎತ್ತಿದ್ದು ಉಂಟು. ನಂತರ ದೇಹ ಸ್ವಲ್ಪ ಸುಧಾರಿಸಿತು.

ಆಸಿಡ್ ದಾಳಿಗೆ ಒಳಗಾದಾಗ ತುಮಕೂರಿನ ವರದಕ್ಷಿಣೆ ವಿರೋಧಿ ವೇದಿಕೆಯು ನನ್ನ ಬೆನ್ನಿಗೆ ನಿಂತು ಹೋರಾಟ ಮಾಡಿ ತಪ್ಪಿತಸ್ಥರಿಗೆ

ಶಿಕ್ಷೆಯಾಗಬೇಕೆಂದು ಒತ್ತಾಯಿಸಿ ಪ್ರತಿಭಟನೆ ಮಾಡುವ ಮೂಲಕ ರಾಜ್ಯದ ಗಮನ ಸೆಳೆದಿತ್ತು. ಅಲ್ಲದೇ ಪ್ರತೀ ವರ್ಷ ಆಚರಿಸುವ ಮಹಿಳಾ ದಿನಾಚರಣೆಯಲ್ಲಿ ನೀಡಲಾಗುವ ಪ್ರಶಸ್ತಿಯೊಂದಿಗೆ 5000/– ರೂ ನಗದನ್ನು ನೀಡಿ, ಧೈರ್ಯ ತುಂಬಿದ್ದರು.

ಗೆಳತಿ ಶಾರದಾರವರಿಂದ ಕ್ರೈಂ ಸ್ಟೋರಿ ತಿಮ್ಮೇಗೌಡರ ಪರಿಚಯವಾಯಿತು. ನನ್ನ ಕಥೆಯನ್ನು ಟಿವಿಯಲ್ಲಿ ಪ್ರಸಾರ ಮಾಡಿದರು. ಪ್ರಚಾರ ಸಿಕ್ಕಿ ನಂತರ ಅನೇಕರು ಸಹಾಯ ಮಾಡಲು ಮುಂದೆ ಬಂದರು. ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡೆ. ಒಂದು ದಿನ ಆಕಸ್ಮಿಕವಾಗಿ ಬೆಂಗಳೂರಿನಿಂದ ಬಂದ ಜನಶಕ್ತಿಯ ಮಹಿಳಾ ತಂಡ ನನ್ನನ್ನು ಭೇಟಿ ಮಾಡಿತು. ಮಲ್ಲಿಗೆ, ಗೌರಿ, ಸುಷ್ಮಾ ಮತ್ತು ಸಂಜನಾ ಅವರಾಡಿದ ಮಾತುಗಳು ಕೊಟ್ಟ ವಿಶ್ವಾಸ ಹೋರಾಟದ ಮನಸ್ಸನ್ನು ನನ್ನಲ್ಲಿ ಹುಟ್ಟು ಹಾಕಿತು. ನೋವು ಮರೆಸಿತು.

ಅಂದಿನಿಂದ ಮಹಿಳಾಪರ ಹೋರಾಟಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಂಡೆ. ಆಸಿಡ್ ಸಂತ್ರಸ್ತ ಮಹಿಳೆಯರನ್ನು ಸಂಘಟಿಸಿ ಸರ್ಕಾರದಿಂದ ಅನೇಕ ಸವಲತ್ತು ಪಡೆಯಲು ನಾನೇ ಸ್ವತಃ ಕೆಲಸ ಮಾಡಿದೆ. ನ್ಯಾಯಾಧೀಶರಾದ ಶೀಲಾ ರಾಮನಾಥನ್ ನಮಗೋಸ್ಕರ ಹೋರಾಟ ಮಾಡಿ ನೊಂದವರಿಗೆ ಪರಿಹಾರ ಘೋಷಣೆ ಮಾಡಿಸಿದರು. ಆಗ ನನಗೆ 2 ಲಕ್ಷ ರೂ ಬಂತು. ಅದರಿಂದ ತುಂಬಾ ಸಹಾಯವಾಯಿತು.

ಸಂಘಟನೆಯಿಂದ ಏನನ್ನಾದರೂ ಸಾಧಿಸಬಹುದು ಎಂಬ ಭರವಸೆ ಬಂತು. ನಾನು ಸ್ವ–ಸಹಾಯ ಸಂಘ ಕಟ್ಟಿದೆ. ಭಜನಾ ಮಂಡಳಿ ಆರಂಭಿಸಿದೆ. ಈಗ ನಾನೇ ಅನೇಕರಿಗೆ ಸ್ಫೂರ್ತಿ. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಮಾಡಿಸುತ್ತ ನೊಂದವರಿಗೆ ಸಹಾಯ ಮಾಡುತ್ತಿದ್ದೇನೆ. ಇದನ್ನು ನೋಡಿ ಮಹಿಳಾ ರಕ್ಷಣಾ ವೇದಿಕೆ, ಸೃಜನ ಮಹಿಳಾ ಸಂಘಟನೆ, ಜನಶಕ್ತಿ ನನ್ನ ಬೆಂಬಲಕ್ಕೆ ನಿಂತಿವೆ.

ನನ್ನ ಸಾಧನೆಗೆ ಅನೇಕ ಪ್ರಶಸ್ತಿಗಳು ಸಂದಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ "ಮಹಿಳಾ ಹೋರಾಟಗಾರ್ತಿ" ಪ್ರಶಸ್ತಿ ನೀಡಿದೆ. ಪುಟ್ಟಣ್ಣಯ್ಯನವರ ಕಾಯಕ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ದೊರೆತಿವೆ. ಅನೇಕ ಸಂಘ–ಸಂಸ್ಥೆಗಳು ಆಹ್ವಾನಿಸಿ ಗೌರವಿಸಿವೆ.

ನಿರಂತರ ಹೋರಾಟದಿಂದ ಆಸಿಡ್ ಸಂತ್ರಸ್ತರಿಗೆ 3000 ಮಾಸಾಶನ ಇದ್ದದ್ದು ಇಂದು 10,000 ರೂಗಳಿಗೆ ಏರಿದೆ. 2014ರ ನಂತರ ಆಸಿಡ್ ದಾಳಿಗೆ

ಒಳಗಾದವರಿಗೆ ಸರ್ಕಾರ ಒಂದು ಲಕ್ಷ ರೂ ಪರಿಹಾರ ಘೋಷಿಸಿದೆ. ಅಲ್ಲದೆ ಆರ್ಥಿಕ ಚಟುವಟಿಕೆಗೆ 5 ಲಕ್ಷ ಸಹಾಯಧನವನ್ನು ಸರ್ಕಾರ ನೀಡುತ್ತಿದೆ. ವಸತಿಗೆ ನಿವೇಶನ ಕಲ್ಪಿಸಲು ಹಣ ಬಿಡುಗಡೆ ಮಾಡಿದ್ದಾರೆ. ಈಗ ನಾವು ಆರೋಗ್ಯ ಕಾರ್ಡ್, ವಿದ್ಯಾರ್ಹತೆಗೆ ತಕ್ಕ ಉದ್ಯೋಗ, ಆಸಿಡ್ ಬ್ಯಾನ್ ಮಾಡುವುದು ಕುರಿತು ಬೇಡಿಕೆ ಇಟ್ಟಿದ್ದೇವೆ. ಸ್ಥಳೀಯವಾಗಿ ನಿರಾಶ್ರಿತ ಮಹಿಳೆಯರ ಕ್ಷೇಮಾಭಿವೃದ್ಧಿ ಚಾರಿಟೇಬಲ್ ಟ್ರಸ್ಟ್ ಆರಂಭಿಸಿ ಅವರು ಆರ್ಥಿಕವಾಗಿ ಸಾಮಾಜಿಕವಾಗಿ ಗುರುತಿಸಿಕೊಳ್ಳಲು ಸಹಕಾರಿಯಾಗಿದ್ದೇವೆ.

ಈ ಕಾರಣಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ತನ್ನ ಹತ್ತನೇ ವಾರ್ಷಿಕೋತ್ಸವದಲ್ಲಿ ನನ್ನನ್ನು ಸಾಧಕ ಮಹಿಳೆ ಎಂದು ಗುರುತಿಸಿ, ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುವಂತೆ ಮಾಡಿತು. ಇನ್ನು ಮುಂದೆ ಹೋರಾಟವೇ ನನ್ನ ಅಸ್ಮಿತೆ. 2023 ರಲ್ಲಿ ತುಮಕೂರಿನಲ್ಲಿ ಮಹಿಳಾ ದಿನಾಚರಣೆ ಆಚರಿಸುವ ಸಂದರ್ಭದಲ್ಲಿ ವರ್ಷಕಾಲ ಅರಿವಿನ ಪಯಣ ಕಾರ್ಯಕ್ರಮದ ಮೂಲಕ ಜಾಗೃತಿ ಮೂಡಿಸುತ್ತಿರುವುದು ಉತ್ತಮ ಕಾರ್ಯವಾಗಿದೆ.

## ಸ್ಫೂರ್ತಿ ಉಕ್ಕಿಸಿತು

ಹಂದಿಜೋಗಿ ರಾಮಕ್ಕ

ಒಕ್ಕೂಟದ ವತಿಯಿಂದ ಮಾರ್ಚ್‌ನಲ್ಲಿ ನಡೆದಂತಹ ಮಹಿಳಾ ದಿನಾಚರಣೆ ಎಲ್ಲರಲ್ಲೂ ಒಂದು ರೀತಿ ಸ್ಫೂರ್ತಿ ಉಕ್ಕಿಸಿದೆ. ನಾನು ಒಂದು ಅಲೆಮಾರಿ ಜಾತಿ ಸಂಘದ ತುಮಕೂರು ಜಿಲ್ಲೆಯ ಅಧ್ಯಕ್ಷೆ. ನನಗೆ ಅನ್ನಿಸಿದ್ದು ತುಮಕೂರಿನಲ್ಲಿ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಮಹಿಳಾ ದಿನಾಚರಣೆ ಅರಿವಿನ ಕಾರ್ಯಕ್ರಮ ಜನಗಳಿಗೆ ಅನುಕೂಲವಾಗುವಂತಿದೆ. ನಾವು ಮಹಿಳೆಯರಾಗಿ ಜವಾಬ್ದಾರಿಯುತವಾಗಿ ಬದುಕಲು ಜಾಗವಿದೆ ಎನ್ನುವ ಅರಿವು ಮೂಡಿಸುವ ಕೆಲಸ, ಕಷ್ಟ, ದುಃಖ ಬಂದ ಕಡೆ ನ್ಯಾಯವನ್ನು ದೊರಕಿಸುವ ಕೆಲಸ ಈ ಒಕ್ಕೂಟ ಮಾಡುತ್ತಿದೆ,

ಒಂಟಿಯಾಗಿ ಸಂಘ ಮಾಡಿದ ನಮಗೆ ಒಂದು ಕೈಯಿಂದ ಚಪ್ಪಾಳೆ ಹೊಡೆಯೋಕೆ ಸಾಧ್ಯನಾ ಅನಿಸುತ್ತಿತ್ತು. ಆದರೆ ಈಗ ಒಕ್ಕೂಟ ನಮ್ಮ ಜೊತೆಗಿದೆ.

ಅದರೊಂದಿಗೆ ಭದ್ರತೆ, ಘನತೆ, ಗೌರವವನ್ನು ತಂದುಕೊಡುತ್ತಿದೆ. ರಾಜಕೀಯದಲ್ಲಿ ನಮ್ಮನ್ನು ಗುರುತಿಸಬೇಕು. ಮೀಸಲಾತಿ ಕೊಡಬೇಕು. ಒಕ್ಕೂಟ ನಿಜವಾಗಲೂ ಹೋರಾಟ ಮಾಡ್ತಾ ಇದೆ ಎನ್ನುವುದು ಸರ್ಕಾರಕ್ಕೆ ಮುಟ್ಟಬೇಕು. ಎಲ್ಲಿ ಬಡತನ ಕಷ್ಟ ಇದೆಯೋ ಅಲ್ಲಿ ಒಕ್ಕೂಟ ಸಹಾಯ ಮಾಡಬೇಕು. ಕಂಬಳಿ ಕೊಳ್ಳಲು ಆಗದೇ ಇದ್ದರೂ ಕೌದಿ ಹೊಲೆದು ಹೊದ್ದುಕೊಂಡು ಹೋರಾಟ ಮಾಡ್ತಾ ಇದ್ದೇವೆ. ನಮಗೆ ವೃತ್ತಿ ಮೀಸಲಾತಿ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆಯಲ್ಲಿ ನಡೆದ ಅದ್ಭುತ ಕಾರ್ಯಕ್ರಮ ಒಕ್ಕೂಟದ ಮಹಿಳಾ ದಿನಾಚರಣೆ. ಎಲ್ಲರ ಜೊತೆಗಿದೆ. ಇಂತಹ ಕಾರ್ಯಕ್ರಮ ಸದಾ ನಡೆಯಲಿ. ಇಂತಹ ಕಾರ್ಯಕ್ರಮಕ್ಕೆ ನಾನು ಸದಾ ಬೆಂಬಲಿಸುತ್ತೇನೆ. ನನಗೆ ಈ ಕಾರ್ಯಕ್ರಮ ಕುರಿತು ಅಭಿಪ್ರಾಯ ತಿಳಿಸಲು ಹೆಮ್ಮೆ ಅನ್ನಿಸುತ್ತದೆ.

## ಮೂಡುತಿದೆ ಹೊಸಬೆಳಕು

ಕಮಲಾ ರಾಜೇಶ್

ತೂರಬೇಡಿರಿ ಗಾಳಿಗೆ ಹೆಣ್ತನದ ಘನತೆಯನು
ನಾರಿಯರು ಬದುಕಿನಲಿ ಎರಡು ಕಣ್ಣು
ನಾರಿಯೊಬ್ಬಳ ಕಲಿಕೆ ಶಾಲೆಯನು ತೆರೆದಂತೆ
ಗೌರವವ ತುಂಬುವುದು ಕಮಲಾತ್ಮವೆ

ಜೀವಕ್ಕೆ ಜೀವವನು ನೀಡುವರು ನಾರಿಯರು
ದೀವಿಗೆಯ ಹಚ್ಚಿ ಸರಿಸುವರು ತಮವ
ನಾವೆಯಲಿ ಕುಳಿತವರ ದಡವನ್ನು ಮುಟ್ಟಿಸಲು
ಭೂವನಿತೆ ಎನ್ನುವರು ಕಮಲಾತ್ಮವೆ

ನಾಚದಿರಿ ಹೆಣ್ಣೆಂದು ತಲೆಯೆತ್ತಿ ನಡೆಯುತ್ತಿರಿ
ಪಾಚಿ ಕಟ್ಟಿದರೆ ಜಾರುವುದು ಸಹಜ
ಚಾಚು ತಪ್ಪದೆ ಎಲ್ಲ ಒಂದಾಗಿ ಮುನ್ನಡೆಯೆ

ನಾಚುವರು ಉಳಿದವರು ಕಮಲಾತ್ಮವೆ

ಕತ್ತಲೆಯ ಏಕಾಂತದಲಿ ಕಂಬನಿಯು ಸಾಕು
ಎತ್ತರದಿ ನಿಂತು ಕೆಳಗಡೆಗೆ ನೋಡು
ಬತ್ತದಿಹ ಕೊಳದಂತೆ ದಾಹವನು ತಣಿಸಿದರೆ
ಗತ್ತದುವೆ ಹೆಣ್ಕುಲಕೆ ಕಮಲಾತ್ಮವೆ

ನಾವೆಲ್ಲ ಹೆಣ್ಣಾಗಿ ನೊಂದವರು ಕೀಳಕ್ಕ
ಬೇವುಂಡು ಬದುಕಿನಲಿ ಕುಳಿತಿದ್ದೆವು
ಜೀವನದಿ ಹೊಸಬೆಳಕು ಮೂಡಿಸಿವೆ ಸಂಸ್ಥೆಗಳು
ನಾವೆಲ್ಲ ನಲಿಯೋಣ ಕಮಲಾತ್ಮವೆ

ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ
ಮುಟ್ಟಿನಿಂದಾಯ್ತು ಜೀವಿಗಳ ಹುಟ್ಟು
ಗಟ್ಟಿತನದಲಿ ಹೆಣ್ಣು ನವಮಾಸ ಹೊತ್ತವಳು
ಸೃಷ್ಟಿ ಮೂಲವು ಅವಳು ಕಮಲಾತ್ಮವೆ

ಮುಟ್ಟು ಕಾಣದ ನಾರಿ ತಾಯಿಯಾಗುವುದಿಲ್ಲ
ಸೃಷ್ಟಿ ನಿಯಮಗಳು ಬಲುಗುಟ್ಟು ಅಣ್ಣ
ಕಷ್ಟಗಳ ಸರಮಾಲೆ ಧಾರಣೆಯ ಮಾಡಿದರು
ಸೃಷ್ಟಿಬೀಜಕೆ ಮೂಲ ಕಮಲಾತ್ಮವೆ

ಮುಟ್ಟಾದ ಹೆಣ್ಣನ್ನು ಹೊರಗೆ ಅಟ್ಟುವುದೇಕೆ
ಮುಟ್ಟಿದರೆ ಪಾಪ ಎಲ್ಲಿಂದ ಬಂತು
ಹೊಟ್ಟೆಯಲ್ಲಿ ಬೆಳೆಯಲಿಕೆ ಸಹಕಾರ ನೀಡುವುದು
ಮೆಟ್ಟು ಮಡಿವಂತರನು ಕಮಲಾತ್ಮವೆ

## ಹೊಸ ಆಲೋಚನೆಗಳಿಗೆ ತೆರೆದು ಕೊಂಡೆ

ಮುಮ್ತಾಜ್, ಸಿದ್ದಗಂಗಾ ಮಠ

ಕಳೆದ ವರ್ಷ ನಡೆದ ಅರಿವಿನ ಪಯಣವು ನನಗೆ ಹೊಸ ರೀತಿಯ ಅನುಭವಗಳನ್ನು ಮೂಡಿಸಿದೆ. ಜಿಲ್ಲೆಯಿಂದ ಜಿಲ್ಲೆಗೆ ಹೊಸ ಆಶಯಗಳೊಂದಿಗೆ ಅರಿವಿನ ಪಯಣವು ಸಾಗುತ್ತಾ ಸಾಗುತ್ತಾ ಸಾಗುತ್ತಾ ತುಮಕೂರಿಗೆ ಬಂದಾಗ ನಾವೆಲ್ಲ ಹೊಸ ಹುರುಪಿನೊಂದಿಗೆ ಬರವಮಾಡಿಕೊಂಡೆವು. ಅರಿವಿನ ಪಯಣವು ಮಹಿಳಾ ಸಮಾನತೆ, ಹಳೆಯ ಪಿತೃಪ್ರಾಧಾನ್ಯ ಧೋರಣೆಗಳಿಂದ ಮುಕ್ತಗೊಳಿಸಬೇಕೆಂಬ ದುರ್ಗಾ ನಾಟಕ, ಮುಟ್ಟು ಮುಟ್ಟು ಎಂದು ಹೇಳುವ ಮುಟ್ಟಿನ ಕುರಿತ ಹಾಡು, ಬ್ಲೂ ರಿಬ್ಬನ್, ಕಪ್ಪು ಬಲೂನ್... ಇವುಗಳೆಲ್ಲ ಜಿಲ್ಲೆಯ ಮಹಿಳೆಯರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಹೊಸ ಆಲೋಚನೆಗೆ ಹಚ್ಚಲು ನೆರವಾದವು.

ನಮ್ಮ ಎಲುಬಿನ ಹಂದರದೊಳಗೆ ರಾಮ ಅಲ್ಲ ಬುದ್ಧ ಇದ್ದಾನೆ ಎಂಬ ಹಾಡಂತೂ ನಾವೆಲ್ಲ ಒಂದೇ ಎಂಬ ಭಾವೈಕ್ಯತೆಯ ಮೂಡಿಸಿ ಸಹೋದರತ್ವ ಸಾರಿದ ನನ್ನ ಮೆಚ್ಚಿನ ಅರಿವಿನ ಪಯಣದ ಗೆಳತಿಯರಿಗೆ ಹಾಗೂ ಇಲ್ಲಿಗೆ ಕರೆತಂದ ನನ್ನೆಲ್ಲಾ ಒಕ್ಕೂಟದ ಸಂಗಾತಿಗಳಿಗೆ ಪ್ರೀತಿಯ ವಂದನೆಗಳು ಹಾಗೂ ಶಹಭಾಷ್ ಚಪ್ಪಾಳೆಗಳು.

## ಒಗ್ಗಟ್ಟಿನಿಂದ ಸಾಗೋಣ

ಚಂದ್ರಕಲಾ, ತುರುವೇಕೆರೆ

ಅರಿವಿನ ಪಯಣದಲ್ಲಿ ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನ ಇರುತ್ತೆ. ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವಂತ ಒಂದು ಕಾರ್ಯಕ್ರಮ ಅದು. ಅಂತಹ ಕಾರ್ಯಕ್ರಮಗಳು ಎಲ್ಲಾ ಗ್ರಾಮಗಳಲ್ಲೂ ಆಗಬೇಕು. ಎಲ್ಲ ಮಕ್ಕಳಲ್ಲೂ ಅರಿವು ಮೂಡಿಸಬೇಕು ಅನ್ನೋದು ನನ್ನ ಒಂದು ಆಶಯ. ಆ ನಿಟ್ಟಿನಲ್ಲಿ ನಮ್ಮ ತಾಲೂಕಿನಲ್ಲಿ ಮುಂದುವರೆಯುತ್ತದೆ ಎಂಬ ಆತ್ಮವಿಶ್ವಾಸ ಇದೆ.

ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ನನ್ನೆಲ್ಲಾ ಗೆಳತಿಯರಿಗೆ

ವಂದಿಸುತ್ತಾ ಈ ಮೂಲಕ ನಾ ಹೇಳ ಬಯಸುವುದೇನೆಂದರೆ, ನನಗೆ ಈ ಸಂಘಟನೆ ಪರಿಚಯವಾಗಿ ಒಂದುವರೆ ವರ್ಷವಾಯ್ತು. ನನಗೆ ರಾಣಿ ಚಂದ್ರಶೇಖರ್ ಅವರಿಂದ ಇದರ ಪರಿಚಯವಾಯಿತು. ಪರಿಚಯವಾದ ಮೇಲೆ ಮಿಕ್ಕೆಲ್ಲ ಗೆಳತಿಯರ ಒಡನಾಟ ತುಂಬಾ ಖುಷಿ ಕೊಟ್ಟಿತು. ಅವರಲ್ಲಿರುವ ಆತ್ಮಸ್ಥೈರ್ಯ, ಅವರು ಮಹಿಳೆಯರಿಗೆ ಆತ್ಮವಿಶ್ವಾಸ ಒಂದು ಧೈರ್ಯ ತುಂಬುವ ಜವಬ್ದಾರಿಯುತ ಕೆಲಸ, ಎಲ್ಲಾ ಗೆಳತಿಯನ್ನು ಒಗ್ಗೂಡಿಸುವ ರೀತಿ, ಅವರನ್ನು ಸಮಾಧಾನದಿಂದ, ಪ್ರೀತಿಯಿಂದ, ಆತ್ಮೀಯತೆಯಿಂದ ಮಾತನಾಡಿಸುವುದು ಈ ಸಂಘದಲ್ಲಿ ನನಗೆ ಅರಿವಿಗೆ ಬಂತು.

ಇಂದಿನ ವರ್ಷ ಮಹಿಳಾ ದಿನಾಚರಣೆಯ ಸಮಯದಲ್ಲಿ ನನಗೆ ಕೊಟ್ಟಂತಹ ಜವಾಬ್ದಾರಿ "ಕಪ್ಪು ಉಡುಪಿನಲ್ಲಿ ಮಹಿಳೆಯರು" ಕಾರ್ಯಕ್ರಮ. ನನಗೆ ತುರುವೇಕೆರೆಯಲ್ಲಿ ಕಾರ್ಯಕ್ರಮ ಮಾಡಲು ಜವಾಬ್ದಾರಿ ಕೊಟ್ಟು ಅದಕ್ಕೆ ಸಹಕಾರ ಎಂಬುವಂತೆ ರಮಾ ಮೇಡಂ, ಪ್ರವೀಣ್ ಕುಮಾರಿ, ಪ್ರವೇಣಿ ಅವರು, ವಾಣಿ ಮೇಡಂ ತುರುವೇಕೆರೆಯಲ್ಲಿ ಇದ್ದಂತಹ ಮಹಿಳೆಯರು ಎಲ್ಲರೂ ನನಗೆ ಬೆಂಬಲ ಕೊಟ್ಟು "ಕಪ್ಪು ಉಡುಪಿನಲ್ಲಿ ಮಹಿಳೆಯರು" ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿಬರಲು ಕಾರಣರಾದರು.

ಇಷ್ಟೆಲ್ಲ ಕಾರ್ಯಕ್ರಮಗಳನ್ನು ಮಾಡುವಾಗ ಮಹಿಳೆಯರಲ್ಲಿ ಇದ್ದಂತಹ ಉತ್ಸಾಹ, ಅಲ್ಲಿ ಭಾಗವಹಿಸಿದ ಮಹಿಳೆಯರಿಗೆ ಇದ್ದಂತಹ ಖುಷಿ, ಜವಾಬ್ದಾರಿ ಕಂಡು ನಾನು ತುಂಬಾ ಸಂತೋಷಪಟ್ಟೆ. ಮಹಿಳಾ ದಿನಾಚರಣೆ ಸಮಯದಲ್ಲಿ ಎರಡು ದಿನವೂ ಆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಇನ್ನು ಹೆಚ್ಚಿನ ಮಹಿಳಾ ಸಂಗಾತಿಗಳೊಂದಿಗೆ ಮತ್ತು ಕೇರಳದ ಶೈಲಜಾ ಟೀಚರ್ ಜೊತೆ ಇದ್ದದ್ದು ತುಂಬಾ ಖುಷಿ ಕೊಟ್ಟಿತ್ತು. ಇನ್ನು ಹೆಚ್ಚು ಇದರಲ್ಲಿ ತೊಡಗಿಸಿಕೊಳ್ಳು ಆಸೆ ಇದೆ. ಮಹಿಳೆಯರು ಅಬಲೆಯರೆಲ್ಲ ಸಬಲೆಯರು, ಮಹಿಳೆ ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಲ್ಲಳು ಎನ್ನುವುದನ್ನು ಎತ್ತಿ ತೋರಿಸುವ ನಿಟ್ಟಿನಲ್ಲಿ ಈ ಒಂದು ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಮುನ್ನಡೆಯುತ್ತಿದೆ. ನಾವೆಲ್ಲ ಒಗ್ಗಟ್ಟಿನಿಂದ ಕೈಜೋಡಿಸೋಣ.

# ಯಶಸ್ಸಿನ ಹಾದಿಯಲ್ಲಿ

ಗಂಗಲಕ್ಷ್ಮಿ ಬಿ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ತುಮಕೂರಿನಲ್ಲಿ 2023ರ ಮಹಿಳಾ ದಿನಾಚರಣೆ ಆಚರಿಸುವ ಕುರಿತು ಮೊದಲ ಸಭೆಗೆ ನಾನು ಹಾಜರಾಗಿದ್ದೆ. ಆ ಸಭೆಯಲ್ಲಿ ಮಲ್ಲಿಕಾ ಮೇಡಂ, ಅರುಂಧತಿ ಮೇಡಂ ಮತ್ತು ರಾಜ್ಯಮಟ್ಟದಿಂದ ಕೆಲವರು ಈ ಒಕ್ಕೂಟದ ಬಗ್ಗೆ ಮಾತನಾಡಿದಾಗ ಅಂದು ನನಗೆ ಅಷ್ಟೇನೂ ಅರ್ಥವಾಗಲಿಲ್ಲ. ಆನಂತರ ಪ್ರತಿ ಸಭೆಯಲ್ಲಿ ಭಾಗವಹಿಸುತ್ತಾ ಬಂದಾಗ ಒಕ್ಕೂಟದ ಉದ್ದೇಶಗಳು ಅರ್ಥವಾಗತೊಡಗಿದವು. ದೇವರಾಯನ ದುರ್ಗದಲ್ಲಿ ಶಿಬಿರ ಹಮ್ಮಿಕೊಂಡಾಗ ಅದರಲ್ಲಿ ನಾನು ಭಾಗವಹಿಸಿ ಅದರ ಧ್ಯೇಯೋದ್ದೇಶಗಳನ್ನು, “ಅರಿವಿನ ಪಯಣ”ದ ಆಶಯಗಳನ್ನು ಅರಿತುಕೊಂಡೆ. ಬಹಳಷ್ಟು ವಿಷಯಗಳನ್ನು ಅಲ್ಲಿಗೆ ಬಂದಿದ್ದ ರಾಜ್ಯಮಟ್ಟದ ಗೆಳತಿಯರು ವಿವರಿಸುತ್ತಾ ಅದಕ್ಕೆ ಸಂಬಂಧಪಟ್ಟ ಹಾಡುಗಳನ್ನು ಹಾಡುತ್ತ ತಿಳಿಸಿದರು.

ಆನಂತರ ಆಗಸ್ಟ್ 2023ರಲ್ಲಿ ಬೆಳಗುಂಬ ರೆಡ್ ಕ್ರಾಸ್ ಸಂಸ್ಥೆಯಲ್ಲಿ ಅಧ್ಯಯನ ಶಿಬಿರವನ್ನು ಆಯೋಜನೆ ಮಾಡಿದಾಗ ಅಲ್ಲಿಯೂ ಭಾಗವಹಿಸಿ ಚರ್ಚೆ, ಸಂವಾದಗಳಲ್ಲಿ, ಹರಟೆ, ಆಟೋಟಗಳಲ್ಲಿ ಪಾಲ್ಗೊಂಡು ಸಂಪೂರ್ಣವಾಗಿ ಒಕ್ಕೂಟದ ಬಗ್ಗೆ ಅರ್ಥವಾಯಿತು.

ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಆಗುತ್ತಿರುವ ದೌರ್ಜನ್ಯ ತಾರತಮ್ಯ ಮೂಢನಂಬಿಕೆಗಳ ವಿರುದ್ಧ ಹೋರಾಡುವ ಇವರುಗಳ ಜೊತೆಗೆ ನಾನು ಸೇರಿಕೊಂಡು ಸಮಾಜದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ನಮ್ಮ ಕೈಲಾದ ಮಟ್ಟಿಗೆ ಸಹಕರಿಸಬೇಕು ಎನ್ನುವ ಮನಸ್ಸಾಯಿತು. ಆ ನಿಟ್ಟಿನಲ್ಲಿ ಒಕ್ಕೂಟದ ಮೂಲಕ “ಅರಿವಿನ ಪಯಣ” ಕಾರ್ಯಕ್ರಮವನ್ನು ಹಮ್ಮಿಕೊಂಡಾಗ ನಾನು ಕೂಡ ಜೊತೆಗೂಡಿ ಶಾಲಾ–ಕಾಲೇಜುಗಳಿಗೆ, ಮೂಢನಂಬಿಕೆ ಆಚರಿಸುವ ಹಳ್ಳಿಗಳಿಗೆ ಭೇಟಿ ನೀಡಿ ಅದರ ಬಗ್ಗೆ ಅರಿವು ಮೂಡಿಸುವ ಕೆಲಸಗಳಲ್ಲಿ ತೊಡಗಿಕೊಂಡೆ, ಅದರ ಬಗ್ಗೆ ಭಾಷಣ, ಕಿರು ನಾಟಕಗಳನ್ನು ಬೇರೆಯವರು ಮಾಡಿದರೆ, ನಾನು ಮೂಢನಂಬಿಕೆ, ತಾರತಮ್ಯಗಳ ವಿರುದ್ಧದ ಹಾಡುಗಳನ್ನು ಹಾಡುತ್ತಾ ಬಂದಿದ್ದೇನೆ. ಈ ಮೂಲಕವಾದರೂ ಸಮಾಜವನ್ನು ತಿದ್ದುವ, ಮೂಢನಂಬಿಕೆಗಳಿಂದ ಜನತೆ ಹೊರಬರಲು ಖಂಡಿತವಾಗಿ ಸಹಾಯವಾಗುತ್ತದೆ. ಹನಿ ಹನಿ ಗೂಡಿದರೆ

ಹಳ್ಳ ಎಂಬಂತೆ ಪ್ರತಿಯೊಬ್ಬರು "ಅರಿವಿನ ಪಯಣ" ಕಾರ್ಯಕ್ರಮಗಳಲ್ಲಿ ತಮ್ಮ ಊರು ಶಾಲಾ–ಕಾಲೇಜುಗಳಲ್ಲಿ ನಡೆಸುವುದರ ಮೂಲಕ ಸಮಾಜದಲ್ಲಿ ಬದಲಾವಣೆ ತರಬಹುದು ಎಂಬ ನಂಬಿಕೆ ನನ್ನದು. ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಸೌಭಾಗ್ಯ ತಂದುಕೊಟ್ಟ ತುಮಕೂರಿನ ಕ.ರಾ.ಮ.ದೌ.ವಿ.ಒ.ದ ಎಲ್ಲಾ ಗೆಳತಿಯರಿಗೂ ತುಂಬು ಹೃದಯದ ಧನ್ಯವಾದಗಳು ಅರ್ಪಿಸುತ್ತೇನೆ.

ಇಂತಹ ಕಾರ್ಯಕ್ರಮಗಳು ತುಮಕೂರಿನಲ್ಲಿ ನಿರಂತರವಾಗಿ ನಡೆಯಲಿ ಎಂದು ಆಶಿಸುತ್ತೇನೆ. ಹಾಗೆಯೇ ತುಮಕೂರಿನಲ್ಲಿ ನಡೆದ 2023ರ ಮಹಿಳಾ ದಿನಾಚರಣೆ ಯಶಸ್ವಿಯಾದಂತೆ 2024ರಲ್ಲಿಯೂ ಉಡುಪಿ ಜಿಲ್ಲೆಯಲ್ಲಿ ಯಶಸ್ವಿಯಾಗಲಿ.

17–12–2023 ತುಮಕೂರಿನ ಜನ ಚಳುವಳಿ ಕೇಂದ್ರದಲ್ಲಿ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಕೌದಿ ಹೊಲಿಯುವ ಕಾರ್ಯಕ್ರಮ ತುಂಬಾ ಚೆನ್ನಾಗಿ ಅನ್ನಿಸಿತು. ಕಾರಣವೆಂದರೆ ಎಲ್ಲಾ ಗೆಳತಿಯರು ಸೇರಿ ಮಧ್ಯಾನದ ಊಟವನ್ನು ತಯಾರಿಸುತ್ತಾ ಚಿತ್ತ ಚಿತ್ತಾರದ ಕೌದಿ ಹೊಲಿಯುತ್ತಾ, ಸೇರಿದ್ದ ಎಲ್ಲಾ ಗೆಳತಿಯರು ಭಾನುವಾರದ ಸಂಸಾರ ತಾಪತ್ರಯಗಳನ್ನು ಬದಿಗಿಟ್ಟು ಹಾಡು, ಕಥೆ, ಅನುಭವ ಮಾತುಗಳನ್ನು ಆಡುತ್ತಾ ಉಡುಪಿ ಜಿಲ್ಲೆಗೆ ಕಳಿಸಲು ತುಮಕೂರು ಜಿಲ್ಲೆಯಲ್ಲಿ ಅತ್ಯುತ್ತಮವಾದ ಕೌದಿ ಹೊಲೆಯುವಲ್ಲಿ ಯಶಸ್ವಿಯಾದೆವು.

## ಅಪರೂಪದ ಅವಕಾಶ

ರೇಣುಕಮ್ಮ

ನಾನು ಕರವೇ ಸಂಘದಲ್ಲಿ ಹಲವಾರು ವರ್ಷಗಳಿಂದ ಸಿರಾದಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ. ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ನಡೆಸಿದ್ದೇನೆ. ಕನ್ನಡ ಸಾಹಿತ್ಯ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಅನೇಕರನ್ನು ಗುರುತಿಸಿ ಗೌರವಿಸುತ್ತಾ ಬಂದಿದ್ದೇನೆ. ಕನ್ನಡ ನಾಡು ನುಡಿಗೆ ದಕ್ಕೆ ಬಂದಾಗಲೆಲ್ಲಾ, ಅನ್ಯಾಯ ಕಂಡಾಗಲೆಲ್ಲ ರಾಜ್ಯ ಮತ್ತು ಜಿಲ್ಲಾಧ್ಯಕ್ಷರ ಆದೇಶದಂತೆ ಹೋರಾಟ ಮಾಡಿದ್ದೇನೆ. ಆದರೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಇಂತಹ ಕಾರ್ಯ ಕ್ಷೇತ್ರದ ಅನುಭವ ದೊರಕಿದ್ದು ವಿಶೇಷ. ದೇವರಾಯನದುರ್ಗದಲ್ಲಿ ಎರಡು ದಿನಗಳ ಕಾಲ ನಡೆದ ಅರಿವಿನ ಪಯಣದ

ಕಾರ್ಯಗಾರದಲ್ಲಿ ಚಿಕ್ಕ ಚಿಕ್ಕ ನಾಟಕ, ಕಥೆ, ಹಾಡು ಮುಂತಾದವುಗಳನ್ನು ಆಧರಿಸಿ ಜನರಲ್ಲಿ ಅರಿವು ಮೂಡಿಸುವ ಇಂತಹ ಕಾರ್ಯದಲ್ಲಿ ನನ್ನನ್ನು ತೊಡಗಿಸಿಕೊಳ್ಳುವಂತೆ ಮಾಡಿದ ತುಮಕೂರು ಜಿಲ್ಲಾ ಒಕ್ಕೂಟದ ಗೆಳತಿಯರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

ಅಲ್ಲದೇ ಮೂರು ದಿನಗಳ ಕಾಲ ರೆಡ್ ಕ್ರಾಸ್ ಶಾಲೆ, ಬೆಳಗುಂಬದಲ್ಲಿ ನಡೆದ ಅಧ್ಯಯನ ಶಿಬಿರ ನನಗೆ ತುಂಬಾ ಅನುಭವ ನೀಡಿತು. ಅವರ ಜೊತೆಗೂಡಿ ಅರಿವಿನ ಪಯಣ ನಡೆಸಿ 7–3–2023 ರಂದು ರಂದು ಸಂಜೆ ನಡೆದ "ಕಪ್ಪು ಉಡುಗೆಯಲ್ಲಿ ಮಹಿಳೆಯರು" ಕಾರ್ಯಕ್ರಮ ಸಿರಾ ನಗರದಲ್ಲಿಯೇ ಸಾರ್ವಜನಿಕದಲ್ಲಿ ಬೆರಗು ಮೂಡಿಸಿತು.

ಇಂತಹ ಅನುಭವ ಹೊಂದಲು ಅವಕಾಶ ನೀಡಿದ ಒಕ್ಕೂಟಕ್ಕೆ, ಒಕ್ಕೂಟದ ಎಲ್ಲಾ ಸಂಗಾತಿಗಳಿಗೆ ಹೃದಯ ತುಂಬಿದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

## ಹೋರಾಟದ ಶಕ್ತಿ

### ಪಾರ್ವತಮ್ಮ ರಾಜಕುಮಾರ್

ಒಕ್ಕೂಟದ ಕಾರ್ಯಕ್ರಮಗಳಲ್ಲಿ ಭಾಗಿಯಾದ ನಂತರ ಮಾನಸಿಕವಾಗಿ ನನ್ನ ಮನಸ್ಸು ಮತ್ತಷ್ಟು ವಿಸ್ತಾರಗೊಂಡಿದೆ. ವೈಯಕ್ತಿಕವಾದ ಯಾವುದೇ ಹೋರಾಟಗಳು ಒಂಟಿಯಾಗಿ ಯಶಸ್ವಿಯಾಗಲಾರವು. ಸಾಮಾಜಿಕ ಸಾಮೂಹಿಕ ಹೋರಾಟಗಳಿಂದ ಬದಲಾವಣೆ ತರುವುದು ಹಾಗೂ ಅರಿವು ಮೂಡಿಸುವುದು ಸಾಧ್ಯ ಎಂಬುದಕ್ಕೆ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಕಾರ್ಯಕ್ರಮಗಳು ಉದಾಹರಣೆಗಳಾಗಿವೆ. ಕಳೆದ 20 ವರ್ಷಗಳಿಂದ ನಾವುಗಳು ವರದಕ್ಷಿಣೆ ವಿರೋಧಿ ವೇದಿಕೆ ಮಹಿಳಾ ಸಾಂತ್ವನ ಕೇಂದ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಮಹಿಳೆಯರ ಮೇಲಿನ ದೌರ್ಜನ್ಯಗಳು ಯಾವ ರೀತಿಯಲ್ಲಿ ಇರುತ್ತದೆ ಎಂಬುದನ್ನು ತಿಳಿದಿದ್ದೇವೆ.

ಅರಿವಿನ ಪಯಣದಲ್ಲಿ ನಮ್ಮ ಅನುಭವಗಳನ್ನು ಹಂಚಿಕೊಳ್ಳಲು ಕಾರ್ಯಕ್ರಮಗಳಲ್ಲಿ ಅವುಗಳನ್ನು ವ್ಯಕ್ತಪಡಿಸಲು ಉತ್ತಮ ಅವಕಾಶ ದೊರಕಿತ್ತು. ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಜನಸಾಮಾನ್ಯರಿಂದ ಮತ್ತಷ್ಟು ವಿಷಯಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಅವರಿಗೆ ಹತ್ತಿರವಾಗಲು ಹಾಗೂ ಅವರ ಕೆಲವು

ಸಮಸ್ಯೆಗಳಿಗೆ ಸಾಂತ್ವನದ ಮೂಲಕ ಪರಿಹಾರ ಸೂಚಿಸಲು ಸಹಕಾರಿಯಾಗಿದೆ. ವಿವಿಧ ಕಡೆಗಳಲ್ಲಿ ನಡೆದ ಅಧ್ಯಯನ ಶಿಬಿರಗಳು, ಕಾರ್ಯಕ್ರಮಗಳು ಹೆಚ್ಚು ಪ್ರಭಾವ ಬೀರಿದವುಗಳಾಗಿವೆ. ನಾವು ಕೆಲವು ಗೊಲ್ಲರಹಟ್ಟಿಗೂ ಹೋಗಿದ್ದೆವು ನಮ್ಮ ಹಾಡುಗಳ ಮೂಲಕ ಹಟ್ಟಿಯ ಜನರಲ್ಲಿ ಪರಿವರ್ತನೆ ತರಲು ಪ್ರಯತ್ನಿಸಲಾಯಿತು. ನಮ್ಮ ಈ ಪ್ರಯತ್ನವಂತೂ ಸಾರ್ಥಕ ಎನಿಸಿದೆ. ಅರಿವಿನ ಪಯಣದಲ್ಲಿ ಶ್ರಮ ಹಾಕಿರುವ ಹೋರಾಟದ ಹಾದಿಯಲ್ಲಿ ಸಾಗಿರುವ ಎಲ್ಲರಿಗೂ ಧನ್ಯವಾದಗಳು.

## ಅರಿವಿನ ವಿಸ್ತಾರ

### ಹೇಮಾ ಮಲ್ಲಿಕಾರ್ಜುನ್

ಗೃಹಿಣಿಯಾಗಿದ್ದುಕೊಂಡು, ವಿಜ್ಞಾನ–ತಂತ್ರಜ್ಞಾನದ ವಿದ್ಯಾರ್ಥಿಯಾಗಿದ್ದ ನನಗೆ ಸಾಮಾಜಿಕ ಚಿಂತನೆ ಮತ್ತು ಸಾಹಿತ್ಯ–ಸಾಂಸ್ಕೃತಿಕವಾಗಿ ಬೆಳೆಯಲು ಅರಿವಿನ ಪಯಣದ ಕಾರ್ಯಕ್ರಮ ಕಾರಣವಾಯಿತು. ಪಾರ್ವತಮ್ಮ ರಾಜಕುಮಾರ್ ಅವರು ಒಕ್ಕೂಟಕ್ಕೆ ಪರಿಚಯಿಸಿದರು. ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ನೀಡುವಾಗ, ಸಂವಾದ, ಚರ್ಚೆಗಳಲ್ಲಿ ಭಾಗವಹಿಸುತ್ತಾ, ಭಾಗವಹಿಸುತ್ತಾ ನನ್ನ ವ್ಯಕ್ತಿತ್ವವೂ ಬೆಳೆಯತೊಡಗಿತು. ಇನ್ನಷ್ಟು ತೊಡಗಿಕೊಂಡು ಇನ್ನಷ್ಟು ಅರಿವನ್ನು ವಿಸ್ತಾರಗೊಳಿಸಕೊಳ್ಳಬೇಕಾಗಿದೆ.

ಇನ್ನು ಮುಂದೆಯೂ ಅರಿವಿನ ಪಯಣದ ಮೂಲಕ ಎಲ್ಲಾ ಶಾಲಾ–ಕಾಲೇಜುಗಳ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅರಿವು ಮೂಡಿಸೋಣ ಎಂಬ ಆಶಯ ನನ್ನದು.

## ಗಾರ್ಮೆಂಟ್ಸ್ ನೌಕರರಿಗೆ ಆಶಾಕಿರಣ

### ಯಶೋದಾ, 'ಮುನ್ನಡೆ'

ಮೊದಲಿಗೆ ಮುನ್ನಡೆ ಸಾಮಾಜಿಕ ಸಂಸ್ಥೆ ಗಾರ್ಮೆಂಟ್ ಕಾರ್ಮಿಕರೊಂದಿಗೆ ಕೆಲಸ ಮಾಡುವ ಸಂಸ್ಥೆ. ಬೆಂಗಳೂರಿನಲ್ಲಿ ಇದ್ದರೂ ನಾವು ತುಮಕೂರಿನಲ್ಲಿ ಇರುವ ಒಕ್ಕೂಟದ ಗೆಳತಿಯರೊಂದಿಗೆ ಫೋನಿನಲ್ಲಿ ಮಾತನಾಡಿ ಭೇಟಿ

ಮಾಡಲು ಕೇಳಿದಾಗ, ಮೊದಲಿಗೆ ರಮಾ ಮೇಡಂರವರು ನಮ್ಮನ್ನು ಭೇಟಿ ಮಾಡಿ ಚರ್ಚೆ ಮಾಡಿದರು. ಅವರೊಂದಿಗೆ ನಾವು ಗಾರ್ಮೆಂಟ್ ಮಹಿಳಾ ಕಾರ್ಮಿಕರಿಗೆ ಅರಿವಿನ ಪಯಣ ಕಾರ್ಯಕ್ರಮದ ಮೂಲಕ ಒಗ್ಗೂಡಿಸಲು ಕೇಳಿಕೊಂಡಾಗ ತುಂಬಾ ಸಂತೋಷದಿಂದ ಒಪ್ಪಿಕೊಂಡು ಜಾಗದ ವ್ಯವಸ್ಥೆ ಮಾಡಿದರು. ಎಲ್ಲಾ ಗೆಳತಿಯರನ್ನು ಒಟ್ಟಿಗೆ ಸೇರಿಸಿ ಸುಮಾರು 250 ಜನ ಮಹಿಳಾ ಕಾರ್ಮಿಕರಿಗೆ ನೀಲಿ ರಿಬ್ಬನ್, ದುರ್ಗಾ ಮತ್ತಿತರ ಕಿರುನಾಟಕ ಹಾಗೂ ಜಾಗೃತಿ ಗೀತೆಗಳ ಮೂಲಕ ಅರಿವು ಮೂಡಿಸಲು ಸಹಾಯವಾಯಿತು. ಅವರೊಂದಿಗೆ ನಡೆದ ಸುಧೀರ್ಘ ಸಂವಾದದಲ್ಲಿ ಕಾರ್ಮಿಕ ಮಹಿಳೆಯರ ಭಾವತೀವ್ರತೆಗಳ ಅನಾವರಣವಾದದ್ದು ಅವರಲ್ಲಿ ಆತ್ಮವಿಶ್ವಾಸ ಮೂಡಲು ಕಾರಣವಾಗಿದೆ.

ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಕಾರ್ಯಕ್ರಮ ಅದ್ಭುತವಾಗಿತ್ತು. ನಮ್ಮ ಕಾರ್ಯಕರ್ತರು ಹಾಗೂ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು. ಇದರಿಂದ ನಮ್ಮ ಕಾರ್ಮಿಕರಿಗೆ ಹೆಚ್ಚಿನ ಬೆಂಬಲ ಸಿಗುವ ಭರವಸೆ ಬಂತು.

## ಧೈರ್ಯ ತುಂಬುವ ಕೆಲಸ

ಚಂದ್ರಕಲಾ ಸಿರಾ

ಅರಿವಿನ ಪಯಣ ಒಂದು ಅನನ್ಯ ಅನುಭವ. ಸಮಾನ ಮನಸ್ಕ ಗೆಳತಿಯರೊಂದಿಗೆ ಶಾಲಾ ಕಾಲೇಜುಗಳಿಗೆ ಹೋಗಿ ಹರೆಯದ ಹೆಣ್ಣುಮಕ್ಕಳಿಗೆ, ಅವರ ಸುತ್ತಲಿನ ಪರಿಸರದಲ್ಲಿ ಅವರಿಗೆ ಅರಿವಿಲ್ಲದೆ ಅವರಿಗಾಗುವ ಮೋಸ, ವಂಚನೆ, ಅದರಿಂದಾಗುವ ತೊಳಲಾಟಗಳನ್ನು ಹಾಡುಗಳು, ಪಾತ್ರಾಭಿನಯ, ಕಿರು ನಾಟಕಗಳೊಂದಿಗೆ ಅರಿವು ಮೂಡಿಸುವ ಪ್ರಯತ್ನ ನಮ್ಮದಾಗಿತ್ತು. ಇದರಿಂದ ನಾವು ನಮ್ಮಂತಹ ಹೆಣ್ಣುಮಕ್ಕಳಿಗೆ ನಮ್ಮ ಮನೆಯ ಮಕ್ಕಳಿಗೆ ಆತ್ಮವಿಶ್ವಾಸ, ನಂಬಿಕೆ ಧೈರ್ಯ–ಸ್ಥೈರ್ಯ ತುಂಬಿದೆವು ಎಂಬುದು ನನ್ನ ಅಭಿಪ್ರಾಯ.

# ಯಾರ್ಯಾರ ನೆನೆಯಲಿ

ಚಂದ್ರಶೇಖರ್

ಮಾರ್ಚ7, ಮತು 8 2023 ರಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ತುಮಕೂರಿನಲ್ಲಿ ನಡೆದ ವಿಶ್ವಮಹಿಳಾ ದಿನಾಚರಣೆಯು ಮಹಿಳಾ ಹಬ್ಬದಂತೆ ಅತ್ಯಂತ ವೈಭವಯುತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಿದ ಸಂಗತಿ ನಿಮಗೆಲ್ಲಾ ತಿಳದಿರುವ ವಿಷಯವೇ ಸರಿ. ಈ ಕಾರ್ಯಕ್ರಮದ ಯಶಸ್ಸಿಗೆ ನೂರಾರು ಮನಸ್ಸುಗಳು ಕಾರಣಕರ್ತರಾಗಿದ್ದು ಅವರನ್ನು ನೆನಪು ಮಾಡಿಕೊಳ್ಳುವುದಲ್ಲದೇ ಅವರೆಲ್ಲರಿಗೂ ಕೃತಜ್ಞತೆಗಳನ್ನು ಬಯಸುವುದೆ ನಮ್ಮ ಒಕ್ಕೂಟದ ಅದ್ಯ ಕರ್ತವ್ಯವಾಗಿದೆ. ಕಾರ್ಯಕ್ರಮದ ನಂತರ ನಮ್ಮ ಒಕ್ಕೂಟದ ಸಂಗಾತಿಗಳು ಕಾರ್ಯಕ್ರಮಕ್ಕೆ ವಸ್ತು ಹಾಗೂ ಹಣದ ರೂಪವಾಗಿ ದೇಣಿಗೆ ನೀಡಿದ ಕೆಲವೊಂದು ಸಹೃದಯರಿಗೆ ಅರಿವಿನ ಪುಸ್ತಕದೊಂದಿಗೆ ಡ್ರೈಫ್ರೂಟ್ಸ್ ನೀಡುವ ಮೂಲಕ ಕೃತಜ್ಞತೆಗಳನ್ನು ಸಲ್ಲಿಸಿರುತ್ತಾರೆ. ಆದರೆ ಈ ಕಾರ್ಯಕ್ರಮಕ್ಕೆ ತೆರೆಮರೆಯಲ್ಲಿ ಕಾರ್ಯ ನಿರ್ವಹಿಸಿ ನಮ್ಮ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದ ಇನ್ನು ಹತ್ತು ಹಲವು ಮನಸ್ಸುಗಳಿಗೆ ಕೃತಜ್ಞತೆಗಳನ್ನು ಈ ಸಂಚಿಕೆಯ ಮೂಲಕ ಅವರನ್ನು ನೆನಪು ಮಾಡಿಕೊಳ್ಳುವ ಒಂದು ಮಹದಾಸೆ ನಮ್ಮ ಒಕ್ಕೂಟದ್ದಾಗಿದ್ದು, ಇಲ್ಲಿ ಯಾರ ವೈಯುಕ್ತಿಕ ಹೆಸರುಗಳನ್ನು ಸ್ಮರಿಸದೇ ಅವರುಗಳ ಸಂಘ ಸಂಸ್ಥೆಗಳ ಎಲ್ಲಾ ಸಂಗಾತಿಗಳಿಗೆ ಕೃತಜ್ಞತೆಯನ್ನು ಬಯಸಲು ಇಚ್ಛಿಸುತ್ತೇವೆ.

ಮೊದಲಿಗೆ ಅರಿವಿನ ಪಯಣದ ಮೂಲಕ ಜನರಿಗೆ ಮಹಿಳೆಯರ ಆಶೋತ್ತರ, ಸ್ಥಾನಮಾನಗಳು ಹಾಗೂ ಮಹಿಳೆಯ ಶಕ್ತಿಯ ಒಂದು ಅರಿವಿನ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ತುಮಕೂರಿನ ಸಂಗಾತಿಗಳಿಗೆ 2 ದಿನ ಕಾರ್ಯಾಗಾರವನ್ನು ದೇವರಾಯನದುರ್ಗದಲ್ಲಿ ನಡೆಸಲು ಆ ಸ್ಥಳದ ಅನುಮತಿ ನೀಡಿದ ನಮ್ಮ ಜಿಲ್ಲಾಡಳಿತ ಹಾಗೂ ಮುಜರಾಯಿ ಸಿಬ್ಬಂದಿಗಳಿಗೆ, ಆ

ಬೆಟ್ಟಕ್ಕೆ 2 ದಿನ ನಮ್ಮೆಲ್ಲರಿಗೂ ಊಟ ಟೀ ಸಿದ್ದಗೊಳಿಸಿ ಆಟೋ ಮೂಲಕ ತಂದು ನಮಗೆ ಉಣ ಬಡಿಸಿದ ರಂಗ ಸೊಗಡು ಕಲಾ ಟ್ರಸ್ಟಿನ ಎಲ್ಲಾ ಗೆಳೆಯರಿಗೆ

ಬೆಳಗುಂಬ ರೆಡ್ ಕ್ರಾಸ್ ಸಂಸ್ಥೆಯಲ್ಲಿ ಒಕ್ಕೂಟದ ರಾಜ್ಯ ಸಂಗಾತಿಗಳು ಒಟ್ಟಿಗೆ ಸೇರಿ ವಿಶ್ವಮಹಿಳಾ ದಿನಾಚರಣೆಯ ಕಾರ್ಯಕ್ರಮದ ರೂಪುರೇಷೆಗಳು ಮತ್ತು ತುಮಕೂರಿನ ಸಂಗಾತಿಗಳಿಗೆ ಕಾರ್ಯ ಜವಬ್ದಾರಿಗಳ ಕುರಿತು ಚರ್ಚೆ ಮಾಡುವ ಸಲುವಾಗಿ 3 ದಿನ ಅಧ್ಯಯನ ಶಿಬಿರ ನಡೆಸಲು ಸ್ಥಳ ಅವಕಾಶ ನೀಡಿದ ರೆಡ್ ಕ್ರಾಸ್ ಸಂಸ್ಥೆಗೆ ಹಾಗೂ ವಿಶೇಷವಾಗಿ ಆ 3 ದಿನ ನಮಗೆ ವೈವಿದ್ಯತೆಯಿಂದ ಆಹಾರ, ಟೀ, ಕಾಫಿ ತಯಾರಿಸಿ ನಮ್ಮೆಲ್ಲರಿಗೂ ಊಟದ ತೃಪ್ತಿ ನೀಡಿದ ಹಾಸ್ಟೆಲ್ ನ ಸಿಬ್ಬಂದಿಗಳಿಗೆ

ಮೊದಲ ಅರಿವಿನ ಪಯಣ ಕಾರ್ಯಕ್ರಮ ಆಯೋಜನೆ ಎಂಪ್ರೇಸ್ ಹೈಸ್ಕೂಲ್ ನಲ್ಲಿ ಮಾಡಲು ನೆರವು ನೀಡಿದ ಪ್ರಿನ್ಸಿಪಾಲ್ ಹಾಗೂ ಎಲ್ಲಾ ಶಿಕ್ಷಕ ಮತ್ತು ಶಾಲಾ ಸಿಬ್ಬಂದಿಗಳಿಗೆ

ತಾಲ್ಲೂಕುಗಳಲ್ಲಿ ಅರಿವಿನ ಪಯಣದ ಕಾರ್ಯಕ್ರಮಗಳನ್ನು ನಡೆಸಲು ಅಂಗನವಾಡಿ, ಶಾಲೆ, ಕಾಲೇಜು, ಹಾಸ್ಟೆಲ್ ಮತ್ತು ಕೆಲವೊಂದು ಹಳ್ಳಿಗಳ ಸ್ವಸಹಾಯ ಸಂಘದವರು ಸ್ಥಳಾವಕಾಶ ನೀಡಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಎಲ್ಲಾ ಮನಸ್ಸುಗಳಿಗೆ.

ಅರಿವಿನ ಪಯಣದ ಅತಿ ಹೆಚ್ಚು ಕಾರ್ಯಕ್ರಮ ನೀಡಿದ ಚಿಕ್ಕನಾಯಕನಹಳ್ಳಿಯ ಸೃಜನ ಬಳಗದವರಿಗೆ,

ಕಾರ್ಯಕ್ರಮದ ಎಲ್ಲಾ ತಯಾರಿಗಾಗಿ ನಮಗೆ ಒಂದು ಸ್ಥಳವು ಅವಶ್ಯಕವಾಗಿತ್ತು. ಜನ ಚಳುವಳಿಯ ಕೇಂದ್ರ ಕೇವಲ ಸ್ಥಳವಲ್ಲದೇ ಇಡೀ ವರ್ಷ ನಮ್ಮೆಲ್ಲ ಕಾರ್ಯಕ್ರಮಗಳಿಗೆ ಕೇಂದ್ರ ಬಿಂದುವಾಗಿ ನಮ್ಮ ಮನೆಯಂತ ವಾತಾವರಣ ಕಲ್ಪಿಸಿಕೊಟ್ಟು ಎಲ್ಲಾ ರೀತಿಯಲ್ಲಿಯೂ ಸಹಾಯ, ಸಹಕಾರ, ಪ್ರೋತ್ಸಾಹ ನೀಡಿ ತಮ್ಮದೇ ಕಾರ್ಯಕ್ರಮ ಎಂಬಂತೆ ಸಂಭ್ರಮಿಸಿದ ಜನಚಳುವಳಿ ಹಾಗೂ ಎಸ್.ಯು.ಸಿ.ಐ ನ ಎಲ್ಲಾ ಸಂಗಾತಿಗಳಿಗೆ,

ಕಾರ್ಯಕ್ರಮ ಪೂರ್ವ ದಿನಗಳಲ್ಲಿ ದೇಣಿಗೆ ಪಡೆಯಲು ಹೋದಾಗ ನಮಗೆ ಸಹಕರಿಸಿ ಪ್ರೋತ್ಸಾಹಿಸಿದ ತಿಪಟೂರು, ಶಿರಾ ಮತ್ತು ತುಮಕೂರಿನ ವೈದ್ಯರು, ವ್ಯಾಪಾರಿಗಳು, ನೌಕರರು, ನಾಗರೀಕರು ಮುಂತಾದ ಪ್ರತಿ ದಾನಿಗಳನ್ನೂ ಸ್ಮರಿಸಬೇಕು. ಹಣ ಹಾಗೂ ವಸ್ತು ನೀಡಿದ ಪ್ರತಿ ದಾನಿಗಳಿಗೂ ವಿಶೇಷವಾಗಿ 3000

ಜನರಿಗೆ ಮಜ್ಜಿಗೆ ನೀಡಿದ ಕೆ.ಎಂ.ಎಫ್. ಮತ್ತು ಕುಡಿಯುವ ನೀರನ್ನು ಒದಗಿಸಿದ ಪ್ರಜಾಪ್ರಗತಿಗೆ ಮತ್ತು ಎರಡನೆಯ ದಿನದ ತಿಂಡಿ, ಊಟದ ಪೂರ್ತಿ ವೆಚ್ಚ ಭರಿಸಿದ ಪ್ರೊ|| ರವಿವರ್ಮಕುಮಾರ್, ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಶಿರಾ ಅವರಿಗೆ ಒಕ್ಕೂಟದಿಂದ ಕೃತಜ್ಞತೆಗಳನ್ನು ಬಯಸುತ್ತೇವೆ.

ರಾಜ್ಯದಿಂದ ಕಾರ್ಯಕ್ರಮಕ್ಕೆ ಬರುವ ಪ್ರತಿನಿಧಿಗಳಿಗೆ ವಸತಿಗಳನ್ನು ಕಲ್ಪಿಸಿಕೊಟ್ಟ ತುಮಕೂರಿನ ಶ್ರೀದೇವಿ ಸಂಸ್ಥೆ, ಸಿದ್ದಗಂಗಾ ಸಂಸ್ಥೆ, ತುಮಕೂರಿನ ವಿಶ್ವವಿದ್ಯಾಲಯದ ಅತಿಥಿ ಗೃಹ, ಎಂ.ಹೆಚ್.ಎನ್. ಸಭಾಂಗಣ, ಶೈಲಾ ನಾಗರಾಜ್ ಸಭಾಂಗಣ, ಜನಚಳುವಳಿ ಕೇಂದ್ರ, ಮತ್ತು ತುಮಕೂರಿನ ಪ್ರವಾಸಿ ಮಂದಿರ ಈ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ...

ಮಾರ್ಚ 7, ಮತ್ತು 8 ಎರಡು ದಿನಗಳ ತಿಂಡಿ, ಊಟ ಸಿದ್ಧಪಡಿಸಲು ಮುರಘ ರಾಜೇಂದ್ರ ಸಭಾಂಗಣದಲ್ಲಿ ಸ್ಥಳಾವಕಾಶ ನೀಡಿದ ಎಲ್ಲಾ ಸಂಗಾತಿಗಳಿಗೂ ಹಾಗೂ 2 ದಿನಗಳಲ್ಲಿ ಉತ್ತಮ ಊಟ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮಾಡಿಕೊಟ್ಟ ಅಡಿಗೆ ತಂಡದ ಎಲ್ಲಾ ಸಂಗಾತಿಗಳಿಗೆ...

2 ದಿನ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ನಡೆಸಲು ಅಗತ್ಯವಾದ ಸ್ಥಳಗಳಾದ ಮಹಾನಗರಪಾಲಿಕೆ ಅವರಣ, ಗಾಜಿನಮನೆ, ಸ್ವತಂತ್ರ ಚೌಕ ಹಾಗೂ ಗುಬ್ಬಿವೀರಣ್ಣ ರಂಗಮಂದಿರದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡಿದ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತಿ ಕಚೇರಿ, ಪೋಲಿಸ್ ಇಲಾಖೆ, ಮಹಾನಗರಪಾಲಿಕೆ ಕಚೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ

ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಪ್ರಚಾರವನ್ನು ಮಾಧ್ಯಮದಲ್ಲಿ ಬಿತ್ತರಿಸಲು ಸಹಕರಿಸಿದ ರಾಜ್ಯ ಹಾಗೂ ಜಿಲ್ಲಾ ಎಲ್ಲಾ ಮಾಧ್ಯಮ ಮಿತ್ರರಿಗೆ...

ಎಲ್ಲಾ ಕಾರ್ಯಕ್ರಮಗಳಿಗೂ ವೇದಿಕೆ ನಿರ್ಮಾಣ ಮಾಡಿದ ಗೆಳೆಯರಿಗೂ, ಕರಪತ್ರ, ಅಮಂತ್ರಣ ಪತ್ರ, ಬ್ಯಾನರ್, ಪೋಸ್ಟರ್ ಸಿದ್ಧಪಡಿಸಿದ ಗೆಳೆಯರಿಗೂ, ಲೋಗೊ, ಬಟ್ಟೆ ಬ್ಯಾಗ್ ಮಾಡಿಕೊಟ್ಟ ಸಂಗಾತಿಗಳಿಗೂ, ಎರಡು ದಿನದ ಕಾರ್ಯಕ್ರಮದ ವರದಿ ಹಾಗೂ ದಾಖಲೆ ಮಾಡಿದ ಛಾಯಾಗ್ರಾಹಕರು, ಮಾದ್ಯಮ ಸಂಗಾತಿಗಳಿಗೆ...

ಸ್ವಯಂಸೇವಕರಾಗಿ ಸೇವೆ ಮಾಡಿದ ಎನ್.ಸಿ.ಸಿ. ಎನ್.ಎಸ್.ಎಸ್. ಹಾಗೂ ಸಮಾಜಕಾರ್ಯ ವಿದ್ಯಾರ್ಥಿಗಳಿಗೂ ಹಾಗೂ ಮೊದಲ ದಿನದ ಮೆರವಣಿಗೆಗೆ

ವಿವಿಧ ಕಾಲೇಜಿನಿಂದ ವಿದ್ಯಾರ್ಥಿಗಳನ್ನು ಕಳುಹಿಸಿಕೊಟ್ಟ ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಗೂ ಹಾಗೂ ಅಧ್ಯಾಪಕರಗಳಿಗೆ...

2 ದಿನದ ಕಾರ್ಯಕ್ರಮಕ್ಕೆ ನಮ್ಮೊಂದಿಗೆ ಕೈಜೋಡಿಸಿದ ಪೌರಕಾರ್ಮಿಕ ಸಂಗಾತಿಗಳು, ವಿವಿಧ ಸಂಘಟನೆಯ ಮಿತ್ರರು, ರಾಜ್ಯ ಪ್ರತಿನಿಧಿಗಳಿಗೆ ಸಾರಿಗೆ ಸೇವೆ ನೀಡಿದ ಜನಚಳುವಳಿಯ ಆಟೋ ಚಾಲಕರಿಗೂ, ಗಾಜಿನಮನೆ ಬಹಿರಂಗ ಅಧಿವೇಶದ ವೇದಿಕೆ, ಮಳಿಗೆಗಳು ಹಾಗೂ ಗುಬ್ಬಿ ವೀರಣ್ಣ ರಂಗ ಮಂದಿರದಲ್ಲಿ ಮಳಿಗೆಗಳಿಗೆ ಮತ್ತು ವಸತಿ ತಾಣಗಳಿಗೆ ಹಾಸಿಗೆ, ದಿಂಬು, ಅಡಿಗೆ ಮಾಡಲು ಬೇಕಾದ ಪಾತ್ರೆ ಸಾಮಾಗ್ರಿಗಳನ್ನು ಒದಗಿಸಿದ ರೂಪ ಶಾಮಿಯಾನ, ಕಾರ್ಯಕ್ರಮಕ್ಕೆ ಬೇಕಾದ ಶೃಂಗಾರ್ ಧ್ವನಿ ವರ್ಧಕ ಸಂಗಾತಿಗಳಿಗೆ...

2 ದಿನದ ಕಾರ್ಯಕ್ರಮಕ್ಕೆ ಸೂಕ್ತ ರಕ್ಷಣೆ ಸೇವೆ ನೀಡಿದ ತುಮಕೂರು ಜಿಲ್ಲಾ ಪೋಲಿಸ್ ಇಲಾಖೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ಡಮರುಗ ಮೇಳೇಹಳ್ಳಿ ತಂಡ, ಸ್ಲಂ ಜನಾಂದೋಲನ ಕಲಾ ತಂಡ, ತತ್ವ ಪದಕಾರರಿಗೂ, ಕೋಲಾಟ ಮಾಡಿದ ಹಿಕ್ಕಲ್ ಶಾಲಾ ಮಕ್ಕಳು, ಕರಪತ್ರದಲ್ಲಿ ದಾಖಲಿಸಿದ 90ಕ್ಕೂ ಹೆಚ್ಚು ವಿವಿಧ ಸಂಘ ಸಂಸ್ಥೆಗಳ ಸಂಗಾತಿಗಳು. ಬಿಸಿಊಟ, ಆಶಾ, ಅಂಗನವಾಡಿ ಕಾರ್ಯಕರ್ತರು, ವಿವಿಧ ಮಹಿಳಾ ಸಂಘದ ಪ್ರತಿನಿಧಿಗಳು, ಬೀಡಿ ಕಾರ್ಮಿಕ ಸಂಗಾತಿಗಳಗೆ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸೇವೆ ನೀಡಿದ ಎಲ್ಲಾ ಸಂಗಾತಿಗಳಿಗೆ...

2 ದಿನದ ಕಾರ್ಯಕ್ರಮಕ್ಕೆ ಇಡೀ ವರ್ಷ ತುಮಕೂರಿನ ಒಕ್ಕೂಟದೊಂದಿಗೆ ನಿರಂತರವಾಗಿ ಸಲಹೆ, ಮಾರ್ಗದರ್ಶನವನ್ನು ನೀಡಿ ತುಮಕೂರಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಹಿಳಾ ಹಬ್ಬವನ್ನಾಗಿ ಮಾಡಲು ಅವಕಾಶ ನೀಡಿದ ರಾಜ್ಯ ಒಕ್ಕೂಟದ ಎಲ್ಲಾ ಸಹೃದಯ ಸಂಗಾತಿಗಳಿಗೆ, ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಎಲ್ಲರಿಗೂ ನನ್ನ ತುಮಕೂರಿನ ಒಕ್ಕೂಟದಿಂದ ಕೃತಜ್ಞಾಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

# ಅನುಬಂಧಗಳು

## ಜಿಲ್ಲೆಯ ಅರಿವಿನ ಪ್ರಯಾಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು

ಬಾ.ಹ. ರಮಾಕುಮಾರಿ
ಮಲ್ಲಿಕಾ ಬಸವರಾಜು
ರಾಣಿ ಚಂದ್ರಶೇಖರ್
ಡಾ. ಬಿ. ಸಿ. ಶೈಲಾ ನಾಗರಾಜ್
ವಾಣಿ ಪೆರಿಯೋಡಿ
ಅಖಿಲಾ
ಗೀತಾಲಕ್ಷ್ಮಿ
ವಾಣಿ ಸತೀಶ್
ಮೇ. ನಾ. ತರಂಗಿಣಿ
ಮುಮ್ತಾಜ್
ಅಕ್ಕಮ್ಮ
ಭಾಗ್ಯಲಕ್ಷ್ಮಿ ನಾಗರಾಜ್
ಪ್ರವೇಣಿ
ದೀಪಿಕಾ
ಶೈಲಜಾ
ಹೇಮಲತಾ (ಶಿರಾ)
ಚಂದ್ರಕಲಾ
ಲಲಿತಾ ಮಲ್ಲಪ್ಪ
ಬಿ ಗಂಗಲಕ್ಷ್ಮಿ
ಪಾರ್ವತಮ್ಮ ರಾಜಕುಮಾರ್
ಇಂದಿರಾ ಸಿ ಎ
ಹೇಮಾವತಿ ಮಲ್ಲಿಕ್
ಕವಿತಾ ಉಮೇಶ್
ಚಂದ್ರಶೇಖರ್
ಮುಜೀಬ್
ಕಲ್ಯಾಣಿ
ಡಾ. ಅರುಂಧತಿ
ರಂಗಮ್ಮ ಹೊದೇಕಲ್
ಉಮಾದೇವಿ ಗ್ಯಾರಳ್ಳ
ಚೇತನಾ
ಲೀಲಾ
ಮರಿಯಂಬಿ
ಆಶಾರಾಣಿ ಬಗ್ಗನಡು
ಪೃಥ್ವಿ
ಅಭಿಷೇಕ್
ಎನ್ ಇಂದಿರಮ್ಮ
ರಾಮಕೃಷ್ಣಪ್ಪ
ಶಶಿಕಲಾ ಬಿ
ಯು ಪಿ ಉಮಾದೇವಿ
ಪೂರ್ಣಮ್ಮ
ರಾಜಮ್ಮ
ಉಮಾಮಹೇಶ್ವರಿ
ಪುಷ್ಪ
ವರಮಹಾಲಕ್ಷ್ಮಿ
ಜಯಲಕ್ಷ್ಮಿ
ಅರುಣ್ ಮತ್ತು ತಂಡ
ಕಮಲಾ ರಾಜೇಶ್
ಗೀತಾ ನಾಗೇಶ್
ಗಿರಿಜಾ ರಾವ್
ಪ್ರವೀಣ ಕುಮಾರಿ
ಆಶಾ (ಅಂಗನವಾಡಿ)
ರತ್ನಮ್ಮ ಮುಂತಾದವರು

# ಜಿಲ್ಲೆಯಲ್ಲಿ ನಡೆದ ಅರಿವಿನ ಪಯಣದ ಕಾರ್ಯಕ್ರಮಗಳು

| ದಿನಾಂಕ | ಸ್ಥಳ | ನಿರ್ವಹಣೆ | ಭಾಗವಹಿಸಿದ ತಂಡ |
|---|---|---|---|
| 27.8.2022 | ಎಂಪ್ರೆಸ್ ಶಾಲೆ,<br>ತುಮಕೂರು<br>ಉದ್ಘಾಟನಾ ಕಾರ್ಯಕ್ರಮ | ಅತಿಥಿಗಳು | ಡಾ. ಕೆ. ವಿದ್ಯಾಕುಮಾರಿ, CEO, ZP<br>ಡಾ. ಹನುಮಕ್ಕ, ದೊಡ್ಡಮನೆ ನರ್ಸಿಂಗ್‌ಹೋಮ್ |
| 06.09.2022 | ಸದಾಶಿವನಗರ<br>ಎಸ್ ಜಿ ಆರ್ ಶಾಲೆ | ವಾಣಿ ಪೆರಿಯೋಡಿ<br>ಬಾ ಹ ರಮಾಕುಮಾರಿ | ಅರುಂಧತಿ, ತರಂಗಿಣಿ, ಮುಮ್ತಾಜ,<br>ಅಕ್ಕಮ್ಮ<br>**ಉಪಸ್ಥಿತಿ:** ಮಲ್ಲಿಕಾರ್ಜುನಯ್ಯ<br>ಮುಖ್ಯಶಿಕ್ಷಕರು ಮತ್ತು ಶಿಕ್ಷಕ ವೃಂದ |
| 06.09.2022 | ಸೋಮೇಶ್ವರ ಗರ್ಲ್ಸ್ ಹೈಸ್ಕೂಲ್ | ವಾಣಿ ಪೆರಿಯೋಡಿ<br>ಬಿ ಸಿ ಶೈಲಜಾ<br>ಬಾ ಹ ರಮಾಕುಮಾರಿ | ಭಾಗ್ಯಲಕ್ಷ್ಮಿ ಮತ್ತು ತಂಡ<br>ಗೀತಾ ನಾಗೇಶ್, ಮಲ್ಲಿಕಾ ಬಸವರಾಜು<br>ರಾಣಿ ಚಂದ್ರಶೇಖರ್, ಮುಮ್ತಾಜ್<br>**ಉಪಸ್ಥಿತಿ:** ಮುಖ್ಯಶಿಕ್ಷಕರು ಮತ್ತು ಶಿಕ್ಷಕ<br>ವೃಂದ |
| 07.09.2022<br>08.09.2022 | ಯಲಚಿಹಳ್ಳಿ ಗ್ರಾಮ<br>ಬ್ಯಾಡಗೆರೆ ಗ್ರಾ. ಪಂ.<br>ಗುಬ್ಬಿ ತಾ॥ | ವಾಣಿ ಪೆರಿಯೋಡಿ<br>ಅಖಿಲಾ | ಗೀತಾ ಮತ್ತು ತಂಡ, ದೀಪಿಕಾ, ವಾಣಿ<br>ಪೆರಿಯೋಡಿ, ಬಾ ಹ ರಮಾಕುಮಾರಿ,<br>ಪ್ರವೇಣಿ |
| 07.09.2022<br>08.09.2022 | ಪ.ಪೂ.ಕಾಲೇಜು, ಕಡಬ<br>ಕೆ.ಪಿ.ಎಸ್. ಕಡಬ | ಗೀತಾ ಹಕ್ಕಿ–ಪಕ್ಕ<br>ರಾಣಿ ಚಂದ್ರಶೇಖರ್ | ಗೀತಾ ಮತ್ತು ತಂಡ, ಅಖಿಲಾ,<br>ದೀಪಿಕಾ, ವಾಣಿ ಪೆರಿಯೋಡಿ,<br>ಬಾ ಹ ರಮಾಕುಮಾರಿ, ಪ್ರವೇಣಿ |
| 09.09.2022 | ವಾಸವಿ ಶಾಲೆ, SIT | ಮಲ್ಲಿಕಾ ಬಸವರಾಜು<br>ಶೈಲಾ ನಾಗರಾಜ್ | ವಾಣಿ ಪೆರಿಯೋಡಿ, ಹೇಮಾ, ಗಂಗಲಕ್ಷ್ಮಿ,<br>ಪಾರ್ವತಮ್ಮ |
| 09.09.2022 | ಸ.ಪ್ರೌ. ಶಾಲೆ, ತುಮಕೂರು | ವಾಣಿ ಪೆರಿಯೋಡಿ | ಅಖಿಲಾ, ಮಲ್ಲಿಕಾ ಬಸವರಾಜು<br>ಅರುಂಧತಿ, ದೀಪಿಕಾ, ಉಮಾದೇವಿ<br>ಗ್ಯಾರಳ್ಳ |
| 30.09.2022 | ಬಾಲಕಿಯರ ಪ ಪೂ ಕಾಲೇಜು, ಶಿರಾ<br>ರಂಗನಾಥ ಪ ಪೂ ಕಾಲೇಜು, ಶಿರಾ<br>ಸರ್ಕಾರಿ ಹಾಸ್ಟೆಲ್, ಶಿರಾ | ಮಲ್ಲಿಕಾ ಬಸವರಾಜು<br>ಗೌರಿ, ಬೆಂಗಳೂರು | ಶೈಲಜಾ, ಹೇಮಾ, ಚಂದ್ರಕಲಾ ತಂಡ,<br>ಬಾ ಹ ರಮಾಕುಮಾರಿ, ಲಲಿತಾ ಮಲ್ಲಪ್ಪ<br>ದೀಪಿಕಾ, ಪಾರ್ವತಮ್ಮ, ರೇಣುಕಮ್ಮ |
| 30.09.2022 | NSS ಕ್ಯಾಂಪ್ (ಎಂಪ್ರೆಸ್ ಕಾಲೇಜು)<br>ಬೆಳಗುಂಬ | ಅರುಂಧತಿ<br>ರಾಣಿ ಚಂದ್ರಶೇಖರ್ | ಇಂದಿರಮ್ಮ ಸಿ ಎ, ಅಕ್ಕಮ್ಮ, ತರಂಗಿಣಿ,<br>ಶೈಲಾ ನಾಗರಾಜ್ |
| 18.10.2022 | ಟಿವಿವಿ ಶಿಕ್ಷಣ ಮಹಾವಿದ್ಯಾಲಯ,<br>ಮಧುಗಿರಿ | ಕಾರ್ಯಾಗಾರ<br>ಗೌರಿ, ಶಿವಾನಂದ್, | ತರಂಗಿಣಿ, ಮುಮ್ತಾಜ್, ದೀಪಿಕ, ಕವಿತಾ<br>ಉಮೇಶ್, ಪಾರ್ವತಮ್ಮ, ಅಂಗನವಾಡಿ |

| | | | |
|---|---|---|---|
| | | ಕಮಲಾ ನರಸಿಂಹ<br>ಬಾ ಹ ರಮಾಕುಮಾರಿ<br>ಗಂಗಣ್ಣ, ಸಹಕಾರಿ<br>ಧುರೀಣರು | ಕಮಲ, ಇತರರು |
| 20.10.2022 | ಡಾ. ಬಿ ಆರ್ ಅಂಬೇಡ್ಕರ್ ವಸತಿ<br>ಶಾಲೆ, ತುರುವೇಕೆರೆ | ಕಾರ್ಯಾಗಾರ<br>ವಾಣಿ ಪೆರಿಯೋಡಿ<br>ಬಾ ಹ ರಮಾಕುಮಾರಿ<br>ಪ್ರವೀಣಕುಮಾರಿ | ದೀಪಿಕ, ಪಾರ್ವತಮ್ಮ, ಕವಿತಾ<br>ಉಮೇಶ್, ಪ್ರವೀಣಕುಮಾರಿ ಇತರರು |
| 21.10.2022 | ಕಲ್ಪತರು ಶಿಕ್ಷಣ ಮಹಾ ವಿದ್ಯಾಲಯ,<br>ತಿಪಟೂರು | ಅರಿವಿನ ಪಯಣ<br>ಕಾರ್ಯಕ್ರಮ<br>ಸ್ವರ್ಣಗೌರಿ | ದೀಪಿಕ, ವಾಣಿ ಪೆರಿಯೋಡಿ<br>ಬಾ ಹ ರಮಾಕುಮಾರಿ, ಪಾರ್ವತಮ್ಮ |
| 28.10.2022 | ಸಿದ್ಧಾರ್ಥ ಶಿಕ್ಷಣ ಮಹಾ ವಿದ್ಯಾಲಯ,<br>ತುಮಕೂರು | ಅರುಂಧತಿ<br>ರಾಣಿ ಚಂದ್ರಶೇಖರ್ | ಅರುಣ್ ತಂಡದವರು, ದೀಪಿಕ, ಮಲ್ಲಿಕಾ<br>ಬಸವರಾಜು, ಶೈಲಾ ನಾಗರಾಜು,<br>ಮುಮ್ತಾಜ್ |
| 28.10.2022 | ವಿದ್ಯಾ ಕಾಲೇಜು | ಮಲ್ಲಿಕಾ ಬಸವರಾಜು | ಲಿನೆಟ್, ದೀಪಿಕ, ಲಲಿತಾ ಮಲ್ಲಪ್ಪ,<br>ಪಾರ್ವತಮ್ಮ, ಗೀತಾ, ಹೇಮಾ |
| 28.10.2022 | ಸಿದ್ಧಗಂಗಾ ಶಾಲೆ | ಎಸ್. ಇಂದಿರಮ್ಮ | ಸೃಜನಾ ತಂಡದವರು |
| 28.10.2022 | ಪ.ಪೂ. ಕಾಲೇಜು, ನಾಗವಲ್ಲಿ<br>ಚಿಕ್ಕಣ್ಣನ ಹಟ್ಟಿ, ಹೆಬ್ಬೂರು<br>SHV ಶಾಲೆ, ಹೆಬ್ಬೂರು | ಮಲ್ಲಿಕಾ ಬಸವರಾಜು<br>ಬಾ ಹ ರಮಾಕುಮಾರಿ | ಪಾರ್ವತಮ್ಮ, ತರಂಗಿಣಿ, ಅಕ್ಕಮ್ಮ,<br>ಲಲಿತ ಮಲ್ಲಪ್ಪ, ಗಂಗಲಕ್ಷ್ಮಿ, ಕವಿತಾ,<br>ಮರಿಯಂಬಿ |
| 28.10.2022 | ಶಿವಾನಂದ ಪ್ರೌಢಶಾಲೆ, ಸತ್ಯಮಂಗಲ | ತರಂಗಿಣಿ | ಬಾ ಹ ರಮಾಕುಮಾರಿ<br>ಪಾರ್ವತಮ್ಮ, ಗಂಗಲಕ್ಷ್ಮಿ, ಹೇಮಾ,<br>ಮುಮ್ತಾಜ್, ಪೂರ್ಣಿಮಾ |
| 12.11.2022 | ಬಾಪೂಜಿ ಪಿ.ಯು. ಕಾಲೇಜು<br>ತುಮಕೂರು | ರಾಣಿ ಚಂದ್ರಶೇಖರ್<br>ಮಲ್ಲಿಕಾ ಬಸವರಾಜು | ಆಶಾರಾಣಿ, ಚೇತನಾ, ಡಾ. ಅರುಂಧತಿ,<br>ಅರುಣ್ ಮತ್ತು ತಂಡದವರು |
| 14.11.2022 | ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್<br>ಪಿ. ಜಿ. ಹಾಸ್ಟೆಲ್<br>ಪಿ. ಯು. ಹಾಸ್ಟೆಲ್ | ಮಲ್ಲಿಕಾ ಬಸವರಾಜು<br>ರಾಣಿ ಚಂದ್ರಶೇಖರ್ | ಆಶಾರಾಣಿ, ಪೃಥ್ವಿ, ಡಾ. ಅರುಂಧತಿ,<br>ಲಿನೆಟ್, ಲಲಿತಾ ಮಲ್ಲಪ್ಪ, ಗಿರಿಜಾ,<br>ಶೈಲಜಾ, ಕಲ್ಯಾಣಿ, ರತ್ನಮ್ಮ |
| 05.12.2022 | ಮದರ್ ತೆರೆಸಾ ನರ್ಸಿಂಗ್ ಕಾಲೇಜು<br>ಬಾಲಕಿಯರ ಪ್ರೌಢಶಾಲೆ, ಶಿರಾ | ಮಲ್ಲಿಕಾ ಬಸವರಾಜು | ಗೀತಾ, ಹೇಮಲತಾ, ಚಂದ್ರಕಲಾ,<br>ಶೈಲಜಾ |
| 13.02.2023 | ವಿಜಯಾ ಕಾಲೇಜು<br>ತುಮಕೂರು | ಮಲ್ಲಿಕಾ ಬಸವರಾಜು<br>ಎಸ್. ಇಂದಿರಮ್ಮ | ಪಾರ್ವತಮ್ಮ, ಹೇಮಾ ಮಲ್ಲಿಕಾರ್ಜುನ್,<br>ಭಾಗ್ಯ, ಕವಿತಾ, ಶೈಲಜಾ, ಜಯಶ್ರೀ,<br>ಗಾಯತ್ರಿ |
| 16.02.2023 | ಬಿ ಸಿ ಎಂ ಹಾಸ್ಟೆಲ್<br>ಗಂಗೋತ್ರಿನಗರ | ರೇಖಾಂಬ | ಪಾರ್ವತಮ್ಮ, ಗಂಗಲಕ್ಷ್ಮಿ, ಭಾಗ್ಯಲಕ್ಷ್ಮಿ<br>ನಾಗರಾಜ್, ಹೇಮಾ, ಶೈಲಜಾ, |

| | | | |
|---|---|---|---|
| | | | ತರಂಗಿಣಿ, ಬಾ ಹ ರಮಾಕುಮಾರಿ |
| 16.02.2023 | ತುಮಕೂರು ವಿ ವಿ ಹಾಸ್ಟೆಲ್<br>ತುಮಕೂರು | ರಾಣಿ ಚಂದ್ರಶೇಖರ್<br>ವಾಣಿ ಪೆರಿಯೋಡಿ | ಪಾರ್ವತಮ್ಮ, ಗಂಗಲಕ್ಷ್ಮಿ |
| 16.02.2023 | ಸೆಂಟ್ ಮೆರಿಸ್ ಹೈಸ್ಕೂಲ್<br>ಎಸ್.ವಿ.ಪಿ. ಪ್ರೌಢಶಾಲೆ, ತಿಪಟೂರು | ಲಿನೆಟ್ | ಸೃಜನಾ ತಂಡ, ಚಿ. ನಾ. ಹಳ್ಳಿ<br>ಇಂದಿರಮ್ಮ ಮತ್ತ ಗೆಳತಿಯರು |
| 16.02.2023 | ಊರ್ಡಿಗೆರೆ ಹೋಬಳಿ<br>ಕೆಂಪೋಹಳ್ಳಿ | ಬಾ ಹ ರಮಾಕುಮಾರಿ<br>ಹೊದೇಕಲ್ ರಂಗಮ್ಮ | ಆಶಾ, ಉಮಾಗ್ಯಾರಳ್ಳ, ಗಂಗಲಕ್ಷ್ಮಿ,<br>ಪಾರ್ವತಮ್ಮ ಮತ್ತು ಹಿಕ್ಕಲ್ ಶಾಲಾ<br>ಮಕ್ಕಳು. |
| 24.02.2023 | ತಿಪಟೂರು<br>ಕಪ್ಪುಡುಗೆಯಲ್ಲಿ ಮಹಿಳೆಯರು | ಬಾ ಹ ರಮಾಕುಮಾರಿ<br>ಮಲ್ಲಿಕಾ ಬಸವರಾಜು<br>ಎನ್. ಇಂದಿರಮ್ಮ | ಚಂದ್ರಕಲಾ, ವಾಣಿ ಸತೀಶ್, ಗೀತಾಲಕ್ಷ್ಮಿ,<br>ಸ್ವರ್ಣಗೌರಿ ಇತರರು |
| 01.03.2023 | ಸಿರಾ<br>ಕಪ್ಪುಡುಗೆಯಲ್ಲಿ ಮಹಿಳೆಯರು | ಬಾ ಹ ರಮಾಕುಮಾರಿ<br>ಮಲ್ಲಿಕಾ ಬಸವರಾಜು | ಶೈಲಜಾ, ರೇಣುಕಮ್ಮ, ಗೀತಾ, ಹೇಮಾ,<br>ಚಂದ್ರಕಲಾ |
| 03.03.2023 | ತುರುವೇಕೆರೆ<br>ಕಪ್ಪುಡುಗೆಯಲ್ಲಿ ಮಹಿಳೆಯರು | ಬಾ ಹ ರಮಾಕುಮಾರಿ<br>ವಾಣಿ ಪೆರಿಯೋಡಿ | ವಿಜಯಮ್ಮ, ಚಂದ್ರಕಲಾ, ಪ್ರವೇಣಿ,<br>ಜಮುನಾ ಶ್ರೀನಾಥ್, ಲಯನ್ಸ್ ಕ್ಲಬ್,<br>ವಾಸವಿ ಸಂಘ, ನಂ. ರಾಜು (ಸರ್ಕಾರಿ<br>ನೌಕರರ ಸಂಘ), ನಿವೃತ್ತ ನೌಕರರ ಸಂಘ |
| 03.03.2023 | ರವೀಂದ್ರ ಕಲಾನಿಕೇತನ | ಕಲ್ಯಾಣಿ<br>ಬಾ ಹ ರಮಾಕುಮಾರಿ<br>ಯಶೋದಾ– ಮುನ್ನಡೆ<br>ರಾಣಿ ಚಂದ್ರಶೇಖರ್ | ಚೇತನ, ಚಂದ್ರಶೇಖರ್, ಪಾರ್ವತಮ್ಮ,<br>ಮುಮ್ತಾಜ್, ಗೀತಾ, ಕಮಲಾ ರಾಜೇಶ್,<br>ಉಮಾದೇವಿ ಗ್ಯಾರಳ್ಳ |
| 27–01–2023 | ಸ.ಪ.ಪೂ. ಕಾಲೇಜು, ಗುಬ್ಬಿ<br>ಇಂದಿರಾ ಗಾಂಧಿ ವಸತಿ ಶಾಲೆ,<br>ಹೇರೂರು, ಗುಬ್ಬಿ ತಾ.<br>ಸರ್ಕಾರಿ ಬಾಲಕಿಯರ<br>ಪ.ಪೂ. ಕಾಲೇಜು, ಗುಬ್ಬಿ<br>ಸರ್ಕಾರಿ ಬಾಲಕಿಯರ<br>ಪ್ರೌಢ ಶಾಲೆ, ಗುಬ್ಬಿ | ಮಲ್ಲಿಕಾ ಬಸವರಾಜು | ಪ್ರವೇಣಿ<br>ಮರಿಯಂಬಿ<br>ಮುಮ್ತಾಜ್<br>ಲಲಿತ ಮಲ್ಲಪ್ಪ |

# ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ನಡೆದ ಅರಿವಿನ ಪಯಣ ಕಾರ್ಯಕ್ರಮ

ಜುಲೈ 16, 17, 2022: ದೇವರಾಯನದುರ್ಗದಲ್ಲಿ ಅರಿವಿನ ಪಯಣ ಕಾರ್ಯಾಗಾರದಲ್ಲಿ ತಾಲ್ಲೂಕಿನಿಂದ 12 ಜನರ ತಂಡ ಭಾಗವಹಿಸಿದ್ದು.

| | |
|---|---|
| ಜುಲೈ– 24 | : ಅರಿವಿನ ಪಯಣ ತಾಲ್ಲೂಕು ಕಾರ್ಯಾಗಾರ. |
| ಆಗಸ್ಟ್– 6 | : ಕುಪ್ಪೂರು ಗ್ರಾಮದಲ್ಲಿ –ಮಹಿಳೆಯರಿಗಾಗಿ |
| ಆಗಸ್ಟ್– 27 | : ಎಂಪ್ರೆಸ್ ಪ.ಪೂ. ಶಾಲೆಯಲ್ಲಿ ಜಿಲ್ಲಾಮಟ್ಟದಲ್ಲಿ ಅರಿವಿನ ಪಯಣ ಉದ್ಘಾಟನೆಯಲ್ಲಿ ಭಾಗವಹಿಸಿದ್ದು |
| ಸೆಪ್ಟೆಂಬರ್ –16 | : ಡಾ. ದೇವರಾಜ ಅರಸ್ ಹಿಂದುಳಿದ ವರ್ಗದ ಬಾಲಕಿಯರ ವಸತಿ ನಿಲಯ ಚಿ.ನಾ. ಹಳ್ಳಿ |
| ಸೆಪ್ಟೆಂಬರ್ –20 | : ಲಿಂಗಪ್ಪನ ಪಾಳ್ಯ, ಸೋಮಜ್ಜನಪಾಳ್ಯ– ಅಂಗನವಾಡಿಯಲ್ಲಿ. |
| ಸೆಪ್ಟೆಂಬರ್– 29 | : ಸರ್ಕಾರಿ ಪ.ಪೂ. ಕಾಲೇಜು ಗೋಡೆಕೆರೆ. |
| ಅಕ್ಟೋಬರ್– 12 | : ಕೋಲುದೇವರಹಟ್ಟಿ, ತಿಮ್ಮಪ್ಪನ ಹಟ್ಟಿ (ಗೊಲ್ಲರಟ್ಟಿ). |
| ಅಕ್ಟೋಬರ್ –14 | : ದೊಡ್ಡರಾಂಪುರ ಗೊಲ್ಲರಟ್ಟಿ. |
| ಅಕ್ಟೋಬರ್– 18 | : ಸಮಾಜ ಕಲ್ಯಾಣ ಬಾಲಕಿಯರ ವಿದ್ಯಾರ್ಥಿನಿಲಯ ಚಿ.ನಾ.ಹಳ್ಳಿ |
| ಅಕ್ಟೋಬರ್– 17 | : ಕಾರೆಹಳ್ಳಿ ಲಂಬಾಣಿ ತಾಂಡ್ಯ |
| ಅಕ್ಟೋಬರ್ –31 | : ಚಿತ್ರಲಿಂಗೇಶ್ವರ ಪ್ರೌಢಶಾಲೆ, ಹರೇನಹಳ್ಳಿ ಗೇಟ್, ಮಹಿಳಾ ಸಂಘಟನೆ, ಹೊನ್ನಶೆಟ್ಟಿಹಳ್ಳಿ. |
| ನವಂಬರ್ –4 | : ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿನಿಲಯ, ಚಿ.ನಾ. ಹಳ್ಳಿ |
| ನವಂಬರ್ –11 | : ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ, ಚಿ.ನಾ.ಹಳ್ಳಿ |
| ನಂಬರ್– 15 | : ಸ್ಟೆಲ್ಲಾಮೇರಿಸ್ ಪ್ರೌಢಶಾಲೆ, ತಿಪಟೂರು ಎಸ್. ವಿ. ಪಿ. ಪ್ರೌಢಶಾಲೆ ತಿಪಟೂರು |
| ನಂಬರ್– 17 | : ಸರ್ಕಾರಿ ಹಿರಿಯ ಬಾಲಕಿಯರ ಪ್ರಾಥಮಿಕ ಶಾಲೆ, ಹುಳಿಯಾರು. |

ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು,
ಹುಳಿಯಾರು.

ನವೆಂಬರ್– 18 : ವಿಶ್ವಭಾರತಿ ಪ್ರೌಢಶಾಲೆ ಗಾಣದಾಳು
ಸ. ಹಿ. ಪ್ರಾ. ಶಾಲೆ ಯಗಜಿಹಳ್ಳಿ

ನವೆಂಬರ್ –23 : ಡಾ. ಅಂಬೇಡ್ಕರ್ ಪ್ರೌಢಶಾಲೆ, ಚಿ.ನಾ. ಹಳ್ಳಿ

ನವೆಂಬರ್– 24 : ಸ.ಪ.ಪೂ. ಕಾಲೇಜು ಚಿಕ್ಕನಾಯಕನಹಳ್ಳಿ

ನವೆಂಬರ್ –30 : ವಿವೇಕಾನಂದ ಪ್ರೌಢಶಾಲೆ, ಕುಪ್ಪೂರು

ಡಿಸೆಂಬರ್– 2 : ಸರ್ಕಾರಿ ಪ್ರೌಢಶಾಲೆ
ಸರ್ಕಾರಿ, ಪ.ಪೂ. ಕಾಲೇಜು, ಬೋರನಕಣಿವೆ

ಡಿಸೆಂಬರ್ –8 : ಸರ್ಕಾರಿ ಪ್ರೌಢಶಾಲೆ, ಯಳನಡು

ಡಿಸೆಂಬರ್– 9 : ಜ್ಞಾನಪೀಠ ಪ್ರೌಢಶಾಲೆ, ಚಿ.ನಾ.ಹಳ್ಳಿ

ಡಿಸೆಂಬರ್ –11 : ರಾಮಪ್ಪನ ಹಟ್ಟಿ

ಡಿಸೆಂಬರ್– 17 : ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿ.ನಾ. ಹಳ್ಳಿ

ಡಿಸೆಂಬರ್– 19 : ಡಿ ವಿ ಪಿ ಬಾಲಿಕಾ ಪ್ರೌಢಶಾಲೆ, ಚಿ.ನಾ. ಹಳ್ಳಿ

ಡಿಸೆಂಬರ್– 23 : ಪ್ರಧಾನ ಹಿರಿಯ ಪ್ರಾಥಮಿಕ ಶಾಲೆ ಚಿ.ನಾ.ಹಳ್ಳಿ

ಡಿಸೆಂಬರ್– 26 : ನವೋದಯ ಪ್ರಥಮ ದರ್ಜೆ ಕಾಲೇಜು ಚಿ.ನಾ.ಹಳ್ಳಿ

ಡಿಸೆಂಬರ್– 27 : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋರ

ಡಿಸೆಂಬರ್– 27 : ಸ.ಪ.ಪೂ. ಕಾಲೇಜು ಊರುಕೆರೆ.

ಡಿಸೆಂಬರ್– 27 : ಸಿದ್ದಗಂಗಾ ಪ.ಪೂ. ಕಾಲೇಜು ಪಿ.ಬಿ. ರಸ್ತೆ ತುಮಕೂರು

ಡಿಸೆಂಬರ್– 29 : ಮೊರಾರ್ಜಿ ವಸತಿ ಶಾಲೆ ಮೇಲನಹಳ್ಳಿ

2023 ಜನವರಿ– 3: ಎಸ್ ಆರ್ ಆರ್ ಪ್ರೌಢಶಾಲೆ, ಬೆಳಗುಲಿ

ಜನವರಿ– 12 : ಡಾ. ಅಂಬೇಡ್ಕರ್ ಪ್ರೌಢಶಾಲೆ, ಕಾತ್ರಿಕೆಹಾಳ್

ಜನವರಿ– 20: ವಿನಾಯಕ ಪ.ಪೂ. ಕಾಲೇಜು, ನಿಟ್ಟೂರು

ಜನವರಿ –27 : ಶ್ರೀ ಸಿದ್ದಗಂಗಾ ಗ್ರಾ. ಪ್ರೌ. ಶಾಲೆ, ಕಂದಿಕೆರೆ

ಫೆಬ್ರವರಿ –13 : ವಿಜಯ ಪ.ಪೂ. ಕಾಲೇಜು ತುಮಕೂರು

ಫೆಬ್ರವರಿ –13 : ದೇವರಾಜ ಅರಸ್ ಬಾಲಕಿಯರ ವಿದ್ಯಾರ್ಥಿನಿಲಯ

ತುಮಕೂರು

ಫೆಬ್ರವರಿ– 22 : ಸೈಯದ್ ಸಾಬರ ಪಾಳ್ಯ

ಫೆಬ್ರವರಿ –24 : ತಿಪಟೂರಿನಲ್ಲಿ ನಡೆದ ಕಪ್ಪಡುಗೆಯಲ್ಲಿ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು.

ಫೆಬ್ರವರಿ –28 : ಸಾಕ್ಷರತಾ ಮಹಿಳಾ ಪ್ರೌಢಶಾಲೆ, ಗುರುವಾಪುರ

ಮಾರ್ಚ್– 3 : ಕಪ್ಪುಡಿಗೆಯಲ್ಲಿ ಮಹಿಳೆಯರು, ಹುಳಿಯಾರು.

## ಅರಿವಿನ ಪಯಣ – ಮಹಿಳಾ ದಿನಾಚರಣೆ 2023 ರ ಅಂಗವಾಗಿ ನಡೆದ ಸಭೆಗಳು ಹಾಗೂ ತರಬೇತಿಗಳು

| ದಿನಾಂಕ | ಸ್ಥಳ | ವಿವರ |
|---|---|---|
| 7 ಜೂನ್ 2022 | ಜನಚಳವಳಿ ಕೇಂದ್ರ | 2023ರ ಮಹಿಳಾ ದಿನಾಚರಣೆ ಸಂಬಂಧ ತುಮಕೂರಿನ ಮಹಿಳಾ ಸಂಗಾತಿಗಳು ಹಾಗೂ ಇನ್ನಿತರ ಸಂಘಟನೆಗಳ ಸಭೆ ನಡೆಸಿದ್ದು. |
| 26 ಜೂನ್ 2022 | ಜನಚಳವಳಿ ಕೇಂದ್ರ | ರಾಜ್ಯ ಒಕ್ಕೂಟದ ಸಂಗಾತಿಗಳೊಂದಿಗೆ ಸಭೆ– ಒಕ್ಕೂಟದ ಉದ್ದೇಶ, ಗುರಿ, ಅರಿವಿನ ಪಯಣ, ಮಹಿಳಾ ಸಮಾವೇಶಗಳ ಕುರಿತು ಚರ್ಚೆ ಸಂವಾದ– ತುಮಕೂರಿನಲ್ಲಿ ಮಹಿಳಾ ದಿನಾಚರಣೆ ಕೈಗೆತ್ತಿಕೊಳ್ಳುವ ತೀರ್ಮಾನ. |
| 16, 17 ಜುಲೈ 2022 | ದೇವರಾಯನದುರ್ಗ | ಅರಿವಿನ ಪಯಣ ತರಬೇತಿ ಕಾರ್ಯಗಾರ– ಸುಮಾರು ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು– ಹಾಡು, ನಾಟಕ, ಪಾತ್ರ ಅಭಿನಯ, ಕಥೆ ನಿರೂಪಣೆ ಮುಂತಾದವುಗಳ ಕಲಿಕೆ ಆಯಿತು. |
| 19, 20, 21 ಆಗಸ್ಟ್ 2022 | ರೆಡ್ ಕ್ರಾಸ್ ಶಾಲೆ ಬೆಳಗುಂಬ | ಸಮಾಲೋಚನಾ ಸಂವಾದ ಶಿಬಿರ / ಅಧ್ಯಯನ ಶಿಬಿರ– ಹಿರಿಯ ಸಮಾಜವಾದಿಗಳು, ಸಾಹಿತಿಗಳು, ಸಂಘಟಕರು, ತತ್ವಪದಕಾರರುಗಳ ಅನುಭವದ ಮಾತುಗಳನ್ನು ಕೇಳುವ ಸಂವಾದಿಸುವ ಅವಕಾಶ |
| 27 ಆಗಸ್ಟ್ 2022 | ಎಂಪ್ರೆಸ್ ಶಾಲೆ ತುಮಕೂರು | ಅರಿವಿನ ಪಯಣ ಉದ್ಘಾಟನಾ ಸಮಾರಂಭ– ಪಾರಿವಾಳ ಹಾರಿಬಿಡುವ ಮೂಲಕ ಜಿಲ್ಲಾ ಪಂಚಾಯತ್ ಸಿಇಒ ಡಾ. ಕೆ ವಿದ್ಯಾಕುಮಾರಿ ಉದ್ಘಾಟಿಸಿದರು. ಡಾ. ಹನುಮಕ್ಕ, ಪ್ರಿನ್ಸಿಪಾಲ್ ಮುಂತಾದವರಿದ್ದರು. ಚಿಕ್ಕನಾಯಕನಹಳ್ಳಿ, ತುಮಕೂರು ಹಾಗೂ ಶಿರಾ ತಾಲ್ಲೂಕು ತಂಡದವರಿಂದ ಅರಿವಿನ ಕಾರ್ಯಕ್ರಮ ನಡೆಯಿತು. |
| 27.08.2022 ರಿಂದ 08.03.2023: ಜಿಲ್ಲಾದ್ಯಂತ 'ಅರಿವಿನ ಪಯಣ' ಕಾರ್ಯಕ್ರಮ ನಡೆಯಿತು. | | |
| 08.01.2023 | ಬೆಂಗಳೂರು | ಬೆಂಗಳೂರು ರಾಜ್ಯ ಒಕ್ಕೂಟದ ಅರಿವಿನ ಪಯಣ–10 ಕಾರ್ಯಕ್ರಮ. ಅನೇಕರು ಭಾಗವಹಿಸಿದ್ದೆವು. |
| 14.01.2023 | ಜನಚಳುವಳಿ ಕೇಂದ್ರ | ಒಕ್ಕೂಟದ ಸಭೆ. ಪೂರ್ವಭಾವಿ ಸಿದ್ಧತೆ ಮತ್ತು ಫಂಡ್ ರೈಸಿಂಗ್ ಬಗ್ಗೆ. |
| 10.02.2023 | ಮಲ್ಲಿಕಾ ಮನೆ | ಮಲ್ಲಿಕಾ ಬಸವರಾಜು ಮನೆಯಲ್ಲಿ ಫಂಡ್ ರೈಸಿಂಗ್ ಬಗ್ಗೆ ಚಿಕ್ಕ ಸಭೆ. |
| 10.02.2023 | ಕನ್ನಡ ಭವನ | ಒಕ್ಕೂಟದ ದೊಡ್ಡ ಸಭೆ. ಭಾಗವಹಿಸುವವರ ಸಂಖ್ಯೆ, ವ್ಯವಸ್ಥೆ, ಊಟದ ವ್ಯವಸ್ಥೆ, ವಸತಿ ವ್ಯವಸ್ಥೆ ಇತ್ಯಾದಿಗಳ ಬಗ್ಗೆ |
| 17.02.2023 | ಜನಚಳುವಳಿ ಕೇಂದ್ರ | ಸಭೆ, ವಾಣಿ, ರೇಖಾಂಬ ಹಾಗೂ ಇತರರು ಬಾಗಿ. ಕರಪತ್ರ ಹಾಗೂ ಆಹ್ವಾನ ಪತ್ರ ಫೈನಲ್ ಮಾಡಲಾಯಿತು. |
| 24.02.2023 | ತಿಪಟೂರು | ಬೆಳಗ್ಗೆ ಕೆ ಬಿ ಕ್ರಾಸಿನಲ್ಲಿ ಉದ್ಯೋಗ ಮೇಳದಲ್ಲಿ ಸೇರಿದ್ದ ಮಹಿಳೆಯರನ್ನು ಕುರಿತು ಎನ್ |

| | | |
|---|---|---|
| | | ಇಂದಿರಮ್ಮ, ಮಲ್ಲಿಕಾ ಬಸವರಾಜು ಮಾತನಾಡಿ ಮಹಿಳಾ ದಿನಾಚರಣೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. |
| 01.03.2023 | ತುಮಕೂರು | ತುಮಕೂರು ವಿಶ್ವವಿದ್ಯಾಲಯ ಸ್ವಯಂಸೇವಕರಿಗೆ ತರಬೇತಿ– AIMSS ನ ಕಲ್ಯಾಣಿ ನೇತೃತ್ವ |
| 24.02.2023 ರಿಂದ 08.03.2023 : ಜಿಲ್ಲಾದ್ಯಂತ ವಿವಿಧ ಕಾರ್ಯಕ್ರಮಗಳು | | |
| 03.03.2023 | ತುಮಕೂರು | ಪತ್ರಿಕಾಗೋಷ್ಠಿ |
| 05.03.2023 | ಜನಚಳುವಳಿ ಕೇಂದ್ರ | ಪೂರ್ವತಯಾರಿ ಬಗ್ಗೆ ಸಭೆ |
| 10.03.2023 | ಜನಚಳುವಳಿ ಕೇಂದ್ರ | ಲೆಕ್ಕಪತ್ರ / ಹಣ ಸಂಗ್ರಹಣೆ ಕಾರ್ಯಕ್ರಮ ಕುರಿತಂತೆ ಸಭೆ |
| 02.04.2023 | ದುರ್ಗದಹಳ್ಳಿ | ರೇಣು ಮುಕುಂದ ಅವರ ಕೋಟೆ ಮನೆ ಫಾರಂನಲ್ಲಿ ಒಕ್ಕೂಟದ ಅವಲೋಕನಾ ಸಭೆ– ಡಾಕ್ಟರ್ ಹೆಚ್‌ಎಸ್ ಅನುಪಮಾ, ವಾಣಿ, ಗೌರಿ, ಡಾ. ಅರುಂಧತಿ, ರಾಣಿ ಚಂದ್ರಶೇಖರ್, ಮುಜೀಬ್, ಬಾ ಹ ರಮಾಕುಮಾರಿ ಇತರರು ಭಾಗಿ. |
| 18.07.2023 | ಜನಚಳುವಳಿ ಕೇಂದ್ರ | ಒಕ್ಕೂಟದ ಸಭೆ ಅರಿವಿನ ಪಯಣ ಮುಂದುವರಿಸಲು ತೀರ್ಮಾನ. ಜಿಲ್ಲಾ ಸಮನ್ವಯ ತಂಡಕ್ಕೆ ತುಮಕೂರು ಜಿಲ್ಲೆಗೆ ಎನ್ ಇಂದಿರಮ್ಮ ಮತ್ತು ದೀಪಿಕಾ ಆಯ್ಕೆ. |
| 22.07.2023 | ತುಮಕೂರು | ಮಣಿಪುರ ಘಟನೆ ವಿರುದ್ಧ ಪ್ರತಿಭಟನೆ. |
| 19.08.2032 | ಗೊಲ್ಲರಹಟ್ಟಿ | ಬೆಳ್ಳಾವಿ ಹೋಬಳಿ ಪಿ ಗೊಲ್ಲಹಳ್ಳಿ– ಗೊಲ್ಲರಹಟ್ಟಿ ಜಾಗೃತಿ ಕಾರ್ಯಕ್ರಮ– ತುಮಕೂರು ವಿವಿ ಎನ್‌ಎಸ್‌ಎಸ್ ಸಹಕಾರ |
| 22.08.2023 | ತುಮಕೂರು | ಧರ್ಮಸ್ಥಳ ಸೌಜನ್ಯ ಪ್ರಕರಣ ಧರಣಿ ಕಾರ್ಯಕ್ರಮದಲ್ಲಿ ಭಾಗಿ. |
| 20.09.2023 | ಜನಚಳುವಳಿ ಕೇಂದ್ರ | ಸಭೆ– ಅಖಿಲಾ, ಗೌರಿ ಇತರರು ಒಕ್ಕೂಟ ಮುನ್ನಡೆಸುವ ಬಗ್ಗೆ, ಅರಿವಿನ ಪಯಣ ಮುಂದುವರಿಸುವ ಬಗ್ಗೆ, ಕಾರ್ಯಾಗಾರ, ವಿಚಾರ ಸಂಕಿರಣ ನಡೆಸುವ ಬಗ್ಗೆ, ಗೊಲ್ಲರಹಟ್ಟಿಗಳಲ್ಲಿ ಅರಿವು, ಸ್ಮರಣ ಸಂಚಿಕೆ ತರುವ ಬಗ್ಗೆ. |
| 30.09.2023 | ತುಮಕೂರು | ಸರ್ಕಾರದಿಂದ 1000 ಮದ್ಯದಂಗಡಿ ತೆರೆಯುವುದರ ವಿರುದ್ಧ ಒಕ್ಕೂಟದಿಂದ ಪ್ರತಿಭಟನೆ. |
| 04.10.2023 | ತುಮಕೂರು | ಮಾಧ್ಯಮಗಳ ಮೇಲಿನ ದಾಳಿ ವಿರುದ್ಧ ಪ್ರತಿಭಟನೆಯಲ್ಲಿ ಭಾಗಿ. |
| 06.11.2023 | ತುಮಕೂರು | ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ಅರವಿನ ಪಯಣ–2 ಪ್ರಾರಂಭಿಸಲಾಯಿತು. |
| 17.12.2023 | ಜನಚಳುವಳಿ ಕೇಂದ್ರ | ಕೌದಿ ಹೊಲಿಯುವ ಕಾರ್ಯಕ್ರಮ– ವಾಣಿ, ಮಲ್ಲಿಕಾ ಎನ್ ಇಂದಿರಮ್ಮ, ದೀಪಿಕಾ, ರಾಣಿ ಚಂದ್ರಶೇಖರ್, ಪ್ರವೀಣೆ, ತರಂಗಿಣಿ, ಹೊದೇಕಲ್ ರಂಗಮ್ಮ ಇನ್ನು ಮುಂತಾದವರು ಭಾಗಿ. |
| 31.01.2024 | ಸಮರ್ಥ | 'ಕೌದಿ' ಅಂತಿಮವಾಗಿ ಸಿದ್ದಗೊಳಿಸಲಾಯಿತು. ರಾಣಿ, ವಾಣಿ, ದೀಪಿಕಾ, ಸಮರ್ಥ ಹೆಣ್ಣುಮಕ್ಕಳು ಭಾಗಿ |

# ಚಿತ್ರ ಸಂಚಯ




ಅರಿವಿನ ಪಯಣ ಉದ್ಘಾಟನೆ, ಎಂಪ್ರೆಸ್ ಪ.ಪೂ. ಕಾಲೇಜು, ತುಮಕೂರು



ಕೆಂಪೋಹಳ್ಳಿ



ಚಿಕ್ಕಣ್ಣಪ್ಪನ ಹಟ್ಟಿ , ಹೆಬ್ಬೂರು ಹೋ.



ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಶಿರಾ



ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಬ್ಬಿ



ಕಡಬಾ ಕಾಲೇಜಿನಲ್ಲಿ ಅರಿವಿನ ಪಯಣ




ಇಂದಿರಾ ಗಾಂಧಿ ವಸತಿ ಶಾಲೆ, ಹೇರೂರು, ಗುಬ್ಬಿ



ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಮಳಿಗೆಯಲ್ಲಿ ಕರಪತ್ರ ಬಿಡುಗಡೆ



ಕೌದಿ ಹೊಲಿಯುವ ಸಂಭ್ರಮ, ಜನಚಳವಳಿ ಕೇಂದ್ರ




ಕಪ್ಪು ಉಡುಪಿನಲ್ಲಿ ಮಹಿಳೆಯರು, ತಿಪಟೂರು



ಮಹಿಳಾ ದಿನಾಚರಣೆ - 2023 ಪತ್ರಿಕಾಗೋಷ್ಠಿ




ಸಮಾಜ ಕಲ್ಯಾಣ ಪಿ.ಯು. ಹಾಸ್ಟೆಲ್ ತುಮಕೂರು




ಸಮಾಜ ಕಲ್ಯಾಣ ಪಿ.ಜಿ. ಹಾಸ್ಟೆಲ್ ತುಮಕೂರು




ಸರ್ಕಾರಿ ಬಾಲಕಿಯರ ಪ. ಪೂ. ಕಾಲೇಜು, ಶಿರಾ




ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಶಿರಾ




ಕಪ್ಪು ಉಡುಪಿನಲ್ಲಿ ಮಹಿಳೆಯರು, ಶಿರಾ



ಎಸ್ ಎಚ್ ವಿ ಶಾಲೆ, ಹೆಬ್ಬೂರು





ವಿಜಯಾ ಕಾಲೇಜು, ತುಮಕೂರು




ಎಂಪ್ರೆಸ್ ಕಾಲೇಜು NSS ಕ್ಯಾಂಪ್




ಸರ್ಕಾರಿ ಪ. ಪೂ. ಕಾಲೇಜು, ನಾಗವಲ್ಲಿ




ಕಪ್ಪುಡುಗೆಯಲ್ಲಿ ಮಹಿಳೆಯರು, ತುರುವೇಕೆರೆ




ಅರಿವಿನ ಪಯಣ, ತಿಪಟೂರು




ಶಿವಾನಂದ ಪ್ರೌಢಶಾಲೆ, ಸತ್ಯಮಂಗಲ




ಬಾಪೂಜಿ ಪ. ಪೂ. ಕಾಲೇಜು, ತುಮಕೂರು

## ಚಿ. ನಾ. ಹಳ್ಳಿ ತಾಲ್ಲೂಕು ಅರಿವಿನ ಪಯಣ









# ಚಿ. ನಾ. ಹಳ್ಳಿ ತಾಲ್ಲೂಕು ಅರಿವಿನ ಪಯಣ











ಕಪ್ಪು ಡುಗೆಯಲ್ಲಿ ಮಹಿಳೆಯರು, ಹುಳಿಯಾರು, ಚಿ. ನಾ. ಹಳ್ಳಿ



ಕನ್ನಡ ಭವನದಲ್ಲಿ ಸಮಾಲೋಚನಾ ಸಭೆ



ನಿಧಿ ಸಂಗ್ರಹಣೆಯಲ್ಲಿ ಪ್ರಜಾಪ್ರಗತಿಯಲ್ಲಿ




ಮೆರವಣಿಗೆ - 07.03.2023




ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಕೆಂಜೆಡೆಗೌಡರ ತಂಡದಿಂದ ತತ್ವಪದ ಗಾಯನ - 08.03.2023



ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಸಂವಿಧಾನ ಪೀಠಿಕೆ ಓದು - 08.03.2023

# ಬಿಜಿಎಸ್ ವೃತ್ತದಲ್ಲಿ ಮೆರವಣಿಗೆ ಉದ್ಘಾಟನೆ ದೃಶ್ಯಗಳು - 07.03.2023











ಗಾಜಿನ ಮನೆ ಸಮಾವೇಶದಲ್ಲಿ ಜನಸ್ತೋಮ - 07.03.2023




ಗಾಜಿನ ಮನೆ ಸಮಾವೇಶದ ಉದ್ಘಾಟನೆ - 07.03.2023



ವಿಹಾನ್ ಅವರಿಗೆ ಕೌದಿ ಗೌರವ - 08.03.2023



ಚಿ. ನಾ. ಹಳ್ಳಿಯ ಇಂದಿರಮ್ಮ ಅವರಿಗೆ ಕೌದಿ ಗೌರವ



ಗುಬ್ಬಿ ವೀರಣ್ಣ ರಂಗಮಂದಿರ




ಅರಿವಿನ ಪಯಣ ಕಾರ್ಯಕ್ರಮ ನೀಡಿದ ಹಿಕ್ಕಲ್ ಶಾಲೆಯ ಮಕ್ಕಳು



ನಿಧಿ ಸಂಗ್ರಹಕ್ಕೆ ಬ್ಯಾಗು ಬಿಡುಗಡೆ - ತುಮಕೂರು ವಿ ವಿ ರಿಜಿಸ್ಟ್ರಾರ್ ನಾಹಿದಾ ಜಮ್ ಜಮ್



ಬ್ಯಾಗುಗಳ ಮಾರಾಟದಿಂದ ನಿಧಿ ಸಂಗ್ರಹ - ತುಮಕೂರು ವಿ. ವಿ. ಯಲ್ಲಿ




ಕೆ. ಬಿ. ಕ್ರಾಸ್ ನಲ್ಲಿ ನಡೆಯುತ್ತಿದ್ದ ಮಹಿಳೆಯರ ಸಭೆಯಲ್ಲಿ ಮಹಿಳಾ ದಿನಾಚರಣೆಯ ಬಗ್ಗೆ ಪ್ರಚಾರ